॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವು.

ಹನ್ನೊಂದನೇ ಅಧ್ಯಾಯವು.

ಭಗವದವತಾರ
ಪ್ರತಿಜ್ಞಾ

ಓಂ ॥ಅಶೇಷಗುಣಸಂಪೂರ್ಣಂ ಸರ್ವದೋಷವಿವರ್ಜಿತಂ ।
ಅನಂತಾವ್ನಾಯಗಂವೇದ್ಯಂ ವಂದೆಂಽಹಂ ಕಮಲಾಪತಿಂ ॥
ಜಯತಿ ಶ್ರೀಮದಾನಂದತೀರ್ಥಮಾರ್ತಂಡಚಂಡಗೌಃ ।
ಯತ್ಸಂಪರ್ಕಃ ಸತಾಂ ಮೋಹಶರ್ವರೀಂ ಸಮುದೀದಲತ್ ॥
ಶ್ರೀಮದಾನಂದತೀರ್ಥಾರ್ಯಕೃತಭಾರತನಿರ್ಣಯಂ ।
ತಂಶ್ರೀನಾರಾಯಣೋ ವಿದ್ವಾನ್ ಕರ್ನಾಟವ್ಯಾಖ್ಯಯಾ ಮುದಾ ॥
ಪ್ರಕಾಶಯತಿ ಬಾಹುಲ್ಯಾದ್ಭಾವದೀಪಿಕಯೋದಿತಂ ।
ಪದಾರ್ಥದೀಪಿಕೋಕ್ತಂ ಚ ಸಮಾಲೋಚ್ಯ ಸತಾಂ ಮುದೇ ॥
ಶ್ರೀಮದ್ಧನುಮದ್ಭೀಮಮಧ್ವಾಂತರ್ಗತರಾಮಕೃಷ್ಣ ವೇದವ್ಯಾಸಾಸಾತ್ಮಕ-
ಲಕ್ಷ್ಮೀಹಯಗ್ರೀವಾಯ ನಮಃ ॥ ಹರಿಃ ಓಂ ॥

ಮೂ ॥ ಓಂ ಶಶಾಂಕಪುತ್ರಾಭವತ್ಪುರೂರವಾಃ
ತಸ್ಯಾಯುರಾಯೋರ್ನಹುಷೋ ಯಯಾತಿಃ ।
ತಸ್ಯಾಸ ಪತ್ನೀಯುಗಲಂ ಸುತಾಶ್ಚ
ಪಂಚಾಭವನ್ ವಿಷ್ಣುಪದೈಕಭಕ್ತಾ ॥ ೧ ॥

ಆ ॥ ಚಂದ್ರನ ಮಗನಾದ ಬುಧನ ದೆಸೆಯಿಂದ ಪುರೂರವ ರಾಜನು ಹುಟ್ಟಿದನು. ಆ ಪುರೂರವ ರಾಜನಿಗೆ ಆಯು ರಾಜನು, ಆಯು ರಾಜನಿಗೆ ನಹುಷನು, ಆ ನಹುಷನಿಗೆ ಯಯಾತಿ ರಾಜನು ಹುಟ್ಟಿದನು. ಆ ಯಯಾತಿ ರಾಜನಿಗೆ ಇಬ್ಬರು ಹೆಂಡಂದಿರು ಇದ್ದರು ಮತ್ತು ಆತನಿಗೆ ಶ್ರೀಹರಿಯ ಚರಣದಲ್ಲಿಯೇ ಮುಖ್ಯ ಭಕ್ತರಾದ ಐದು ಮಂದಿ ಮಕ್ಕಳೂ ಕೂಡ ಆದರು.

ವಿಶೇಷಾಂಶ—(1) ಕ್ರಮಪ್ರಾಪ್ತವಾದ, ಶ್ರೀಕೃಷ್ಣ ಮತ್ತು ಪಾಂಡವರು ಇವರ ಕಥೆಯನ್ನು ಹೇಳುವುದಕ್ಕಾಗಿ ಅದಕ್ಕೆ ಉಪಯುಕ್ತವಾದ ಸೋಮ ವಂಶವನ್ನು ನಿರೂಪಿಸುವರು. (2) ಅತ್ರಿಸ್ತು ಬ್ರಹ್ಮಣಃ ಪುತ್ರಃ ಶಶಾಂಕಸ್ತತ್ಸುತಃ ಸ್ಮೃತಃ । ಅತ್ರಿಯು ಬ್ರಹ್ಮನ ಕಣ್ಣಿನಿಂದ ಹುಟ್ಟಿದವನು, ಅತ್ರಿ ಋಷಿಯ ಮಗನು ಶಶಾಂಕನು ಎಂದು ಸ್ಮೃತಿಯು. (3) ಸೂರ್ಯನ ದೆಸೆಯಿಂದ ವೈವಸ್ವತನೆಂದು ಪ್ರಸಿದ್ಧನಾದ ಮನುವು ಹುಟ್ಟಿದನು. ಆತನಿಗೆ ಪುಂವಂಶದ್ದೆಸೆಯಿಂದ ಸೂರ್ಯವಂಶವು. (4)ವೈವಸ್ವತ ಮನುವಿನ ಮಗನಾದ ಐಳನು ಇಳಾವೃತ ಖಂಡವನ್ನು ಪ್ರವೇಶಮಾಡಿದುದರಿಂದ ಸ್ತ್ರೀತ್ವವು ಬರುತ್ತಿರಲು ಆ ಇಳೆಯಲ್ಲಿ ಶಶಾಂಕನಿಂದ ಹುಟ್ಟಿದ ಬುಧನ ದೆಸೆಯಿಂದ ಸೋಮವಂಶವು. ಏವಂಚ ಎರಡು ವಂಶಗಳೂ ವೈವಸ್ವತನ ಸಮಾನ ಕಾಲದವೇ. ಸೂರ್ಯವಂಶದ್ದೆಸೆಯಿಂದ ಅನಂತರದಲ್ಲಿ ಸೋಮವಂಶಾರಂಭವಲ್ಲ. ॥ ೧ ॥

ಇಬ್ಬರು ಹೆಂಡಂದಿರು, ಐದು ಮಕ್ಕಳು ಎಂದು ಹೇಳಲ್ಪಟ್ಟಿತು. ಹಾಗಾದರೆ ಒಬ್ಬಳಿಗೆ ಇಬ್ಬರು ಮಕ್ಕಳು, ಇನ್ನೊಬ್ಬಳಿಗೆ ಇಬ್ಬರು ಮಕ್ಕಳು, ಒಬ್ಬನಾದರೂ ಇಬ್ಬರು ಹೆಂಗಸರ ಮಗನು. ಹೇಗೆ ಬಲರಾಮನು ದೇವಕೀ ರೋಹಿಣಿ ಇಬ್ಬರಿಂದ ಹುಟ್ಟಿದವನೋ ಹಾಗೆಯೇ ಏನು? ಎಂದಾ ಶಂಕೆ ಬಂದರೆ—

ಮೂ ॥ ಯದುಂ ಚ ತುರ್ವಸುಂ ಚೈವ
ದೇವಯಾನೀ ವ್ಯಜಾಯತ ।
ದ್ರುಹ್ಯಂ ಚಾನುಂ ಚ ಪೂರುಂ ಚ (ತಥಾ ಪೂರುಂ*)
ಶರ್ಮಿಷ್ಠಾ ವಾರ್ಷಪರ್ವಣೀ ॥ ೨ ॥

ಅ ॥ (ಶುಕ್ರಾಚಾರ್ಯರ ಮಗಳಾದ) ದೇವಯಾನಿ ಎನ್ನುವ, ಯಯಾತಿ ರಾಜನ ಹೆಂಡತಿಯು ಯದು ರಾಜನನ್ನೂ ತುರ್ವಸು ರಾಜನನ್ನೂ ಹಡೆದಳು. ವೃಷಪರ್ವ ನಾಮಕನಾದ ದಾನವನ ಮಗಳಾದ ಶರ್ಮಿಷ್ಠಾ ಎನ್ನುವ ಯಯಾತಿ ರಾಜನ ಹೆಂಡತಿಯು ದ್ರುಹ್ಯ ರಾಜನನ್ನೂ ಅನು ರಾಜನನ್ನೂ ಪೂರು ರಾಜನನ್ನೂ ಹಡೆದಳು. ॥ ೨ ॥

ಯದು ವಂಶವನ್ನು ನಿರೂಪಿಸುತ್ತಾರೆ—

ಮೂ ॥ ಯದೋರ್ವಂಶೇ ಚಕ್ರವರ್ತೀ
ಕಾರ್ತವೀರ್ಯಾರ್ಜುನೋಽಭವತ್ ।
ವಿಷ್ಣೋರ್ದತ್ತಾತ್ತ್ರೇಯನಾಮ್ನಃ
ಪ್ರಸಾದಾದ್ಯೋಗವೀರ್ಯವಾನ್ ॥ ೩ ॥

ಅ ॥ ಯದುರಾಜನ ವಂಶದಲ್ಲಿ, ದತ್ತಾತ್ರೇಯನೆಂದೂ ಹೆಸರುಳ್ಳ ವಿಷ್ಣುವಿನ ಅನುಗ್ರಹದ್ದರಿಂದ ಅಣಿಮಾದ್ಯಷ್ಟಯೋಗಗಳ ಸಾಮರ್ಥ್ಯವುಳ್ಳ ಕಾರ್ತವೀರ್ಯಾರ್ಜುನನೆಂದೂ ಪ್ರಸಿದ್ಧನಾದ ಚಕ್ರವರ್ತಿಯು ಆದನು.

ವಿಶೇಷಾಂಶ—(1) ಸಾಕ್ಷಾತ್ ಯದುರಾಜನ ಕುಮಾರನಾಗದೆ ಇರುವುದರಿಂದಲೂ ಮಧ್ಯದಲ್ಲಿ ಅನೇಕ ರಾಜಪರಂಪರೆಯಿದ್ದ ಪ್ರಯುಕ್ತವೂ ವಂಶೇ ಎಂದು ಹೇಳಿದ್ದು. ॥ ೩ ॥

ಮೂ ॥ ತಸ್ಯಾನ್ವಯೇ ಯವಯವೋ ಬಭೂವುರ್ವಿಷ್ಣು ಸಂಶ್ರಯಾಃ ।
ಪುರೋರ್ವಂಶೇ ತು ಭರತಶ್ಚಕ್ರವರ್ತೀ ಹರಿಪ್ರಿಯಃ ॥ ೪ ॥

ಅ ॥ ಆ ಕೃತವೀರ್ಯ ಪುತ್ರನಾದ ಅರ್ಜುನನ ವಂಶದಲ್ಲಿ ಶ್ರೀಕೃಷ್ಣನೇ ಮುಖ್ಯಾಶ್ರಯನಾಗಿ ಉಳ್ಳ ಯಾದವರು ಹುಟ್ಟಿದರು. (ಪೂರು ರಾಜನ ವಂಶವನ್ನು ಹೇಳುತ್ತಾರೆ.) ಪೂರು ರಾಜನ ವಂಶದಲ್ಲಿ ಆದರೂ ಶ್ರೀಕೃಷ್ಣನಿಗೆ ಪ್ರಿಯನಾದ ಚಕ್ರವರ್ತಿಯಾಡ ಭರತನು ಹುಟ್ಟಿದನು.

ವಿಶೇಷಾಂಶ— ರಘುವಂಶದಲ್ಲಿ ಹುಟ್ಟಿದವರಿಗೆಲ್ಲರಿಗೂ ರಘುಃ ಎಂದು ಹೆಸರು ಇದ್ದಂತೆಯೇ ಯದು ವಂಶದವರೆಲ್ಲರಿಗೂ ಯದು ಎನ್ನುವ ನಾಮವು ॥ ೪ ॥

---

* ( ) ಈ ಅವರಕ ಬಿಹ್ನೆಯೊಳಗಿನ ಪಾಠವು ಶ್ರೀಮನ್ಮಧ್ವಾಚಾರ್ಯರ ಸಾಕ್ಷಾಚ್ಛಿಷ್ಯರಾದ ಫಲಿಮಾರು ಮಠದ ಪುರುಷರಾದ ಶ್ರೀ ಹೃಷೀಕೇಶ ತೀರ್ಥರು ಸ್ವಹಸ್ತದಿಂದ ಬರೆದ ತಾಳ ಪತ್ರದ ತೌಳವ ಲಿಪಿಯ ಸರ್ವಮೂಲಗ್ರಂಥದಲ್ಲಿಯೂ ಶ್ರೀ ಸೋದಾ ವಾದಿರಾಜ ಮಠದ ಅತಿ ಪ್ರಾಚೀನ ತೌಳವ ಲಿಪಿಯ ತಾಲಪತ್ರ ಪುಸ್ತಕದ ಸರ್ವಮೂಲಗ್ರಂಥದಲ್ಲೂ ಇದ್ದುದರಿಂದ ಈ ಪಾಠವೇ ಅತ್ಯಾದರಣೀಯವೆಂದೂ ನಾನು ಅಭಿಪ್ರಾಯ ಪಡುತ್ತೇನೆ.

ಮೂ ॥ ತದ್ವಂಶಜಃ ಕುರುರ್ನಾಮ ಪ್ರತೀಪೋ'ಭೂತ್ತದನ್ವಯೇ ।
ಪ್ರತೀಪಸಾಭವನ್ ಪುತ್ರಾಸ್ತ್ರಯಸ್ತ್ರೇತಾಗ್ನಿವರ್ಚಸಃ ॥ ೫ ॥

ಅ ॥ ಕುರು ಎಂದು ಪ್ರಸಿದ್ಧನಾದವನು ಆ ಭರತನ ವಂಶದಲ್ಲಿ ಹುಟ್ಟಿದವನು. ಆ ಕುರು ವಿನ ವಂಶದಲ್ಲಿ ಪ್ರತೀಪ ರಾಜನು ಹುಟ್ಟಿದನು. ಪ್ರತೀಪ ರಾಜನಿಗೆ ಆಹವನೀಯ, ಗಾರ್ಹಪತ್ಯ ದಕ್ಷಿಣಾಗ್ನಿ ಎನ್ನುವ ಮೂರು ಅಗ್ನಿಗಳ ಕಾಂತಿಯಂತೆ ಕಾಂತಿಯುಳ್ಳ ಮೂರು ಮಕ್ಕಳು ಹುಟ್ಟಿದರು. ॥ ೫ ॥

ಪುತ್ರರ ನಾಮಧೇಯಗಳನ್ನೂ ಉತ್ಪತ್ತಿ ಕ್ರಮವನ್ನೂ ಹೇಳುತ್ತಾರೆ—

ಮೂ ॥ ದೇವಾಪಿರಥ ಬಾಹ್ಲೀಕೋ ಗುಣಜ್ಯೇಷ್ಠಶ್ಚ ಶಂತನುಃ ।
ತ್ವಗ್ದೋಷಯುಕ್ತೋ ದೇವಾಪಿರ್ಜಗಾಮ ತಪಸೇ ವನಂ ॥ ೬ ॥

ಅ ॥ ದೇವಾಪಿಯು (ಜ್ಯೇಷ್ಠನು) ದೇವಾಪಿಯ ಅನಂತರದಲ್ಲಿ ಬಾಹ್ಲೀಕ ರಾಜನು ಮೇಲೆ ಗುಣಗಳಿಂದ ಶ್ರೇಷ್ಠನಾದ ಶಂತನು ರಾಜನು. (ಹೀಗೆ ಮೂವರು.) ಚರ್ಮದೋಷ (ಕುಷ್ಠರೋಗ) ದಿಂದ ಕೂಡಿದ ದೇವಾಪಿಯು ತಪಸ್ಸುಗೋಸ್ಕರ ಕಾಡಿಗೆ ಹೋದನು.

ವಿಶೇಷಾಂಶ— ಶಂತನು ರಾಜನು ದೇವಾಪಿ ಬಾಹ್ಲೀಕ ಇವರಿಬ್ಬರ ತದ್ಕಾಲದಾಗೂ ತನ್ನ ಪಿತೃವಂಶವನ್ನು ಪ್ರವರ್ತಿಸಿರುದರಿಂದಲೂ ವಿಷ್ಣುವಿನ ಅವತಾರನಾದ ಪ್ರಯುಕ್ತವೂ ಗುಣ ಜ್ಯೇಷ್ಠನು. ॥ ೬ ॥

ಮೂ ॥ ವಿಷ್ಣೋಃ ಪ್ರಸಾದಾತ್ಸ ಕೃತೇ ಯುಗೇ ರಾಜಾ ಭವಿಷ್ಯತಿ ।
ಪುತ್ರಿಕಾಪುತ್ರಕಾಂ ಯಾತೋ'ಬಾಹ್ಲೀಕೋ ರಾಜಸತ್ತಮಃ ॥ ೭ ॥

ಅ ॥ ಆ ದೇವಾಪಿ ರಾಜನು ವಿಷ್ಣುವಿನ ಅನುಗ್ರಹದಿಂದ ಕೃತಯುಗದಲ್ಲಿ ರಾಜನಾಗುವನು. ರಾಜಶ್ರೇಷ್ಠನಾದ ಬಾಹ್ಲೀಕನು ಪುತ್ರಿಕಾಪುತ್ರತ್ವವನ್ನು ಹೊಂದಿದನು.

ವಿಶೇಷಾಂಶ—(1) ಅಪುತ್ರೇಣ ಮಯಾ ಕನ್ಯಾ ದೀಯತೇ ತವ ಭೋ ವರ ।
ಏತಸ್ಯಾಂ ಜಾಯತೇ ಪುತ್ರಃ ಸ ಮೇ ಪುತ್ರೋ ಭವಿಷ್ಯತಿ,।ಎಂದು ಪುತ್ರಿಕಾಪುತ್ರತ್ವ ಲಕ್ಷಣವು. ಅಂದರೆ ಮಗಳ ಮಗನೇ ತನ್ನ ಪುತ್ರನು ಎಂದು ಸಂಕೇತವನ್ನು ಮಾಡಿಕೊಂಡು ಯಾವ ಕನ್ನಿಕೆಯನ್ನು ತಂದೆಯು ಮುದುವೆ ಮಾಡಿಕೊಡುತ್ತಾನೋ ಆ ಕನ್ನಿಕೆಯ ಮಗನು ಪುತ್ರಿಕಾಪುತ್ರನು. ಅವನ ಧರ್ಮವೇ ಪುತ್ರಿಕಾಪುತ್ರತ್ವವು. ಬಾಹ್ಲೀಕ ದೇಶಕ್ಕೆ ಅಧಿಪತಿಯಾದ ರಾಜನು ಹೀಗೆ ಸಂಕೇತವನ್ನು ಮಾಡಿಯೊದ ಪ್ರತಿಪ ರಾಜನಿಗೋಸ್ಕರ ತನ್ನ ಮಗಳನ್ನು ಕೊಟ್ಟಿರುವನು. ಅಂತಹ ಮಗಳ ಮಗನೇ ಈ ಬಾಹ್ಲೀಕನು. ಆದಕಾರಣ ಬಾಹ್ಲೀಕ ದೇಶಗಳಲ್ಲಿಯೇ ರಾಜನಾದನು, ತನ್ನ ತಂದೆಯಾದ ಪ್ರತೀಪ ರಾಜನ ರಾಜ್ಯದಲ್ಲಿ ರಾಜನಾಗಲಿಲ್ಲ. ॥ ೭ ॥

ಬಾಲ್ಹೀಕ ರಾಜನು ಮೊದಲು ಯಾರೆಂದರೆ—

ಮೂ ॥ ಹಿರಣ್ಯಕಶಿಪೋಃ ಪುತ್ರಃ ಪ್ರಹ್ಲಾದೋ ಭಗವತ್ಪ್ರಿಯಃ(ಶ್ವರಃ) ।
ನಾಯುನಾ ಚ ಸನೂವಿಷ್ಣೋ ಮಹಾಬಲಸಮನ್ವಿತ ಃ ॥ ೮ ॥

ಆ ॥ ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದನು ಶ್ರೀಹರಿಯಲ್ಲಿಯೇ ಅಸಕ್ತನಾದನು. ವಾಯುದೇವರಿಂದ ಪ್ರವೇಶಿಸಲ್ಪಟ್ಟವನು. (ಆದುದರಿಂದಲೇ) ಮಹಾಸಾಮರ್ಥ್ಯದಿಂದ ಕೂಡಿದವನು. ॥ ೮ ॥

ಮಹಾ ಸಾಮರ್ಥ್ಯವನ್ನು ತೋರಿಸುತ್ತಾರೆ—

ಮೂ ॥ ಯೇನೈವ ಜಾಯಮಾನೇನ ತರಸಾ ಭೂರ್ವಿದಾರಿತಾ ।
ಭೂಭಾರಕ್ಷಪಣೇ ವಿಷ್ಣೋರಂಗತಾಮಾಪ್ತುಮೇವ ಸಃ ॥ ೯ ॥
ಪ್ರತೀಪಪುತ್ರತಾಮಾಪ್ಯ ಬಾಹ್ಲೀಕೇಷ ಭವತ್ಪತಿಃ ।
ರುದ್ರೇಷು ಪತ್ರತಾಪಾಖ್ಯಃ ಸೋಮದತ್ತೋಂಽಸ್ಯ ಚಾತ್ಮಜಃ ॥ ೧೦ ॥

ಆ ॥ ಹುಟ್ಟುತಕ್ಕ ಯಾವ ಬಾಹ್ಲೀಕನಿಂದಲೇ ಬಲದಿಂದ ಭೂಮಿಯು ಶೀಳಿಸಲ್ಪಟ್ಟಿತೋ (ಪ್ರಹ್ಲಾದನು ಏಕೆ ಹುಟ್ಟಿದ್ದೆಂದರೆ) ಆ ಪ್ರಹ್ಲಾದನು ಭೂಮಿಗೆ ಭಾರಭೂತರಾದ ದೈತ್ಯರ ಸಮೂಹವನ್ನು ಸಂಹರಿಸುವ ವಿಷಯದಲ್ಲಿ ಶ್ರೀಕೃಷ್ಣನಿಗೆ ಸಹಾಯವನ್ನು ಹೊಂದುವುದಕ್ಕಾಗಿಯೇ ಪ್ರತೀಪ ರಾಜನ ಪುತ್ರತ್ವವನ್ನು ಹೊಂದಿ ಬಾಹ್ಲೀಕ ದೇಶಗಳಲ್ಲಿ ರಾಜನು ಆದನು. ಈ ಬಾಹ್ಲೀಕ ರಾಜನ ಮಗನಾದ ಸೋಮದತ್ತನು ರುದ್ರರ ಮಧ್ಯದಲ್ಲಿ ಪತ್ರತಾಪ ಎಂದು ಹೆಸರುಳ್ಳ ರುದ್ರನು

॥ ೯ ॥ ೧೦ ॥

ಮೂ ॥ ಅಜೈಕಪಾದಹಿರ್ಬುಧ್ನ್ಯೋ ವಿರೂಪಾಕ್ಷ ಇತಿ ತ್ರಯಃ ।
ರುದ್ರಾಣಾಂ ಸೋಮದತ್ತ ಸ್ಯ ಬಭೂವುಃ ಪ್ರಥಿತಾಸ್ಸುತಾಃ ॥ ೧೧ ॥
ವಿಷ್ಣೋರೇವಾಂಗತಾಮಾಪ್ತುಂ ಭೂರಿರ್ಭೂರಿಶ್ರವಾಃ ಶಲಃ ।
ಶಿವಾದಿಸರ್ವರುದ್ರಾಣಾಮಾವೇಶಾದ್ವರತಸ್ತಥಾ ॥ ೧೨ ॥
ಭೂರಿಶ್ರವಾ ಅತಿಬಲಸ್ತತ್ರಾಸೀತ್ಪರಮಾಸ್ತ್ರವಿತ್ ।
ತದರ್ಥಂ ಹಿ ತಪಶ್ಚೀರ್ಣಂ ಸೋಮದತ್ತೇನ ಶಂಭವೇ ॥ ೧೩ ॥

ಆ ॥ ರುದ್ರರ ಮಧ್ಯದಲ್ಲಿ ೧ ಅಜೈಕಪಾತ್, ೨ ಅಹಿರ್ಬುಧ್ನಿ, ೩ ವಿರೂಪಾಕ್ಷ ಎಂದು ಮೂವರು ಶ್ರೀ ಕೃಷ್ಣನಿಗೇನೇ ಸಹಾಯವನ್ನು ಮಾಡುವುದಕ್ಕಾಗಿ ೧ಭೂರಿ, ೨ ಭೂರಿಶ್ರವ, ೩ ಶಲ ಎಂದು ಸೋಮದತ್ತನಿಗೆ ಮೂರು ಮಕ್ಕಳು ಪ್ರಸಿದ್ಧರಾದವರು ಹುಟ್ಟಿದರು. (ಯದ್ಯಪಿ ಭೂರಿ ಮೊದಲಾದವರು ಮೂವರು ರುದ್ರರು. ಆದಾಗ್ಯೂ ಭೂರಿಶ್ರವನಲ್ಲಿ ವಿಶೇಷವನ್ನು ಹೇಳುತ್ತಾರೆ.) ಶಿವ ಮೊದಲಾದ ಸರ್ವ ರುದ್ರರ ಆವೇಶರಿಂದಲೂ ಹಾಗೆಯೇ ವರದಿಂದಲೂ ಭೂರಿಶ್ರವನು ಆ ಮೂವರಲ್ಲಿ ಅತಿ ಸಾಮರ್ಥ್ಯವುಳ್ಳವನು, ಉತ್ಕೃಷ್ಟವಾದ ಅಸ್ತ್ರ ವಿದ್ಯೆಯನ್ನು ತಿಳಿದವನೂ ಆಗಿದ್ದನು. ಭೂರಿಶ್ರವನಿಗೋಸ್ಕರ ಸೋಮದತ್ತನಿಂದ ರುದ್ರನಿಗೋಸ್ಕರ ತಪಸ್ಸು ಮಾಡಲ್ಪಟ್ಟಿತು. ॥ ೧೧ ॥ ೧೨ ॥ ೧೩ ॥

ಮೂ ॥ ದತೋ ವರಶ್ಚ ತೇನಾಸ್ಯ ತ್ವತ್ಪ್ರತೀಪಾಭಿಭೂತಿಕೃತ್ ।
ಬಲವೀರ್ಯಗುಣೋಪೇತೋ ನಾಮ್ನಾ ಭೂರಿಶ್ರವಾಃ ಸುತಃ ॥ ೧೪ ॥
ಭವಿಷ್ಯತಿ ಮಯೈವಿಷ್ಣೋ ಯುಜ್ಞಶೀಲ ಇತಿ ಸ್ಮ ಹ ।
ತೇನ ಭೂರಿಶ್ರವಾ ಜಾತಃ ಸೋಮದತ್ತಸುತೋ ಬಲೀ ॥ ೧೫ ॥

ಅ ॥ ಆ ರುದ್ರನಿಂದ ಈ ಸೋಮದತ್ತನಿಗೆ ವರವು ಕೊಡಲ್ಪಟ್ಟಿದೆ. (ಯಾವುದೆಂದರೆ) ನಿನ್ನ ವಿರೋಧಿಗಳಿಗೆ ಪರಾಭವವನ್ನು ಮಾಡತಕ್ಕ (ಶನಿಗೆ ಪರಾಜಯವನ್ನು ಮಾಡತಕ್ಕ ಸಾವಂಥ್ರ್ಯ ವೀರ್ಯ ಮೊದಲಾದ ಗುಣಗಳಿಂದ ಕೂಡಿದ, ನನ್ನಿಂದ ಪ್ರವೇಶಿಸಿಕೊಳ್ಳಲ್ಪಟ್ಟ ಯಜ್ಞ ಮಾಡ ತಕ್ಕ ಸ್ವಭಾವವುಳ್ಳ, ಹೆಸರಿನಿಂದ ಭೂರಿಶ್ರವನೆನ್ನುವ ಮಗನು ಆಗುವನು. ಹೀಗೆ ರುದ್ರನಿಂದ ವರವು ಕೊಡಲ್ಪಟ್ಟಿದೆ, ಪ್ರಸಿದ್ಧವು. ಆದ ಕಾರಣದಿಂದ ಸೋಮದತ್ತನ ವಂಗನಾದ ಭೂರಿ ಶ್ರವನು ಮಹಾಸಾವರ್ಥ್ಯವುಳ್ಳವನಾಗಿ ಹುಟ್ಟಿದನು. ॥ ೧೪ ॥ ೧೫ ॥

ಶಂತನು ಮೊದಲು ಯಾರು? ಯಾವುದಕ್ಕಾಗಿ ಹುಟ್ಟಿರುವನು ಎಂದಾಶಂಕಾ ಬಂದರೆ ಶಂತನುವಿನ ಸ್ವರೂಪವನ್ನೂ ಉತ್ಪತ್ತಿ ಕಾರಣವನ್ನೂ ಹೇಳುತ್ತಾರೆ—

ಮೂ ॥ ಪೂರ್ವೋದಧೇಸ್ತೀರಗತೇಽಬ್ಜ ಸಂಭವೇ
ಗಂಗಾಯುತಃ ಪರ್ವಣಿ ಘೂರ್ಣಿತೋಽಬ್ಧಿ ಃ ।
ಅವಾಕ್ಷಿಪತ್ತ ಸ್ಯ ತನೌ ನಿಜೋದ-
ಬಿಂದುಂ ಶಶಾಪೈನಮಥಾಬ್ಜ ಯೋನಿಃ ॥ ೧೬ ॥

ಅ ॥ ಕಮಲದಲ್ಲಿ ಹುಟ್ಟಿದ ಬ್ರಹ್ಮನು ಪೂರ್ವಸಮುದ್ರದ ಪಶ್ಚಿಮ ತೀರವನ್ನು ಹೊಂದುತ್ತಿರಲು ಪೂರ್ಣಿಮಾ ದಿನದಲ್ಲಿ ಮೇಲಕ್ಕೆ ಉಕ್ಕಿಬಂದ ಭಾಗೀರಥಿಯಿಂದ ಕೂಡಿದ ಸಮುದ್ರವು (ಅಂದರೆ ಗಂಗಾ ಸಮುದ್ರ ಸಂಗಮವು ಅಂದರೆ ಸಮುದ್ರಾಧಿಪತಿಯಾದ ವರುಣನು) ಆ ಬ್ರಹ್ಮನ ಶರೀರದಲ್ಲಿ ತನ್ನ ನೀರಿನ ಕಣವನ್ನು ಎಸೆದನು. ನೀರನ್ನು ಎಸೆದ ಮೇಲೆ ಬ್ರಹ್ಮನು ಈ ಸಮುದ್ರವನ್ನು ಶಪಿಸಿದನು. (ಅಂದರೆ ಸಮುದ್ರಕ್ಕೆ ಶಾಪಕೊಟ್ಟನು.) ॥ ೧೬ ॥

ಮೂ ॥ ಮಹಾಭಿಷಕ್ಕೋ ನಾಮ ನರೇಶ್ವರಸ್ತ್ವಂ
ಭೂತ್ವಾ ಪುನಃ ಶಂತನುನಾಮಧೇಯಃ ।
ಜನಿಷ್ಯಸೇ ವಿಷ್ಣು ಪದೀ ತಥೈಷಾ
ತತ್ರಾಪಿ ಭಾರ್ಯಾ ಭವತೋ ಭವಿಷ್ಯತಿ ॥ ೧೭ ॥

ಅ ॥ ಮಹಾಭಿಷಕ್ ಎಂದು ಪ್ರಸಿದ್ಧನಾದ ರಾಜನು ನೀನು ಆಗಿ, ಮಹಾಭಿಷಕನ್ನುವ ರಾಜನ ದೇಹ ವಿಯೋಗವಾದ ಮೇಲೆ ಶಂತನು ಎಂದು ಹೆಸರುಳ್ಳವನಾಗಿ ಹುಟ್ಟುವಿ. ಹಾಗೆಯೆ ಈ ಭಾಗೀರಥಿಯು (ಮೂಲ ರೂಪದಿಂದಲೇ) ದೇವತಾಂತರ್ಹಿತವಾದ ಮನುಷ್ಯ ಜನ್ಮದಲ್ಲಿಯೂ ನಿನಗೆ ಹೆಂಡತಿಯಾಗುವಳು. ॥ ೧೭ ॥

ಹಾಗಾದರೆ ಜಲವನ್ನು ಸೇಚಿಸಿದ್ದರಿಂದ ಮಹಾಭಿಷಕ್ ಎನ್ನುವ ನಾಮ ಬರಲಿ; ಜನ್ಮಾಂತರದಲ್ಲಿ ಶಂತನು ಎನ್ನುವ ನಾಮವು ಯಾವುದರಿಂದ ಪ್ರಾಪ್ತವಾಯಿತೆಂದರೆ—

ಮೂ ॥ ಶಾಂತೋ ಭನೇತ್ಯೇವ ಮುಯೋದಿತಸ್ತ್ವಂ
ತನುತ್ವನಾಪ್ತೋಽಥ ತತಶ್ಚ ಶಂತನುಃ ।
ಇತೀರಿತಃ ಸೋಽಪಿ ನೃಪೋ ಬಭೂವ
ಮಹಾಭಿಷಜ್ ನಾಮ ಹರೇಃ ಪದಾಶ್ರಯಃ ॥ ೧೮ ॥

ಅ ॥ ಶಾಂತನಾಗು ಎನ್ನುವ ರೀತಿಯಿಂದಲೇ ನನ್ನಿಂದ ಹೇಳಿಸಿಕೊಳ್ಳಲ್ಪಟ್ಟ ನೀನು (ಯಾವ ಕಾರಣದಿಂದ) ಸಂಕ್ಷೇಪತ್ವವನ್ನು (ಅಂದರೆ ಶಾಂತತ್ವವನ್ನು) ಹೊಂದಿರುತ್ತೀಯೋ, ಆದ ಕಾರಣ ಶಂತನು ನಾಮಕನಾಗಿ (ಹುಟ್ಟುವಿ.) ಈ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟ ಸಮುದ್ರರಾಜನು ಶಾಪವನ್ನು ಹೊಂದಿದ ಮೇಲೆ ಶ್ರೀಹರಿಯ ಪಾದಪದ್ಮವನ್ನು ಆಶ್ರಯಿಸುತ್ತಿರುವ ಮಹಾಭಿಷಕ್ ಎಂದು ಪ್ರಸಿದ್ಧನಾದ ರಾಜನು ಆದನು.

ವಿಶೇಷಾಂಶ—(1) ದ್ವೌ ಚಾಪರೌ ವರ್ಣವಿಕಾರನಾಶೌ ಎಂದು ನಿರುಕ್ತದಿಂದ ಶಾಂತವಾದ ತನು (ಶರೀರ) ವುಳ್ಳವನೆನ್ನುವ ಅರ್ಥದಲ್ಲಿ ಅ ಎನ್ನುವ ವರ್ಣಕ್ಕೆ ಅ ಎಂದು ವಿಕಾರವೂ ತಕಾರಕ್ಕೆ ನಾಶವೂ ಆದರೆ ಶಾಂತ ತನುಃ–ಶಂತನುಃ ಎನ್ನುವ ಪದವು. (2) ಶಾಂತನು ಆಗು ಎಂದು ಬ್ರಹ್ಮನು ಹೇಳೋಣ ಆಡಂಬರ ಶಾಂತಿಯನ್ನು ಹೊಂದಿ ಅಲ್ಪತ್ವವನ್ನು ಹೊಂದಿದ ಮೂಲರೂಪಿಯಾದ ಸಮುದ್ರರಾಜನಿಗೆ ನಾಮವು ಬರಲಿ. 'ತತಶ್ಚ ಶಂತನುಃ' ಎಂದು ಶಂತನು ಚಕ್ರವರ್ತಿಗೆ ನಾಮವು ಹೇಗೆ? ಮೂಲರೂಪದ ನಾಮವು ಅವತಾರದಲ್ಲಿಯೂ ಇರುತ್ತದೆಂದರೆ—ಮಹಾಭಿಷಕ್ ಎನ್ನುವ ಪ್ರಥಮ ರೂಪದಲ್ಲಿ ಆ ನಾಮವು ಏಕೆ ಬರಲಿಲ್ಲ? ಎಂದರೆ—ಎರಡನೇ ಶರೀರದಲ್ಲಿ ಮನುಷ್ಯತ್ವಾನುಭವ ಸಮಯದಲ್ಲಿ ಆ ಶರೀರದಲ್ಲಿಯೇ ನನ್ನಲ್ಲಿ ಮಾಡಿದ ಅಪರಾಧವು ಶಾಂತವಾಗಿರುವುದರಿಂದ ಮೂಲರೂಪವೂ ಆ ಎರಡನೇ ಶರೀರವೂ ಶಂತನು ಎಂದು ಹೇಳಿಸಿಕೊಳ್ಳಲಡುತ್ತದೆ, ಎಂದು ಬ್ರಹ್ಮನ ಅಭಿಪ್ರಾಯವು. ॥ ೧೮ ॥

ಮೂ ॥ ಸ ತತ್ರ ಭುಕ್ತ್ವಾಚಿರಕಾಲಮುರ್ವೀಂ
ತನುಂ ವಿಹಾಯಾಪ ಸದೋ ವಿಧಾತುಃ ।
ತತ್ರಾಪಿ ತಿಷ್ಠನ್ ಸುರವೃಂದಸನ್ನಿಧೌ
ದದರ್ಶ ಗಂಗಾಂ ಶ್ಲಥಿತಾಂಬರಾಂ ಸ್ವಕಾಂ ॥ ೧೯ ॥

ಅ ॥ ಆ ಮಹಾಭಿಷಕ್ ಎನ್ನುವ ರಾಜನು, ಆ ಜನ್ಮದಲ್ಲಿ ಭೂಮಿಯನ್ನು ಬಹು ಕಾಲದಲ್ಲಿ ರಕ್ಷಿಸಿ ಶರೀರವನ್ನು ಬಿಟ್ಟು ಬ್ರಹ್ಮನ ಸಭೆಯನ್ನು ಹೊಂದಿದನು. ಆ ಸಭೆಯಲ್ಲಿಯೂ ದೇವತೆಗಳ ಸಮುದಾಯದ ಸಮೀಪದಲ್ಲಿ ನಿಂತುಕೊಂಡು ಬಿಚ್ಚಿಹೋದ ವಸ್ತ್ರವುಳ್ಳ ತನ್ನ ಹೆಂಡತಿಯಾದ ಗಂಗಾದೇವಿಯನ್ನು ನೋಡಿದನು. ॥ ೧೯ ॥

ಮೂ ॥ ಅನಾಜ್ಞಾ ಜೇಷು ದೃಸದತ್ಸು ಗಂಗಾಂ (ಸ್ಸು ರಾಗಾತ್)
ನಿರೀಕ್ಷಮಾಣಂ ಪುನರಾತ್ಮ ಸಂಭವಃ ।
ಉವಾಚ ಭೂಮೌ ನೃ ಪತಿರ್ಭವಾಶು
ಶಪ್ತೋ ಯಥಾ ತ್ವಂ ಹಿ ಪುರಾ ಮಯೈವ ॥ ೨೦ ॥

ಅ ॥ ದೇವತೆಗಳು ಕೆಳಗೆ ಮಾಡಲ್ಪಟ್ಟ ಮುಖವುಳ್ಳವರಾಗುತ್ತಿರಲು ಶ್ರೀಹರಿಯಿಂದ ಹುಟ್ಟಿದ ಬ್ರಹ್ಮನು ಭಾಗೀರಥಿಯನ್ನು ಆತ್ಮನುರಾಗದಿಂದ ನೋಡುತ್ತಿದ್ದ ವರುಣನನ್ನು ಕುರಿತು ಮತ್ತೊಂದಾವರ್ತಿ ಹೇಳಿದನು. ಮೊದಲು ನೀರನ್ನು ನನ್ನ ಶರೀರಕ್ಕೆ ಎಸೆಯುವ ಕಾಲದಲ್ಲಿ ನನ್ನಿಂದಲೇ ನೀನು ಯಾವ ಕಾರಣದಿಂದ (ಶಂತನು ನಾಮಕನಾಗಿ ಹುಟ್ಟುವಿ ಎಂದು) ಹೇಗೆ ಶಾಪಗ್ರಸ್ತನಾಗಿರುವಿಯೋ (ಆದಕಾರಣ) ಶೀಘ್ರವಾಗಿ ಭೂಮಿಯಲ್ಲಿ ಶಂತನು ನಾಮಕ ರಾಜನು ಆಗು.

ವಿಶೇಷಾಂಶ—(1) ಪೂರ್ವಸಮುದ್ರದಲ್ಲಿ ಬ್ರಹ್ಮನಂ ಕೊಟ್ಟ ಶಾಪಕ್ಕೆ ಎರಡು ಮನುಷ್ಯ ಜನ್ಮಗಳು ಫಲವು. ರಾಗದಿಂದ ಗಂಗಾದೇವಿಯನ್ನು ನೋಡುತ್ತಿರಲು ತನ್ನ ಸಭೆಯಲ್ಲಿ ಬ್ರಹ್ಮನು ಕೊಟ್ಟ ಶಾಪಕ್ಕೆ ಶಂತನುವಾಗಿ ಶೀಘ್ರದಲ್ಲಿ ಹುಟ್ಟುವುದೇ ಫಲವು. ಎಂದು ಸೂಚಿತವಾಯಿತು. ಆದುದರಿಂದಲೇ ತತ್ಕ್ಷಣತೋ ಬಭೂವ' ಎಂದು ಮುಂದಿನ ಶ್ಲೋಕದಲ್ಲಿ ಹೇಳುವರು. ॥ ೨೦ ॥

ಮೂ ॥ ಇತೀರಿತಸ್ತತ್ಕ್ಷಣತಃ ಪ್ರತೀಪಾತ್
ಬಭೂವ ನಾಮ್ನಾ ನೃಪತಿಶ್ಚ ಶಂತನಂ ।
ಅವಾಪ್ಯ ಗಂಗಾಂ ದಯಿತಾಂ ಸ್ವಕೀಯಾಂ
ತಯಾ ಮುಮೋದಾಬ್ದಗಣಾನ್ ಬಹೂಂಶ್ಚ ॥ ೨೧ ॥

ಅ ॥ ಈ ಪ್ರಕಾರವಾಗಿ ಹೇಳಿಸಿಕೊಳ್ಳಲ್ಪಟ್ಟ ಸಮುದ್ರ ರಾಜನಾದ ವರುಣನು ಶಾಪೋತ್ತರಕ್ಷಣದಲ್ಲಿಯೇ ಪ್ರತೀಪ ರಾಜನ ದೆಸೆಯಿಂದ ನಾಮದಿಂದ ಶಂತನು ಎಂದಂ ಪ್ರಸಿದ್ದನಾದ ರಾಜನು ಹುಟ್ಟಿದನು. ಆ ಶಂತನು ರಾಜನು ತನ್ನ ಪ್ರಿಯಳಾದ ಗಂಗಾದೇವಿಯನ್ನು ಹೊಂದಿ ಆ ಗಂಗಾದೇವಿಯಿಂದ ಬಹು ಸಂವತ್ಸರಗಳ ಸಮುದಾಯಗಳನ್ನು (ಗಳಲ್ಲಿ) ಸಂತೋಷವನ್ನು ಹೊಂದಿಕೊಂಡು ಇರುತ್ತಿದ್ದನು. ॥ ೨೧ ॥

ಭೀಷ್ಮಾಚಾರ್ಯರ ಉತ್ಪತ್ತಿಯನ್ನು ಹೇಳುವುದಕ್ಕಾಗಿ ಗಂಗೆಯ ಆಗಮನ ಪ್ರಕಾರವನ್ನು ತೋರಿಸುತ್ತಾರೆ—

ಮೂ ॥ *ಅಥಾಷ್ಟವೋ ವಸುರಾಸಿದ್ದ್ಯುನಾಮಾ
ವರಾಂಗಿನಾಮ್ನ್ಯಸ್ಯ ಬಭೂವ ಭಾರ್ಯಾ ।
ಬಭೂವ ತಸ್ಯಾಶ್ಚ ಸಖೀ ನೃಪಸ್ಯ
ಸುವಿಂದನಾಮ್ನೋ ದಯಿತಾ ಸನಾಮ್ನೀ ॥ ೨೨ ॥

ಅ ॥ ದ್ಯು ಎಂದು ಹೆಸರುಳ್ಳ ಎಂಟನೇ ವಸುವು ಇದ್ದನು. ಈ ವಸುವಿಗೆ ವರಾಂಗಿ ಎಂದು ಹೆಸರುಳ್ಳ ಹೆಂಡತಿಯಾಗಿದ್ದಳು. ಆ ವರಾಂಗಿಗೆ ಸುವಿಂದನೆಂದು ಹೆಸರುಳ್ಳ ರಾಜನ ಹೆಂಡತಿಯೂದ ಸಮಾನ ನಾಮವುಳ್ಳವಳು (ಅಂದರೆ ವರಾಂಗಿ ಎನ್ನುವಳು) ಸಖಿಯಾಗಿದ್ದಳು. ॥ ೨೨ ॥

ಮೂ ॥ ತಸ್ಯಾ ಜರಾಮೃತಿವಿಧ್ವಂಸಹೇತೋಃ
ವಸಿಷ್ಠಧೇನುಂ ಸ್ವಮೃತಂ ಕ್ಷರಂತೀಂ ।
ಜರಾಪಹಾಂ ನಂದಿನಿನಾಮಧೇಯಾಂ
ಬದ್ಧುಂ ಪತಿಂ ಚೋದಯಾಮಾಸ ದೇವೀ ॥ ೨೩ ॥

ಅ ॥ ದ್ಯು ಎನ್ನುವ ವಸುವಿನ ಹೆಂಡತಿಯಾದ ವರಾಂಗೀದೇವಿಯು, ತನ್ನ ಸಖಿಯಾದ ವರಾಂಗಿಗೆ ಮುದಿತನವು ಮರಣವು ಇವುಗಳ ವಿನಾಶಕ್ಕಾಗಿ ಶೋಭನವಾದ ಅಮೃತವನ್ನು ಕರೆಯುವ, ಮುದಿತನವನ್ನು ನಾಶಮಾಡುವ, ನಂದಿನಿ ಎಂದಂ ಹೆಸರುಳ್ಳ, ವಸಿಷ್ಠ ಋಷಿಯ ಧೇನುವನ್ನು ಕಟ್ಟಿ ತರುವುದಕ್ಕಾಗಿ ಗಂಡನಾದ ದ್ಯು ನಾಮಕ ವಸುವನ್ನು ಪ್ರೇರಿಸಿದಳು. ॥ ೨೩ ॥

---

*ಮಂಗಲಾನಂತರಾರಂಭಪ್ರಶ್ನಕಾರ್ಯೇಷ್ವಥೋ ಅಥ ಎನ್ನುವ ವಚನದ್ದೆಸೆಯಿಂದ ಅರ್ಥ ಶಬ್ದವು ಕಥಾಂತರಾರಂಭ ಸುಚಕವು.

ಮೂ ॥ ತಯೌ ದ್ಯುನಾನೌ ಸ ವಸುಃ ಪ್ರಚೋದಿತೋ
ಭ್ರಾತೃಸ್ನೇಹಾತ್ ಸಪ್ತಭಿರನ್ವಿತೋ ಪರೈಃ ।
ಬಬಂಧ ತಾಂ ಗಾಮುಥ ತಾನ್ ಶಶಾಪ
ವಸಿಷ್ಠಸಂಸ್ಥಃ ಕಮಲೋದ್ಭವಃ ಪ್ರಭುಃ ॥ ೨೪ ॥

ಆ ॥ ವರಾಂಗಿ ದೇವಿಯಿಂದ ಪ್ರೇರಿಸಿಕೊಳ್ಳಲ್ಪಟ್ಟ ದ್ಯು ಎಂದು ಹೆಸರುಳ್ಳ ಆ ಎಂಟನೇ ವಸುವು ಅಣ್ಣಂದಿರಲ್ಲಿ ಸ್ನೇಹನಿಮಿತ್ತವಾಗಿ ಇತರರಾದ ಪೃಥು ಮೊದಲಾದ ಏಳು (2) ವಸುಗಳಿಂದಲೂ ಕೂಡಿದವನಾಗಿ ಆ ನಂದಿನಿ ಗೋವನ್ನು ಕಟ್ಟಿ ಹಾಕಿದನು. ಆಮೇಲೆ ವಸಿಷ್ಠನಲ್ಲಿರತಕ್ಕ ಸರ್ವಸಮರ್ಥನಾದ ಕಮಲದಲ್ಲಿ ಹುಟ್ಟಿದ ಬ್ರಹ್ಮನು ಆ ಎಂಟು (೮) ವಸುಗಳನ್ನು ಶಾಪಗ್ರಸ್ತರನ್ನಾಗಿ ಮಾಡಿದನು. ಅಂದರೆ ಎಂಟು ವಸುಗಳಿಗೂ ಶಾಪಕೊಟ್ಟನು.

ವಿಶೇಷಾಂಶ—(1) 'ದ್ರೋಣಃ ಪ್ರಾಣೋ ಧ್ರುವೋಽರ್ಕೋಽಗ್ನಿರ್ದೋಷಾ ವಸು ವಿಭಾವಸುಃ । ವಸುಷ್ವೇತೇಷು ಭೀಷ್ಮಃ ಪ್ರಾಕ್ ಬ್ರಹ್ಮಯುಕ್ತೋ ದ್ಯುನಾಮಕಃ'॥ ವಸು ಸಪ್ತಕಯುಗ್ಭೀಷ್ಮಃ ಬ್ರಹ್ಮಾವೇಶೀ ದ್ಯುನಾಮಕಃ ೧ ದ್ರೋಣ, ೨ ಪ್ರಾಣ, ೩ ಧ್ರುವ, ೪ ಅರ್ಕ, ೫ ಅಗ್ನಿ, ೬ ದೋಷಾ, ೭, ದ್ಯು ನಾಮಕ ವಸು, ೮ ವಿಭಾವಸು ಹೀಗೆ ೮ ವಸುಗಳು ಈ ವಸುಗಳಲ್ಲಿ ಭೀಷ್ಮಾಚಾರ್ಯರು ದ್ಯು ನಾಮಕ ವಸುಗಳು. ಬ್ರಹ್ಮಾವೇಶ ಯುಕ್ತರು, ಭೀಷ್ಮಾಚಾರ್ಯರು ಏಳು ವಸುಗಳ ಆವೇಶವಿರತಕ್ಕವರು. ಎಂಟು ವಸುಗಳ ಮಧ್ಯದಲ್ಲಿ ಅಗ್ನಿಯೂ ಕೂಡ ಇದ್ದ ಪ್ರಯುಕ್ತ ಅಗ್ನಿಯಿಂದ ಅಪಮರನಾದ ವಸಿಷ್ಠನಿಗೆ ಶಾಪವನ್ನು ಕೊಡಲಿಕ್ಕೆ ಹೇಗೆ ಶಕ್ತಿಯೆಂದರೆ 'ವಸಿಷ್ಠ ಸಂಸ್ಥಃ' ಎಂದು ಹೇಳಿರುವರು. ಅಂದರೆ ವಸಿಷ್ಠನು ಶಾಪ ಕೊಟ್ಟದ್ದಲ್ಲ. ಅವನಲ್ಲಿರತಕ್ಕ ಚತುರ್ಮುಖ ಬ್ರಹ್ಮನು ಶಾಪ ಕೊಟ್ಟದ್ದು. ॥ ೨೪ ॥

ಮೂ ॥ ಅಧರ್ಮವೃತಾಃ ಪ್ರತಿಯಾತ ಮಾನುಷೀಂ
ಯೋನಿಂ ದ್ರುತಂ ಯತ್ಕೃತೇ ಸರ್ವ ಏವ ।
ಧರ್ಮಚ್ಯುತಾಃ ಸ ತಥಾಷ್ಟಾಯುರಾಪ್ಯತಾ-
ನುನ್ಮೋ ಪುನಃ ಕ್ಷಿಪ್ರಮುಥೋ(ತೊ?) ವಿಮೋಕ್ಷ್ಯಥ ॥ ೨೫ ॥

ಆ ॥ ಗೋ ಬಾಧನರೂಪವಾದ ಅಧರ್ಮ ಕರ್ಮದಲ್ಲಿ ಪ್ರವೃತ್ತರಾದ ನೀವು ಮನುಷ್ಯರ ಸಂಬಂಧಿಯಾದ ಯೋನಿಯನ್ನು ಶೀಘ್ರವಾಗಿ ಹೋಗಿರಿ. ಯಾವ ದ್ಯು ನಾಮಕನಾದ ವಸು ವಿನ ಪ್ರೀತಿಗಾಗಿ, (ನೀವು) ಎಲ್ಲರೂ ಧರ್ಮಭ್ರಷ್ಟರಾಗಿರುತ್ತೀರೋ, ಅಂತಹ ದ್ಯು ನಾಮಕ ವಸುವು (ತಥಾ-) ಹೇಗೆ ಪಾಪವು ಅಧಿಕವಾಗುತ್ತದೋ ಹಾಗೆಯೇ, (ಅಷ್ಟಾಯುಃ-) ತಾನು ಕೂಡಿ ಎಂಟು ಮಂದಿ ವಸುಗಳ ಆಯುಷ್ಯವನ್ನು ಅಥವಾ (ಅಷ್ಟಾನಾಂ ಆಯುಃ ಯಸ್ಯ ಎನ್ನುವ ವ್ಯುತ್ಪತ್ತಿಯಿಂದ) ಎಂಟು ವಸುಗಳ ಆಯುಷ್ಯವುಳ್ಳವನಾಗಿ (ತಾನು ಮಾಡಿದ ಪಾಪ ಫಲದಿಂದ) ಹೊಂದಲ್ಪಡಲಿ. ಅಂದತೆ ಪಾಪ ಫಲವನ್ನು ಅನುಭವಿಸಲಿ, ಹೊಂದಲಿ. ಬೇರೆ ಏಳು ವಸುಗಳಾದ ನೀವು ಶೀಘ್ರವಾಗಿಯೇ (ಅಂದರೆ ಜನನ ಮಾತ್ರದಿಂದಲೇ) ಮನುಷ್ಯ ದೇಹದಿಂದ ಮುಕ್ತರಾಗುವಿರಿ.

ವಿಶೇಷಾಂಶ—(1) ದೇವತೆಗಳಿಗೆ ಮನುಷ್ಯಯೋನಿ ಪ್ರಾಪ್ತಿಯೇ ನಿರಯಪ್ರಾಪ್ತಿ ತುಲ್ಯವು; ಆ ಕಾರಣದಿಂದ ನಿರಯಪ್ರಾಪ್ತಿ ಕಾರಣವಾದ ಗೋಬಂಧನರೂಪ ಅಪರಾಧವನ್ನು

ಮಾಡಿದ ಎಂಟನೇ ವಸುವಿಗೆ ಬಹುಕಾಲದಲ್ಲಿ ಮನುಷ್ಯಶರೀರದಲ್ಲಿಯೇ ಅವಸ್ಥಿತಿಯಾಗಲಿ ಎನ್ನುವ ಅಭಿಪ್ರಾಯದಿಂದ 'ಸ ತಥಾಪ್ಯಾಯುಃ' ಎಂದು ಹೇಳಿರುವರು. ॥ ೨೫ ॥

ವಸುಗಳಿಗೆ ಶಾಪಪ್ರಕಾರವನ್ನು ಹೇಳಿ ದ್ಯುನಾಮಕ ವಸುವಿನ ಹೆಂಡತಿಗೆ ಶಾಪಪ್ರಕಾರವನ್ನು ತೋರಿಸುತ್ತಾರೆ—

ಮೂ ॥ ಪ್ರಚೋದಯಾಮಾಸ ಚ ಯಾ ಕುಮಾರ್ಗೇ
ಪತಿಂ ಹಿ ಸಾಂಬೇತಿ ನರೇಷು ಜಾತಾ ।
ಅಭರ್ತೃಕಾ ಪುಂಸ್ತ್ವಸಮಾಶ್ರಯೇಣ
ಪತ್ಯುರ್ಮೃತೌ ಕಾರಣತ್ವಂ ವ್ರಜೇತ ॥ ೨೬ ॥

ಅ ॥ ಯಾವ, ದ್ಯುನಾಮಕ ವಸುವಿನ ಹೆಂಡತಿಯು ಗೋವಿನ ಚೌರ್ಯರೂಪವಾದ ದುರ್ಮಾರ್ಗದಲ್ಲಿ ಗಂಡನನ್ನು ಪ್ರೇರಿಸಿರುವಳೋ, ಆ ವರಾಂಗಿಯು ಅಂಬಾನಾಮಕಳಾಗಿ ಮನುಷ್ಯರಲ್ಲಿ ಹುಟ್ಟಿದಳು. ಆಕೆಯು ಪತಿರಹಿತಳಾಗಿ ಪುರುಷತ್ವವನ್ನು ಆಶ್ರಯಿಸಿ ಗಂಡನ ಮರಣದಲ್ಲಿ ಕಾರಣತ್ವವನ್ನು ಹೊಂದುವಳು. ॥ ೨೬ ॥

ದ್ಯುನಾಮಕ ವಸುವಿನ ಶಾಪ ವಿಶೇಷವನ್ನು ಹೇಳುತ್ತಾರೆ—

ಮೂ ॥ ಭವತ್ವಸೌ ಬ್ರಹ್ಮ ಚರ್ಯೈಕನಿಷ್ಠೋ
ಮಹಾನ್ ವಿರೋಧಶ್ಚ ತಯೋರ್ಭವೇತ ।
ಸ ಗರ್ಭವಾಸಾಪ್ಯಕದುಃಖಮೇವ
ಸಮಾಪ್ನುತಾಂ ಶರತಲ್ಪೇ ಶಯಾನಃ ॥ ೨೭ ॥

ಅ ॥ ಈ ದ್ಯುನಾಮಕ ವಸುವು ಬ್ರಹ್ಮಚರ್ಯದಲ್ಲಿಯೇ ಮುಖ್ಯವಾದ ನಿಯಮವುಳ್ಳವನಾಗಿ ಆಗಲಿ. ಆ ವರಾಂಗಿಗೂ ದ್ಯುನಾಮಕ ವಸುವಿಗೂ (ಮನುಷ್ಯ ಜನ್ಮದಲ್ಲಿ) ಮಹತ್ತಾದ ವಿರೋಧವೂ ಉಂಟಾಗಲಿ. ದ್ಯುನಾಮಕನಾದ ವಸುವೇ ಶರಮಂಚದಲ್ಲಿ ಮಲಗಿಕೊಂಡವನಾಗಿ ಗರ್ಭವಾಸದ ಎಂಟರಿಂದುಂಟಾಗುವ ದುಃಖವನ್ನೇ ಹೊಂದಲಿ.

ವಿಶೇಷಾಂಶ—ಎಂಟಾವರ್ತಿ ಗರ್ಭವಾಸವಾಗುವಾಗ ಎಷ್ಟು ದುಃಖವಿದೆಯೋ ಅಷ್ಟು ದುಃಖವನ್ನು ಶಯ್ಯಾಭೂತಗಳಾದ ಅನೇಕ ಶರಗಳ ಪೆಟ್ಟಿನಿಂದ ಹೊಂದಲಿ. ॥ ೨೭ ॥

ಮೂ ॥ ಮೃತ್ಯೋಷ್ಟಕೋತ್ಥಾಮಪಿ ವೇದನಾಂ ಸ
ಪ್ರಾಪ್ನೋತು ಶಸ್ತ್ರೈರ್ಬಹುಧಾ ನಿಕೃತ್ತಃ ।
ಇತೀರಿತಾಸ್ತೇ ಕಮಲೋದ್ಭವಂ ತಂ
ಜ್ಞಾತ್ವಾ ಸಮುತ್ಸೃಜ್ಯ ಚ ಗಾಂ ಪಣೇಮುಃ ॥ ೨೮ ॥

ಅ ॥ ಆ ದ್ಯುನಾಮಕ ವಸುವೇ ಮರಣವನ್ನು ಹೊಂದಿದ ಎಂಟುಜನರ ಮರಣಾದಿಗಳಿಂದುಂಟಾದ ವ್ಯಥೆಯನ್ನೂ ಕೂಡ (ಯುದ್ಧದಲ್ಲಿ) ಶಸ್ತ್ರಗಳಿಂದ ಅನೇಕ ಪ್ರಕಾರ ಛೇದಿಸಲ್ಪಟ್ಟವನಾಗಿ ಹೊಂದಲಿ. ಹೀಗೆ ಹೇಳಿಸಿಕೊಳ್ಳಲ್ಪಟ್ಟ ಆ ಎಂಟುಮಂದಿ ವಸುಗಳು ಆ ವಸಿಷ್ಠನನ್ನು (ಅಂದರೆ ವಸಿಷ್ಠ ಋಷಿಯಲ್ಲಿ (ಅಂತರ್ಗತನಾದವನನ್ನು) ಬ್ರಹ್ಮನನ್ನಾಗಿ ತಿಳಿದು ಗೋವನ್ನು ಬಿಟ್ಟು (ವಸಿಷ್ಠಾಂತರ್ಗತನಾದ ಬ್ರಹ್ಮನನ್ನೇ) ನಮಸ್ಕರಿಸಿ ವಿಜ್ಞಾಪಿಸಿಕೊಂಡರು.

ವಿಶೇಷಾಂಶ— (1) ಒಂದು ಶರೀರದಿಂದಲೇ ಎಂಟಾವರ್ತಿ ಜನನದುಃಖವನ್ನೂ ಎಂಟಾವರ್ತಿ ಮರಣದುಃಖವನ್ನೂ ಶರಮಂಚದಿಂದಲೂ, ಯುದ್ಧದಲ್ಲಿ ಶಸ್ತ್ರಗಳ ತಾಡನದಿಂದಲೂ ಹೊಂದಲಿ, ಎಂದು ಬ್ರಹ್ಮನು ಶಪಿಸಿದನು. ॥ ೨೮ ॥

ವಿಜ್ಞಾಪನ ಪ್ರಕಾರವನ್ನು ತೋರಿಸುತ್ತಾರೆ—

ಮೂ ॥ ನ ಮಾನುಷಂ (ಷೀಂ) ಗರ್ಭಮುವಾಪ್ನುಮೋ ವಯಂ
ಭವತ್ಪಯಂ ಸರ್ವವಿತ್ ಕೀರ್ತಿಮಾಂಶ್ಚ ।
ಮಹಾಸ್ತ್ರವೇತ್ತಾ ಭವದಂಶಯುಕ್ತ*ಃ
ತಥಾ ಬಲಂ ನೋಽಖಿಲಾನಾಮುಪೈತು ॥ ೨೯

ಅ ॥ ನಾವು ಮನುಷ್ಯಸಂಬಂಧಿಯಾದ ಗರ್ಭವನ್ನು ಹೊಂದುವುದಿಲ್ಲ. (ಮತ್ತೆ ಮನುಷ್ಯ ವೀರ್ಯವನ್ನೂ ದೇವತಾಗರ್ಭವನ್ನೂ ಹೊಂದುವೆವು.) ಈ ದ್ಯುನಾಮಕ ವಸುವು ಸರ್ವವನ್ನು ತಿಳಿದವನೂ, ಕೀರ್ತಿಯುಳ್ಳವನೂ, ಮಹತ್ತಾದ ಅಸ್ತ್ರ ವಿದ್ಯೆಗಳನ್ನು ತಿಳಿದವನೂ, ನಿಮ್ಮ(ಬ್ರಹ್ಮನ) ಆವೇಶದಿಂದ ಕೂಡಿದವನೂ ಆಗಲಿ. ಹಾಗೆಯೇ ನಮ್ಮೆಲ್ಲರ (ಅಂದರೆ ಏಳು ವಸುಗಳ) ಸಾಮರ್ಥ್ಯವನ್ನೂ ಹೊಂದಲಿ. ॥ ೨೯ ॥

ಮೂ ॥ ಇತೀರಿತೇಽಸ್ತ್ವಿತ್ಯುದಿತಾಃ ಸ್ವಯಂಭುವಾ
ವಸಿಷ್ಠಸಂಸ್ಥೇನ ಸುರಾಪಗಾಂ ಯಯುಃ ।
ಊಚುಸ್ತಥೈನಾಮುದರೇ ವಯಂ ತೇ
ಜಾಯೇಮಹಿ ಕ್ಷಿಪ್ರಮಸ್ಮಾನ್ ಹನ ತ್ವಂ ॥ ೩೦ ॥

ಅ ॥ ಈ ಪ್ರಕಾರ (ಬ್ರಹ್ಮನು ವಸುಗಳಿಂದ) ಹೇಳಿಸಿಕೊಳ್ಳಲ್ಪಡುತ್ತಿರಲು ವಸಿಷ್ಠನಲ್ಲಿರತಕ್ಕ ಬ್ರಹ್ಮನಿಂದ ಆಗಲಿ ಎಂದು ಹೇಳಿಸಿಕೊಳ್ಳಲ್ಪಟ್ಟ ವಸುಗಳು ದೇವನದಿಯಾದ ಗಂಗೆಯನ್ನು ಕುರಿತು ಹೋದರು. ಹಾಗೆಯೇ ಈ ಗಂಗೆಯನ್ನು ಕುರಿತು ಹೇಳಿದರು. ನಿನ್ನ ಹೊಟ್ಟೆಯಲ್ಲಿ ನಾವು ಹುಟ್ಟುವೆವು. ತತ್‌ಕ್ಷಣದಲ್ಲಿ |ನೀನು ನಮ್ಮನ್ನು ಕೊಲ್ಲು. (ಒಬ್ಬನನ್ನು ಮಾತ್ರ ಕೊಲ್ಲಬೇಡ.)

ವಿಶೇಷಾಂಶ—(1) ವಸುಗಳು ಬ್ರಹ್ಮನ ಹತ್ತಿರ ವಿಜ್ಞಾಪಿಸಿಕೊಂಡಾಗ ಬ್ರಹ್ಮನು ವಿಜ್ಞಾಪನೆಯನ್ನು ಅಂಗೀಕರಿಸಿಕೊಂಡನು. ಆಮೇಲೆ ವಸುಗಳು ಗಂಗೆಯ ಸಮೀಪಕ್ಕೆ ಹೋಗಿ ಪ್ರಾರ್ಥಿಸಿಕೊಂಡರು. ॥ ೩೦ ॥

ಮೂ ॥ ಇತೀರಿತಾ ಸಾ ವರಮಾಶು ವವ್ರೇ
ತೇಭ್ಯೋಽಪ್ಯಪಾಪತ್ವಮುಥ ಪ್ರಿಯತ್ವಂ ।
ತೇಷಾಂ ತಥೈ(ಸದೈ)ವಾತ್ಮನ ಏಕಮೇಷಾಂ
ದೀರ್ಘಾಯುಷಂ ತಾನ್ ಸುಷುವೇಽಥ ಶಂತನೋಃ ॥ ೩೧ ॥

ಅ ॥ ಈ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟ ಆ ಗಂಗೆಯು (ತೇಷಾಂ=) ತನ್ನಿಂದ ಸಂಭೃತರಾದ ಪುತ್ರರಿಗೆ (ಽಪ್ರಿಯತ್ವಂ=) ತಾನೂ ಕೊಂದರೂ ತನ್ನಲ್ಲಿ ಪ್ರೀತಿಯಿರುವತನವನ್ನೂ, ಹಾಗೆಯೇ ಕೊಂದ ಮೇಲೆ ತನಗೆ ಭ್ರೂಣಹತ್ಯಾಖ್ಯ ಪಾಪರಾಹಿತ್ಯವನ್ನೂ ಈ ಕುಮಾರರ ಮಧ್ಯದಲ್ಲಿ

ಒಬ್ಬನನ್ನು ದೀರ್ಘಾಯುಷ್ಯವುಳ್ಳವನನ್ನೂ ಹೀಗೆ (ಮೂರು ವಿಧವಾದ) ವರವನ್ನು (೨) ಆ ವಸುಗಳ ದೆಸೆಯಿಂದ ಶೀಘ್ರದಲ್ಲಿ ಬೇಡಿಕೊಂಡಳು. ಆಮೇಲೆ ಗಂಗಾದೇವಿಯು ಎಂಟು ವಸುಗಳನ್ನು ಶಂತನುವಿನ ದೆಸೆಯಿಂದ ಹಡೆದಳು. ಮತ್ತು ಎಂಟು ವಸುಗಳ ಮಧ್ಯದಲ್ಲಿ ಒಬ್ಬ ಚಿಕ್ಕವನನ್ನು ದೀರ್ಘಾಯುಷ್ಮಂತನನ್ನಾಗಿ ಹಡೆದಳು. ॥ ೩೧ ॥

ಗಂಗೆಯು ಮಾಡಿದ ಹನನವು ಭೀಷ್ಮನಿಗೆ ಅನುಕೂಲವಾಯಿತೇ ಎನ್ನುವ ಪ್ರಕಾರವನ್ನು ತೋರಿಸುತ್ತಾರೆ—

ಮೂ ॥ ಅವಿಘ್ನತಸ್ತಾನ್ ನಿನಿಹಂತುಮೇವ
ಪುರಾ ಪ್ರತೀಪಸ್ಯ ಹಿ ದಕ್ಷಿಣೋರುಂ ।
ಸನಾಶ್ರಿತಾ ಕಾಮಿನೀವತ್ತ್ವಕಾಮಾ
ತತ್ಪುತ್ರಭಾರ್ಯಾ ಭವಿತುಂ ವಿಡಂಬಾತ್ ॥ ೩೨ ॥

ಅ ॥ ವಿಘ್ನಾಭಾವದ್ದೆಸೆಯಿಂದಲೇ(ಅಂದರೆ ನಿರ್ವಿಘ್ನವಾಗಿಯೇ) ಆ ವಸುಗಳನ್ನು (ನಿನಿಹಂತುಂ=) ಕೊಲ್ಲುವುದಕ್ಕಾಗಿಯೇ (ಗಂಗಾದೇವಿಯು) (ವರುಣನ ಹೆಂಡತಿಯಾದ ಕಾನು ಮತ್ತೊಬ್ಬನ ಹೆಂಡತಿಯಾಗುವುದು ಅಯೋಗ್ಯವು, ಎನ್ನುವ ವಿಶೇಷದಿಂದ ಪ್ರತೀಪರಾಜನಲ್ಲಿ) ಇಚ್ಛೆಯಿಲ್ಲದಿರುವವಳಾಗಿ ಆಪ್ರತೀಪರಾಜನ ಮಗನಾದ ಶಂತನು ಚಕ್ರವರ್ತಿಯ ಹೆಂಡತಿಯಾಗುವುದಕ್ಕಾಗಿ (ಮನುಷ್ಯ ಸ್ತ್ರೀಯರ) ಅನುಕರಣದಿಂದ ಕಾಮವುಳ್ಳವಳಂತೆ (ಪುರಾತು=) ಶಂತನು ಚಕ್ರವರ್ತಿಗೆ ಮಾದುವೆಯಾಗುವುದಕ್ಕಿಂತ ಮೊದಲೇ ಪ್ರತೀಪರಾಜನ ಬಲತೊಡೆಯನ್ನು ಆಶ್ರಯಿಸಿದಳು. (ಅಂದರೆ ಬಲತೊಡೆಯಲ್ಲಿ ಕುಳಿತುಕೊಂಡಳು.) (ಹಿ=) ಬಲತೊಡೆಯಲ್ಲಿ ಕುಳಿತವಳು ಸೊಸೆಯು ಎಂದು ಪ್ರಸಿದ್ಧವು.

ವಿಶೇಷಾಂಶ—(1) ಗಂಗಾದೇವಿಯು ಮೊದಲೇ ಶಂತನು ಚಕ್ರವರ್ತಿಯನ್ನು ಹೊಂದಿದ ಪಕ್ಷದಲ್ಲಿ ದೇವಸ್ತ್ರೀಯರ ಸಮೂಪಕ್ಕೆ ನೀನು ಹೋಗಕೂಡದು ಎಂದು ಮಗನಾದ ಶಂತನುವಿನ ಹತ್ತಿರ ತಂದೆಯಾದ ಪ್ರತೀಪನು ಹೇಳಿದರೆ ವಿಘ್ನವು ಸಂಭವಿಸೀತು, ಎನ್ನುವ ಶಂಕೆಯಿಂದ 'ಅವಿಘ್ನತ ಏವ' ಎಂದು ಹೇಳಿರುವರು. (2) ಮನುಷ್ಯಸ್ತ್ರೀಯರ ಅನುಕರಣದಿಂದ ಬಲತೊಡೆಯಲ್ಲಿ ಕುಳಿತವಳು ಸೊಸೆಯಾಗುವಳು, ಎನ್ನುವ ನಿಯಮವಿದೆ. ಗಂಗೆಯೇ ನೀನು ನನ ಬಲತೊಡೆಯಲ್ಲಿ ಕುಳಿತ ಪ್ರಯುಕ್ತ ನನ್ನ ಮಗನ ಹೆಂಡತಿಯಾಗು ಎಂದು ಪ್ರತೀಪರಾಜನೇ ಹೇಳಿಯಾನು ಎನ್ನುವ ಅಭಿಪ್ರಾಯದಿಂದಲೂ ಮುಂದಕ್ಕೆ ವಿಘ್ನವು ಬರಬಾರದು ಎನ್ನುವ ಉದ್ದೇಶದಿಂದಲೂ ಗಂಗಾದೇವಿಯು ಬಲತೊಡೆಯನ್ನು ಆಶ್ರಯಿಸಿದಳು ॥ ೩೨ ॥

ಮೂ ॥ ತೇನೈವ ಚೋಕ್ತಾ ಭವ ಮೇ ಸುತಸ್ಯ
ಭಾರ್ಯಾ ಯತೋ ದಕ್ಷಿಣೋರುಸ್ಥಿತಾಸಿ ।
ಭಾಗೋ ಹಿ ದಕ್ಷೋ ದುಹಿತುಃ ಸ್ನುಷಾಯಾ
ಭಾರ್ಯಾಭಾಗೋ ನಾಮ ಇತಿ ಪ್ರಸಿದ್ಧಃ ॥ ೩೩ ॥

ಅ ॥ ಯಾವ ಕಾರಣದಿಂದ ಬಲತೊಡೆಯಲ್ಲಿ ಕುಳಿತವಳು ಆಗಿರುತ್ತೀಯೋ ಆದ ಕಾರಣ) ನನ್ನ ಮಗನ ಹೆಂಡತಿಯು ಆಗು, ಎಂದು ಅವನಿಂದಲೇ (ಅಂದರೆ ಯಾರಿಂದ ವಿಘ್ನವು

ಮಾಡಲಿಕ್ಕೆ ಯೋಗ್ಯವಾಗಿದೆಯೋ ಅವನಿಂದಲೇ) (ಗಂಗಾದೇವಿಯು) ಹೇಳಿಸಿಕೊಳ್ಳಲ್ಪಟ್ಟಳು. ಮಗಳಿಗಾಗಲೀ ಸೊಸೆಗಾಗಲೀ ಬಲಭಾಗವು (ಬಲತೊಡೆ) ಎಂದು ಪ್ರಸಿದ್ಧವು ಹೆಂಡತಿಯ ಭಾಗವು ಎಡಭಾಗವು ಎಂದು (ಸ್ಮೃತಿಗಳಲ್ಲಿ) ಪ್ರಸಿದ್ಧವಾಗಿದೆ.

ವಿಶೇಷಾಂಶ— (1) ನನ್ನ ಹತ್ತಿರ ಶಂತನು ಚಕ್ರವರ್ತಿಯ ನೀನು ಯಾರೆಂದು ಪ್ರಶ್ನೆ ಮಾಡಕೂಡದು, ನನ್ನನ್ನು ತಡೆಯಕೂಡದು, ನನ್ನ ಕೆಲಸದ ಕಾರಣವನ್ನು ಕೇಳಬಾರದು. ಮತ್ತು ತಂದೆಯ ಆಜ್ಞೆಯನ್ನಾದರೂ ಮಗನು ಮೀರಲಿಕ್ಕಿಲ್ಲ. ಆಗ ನಾನು ಸುಖವಾಗಿ ಆ ವಸುಗಳನ್ನು ಕೊಲ್ಲುವೆನು ಎನ್ನುವ ಅಭಿಪ್ರಾಯದಿಂದಲೂ ಈ ಶಪಥಗಳನ್ನೆಲ್ಲಾ ತಂದೆಯ ಮುಖದಿಂದಲೇ ಮಾಡಿಸುವುದಕ್ಕಾಗಿಯೇ ಆ ಪ್ರತೀಪರಾಜನ ಬಲತೊಡೆಯಲ್ಲಿ ಕೂಳಿತಳು. ॥ ೩೩ ॥

ಮೂ ॥ ಉವಾಚ ಸಾ ತಂ ನ ತು ಮಾಂ ಸುತಸ್ತೇ
ಕಾಸೀತಿ ಪೃಚ್ಛೇನ್ನ ತು ಮಾಂ ನಿವಾರಯೇತ್ ।
ಅಯೋಗ್ಯಕರ್ತ್ರೇಮಪಿ ಕಾರಣಂ ಚ
ನ್ಯತ್ಕರ್ಮಣೋ ನೈವ ಪೃಚ್ಛೇತ್ ಕದಾಚಿತ್ ॥ ೩೪ ॥

ಅ ॥ ನಿನ್ನ ಮಗನು, (೧) ನೀನು ಯಾರು ಆಗಿದ್ದಿ ಎಂದು ನನ್ನನ್ನು ಪ್ರಶ್ನೆಸಕೂಡದ (ತು=) (೨) ವಿಶೇಷವಾಗಿ ಅಯೋಗ್ಯವಾದ ಪುತ್ರಹತ್ಯಾಖ್ಯ ಕರ್ಮವನ್ನು ಮಾಡಿದರೂ ನನ್ನನ್ನು ತಡೆಯಬಾರದು. (೩) ನನ್ನ ಕ್ರಿಯೆಗೆ ಕಾರಣವನ್ನು ಯಾವಾಗಲೂ ಸರ್ವಥಾ ಕೇಳ ಬಾರದು. ಈ ಪ್ರಕಾರ (ಮೂರು ವಿಷಯಗಳನ್ನು) ಆ ಗಂಗೆಯು ಆ ಪ್ರತೀಪರಾಜನನ್ನು ಕುರಿತು ಹೇಳಿಕೊಂಡಳು. ॥ ೩೪ ॥

ಮೂ ॥ ಯದಾ ತ್ರಯಾಣಾಮಪಿ ಚೈಕಮೇಷ
ಕರೋತಿ ಗರ್ಭೇಯಮಹಂ ವಿಸೃಜ್ಯ ।
ತದಾ ತ್ವದೀಯಂ ಸುತಮಿತ್ಯುದೀರಿತೇ
ತಿಷ್ಠೇತಿ ರಾಜಾಪ್ಯವದತ್ ಪ್ರತೀಪಃ ॥ ೩೫ ॥

ಅ॥ಯಾವಾವಾಗ ನಿನ್ನ ಮಗನು ಈ ಮೂರರ ಪೈಕಿ ಒಂದನ್ನಾದರೂ ಮಾಡುವನೋ ಆಗ ನಾನು ನಿನ್ನ ಮಗನನ್ನು ಬಿಟ್ಟು ಹೋಗಿಬಿಡುವೆನು ಈ ಪ್ರಕಾರ (ಗಂಗೆಯು) ಹೇಳುತ್ತಿರಲು ಪ್ರತೀಪರಾಜನು ಹಾಗೆಯೇ ಆಗಲಿ ಎಂದು ಹೇಳಿದನು. ॥ ೩೫ ॥

ಮೂ ॥ ತಥೈವ ಪುತ್ರಾಯ ಚ ತೇನ ತದ್ವಚೋ
ವಧೂಕ್ತ ಮುಕ್ತಂ ವಚನಾದ್ಯನದ್ಯಾಃ ।
ಕನೀಯಸೇ ಸಾ ಹ್ಯವದತ್ ಸುತಸ್ತೇ
ನಾನ್ಯಃ ಪತಿಃ ಶಂತನುರೇವ ಮೇ ವೃತಃ ॥ ೩೬ ॥

ಅ ॥ ಆ ಗಂಗಾದೇವಿಯು ನಿನ್ನ ಮಗನಾದ ಶಂತನು ಚಕ್ರವರ್ತಿಯೇ ನನಗೆ ಗಂಡನಾಗಿ ಅಂಗೀಕೃತನಾಗಿರುತ್ತಾನೆ. ಮತ್ತೊಬ್ಬ ನಿನ್ನ ಮಗನು ಪತಿಯಾಗಲಾರನು, ಹೀಗೆ ಹೇಳಿದಳು. (ಹೀಗೆ ಹೇಳಿದ್ದನ್ನು ನಿನ್ನ ಚಿಕ್ಕ ಮಗನಿಗೋಸ್ಕರ ಹೇಳು ಎನ್ನುವ) ಗಂಗೆಯ ವಚನ ಪ್ರಕಾರ

ಮುಂದೆ ಆಗುವ ಸೊಸೆಯಿಂದ ಹೇಳಲ್ಪಟ್ಟ (ಹೇಗೆ ಅವಳಿಂದ ಹೇಳಲ್ಪಟ್ಟಿದೋ) ಹಾಗೆಯೇ ಆ ಮೂರು ಮಾತು ಕನಿಷ್ಠ ಮಗನಾದ ಶಂತನುವಿಗೋಸ್ಕರ ಆ ಪ್ರತೀಪರಾಜನಿಂದ ಹೇಳಲ್ಪಟ್ಟಿದೆ. (ಹಿ=) ಪ್ರಸಿದ್ಧವು. (ಅಂದರೆ) ಶಂತನು ಚಕ್ರವರ್ತಿಯು ವರುಣರೂಪನಾಗಿರುವುದರಿಂದ ಆತನನ್ನೇ ಗಂಗೆಯು ಪತಿಯನ್ನಾಗಿ ವರಿಸಿಕೊಳ್ಳುವುದು ಯೋಗ್ಯವು ಎನ್ನುವುದು ಪ್ರಸಿದ್ಧವು. ॥ ೩೬ ॥

ಮೂ ॥ ತತಸ್ತು ಸಾ ಶಂತನುತೋಽಷ್ಟಪುತ್ರಾನ್
ಅವಾಪ್ಯ ಸಪ್ತ ನ್ಯಹನತ್ತಥಾಷ್ಟಮಂ ।
ಗಂತುಂ ತತೋ ಮತಿಮಾಧಾಯ ಹಂತು-
ಮಿವೋದ್ಯೋಗಂ ಸಾ ಹಿ ವ್ಯಷಾ ಚಕಾರ ॥ ೩೭ ॥

ಅ ॥ ಶಂತನು ಚಕ್ರವರ್ತಿಯನ್ನು ಪತಿಯನ್ನಾಗಿ ಅಂಗೀಕರಿಸಿದ ಮೇಲಾದರೂ ಆ ಗಂಗಾದೇವಿಯು ಶಂತನು ಚಕ್ರವರ್ತಿಯ ದೆಸೆಯಿಂದ ಎಂಟು (೮) ಮಕ್ಕಳನ್ನು ಹೊಂದಿದಳು. ಏಳು (೭) ಮಕ್ಕಳನ್ನು ಕೊಂದಳು. ಆ ಗಂಗಾದೇವಿಯು ಶಂತನು ಚಕ್ರವರ್ತಿಯ ಮನೆಯಿಂದ ಹೋಗಲಿಕ್ಕೆ ಬುದ್ಧಿಯನ್ನು ಮಾಡಿ ಏಳು ಮಕ್ಕಳಂತೆ ಎಂಟನೇ ಮಗುವನ್ನು ಕೊಲುವುದಕ್ಕೋಸ್ಕರವೆಂಬಂತೆ ಸುಳ್ಳಾದ ಪ್ರಯತ್ನವನ್ನು ಮಾಡಿದಳು. (ಅಂದರೆ ಕೊಲ್ಲಲಿಕ್ಕೆ ಪ್ರಯತ್ನ ಮಾಡಿದಂತೆ ತೋರಿಸಿದಳು.) ಪ್ರಸಿದ್ಧವು.

ವಿಶೇಷಾಂಶ—(1) ಏಳು ಮಕ್ಕಳಿಗೆ ಉತ್ಪತ್ತಿಕ್ರಮದಿಂದಲೇ ಹನನವು ಎನ್ನುವ ಕ್ರಮಾಖ್ಯವಿಶೇಷವನ್ನು ಸೂಚಿಸುವುದಕ್ಕಾಗಿ ತು ಶಬ್ದವು. (೨) ಗಂಗಾದೇವಿಯೇ ಎಂಟು ಮಕ್ಕಳಲ್ಲಿ ಒಬ್ಬನು ದೀರ್ಘಾಯುಷ್ಮಂತನಾಗಬೇಕೆನ್ನುವ ವರವನ್ನು ಬೇಡಿರುವಳು ಎನ್ನುವುದು ಪ್ರಸಿದ್ಧವೆಂದು ಸೂಚಿಸುವುದಕ್ಕಾಗಿ ಹಿ ಶಬ್ದವು ॥ ೩೭ ॥

ಗಂಡನನ್ನು ಬಿಟ್ಟುಹೋಗಲಿಕ್ಕೆ ಕಾರಣವನ್ನು ಹೇಳುತ್ತಾರೆ—

ಮೂ ॥ ಅವಸ್ಥಿತಿರ್ನಾತಿಸುಖಾಯ ಮಾನುಷೇ
ಯತಃ ಸುರಾಣಾಮತ ಏವ ಗಂತುಂ ।
ಐಚ್ಛನ್ನ ತಸ್ಯಾ ಹಿ ಬಭೂವ ಮಾನುಷೋ
ದೇಹೋ ನರೋತ್ತೋ ಹಿ ತದಾಸ ಶಂತನೋ ॥ ೩೮ ॥

ಅ ॥ ಯಾವ ಕಾರಣದಿಂದ ದೇವತೆಗಳಿಗೆ ಮನುಷ್ಯಶರೀರವುಳ್ಳವರ ಸಮೀಪದಲ್ಲಿ ದೃಶ್ಯವಾಗಿ ಇರುವಿಕೆಯು ಅತ್ಯಂತ ಸುಖಕ್ಕೋಸ್ಕರ ಆಗುವುದಿಲ್ಲವೋ, ಆದುದರಿಂದಲೇ ಹೋಗಲಿಕ್ಕೆ ಇಚ್ಛಿಸಿದಳು. (ಹೋಗಲಿಕ್ಕೆ ಮತ್ತೊಂದು ಕಾರಣವನ್ನು ಹೇಳುತ್ತಾರೆ.) ಆ ಗಂಗಾದೇವಿಗೆ ಮನುಷ್ಯ ಸಂಬಂಧಿಯಾದ (ಮನುಷ್ಯರಿಂದ ಹುಟ್ಟಿದ) ಶರೀರವು ಇರಲಿಲ್ಲ. (ಅಂದರೆ ಗಂಗಾದೇವಿಯು ದೇವತಾಶರೀರದಿಂದಲೇ ಇದ್ದಳು.) ಶಂತನು ಚಕ್ರವರ್ತಿಗೆ ಆ (ಶಾಪಸಂಬಂಧಿಯಾದ) ಶರೀರವು ಗಂಗೆಯ ಶರೀರದಂತೆ ದೇವತಾ ಸಂಬಂಧಿಯಾದ ಶರೀರವು ಇರಲಿಲ್ಲ. ಮತ್ತೆ ಮನುಷ್ಯರಿಂದ ಹುಟ್ಟಿದ್ದೇ. (ಆದುದರಿಂದಲೇ ಗಂಡನನ್ನು ಬಿಟ್ಟುಹೋಗಲಿಕ್ಕೆ ಇಚ್ಛಿಸಿದಳು.) ಪ್ರಸಿದ್ಧವು.

ವಿಶೇಷಾಂಶ—ಗಂಗಾದೇವಿಗೆ ಮನುಷ್ಯಶರೀರ ಬಾರದಿರಲಿಕ್ಕೆ 'ನಮಾನುಷಂ ಗರ್ಭಮವಾಪ್ನುಮೋ ವಯಂ' ಎಂದಾ ವಸುಗಳು ಪ್ರಾರ್ಥಿಸಿರುವರು. ಎನ್ನುವ ಕಾರಣವು ಪ್ರಸಿದ್ಧವು ಎಂದು ಸೂಚಿಸುವುದಕ್ಕಾಗಿ ಹಿ ಶಬ್ದವು, ಇಲ್ಲವಾದರೆ ಗಂಡನಿಗೆ ಮನುಷ್ಯಶರೀರ ಪ್ರಾಪ್ತಿಯಾಗುವಾಗ ಹೆಂಡತಿಗೆ ಮನುಷ್ಯದೇಹ ಪ್ರಾಪ್ತಿಯು ಸುತರಾಂ ಆಗಬೇಕಿತ್ತು. ॥ ೩೮ ॥

ಮೂ ॥ ತಾಂ ಪುತ್ರನಿಧನೋದ್ಯುಕ್ತಾಂ ನ್ಯವಾರಯತ ಶಂತನುಃ ।
ಕಾಸಿ ತ್ವಂ ಹೇತುನಾ ಕೇನ ಹಂಸಿ ಪುತ್ರಾನ್ನೃಶಂಸವತ್ ॥ ೩೯ ॥

ಆ ॥ ನೀನು (ಸ್ವರೂಪದಿಂದ) ಯಾರು ಆಗಿರುತ್ತಿ? ಯಾವ ಕಾರಣದಿಂದ ಮಕ್ಕಳನ್ನು ರಾಕ್ಷಸರಂತೆ ಕೊಲ್ಲುವಿ(ಎಂದು ಹೇಳಿ) ಶಂತನು ಚಕ್ರವರ್ತಿಯು ಮಗನನ್ನು ಕೊಲ್ಲುವುದರಲ್ಲಿ ಉದುಕ್ತಳಾದ ಆ ಗಂಗಾದೇವಿಯನ್ನು ತಡೆದನು.

ವಿಶೇಷಾಂಶ—ಗಂಗೆಯು ಮಾಡಬಾರದೆಂದು ಹೇಳಿದ ಮೂರನ್ನೂ ಶಂತನು ಚಕ್ರವರ್ತಿಯು ಮಾಡಿದನು ಎಂಬು ಈ ಶ್ಲೋಕದಿಂದ ಸೂಚಿತವಾಯಿತು. ॥ ೩೯ ॥

ಹಾಗಾದರೆ ಈ ಗಂಗೆಯು ಮಕ್ಕಳನ್ನು ಸಂಹರಿಸಿರುವುದರಿಂದ ರಾಕ್ಷಸಿಯು ಎಂದೇ ಅವಶ್ಯವಾಗಿ ತಿಳಿದುಕೊಳ್ಳಬೇಕಿತ್ತು. ಆದಕಾರಣ 'ಕಾಸಿ' ನೀನು ಯಾರು ಆಗಿರುತ್ತೀ ಎನ್ನುವ ಪ್ರಶ್ನೆಯು ಹೇಗೆ ಕೊಡುತ್ತದೆ? ಎಂದರೆ—

ಮೂ ॥ ರೂಪಂ ಸುರವರಸ್ತ್ರೀಣಾಂ ತವ ತೇನ ನ ಪಾತಕಂ ।
ಭವೇತ್ ಕರ್ಮ ತ್ವದೀಯಂ ತನ್ಮಹತ್ಕಾರಣಮತ್ರ ಹಿ ॥ ೪೦ ॥

ಆ ದೇವಶ್ರೇಷ್ಠರ ಸ್ತ್ರೀಯರ ರೂಪದಂತೆ ನಿನ್ನ ರೂಪವು. ಆ ಕಾರಣದಿಂದ ನೀನು

ಮಾಡಿದ ಪುತ್ರವಧರೂಪವಾದ ಕರ್ಮವು ಪಾಪಸ್ವರೂಪವು ಯಾವ ಕಾರಣವಿಂ ಆಗಲಾರದೋ ಸಕಾರಣ ಈ ಮಕ್ಕಳನ್ನು ಕೊಲ್ಲುವ ವಿಷಯದಲ್ಲಿ ಮಹತ್ತಾದ ಕಾರಣವಿರಬೇಕು ॥ ೪೦ ॥

ಮೂ ॥ ತತ್ಕಾರಣಂ ವದ ಶುಭೇ ಯದಿ ಮಚ್ಛ್ರೋತ್ರಮರ್ಹತಿ ।
ಇತೀರಿತಾವದತ್ ಸರ್ವಂ ಪ್ರಯಯೌ ಚ ಸುರಾಪಗಾ ॥ ೪೧ ॥

ಆ ॥ ಎಲೋ ಮಂಗಲಸ್ವರೂಪಳೇ. ಯಾವ ಪಕ್ಷದಲ್ಲಿ ನನ್ನ ಶ್ರೋತ್ರೇಂದ್ರಿಯವು ನೀನು ಮಾಡಿದ ಪುತ್ರಹಿಂಸೆಯ ಕಾರಣವನ್ನು (ಕೇಳಲಿಕ್ಕೆ ಯೋಗ್ಯವಾಗಿದಿಯೋ (ಹಾಗಾದರೆ) ಹಿಂಸೆಗೆ ಕಾರಣವನ್ನು ಹೇಳು. ಈ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟ ಗಂಗೆಯು ವಸುಕೃತವಾದ ಎಲ್ಲಾ ವ್ಯಾಪಾರವನ್ನು ಹೇಳಿದಳು. ಗಂಗೆಯು (ದೇವಲೋಕಕ್ಕೆ) ಹೋಗಿಬಿಟ್ಟಳು. ॥ ೪೧ ॥

ಹಾಗಾದರೆ ಕಾರಣವನ್ನು ಹೇಳಿದ ಮೇಲೆ ಸ್ವಲ್ಪಕಾಲವಾದರೂ ಏಕೆ ಅಲ್ಲಿ ನಿಲ್ಲಲಿಲ್ಲ ವೆಂದರೆ—

ಮೂ ॥ ನ ಧರ್ಮೋ ದೇವತಾನಾಂ ಹಿ ಜ್ಞಾತವಾಸಕ್ಷಿರಂ ನೃಷು ।
ಕಾರಣಾದೇವ ಹಿ ಸುರಾ ನೃಷು ವಾಸಂ ಪ್ರಕುರ್ವತೇ ॥ ೪೨ ॥

ಕಾರಣಾಪಗಮೇ ಯಾಂತಿ ಧರ್ಮೋಽಪ್ಯೇಷಾಂ ತಥಾವಿಧಃ ।
ಅದೃಶ್ಯತ್ವನುಸಂಸ್ಪರ್ಶೋ ಹ್ಯಸಂಧಾಷಣಮೇವ ಚ ॥ ೪೩ ॥
ಸುರೈರಪಿ ನೃಜಾತೈಸ್ತು ಗುಹ್ಯಧರ್ಮೋ ದಿವೌಕಸಾಂ ।
ಅತಃ ಸಾ ವರುಣಂ ದೇವಂ ಪೂರ್ವಭರ್ತಾರಮುಜ್ಝಿತಂ ॥೪೪ ॥
ನೃಜಾತಂ ಶಂತನುಂ ತ್ಯಕ್ತ್ವಾ ಪ್ರಯಯೌ ವರುಣಾಲಯಂ ।
ಸುತಮುಜ್ಝಿತವಾನಾದಾಯ ಭರ್ತುರೇವಾಭ್ಯ(ಪ್ಯ)ನುಜ್ಞಯಾ ।
ವಧೋದ್ಯೋಗಾನ್ನಿವೃತ್ತಾ ಸಾ ದದೌ ಪುತ್ರಂ ಬೃಹಸ್ಪತೌ ॥ ೪೬ ॥

ಅ ॥ ದೇವತೆಗಳಿಗೆ ಮನುಷ್ಯರಲ್ಲಿ ಬಹುಕಾಲ ಪ್ರತ್ಯಕ್ಷವಾಗಿ ತನ್ನ ಸ್ವರೂಪವು ತಿಳಿಯಲ್ಪಟ್ಟ ಮೇಲೆ ಆವಾಸವು ಯಾವ ಕಾರಣದಿಂದ ಧರ್ಮವಲ್ಲವೋ, (ಆದುದರಿಂದಲೇ ಹೋದಳು) (ಹಾಗಾದರೆ ಮೊದಲಾದರೂ ಹೇಗೆ ಇರುತ್ತಿದ್ದಳು ಎಂದರೆ) ದೇವತೆಗಳು ಕಾರಣ ವಿಶೇಷದಿಂದಲೇ ಮನುಷ್ಯರಲ್ಲಿ ಆವಾಸವನ್ನು ಮಾಡುತ್ತಾರೆ. ಕಾರಣವು ದಾಟಿದೊಡನೆಯೇ ಹೋಗುತ್ತಾರೆ. (ಹಾಗಾದರೆ ದೇವತೆಗಳು ಕಾರಣವಿಶೇಷದಿಂದಲೂ ಅಧರ್ಮವನ್ನು ಹೇಗೆ ಮಾಡುತ್ತಾರೆಂದರೆ) ಈ ದೇವತೆಗಳಿಗೆ ಧರ್ಮವು ಅಂತಹುದೇ. (ಅಂದರೆ ಪ್ರಯೋಜನವಿರುವ ತನಕ ಮನುಷ್ಯರಲ್ಲಿ ಆವಾಸವು. ಪ್ರಯೋಜನವು ಮುಗಿದೊಡನೇ ಅಲ್ಲಿಂದ ಹೊರಟು ಹೋಗುವಿಕೆ ಹೀಗೆಯೇ ದೇವತೆಗಳ ಸ್ವಾಭಾವಿಕ ಧರ್ಮವು.) ದೇವತೆಗಳ ಗುಹ್ಯಧರ್ಮವನ್ನು ಹೇಳುತ್ತಾರೆ— ದೇ ತೆಗಳಿಗೆ ಮನುಷ್ಯರಲ್ಲಿ ಹುಟ್ಟುವಿ ಎನ್ನುವ ವಿಶೇಷದಿಂದ ಮನುಷ್ಯರಲ್ಲಿ ಹುಟ್ಟಿರುವ ದೇವತೆಗಳಿಂದಲೂ ಕೂಡ ಕಾಣಲ್ಪಡದೆ ಇರುವಿಕೆಯು. ಮುಟ್ಟದಿರುವಿಕೆಯು ಮಾತನಾಡದಿರುವಿಕೆಯು ಇತ್ಯಾದಿಗಳು ಗೋಪ್ಯಧರ್ಮವು. ಇದು ಪ್ರಮಾಣ ಪ್ರಸಿದ್ಧವು. ಆ ಕಾರಣದಿಂದ ಆ ಗಂಗಾದೇವಿಯು ಪೂಜ್ಯನಾದ ಮೊದಲು ಗಂಡನಾದಾಗ್ಯೂ ವರುಣ ಸ್ವರೂಪನಾದ ಈ ಮನುಷ್ಯನಲ್ಲಿ ಹುಟ್ಟಿದ ಶಂತನು ಚಕ್ರವರ್ತಿಯನ್ನು ಬಿಟ್ಟು ವರುಣನ ಮಂದಿರವನ್ನು ಕುರಿತು ಹೋದಳು. ಸಂಹಾರದ ಪ್ರಯತ್ನದಿಂದ ಹಿಂದೆ ತಿರುಗಿದ ಆ ಭಾಗೀರಥಿಯು ಗಂಡನ ಅನುಜ್ಞೆಯಿಂದಲೇ ಎಂಟನೇ ಮಗನನ್ನು ಹಿಡಿದುಕೊಂಡು (ಹೋದವಳಾಗಿ) ಆ ಮಗನನ್ನು ಬೃಹಸ್ಪತಿಯಲ್ಲಿ (ವಿದ್ಯಾಭ್ಯಾಸಕ್ಕಾಗಿ ಬೃಹಸ್ಪತಿಯ ಅಧೀನದಲ್ಲಿ) ಕೊಟ್ಟಳು.

ವಿಶೇಷಾಂಶ—(1)ತತ್ತ್ವಾಭಿಮಾನಿಗಳಾದ ದೇವತೆಗಳು ಅಜ್ಞಾತರಾಗಿ ಮನುಷ್ಯರಲ್ಲಿ ಆವಾಸಮಾಡಿಕೊಂಡು ಇರುತ್ತಾರೆ. ಅದನ್ನು ವ್ಯಾವರ್ತಿಸುವುದಕ್ಕಾಗಿ ಜ್ಞಾತ ಪದವು. (2) ಚಿರಂ ಎನ್ನುವುದರಿಂದ ವರವನ್ನು ಕೊಡೋಣ ಇತ್ಯಾದಿಗಳಿಗಾಗಿ ಕೆಲವು ವೇಳೆ ಆವಾಸವಿದೆ ಎಂದು ಸೂಚಿತವಾಯಿತು. (3)ನೃಷು ಎನ್ನುವುದರಿಂದ ದೇವಪ್ಯಾದಿಗಳಿಂದ ಕೂಡಿಕೊಂಡು ಜ್ಞಾತವಾಗಿಯೂ ಬಹುಕಾಲ ಆವಾಸವಿದೆ ಎಂದು ಸೂಚಿತವಾಯಿತು. ॥ ೪೨ ॥ ೪೩ ॥ ೪೪ ॥ ೪೫ ॥

ಮೂ ॥ ದೇವವ್ರತೋಽಸಾವನಾಶಾಸನಾಯ
ಮಾತ್ರಾ ದತ್ತೋ ದೇವಗುರೌ ಶತಾರ್ಧಂ ।
ಸಂವತ್ಸರಾಣಾಮಖಿಲಾಂಶ್ಚ ವೇದಾನ್
ಸಮುಭ್ಯಸತ್ತದ್ವಶಗಾಂತರಾತ್ಮಾ ॥ ೪೬ ॥

ಆ ॥ ತಾಯಿಯಾದ ಗಂಗಾದೇವಿಯಿಂದ ದೇವತೆಗಳಿಗೆ ಗುರುವಾದ ಬೃಹಸ್ಪತ್ಯಾಚಾರ್ಯರ ವಶದಲ್ಲಿ ವೇದಗಳನ್ನು ಅಧ್ಯಯನಮಾಡುವುದಕ್ಕಾಗಿ ಸ್ಥಾಪಿತನಾದ ದೇವವ್ರತನಾಮಕನಾದ ಈ ಗಂಗಾಪುತ್ರನು ಸಂವತ್ಸರಗಳ ನೂರರ ಅರ್ಧದಲ್ಲಿ(ಅಂದರೆ ಐವತ್ತು ಸಂವತ್ಸರಗಳ ಪರ್ಯಂತವಾಗಿ ಬೃಹಸ್ಪತಿಯ ಅಧೀನದಲ್ಲಿರತಕ್ಕ ಮನಸ್ಸುಳ್ಳವನಾಗಿ ಎಲ್ಲಾ ವೇದಗಳನ್ನು ಅರ್ಥಜ್ಞಾನ ಪೂರ್ವಕವಾಗಿ ಅಧ್ಯಯನಮಾಡಿದನು. ॥ ೪೬ ॥

ಮೂ ॥ ತತಶ್ಚ ಮಾತ್ರಾ ಜಗತಾಂ ಗರೀಯಸಾ-
ಸ್ಯನಂತಸಾರೇಽಖಿಲಸದ್ಗುಣಾರ್ಣವೇ ।
ರಾಮೇ ಭೃ ಗೂಣಾಮುಧಿಪೇ ಪ್ರದತ್ತಃ
ಶುಶ್ರಾವ ತತ್ತ್ವಂ ಚ ಶತಾರ್ಧವರ್ಷಂ ॥ ೪೭ ॥

ಆ ॥ಆ ವೇದಾಧ್ಯಯನಾನಂತರದಲ್ಲಿ ತಾಯಿಯಾದ ಗಂಗಾದೇವಿಯಿಂದ ಲೋಕಗಳಿಗೆ ಶ್ರೇಷ್ಠವಾದ ಸಂಪೂರ್ಣ ನಿರ್ದೋಷಗಳಾದ ಗುಣಗಳಿಂದ ಸಮುದ್ರದಂತೆ ಇರುವ, ಅಂತರಹಿತವಾದ ಅವಧಿಯುಳ್ಳ (ಅಂದರೆ ಅವಧಿಯಿಲ್ಲದಿರತಕ್ಕ) ಭೃಗುವಂಶಕ್ಕೆ ಸ್ವಾಮಿಯಾದ ಪರಶುರಾಮನಲ್ಲಿ, (ಆತನ ವಶದಲ್ಲಿ) ಕೊಡಲ್ಪಟ್ಟ ದೇವವ್ರತನು ಐವತ್ತು ಸಂವತ್ಸರ ಪರ್ಯಂತ ಹರಿ ಸ್ವರೂಪವನ್ನು ಪ್ರತಿಪಾದಿಸತಕ್ಕ ಶಾಸ್ತ್ರವನ್ನು ಪಾಠಕೇಳಿದನು.॥ ೪೭ ॥

ಮೂ ॥ ಸ ಪಂಚವಿಂಶತ್ ಪುನರಬ್ದಕಾನಾ-
ಮಸ್ತ್ರಾಣಿ ಚಾಭ್ಯಸ್ಯ ಪತೇಭೃ ಗೂಣಾಂ ।
ಮಾತ್ರಾ ಸಮಾನೀಯ ತಟೇ ನಿಜೇ ತು
ಸಂಸ್ಥಾಪಿತಃ ಪ್ರಾರ್ಪಯಿತುಂ ಸ್ವಪಿತ್ರೇ ॥ ೪೮ ॥

ಅ ॥ ಆ ದೇವವ್ರತನು(ಪುನಃ=) ಹೀಗೆ ತತ್ವಶಾಸ್ತ್ರಾಭ್ಯಾಸದಿಂದ ಐವತ್ತು ವರ್ಷಗಳು ಕಳೆದ ಮೇಲೆ, ಇಪ್ಪತ್ತೈದು ವರ್ಷ ಪರ್ಯಂತ ಭೃಗುಕುಲಕ್ಕೆ ಸ್ವಾಮಿಯಾದ ಪರಶುರಾಮದೇವರ ದೆಸೆಯಿಂದ ಅಸ್ತ್ರವಿದ್ಯೆಗಳನ್ನು ಅಭ್ಯಾಸಮಾಡಿಕೊಂಡು (ಅಲ್ಲಿಯೇ ಇರುತ್ತಿದ್ದನು.) ದೇವವ್ರತನ ತಂದೆಯಾದ ಶಂತನು ಚಕ್ರವರ್ತಿಗೋಸ್ಕರ ಕಳುಹಿಸುವುದಕ್ಕಾಗಿ ತಾಯಿಯಾದ ಗಂಗೆಯಿಂದ (ದೇವವ್ರತನು ಪರಶುರಾಮಾಶ್ರಮದಿಂದ) ತಂದು ತನ್ನ ತೀರದಲ್ಲಿ ಆದರೂ ಇರಿಸಲ್ಪಟ್ಟನು.॥ ೪೮॥

ಮೂ ॥ ಸ ತತ್ರ ಬಧ್ವಾ ಶರಪಂಜರೇಣ
ಗಂಗಾಂ ವಿಜಹ್ರೇಽಸ್ಯ ಪಿತಾ ತದೈವ ।
ವ್ರಜನ್ ಮೃಗಾರ್ಥೀ ತೃಷಿತೋಽವ (ವಿ) ಲೋಕಯನ್
ಗಂಗಾಮತೋಯಾಮನುಭವತ್ ಸುವಿಸ್ಮಿತಃ ॥ ೪೯ ॥

ಆ ॥ ಆ ದೇವವ್ರತನು ಬಾಣಗಳ ಪಂಜರದಿಂದ ಗಂಗಾಪ್ರವಾಹದ ನಿರೋಧವನ್ನು ಮಾಡಿ ಆ ತೀರದಲ್ಲಿ ಆಡಿಕೊಂಡಿದ್ದನು. ಅದೇ ಕಾಲದಲ್ಲಿ ಈ ದೇವವ್ರತನ ತಂದೆಯಾದ ಶಂತನು ಚಕ್ರವರ್ತಿಯು ಮೃಗಗಳನ್ನು ಇಚ್ಛಿಸುತ್ತಾ (ಬೇಟೆಗೆ) ಹೋಗತಿವನಾಗಿ ಭಾಗೀರಥಿಯನ್ನು ಅಲ್ಪ ಜಲವುಳ್ಳದ್ದನ್ನಾಗಿ ನೋಡುತ್ತಾ ಅತ್ಯಂತ ಆಶ್ಚರ್ಯಯುಕ್ತನಾದನು.

ವಿಶೇಷಾಂಶ—(1) ಭಾಗೀರಥೀಮಲ್ಪ ಜಲಾಂ ಶಂತನುರ್ದೃಷ್ಟವಾನ್ನೃಪ = ಶಂತನು ಚಕ್ರವರ್ತಿಯು ಅಲ್ಪ ಜಲವುಳ್ಳ ಭಾಗೀರಥಿಯನ್ನು ಕಂಡನು ಎಂದು ಭಾರತದಲ್ಲಿ ಹೇಳಿರುವುದರಿಂದ ಅತೋಯಾಂ ಎನ್ನುವುದಕ್ಕೆ 'ತತ್ಸಾದೃಶ್ಯಮಭಾವಶ್ಚ ತದನ್ಯತ್ವಂ ತದಲ್ಪತಾ' ಇತ್ಯಾದಿ ನಞರ್ಥಗಳ ಮಧ್ಯದಲ್ಲಿ ಅತೋಯಾಂ ಎನ್ನುವಲ್ಲಿದ್ದ ನಞನಿಂದ ಅಲ್ಪವೆನ್ನುವ ಅರ್ಥವನ್ನು ಇಟ್ಟುಕೊಳ್ಳಬೇಕು. ॥ ೪೯

ಮೂ ॥ ಸ ಮಾರ್ಗಯಾಮಾಸ ತತೋಽಸ್ಯ ಹೇತುಂ
ಜ್ಞಪ್ತ್ಯೈ ತದಾ ಸ್ವಂ ಚ ದದರ್ಶ ಸೂನುಂ ।
ಕ್ರೀಡಂತಮಸ್ತ್ರೇಣ ಬಭೂವ ಸೋಽಪಿ
ಕ್ಷಣಾದದೃಶ್ಯಃ ಪಿತೃದರ್ಶನಾದನು ॥ ೫೦ ॥

ಅ ॥ ಆಮೇಲೆ ಆ ಶಂತನು ಚಕ್ರವರ್ತಿಯು ಅಲ್ಪವಾದ ನೀರು ಆಗಲಿಕ್ಕೆ ಕಾರಣವನ್ನು ತಿಳಿಯುವುದಕ್ಕಾಗಿ ಹುಡುಕುವವನಾದನು. ಆಗ ಆ ತೀರದಲ್ಲಿಯೇ ಅಸ್ತ್ರದಿಂದ ಕ್ರೀಡಿಸುತ್ತಿರುವ ತನ್ನ ಮಗನನ್ನು ಕಂಡನು. ಆ ದೇವವ್ರತನಾದರೂ ತಂದೆಯು ನೋಡಿದ ಮೇಲೆ ಅದೇ ಕ್ಷಣದಲ್ಲಿಯೇ ಅದೃಶ್ಯನಾದನು. (ಅಂದರೆ ಪರಮೋಪಕಾರ ಮಾಡಿದ ತಾಯಿಯೇ ತನ್ನನ್ನು ಭಕ್ತಿಪೂರ್ವಕವಾಗಿ ತಂದೆಯವರ ಹತ್ತಿರ ಕೊಡಬೇಕೆಂಬ ಮನಸ್ಸಿನಿಂದ ಅದೃಶ್ಯನಾದನು. ॥ ೫೦ ॥

ಮೂ ॥ ಮೀಮಾಂಸಮಾನಂ ತಮವೇಕ್ಷ್ಯ(ಪಾಪ) ಗಂಗಾ
ಸುತಂ ಸಮಾದಾಯ ಪತಿಂ ಜಗಾದ (ಚ) ।
ಅಯಂ ಸುತಸ್ತೇ ಪರಮಾಸ್ತ್ರವೇತ್ತಾ
ಸಮರ್ಪಿತೋ ವೀರ್ಯಬಲೋಪಪನ್ನಃ ॥ ೫೧ ॥

ಅ ॥ (ಇವನು ಯಾರು ಎಲ್ಲಿಗೆ ಹೋದನು ಎಂದು) ವಿಚಾರಮಾಡುತ್ತಿರುವ ಶಂತನು ಚಕ್ರವರ್ತಿಯನ್ನು ಕಂಡು ಗಂಗಾದೇವಿಯು ಮಗನನ್ನು ಹಿಡಿದುಕೊಂಡು ಬಂದು ಗಂಡನ ಹತ್ತಿರ ಹೇಳಿದಳು. ಇವನು ನಿನ್ನ ಮಗನು, ಉತ್ಕೃಷ್ಟಳಾದ ಅಸ್ತ್ರವಿದ್ಯೆಗಳನ್ನು ತಿಳಿದವನು, ವೀರ್ಯಬಲಗಳಿಂದ ಕೂಡಿದವನು, ಇಂಥವನು (ನಿನ್ನಲ್ಲಿ) ಸಮರ್ಪಿಸಲ್ಪಟ್ಟಿರುತ್ತಾನೆ. ॥ ೫೧ ॥

ಮೂ ॥ ಅಸ್ಯಾಗ್ರಜಾಃ ಸ್ವಾಂ ಸ್ಥಿತಿಮೇವ ಯಾತಾ
ಹರೇಃ ಪದಾಂಭೊ ಜಸುಪಾವಿತೇ ಜಲೇ ।
ತನೂರ್ಮದೀಯೇ ಪ್ರಣಿಧಾಯ ತಸ್ಮಾತ್(ತ್ತ್ವಂ)
ತಾನ್ ಮಾ ಶುಚೋಽನೇನ ಚ ಮೋದಮಾನಃ ॥ ೫೨ ॥

ಅ ॥ ಈ ದೇವವ್ರತನ ಅಣ್ಣಂದಿರು, (ಅಂದರೆ ದೇವವ್ರತನಿಂದ ಮೊದಲು ನನ್ನಲ್ಲಿ ಹುಟ್ಟಿರುವ ಏಳು ಕುಮಾರರು) ಶ್ರೀಹರಿಯ ಪಾದಕಮಲದಿಂದ ಚೆನ್ನಾಗಿ ಪವಿತ್ರೀಕೃತವಾದ ನನ್ನ ಸಂಬಂಧಿಯಾದ ಜಲದಲ್ಲಿ ಶರೀರಗಳನ್ನು ಬಿಟ್ಟು ತಂತಮ್ಮ ಮೂಲರೂಪಸ್ಥಿತಿಯನ್ನೇ ಹೊಂದಿರುವರು. ಆದಕಾರಣ ಈ ಮಗನಿಂದ ಕೂಡಿಕೊಂಡು ಸಂತೋಷವನ್ನು ಹೊಂದುತ್ತಾ ಮೂಲರೂಪವನ್ನು ಹೊಂದಿದ ಮೃತಪುತ್ರರನ್ನು ಕುರಿತು ಶೋಕಮಾಡಬೇಡ. ॥ ೫೨ ॥

ಮೂ ॥ ಇತಿ ಪ್ರದಾಯಾನುನುದೃಶ್ಯತಾವುದೃಶ್ಯತಾಮುಗಾತ್
ಗಂಗಾ ತವೂದಾಯು ಯಯೌ ಗೃಹಂ ಸ್ವಕಂ (ಸ್ವಕಂ ಗೃಹಂ) ।
ರಾಜಾಭಿಷಿಚ್ಯಾಥ ಚ ಯೌವರಾಜ್ಯೇ
ಮುವೋದ ತತ್ಸದ್ಗುಣತರ್ಪಿತೋ ಭೃಶಂ ॥ ೫೩ ॥

ಅ ॥ ಗಂಗಾದೇವಿಯು ಈ ಪ್ರಕಾರ (ಹೇಳಿ) ಮಗನನ್ನು ಕೊಟ್ಟು ಅದೃಶ್ಯತ್ವವನು ಹೊಂದಿದಳು. ರಾಜನು ಆ ಮಗನನ್ನು ಕರೆದುಕೊಂಡು ತನ್ನ ಮನೆಯನ್ನು ಕುರಿತು ಹೋದನು. ಆ ಮೇಲೆ (ಅವನನ್ನು) ಯೌವರಾಜ್ಯದಲ್ಲಿ ಪಟ್ಟಾಭಿಷೇಕಮಾಡಿ ದೇವವ್ರತನ ನಿರ್ದುಷ್ಟಗಳಾದ ಗುಣಗಳಿಂದ ತೃಪ್ತಿಯನ್ನು ಹೊಂದಿದವನಾಗಿ ಚೆನ್ನಾಗಿ ಸಂತೋಷಪಟ್ಟನು. ॥ ೫೩ ॥

ಮೂ ॥ ಪುನಃ ಸ ಪಿತ್ರಾನುಮತೋ ಬೃಹಸ್ಪತೇ-
ರವಾಪ ವೇದಾನ್ ಪುರುಷಾಯುಷೋಽರ್ಧತಃ ।
ರಾಮಾತ್ತಥಾಸ್ತ್ರಾಣಿ ಪುನಸ್ತ್ವವಾಪ
ತಾವದ್ಭಿರಬ್ದೈಸ್ತ್ರಿಶತೈಶ್ಚ ತತ್ತ್ವಂ ॥ ೫೪ ॥

ಆ ॥ ಮತ್ತು ತಂದೆಯಾದ ಶಂತನುವಿನಿಂದ ಅನುಮತಿಯನ್ನು ಹೊಂದಿದ ದೇವವ್ರತನು ಬೃಹಸ್ಪತ್ಯಾಚಾರ್ಯರ ದೆಸೆಯಿಂದ ಐವತ್ತು (೫೦) ವರ್ಷಗಳಲ್ಲಿ ವೇದಗಳನ್ನು ಅಧ್ಯಯನ ಮಾಡಿದನು. ಹಾಗೆಯೇ ಪರಶುರಾಮದೇವರ ದೆಸೆಯಿಂದ ಅಷ್ಟು ಸಂವತ್ಸರಗಳಿಂದ (ಅಂದರೆ (೫೦) ಐವತ್ತು ಸಂವತ್ಸರಗಳಿಂದ) ಅಸ್ತ್ರ ವಿದ್ಯೆಗಳನ್ನೂ ಮತ್ತು ಮುನ್ನೂರು (೩೦೦) ಸಂವತ್ಸರಗಳಿಂದ ತತ್ತ್ವ ವಿದ್ಯೆಯನ್ನೂ ಕಲಿತನು. ॥ ೫೪ ॥

ಮೂ ॥ ಸ ಸರ್ವವಿತ್ತ್ವಂ ಸಮುವಾಪ್ಯ ರಾಮಾತ್
ಸಮಸ್ತ ವಿದ್ಯಾಧಿಪತೇರ್ಗುಣಾರ್ಣವಾತ್ ।
ಪಿತುಃ ಸಮೀಪಂ ಸಮುವಾಪ್ಯ ತಂ ಚ
ಶುಶ್ರೂಷಮಾಣಃ ಪ್ರಮುಮೋದ ವೀರಃ ॥ ೫೫ ॥

ಆ ॥ ಅರಬ್ಧಾಂತಗಾಮಿಯಾದ ಆ ದೇವವ್ರತನು ಸಮಸ್ತವಿದ್ಯೆಗಳಿಗೆ ಅಧಿಪತಿಯಾದ, ಗುಣಗಳಿಂದ ಸಮುದ್ರದಂತೆ ಇರುವ, ಪರಶುರಾಮದೇವರ ದೆಸೆಯಿಂದ ಸರ್ವಜ್ಞತ್ವವನ್ನು ಹೊಂದಿ ತಂದೆಯ ಸಮೀಪವನ್ನು ಹೊಂದಿ ಆ ತಂದೆಯವರನ್ನು ಸೇವಿಸುತ್ತಾ ಚೆನ್ನಾಗಿ ಸಂತೋಷವನ್ನು ಹೊಂದಿಕೊಂಡಿದ್ದನು. ॥ ೫೫ ॥

ಕೃಪಾದಿಗಳ ಉತ್ಪತ್ತಿಯನ್ನು ಹೇಳುವುದಕ್ಕಾಗಿ ಉಪೋದ್ಘಾತವನ್ನು ಹೇಳುತ್ತಾರೆ—

ಮೂ ॥ ಯದೈವ ಗಂಗಾ ಸುಷುವೇಽಷ್ಟಮಂ ಸುತಂ
ತದೈವ ಯಾತೋ ಮೃಗಯೊಂ ಸ ಶಂತನುಃ ।
ಶರದ್ವತೋ ಜಾತಮುಪಶ್ಯದುತ್ತಮಂ
ವನೇ ವಿಸೃಷ್ಟಂ ಮಿಥುನಂ ತ್ವಯೋನಿಜಂ ॥ ೫೬ ॥

ಅ ॥ ಯಾವಾಗ ಗಂಗಾದೇವಿಯು ಎಂಟನೇ ಮಗುವನ್ನು ಹಡೆದಿರುವಳೋ, ಆವಾಗಲೇ ಬೇಟೆಯನ್ನುದ್ದೇಶಿಸಿಕೊಂಡು ಹೋದ ಆ ಶಂತನು ಚಕ್ರವರ್ತಿಯು ಶರದ್ವತ್ ಎಂದು ಹೆಸರುಳ್ಳ ಋಷಿಯಿಂದ ಹುಟ್ಟಿರುವ, ತು=ಶಂತನು ಚಕ್ರವರ್ತಿಯು ಪರಿಪಾಲಿಸುವನು ಎನ್ನುವ ಕಾರ್ಯ ವಿಶೇಷದಿಂದ ಕಾಡಿನಲ್ಲಿ ಬಿಡಲ್ಪಟ್ಟ (ತು=) ಊರ್ವಶಿಯೆನ್ನುವ ವೇಶ್ಯಾಸ್ತ್ರೀಯನ್ನು ನೋಡಿದೊಡನೆಯೇ ರೇತಸ್ಸು ಕೆಳಗೆ ಬಿದ್ದಿತು ಎನ್ನುವ ಕಾರಣ ವಿಶೇಷದಿಂದ, ಯೋನಿಯಲ್ಲಿ ಹುಟ್ಟಿದಿರುವ ಅಥವಾ ಮಾತೃಯೋನಿಯಲ್ಲಿ ಹುಟ್ಟಿದಿರುವ, ಅತ್ಯುತ್ತಮವಾದ ಸ್ತ್ರೀ ಪುರುಷ ಎನ್ನುವ ಎರಡನ್ನು ಕಂಡನು. ॥ ೫೬ ॥

ಅಯೋನಿಜತ್ವವನ್ನು ವಿಶದೀಕರಿಸುತ್ತಾರೆ—

ಮೂ ॥ ಶರದ್ವಾಂಸ್ತು ತಪಃ ಕುರ್ವನ್ ದದರ್ಶ ಸಹಸೋರ್ವಶೀಂ ।
ಚಸ್ಕಂದ ರೇತಸ್ತಸ್ಯಾಥ ಶರಸ್ತಂಬೇ ತತೋಽಭವತ್ ॥ ೫೭ ॥
ವಿಷ್ಕಂಭೋ ನಾಮ ರುದ್ರಾಣಾಂ ಭೂಭಾರಹರಣೇಽಂಗತಾಂ ।
ಹರೇಃ ಪ್ರಾಪ್ತುಂ ತಥಾ ತಾರಾ ಭಾರ್ಯಾ ಯಾ ಹಿ ಬೃಹಸ್ಪತೇಃ
॥ ೫೮ ॥

ಅ ॥ ಶರದ್ವಾನ್ನಾಮಕ ಋಷಿಯಾದರೂ ತಪಸ್ಸನ್ನು ಮಾಡುತ್ತಾ ಅಕಸ್ಮಾತ್ತಾಗಿ ಊರ್ವಶಿಯನ್ನು ಕಂಡನು. ಆ ಋಷಿಯ ಶುಕ್ರಾಖ್ಯ ರೇತಸ್ಸು ಊರ್ವಶಿಯನ್ನು ನೋಡಿದೊಡನೆಯೇ ತೃಣವಿಶೇಷಗಳ ಗುಂಪಿನಲ್ಲಿ ಸುರಿದುಹೋಯಿತು. ಆ ರೇತಸ್ಸಿನ ದೆಸೆಯಿಂದ (೧೧) ರುದ್ರರ ಮಧ್ಯದಲ್ಲಿ ವಿಷ್ಕಂಭನೆಂದು ಪ್ರಸಿದ್ಧನಾದ ರುದ್ರನು ಭೂಮಿಗೆ ಭಾರಭೂತರಾದ ದೈತ್ಯಾದಿಗಳನ್ನು ಸಂಹರಿಸುವ ವಿಷಯದಲ್ಲಿ ಶ್ರೀಹರಿಯ ಸಹಾಯತ್ವವನ್ನು ಹೊಂದುವುದಕ್ಕಾಗಿ ಹುಟ್ಟಿದನ್ನು ಹಾಗೆಯೇ ಬೃಹಸ್ಪತಿಯ ಹೆಂಡತಿಯಾದ ಯಾವ ತಾರಾದೇವಿಯೋ ಅವಳೂ ಕೂಡ ರೇತಸ್ಸಿನಿಂದ ಹುಟ್ಟಿದಳು. ॥ ೫೭ ॥ ೫೮ ॥

ಮೂ ॥ ತಾವುಭೌ ಶಂತನುರ್ದೃಷ್ಟ್ವಾ ಕೃಪಾವಿಷ್ಟಃ ಸ್ವಕಂ ಗೃಹಂ ।
ನಿನಾಯ ನಾಮ ಚಕ್ರೇಽಥ ಕೃಪಾಯಾ ವಿಷಯೌ ಯತಃ ॥ ೫೯ ॥
ಕೃಶಃ ಕೃಪೀತಿ ಸ ಕೃಪಸ್ತಪೋ ವಿಷ್ಣೋಶ್ಚಚಾರ(ಕಾ)ಹ ।
ತಸ್ಯ ಪ್ರೀತಸ್ತದಾ ವಿಷ್ಣುಃ ಸರ್ವಲೋಕೇಶ್ವರೇಶ್ವರಃ ॥ ೬೦ ॥

ಅ ॥ ಶಂತನು ಚಕ್ರವರ್ತಿಯು ಆ ಕನ್ಯಾಪುತ್ರರನ್ನು ನೋಡಿ ದಯಾಯುಕ್ತನಾಗಿ ತನ್ನ ಮನೆಗೆ ಕರೆದುಕೊಂಡು ಹೋದನು. ಆಮೇಲೆ ಅವರು ಯಾವ ಕಾರಣದಿಂದ ದಯೆಗೆ ವಿಷಯರಾಗಿರುತ್ತಾರೋ ಆದಕಾರಣ ರಾಜನ ಕೃಪೆಗೆ ವಿಷಯರಾಗಿರುವುದರಿಂದ ಗಂಡು ಮಗುವಿಗೆ ಕೃಪನು ಎಂದೂ, ಕನ್ನಿಕೆಗೆ ಕೃಪಿಯು ಎಂದೂ ನಾಮವನ್ನು ಇಟ್ಟನು. ಆ ಕೃಪನು ವಿಷ್ಣುವಿನ ತಪಸ್ಸನ್ನು ಮಾಡಿದನು. ಆಗ ಎಲ್ಲಾ ಲೋಕಗಳಿಗೂ ನಿಯಾಮಕರಾದ ದೇವತೆಗಳಿಗೂ ನಿಯಾಮಕನಾದ ವಿಷ್ಣುವು ಆ ಕೃಪನಾಗಿ ಸಂತುಷ್ಟನಾದನು. ॥ ೫೯ ॥ ೬೦ ॥

ಮೂ ॥ ಪ್ರಾದಾದೇಷ್ಯತ್ಸುತ ಋಷಿತ್ವಮಾಯುಃ ಕಲ್ಪಾಂತಮೇವ ಚ ।
ಸ ಶಂತನುಗೃಹೇ ತಿಷ್ಠನ್ ದೇವವ್ರತಸಖೋಭವತ್ ॥ ೬೧ ॥

ಅ ॥ ಶ್ರೀಹರಿಯು ಮುಂದೆ ಆಗುವ ಏಳು ಋಷಿಗಳ ಮಾಧ್ಯದಲ್ಲಿ ಏಕ ಋಷಿತ್ವವನ್ನೂ, ವೈವಸ್ವತಮನು ಕಲ್ಪಪರ್ಯಂತವಾಗಿ ಆಯುಸ್ಸನ್ನೂ ಕೂಡ ಕೊಟ್ಟನು. ಆ ಕೃಪನು ಶಂತನು ರಾಪಣನ ಮನೆಯಲ್ಲಿ ಇರುತ್ತಾ ದೇವವ್ರತನಿಗೆ ಮಿತ್ರನಾಗಿದ್ದನು. ॥ ೬೦ ॥

ಮೂ ॥ ಪುತ್ರವಚ್ಛಂತನೋಶ್ಚಾಸೀತ್ ಸ ಚ ಪುತ್ರವದೇವ ತತ್ ।
ಮಿಥುನಂ ಪಾಲಯಾಮಾಸ ಕೃಪೋಽಪ್ಯಸ್ತ್ರಾಣ್ಯವಾಪ ಚ ॥ ೬೨ ॥
ಸರ್ವವೇದಾನಧಿಜಗೌ ಸರ್ವಶಾಸ್ತ್ರಾಣಿ ಕೌಶಿಕಾತ್
ತತ್ತ್ವಜ್ಞಾನಂ ತಥಾ ವ್ಯಾಸಾದಾಪ್ಯ ಸರ್ವಜ್ಞತಾಂ ಗತಃ ॥ ೬೩ ॥

ಅ ॥ ಆ ಕೃಪನು ಶಂತನು ಚಕ್ರವರ್ತಿಗೆ ಮಗನಂತೆಯೇ ಆಗಿದ್ದನು. ಆ ಶಂತನು ರಾಜನಾದರೂ ಪುತ್ರರಂತೆಯೇ ಆ ಸ್ತ್ರೀಪುರುಷರಿಬ್ಬರನ್ನೂ ರಕ್ಷಿಸುತ್ತಾ ಇದ್ದನು. ಕೃಪನಾದರೂ (ಗೌತಮರ ದೆಸೆಯಿಂದ) ಅಸ್ತ್ರವಿದ್ಯೆಗಳನ್ನೂ (ಚ=)ಗೋತ್ರಾದಿಗಳನ್ನೂ ಹೊಂದಿದನು. ವಿಶ್ವಾಮಿತ್ರರ ದೆಸೆಯಿಂದ ಎಲ್ಲಾ ವೇದಗಳನ್ನೂ ಎಲ್ಲಾ ಶಾಸ್ತ್ರಗಳನ್ನೂ ಕಲಿತನು. ಹಾಗೆಯೇ ವೇದವ್ಯಾಸರ ದೆಸೆಯಿಂದ ತತ್ವಜ್ಞಾನವನ್ನು ಹೊಂದಿ ಸರ್ವಜ್ಞತ್ವವನ್ನು ಹೊಂದಿದನು.

ವಿಶೇಷಾಂಶ—ಗೋಪಿತೋ ಗೌತಮಸ್ತತ್ರ ತಪಸಾ ತಾವವಿಂದತ । ಆಗಮ್ಯ ತಸ್ಮೈ ಗೋತ್ರಾದಿ ಸರ್ವಮಾಖ್ಯಾತವಾಂಸ್ತದಾ । ಚತುರ್ವಿಧಂ ಧನುರ್ವೇದಮಸ್ತ್ರಾಣಿ ವಿವಿಧಾನಿ ಚ । ಗೌತಮನು ಬಂದು ಕೃಪನಿಗೋಸ್ಕರ ಗೋತ್ರಾದಿಗಳನ್ನೂ ನಾಲ್ಕು ವಿಧವಾದ ಧನುರ್ವಿದ್ಯೆಯನ್ನೂ ಅನೇಕ ಅಸ್ತ್ರವಿದ್ಯೆಗಳನ್ನೂ ಉಪದೇಶಿಸಿದನು, ಎಂದು ಆದಿಪರ್ವದಲ್ಲಿಪ. ॥ ೬೨ ॥ ೬೩ ॥

ದ್ರೋಣಾಚಾರ್ಯರ ಉತ್ಪತ್ತಿಯನ್ನು ಹೇಳುತ್ತಾ ಉಪೋದ್ಘಾತವನ್ನು ಹೇಳುತ್ತಾರೆ.—

ಮೂ ॥ ಯದಾಭಿಜಾತಃ ಸ ಕೃಪಸ್ಯ ದೈವ
ಬಹಸ್ಪತೇಃ ಸೂನುರಗಾಚ್ಛ ಗಂಗಾಂ ।
ಸಾತುಂ ಘೃತಾಚೀಂ ಸ ದದರ್ಶ ತತ್ರ
ಶ್ಲಥದ್ದುಕೂಲಾಂ ಸುರನರ್ಯಕಾಮಿನೀಂ ॥ ೬೪ ॥
ತದ್ದರ್ಶನಾತ್ ಸ್ಕಂನ್ನಮಥೇಂದ್ರಿಯಂ ಸ
ದ್ರೋಣೇ ದಧಾರಾಶು ತತೋಽಭವತ್ ಸ್ವಯಂ ।
ಅಂಭೋಜಜಾವೇಶಯುತೋ ಬೃಹಸ್ಪತಿಃ
ಕರ್ತುಂ ಹರೇಃ ಕರ್ಮ ಭುವೋ ಭರೋದ್ಧೃತೌ ॥ ೬೫ ॥

ಅ ॥ ಯಾವಾಗ ಆ ಕೃಪಾಚಾರ್ಯರು ಹುಟ್ಟಿದರೋ ಆವಾಗಲೇ ಬೃಹಸ್ಪತ್ಯಾಚಾರ್ಯರ ಮಗನಾದ ಭರದ್ವಾಜರು ಸ್ನಾನಮಾಡುವುದಕ್ಕಾಗಿ ಭಾಗೀರಥಿಯನ್ನು ಕುರಿತು ಹೋದರು. ಆ ಭರದ್ವಾಜರು ಆ ಗಂಗಾತೀರದಲ್ಲಿ ಜಾರಿಹೋದ ರೇಶ್ಮೆಬಟ್ಟೆಯುಳ್ಳ, ದೇವಶ್ರೇಷ್ಠರ ಭೋಗಸ್ತ್ರೀಯಾದ ಘೃತಾಚಿಯೆನ್ನುವ ವೇಶ್ಯಾಸ್ತ್ರೀಯನ್ನು ನೋಡಿದರು. ಅಂತಹ ಘೃತಾಚಿಯನ್ನು ನೋಡಿದ್ದರಿಂದ ಬಿದ್ದ ರೇತಸ್ಸನ್ನು ಆ ಭರದ್ವಾಜರು ದ್ರೋಹ್ಯಾದಿಗಳನ್ನು ಅಳೆಯುವ ಪಾತ್ರವಿಶೇಷದಲ್ಲಿ (ಕೊಳಗದಲ್ಲಿ) ಇಟ್ಟರು. ಆ ಕೊಳಗದ್ದೆಸೆಯಿಂದ ಅಥವಾ ಆ ರೇತಸ್ಸಿನ ದೆಸೆಯಿಂದ ಬ್ರಹ್ಮನ ಆವೇಶದಿಂದ ಕೂಡಿರುವ ಸಾಕ್ಷಾತ್ ಬೃಹಸ್ಪತ್ಯಾಚಾರ್ಯರು ಭೂಮಿಗೆ

ಭಾರಭೂತರಾದ ದೈತ್ಯರ ಸಮೂಹವನ್ನು ಸಂಹರಿಸುವ ವಿಷಯದಲ್ಲಿ (ಸಂಹಾರ ರೂಪವಾದ) ಶ್ರೀಹರಿಯ ಕರ್ಮವನ್ನು ಮಾಡುವುದಕ್ಕಾಗಿ (ಅಂದರೆ ದೈತ್ಯ ಹನನರೂಪವಾದ ಸೇವೆಯನ್ನು ಮಾಡುವುದಕ್ಕಾಗಿ) ತಾನೇ ಹುಟ್ಟಿದರು.

ವಿಶೇಷಾಂಶ—(1) **ಆಸ್ತ್ರಯೋವಮೋಢಕೋ ದ್ರೋಣಃ** ಎನ್ನುವ ವಚನದ್ದಿಸೆಯಿಂದ ಬತ್ತ ಮೊದಲಾದವುಗಳನ್ನು ಅಳತೆಮಾಡತಕ್ಕ ಕೊಳಗಕ್ಕೆ ದ್ರೋಣವೆಂದು ಹೆಸರು. ವಿರಕ್ತನಾ ಗಿರುವುದರಿಂದ ನೀರನ್ನು ಸಂಗ್ರಹಿಸಿಕೊಂಡು ಇಟ್ಟುಕೊಳ್ಳುವುದಕ್ಕಾಗಿ ಆ ಕೊಳಗವನ್ನು ತಾನು ಬರುವಾಗಲೇ ತಂದಿರುವನು. (2) ಬೃಹಸ್ಪತಿಗೆ ಅಯೋಗ್ಯವಾದ ಭೀಮಾರ್ಜುನಾದಿಗಳ ಗುರುತ್ವವನ್ನು ತಾನು ಧರಿಸುವುದಕ್ಕಾಗಿ ಬ್ರಹ್ಮನು ಅಲ್ಲಿ ಸನ್ನಿಹಿತನಾದನು, ॥ ೬೪ ॥ ೬೫ ॥

ಮೂ ॥ ದ್ರೋಣೇತಿ ನಾಮಾಸ್ಯ ಚಕಾರ ತಾತೋ
ಮುನಿರ್ಭರದ್ವಾಜ ಉತಾಸ್ಯ ವೇದಾನ್ ।
ಅಧ್ಯಾಪಯಾಮಾಸ ಸ ಸಂಘಾನ್
ಸರ್ವಜ್ಞತಾಮಾಪ ಚ ಸೋಽಚಿರೇಣ ॥ ೬೬ ॥

ಅ ॥ ತಂದೆಯಾದ ಭರದ್ವಾಜ ಋಷಿಯು ಈ ಬೃಹಸ್ಪತಿಗೆ ದ್ರೋಣವೆನ್ನುವ ನಾಮವನ್ನು ಇಟ್ಟನು. ಆ ಭರದ್ವಾಜ ಋಷಿಯು ಈ ದ್ರೋಣನಿಗೆ ವೇದಗಳನ್ನೂ ಶಾಸ್ತ್ರಗಳ ಸಮುದಾಯವನ್ನೂ ಅಧ್ಯಯನಮಾಡಿಸಿದನು. ಆ ದ್ರೋಣನು (ಬ್ರಹ್ಮನ ಆವೇಶವಿದ್ದುದರಿಂದ) ಅತಿ ಶೀಘ್ರದಲ್ಲಿ ಸರ್ವಜ್ಞತ್ವವನ್ನು ಹೊಂದಿದನು. ॥ ೬೬ ॥

ಮೂ ॥ ಕಾಲೇ ಚ ತಸ್ಮಿನ್ ಪೃಷತೋಽನಪತ್ಯೋ
ವನೇ ತು ಪಾಂಚಾಲಪತಿಶ್ಚಚಾರ ।
~~ತಪೋ ಮಹತ್ತಸ್ಯ ತಥಾ ವರಾಪ್ಸರೋ~~s (ರಾ)
ವಲೋಕನಾತ್ ಸ್ಕಂದಿತಮಾಶು ರೇತಃ ॥ ೬೭ ॥

ಅ ॥ ದ್ರೋಣನು ಹುಟ್ಟುವಕಾಲದಲ್ಲಿ ಪಾಂಚಾಲದೇಶಕ್ಕೆ ಅಧಿಪತಿಯಾದ, ಮಕ್ಕಳು ಇಲ್ಲದಿರುವ ಪೃಷತನಾಮಕ ರಾಜನಾದರೂ ಅರಣ್ಯದಲ್ಲಿ ಮಹತ್ತಾದ ತಪಸ್ಸನ್ನು ಮಾಡಿದನು. ಹಾಗೆಯೇ ಆ ಪೃಷತರಾಜನಿಗೆ ಉತ್ತಮಳಾದ ಅಪ್ಸರಸ್ತ್ರೀಯನ್ನು ನೋಡಿದ್ದರಿಂದ ರೇತಸ್ಸು ಸುರಿದು ಹೋಯಿತು. ॥ ೬೭॥

ಮೂ ॥ ಸ ತದ್ವಿಲಜ್ಜಾವಶತಃ ಪದೇನ
ಸಸಾಕ್ರಮತ್ತಸ್ಯ ಬಭೂವ ಸೂನುಃ ।
ಹೂಹೂ ತು ನಾಮ್ನಾ ಸ ವಿರಿಂಚಗಾಯಕೋ
ನಾಮ್ನಾವಹೋ ಯೋ ಮರುತಾಂ ತದಂಶಯುಕ್ ॥ ೬೮ ॥

ಅ ॥ ಆ ಪೃಷತರಾಜನು ವಿಶೇಷವಾದ ನಾಚಿಕೆಯ ಅಧೀನದ್ದಿಸೆಯಿಂದ ಆ ರೇತಸ್ಸನ್ನು ಪಾದದಿಂದ ಚೆನ್ನಾಗಿ ಆಕ್ರಮಿಸಿಬಿಟ್ಟನು. (ಮುಚ್ಚಿದನು) ಆ ರೇತಸ್ಸಿನಿಂದ ಮಗನು ಹುಟ್ಟಿದನು. ಆ ಮಗನು (ತು=) ವಿಶೇಷವಾಗಿ ಬ್ರಹ್ಮನನ್ನು ಗಾನಮಾಡತಕ್ಕ ಹೂಹೂ ಎಂಬ

ನಾಮದಿಂದ ಪ್ರಸಿದ್ಧನಾದ ಗಂಧರ್ವನು. ಆತನು ವಾಯುಗಳ ಮಧ್ಯದಲ್ಲಿ ಯಾವಾತನು ನಾಮದಿಂದ ಆವಹವೆನ್ನುವ ವಾಯುವೋ ಆತನ ಆವೇಶದಿಂದ ಕೂಡಿದವನು.

ವಿಶೇಷಾಂಶ—(1) ಹೂಹೂ ಎನ್ನುವ ಗಂಧರ್ವನು ವಿಶೇಷವಾ ಚತುರ್ಮುಖ ಬ್ರಹ್ಮನನ್ನು ಗಾನಮಾಡತಕ್ಕವನು. ಅಂದರೆ ಇಂದ್ರಾದಿಗಳ ಸಭೆಯಲ್ಲಿಯೂ ಕೆಲವು ವೇಳೆ ಗಾನವನ್ನು ಮಾಡುತ್ತಾನೆ. ಬ್ರಹ್ಮನ ಸಭೆಯಲ್ಲಿಯೇ ವಿಶೇಷತಃ ಗಾನಮಾಡುವವನು. ॥ ೬೮ ॥

ಮೂ ॥ ಸ ದ್ರೋಣತಾತಾತ್ಸನುವಾಪ ವೇದಾನ್
ಅಸ್ತ್ರಾಣಿ ವಿದ್ಯಾಶ್ಚ ತಥಾ ಸಮುಸ್ತಾಃ ।
ದ್ರೋಣೇನ ಯುಕ್ತಃ ಸ ತದಾ ಗುರೋಃ ಸುತಂ
ಸಹೈವ ನೌ ರಾಜ್ಯಮಿತಿ ಹ್ಯವಾದೀತ್ ॥ ೬೯ ॥

ಅ ॥ ಆ ಪೃಷತರಾಜನ ಮಗನು ದ್ರೋಣಚಾರ್ಯರಿಂದ ಕೂಡಿದವನಾಗಿ ದ್ರೋಣಾಚಾರ್ಯರ ತಂದೆಯಾದ ಭರದ್ವಾಜನ ದೆಸೆಯಿಂದ ವೇದಗಳನ್ನೂ ಶಾಸ್ತ್ರಗಳನ್ನೂ ಹಾಗೆಯೇ ಎಲ್ಲಾ ವಿದ್ಯೆಗಳನ್ನೂ ಅಧ್ಯಯನಮಾಡಿದನು. ಆ ಪೃಷತರಾಜನ ಮಗನು ಭರದ್ವಾಜನ ಮಗನಾದ ದ್ರೋಣಾಚಾರ್ಯರನ್ನು ಕುರಿತು ನಮ್ಮಿಬ್ಬರಿಗೆ ಒಟ್ಟಿಗೇನೇ ರಾಜ್ಯವಾಗಲಿ (ಅಂದರೆ ನನ್ನ ರಾಜ್ಯದಲ್ಲಿ ನಿನಗೆ ಅರ್ಧ ರಾಜ್ಯವು ಇರಲಿ.) ಎಂದು ವಿದ್ಯಾಭ್ಯಾಸಕಾಲದಲ್ಲಿ ಹೇಳಿರುವನು, ಎಂದು ಪ್ರಸಿದ್ಧವು. ॥ ೬೯ ॥

ಮೂ ॥ ಪದೇ ದ್ರುತತ್ವಾದ್ದ್ರುಪದಾಭಿಧೇಯಃ
ಸ ರಾಜ್ಯಮಾಪಾಥ ನಿಜಾಂ ಕೃಪೀಂ ಸಃ ।
ದ್ರೋಣೋಽಪಿ ಭಾರ್ಯಾಂ ಸಮುವಾಹ್ಯ ಪರ್ವ-
ಪ್ರತಿಗ್ರಹೋಜ್ಝಶ್ಚ ಪುರೇಽವಸತ್ಸುಖೀ ॥ ೭೦ ॥

ಅ ॥ ಪಾದದಲ್ಲಿ (ರೇತಸ್ಸು ಅಂತರ್ಗತವಾಗಿರುವುದರಿಂದ ಆದರಲ್ಲಿ ಹುಟ್ಟಿರುವ ಪೃಷತ ರಾಜನ ಮಗನಿಗೂ) ಆಕ್ರಾಂತತ್ವವಿದ್ದ ಪ್ರಯುಕ್ತ, ದ್ರುಪದನೆಂದು ಹೆಸರುಳ್ಳವನು ಆದನು. ಆ ಪೃಷತರಾಜನ ಮಗನು (ಪಿತೃದತ್ತವಾದ) ರಾಜ್ಯವನ್ನು ಹೊಂದಿದನು. (ಅಥ=) ಕಥಾಂತರವನ್ನು ಆರಂಭಿಸುತ್ತಾರೆ. ಆ ದ್ರೋಣಾಚಾರ್ಯರು ದ್ರುಪದರಾಜನ ಅರ್ಧರಾಜ್ಯಾಧಿಕಾರಕ್ಕೆ ಯೋಗ್ಯರಾಗಿದ್ದಾಗ್ಯೂ, ತನ್ನ ಮೊದಲಿನ ಹೆಂಡತಿಯಾದ ಕೃಪಿಯನ್ನು ಬ್ರಾಹ್ಮ ವಿವಾಹದಿಂದ ಮದುವೆಮಾಡಿಕೊಂಡು ಎಲ್ಲಾ ಪ್ರತಿಗ್ರಹಗಳಿಂದ ವಿರಹಿತರಾದವರಾಗಿ (ಅಂದರೆ ಪ್ರತಿಗ್ರಹವನ್ನು ಬಿಟ್ಟವರಾಗಿ) ಹಸ್ತಿನಾವತೀ ಪಟ್ಟಣದಲ್ಲಿ ಸುಖವುಳ್ಳವರಾಗಿಯೇ ವಾಸಮಾಡಿಕೊಂಡಿದ್ದರು. ॥ ೭೦ ॥

ಮೂ ॥ ಶಿಲೋಂಛವೃತ್ತ್ಯೈವ ಹಿ ವರ್ತಯನ್ನಸೌ
ಧರ್ಮಂ ಮಹಾಂತಂ ವಿರಜಂ ಜುಷಾಣಃ ।
ಉವಾಸ ನಾಗಾಖ್ಯಪುರೇ ಸಖಾಽಸ
ದೇವವ್ರತಸ್ಯಾಥ ಕೃಪಸ್ಯ ಚೈವ ॥ ೭೧ ॥

॥ ೪ ॥ ದ್ರೋಣಾಚಾರ್ಯರು ಶಿಲೋಂಛವೃತ್ತಿಯಿಂದಲೇ ಪ್ರಾಣಧಾರಣವನ್ನು ಮಾಡುತ್ತಾ, ನಿರ್ದೋಷವಾದ (ಕಾಮ್ಯಕರ್ಮ ರಹಿತವಾದ) ಉತ್ತಮವಾದ ವಿಷ್ಣುಪ್ರೀತಿಕರವಾದ ಧರ್ಮವನ್ನು ಮಾಡುತ್ತಾ ಹಸ್ತಿನಾವತೀ ಪಟ್ಟಣದಲ್ಲಿ ನಿವಾಸಮಾಡಿಕೊಂಡು ಇದ್ದರು ಆ ದ್ರೋಣಾಚಾರ್ಯರು ದೇವವ್ರತನಿಗೇನೇ ಸಖಿಯೂಗಿದ್ದರು. ಆಮೇಲೆ ಕೃಪಾಚಾರ್ಯರಿಗೂ ಸಖಿಯಾಗಿದ್ದರು.

ವಿಶೇಷಾಂಶ—(1) ಹಿ=ಶಬ್ದದಿಂದ ಉತ್ತಮ ಬ್ರಾಹ್ಮಣರಿಗೆ ಶಿಲೋಂಛವೃತ್ತಿಯೇ ಯೋಗ್ಯವೆಂದು ಸೂಚಿತವಾಯಿತು. (2) ಉಂಛಃ ಕಣಶ ಆದಾನೇ ಕಣೆಶಾದ್ಧರ್ಜನಂ ಶಿಲಂ= ಕ್ಷೇತ್ರಪತಿಯು ಪೈರನ್ನು ಕೊಯ್ದಮೇಲೆ ಆ ಕ್ಷೇತ್ರದಲ್ಲಿ ಬಿದ್ದಿರುವ ಬತ್ತದ ಒಂದೊಂದು ಕಾಳುಗಳನ್ನು ಸಂಗ್ರಹಿಸಿ ಅದರಿಂದ ಜೀವನ ಮಾಡುವುದಕ್ಕೂ ಮತ್ತು ಹಿಟ್ಟು ಬೀಸಿದ ಮೇಲೆ ಆ ಕಲ್ಲಿನಲ್ಲಿ ಹಿಡಿದಿರುವ ಮತ್ತು ಅದರ ಬದಿಯಲ್ಲಿ ಬಿದ್ದಿರುವ ಹಿಟ್ಟನ್ನು ಸಂಗ್ರಹಿಸಿ ತನ್ಮೂಲಕ ಜೀವನ ಮಾಡುವುದಕ್ಕೂ ಉಂಛವೃತ್ತಿಯೆಂದು ಹೆಸರು. ಗದ್ದೆಯಲ್ಲಿ ಬಿದ್ದಿರುವ ಬತ್ತದ ಕೊನೆಗಳನ್ನು ಒಟ್ಟುಮಾಡಿ ಅದರಿಂದ ಜೀವಿಸುವಿಕೆಗೆ ಶಿಲವೃತ್ತಿಯೆಂದು ಹೆಸರು. (3) ದ್ರೋಣಾಚಾರ್ಯರೂ ಭೀಷ್ಮಾಚಾರ್ಯರೂ ಇಬ್ಬರೂ ಪರಶುರಾಮದೇವರ ಶಿಷ್ಯರಾದ ಪ್ರಯುಕ್ತವೂ ಬ್ರಹ್ಮದೇವರ ಅಂಶದಿಂದ ಜನಿಸಿದ್ದರಾದ ಪ್ರಯುಕ್ತವೂ ಇಬ್ಬರೂ ವಿರಕ್ತರಾದ ಪ್ರಯುಕ್ತವೂ ಭೀಷ್ಮಾಚಾರ್ಯರಲ್ಲಿ ಎಂತಹಸಖ್ಯವು ಇರುತ್ತಿತ್ತೋ ಅಂತಹ ಸಖ್ಯವು ಕೃಪಾಚಾರ್ಯರಲ್ಲಿ ಇರಲಿಲ್ಲವೆನ್ನುವ ಅಭಿಪ್ರಾಯದಿಂದಲೇ ಅಥ ಎಂದೂ, ದೇವವ್ರತಸ್ಯೈವ ಎಂದು ಏವಕಾರವನ್ನೂ ಹೇಳಿರುವರು. ॥ ೭೧ ॥

ಮೂ ॥ ತೇಷಾಂ ಸಮಾನೋ ವಯಸಾ ವಿರಾಟ.
ಸ್ತ್ವಭೂದ್ಧಹಾ ನಾಮ ವಿಧಾತ್ಯಗಾಯಕಃ ।
ಮನುಷ್ಯ ಯೋ ವಿಸಹೋ ನಾಮ ತಸ್ಯಾ.
ಪ್ಯಂಶೇನ ಯುಕ್ತೋ ನಿಜಧರ್ಮವರ್ತೀ ॥ ೭೨ ॥

॥ ದೇವವ್ರತ (೧ ಭೀಷ್ಮಾಚಾರ್ಯ) ಮೊದಲಾದ ನಾಲ್ವರಿಗೆ (ಅಂದರೆ ೨ ದ್ರೋಣಾಚಾರ್ಯ, ೩ ಕೃಪಾಚಾರ್ಯ, ೪ ದ್ರುಪದ ಇವರು ನಾಲ್ವರಿಗೆ.) ವಯಸ್ಸಿನಿಂದ ಸಮಾನಿಕನಾದ ವಿರಾಟರಾಜನಾದರೂ ಇರುತ್ತಿದ್ದನು. ಆತನು ಬ್ರಹ್ಮನನ್ನು ಗಾನಮಾಡತಕ್ಕ ಹ ಾ ಅಥವಾ ಹಾಹಾ ಎಂಬ ಪ್ರಸಿದ್ಧನಾದ ಗಂಧರ್ವನು. ವಾಯುಗಳ ಮಧ್ಯದಲ್ಲಿ ಯಾವಾತನು ವಿವಹನೆಂದು ಪ್ರಸಿದ್ಧನಾಗಿದ್ದಾನೋ ಆತನ ಅಂಶದಿಂದಲೂ ಕೂಡಿದವನು. ತನ್ನ ವರ್ಣಾಶ್ರಮಗಳಿಗೆ ಉಚಿತವಾದ ಧರ್ಮದಲ್ಲಿಯೆ ನಿರತಕ್ಕವನು. ॥ ೭೨ ॥

ಪಾಂಡವರ ಉತ್ಪತ್ತಿಯನ್ನು ಹೇಳುವುದಕ್ಕಾಗಿ ಉಪೋದ್ಘಾತವನ್ನು ಹೇಳುತ್ತಾರೆ—

ಮೂ ॥ ತತಃ ಕದಾಚಿನ್ಮೃಗಯಾಂ ಗತಃ ಸ
ದದರ್ಶ ಕನ್ಯಾಂ (ನ್ಯಾ)ಪ್ರವರಾಂ ತು ಶಂತನುಃ ।
ಯಾ ಪೂರ್ವಸರ್ಗೇ ಪಿತೃಪುತ್ರಿಕಾ ಸತೀ
ಚಚಾರ ವಿಷ್ಣೋಸ್ತಪ ಉತ್ತಮಂ ಚಿರಂ ॥ ೭೩ ॥

ಅ ॥ ದೇವವ್ರತನಿಗೆ ಯೌವರಾಜ್ಯಪಟ್ಟಾಭಿಷೇಕವಾದಮೇಲೆ ಒಂದಾನೊಂದು ದಿವಸದಲ್ಲಿ ಬೇಟೆಯಂನ್ನು ಕುರಿತು ಹೋದ ಆ ಶಂತನು ಚಕ್ರವರ್ತಿಯು ಭಕ್ತ್ಯಾದಿ ಗುಣಗಳಿಂದುತ್ತಮುಳಾದ ಕನ್ನಿಕೆಯನ್ನು ಕಂಡನು. ಯಾವ ಕನ್ನಿಕೆಯು ಪೂರ್ವಜನ್ಮದಲ್ಲಿ ಅಮೂರ್ತರಾದ ಅಗ್ನಿಷ್ವಾತ್ತಾಖ್ಯ ಪಿತೃದೇವಪಿತೃಗಳ ಅಚ್ಛೋದಾ ನಾಮಕಳಾದ ಪುತ್ರಿಯಾಗಿ ವಿಷ್ಣುಸಂಬಂಧಿಯಾದ ಉತ್ತಮವಾದ ತಪಸ್ಸನ್ನು ಬಹುಕಾಲ ಮಾಡಿರುವಳೋ (ಅಂತಹಳನ್ನು ಕಂಡನು)

ವಿಶೇಷಾಂಶ—(1)ಪಿತರೋ ದಿವಿ ವರ್ತಂತೇ ದೇವಾಸ್ತಾನ್ ಭಾವಯತ್ಯುತ । ಅಗ್ನಿಷ್ವಾತ್ತಾ ಇತಿ ಖ್ಯಾತಾಃ ಸರ್ವ ಏವಾಮಿತೌಜಸಃ । ಏತೇಷಾಂ ವೈ ಮಾನಸೀ ಕನ್ಯಾ ಅಚ್ಛೋದಾನಾನು ನಿಮ್ಮಗಾ ॥ ಅಗ್ನಿಷ್ವಾತ್ತರೆಂದು ಪ್ರಸಿದ್ಧರಾದ ಪಿತೃದೇವತೆಗಳ ಮನಸ್ಸಿನಿಂದ ಅಚ್ಛೋದಾ ಯಾಮಕಳಾದ ಕನ್ನಿಕೆಯು ಹುಟ್ಟಿದಳು ಎಂದು ಹರಿವಂಶದಲ್ಲಿ ಹೇಳಿದೆ. ॥ ೭೩ ॥

ಮೂ ॥ ಯಸ್ಯೈ ವರಂ ವಿಷು ದಾತ್ಪುರಾಹಂ
ಸುತಸ್ತವ ಸ್ಯಾಮಿತಿ ಯಾ ವಸೋಃ ಸುತಾ ।
ಜಾತಾ ಪುನರ್ದಾಶಗೃಹೇ ವಿವರ್ಧಿತಾ
ವ್ಯಾಸಾತ್ಮನಾ ವಿಷ್ಣುರಭೂಚ್ಚ ಯಸ್ಯಾಂ ॥ ೭೪ ॥
ತದ್ದರ್ಶನಾನ್ನೃಪತಿರ್ಜಾತಹೃಚ್ಛ್ರಯೋ
ವವ್ರೇ ಪ್ರದಾನಾಯ ಚ ದಾಶರಾಜಂ ।
ಏತೇ ಸ ತಸ್ಯಾಸ್ತನಯಸ್ಯ ರಾಜ್ಯಂ
ನೈಚ್ಛದ್ದಾತುಂ ತಾನುಥಾಯೋದ್ಗೃಹಂ ಸ್ವಂ ॥ ೭೫ ॥

ಅ ॥ ಶ್ರೀ ಪರಮಾತ್ಮನು ಯಾರಿಗೋಸ್ಕರ (ಅಂದರೆ ಅಗ್ನಿಷ್ವಾತ್ತಾಖ್ಯ ಪಿತೃಗಳ ಪುತ್ರಿಯಾದ ಅಚ್ಛೋದಾ ನಾಮಕಳಾದ ಯಾವ ಕನ್ನಿಕೆಗೋಸ್ಕರ) ನಾನು ನಿನ್ನ ಮಗನಾಗುವೆನು ಎಂದು ಮೊದಲೇ (ಅಂದರೆ ಅಗ್ನಿಷ್ವಾತ್ತಾಖ್ಯ ಪಿತೃಗಳ ಮಗಳಾಗಿ ಹುಟ್ಟಿದಾಗಲೇ) ವರವನ್ನು ಕೊಟ್ಟಿರುವನೋ, ಯಾವ ಅಚ್ಛೋದಾ ನಾಮಕ, ಪಿತೃಪುತ್ರಿಯು ವಸುರಾಜನಿಗೆ ಮಗಳಾಗಿ (ಈಗ) ಹುಟ್ಟಿರುವಳೋ, ಹುಟ್ಟಿದ ಮೇಲೆ ನಾವಿಕನ ಮನೆಯಲ್ಲಿ ಬೆಳೆಯುತ್ತಾ ಇರುತ್ತಿದ್ದಳೋ, ಯಾವ ವಸುರಾಜನ ಮಗಳಲ್ಲಿ ಶ್ರೀಪರಮಾತ್ಮನು ವ್ಯಾಸರೂಪದಿಂದ ಪ್ರಕಟನಾಗಿರುವನೋ ಅಂತಹ ಮೊಗವೀರರ ಮನೆಯಲ್ಲಿರತಕ್ಕ ವಸುರಾಜನ ಮಗಳನ್ನು ನೋಡಿದ್ದರಿಂದ ಉಂಟಾದ ಕಾಮವುಳ್ಳ ಶಂತನು ಚಕ್ರವರ್ತಿಯು (ತನಗೆ) ಕೊಡುವುದಕ್ಕಾಗಿ ಮೊಗವೀರರ ಅಧಿಪತಿಯಾದ ನಾವಿಕನನ್ನು ಪ್ರಾರ್ಥಿಸಿದನು. ಆ ದಾಶರಾಜನು ಆ ತನ್ನ ಕನ್ನಿಕೆಯ ಮಗನಿಗೆ ಸಾಮ್ರಾಜ್ಯವನ್ನು ಹೊರತು (ಅಂದರೆ ರಾಜ್ಯಕ್ಕೆ ಯೋಗ್ಯನಾದ ಜ್ಯೇಷ್ಠನಿಗೇನೇ ರಾಜ್ಯವನ್ನು ಕೊಡುವನೆಂಬ ಬುದ್ಧಿಯಿಂದ) ಅವಳನ್ನು ಕೊಡಲಿಕ್ಕೆ ಇಚ್ಛಿಸಲಿಲ್ಲ. ಆಮೇಲೆ ಆ ಶಂತನು ಚಕ್ರವರ್ತಿಯು ತನ್ನ ಮನೆಯನ್ನು ಕುರಿತು ಹೋದನು. ॥ ೭೪ ॥ ೭೫ ॥

ಮೂ ॥ ತಚ್ಚಿಂತಯೋ ವ್ಲಾ (ಗ್ಲಾ)ನಮುಖಂ ಜನಿತ್ರಂ
ದೃಷ್ಟ್ವೈವ ದೇವವ್ರತ ಆಶ್ವಪೃಚ್ಛತ್ ।
ತತ್ಕಾರಣಂ ಸಾರಥಿಮಸ್ಯ ತಸ್ಮಾತ್
ಶ್ರುತ್ವಾಖಿಲಂ ದಾಶಗೃಹಂ ಜಗಾಮ ॥ ೭೬ ॥

ಅ ॥ ಆ ಕನ್ನಿಕೆಯು ಆಲೋಚನೆಯಿಂದಲೇ ಬಾಡಿದ ಮುಖವುಳ್ಳ ಜನಕನಾದ ಶಂತನು ಚಕ್ರವರ್ತಿಯನ್ನು ನೋಡಿದೊಡನೆಯೇ ಶೀಘ್ರದಲ್ಲಿ ದೇವವ್ರತನು ಮುಖಬಾಡಲಿಕ್ಕೆ ಕಾರಣವನ್ನು ಈ ಶಂತನು ಚಕ್ರವರ್ತಿಯ ಸಾರಥಿಯನ್ನು ಕುರಿತು ಕೇಳಿದನು ಆ ಸಾರಥಿಯುದೆಸೆಯಿಂದ ಎಲ್ಲವನ್ನೂ (ಅಂದರೆ ಶಂತನು ಚಕ್ರವರ್ತಿಗೂ ದಾಶರಾಜನಿಗೂ ನಡೆದ ಎಲ್ಲಾ ವೃತ್ತಾಂತವನ್ನೂ) ಕೇಳಿಕೊಂಡು ತಾನು ದಾಶರಾಜನ ಮನೆಯನ್ನು ಕುರಿತು ಹೋದನು. ॥ ೭೬ ॥

ಮೂ ॥ ಸ ತಸ್ಯ ವಿಶ್ವಾಸಕೃತೇ ಪ್ರತಿಜ್ಞಾಂ
ಚಕಾರ ನಾಹಂ ಕರವಾಣಿ ರಾಜ್ಯಂ ।
ತಥೈವ ಮೇ ಸಂತತಿತೋ ಭಯಂ ತೇ
ಮೈತೂರ್ಧ್ವರೇತಾಃ ಸತತಂ ಭವಾನಿ ॥ ೭೭ ॥

ಅ ॥ ಆ ದೇವವ್ರತನು ಆ ದಾಶರಾಜನಿಗೆ ವಿಶ್ವಾಸಹುಟ್ಟುವುದಕ್ಕಾಗಿ ನಾನು ರಾಜ್ಯವನ್ನು ಪರಿಪಾಲಿಸುವುದಿಲ್ಲ, ಹಾಗೆಯೇ ನನ್ನ ಸಂತಾನದ್ದೆಸೆಯಿಂದಲೂ ನಿನಗೆ ಭಯವು ಬಾರದಿರಲಿ. ದೇಹಪಾತಪರ್ಯಂತವಾಗಿಯೂ ನಾನು ರೇತಸ್ಸನ್ನು ವಿಸರ್ಜನಮಾಡದಿರುವವನಾಗಿ (ಅಂದರೆ ನೈಷ್ಠಿಕ ಬ್ರಹ್ಮಚರ್ಯವುಳ್ಳವನು) ಆಗುವೆನು(ಎಂದು ದೃಢವಾದ) ಪ್ರತಿಜ್ಞೆಯನ್ನು ಮಾಡಿದನು. ॥ ೭೭ ॥

ಮೂ ॥ ಭೀಷ್ಮವ್ರತತ್ವಾದ್ಧಿ ತದಾಸ್ಯ ನಾಮ
ಕೃತ್ವಾ ದೇವಾ ಭೀಷ್ಮ ಇತಿ ಹ್ಯಚೇಕ್ಲೃಪನ್ ।
ಪ್ರಸೂನವೃಷ್ಟಿಂ ಸ ಚ ದಾಶದತ್ತಾಂ
ಕಾಲೀಂ ಸಮಾದಾಯ ಪಿತುಃ ಸಮರ್ಪಯೇತ್ ॥ ೭೮ ॥

ಅ ॥ ಆಗ ಭಯಂಕರವಾದ ವ್ರತವುಳ್ಳವನಾದ ಪ್ರಯುಕ್ತ ಈ ದೇವವ್ರತನಿಗೆ ದೇವತೆಗಳು ಭೀಷ್ಮನೆನ್ನುವ ನಾಮವನ್ನು ಇಟ್ಟು ಪುಷ್ಪಗಳ ವೃಷ್ಟಿಯನ್ನು ಮಾಡಿದರು. ಆ ಭೀಷ್ಮನಾಮಕ ದೇವವ್ರತನಾದರೂ ದಾಶರಾಜನಿಂದ ಕೊಡಲ್ಪಟ್ಟ ಕಾಲೀನಾಮಕಳಾದ ವಸುಕನ್ನಿಕೆಯನ್ನು ತಂದಂ ತಂದೆಗೆ ಸಮರ್ಪಿಸಿದನು.

ವಿಶೇಷಾಂಶ—(1) ನೈಷ್ಠಿಕ ಬ್ರಹ್ಮಚಾರ್ಯ ವ್ರತವು ಇತರರಿಗೆ ಅಸಾಧ್ಯವಾಗಿರುವುದರಿಂದ ಅತಿ ಭಯಂಕರವೆನ್ನುವುದಂ ಪ್ರಸಿದ್ಧವು ಎಂದು ಪ್ರಥಮ ಹಿ ಶಬ್ದದಿಂದ ಸೂಚಿತವಾಯಿತು. (2) ಇಂತಹ ಭೀಷ್ಮನಿಗೆ ಪುಷ್ಪವೃಷ್ಟಿಯು ಉಚಿತವೆನ್ನುವುದು ಪ್ರಸಿದ್ಧವು ಎಂದು ಎರಡನೇ ಹಿ ಶಬ್ದದಿಂದ ಸೂಚಿತವಾಯಿತು. ॥ ೭೮ ॥

ಹೀಗಾದರೆ ಭೀಷ್ಮಾಚಾರ್ಯರು ಮೊಗವೀರರ ಮನೆಯಲ್ಲಿರತಕ್ಕ ಕನ್ನಿಕೆಯನ್ನು ತಂದೆಗೆ ಹೇಗೆ ತಂದುಕೊಟ್ಟನೆಂದರೆ—

ಮೂ ॥ ಜ್ಞಾತ್ವಾ ತು ತಾಂ ರಾಜಪುತ್ರೀಂ ಗುಣಾಢ್ಯಾಂ
ಸತ್ಯಸ್ಯ ವಿಷ್ಣೋರ್ಮಾತರಂ ನಾವುತಸ್ತತ್ ।
ಲೋಕೇ ಪ್ರಸಿದ್ಧಾಂ ಸತ್ಯವತೀತ್ಯುದಾರಾಂ
ವಿವಾಹಯಾನಾಸ ಪಿತುಃ ಸ ಭೀಷ್ಮಃ ೭೯।

ಅ ॥ (ಆಮೇಲೆ ಆ ಭೀಷ್ಮಾಚಾರ್ಯರು (ದಾಶರಾಜ(ನಾವಿಕ)ನಿಂದ ಕೊಡಲ್ಪಟ್ಟ) ಕಾಲಿಯನ್ನು ವಸುರಾಜನ ಮಗಳನ್ನಾಗಿಯೂ, ಗುಣಗಳಿಂದ ಕೂಡಿದವಳನ್ನಾಗಿಯೂ ಸತ್ಯನಾದ ವಿಷ್ಣುವಿನ ತಾಯಿಯನ್ನಾಗಿಯೂ ಶ್ರೇಷ್ಠಳನ್ನಾಗಿಯೂ ವಿಷ್ಣುವಿನ ತಾಯಿಯಾದುದರಿಂದ ನಾಮದಿಂದ ಸತ್ಯವತೀ ಎಂದು ಲೋಕದಲ್ಲಿ ಪ್ರಖ್ಯಾತಳನ್ನಾಗಿಯೂ ತಿಳಿದೇ ತಂದೆಗೆ ವಿವಾಹ ಮಾಡಿಸಿದರು. ॥ ೭೯ ॥

ಹಾಗಾದರೆ ಶಂತನು ಚಕ್ರವರ್ತಿಯು ಮೊಗವೀರರ ಮನೆಯಲ್ಲಿರುತ್ತಿದ್ದ ಕನ್ನಿಕೆಯನ್ನು ಹೇಗೆ ಸ್ವೀಕರಿಸಿದನು ಎಂದರೆ—

ಮೂ ॥ ಪ್ರಾಯಶ್ಚ ಸತಾಂ ನ ಮನಃ ಪಾಪಮಾರ್ಗೇ
ಗಚ್ಛೇದಿತಿ ಹ್ಯಾತ್ಮ ಮನಶ್ಚ ಸಕ್ತಂ ।
ಜ್ಞಾತ್ವಾಪಿ ತಾಂ ದಾಶಗೃಹೇ ವಿವರ್ಧಿತಾಂ
ಜಗ್ರಾಹ ಸದ್ಧರ್ಮರತಶ್ಚ ಶಂತನುಃ ॥ ೮೦ ॥

ಅ ॥ (ಸತಾಂ=) ತಂತಮಗೆ ಎಷ್ಟು ಯೋಗ್ಯತೆಯಿದೆಯೋ ಅಷ್ಟರಲ್ಲಿಯೇ ಇರತಕ್ಕ. (ಸತಾಂ=) ಸಜ್ಜನರ ಮನಸ್ಸು ಪಾಪಮಾರ್ಗದಲ್ಲಿ ಪ್ರಾಯಶಃ ಹೋಗಲಾರದಷ್ಟೆ. ತನ್ನ ಮನಸ್ಸಾದರೂ ಅವಳಲ್ಲಿಯೇ ಆಸಕ್ತವಾಗಿದೆ. ಈ ಕಾರಣದಿಂದ ನಾವಿಕನ ಮಗಳೆಂದು ಪ್ರಖ್ಯಾತಳಾದಾಗ್ಯೂ ಕಾಳಿಯನ್ನು ಮೊಗವೀರರ ಮನೆಯಲ್ಲಿ ರಾಜಕನ್ನಿಕೆಯರಿಗೆ ಯೋಗ್ಯವಾದ ಅನ್ನಪಾನ ವಿಶೇಷದಿಂದ ವರ್ಧಿತಳನ್ನಾಗಿಯೇ (ಅವನಿಂದ ಹುಟ್ಟಿದ್ದಲ್ಲವೆಂದು) ಶಂತನು ಚಕ್ರವರ್ತಿಯು ತಿಳಿದುಕೊಂಡೇ ಸದ್ಧರ್ಮಗಳಲ್ಲಿಯೇ ಆಸಕ್ತನಾಗಿರುವುದರಿಂದ ಸ್ವೀಕರಿಸಿದನು.

ವಿಶೇಷಾಂಶ—(1) ಚಂದ್ರನು ತನ್ನಿಂದ ಉತ್ತಮರಾದ ಬೃಹಸ್ಪತ್ಯಾಚಾರ್ಯರ ಹೆಂಡತಿಯನ್ನು ಮನಃಪೂರ್ವಕ ಪರಿಗ್ರಹಿಸಿರುವುದರಿಂದಲೂ ಸುಗ್ರೀವನು ತನ್ನಿಂದ ಉತ್ತಮನಾದ ವಾಲಿಯ ಹೆಂಡತಿಯನ್ನು ಮನಃಪೂರ್ವಕ ಪರಿಗ್ರಹಿಸಿರುವುದರಿಂದಲೂ ಪ್ರಾಯಃ ಎಂದು ಹೇಳಿರುವರು. ಹಾಗಾದರೆ ಅವರಂತೆಯೇ ತನಗೂ ಕೂಡ ಕೆಲವು ವೇಳೆ ಪಾಪಕರ್ಮದಲ್ಲಿ ಪ್ರವೃತ್ತಿಯು ಬರಬಹುದೆಂದು ಶಂಕಿಸಕೂಡದು. ಏಕೆಂದರೆ ಚಂದ್ರನು ಕಲ್ಪಪರ್ಯಂತವಾಗಿ ಮೇರುಪರ್ವತದ ಸುತ್ತಲೂ ಸಂಚರಿಸಿರುವುದರಿಂದ ಹೊಂದಿದ ಸ್ವಯೋಗ್ಯತೆಗೆ ಏರಿದ ಅತನ ಪುಣ್ಯವನ್ನೂ, ಸುಗ್ರೀವನಿಗೆ ತನ್ನ ಯೋಗ್ಯತೆಗೆ ಏಕ್ಕ ರಾಮಸೇವೆಯಿಂದುಂಟಾದ ಪುಣ್ಯವನ್ನೂ ನಾಶಮಾಡುವುದಕ್ಕಾಗಿ ಕೆಲವು ವೇಳೆ ಪಾಪಕರ್ಮದಲ್ಲಿ ಪ್ರವೃತ್ತಿಯು ಸಂಭವಿಸುತ್ತದೆ. ನನಗಾದರೂ ಸ್ವಯೋಗ್ಯತಾತಿರಿಕ್ತವಾದ ಪುಣ್ಯವು ಇಲ್ಲದಿರುವುದರಿಂದ ಅಂತಹ ಪಾಪಕರ್ಮದಲ್ಲಿ ಪ್ರವೃತ್ತಿಯು ಇಲ್ಲ. ಆದುದರಿಂದಲೇ, ಸತಾಂ=ತಂತಮಗೆ ಎಷ್ಟು ಯೋಗ್ಯತೆಯಿದೆಯೋ ಅಷ್ಟರಲ್ಲಿಯೇ ಇರುವವರು ಎಂದು ಹೇಳಿರುವರು ॥ ೮೦ ॥

ಮೂ ॥ ಸ್ವಚ್ಛಂದಮೃತ್ಯೋಸ್ತ್ವವರಂ ಪ್ರದಾಯ
ತಥಾಪ್ಯಜೇಯತ್ವಮಧೃಷ್ಯತಾಂ ಚ ।
ಯುದ್ಧೇಷು ಭೀಷ್ಮ ಸ್ಯ ನೃಪೋತ್ತಮಃ ಸ
ರೇವೇ ತಥೈ(ಯೈ)ವಾಬ್ದ ಗಣಾನ್ ಬಹೂಂಶ್ಚ ॥ ೮೧ ॥

ಅ ॥ ಆ ರಾಜಶ್ರೇಷ್ಠನಾದ ಶಂತನು ಚಕ್ರವರ್ತಿಯು ಭೀಷ್ಮಾಚಾರ್ಯರಿಗೆ ಸ್ವೇಚ್ಛೆಯಿಂದಲೇ ಮರಣರೂಪವಾದ ವರವನ್ನೂ ಹಾಗೆಯೇ ಯುದ್ಧಗಳಲ್ಲಿ ಇತರರಿಂದ ಗೆಲ್ಲಲ್ಪಡದಿರುವಿಕೆಯನ್ನೂ (ಅಂದರೆ ಇನ್ನೊಬ್ಬರಿಂದ ಸರ್ವಥಾ ಪರಾಜಯವಿಲ್ಲದಿರುವಿಕೆಯನ್ನೂ) ಇನ್ನೊಬ್ಬರಿಂದ ಬಲಾತ್ಕಾರದಿಂದ ಹಿಡಿಯಲ್ಪಡದಿರುವಿಕೆಯನ್ನೂ (ಈ ವರವನ್ನೂ ಕೂಡ) ಕೊಟ್ಟು ಆ ಸತ್ಯವತೀ ದೇವಿಯಿಂದಲೇ ಅನೇಕ ಸಂವತ್ಸರಗಳ ಸಮುದಾಯಗಳಲ್ಲಿ ಕ್ರೀಡಿಸಿಕೊಂಡು ಇರುತ್ತಿದ್ದನು. ಅಂತಹ ಸಾಮರ್ಥ್ಯವು ಭೀಷ್ಮಾಚಾರ್ಯರಿಗೆ ಪ್ರಸಿದ್ಧವು. ॥ ೬೧ ॥

ಮೂ ॥ ಲೇಭೇ ಸ ಚಿತ್ರಾಂಗದಮತ್ರ ಪುತ್ರಂ
ತಥಾ ದ್ವಿತೀಯಂ ಚ ವಿಚಿತ್ರವೀರ್ಯಂ ।
ತಯೋಶ್ಚ ಬಾಲ್ಯೇ ವ್ಯಸೃಜ(ಧುನೋ) ಚ್ಛರೀರಂ
ಜೀರ್ಣೇನ ದೇಹೇನ ಚ (ಹಿ) ಕಂ ನುಮೇತಿ ॥ ೬೨ ॥

ಅ ॥ ಆ ಶಂತನು ಚಕ್ರವರ್ತಿಯು ಈ ಕಾಳಿದೇವಿಯಲ್ಲಿ ಚಿತ್ರಾಂಗದನಾಮಕ ಮಗನನ್ನೂ, ಹಾಗೆಯೇ ವಿಚಿತ್ರವೀರ್ಯನಾಮಕನಾದ ಎರಡನೇ ಮಗನನ್ನೂ ಹೊಂದಿದನು. ಅವರಿಬ್ಬರ ಬಾಲ್ಯಾವಸ್ಥೆಯಲ್ಲಿಯೇ ನನಗೆ ಜೀರ್ಣವಾದ ಶರೀರದಿಂದ ಏನು ಪ್ರಯೋಜನವು ಎಂದು(ಆಲೋಚಿಸಿ) ಶರೀರವನ್ನು ಬಿಟ್ಟನು. (ಹಿ=) ಶಂತನು ಚಕ್ರವರ್ತಿಗೆ ಸ್ವಚ್ಛಂದಮೃತ್ಯುತ್ವವು ಪ್ರಸಿದ್ಧವು.

ವಿಶೇಷಾಂಶ—ಇತರರಿಗೆ ಸ್ವಚ್ಛಂದ ಮೃತ್ಯುತ್ವರೂಪವನ್ನು ಕೊಡತಕ್ಕ ಶಂತನು ಚಕ್ರವರ್ತಿಗೆ ಸ್ವಚ್ಛಂದ ಮೃತ್ಯುತ್ವವಿದೆ ಎಂದು ಏನು ಹೇಳತಕ್ಕದ್ದಿದೆ. ಸುತರಾಂ ಸಿದ್ಧವು ॥ ೬೨ ॥

ಅದನ್ನೇ ಸ್ಪಷ್ಟೀಕರಿಸುತ್ತಾರೆ—

ಮೂ ॥ ಸ್ವೇಚ್ಛಯಾ ವರುಣತ್ವಂ ಸ ಪ್ರಾಪ ನಾನಿಚ್ಛಯಾ ತನೋ ।
ತಸ್ಮಿನ್ ಕಾಲೇ ತ್ಯಜ್ಯತೇ ಹಿ ಬಲವದ್ಭಿರ್ವಧಂ ವಿನಾ ॥ ೬೩ ॥

ಅ ॥ (ಪದಾರ್ಥದೀಪಿಕಾ) ಆ ಶಂತನು ಚಕ್ರವರ್ತಿಯು ತನ್ನ ಇಚ್ಛೆಯಿಂದಲೇ ವರುಣಾಖ್ಯ ಮೂಲರೂಪತ್ವವನ್ನು ಹೊಂದಿದನು. ಇಚ್ಛೆಯಿಲ್ಲದೆ ಹೊಂದಲಿಲ್ಲ. (ಆದಕಾರಣ ಸ್ವಚ್ಛಂದ ಮೃತ್ಯುತ್ವಕ್ಕೆ ಹಾನಿಯಿಲ್ಲ.) ಯೋಗಬಲವುಳ್ಳವರಿಂದ ಮರಣೇಚ್ಛಾಕಾಲದಲ್ಲಿ ಹನನವಿಲ್ಲದೆ ತನ್ನ ಇಚ್ಛೆಯಿಂದಲೇ ಶರೀರವು ಬಿಡಲ್ಪಡುತ್ತದೆ. (ಹಿ=) ಯೋಗೈಶ್ವರ್ಯಕ್ಕೆ ಅಂತಹ ಸಾಮರ್ಥ್ಯವು ಸತೀದೇವ್ಯಾದಿಗಳಲ್ಲಿ ಪ್ರಸಿದ್ಧವು.

(ಭಾವದೀಪಿಕಾ) ಯಾವ ಕಾರಣದಿಂದ ಶರೀರಕ್ಕೆ ಜೀರ್ಣತ್ವಾವಸ್ಥೆಯಲ್ಲಿ ಬಲಿಷ್ಠರಿಂದ ಹನನವಾಗದೆ ಇಚ್ಛೆಯಿಲ್ಲದೆ (ತಪೋನಿಷ್ಠರಿಂದ) ಶರೀರವು ಬಿಡಲ್ಪಡುವುದಿಲ್ಲವೋ, ಮತ್ತೆ ಇಚ್ಛೆಯಿಂದಲೇ ಬಿಡಲ್ಪಡುತ್ತದೋ, ಆದಕಾರಣ ಆ ಶಂತನು ಚಕ್ರವರ್ತಿಯು ತನ್ನ ಇಚ್ಛೆಯಿಂದಲೇ ವರುಣಸ್ವರೂಪವನ್ನು ಹೊಂದಿದನು. ॥ ೬೩ ॥

ಹಿಂದೆ ಹೇಳಿದ್ದಕ್ಕೆ ಅಪವಾದವನ್ನು ಹೇಳುತ್ತಾರೆ—

ಮೂ ॥ ಅತಿಸಕ್ತಾಸ್ತ ಪೋಹೀನಾಃ ಕಥಂಚಿನ್ಮೃತಿಮಾಪ್ನುಯುಃ ।
ಅನಿಚ್ಛಯಾಪಿ ಹಿ ಯಥಾ ಮೃತಶ್ಚಿತ್ರಾಂಗದಾನುಜಃ ॥ ೬೪ ॥

ಅ ॥ ವಿಷಯಗಳಲ್ಲಿ ಅತ್ಯಾಸಕ್ತರಾದ ತಪಸ್ಸು ಇಲ್ಲದಿರುವವರು, (ತಮ್ಮಿಂದ ಬಲಿಷ್ಠರಾದವರಿಂದ ಹನನವಿಲ್ಲದೆ) ಇಚ್ಛಾಭಾವದಿಂದಲೇ (ಕಥಂಚಿತ=) ಮೃತಿಗೆ ಹೇತುಗಳಾದ ರೋಗಾದಿಗಳಿಂದ, ಮರಣವನ್ನು ಹೊಂದುವರು. ಹೇಗೆಂದರೆ ಚಿತ್ರಾಂಗದನ ತಮ್ಮನಾದ ವಿಚಿತ್ರವೀರ್ಯನು (ಯಕ್ಷ್ಮದಿಂದ (ಕ್ಷಯರೋಗದಿಂದ) ಪೀಡಿಸಲ್ಪಟ್ಟವನಾಗಿ) ಮರಣೇಚ್ಛೆಯಿಲ್ಲದೆ ಮೃತನಾಗಿರುವನು. ವಿಚಿತ್ರವೀರ್ಯನಿಗೆ ವಿಷಯಾಸಕ್ತತ್ವವೂ ತಪೋರಾಹಿತ್ಯವೂ ಸುಪ್ರಸಿದ್ಧವು ॥ ೮೪ ॥

ಮೂ ॥ ಅಥೌರ್ಧ್ವದೈಹಿಕಂ ಕೃತ್ವಾ ಪಿತುರ್ಭೀಷ್ಮೋಽಭ್ಯಷೇಚಯೇತ್ ।
ರಾಜ್ಯೇ ಚಿತ್ರಾಂಗದಂ ವೀರಂ ಯೌವರಾಜ್ಯೇಽಸ್ಯ ಚಾನುಜಂ ॥ ೮೫ ॥

ಅ ॥ ಶಂತನು ಚಕ್ರವರ್ತಿಗೆ ಸ್ವಮೂಲರೂಪಪ್ರಾಪ್ತ್ಯನಂತರದಲ್ಲಿ ಭೀಷ್ಮಾಚಾರ್ಯರು ತಂದೆಯವರಿಗೆ ಪ್ರೇತಸಂಸ್ಕಾರವನ್ನು ಮಾಡಿ, ರಾಜ್ಯದಲ್ಲಿ ವೀರನಾದ ಚಿತ್ರಾಂಗದನನ್ನೂ ಯೌವರಾಜ್ಯದಲ್ಲಿ ಚಿತ್ರಾಂಗದನ ತಮ್ಮನಾದ ವಿಚಿತ್ರವೀರ್ಯನನ್ನೂ ಪಟ್ಟಾಭಿಷೇಕಮಾಡಿದರು. ॥ ೮೫ ॥

ಮೂ ॥ ಚಿತ್ರಾಂಗದೇನ ನಿಹತೋ ನಾಮ ಸ್ವಂ ತ್ವಪರಿತ್ಯಜನ್ ।
ಚಿತ್ರಾಂಗದೋಽಕೃತೋದ್ವಾಹೋ ಗಂಧರ್ವೇಣ ಮಹಾರಣೇ ॥
॥ ೮೬ ॥

ಅ ॥ ಮಾಡಲ್ಪಡದೆ ಇರುವ ಮುದುವೆಯುಳ್ಳ (ಅಂದರೆ ಮದುವೆಯಾಗದಿರುವ) ಚಿತ್ರಾಂಗದನು ಚಿತ್ರಾಂಗದನೆನ್ನುವ ತನ್ನ ನಾಮವನ್ನು ಬಿಡದೆ ಇದ್ದವನಾಗಿ (ಅಂದರೆ ಅದೇ ಕಾರಣದಿಂದ) ಮಹತ್ತಾದ ಯುದ್ಧದಲ್ಲಿ ಚಿತ್ರಾಂಗದಾಖ್ಯಗಂಧರ್ವನಿಂದ ಸಂಹರಿಸಿಕೊಳ್ಳಲ್ಪಟ್ಟನು.

ವಿಶೇಷಾಂಶ—ಚಿತ್ರಾಂಗದನೆನ್ನುವ ಗಂಧರ್ವನು ನನ್ನ ಚಿತ್ರಾಂಗದ ಎನ್ನುವ ನಾಮವು ನಿನಗೆ ಅಯೋಗ್ಯವು, ಆದಕಾರಣ ನೀನು ಚಿತ್ರಾಂಗದ ಎನ್ನುವ ನಾಮವನ್ನು ಬಿಟ್ಟುಬಿಡು ಎಂದು ಹೇಳಿದರೂ ಶಂತನು ಚಕ್ರವರ್ತಿಯ ಪುತ್ರನಾದ ಚಿತ್ರಾಂಗದನು ಗಂಧರ್ವನು ಹೇಳಿದಪ್ರಕಾರ ತನ್ನ ಚಿತ್ರಾಂಗದ ಎನ್ನುವ ಹೆಸರನ್ನು ಬಿಡದಿರುವುದರಿಂದ ಗಂಧರ್ವನು ಸಂಹರಿಸಿಬಿಟ್ಟನು. ॥ ೮೬ ॥

ಮೂ ॥ ವಿಚಿತ್ರವೀರ್ಯಂ ರಾಜಾನಂ ಕೃತ್ವಾ ಭೀಷ್ಮೋಽನ್ವಪಾಲಯತ್
ಅಥ ಕಾಶಿಸುತಾಸ್ತಿಸ್ರಸ್ತದರ್ಥಂ ಭೀಷ್ಮ ಆಹರತ್ ।
ಅಂಬಾಮಪ್ಯಂಬಿಕಾನಾಮ್ನೀಂ ತಥೈವಾಂಬಾಲಿಕಾಂ ಪರಾಂ ೮೭
ಪಾಣಿಗ್ರಹಣಕಾಲೇ ತು ಬ್ರಹ್ಮದತ್ತಸ್ಯ ವೀರ್ಯವಾನ್ ।
ವಿಜಿತ್ಯ ತಂ ಸಾಲ್ವರಾಜಂ ಸಮೇತಾನ್ ಕ್ಷತ್ರಿಯಾನಪಿ ॥ ೮೮ ॥

ಅ ॥ ಆಮೇಲೆ ಭೀಷ್ಮಾಚಾರ್ಯರು ವಿಚಿತ್ರವೀರ್ಯನನ್ನು ರಾಜನನ್ನಾಗಿ ಮಾಡಿ (ರಾಜ್ಯವನ್ನು) ರಕ್ಷಿಸುತ್ತಿದ್ದರು. ಆಮೇಲೆ ವೀರ್ಯವುಳ್ಳ (ಅಂದರೆ ಪರಾಕ್ರಮಶಾಲಿಗಳಾದ) ಭೀಷ್ಮಾಚಾರ್ಯರು ಬ್ರಹ್ಮದತ್ತಾಖ್ಯ ಅಸುರನ ವಿವಾಹದ ಸಮಯದಲ್ಲಿ ಸಾಲ್ವದೇಶಕ್ಕೆ ಅಧಿಪತಿಯಾದ ಆ ಬ್ರಹ್ಮದತ್ತನನ್ನೂ ಅಲ್ಲಿ ಮಿಲಿತರಾದ ಕ್ಷತ್ರೀಯರನ್ನೂ ಕೂಡ ಗೆದ್ದು ಅಂಬಿಕಾ ಎಂದು ಹೆಸರುಳ್ಳವಳನ್ನೂ ಹಾಗೆಯೇ ಅಂಬಾಲಿಕಾ ಎನ್ನುವ ಇನ್ನೊಬ್ಬಳನ್ನೂ ವಿವಾಹಕ್ಕೆ ಅನರ್ಹಳಾದ ಅಂಬಾ ಎನ್ನುವವಳನ್ನೂ ಹೀಗೆ ಕಾಶಿರಾಜನ ಹೆಣ್ಣುಮಕ್ಕಳು ಮೂವರನ್ನು ಕೂಡ ಆ ವಿಚಿತ್ರವೀರ್ಯನಿಗೋಸ್ಕರ ಅಪಹರಿಸಿ ತಂದರು. ॥ ೮೭ ॥ ೮೮ ॥

ಮೂ ॥ ಅಂಬಿಕಾಂಬಾಲಿಕೇ ತತ್ರ ಸಂವಾದಂ ಚಕ್ರತುಃ ಶುಭೇ ।
ಅಂಬಾ ಸಾ ಭೀಷ್ಮ ಭಾರ್ಯ್ಯೈವ ಪೂರ್ವದೇಹೇ ತು ನೈಚ್ಛತ ೪೯

ಅ ॥ ಆ ಮೂವರ ಮಧ್ಯದಲ್ಲಿ (ಶಾಪಾದಿದೋಷವಿಲ್ಲದಿರುವುದರಿಂದ) ಉತ್ತಮರಾದ ಅಂಬಿಕಾ ಅಂಬಾಲಿಕೆಯರು (ವಿಚಿತ್ರವೀರ್ಯನಿಗೆ ಹೆಂಡತಿಯಾಗುವ ವಿಷಯದಲ್ಲಿ) ಅಂಗೀಕಾರ ಪನ್ನು ಮಾಡಿದರು. ಆ ಅಂಬೆಯು ವರಾಂಗಿತ್ವ ದೇಹದಲ್ಲಿ ಭೀಷ್ಮಾಚಾರ್ಯರ ಮೂಲರೂಪ ನಾದ ದ್ಯುನಾಮಕವಸುವಿನ ಹೆಂಡತಿಯೇ, ಅವಳು (ತು=) ದೇವತೆಗಳ ಹೆಂಡತಿಯರಿಗೆ ಮನುಷ್ಯ ಪತ್ನೀತ್ವವು ಅಯೋಗ್ಯವೆನ್ನುವ ವಿಶೇಷದಿಂದ ವಿಚಿತ್ರವೀರ್ಯನನ್ನು ಇಚ್ಛಿಸಲಿಲ್ಲ.)॥೪೯॥

ಮೂ ॥ ಶಾಪಾದ್ಧಿ ರಣ್ಯಗರ್ಭಸ್ಯ ಸಾಲ್ವಕಾಮೂಹವಿತ್ಯಪಿ ।
ಉವಾಚ ತಾಂ ಸ ತತ್ಯಾಜ ಸಾಗಮತ್ ಸಾಲ್ವಮೇವ ಚ ॥ ೯೦ ॥

ಅ ॥ (ಅಂಬೆಯು) (ಪತಿರಹಿತಳಾಗು ಎನ್ನುವ) ಬ್ರಹ್ಮದೇವರ ಶಾಪದ್ದೆಸೆಯಿಂದ 'ನಾನು ಸಾಲ್ವದೇಶಕ್ಕೆ ಅಧಿಪತಿಯಾದ ಬ್ರಹ್ಮದತ್ತನಲ್ಲಿ ಇಚ್ಛೆಯುಳ್ಳವಳು ಎಂದು (ಅಪಿ=) ನಿಂದಿತವಾದ ಮಾತನ್ನು ಹೇಳಿದಳು. ಆ ಭೀಷ್ಮಾಚಾರ್ಯರು (ವಿರುದ್ಧಭಾಷಿಯಾದ) ಆ ಅಂಬಾದೇವಿಯನ್ನು ಬಿಟ್ಟರು. ಆ ಅಂಬಾದೇವಿಯು ಸಾಲ್ವದೇಶಕ್ಕೆ ಅಧಿಪತಿಯಾದ ಬ್ರಹ್ಮದತ್ತನ ಸಮೀಪಕ್ಕೆ ಹೋದಳು. ॥ ೯೦ ॥

ಮೂ ॥ ತೇನಾಪಿ ಸಂಪರಿತ್ಯಕ್ತಾ ಪರಾಮೃಷ್ಟೇತಿ ಸಾ ಪುನಃ ।
ಭೀಷ್ಮಮಾಪ ಸ ನೋಽಗೃಹ್ಣಾತ್ ಪ್ರಯಯೌ ಸಾಪಿ ಭಾರ್ಗವಂ ॥ ೯೧ ॥

ಅ ॥ ಅಂಬೆಯು (ಪರಪುರುಷನಿಂದ) ಸ್ಪೃಷ್ಟಳಾಗಿದ್ದಾಳೆಂದು ಆ ಬ್ರಹ್ಮದತ್ತನಿಂದಲೂ ಬಿಡಲ್ಪಟ್ಟಳು. ಪುನಃ ಭೀಷ್ಮಾಚಾರ್ಯರನ್ನೇ ಹೊಂದಿದಳು. ಭೀಷ್ಮಾಚಾರ್ಯರು ಅವಳನ್ನು ಅಂಗೀಕರಿಸಲಿಲ್ಲ. ಆ ಅಂಬಾದೇವಿಯಾದರೂ (ಭೀಷ್ಮಾಚಾರ್ಯರು ತನ್ನನ್ನು ಒರಿಸಿಕೊಳ್ಳುವಂತೆ ಮಾಡುವುದಕ್ಕಾಗಿ) ಪರಶುರಾಮನನ್ನು ಕುರಿತು ಹೋದಳು. ॥ ೯೧ ॥

ಮೂ ॥ ಭ್ರಾತುರ್ವಿವಾಹಯಾಮಾಸ ಸೋಽಂಬಿಕಾಂಬಾಲಿಕೇ ತತಃ ।
ಭೀಷ್ಮಾಯ ತು ಯಶೋ ದಾತುಂ ಯುಯುಧೇ ತೇನ ಭಾರ್ಗವಃ ॥ ೯೨ ॥

ಅ ॥ ಅಂಬೆಯು ಹೋದ ಮೇಲೆ ಆ ಭೀಷ್ಮಾಚಾರ್ಯರು ಅಂಬಿಕಾ ಅಂಬಾಲಿಕೆ ಎನ್ನುವ ಇಬ್ಬರು ಕನ್ನಿಕೆಯರನ್ನು ತಮ್ಮನಾದ ವಿಚಿತ್ರವೀರ್ಯನಿಗೆ ಮದುವೆಮಾಡಿಸಿದರು. (ಭೀಷ್ಮಾಚಾರ್ಯರು ನನ್ನನ್ನು ಸ್ವೀಕರಿಸುವ ಹಾಗೆ ಮಾಡಬೇಕು, ಇಲ್ಲವಾದರೆ ಅವರನ್ನು ಸಂಹರಿಸಬೇಕು ಎಂದು ಅಂಬೆಯಿಂದ ಪ್ರಾರ್ಥಿಸಿಕೊಳ್ಳಲ್ಪಟ್ಟ) ಪರಶುರಾಮ ದೇವರು ಭೀಷ್ಮಾಚಾರ್ಯರಿಗಾದರೂ (ಭೀಷ್ಮಾಚಾರ್ಯರ ಮಾತು ಸತ್ಯವಾಗಬೇಕು ಎನ್ನುವ) ಯಶಸ್ಸನ್ನು ಕೊಡುವುದಕ್ಕಾಗಿ ಆ ಭೀಷ್ಮಾಚಾರ್ಯರಿಂದ ಯುದ್ಧಮಾಡಿದರು. ॥ ೯೨ ॥

ಮೂ ॥ ಅನಂತಶಕ್ತಿ ರಪಿ ಸನ್ನ (ಸ ನ) ಭೀಷ್ಮಂ ನಿಜಘಾನ ಹ ।
ನ ಚಾಂಬಾಂ ಗ್ರಾಹಯಾಮಾಸ ಭೀಷ್ಮ ಕಾರುಣ್ಯಯಂತ್ರಿತಃ ೯೩

ಅ ॥ ಭೀಷ್ಮಾಚಾರ್ಯರಲ್ಲಿರತಕ್ಕ ಕೃಪೆಯಿಂದ ಬದ್ಧರಾದ ಪರಶುರಾಮ ದೇವರು ಅಪರಿಮಿತ ಶಕ್ತಿಯುಳ್ಳವರಾದಾಗ್ಯೂ ಭೀಷ್ಮನನ್ನು ಕೊಲ್ಲಲಿಲ್ಲ. ಅಂಬಾದೇವಿಯನ್ನು ಸ್ವೀಕಾರ ಮಾಡಿಸಲೂ ಇಲ್ಲ. ಪ್ರಸಿದ್ಧ ॥ ೯೩ ॥

ಮೂ ॥ **ಅನಂತಶಕ್ತಿಃ ಸಕಲಾಂತರಾತ್ಮಾ**
ಯಃ ಸರ್ವವಿತ್ ಸರ್ವವಶೀ ಚ ಸರ್ವಜಿತ್ ।
ನ ಯತ್ಸಮೋಽನ್ಯೋಽಸ್ತಿ ಕಥಂ ಚ ಕುತ್ರಚಿತ್
ಕಥಂ ಹ್ಯಶಕ್ತಿಃ ಪರಮಸ್ಯ ತಸ್ಯ ॥ ೯೪ ॥

ಅ ॥ ಯಾವಾತನು ಅಪರಿಮಿತ ಶಕ್ತಿಯುಳ್ಳವನೋ, ಸರ್ವರಲ್ಲಿಯೂ ಅಂತರ್ಯಾಮಿಯಾದವನೋ, ಸರ್ವಜ್ಞನೋ, ಸರ್ವವನ್ನು ಅಧೀನದಲ್ಲಿಟ್ಟುಕೊಂಡವನೋ, ಸರ್ವರನ್ನೂ ಜಯಿಸಿದವನೋ ಯಾರಿಗೆ ಸಮಾನಿಕನು ಮತ್ತೊಬ್ಬನಿಲ್ಲವೋ, ಅಂತಹ ಸರ್ವೋತ್ಕೃಷ್ಟನಾದ ಪರಶುರಾಮನಿಗೆ ಯಾವ ಪ್ರಕಾರದಿಂದಲೂ ಯಾವ ದೇಶದಲ್ಲಿಯೂ ಯಾವಕಾಲದಲ್ಲಿಯೂ ಶಕ್ತ್ಯಭಾವವು ಹೇಗೆ ಆದೀತು? (ಹೇಗೂ ಆಗಲಾರದು.) (ಹಿ॥) **"ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ"** ಇತ್ಯಾದಿ ಶ್ರುತಿಪ್ರಸಿದ್ಧವು. ॥ ೯೪ ॥

ಮೂ ॥ **ಭೀಷ್ಮಂ ಸ್ವಭಕ್ತಂ ಯಶಸಾಭಿಪೂರಯನ್**
ವಿಮೋಹಯನ್ನ (ನ್ನಾ)ಸುರಾಂಶ್ಚೈವ ರಾಮಃ ।
ಜಿತ್ವೈವ ಭೀಷ್ಮಂ ನ ಜಘಾನ ದೇವೋ
ವಾಚಂ ಚ ಸತ್ಯಾಮಕರೋತ್ ಸ ತಸ್ಯ ॥ ೯೫ ॥

ಅ ॥ ಸ್ವಭಕ್ತನಾದ ಭೀಷ್ಮನನ್ನು (ಅಂಬೆಯನ್ನು ಸ್ವೀಕರಿಸಲಿಲ್ಲ ಎನ್ನುವ) ಯಶಸ್ಸಿನಿಂದ ಪೂರ್ಣೀಕರಿಸುತ್ತಾ ಅಸುರರನ್ನೇ ವಿಮೋಹಿಸುತ್ತಾ ಪರಶುರಾಮನು ಭೀಷ್ಮಾಚಾರ್ಯರನ್ನು ಸೋಲಿಸಿಯೇ ಕೇವಲ ಸಂಹರಿಸಲಿಲ್ಲ. ಆ ಪರಶುರಾಮದೇವರು ಆ ಭೀಷ್ಮಾಚಾರ್ಯರ (ಯಾವಾಗಲೂ ಊರ್ಧ್ವರೇತಸ್ಕನಾಗುವೆನು, ಅಂಬೆಯಾನ್ನು ಸ್ವೀಕರಿಸಲಿಕ್ಕಿಲ್ಲ ಎನ್ನುವ ಪ್ರತಿಜ್ಞಾರೂಪವಾದ) ಮಾತನ್ನು ಸತ್ಯವನ್ನಾಗಿ ಮಾಡಿಸಿದರು.

ವಿಶೇಷಾಂಶ—ಲೋಕದೃಷ್ಟಿಯಿಂದಲಾದರೂ ನನ್ನನ್ನೂ ಕೂಡಾ ಈ ಭೀಷ್ಮಾಚಾರ್ಯರು ಸೋಲಿಸಿದರು. ಆದುದರಿಂದ ನಾನು ಏನು ಮಾಡಬೇಕು, ಎಂದು ಅಂಬಾದೇವಿಯನ್ನು ವಂಚಿಸುವುದಕ್ಕಾಗಿ ಪರಾಜಿತರಂತೆ ತೋರಿಸಿಕೊಂಡರು. ॥ ೯೫ ॥

ವಸ್ತುಗತಿಯಿಂದ ಪರಶುರಾಮದೇವರಿಗೆ ಏಕೆ ಪರಾಜಯವಿಲ್ಲವೆನ್ನುವ ತಂಕೆಯನ್ನು ಪುರಾಣವಚನದಿಂದಲೇ ಪರಿಹರಿಸುತ್ತಾರೆ—

ಮೂ ॥ **ವಿದ್ಧವನ್ಮುಗ್ಧವಚ್ಚೈವ ಕೇಶವೋ ವೇದನಾರ್ತವತ್ ।**
ದರ್ಶಯನ್ನಪಿ ನೋಹಾಯ ನೈವ ವಿಷ್ಣುಸ್ತಥಾ ಭವೇತ್ ॥ ೯೬ ॥

ಅ ॥ ಶ್ರೀಪರಮಾತ್ಮನು ಬಾಣಾದಿಗಳಿಂದ ಚುಚ್ಚಿಸಿಕೊಳ್ಳಲ್ಪಟ್ಟವನಂತೆಯೂ ಅಜ್ಞಾನಂತೆಯೂ ವ್ಯಥೆಯಿಂದ ಪೀಡಿತನಂತೆಯೂ (ತೋರಿಸುತ್ತಾನೆ.) ಶ್ರೀಹರಿಯು (ಅಯೋಗ್ಯರಿಗೆ) ಮೋಹಕ್ಕಾಗಿ (ವಿದ್ಧಾದಿಗಳಂತೆ) ತೋರಿಸತಕ್ಕವನಾದಾಗ್ಯೂ (ವಸ್ತುತಃ) ವೇಧಾದಿದೋಷವುಳ್ಳವನಾಗುವುದೇ ಇಲ್ಲ. ॥ ೯೬ ॥

ಮೂ ॥ ಏವಮಾದಿಪುರಾಣೋತ್ಥವಾಕ್ಯಾದ್ರಾಮಃ ಸದಾ ಜಯೀ ।
ಯಶೋ ಭೀಷ್ಮ ಸ್ಯ ದತ್ವಾ ತು ಸೋಽಂಬಾಂ ಚ ಶರಣಾಗತಾಂ ॥
ಉನ್ಮಚ್ಯ ಭರ್ತೃದ್ವೇಷೋತ್ಥ-(ತ್ಥಾತ್) [॥ ೯೭ ॥
ಪಾಪಾತ್ತ್ವೇನಾಕ್ಷಯೋಜಯತ್ ।
ಅನಂತರಂ ಶಿಖಂಡಿತ್ವಾತ್ ।
ತದಾ ಸಾ ಶಾಂಕರಂ ತಪಃ ॥ ೯೮ ॥
ಭೀಷ್ಮಸ್ಯ ನಿಧನಾರ್ಥಾಯ ಪುಂಸ್ತ್ವಾರ್ಥಂ ಚ ಚಕಾರ ಹ ।
ಭೀಷ್ಮೋ ಯಥಾ ತ್ವಾಂ ಗೃಹ್ಣೀಯಾತ್ತಥಾ ಕುರ್ಯಾನ್ನಿತೀರಿತಂ ।
ರಾಮೇಣ ಸತ್ಯಂ ತಚ್ಚಕ್ರೇ ಭೀಷ್ಮೇ ದೇಹಾಂತರಂ ಗತೇ ॥ ೯೯ ॥

ಅ ॥ ಇದೇ ಮೊದಲಾಗಿವುಳ್ಳ ಪುರಾಣದಲ್ಲಿರುವ ವಾಕ್ಯಾದಿಗಳಿಂದ ಪರಶುರಾಮನು ಯಾವಾಗಲೂ ಜಯವುಳ್ಳವನೇ. ಆ ಪರಶುರಾಮನಾದರೂ ಭೀಷ್ಮಾಚಾರ್ಯರಿಗೆ ಯಶಸ್ಸನ್ನು ಕೊಟ್ಟು (ಹಾಗಾದರೆ ಶರಣಾಗತಳಾದ ಅಂಬಾದೇವಿಗೆ ಅಭೀಷ್ಟವನ್ನು ಮಾಡದಿರುವುದರಿಂದ ಶರಣಾಗತ ರಕ್ಷಕನೆನ್ನುವ ಭಗವನ್ಮಹಿಮೆಗೆ ಹಾನಿಯು ಬಂದ ಹಾಗೆ ಆಯಿತು ಎಂದರೆ) ಶರಣಾಗತಳಾದ ಅಂಬಾ ದೇವಿಯನ್ನಾದರೂ ಶಿಖಂಡಿ ಸ್ವರೂಪಾನಂತರದಲ್ಲಿ (ಅಂದರೆ ಅಂಬಾದೇವಿಗೇನೇ ಶಿಖಂಡಿ ನಾಮದಿಂದ ಯಾವುದು ಉತ್ಪತ್ತಿಯೋ ಆ ಸ್ವರೂಪ ಮುಗಿದ ಮೇಲೆ) ಭರ್ತೃಭೂತರಾದ ಭೀಷ್ಮಾಚಾರ್ಯರ ಸಂಹಾರಕ್ಕೆ ಕಾರಣವಾದ ದ್ವೇಷದ್ದೆಸೆಯಿಂದ ಹುಟ್ಟಿದ ಪಾಪದ್ದೆಸೆಯಿಂದ ಬಿಡಿಸಿ ದ್ಯುನಾಮಕ ಮೂಲರೂಪವನ್ನು ಹೊಂದಿದ ಭೀಷ್ಮಾಚಾರ್ಯರಿಂದ ಭೀಷ್ಮಾಚಾರ್ಯರಿಗೆ ಮೂಲರೂಪ ಪ್ರವೇಶವಾಗುವ ಕಾಲದಲ್ಲಿಯೇ ಕೂಡಿಸಿದರು. (ಅಂದರೆ ಬಹುಜನ್ಮಗಳಲ್ಲಿ ಅನುಭವಿಸಲಿಕ್ಕೆ ಯೋಗ್ಯವಾಗಿದ್ದಾಗ್ಯೂ ಭರ್ತೃ ಹನನಾಖ್ಯವಾದ ಮುಂದೆ ಸಂಭವಿಸಬಹುದಾದ ಮಹಾಪಾಪವನ್ನು ತನ್ನ ಶರಣಾಗತಿರೂಪವಾದ ಮಹಾಪುಣ್ಯದಿಂದ ಶೀಘ್ರವಲ್ಲಿ ಬಿಡಿಸಿ ಗಂಡನಿಂದ ಕೂಡಿಸಿದನು.) ತದಾ= ಪರಶುರಾಮದೇವರ ಸಮೀಪದ್ದೆಸೆಯಿಂದ ಬಂದ ಮೇಲೆ ಆ ಅಂಬಾ ದೇವಿಯು ಭೀಷ್ಮಾಚಾರ್ಯರನ್ನು ಸಂಹರಿಸುವುದಕ್ಕಾಗಿಯೂ ತನಗೆ ಪುಂಸ್ತ್ವವು ಬರುವುದಕ್ಕಾಗಿ ರುದ್ರ ಸಂಬಂಧಿಯಾದ ತಪಸ್ಸನ್ನು ಮಾಡಿದಳು. (ಹೇ ಅಂಬಾದೇವಿಯೇ) ಭೀಷ್ಮಾಚಾರ್ಯರು ಹೇಗೆ ನಿನ್ನನ್ನು ಸ್ವೀಕಾರ ಮಾಡಿಯಾರೋ ಹಾಗೆಯೇ ಮಾಡುವೆನು, ಹೀಗೆ ಪರಶುರಾಮದೇವರಿಂದ ಹೇಳಲ್ಪಟ್ಟ ಮಾತನ್ನು ಭೀಷ್ಮಾಚಾರ್ಯರು ವಸುತ್ವವನ್ನು ಹೊಂದಿದ ಮೇಲೆ (ಪರಶುರಾಮನು) ಸತ್ಯವನ್ನಾಗಿಯೇ ಮಾಡಿದನು.

ವಿಶೇಷಾಂಶ—(1) ಅಂಬಾದೇವಿಯು ಜನ್ಮದಲ್ಲಿ ಭೀಷ್ಮಾಚಾರ್ಯರು ಪಾಣಿಗ್ರಹಣ ಮಾಡಿಕೊಳ್ಳುವುದಕ್ಕಾಗಿಯೇ ಪರಶುರಾಮದೇವರನ್ನು ಕುರಿತು ಅಂಬೆಯು ಪ್ರಾರ್ಥಿಸಿರುವುದರಿಂದ ಪ್ರಾಯಶಃ ಪಾಪವು ಸಂಭವಿಸದಿರುವುದರಿಂದ ಶಿಖಿಂಡಿತ್ವಾನಂತರದಲ್ಲಿ (ಭರ್ತೃದ್ವೇಷೋದ್ಭವ ಪಾಪಾತ್ ಎಂದು ಪೇಳಿದ್ದು. (2) ಪರಶುರಾಮ ದೇವರು ಈ ಜನ್ಮದಲ್ಲಿಯೇ ಭೀಷ್ಮನಿಂತ

ಕೂಡಿಸುವೆನೆಂದು ವಿಶೇಷತಃ ಹೇಳವೆ ಇರುವುದರಿಂದ ಭೀಷ್ಮಾಚಾರ್ಯರಿಂದ ಕೂಡಿಸುವೆನೆಂದು ಸಾಮಾನ್ಯವಾಗಿ ಹೇಳಿರುವುದರಿಂದಲೂ ಜನ್ಮಾಂತರ ವಿಷಯಕವಾದುದು ಆತನ ಅಭಿಪ್ರಾಯವು ಎಂದು ಸಂಗತವಾಗುವುದರಿಂದ ಪರಶುರಾಮ ಪ್ರತಿಜ್ಞೆಗೆ ಭಂಗವಿಲ್ಲ. ॥ ೯೭ ॥ ೯೮ ॥ ೯೯ ॥

ಮೂ ॥ ರುದ್ರಸ್ತು ತಸ್ಯಾಸ್ತಪಸಾ ತುಷ್ಟ ಃ ಪ್ರಾದಾದ್ವರಂ ತದಾ ।
ಭೀಷ್ಮಸ್ಯ ಮೃತಿಹೇತುತ್ವಂ ಕಾಲಾತ್ಪುಂದೇಹಸಂಭವಂ ॥ ೧೦೦ ॥

ಅ ॥ ರುದ್ರನಾದರೂ ಅಂಬೆಯ ತಪಸ್ಸಿನಿಂದ ಸಂತುಷ್ಟನಾದವನಾಗಿ ಆಗ ಭೀಷ್ಮಾಚಾರ್ಯರ ಮರಣದಲ್ಲಿ ಕಾರಣತ್ವವನ್ನೂ ದೇಹಾಂತರ ಪ್ರಾಪ್ತ್ಯನಂತರ ಕಾಲದ್ದೆಸೆಯಿಂದ ಪುರುಷ ದೇಹದ ಪ್ರಾಪ್ತಿಯನ್ನೂ ಹೀಗೆ (ಎರಡು) ವರಗಳನ್ನು ಕೊಟ್ಟನು. ॥ ೧೦೦ ॥

ಮೂ ॥ ಮಾಲಾಂ ಚ ಯ ಇಮಾಂ ಮಾಲಾಂ ಗೃಹ್ಣೀಯಾತ್ಸ ಹನಿಷ್ಯತಿ ।
ಭೀಷ್ಮ ಮಿತ್ಯೇವ ತಾಂ ಮಾಲಾಂ ಗೃಹೀತ್ವಾ ಸಾ ನೃಪಾನ್ಯಯೌ
॥ ೧೦೧ ॥

ಅ ॥ ಯಾವಾತನು ಈ ಮಾಲಿಕೆಯನ್ನು ತೆಗೆದುಕೊಳ್ಳುವನೋ ಅವನೇವೇ ಭೀಷ್ಮನನ್ನು ಕೊಲ್ಲುವನು ಹೇಗೆ (ಹೇಳಿ) ಮಾಲಿಕೆಯನ್ನು (ರುದ್ರನು ಕೊಟ್ಟನು.) ಆ ಅಂಬೆಯು ಆ ಮಾಲಿಕೆಯನ್ನು ಹಿಡಿದುಕೊಂಡು (ಭೀಷ್ಮಾಚಾರ್ಯರನ್ನು ಕೊಲ್ಲಲಿಕ್ಕೆ ಕೊಡುವುದಕ್ಕಾಗಿ) ಎಲ್ಲಾ ರಾಜರ ಸಮೀಪಕ್ಕೆ ಹೋದಳು. ॥ ೧೦೧ ॥

ಮೂ ॥ ತಾಂ ನ ಭೀಷ್ಮ ಭಯಾತ್ಕೋಽಪಿ ಜಗೃಹುಸ್ತಾಂ ಹಿ ಸಾ ತತಃ ।
ದ್ರುಪದಸ್ಯ ಗೃಹದ್ವಾರಿ ನ್ಯಸ್ಯ ಯೋಗಾತ್ತನುಂ ಜಹೌ ॥ ೧೦೨ ॥

ಅ ॥ ಭೀಷ್ಮಾಚಾರ್ಯರ ಹೆದರಿಕೆಯಿಂದ ಯಾವ ರಾಜರೂ ಕೂಡಾ ಆ ಮಾಲಿಕೆಯನ್ನು ಸ್ವೀಕರಿಸಲೇ ಇಲ್ಲ. ಆಮೇಲೆ ಆ ಅಂಬೆಯು ಆ ಮಾಲಿಕೆಯನ್ನು ದ್ರುಪದರಾಜನ ಮನೆಯ ಬಾಗಿಲಿನಲ್ಲಿ ಇಟ್ಟು ಯೋಗದಿಂದ ಶರೀರವನ್ನು ಬಿಟ್ಟಳು. ॥ ೧೦೨ ॥

ಮೂ ॥ ಏತಸ್ಮಿನ್ನೇವ ಕಾಲೇ ತು ಸುತಾರ್ಥಂ ದ್ರುಪದಸ್ತಪಃ ।
ಚಕಾರ ಶಂಭವೇ ಚೈನಂ ಸೋಽಬ್ರವೀತ್ಕನ್ಯಕಾ ತವ ॥ ೧೦೩ ॥
ಭೂತ್ವಾ ಭವಿಷ್ಯತಿ ಪುಮಾನಿತಿ ಸಾಂಬಾ ತತೋಽಜನಿ ।
ನಾಮ್ನಾ ಶಿಖಂಡಿನೀ ತಸ್ಯಾಃ ಪುಂವತ್ಕರ್ಮಾಣಿ ಚಾಕರೋತ್ ॥ ೧೦೪ ॥
ತಸ್ಮೈ ಚಾಂಚಾಲರಾಜಃ ಸ ದಶಾರ್ಣಾಧಿಪತೇಃ ಸುತಾಂ ।
ಉದ್ವಾಹಯಾಮಾಸ ಸ (ಸಾ) ತಾಂ ಪುಂವೇಷೇಣೈವ ಗೂಹಿತಾಂ
॥ ೧೦೫ ॥
ಅನ್ಯತ್ರ ಮಾತಾಪಿತ್ರೋಸ್ತು ನ ವಿಜ್ಞಾತಾಂ ಜುಬೋಧ ಹ ।
ಧಾತ್ರೈವ ನ್ಯವೇದಯತ್ಸಾಥ ತಚ್ಚಿತ್ರೇ ಸಾನ್ಯವೇದಯತ್ ॥ ೧೦೬ ॥

ಅ ॥ ಇದೇ ಕಾಲದಲ್ಲಿ ಆದರೂ ದ್ರುಪದರಾಜನು ಮಕ್ಕಳು ಪುಟ್ಟುವುದಕ್ಕಾಗಿ ರುದ್ರನನ್ನುದ್ದೇಶಿಸಿ ತಪಸ್ಸನ್ನು ಮಾಡಿದನು. ಆ ರುದ್ರನಾದರೂ ಈ ದ್ರುಪದರಾಜನನ್ನು ಕುರಿತ ನಿನಗೆ (ಆದಿಯಲ್ಲಿ) ಕನ್ನಿಕೆಯು ಪುಟ್ಟಿ (ಕಾಲಾಂತರದಲ್ಲಿ) ಪುರುಷನಾಗುವನು, ಎಂದು ಹೇಳಿದನು. ಆ ವರಪ್ರಾಪ್ತ್ಯನಂತರದಲ್ಲಿ ಆ ಅಂಬೆಯು ನಾಮದಿಂದ ಶಿಖಂಡಿನಿಯಾಗಿ (ದ್ರುಪದರಾಜನಿಂದ) ಹುಟ್ಟಿದಳು. ಪಾಂಚಾಲದೇಶಕ್ಕೆ ಅಧಿಪತಿಯಾದ ದ್ರುಪದರಾಜನು ಆ ಶಿಖಂಡಿನಿಗೆ ಗಂಡು ಮಕ್ಕಳಂತೆ ಬೌಲ ಉಪನಯನಾದಿ ಕರ್ಮಗಳನ್ನು ಮಾಡಿದನು. ಆ ರಾಜನು ಆ ಶಿಖಂಡಿನೀಗೊಸ್ಕರ ದಶಾರ್ಣದೇಶಕ್ಕೆ ಅಧಿಪತಿಯಾದ ಹಿರಣ್ಯವರ್ಮನ ಮಗಳನ್ನು ವಿವಾಹ ಮಾಡಿಸಿದನು. ಆ ಹಿರಣ್ಯವರ್ಮನ ಮಗಳು ಅವಳನ್ನು ಪುರಷವೇಷದಿಂದಲೇ ಅಚ್ಛಾದಿತಳಾದ, ತಂದೆತಾಯಿಗಳು ಹೊರತು ಬೇರೆಯವರಿಂದ (ನ ವಿಜ್ಞಾತಾಂ=) ಹೆಣ್ಣು ಎಂದು ತಿಳಿಯಲ್ಪಡದಿರುವ ಶಿಖಂಡಿನಿಯನ್ನು ತಿಳಿದಳು. (ಅಂದರೆ ಇವಳೂ ಕನ್ನಿಕೆಯೇ ಪುರುಷನಲ್ಲವೆಂದು ತಿಳಿದಳು.) ಆಮೇಲೆ ಹಿರಣ್ಯವರ್ಮನ ಮಗಳು ಉಪಮಾತೆಗೆ ತಿಳಿಸಿದಳ. ಆ ಉಪಮಾತೆಯು ಅವಳ ತಂದೆಯಾದ ಹಿರಣ್ಯವರ್ಮನಿಗೋಸ್ಕರ ತಿಳಿಸಿದಳು. ॥೧೦೩॥ ೧೦೪॥ ೧೦೫ ॥ ೧೦೬॥

ಮೂ ॥ ಸ ಕ್ರುದ್ಧಃ ಪ್ರೇಷಯಾಮಾಸ ನಿಹನ್ಮಿ ತ್ವಾಂ ಸಬಾಂಧವಂ ।
ಇತೀ ಪಾಂಚಾಲರಾಜಾಯ ನಿರ್ಜಗಾಮ ಚ ಸೇನಯಾ ॥ ೧೦೭ ॥

ಆ ॥ ಆ ಹಿರಣ್ಯವರ್ಮನು ಸಿಟ್ಟುಗೊಂಡವನಾಗಿ ಬಾಂಧವರಿಂದ ಕೂಡಿದ ನಿನ್ನನ್ನು ಕೊಲ್ಲುವೆನೆಂದು ಪಾಂಚಾಲರಾಜನಿಗೋಸ್ಕರ (ಕಾಂಚನವರ್ಮನೆನ್ನುವ ದೂತನನ್ನು) ಕಳುಹಿಸಿಕೊಟ್ಟನು. (ತಾನು) ಸೇನೆಯಿಂದ (ಕೂಡಿಕೊಂಡು) ಯುದ್ಧಕ್ಕಾಗಿ ಹೊರಟನು. ॥ ೧೦೭ ॥

ಮೂ ॥ ವಿಶ್ವಸ್ಯ ವಾಕ್ಯಂ ರುದ್ರಸ್ಯ ಪುಮಾನೇವೇತಿ ಹಾರ್ಷತಃ ।
ಪ್ರೇಷಯಾಮಾಸ ಧಿಗ್ಬುದ್ಧಿರ್ಭಿನ್ನಾ ತೇ ಬಾಲವಾಕ್ಯತಃ ।
ಅಪರೀಕ್ಷಕ(ಸ್ಯ) ತೇ ರಾಷ್ಟ್ರಂ ಕಥಮಿತ್ಯೇವ ನರ್ಮಕೃತ್ ॥ ೧೦೮ ॥

ಆ ॥ ಪೃಷತರಾಜನ ಮಗನಾದ ದ್ರುಪದನು ಪುರುಷನಾಗುವನು ಎನ್ನುವ ರುದ್ರನ ವಾಕ್ಯವನ್ನು ವಿಶ್ವಾಸಮಾಡಿಕೊಂಡು ನಿನ್ನ ಬುದ್ಧಿಯು ಬಾಲಕರ ವಾಕ್ಯದಿಂದ ನಷ್ಟವಾದುದು, ನಿನ್ನನ್ನು) ನಿಂದಿಸತಕ್ಕುದು. ಪರೀಕ್ಷಾರಹಿತನಾದ (ಅಂದರೆ ವಿಚಾರಶಕ್ತಿಯಿಲ್ಲದಿರುವ) ನಿನಗೆ ರಾಜ್ಯವು ಹೇಗೆ (ಯೋಗ್ಯವು.) ಹೀಗೆಯೇ ಹಾಸ್ಯವನ್ನು ಮಾಡುತ್ತಾ (ಶಿಖಂಡಿನಿಯು) ಪುರುಷನೇ ಎಂದು (ಹೇಳಿ ದೂತನನ್ನು ತಿರುಗಿ) ಕಳುಹಿಸಿಕೊಟ್ಟನು. ॥೧೦೮॥

ಮೂ ॥ ಅಥ ಭಾರ್ಯಾಸಮೇತಂ ತಂ ಪಿತರಂ ಚಿಂತಯಾಕುಲಂ ।
ದೃಷ್ಟ್ವಾ ಶಿಖಂಡಿನೀ ದುಃಖಾನ್ಮನ್ನಿಮಿತ್ತಾನ್ನ ನಶ್ಯತು ।
ಇತಿ ಮತ್ವಾ ವನಾಯೈವ ಯಯೌ ಯ(ತ)ತ್ರ ಚ ತುಂಬುರುಃ ॥
॥ ೧೦೯ ॥

ಆ ॥ ದೂತನನ್ನು ಕಳುಹಿಸಿಕೊಟ್ಟಮೇಲೆ ಶಿಖಂಡಿನಿಯು ಹೆಂಡತಿಯಿಂದ ಕೂಡಿದ, ಚಿಂತೆಯಿಂದ ಸಂಭ್ರಾಂತನಾದ ತಂದೆಯನ್ನು ನೋಡಿ ನನ್ನ ನಿಮಿತ್ತವಾಗಿ (ತಂದೆಯು) ನಾಶವನ್ನು ಹೊಂದಬಾರದು. ಹೀಗೆ ತಿಳಿದುಕೊಂಡು ದುಃಖದ್ವೇಷದಿಂದ ಯಾವ ವನದಲ್ಲಿ ತುಂಬುರು ನಾಮಕ ಗಂಧರ್ವನು (ಇದ್ದಾನೋ) ಆ ಕಾಡಿಗೋಸ್ಕರವೇ ಹೋದನು. ॥ ೧೦೯ ॥

ಕೆಲವು ಕಡೆ ಸ್ಥೂಣಾಕರ್ಣನೆಂದು ಹೆಸರುಳ್ಳವನು ಶಿಖಂಡಿನಿಗೋಸ್ಕರ ಶರೀರವನು ಕೊಟ್ಟನೆಂದು ಕಥೆಯು ಇದೆ. ಅದರ ತಾತ್ಪರ್ಯವನ್ನು ಹೇಳುತ್ತಾರೆ—

ಮೂ ॥ ಸ್ಥೂಣಾಕರ್ಣಾಭಿಧೇಯಸ್ತಾಮಪಶ್ಯದ್ದೃಢಕರ್ಣತಃ ।
ಸ ತಸ್ಯಾ ಅಖಿಲಂ ಶ್ರುತ್ವಾ ಕೃಪಾಂ ಚಕ್ರೇ ಮಹಾಮನಾಃ ॥ ೧೧೦ ॥

ಅ ॥ ದೃಢಗಳಾದ ಕಿವಿಗಳು ಇದ್ದ ಪ್ರಯುಕ್ತ ಸ್ಥೂಣಾಕರ್ಣನೆಂದು ಹೆಸರುಳ್ಳ ತುಂಬುರು ನಾಮಕ ಗಂಧರ್ವನು ಶಿಖಂಡಿನಿಯನ್ನು ಕಂಡನು. ಪ್ರಶಸ್ತವಾದ ಮನಸ್ಸುಳ್ಳ ಆ ತುಂಬುರು ನಾಮಕ ಗಂಧರ್ವನು ಶಿಖಂಡಿಯ ದೆಸೆಯಿಂದ ಎಲ್ಲಾ ಪೂರ್ವ ವೃತ್ತಾಂತವನ್ನು ಕೇಳಿ ಕೃಪೆಯನ್ನು ಮಾಡಿದನು. ॥ ೧೧೦ ॥

ಮೂ ॥ ① ಸ ತಸ್ಮೈ ಸ್ವಂ ವಪುಃಪ್ರಾದಾತ್ತದೀಯಂ ಜಗೃಹೇ ತದಾ(ಥಾ) ।
ಅಂಶೇನ ಪುಂಸ್ತ್ವ(ಸ್ವ)ಭಾವಾರ್ಥಂ ಪೂರ್ವದೇಹೇ ಸಮಾಸ್ಥಿತಃ ॥ ೧೧೧ ॥

ಪುಂಸಾಂ ಸ್ತ್ರೀತ್ವಂ ಭವೇತ್ಕ್ವಾಪಿ ತಥಾಪ್ಯಂತೇ ಪುಮಾನ್ಭವೇತ್ ।
ಸ್ತ್ರೀಣಾಂ ನೈವ ಹಿ ಪುಂಸ್ತ್ವಂ ಸ್ಯಾದ್ಬಲವತ್ಕಾರಣೈರಪಿ ॥ ೧೧೨ ॥

ಅ ॥ ಆ ತುಂಬುರುನಾಮಕ ಗಂಧರ್ವನು ಆ ಶಿಖಂಡಿನಿಗೋಸ್ಕರ ತನ್ನದ್ದಾದ ಪುರುಷ ದೇಹವನ್ನು ಕೊಟ್ಟನು. ಶಿಖಂಡಿನಿ ಸಂಬಂಧಿಯಾದ ಸ್ತ್ರೀ ಶರೀರವನ್ನು ಗಂಧರ್ವನು ಸ್ವೀಕರಿಸಿದನು. ಆಗ ಶಿಖಂಡಿನಿಗೋಸ್ಕರ ಕೊಟ್ಟ ಪೂರ್ವ ಶರೀರದಲ್ಲಿ ಪುಂಸ್ತ್ವದ ಪ್ರಾಪ್ತಿಗಾಗಿ ಒಂದು ಅಂಶದಿಂದ ಆ ಗಂಧರ್ವನು ಅಧಿಷ್ಠಿತನಾದನು. (ಹಾಗಾದರೆ ಗಂಧರ್ವನು ಪುಣ್ಯ ಪ್ರಾಪ್ತಿಗಾಗಿ ಶಿಖಂಡಿನಿಗೆ ಕೊಟ್ಟ ಶರೀರದಲ್ಲಿ ಪುನಃ ಅಂಶದಿಂದ ಏಕೆ ಅಧಿಷ್ಠಿತನಾದನು ಎಂದರೆ) ಪುರುಷರಿಗೆ ಎಲ್ಲಿಯಾದರೂ (ಶಾಪಾದಿ ನಿಮಿತ್ತದಿಂದ) ಸ್ತ್ರೀ ರೂಪ ಬರಬಹುದು. ಆದಾಗ್ಯೂ ಸ್ತ್ರೀತ್ವ ಪ್ರಾಪ್ತಿಗೆ ಕಾರಣವಾದ ಶಾಪಾದಿಗಳು ಸಮಾಪ್ತಿಯಾಗುವಾಗ (ಮೊದಲಿನಂತೆ) ಪುರುಷನು ಆಗುವನು. ಸ್ತ್ರೀಜೀವರಿಗೆ ಪ್ರಬಲ ಕಾರಣಗಳಿಂದಲೂ (ದೇವತಾವರ, ಉತ್ಕೃಷ್ಟ ಪುಣ್ಯಾದಿ ಕಾರಣಗಳಿಂದಲೂ) ಪುರುಷತ್ವವು ಯಾವ ಕಾರಣದಿಂದ ಬರಲಿಕ್ಕೇನೇ ಇಲ್ಲವೋ (ಆದಕಾರಣ, ಪುಂಸ್ತ್ವ ಬರುವುದಕ್ಕಾಗಿ ಪೂರ್ವದೇಹದಲ್ಲಿ ಗಂಧರ್ವನು ಅಧಿಷ್ಠಿತನಾದನು.)

ವಿಶೇಷಾಂಶ—ಸ್ತ್ರೀಯರಿಗೆ ಪುಂಭಾವವು ಪುರುಷರ ಅಂಶವಿಲ್ಲದೆ ಬರಲಾರದು. ಪುರುಷರಿಗಾದರೂ ಸ್ತ್ರೀತ್ವವು ಸ್ತ್ರೀಯ ಅಂಶವಿಲ್ಲವಾದರೂ ಅರ್ಜುನಾದಿಗಳಂತೆಯೇ ತಮ್ಮ ಸ್ವಭಾವದಿಂದಲೇ ಉಪಪನ್ನವಾಗುತ್ತದೆ. ॥ ೧೧೦ ॥ ೧೧೨ ॥

ಮೂ ॥ ಅತಃ ಶಿವವರೇಽಪ್ಯೇಷಾ ಜಜ್ಞೇ ಯೋಷೈವ ನಾನ್ಯಥಾ ।
ಪಶ್ಚಾಚ್ಚ ಪುಂತನುಂ ಸೈಷಾ ಪ್ರವಿವೇಶೈವ ಪುಂಯುತಾಂ ॥ ೧೧೩ ॥
ನಾಸ್ಯಾ ದೇಹಃ ಪುಂಸ್ತ್ವಮಾಪ ನ ಚ ಪುಂಸಾನಧಿಷ್ಠಿತೇ ।
ಪುಂದೇಹೇ ನ್ಯವಸತ್ಸಾಥ ಗಂಧರ್ವೇಣ ತ್ವಧಿಷ್ಠಿತೇ(ತಂ) ।
ಗಾಂಧರ್ವಂ ದೇಹಮಾವಿಶ್ಯ ಸ್ವಕೀಯಂ ಭವನಂ ಯಯೌ ॥ ೧೧೪ ॥

ಅ ॥ ಮೊದಲು ನಿನಗೆ ಹೆಣ್ಣು ಮಗುವು ಹುಟ್ಟಿ ಮತ್ತೆ ಆ ಹೆಣ್ಣೇ ಗಂಡಾಗುವುದು ಎಂದು ರುದ್ರನ ವರವಿದ್ದರೂ ಸ್ತ್ರೀಯರಿಗೆ ಪುರುಷತ್ವವಿಲ್ಲದಿರುವುದರಿಂದ ಈ ಅಂಬೆಯು ಸ್ತ್ರೀಯಾಗಿಯೇ ಹುಟ್ಟಿದಳು. ಬೇರೆ ಪ್ರಕಾರವಾಗಲಿಲ್ಲ, (ಅಂದರೆ ಅಂಬೆಗೆ ಪುರುಷತ್ವವು ಶಿವವರದಿಂದಲೂ ಬರಲಿಲ್ಲ. ಇನ್ನು ಮುಂದೆಯೂ ಬರುವುದಿಲ್ಲವೆನ್ನುತ್ತಾರೆ) ಭವಿಷ್ಯತ್ಕಾಲದಲ್ಲಿಯೂ (ಸಾ=)ಶಿಖಂಡಿನಿಯು ಪುರುಷನು ಆಗುವನು ಎಂದು ರುದ್ರನ ವರಪ್ರಸಾದವುಳ್ಳ, ಈ ಕನ್ನಿಕೆಯು ಪುರುಷನಿಂದ ಕೂಡಿದ ಪುರುಷನ ಶರೀರವನ್ನೇ ಪ್ರವೇಶ ಮಾಡಿದಳು. (ತಾನೇ ಪುರುಷನಾಗಿ ಹುಟ್ಟಲಿಲ್ಲ.) ಈ ಶಿಖಂಡಿನಿಯ (ಗಂಧರ್ವನಿಂದ ಸ್ವೀಕೃತವಾದ ಸ್ತ್ರೀ) ಶರೀರವು (ಪುರುಷ ರೂಪನಾದ ಅರ್ಜುನನ ಶರೀರವು ಶಾಪದಿಂದ ಸ್ತ್ರೀತ್ವವನ್ನು ಹೊಂದಿದಂತೆಯೇ) ಪುರುಷತ್ವವನ್ನು (ಶಿವವರದಿಂದಲೂ) ಹೊಂದಲೇ ಇಲ್ಲ. (ಮತ್ತೆ ತನ್ನ ಸ್ತ್ರೀ ಶರೀರವನ್ನು ಮತ್ತೊಬ್ಬನಿಗೆ ಕೊಟ್ಟು ಅವನ ಪುರುಷ ದೇಹವನ್ನೇ ತಾನು ಹೊಂದಿದಳು.) ಪುರುಷರಿಂದ ಅವಸ್ಥಿತಿ ರಹಿತವಾದ ಪುರುಷನ ಶರೀರದಲ್ಲಿ (ತನ್ನ ಶಕ್ತಿಯಿಂದ), ಆವಾಸ ಮಾಡಲಿಲ್ಲ. ಮತ್ತೆ ಪುರುಷಾಧಿಷ್ಠಿತವಾದ ಪುರುಷ ಶರೀರದಲ್ಲಿಯೇ ಆವಾಸಮಾಡಿದಳು.) ಆಮೇಲೆ ಆ ಶಿಖಂಡಿಯು ತುಂಬುರ್ಯ ನಾಮಕ ಗಂಧರ್ವನಿಂದ (ತು=) ಪುರುಷರಂತೆ ಸ್ಥೈರ್ಯ ಧೈರ್ಯ ಗಂಭೀರಸ್ವರ, ಉದ್ಧತ ವಚನ ಮೊದಲಾದ ಕಾರ್ಯವಿಶೇಷ ಹೇಗೆ ಆಗುವುದೋ ಹಾಗೆ, ಇಲ್ಲವಾದರೆ **'ಶಿಖಂಡೀ ಚ ಮಹಾರಥಃ'** ಎನ್ನುವಲ್ಲಿ ಹೇಳಿದ ಶಿಖಂಡಿತ್ವ ಮಹಾರಥತ್ವಗಳು ಕೂಡದೆ ಹೋಗಬೇಕಾಗುವವು. ಆದಕಾರಣ ಗ್ರಂಥಲಾಘವಕ್ಕಾಗಿ ಅವ್ಯಯಗಳಿಂದಲೇ ಸರ್ವರ ಶಂಕೆಗಳನ್ನು ಪರಿಹರಿಸಿರುವರು. (ತು=) ಗುಹ್ಯೇಂದ್ರಿಯ ವ್ಯಾಪಾರಭಾವಾಖ್ಯ ಕಾರ್ಯ ವಿಶೇಷವು ಹೇಗೆ ಆಗುವುದೋ ಹಾಗೆ ಅಧಿಷ್ಠಿತವಾದ ಗಂಧರ್ವ ಸಂಬಂಧಿಯಾದ ಪುರುಷ ಶರೀರವನ್ನು ಪ್ರವೇಶಮಾಡಿ ತನ್ನ ಮನೆಗೆ ಹೋದಳು. (ಆದಕಾರಣ ಈ ಪುರುಷ ದೇಹವು ಗಂಧರ್ವನದ್ದೇ. ಈ ಶಿಖಂಡಿಗಾದರೂ ಗೃಹಸ್ಥನ ಮನೆಯನ್ನು ಪ್ರವೇಶ ಮಾಡಿದ ಭಿಕ್ಷುಕನಂತೆಯೇ ಅವಸ್ಥಿತಿ ಮಾತ್ರವು. ಆದಕಾರಣ ಸನ್ಯಾಸಿಗಳಿಗೆ ಗೃಹಸ್ಥತ್ವವು ಹೇಗೆ ಬರಲಾರದೋ ಹಾಗೆಯೇ ಸ್ತ್ರೀಯರಿಗೆ ಪುರುಷತ್ವವು ಬರಲಾರದು.)

ವಿಶೇಷಾಂಶ—(1) ಆದಕಾರಣ ಪ್ರಬಲ ಕಾರಣಗಳಿಂದಲೂ ಸ್ತ್ರೀಯರಿಗೆ ಪುರುಷತ್ವವು ಬರಲಿಕ್ಕೇನೇ ಇಲ್ಲವೆಂದು ನಿಯಮವು ಸುಸ್ಥವಾಯಿತು. (2) ಸ್ತ್ರೀಯರಿಗೆ ಸ್ತ್ರೀತ್ವವು ಬರಲಿಕ್ಕೆ ವರದ ಅಪೇಕ್ಷೆಯಿಲ್ಲದಿರುವುದರಿಂದಲೂ, ಸ್ತ್ರೀಯರಿಗೆ ಪುಂಸ್ತ್ವವು ಯಾವಾಗಲೂ ಬಾರದಿರುವುದರಿಂದಲೂ ಪುರುಷನಿಂದ ಅಧಿಷ್ಠಿತವಾದ ಪುರುಷದೇಹದಲ್ಲಿ ಪ್ರವೇಶವು ತುಂಬುರುವಿನ ಪ್ರಸಾದದಿಂದಲೇ ಆಗಿರುದವುರಿಂದಲೂ ಅತಿ ಬಲಿಷ್ಠವಾದ ರುದ್ರನ ವರವೂ ಕೂಡ 'ಸ್ತ್ರೀಯರಿಗೆ ಪುರುಷತ್ವವು ಬರುವುದಿಲ್ಲವೆಂದು ಯಾವ ನಿಯಮದಿಂದ ವ್ಯರ್ಥವಾಗಿ ಮಾಡಲ್ಪಟ್ಟಿತೋ ಅಂತಹ ನಿಯಮಕ್ಕೆ ಯಾವಾಗಲೂ ಯಾವುದರಿಂದಲೂ ಭಂಗವಿಲ್ಲವೆಂದು ವಿಶಿಷ್ಟ ವಾಕ್ಯ ಸಮುದಾಯದ ಅರ್ಥವು (3) ಶ್ರುತಿಯು" **ಸ್ತ್ರೀಯಃ ಸತೀಸ್ತಾಂ ಉ ಮೇ ಪುಂಸ ಆಹುಃ । ಪಶ್ಯದಕ್ಷಂ ಚಾನ ವಿಚೇತದಂಧಃ ಕವಿರ್ಯಃ ಪುತ್ರಃ ಸ ಇಮಾ ಚಿಕೇತ ಯಸ್ತಾ ವಿಜಾನಾತ್ ಸ ಪಿತುಃ ಪಿತಾ ಸತ್**"॥ ಎಲೋ ವಾಮನನೇ ಸ್ತ್ರೀಯರಿಗೆ ಬಿಂಬರೂಪವಾದ ಯಾವವು ಸ್ತ್ರೀದೇಹಗಳು ಇರುತ್ತವೋ, ವಾಗೀಶ್ವರೀ ನಾರಾಯಣೀ ಮೊದಲಾದ ಯಾವವು ಸ್ತ್ರೀದೇಹಗಳು ನಿನಗೆ ಇರುತ್ತವೋ ಅವುಗಳನ್ನೇ ವೇದಾರ್ಥ ತತ್ವಜ್ಞರಾದ ವ್ಯಾಸಾದಿಗಳು ಪುರುಷರೂಪಗಳನ್ನಾಗಿ ಹೇಳುತ್ತಾರೆ. ಆವುದರಿಂದಲೇ ಕಟಾಕ್ಷವಿಕ್ಷೇಪಮಾತ್ರದಿಂದಲೇ ಜಗತ್ಸೃಷ್ಟ್ಯಾದಿಗಳಲ್ಲಿ ಸಮರ್ಥಳಾದಾಗ್ಯೂ ರಮಾದೇವಿಗೆ ಅಕ್ಷರಃ ಎಂದು ಪುಲ್ಲಿಂಗ ವಾಚ್ಯತ್ವದಲ್ಲಿ **'ಪುಂವಚ್ಛಕ್ತಿಯುತಾಂಯತಃ'** ಎಂದು ಪುರುಷರಂತೆ ಶಕ್ತಿಯಿದೆ ಎಂದೇ ಹೇಳಿಯುದೆ. ಪುರುಷರೂಪವಿದೆ ಎಂದು ಹೇಳಲಿಲ್ಲ. ಹಾಗಾ

ದರೆ ಸ್ತ್ರೀಯರಿಗೆ ಪುಂ ರೂಪವಿಲ್ಲವಾದರೂ ಪುರುಷರಾದ ಅರ್ಜುನಾದಿಗಳಿಗೆ ಸ್ತ್ರೀರೂಪವೂ ಕೂಡ ಅಲ್ಲಲ್ಲಿ ಹೇಳಿಯುದೆ. ಆದಕಾರಣ ಸ್ತ್ರೀ ರೂಪಗಳಿಗೇನೇ ಪುರುಷರೂಪತ್ವವು ಶ್ರೀಹರಿಗೇನೇ ಎನ್ನುವುದು ಹೇಗೆಂದರೆ— ಶಾಪದಿಂದಾಗಲೀ ವರದಿಂದಾಗಲೀ ಪುರುಷರಿಗೆ ಸ್ತ್ರೀರೂಪತ್ವವು ತಮ್ಮ ಶಕ್ತಿಯಿಂದ ಅಲ್ಲ ಶ್ರೀಹರಿಗಾದರೂ ಸ್ವಾಭಾವಿಕವಾಗಿ ಶಕ್ತಿಗಳಿರಡೂ ಇವೆ ಎಂದು ಶ್ರುತಿಯ ಅಭಿಪ್ರಾಯವು. ಆದುದರಿಂದಲೇ ಶ್ರೀಹರಿಯು ದೈತ್ಯರನ್ನು ಮೋಹಿಸಿ ಅಮೃತವನ್ನು ತರಲಿಕ್ಕೆ ಶಾಪವರಗಳು ಇಲ್ಲದಿದ್ದರೂ ತತ್‌ಕ್ಷಣವಲ್ಲಿಯೇ ನಾರಾಯಣೀ ರೂಪವನ್ನು ಧರಿಸಿದನು. ಆದಕಾರಣ ಸಹಜ ಶಕ್ತಿಯಿಂದ ಪುಂಭಾವವು ಸ್ತ್ರೀಭಾವವೂ ಶ್ರೀಪರಮಾತ್ಮನದ್ದೇ ಮಹಿಮೆಯೆಂದು ಸಿದ್ಧಿಸುವುದು, (4) ಇಂತಹ ಶ್ರೀಹರಿಯ ಶ್ರೀರೂಪಗಳನ್ನು ನೋಡತಕ್ಕ ಪುರುಷನೇ ಇಂದ್ರಿಯವುಳ್ಳವನು. ಅಂದರೆ ಆ ರೂಪಗಳನ್ನು ನೋಡಿದರೇನೇ ಇಂದ್ರಿಯಗಳು ಸಫಲಗಳಾಗುತ್ತವೆ. ಮತ್ತು ನಿನ್ನ ಸ್ತ್ರೀರೂಪಗಳನ್ನು ಜೀವರಲ್ಲಿ ಸರ್ವಥಾ ಕೂಡದಿರುವ ಪುಂಭಾವ ಶಕ್ತ್ಯಾಖ್ಯ ವಿಶೇಷದಿಂದ ಯುಕ್ತಗಳನ್ನಾಗಿ ತಿಳಿಯದೆ ಇದ್ದವನು ಅಂಧನು, ಸರ್ವಜ್ಞನಾದ ನಮ್ಮ ಬ್ಬರ ಮಗನಾದ ಬ್ರಹ್ಮನೇ ಈ ರೂಪಗಳನ್ನು ತಿಳಿಯಲಿಕ್ಕೆ ಸಮರ್ಥನು. ಯಾವ ಬ್ರಹ್ಮನು ಅವುಗಳನ್ನು ವಿಶೇಷವಾಗಿ ತಿಳಿದಿರುವನೋ. ಮತ್ತು ತಿಳಿಸಿರುವನೋ ಅಂತಹ ಬ್ರಹ್ಮನು ಜನಕನಾದ ನಿನಗೆ ಜನಕನಾದನು. ಅಂದರೆ ಜಗತ್ತಿನಲ್ಲಿ ಅಸಜ್ಜನರು ಶ್ರೀಹರಿಯು ನಿರಾಕಾರನು, ನಿರ್ಗುಣನು, ಇತ್ಯಾದಿ ಪ್ರಕಾರ ನಿರೂಪಿಸಿರುವುದರಿಂದ ಅವಿದ್ಯಮಾನಪ್ರಾಯನಾಗಿ ಮಾಡಲ್ಪಟ್ಟ ಶ್ರೀಹರಿಯನ್ನು ತನ್ನ ಮತ್ತೊಂದುರೂಪವಾದ ಮಧ್ವಾಖ್ಯ ಅವತಾರದಿಂದ 'ಶ್ರೀಹರಿಯು ದಿವ್ಯವಾದ ಸ್ತ್ರೀರೂಪವನ್ನು ಹೊಂದಿ ತತ್‌ಕ್ಷಣದಲ್ಲಿಯೇ ಪುರುಷನಾವನು ಎಂದು ಸ್ತ್ರ್ಯಾತ್ಮಕ ಪುರುಷಾತ್ಮಕ ವಿಚಿತ್ರಾಕಾರವುಳ್ಳವನೆಂದು ನಿರೂಪಿಸಿ ಶ್ರೀಹರಿಗೆ ಅಸಾಧಾರಣವಾದ ಸ್ತ್ರೀರೂಪವನ್ನು ಪುರುಷರೂಪವನ್ನು ಗ್ರಹಿಸತಕ್ಕ ಶಕ್ತಿಯನ್ನು ಜೀವರಲ್ಲಿ ಸರ್ವಥಾ ಅವಿದ್ಯಮಾನವಾಮುದನ್ನು ಪ್ರಕಟೀಕರಿಸಿದನು. ಅಂತೂ ಬ್ರಹ್ಮಾದಿ ಜೀವರಲ್ಲಿ ಇಂತಹ ಶಕ್ತಿಯು ಸರ್ವಥಾ ಕೂಡಲಾರದು ಎಂದು ಲಕ್ಷ್ಮಿಯ ಅಭಿಪ್ರಾಯವು. ॥ ೧೧೩ ॥ ೧೧೪ ॥

ಹಾಗಾದರೆ ಗಂಧರ್ವನ ಶರೀರವನ್ನು ಪ್ರವೇಶಮಾಡಿ ಶಿಖಂಡಿನಿಯು ಹೋದಳು ಎಂದುಕ್ತವಾಯಿತು, ಹಾಗಾದರೆ ಶ್ವಶುರಾದಿಗಳಿಗೆ ಗಂಧರ್ವನ ಶರೀರವನ್ನು ಸ್ವೀಕರಿಸಿದವನಲ್ಲಿ ಶಿಖಂಡಿನಿಯು ಎಂದು ಪ್ರತೀತಿಯು ಹೇಗೆ ಬಂತು ಎಂದರೆ—

ಮೂ ॥ ತಸ್ಯಾಸ್ತ್ವದೇಹಸಾದೃಶ್ಯಂ ಗಂಧರ್ವಸ್ಯ ಪ್ರಸಾದತಃ ।
ಪ್ರಾಪ ಗಂಧರ್ವದೇಹೋऽಪಿ ತಯಾ ಪಶ್ಚಾದಧಿಷ್ಠಿತಃ ॥ ೧೧೫ ॥
ಶ್ವೋ ದೇಹಿ ಮಮ ದೇಹಂ ಮೇ ಸ್ವಂ ಚ ದೇಹಂ ಸಮಾವಿಶ ।
ಇತ್ಯುಕ್ತ್ವಾ ಸ ತು ಗಂಧರ್ವಃ ಕನ್ಯಾದೇಹಂ ಸಮಾಸ್ಥಿತಃ ॥ ೧೧೬ ॥

ಅ ॥ ಆ ಶಿಖಂಡಿನಿಗೆ(ತದ್ದೇಹಸಾದೃಶ್ಯಂ=) ತನ್ನ ಮೊದಲಿನ ಶರೀರದಲ್ಲಿ ಹೇಗೆ ತನ್ನದು ಎಂದು ಅಭಿಮಾನವಿತ್ತೋ ಹಾಗಯೇ ಪರಕೀಯ ಶರೀರದಲ್ಲಿಯೂ ಮಮತೆಯು ತುಂಬುರು ನಾಮಕ ಗಂಧರ್ವನ ಪ್ರಸಾದದಿಂದ (ಉಂಟಾಯಿತು.) ಶಿಖಂಡಿನಿಯಿಂದ ಅಧಿಷ್ಠಿತವಾದ ಗಂಧರ್ವ ಶರೀರವೂ ಕೂಡ ಶಿಖಂಡಿನಿಗೆ ಪ್ರಯೋಜನವಾದ ಮೇಲೆ ಗಂಧರ್ವನನ್ನೇ ಹೊಂದಿತು. (ಜನಾರ್ದನ ಭಟ್ಟೀಯ)ಶಿಖಂಡಿನಿಯಿಂದ ಆಮೇಲೆ ಪ್ರವೇಶಿಸಿಕೊಳ್ಳಲ್ಪಟ್ಟ. ಗಂಧರ್ವನ ಶರೀರವೂ ಕೂಡ ಗಂಧರ್ವನ ಅನುಗ್ರಹದಿಂದ ಆ ಶಿಖಂಡಿನಿಯ ಮೊದಲಿನ ಶರೀರದಿಂದ ಸದೃಶತ್ವ

ವನ್ನು ಹೊಂದಿತು; (ಅಂದರೆ ಗಂಧರ್ವಾಂಶದಿಂದ ಯುಕ್ತವಾದ ಗಂಧರ್ವ ಶರೀರವು ಶಿಖಂಡಿನಿಯಿಂದ ಅನಂತರದಲ್ಲಿ ಅಧಿಷ್ಠಿತವಾಯಿತು.) ನಾಳೆ ನನ್ನ ಪುರುಷ ಶರೀರವನ್ನು ನನಗೆ ಕೊಡು ನಿನ್ನ ಸ್ತ್ರೀ ಶರೀರವನ್ನು (ನೀನು) ಪ್ರವೇಶವಾಡು. ಈ ಪ್ರಕಾರ ಹೇಳಿ ಆ ಗಂಧರ್ವನಾದರೂ ಶಿಖಂಡಿನಿಯ ಸ್ತ್ರೀ ಶರೀರವನ್ನು ಹೊಂದಿದನು. ॥ ೧೧೫-॥ ೧೧೬ ॥

ಮೂ ॥ ಉವಾಸೈವ ವನೇ ತಸ್ಮಿನ್ ಧನದಸ್ತತ್ರ ಚಾಗಮತ್ ।
ಅಪ್ರತ್ಯುತ್ಥಾಯಿನಂ ತಂ ತು ಲೀಯಮಾನಂ ವಿಲಜ್ಜಯಾ ॥ ೧೧೭ ॥
ಶಶಾಪ ಧನದೋ ದೇವಶ್ಚಿರವಿತ್ಥಂ ಭವೇತಿ ತಂ ।
ಯದಾ ಯುದ್ಧೇ ಮೃತಿಂ ಯಾತಿ ಸಾ ಕನ್ಯಾ ಪುಂತನುಸ್ಥಿತಾ ॥ ೧೧೮ ॥
ತದಾ ಪುಂಸ್ತ್ವಂ ಪುನರ್ಯಾಸಿ ಚಪಲತ್ವಾದಿತೀರಿತಃ ॥ ೧೧೯ ॥

ಅ ॥ (ಗಂಧರ್ವನು) ಆ ವನದಲ್ಲಿಯೇ ಆವಾಸವಾಡಿಕೊಂಡಿದ್ದನು, ಅಲ್ಲಿಗೆ ಕುಬೇರನು ಬಂದನು, (ಕುಬೇರನು ಬಂದಾಗ) ಎದ್ದು ನಿಂತುಕೊಳ್ಳದಿರುವ ಮತ್ತು ನಾಚಿಗೆಯಿಂದ (ತಂತು ಲೀಯಮಾನಂ=) ಸ್ಥೂಲಗಳಾದ ಹುಲ್ಲುಂಗಳ ಗುಂಪುಗಳಲ್ಲಿ ಅಡಗಿರುವ ಆ ತುಂಬುರು ನಾಮಕ ಗಂಧರ್ವನನ್ನು ಬಹುಕಾಲ ಹೀಗೆಯೇ ಸ್ತ್ರೀ ದೇಹವುಳ್ಳವನಾಗು ಎಂದು ಕುಬೇರನು ಶಾಪ ಕೊಟ್ಟನು ಪುರುಷ ಶರೀರದಲ್ಲಿರತಕ್ಕ ಆ ಕನ್ನಿಕೆಯು ಯುದ್ಧದಲ್ಲಿ (ಅಂದರೆ ಶಿಬಿರದಲ್ಲಿ ರಾತ್ರಿ ಕಾಲದಲ್ಲಿ ಅಶ್ವತ್ಥಾಮನಿಂದ ಕೂಡಿಕೊಂಡು ಯುದ್ಧದಲ್ಲಿ) ಯಾವಾಗ (ಖಡ್ಗದಿಂದ) ಮರಣವನ್ನು ಹೊಂದುತ್ತಾಳೋ, ಆ ಕ್ಷಣದಲ್ಲಿಯೇ, (ಚಪಲತ್ವಾತ್=) ಅಕಾರ್ಯಕರ್ಮಕರಣರೂಪವಾದ ಚಾಂಚಲ್ಯದೋಷದಿಂದ ಶಿಖಂಡಿನಿಗೆ ನೀನು ಕೊಟ್ಟ ಶರೀರವು ಚಂಚಲವಾಗಿರುವುದರಿಂದ (ಅಂದರೆ ಸ್ವಾಭಾವಿಕವಾಗಿ ಶಿಖಂಡಿನಿಯ ಶರೀರವಾಗದೆ ಇರುವುದರಿಂದ) ಅಥವಾ ದೇಹದಾನಾದಿ ಸಾಮರ್ಥ್ಯವಿಶೇಷವಿದ್ದ ಪ್ರಯುಕ್ತ ನಿನ್ನ ಪುರುಷ ಶರೀರವನ್ನು ಪುನಃ ಹೊಂದುತ್ತಿ, ಎಂದು (ಗಂಧರ್ವನು) ಹೇಳಿಸಿಕೊಳ್ಳಲ್ಪಟ್ಟನು.

ವಿಶೇಷಾಂಶ—(1) ತಮ್ಮ ತಮ್ಮ ಯೋಗ ಸಾಮರ್ಥ್ಯದಿಂದ ಶಿಖಂಡಿನಿಯು "ಸ್ವಭಾವ" ಭೂತವಾದ ಈ ಸ್ತ್ರೀ ದೇಹದಲ್ಲಿ ಶಿಖಂಡಿನಿಯನ್ನು ಪ್ರವೇಶ ಮಾಡಿಸಿ ನಿನ್ನ ಸ್ವಭಾವಭೂತವಾದ ಗಂಧರ್ವ ಸಂಬಂಧಿಯಾದ ಪುರುಷಶರೀರವನ್ನು ಯೋಗಶಕ್ತಿಯಿಂದ ಪುನಃ ತೆಗೆದುಕೊಂಡು ನೀನು ಅಲ್ಲಿ ಸುಖವಾಗಿರು. ॥ ೧೧೭ ॥ ೧೧೮ ॥ ೧೧೯ ॥

ಮೂ ॥ ತಥಾವಸತ್ ಸ ಗಂಧರ್ವಃ ಕನ್ಯಾಪಿತ್ರೋರಶೇಷತಃ ।
ಕಥಯಾಮಾಸಾನುಭೂತಂ ತೌ ಭೃಶಂ ಮುದಮಾಪತುಃ ॥ ೧೨೦ ॥

ಅ ॥ ಆ ತುಂಬುರುನಾಮಕ ಗಂಧರ್ವನು ಹಾಗೆಯೇ (ಅಂದರೆ ಸ್ತ್ರೀ ಶರೀರದಿಂದ ಕೌರವರಿಗೂ ಪಾಂಡವರಿಗೂ ಯುದ್ಧವು ಸಮಾಪ್ತಿಯಾಗುವ ತನಕ) ನಿವಾಸ ಮಾಡಿಕೊಂಡಿದ್ದನು. ಶಿಖಂಡಿನಿಯು ಮಾತಾಪಿತೃಗಳಿಗೆ ಅನುಭೂತವಾದುದೆಲ್ಲವನ್ನೂ ಹೇಳಿದಳು. ಆ ಮಾತಾಪಿತೃಗಳು ಅತ್ಯಂತವಾಗಿ ಸಂತೋಷವನ್ನು ಹೊಂದಿದರು. ॥ ೧೨೦ ॥

ಮೂ ॥ ಪರೀಕ್ಷ್ಯತಾಮೆಷೋಪಾಯೈಸ್ತು(ಶ್ಚ)ಶ್ವಶುರೋ ಲಜ್ಜಿತೋ ಯಯೌ ॥ ೧೨೧ ॥
ಶ್ವೋಭೂತೇ ಸಾ ತು ಗಂಧರ್ವಂ ಪ್ರಾಪ್ಯ ತದ್ವಚನಾತ್ಪುನಃ ।
ಯಯೌ ತೇನೈವ ದೇಹೇನ ಪುಂಸ್ತ್ವಮೇವ ಸಮಾಶ್ರಿತಾ ॥ ೧೨೨ ॥
ಸ ಶಿಖಂಡೀ ನಾಮತೋಽಭೂದಸ್ತ್ರಶಸ್ತ್ರಪ್ರತಾಪವಾನ್ ॥ ೧೨೩ ॥

ಅ ॥ ಶಿಖಂಡಿನಿಯಂನ್ನಾದರೂ ಪುಂಸ್ತ್ವ ಜ್ಞಾಪಕ ಉಪಾಯಂಗಳಿಂದ ಶ್ವಶುರನಾದ ಹಿರಣ್ಯವರ್ಮನು ಪುರುಷನೆಂದು ಪರೀಕ್ಷಿಸಿ ನಾಚಿಗೆ ಪಟ್ಟವನಾಗಿ ಹೋದನು, ಮರುದಿವಸ ಆ ಶಿಖಂಡಿನಿಯಾದರೂ ಗಂಧರ್ವನನ್ನು ಹೊಂದಿ ಆತನ ವಾತಿನಿಂದ(ಅಂದರೆ ಮರಣ ಪರ್ಯಂತವಾಗಿ,ನನ್ನ ಪುಂಶರೀರದಲ್ಲಿ ನೀನು ಇರು. ನಿನ್ನ ಸ್ತ್ರೀ ಶರೀರವು ನನಗೆ ಇರಲಿ, ಈ ಪ್ರಕಾರವಾದ ತುಂಬುರುನಾಮಕ ಗಂಧರ್ವವಚನದ್ವೈಸೆಯಿಂದ) ಪುನಃ ಆ ಪುಂಶರೀರದಿಂದಲೇ (ತನ್ನ ಮನೆಗೆ) ಹೋದಳು, ಪುರುಷತ್ವವನ್ನೇ ಹೊಂದಿರುತ್ತಾಳೆ. ಆದಾವ, ಶಿಖಂಡಿನಿಯಿಂದ ಅಭಿಮನ್ಯಮಾನವಾದ ಗಂಧರ್ವಾಂಶದಿಂದ ಕೂಡಿದ ಗಂಧರ್ವದೇಹವು ನಾಮತಃ ಶಿಖಂಡಿಯಿಂದು ಆಯಿತು. ಮತ್ತು ಆತನು ಅಸ್ತ್ರವಿದ್ಯೆಯಲ್ಲಿಯೂ, ಶಸ್ತ್ರವಿದ್ಯೆಯಲ್ಲಿಯೂ ಪ್ರತಾಪವುಳ್ಳವನೂ ಆದನು. ॥ ೧೨೧ ॥ ೧೨೨ ॥ ೧೨೩ ॥

ಪ್ರಸಂಗಸಂಗತಿಯಿಂದ ಪ್ರಾಪ್ತವಾದ ಕಥೆಯನ್ನು ಹೇಳಿ ಪ್ರಕೃತವಾದ ಕಥೆಯನ್ನು ಹೇಳುತ್ತಾರೆ—

ಮೂ ॥ ವಿಚಿತ್ರವೀರ್ಯಃ ಪ್ರಮದಾದ್ವಯಂ ತತ್
ಸಂಪ್ರಾಪ್ಯ ರೇಮೇಽಬ್ದಗಣಾನ್ ಸುಸಕ್ತಃ ।
ತತ್ಯಾಜ ದೇಹಂ ಚ ಸ ಯಕ್ಷ್ಮಣಾರ್ದಿತಃ
ತತೋಽಸ್ಯ ಮಾತಾಸ್ಮರದಾಶು ಕೃಷ್ಣಂ ॥ ೧೨೪ ॥

ಅ॥ ಶಂತನುಚಕ್ರವರ್ತಿಯಂ ಮಗನಾದ ವಿಚಿತ್ರವೀರ್ಯರಾಜನು ಹಿಂದೆ ಹೇಳಿದ ಅಂಬಿಕಾ ಅಂಬಾಲಿಕಾ ಎನ್ನುವ ಇಬ್ಬರು ಸ್ತ್ರೀಯರನ್ನು ಹೊಂದಿ ಚಿನ್ನಾಗಿ ಆಸಕ್ತನಾಗಿ ಅನೇಕಾನೇಕ ಸಂವತ್ಸರಗಳಲ್ಲಿ ಕ್ರೀಡಿಸುತ್ತಾ ಇದ್ದನು. • ಯಕ್ಷ್ಮಣಾ = ಕ್ಷಯರೋಗದಿಂದ ಪೀಡಿಸಿಕೊಳ್ಳಲ್ಪಟ್ಟ ಆ ವಿಚಿತ್ರವೀರ್ಯರಾಜನು ಶರೀರವನ್ನು ಬಿಟ್ಟನು. ಆಮೇಲೆ ತತ್ಕ್ಷಣದಲ್ಲಿಯೇ ಈ ವಿಚಿತ್ರವೀರ್ಯನ ತಾಯಿಯಾದ ಸತ್ಯವತೀ ದೇವಿಯಂ ಶ್ರೀ ವೇದವ್ಯಾಸ ದೇವರನ್ನು ಸ್ಮರಿಸಿದಳು. ॥ ೧೨೪ ॥

ಮೂ ॥ ಆವಿರ್ಬಭೂವಾಶು ಜಗಜ್ಜನಿತ್ರೋ
ಜನಾರ್ದನೋ ಜನ್ಮಜರಾಭಯಾಪಹಃ ।
ಸಮಸ್ತವಿಜ್ಞಾನತಸುಃ ಸುಖಾರ್ಣವಃ
ಸಂಪೂಜಯಾನಾಸ ಚ ತಂ ಜನಿತ್ರೀ ॥ ೧೨೫ ॥

• ಯಾತಿ ದೇಹಃ = ಕ್ಷಯಂ ಅನೇನ = ಇದರಿಂದ ಶರೀರವು ಕ್ಷೀಣತೆಯನ್ನು ಹೊಂದುತ್ತದೆ ಎನ್ನುವ ವ್ಯುತ್ಪತ್ತಿಯಿಂದ, ಯಕ್ಷ್ಮಾ = ಕ್ಷಯ ವ್ಯಾಧಿಯು

ಅ॥ ಜಗದಂಶ್ಪಾದಕನು. ಉತ್ಪತ್ತಿ ವಂದಿತನ ಭಯ ಇವುಗಳನ್ನು ನಾಶ ವಾಡುವವನು, ಸಂಪೂರ್ಣ ವಿಜ್ಞಾನಾತ್ಮಕ ಶರೀರವಿರುವವನು, ಸುಖದಿಂದ ಸವುಂದ್ರದಂತಿರುವವನು, ಇಂತಹ ಜನಾರ್ದನನು (ಅಂದರೆ ವೇದವ್ಯಾಸರು) ತತ್‌ಕ್ಷಣದಲ್ಲಿ ಆವಿರ್ಭವಿಸಿದನು. ತಾಯಿಯಾದ ಸತ್ಯವತೀ ದೇವಿಯು ಆ ವೇದವ್ಯಾಸದೇವರನ್ನು ಭಕ್ತಿಪೂರ್ವಕವಾಗಿ ಪೂಜಿಸಿದಳು॥ ೧೨೫॥

ಮೂ ॥ ತಂ ಭೀಷ್ಮ ಪೂರ್ವೈಃ ಸರವಾದರಾರ್ಚಿತಂ
ಸ್ವಭಿಷ್ಟುತಂ ಚಾವದದಸ್ಯ ವಾತಾ ।
ಪುತ್ರೌ ಮೃತೌ ಮೇ ನ ತು ರಾಜ್ಯಮೈಚ್ಛತ್
ಭೀಷ್ಮೋ ಮಯಾ ನಿತರಾವರ್ಥಿತೋಽಪಿ ॥ ೧೨೬॥
ಕ್ಷೇತ್ರೇ ತವ ಭ್ರಾತುರಪತ್ಯಮುತ್ತಮಂ–
ವುತ್ಪಾದಯಾಸ್ಮತ್ಪರವಾದರಾರ್ಥಿತಃ ।
ಇತೀರಿತಃ ಪ್ರಣತಶ್ಚಾಪ್ಯಭಿಷ್ಟುತೋ
ಭೀಷ್ಮಾದಿಭಿಶ್ಚಾಹ ಜಗದ್ಗುರುರ್ವಚಃ ॥ ೧೨೭॥

ಅ ॥ ಈ ವೇದವ್ಯಾಸದೇವರ ತಾಯಿಯಾದ ಸತ್ಯವತೀ ದೇವಿಯು ಭೀಷ್ಮಾಚಾರ್ಯರೇ ಮೊದಲಾದವರಿಂದ ಅತ್ಯಧಿಕ ಪ್ರೀತಿಯಿಂದ ಪೂಜಿಸಿಕೊಳ್ಳಲ್ಪಟ್ಟವನೂ, ಚೆನ್ನಾಗಿ ಸ್ತೋತ್ರವಾಡಿಸಿಕೊಳ್ಳಲ್ಪಟ್ಟವನೂ ಆದ ವೇದವ್ಯಾಸ ದೇವರನ್ನು ಕುರಿತು.(ಎಲೋ ವುಗನೇ)ನನ್ನ ಚಿತ್ರಾಂಗದ ವಿಚಿತ್ರವೀರ್ಯ ಎನ್ನುವ ಇಬ್ಬರು ವುಕ್ಕಳೂ ವೃತರಾಗಿರುವರು. ಭೀಷ್ಮನು (ರಾಜ್ಯವನ್ನು ಪರಿಪಾಲಿಸು ಎಂದು) ನನ್ನಿಂದ ಅತ್ಯಂತವಾಗಿ ಪ್ರಾರ್ಥಿಸಿಕೊಳ್ಳಲ್ಪಟ್ಟವನಾದಾಗ್ಯೂ ಸಾವ್ರಾಜ್ಯವನ್ನು ಇಚ್ಛಿಸಲೇ ಇಲ್ಲ. (ಆದುದರಿಂದ) ನವ್ಮಿಂದ ವಿಶೇಷ ಭಕ್ತಿಯಿಂದ ಪ್ರಾರ್ಥಿಸಿಕೊಳ್ಳಲ್ಪಟ್ಟ ನೀನು ನಿನ್ನ ಸಹೋದರ (ತವ್ಮ) ನಾದ ವಿಚಿತ್ರವೀರ್ಯನ ಹಿಂಡತಿಯಲ್ಲಿ ಉತ್ತಮವಾದ ವುಗುವನ್ನು ಹುಟ್ಟಿಸು' ಎಂದು ಹೇಳಿದಳು. ಈ ಪ್ರಕಾರ (ತಾಯಿಯಿಂದ) ಹೇಳಿಸಿಕೊಳ್ಳಲ್ಪಟ್ಟರೂ ನವಂಸ್ಕರಿಸಿಕೊಳ್ಳಲ್ಪಟ್ಟರೂ, ಸ್ತೋತ್ರ ವಾಡಿಸಿಕೊಳ್ಳಲ್ಪಟ್ಟರೂ, ಭೀಷ್ಮಾಚಾರ್ಯರೇ ವೊದಲಾದವರಿಂದಲೂ ಕೂಡ ನವಂಸ್ಕರಿಸಿಕೊಳ್ಳಲ್ಪಟ್ಟವರೂ ಸ್ತೋತ್ರ ವಾಡಿಸಿಕೊಳ್ಳಲ್ಪಟ್ಟವರೂ ಆದ ಜಗದ್ಗುರುಗಳಾದ ವೇದವ್ಯಾಸರು ತಾಯಿಯನ್ನು ಕುರಿತು ವಾತನ್ನು ಹೇಳಿದರು. ॥ ೧೨೬ ॥ ೧೨೭ ॥

ಮೂ ॥ ಋತೇ ರವಾಂ ಜಾತು ವವಾಂ ಗಸಂಗ–
ಯೋಗ್ಯಾಂಗನಾ ನೈವ ಸುರಾಲಯೇಽಪಿ ।
ತಥಾಪಿ ತೇ ವಾಕ್ಯವುಹಂ ಕರಿಷ್ಯೇ
ಸಾಂವತ್ಸರಂ ಸಾ ಚರತು ವ್ರತಂ ವೇ (ಚ) ॥ ೧೨೮॥

ಅ ॥ (ಯಂದ್ಯಪಿ) ಲಕ್ಷ್ಮೀದೇವಿಯನ್ನು ಹೊರತು ಯಾವಾಗಲೂ ನನ್ನ ಅಂಗಸಂಬಂಧಕ್ಕೆ (ಸಂಭೋಗಕ್ಕೆ) ಯೋಗ್ಯಳಾದ ಸ್ತ್ರೀಯು ಸ್ವರ್ಗಲೋಕದಲ್ಲಿಯೂ (ಬೇರೆ ಲೋಕದಲ್ಲಿಯೂ ಎಲ್ಲಿಯೂ) ಇಲ್ಲವೇ ಇಲ್ಲ. ಆದಾಗ್ಯೂ ನಿನ್ನ ವಾತನ್ನು (ಅಂದರೆ ವುಗುವನ್ನು ಹುಟ್ಟಿಸಬೇಕೆನ್ನುವ ವಾತನ್ನು) ವಾಡುವೆನು, ಅವಳು (ಅಂದರೆ ನಿನ್ನ ಸೊಸೆಯು) ಸಂವತ್ಸರ ಸಂಬಂಧಿಯಾದ ನನ್ನ ವೈಷ್ಣವ ವ್ರತವನ್ನು ವಾಡಲಿ.

ವಿಶೇಷಾಂಶ— (1) ಅಪ್ಸರೋ ರೂಪರಾದ ಗೋಪ್ಯಾದಿಗಳೂ ಲಕ್ಷ್ಮೀ ಸನ್ನಿಧಾನ ವಿಂದಲೇ ಅಂಗಸಂಗವೆಂದೂ 'ಋತೇ ರವಾಂ' ಎನ್ನುವುದರಿಂದ ಸೂಚಿತವಾಯಿತು. (2) ಸಾಂವ ತ್ಸರವ್ರತವೆಂದರೆ ಒಂದು ಸಂವತ್ಸರದಲ್ಲಿ ಮಾಡತಕ್ಕ ವಿಷ್ಣುಪಂಚಕ ವ್ರತವು. ಅಂದರೆ 'ಏಕಾದಶೀ ದ್ವಯಂ ಚೈವ ದರ್ಶಶ್ಚೈವಾಥ ಪೂರ್ಣಿಮಾ । ಶ್ರವಣರ್ಕ್ಷಸಮಾಯುಕ್ತಮಿತ್ಯೇತ ದ್ವಿಷ್ಣುಪಂಚಕಂ ॥ ಏಕಾದಶ್ಯಾಮುಪವಸೇತ್ಕೃತಿಪಕ್ಷಂ ಚ ಪರ್ವಣಿ । ಶ್ರವಣರ್ಕ್ಷ ದಿನೇ ಭಕ್ತ್ಯಾ ಪೂಜಯಿತ್ವಾಚ್ಯುತೋತ್ತಮಂ ॥ ಶುಕ್ಲ ಪಕ್ಷದ ಏಕಾದಶಿಯಂದು, ಕೃಷ್ಣಪಕ್ಷದ ಏಕಾದ ಶಿಯಂದು, ಅಮಾವಾಸ್ಯಾ, ಪೂರ್ಣಿಮಾ, ಶ್ರವಣ ನಕ್ಷತ್ರ ಇವು ಐದೂ ವಿಷ್ಣುಪಂಚವು. ಈ ಐದೂ ದಿವಸಗಳಲ್ಲಿ ಭಕ್ತಿಯಿಂದ ಶ್ರೀಪರಮಾತ್ಮನನ್ನು ಪೂಜಿಸಿ ಉಪವಾಸ ಮಾಡತಕ್ಕದ್ದು. ಹೀಗೆ ಉಪವಾಸ ಮಾಡಿದರೆ ಸರ್ವಪಾತಕಗಳಿಂದ ನಿವೃತ್ತರಾಗಿ ಪವಿತ್ರರಾಗಿ ಮುಂಕ್ತರಾಗುತ್ತಾರೆ. ॥ ೧೨೮ ॥

ಮೂ ॥ ಸಾ ಪೂತದೇಹಾಥ ಚ ವೈಷ್ಣವವ್ರತಾತ್
ಮತ್ತಃ ಸವರ್ಣಾಪ್ನೋತು ಸುತಂ ವರಿಷ್ಠಂ ।
ಇತೀರಿತೇ ರಾಷ್ಟ್ರಮುಪೈತಿ ನಾಶ-
ಮಿತಿ ಬ್ರುವಂತೀಂ ಪುನರಾಹ ವಾಕ್ಯಂ ॥ ೧೨೯ ॥

ಅ ॥ ವೈಷ್ಣವ ವ್ರತವನ್ನು ಮಾಡಿದ ಮೇಲೆ ವೈಷ್ಣವ ವ್ರತದಿಂದ (ವಿಷ್ಣುಪಂಚಕ ವ್ರತದ್ದೆಸೆಯಿಂದ) ಪವಿತ್ರವಾದ ಶರೀರವುಳ್ಳ ಆ ಅಂಬಿಕೆಯು ನನ್ನದೆಸೆಯಿಂದ ಶ್ರೇಷ್ಠವಾದ ಮಗನನ್ನು ಹೊಂದಲಿ. ಈ ಪ್ರಕಾರವಾಗಿ (ವೇದವ್ಯಾಸರು) ಹೇಳುತ್ತಿರಲು (ಈಗಲೇ ಪುತ್ರೋತ್ಪತ್ತಿಯನ್ನು ಮಾಡದೆ ಇದ್ದರೆ ಅರಾಜಕವಾಗುವುದರಿಂದ) ರಾಜ್ಯವು ನಾಶವನ್ನು ಹೊಂದುತ್ತದೆ ಈ ಪ್ರಕಾರ ಹೇಳತಕ್ಕ ತಾಯಿಯನ್ನು ಕುರಿತು ಪುನಃ ವಾಕ್ಯವನ್ನು (ವೇದವ್ಯಾಸ ದೇವರು) ಹೇಳಿದರು. ॥ ೧೨೯ ॥

ಮೂ ॥ ಸೌಮ್ಯಸ್ವರೂಪೋಽಪ್ಯತಿಭೀಷಣಂ ಮೃಷಾ
ತಚ್ಚಕ್ಷುಷೋ ರೂಪಮಹಂ ಪ್ರದರ್ಶಯೇ ।
ಸಹೇತ ಸಾ ತದ್ಯದಿ ಪುತ್ರಕೋಽಸ್ಯಾ
ಭವೇದ್ಗುಣಾಢ್ಯೋ ಬಲವೀರ್ಯಯುಕ್ತಃ ॥ ೧೩೦ ॥

ಅ ॥ ನಾನು ಸೌಮ್ಯ(ಶಾಂತ) ವಾದ ಸ್ವರೂಪವುಳ್ಳವನಾದರೂ ಅತ್ಯಂತ ಭಯಂಕರವಾದ ರೂಪವನ್ನು ಅವಳ (ಅಂದರೆ ನಿನ್ನ ಸೊಸೆಯ) ಕಣ್ಣುಗಳಿಗೆ ವ್ಯರ್ಥವಾಗಿಯೇ ತೋರಿಸುವೆನು. (ಅಂದರೆ ಯಾರಿಗಾದರೂ ಹನನ ಕಾಲದಲ್ಲಿ ತೋರಿಸಲಿಕ್ಕೆ ಯೋಗ್ಯವಾದ ರೂಪವನ್ನು ಹನನ ವಾಗದೆ ಇದ್ದ ಕಾಲದಲ್ಲಿಯೂ ತೋರಿಸುವೆನು.) ಆ ನಿನ್ನ ಸೊಸೆಯು ಆ ಭಯಂಕರವಾಗಿ ಕಾಣ ತಕ್ಕ ರೂಪವನ್ನು ನೋಡಲಿಕ್ಕೆ ಶಕ್ತಳಾದ ಪಕ್ಷದಲ್ಲಿ ಈ ನಿನ್ನ ಸೊಸೆಗೆ ಗುಣಗಳಿಂದ ಸಂಪನ್ನ ನಾದ, ಬಲ, ವೀರ್ಯಗಳಿಂದ ಕೂಡಿದ ಮಗನು ಹುಟ್ಟುವನು.

ವಿಶೇಷಾಂಶ— (ಶ್ಲೋ. ೧೨೮, ೧೨೯, ೧೩೦) ವ್ಯಾಸಃ । ವ್ರತಂ ಚರೇತಾಂ ತೇ ದೇವ್ಯೌ ನಿರ್ದಿಷ್ಟಮಿಹ ಯನ್ಮಯಾ । ಸಂವತ್ಸರಂ ಯಥಾ ನ್ಯಾಯಂ ತತಃ ಶುದ್ಧೇ ಭವಿಷ್ಯತಃ । ನ ಹಿ ಮಾಮವ್ರತೋಪೇತಾ ಉಪೇಯಾತ್ಕಾಚಿದಂಗನಾ ॥ ೬೩ ॥ ಸತ್ಯವತೀ ಸದ್ಯೋ

ಯಥಾ ಪ್ರಪದ್ಯೇತೇ ದೇವ್ಯೌ ಗರ್ಭಂ ತಥಾ ಕುರು 'ವ್ಯಾಸಃ' ಯದಿ ಪುತ್ರಃ ಪ್ರದಾತವ್ಯೋ ಮಯಾ ಭ್ರಾತುರಕಾಲಿಕಃ । ವಿರೂಪತಾಂ ಮೇ ಸಹತಾಂ ತಯೋರೇತತ್ಪರಂ ವ್ರತಂ ॥ ೬೭ ॥ ಯದಿ ಮೇ ಸಹತೇ ಗಂಧಂ ರೂಪಂ ವೇಷಂ ತಥಾ ವಪುಃ । ಅದ್ಯೈವ ಗರ್ಭಂ ಕೌಸಲ್ಯಾ ವಿಶಿಷ್ಟಂ ಪ್ರತಿಪದ್ಯತಾಂ ॥ (ಭಾರತ, ಆದಿಪರ್ವ, ಅಧ್ಯಾ. ೧೧೪) ಆ ದೇವಿಯರು ನಾನು ಹೇಳಿದ ವೈಷ್ಣವವ್ರತವನ್ನು ಶಾಸ್ತ್ರೋಕ್ತಪ್ರಕಾರ ಒಂದು ಸಂವತ್ಸರಪರ್ಯಂತವಾಗಿ ಮಾಡಲಿ, ಆಮೇಲೆ ಶುದ್ಧರಾಗುವರು, ವ್ರತಾದಿಗಳನ್ನು ಮಾಡದೆ ಇರುವ ಯಾವ ಸ್ತ್ರಿಯರೂ ನನ್ನನ್ನು ಹೊಂದಲಾರರು ಎಂದು ವ್ಯಾಸರು ಹೇಳೋಣ, ದೇವಿಯರು ಈಗಲೇ ಗರ್ಭವನ್ನು ಹೇಗೆ ಧರಿಸಿರುವರೋ ಹಾಗೆ ಮಾಡು. ಇಲ್ಲವಾದರೆ ಅರಾಜಕವಾಗುವುದರಿಂದ ರಾಜ್ಯವು ನಾಶವಾಗುವುದು ಎಂದು ಸತ್ಯವತಿಯು ಪ್ರಾರ್ಥಿಸಿದಳು, ಆಗ ವ್ಯಾಸರು ಅಕಾಲದಲ್ಲಿ ಮಕ್ಕಳನ್ನು ಹುಟ್ಟಿಸಬೇಕಾದರೆ ನನ್ನ ವಿರೂಪತ್ವವನ್ನು ಸಹಿಸಲಿ, ಇದೊಂದು ಬೇರೆ ವ್ರತವು. ನನ್ನ ಗಂಧವನ್ನೂ ರೂಪವನ್ನೂ ವೇಷವನ್ನೂ ಶರೀರವನ್ನೂ ನೋಡಲಿಕ್ಕೆ ಶಕ್ತರಾದರೆ ಈಗಲೇ ಉತ್ತಮವಾದ ಗರ್ಭವನ್ನು ಹೊಂದಲಿ ಎಂದು ಆಜ್ಞಾಪಿಸಿದರು. ॥ ೧೩೦ ॥

ಮೂ ॥ ಇತೀರಿತೇಽಸ್ತ್ವಿತ್ಯುದಿತಸ್ತ ಯಾಗವಮತ್
ಕೃಷ್ಣೋಽಂಬಿಕಾಂ ಸಾ ತು ಭಯಾನ್ನ್ಯ (ಭಿಯಾ ನ್ಯ) ನಿಮಾಲಯತ್
ಅಭೂಚ್ಚ ತಸ್ಯಾಂ ಧೃತರಾಷ್ಟ್ರನಾಮಕೋ
ಗಂಧರ್ವರಾಟ್ ಪವನಾವೇಶಯುಕ್ತಃ ॥ ೧೩೧ ॥

ಅ ॥ ಹೀಗೆ(ವೇದವ್ಯಾಸರಿಂದ)ಹೇಳಲ್ಪಡುತ್ತಿರಲು ಆ ಸತ್ಯವತೀದೇವಿಯಿಂದ ಹಾಗೆಯೇ ಆಗಲಿ ಎಂದು ಹೇಳಿಸಿಕೊಳ್ಳಲ್ಪಟ್ಟ ಶ್ರೀ ವೇದವ್ಯಾಸರು (ಪುತ್ರೋತ್ಪತ್ತಿಗಾಗಿ ಅಂಬಿಕೆಯನ್ನು) ಹೊಂದಿದರು. ಆ ಅಂಬಿಕೆಯಾದರೂ ಭೀತಿಯಿಂದ (ಅಂದರೆ ಭಯಂಕರವಾಗಿರುವ ವಿಡತಕ್ಕ ರೂಪವನ್ನು ನೋಡಿದ್ದರಿಂದುಂಟಾದ ಭೀತಿಯಿಂದ) (ಕಣ್ಣುಗಳನ್ನು) ಮುಚ್ಚಿಕೊಂಡು ಬಿಟ್ಟಳು. ಹಂಸನಾಮಕ ಗಂಧರ್ವಶ್ರೇಷ್ಠನು ವಾಯುದೇವರ ಆವೇಶದಿಂದ ಕೂಡಿದವನಾಗಿ ಆ ಅಂಬಿಕೆಯಲ್ಲಿ ಧೃತರಾಷ್ಟ್ರ ನಾಮಕನಾಗಿ (ಕಾಲದಲ್ಲಿ) ಹುಟ್ಟಿದನು.

ವಿಶೇಷಾಂಶ—(1)ಅವಿಷ್ಟಯಾಸ್ತು ಯಃ ಪುತ್ರೋಽಯಂ ಹಂಸ ಇತ್ಯಭಿವಿಶ್ರುತಃ ಸ ಗಂಧರ್ವಪತಿರ್ಜಜ್ಞೇ ಕುರುವಂಶವಿವರ್ಧನಃ । ಧೃತರಾಷ್ಟ್ರ ಇತಿ ಖ್ಯಾತಃ ಕೃಷ್ಣದ್ವೈಪಾಯನಾತ್ಮಜಃ । ಅಂಬಿಕಾದೇವಿಯ ಮಗನು ಹಂಸನೆಂದು ಪ್ರಸಿದ್ಧನಾದವನು ಗಂಧರ್ವರಿಗೆ ರಾಜನಾದನು. ಆ ಹಂಸನು ಅಂಬಿಕೆಯಲ್ಲಿ ವೇದವ್ಯಾಸರಿಂದ ಕುರುವಂಶವನ್ನು ಅಭಿವೃದ್ಧಿ ಪಡಿಸತಕ್ಕ ಧೃತರಾಷ್ಟ್ರನೆಂದು ಪ್ರಸಿದ್ಧನಾಗಿ ಹುಟ್ಟಿದನು. ॥ ೧೩೧ ॥

ಮೂ ॥ ಸ ಮಾರುತಾವೇಶವಶಾ (ಬಲಾ)ದ್ಬಲಾಧಿಕೋ
ಬಭೂವ ರಾಜಾ ಧೃತರಾಷ್ಟ್ರನಾಮಾ ।
ಅದಾದ್ವರಂ ಚಾಸ್ಮೈ ಬಲಾಧಿಕತ್ವಂ
ಕೃಷ್ಣೋಽಂಧ ಆಸೀತ್ಸ ತು ಮಾತೃದೋಷತಃ ॥ ೧೩೨ ॥

ಅ ॥ ೨ ಧೃತರಾಷ್ಟ್ರ ನಾಮಕನಾದ ರಾಜನು ವಾಯುದೇವರ ಆವೇಶದ ಮಹಿಮೆಯಿಂದ ಬಲಾಧಿಕ್ಯವುಳ್ಳವನು, ಆದನು. ವೇದವ್ಯಾಸರು ಈ ಧೃತರಾಷ್ಟ್ರನಿಗೆ ಬಲಾಧಿಕತ್ವರೂಪವಾದ ವರ

ವನ್ನೂ ಕೊಟ್ಟರು. ಆ ಧೃತರಾಷ್ಟ್ರನಾದರೂ ತಾಯಿಯು ದೋಷದ್ದೆಸೆಯಿಂದ (ಅಂದರೆ ತಾಯಿಯು ಕಣ್ಣುಗಳನ್ನು ಮುಚ್ಚಿದ ಪ್ರಯುಕ್ತ) ಕುರುಡನಾಗಿಯೇ ಆದನು.(ಅಂದರೆ ಹುಟ್ಟಿದನು.॥೧೩೨॥

ಮೂ ॥ ಜ್ಞಾತ್ವಾ ತಮುಂಧಂ ಪುನರೇವ ಕೃಷ್ಣಂ
ಮಾತಾ ಬ್ರುವೀಜ್ಜನಯಾನ್ಯಂ ಗುಣಾಢ್ಯಂ ।
ಅಂಬಾಲಿಕಾಯಾವಿತಿ ತತ್ತಥಾಕರೋತ್
ಭಯಾಚ್ಚ (ತ್ತು) ಸಾ ಪಾಂಡುರಭೂನ್ಮೃಷಾದೃಕ್ ॥ ೧೩೩ ॥

ಅ ॥ ತಾಯಿಯಾದ ಸತ್ಯವತೀದೇವಿಯು ಆ ಧೃತರಾಷ್ಟ್ರನನ್ನು ಕುರುಡನನ್ನಾಗಿ ತಿಳಿದು ಪುನಃ ವೇದವ್ಯಾಸದೇವರನ್ನು ಕುರಿತು ಆಂಬಾಲಿಕೆಯಲ್ಲಿ ಗುಣಭರಿತನಾದ ಇನ್ನೊಬ್ಬ ಮಗನನ್ನು ಹುಟ್ಟಿಸು ಎಂದು ಹೇಳಿದಳು. ಆ ಮಾತನ್ನು (ವೇದವ್ಯಾಸರು) ತಾಯಿಯು ಹೇಳಿದಂತೆಯೇ ಮಾಡಿದರು. ತು=ಅಂಬಿಕೆಯು ಮಗನಂತೆ ನನ್ನ ಮಗನಿಗೆ ಅಂಧತ್ವವು ಬರಬಾರದು ಎನ್ನುವ ಕಾರ್ಯವಿಶೇಷದ್ದೆಸೆಯಿಂದ, ಮೃಷಾದೃಕ್=ವ್ಯರ್ಥವಾಗಿ ವೇದವ್ಯಾಸರಿಂದ ತೋರಿಸಲ್ಪಟ್ಟ ಭಯಂಕರರೂಪವನ್ನು ನೋಡತಕ್ಕ (ಅಂದರೆ ಅಂಬಿಕೆಯಂತೆ ಕಣ್ಣುಗಳನ್ನು ಮುಚ್ಚದೆ ಇರುವ) ಆ ಆಂಬಾಲಿಕೆಯು, ಭಯಂಕರವಾದ ರೂಪವನ್ನು ನೋಡಿದುದರಿಂದುಂಟಾದ ಭೀತಿಯಿಂದ ಪಾಂಡುರ ವರ್ಣವುಳ್ಳವಳಾದಳು.

ವಿಶೇಷಾಂಶ—(1) ತನ್ನ ಸುವರ್ಣವರ್ಣವನ್ನು ಬಿಟ್ಟು ಭೀತಿಯಿಂದ ಪಾಂಡುರೋಗ ಗ್ರಸ್ತಳಂತೆ ಅರಸಿನವರ್ಣವುಳ್ಳವಳಾದಳು. (2) ನಮಃ ಶಾಂತಾಯ ಘೋರಾಯ ಮೃಡಾಯ ಗುಣಕರ್ಮಣೇ। ಸೌಮ್ಯಸ್ವರೂಪವುಳ್ಳವನೂ ಭಯಂಕರಸ್ವರೂಪವುಳ್ಳವನೂ ಸ್ತುತ್ಯನೂ ಗುಣಸ್ವರೂಪನೂ ಆದ ಶ್ರೀ ಪರಮಾತ್ಮನಿಗೋಸ್ಕರ ನಮಸ್ಕಾರವು, ಎಂದು ಭಾಗವತದಲ್ಲಿ ಹೇಳಿರುವುದರಿಂದ ಭಯಂಕರರೂಪವೂ ಶ್ರೀಹರಿಗೆ ಇದೆ. ॥ ೧೩೩ ॥

ಮೂ ॥ ಪರಾವಹೋ ನಾಮ ಮುರುತ್ತತೋಽಭವತ್
ವರ್ಣೇನ ಪಾಂಡುಃ ಸ ಹಿ ನಾಮತಶ್ಚ ।
ಸ ಚಾಸ ವೀರ್ಯಾಧಿಕ ಏವ ವಾಯೋ-
ರಾವೇಶತಃ ಸರ್ವಶಸ್ತ್ರಾಸ್ತ್ರವೇತ್ತಾ ॥ ೧೩೪ ॥

ಅ ॥ ಆಂಬಾಲಿಕೆಯುದೆಸೆಯಿಂದ ಪರಾವಹನೆಂದು ಪ್ರಸಿದ್ಧನಾದ ವಾಯುವು ಹುಟ್ಟಿದನು. ಆ ಆಂಬಾಲಿಕೆಯ ಮಗನು ಯಾವ ಕಾರಣದಿಂದ ವರ್ಣದಿಂದ ಪಾಂಡು ಆದನೋ ಆದಕಾರಣ ನಾಮದಿಂದಲೂ ಪಾಂಡುರಾಜನು ಆದನು. ಆ ಪಾಂಡುರಾಜನು ವಾಯುದೇವರ ಆವೇಶದ್ದೆಸೆಯಿಂದ ವೀರ್ಯಾಧಿಕ್ಯವುಳ್ಳನೂ ನಿಖಿಲ ಶಸ್ತ್ರಾಸ್ತ್ರವಿದ್ಯೆಗಳನ್ನು ತಿಳಿದವನೂ ಆದನು.

ವಿಶೇಷಾಂಶ— ಪಾಂಡುಸ್ತು ಪೀತಭಾಗಾರ್ಧಕ ಕೇತಕೀಧೂಲಿಸನ್ನಿಭಃ । ಪೀತ ಭಾಗದ ಅರ್ಧವು ಕೇತಕಿಯ ಪರಾಗಕ್ಕೆ ಸದೃಶವಾದುದು. ತಥಾಚ ಪೀತದಿಂದ ಯುಕ್ತವಾದ ಬಿಳುಪು ಪಾಂಡುವರ್ಣವು. ॥ ೧೩೪ ॥

ಮೂ ॥ ತಸ್ಮೈ ತಥಾ ಬಲವೀರ್ಯಾಧಿಕತ್ವಂ (ತ್ವ)-
ವರಂ ಪ್ರಾದಾತ್ ಕೃಷ್ಣ ಏವಾಥ ಪಾಂಡುಂ ।
ವಿಜ್ಞಾಯ ತಂ ಪ್ರಾಹ ಪುನಶ್ಚ ಮಾತಾ
ನಿರ್ದೋಷಮನ್ಯಂ ಜನಯೋತ್ತಮಂ ಸುತಂ ॥ ೧೩೫ ॥

ಅ ॥ ವೇದವ್ಯಾಸರಂ ಪಾಂಡುರಾಜನಿಗೋಸ್ಕರ ಹಾಗೆಯೇ ಬಲವೀರ್ಯಗಳ ಆಧಿಕ್ಯರೂಪ ವಾದ ವರವನ್ನು ಕೊಟ್ಟರು. ಆವೇಲೆ ತಾಯಿಯಾದ ಸತ್ಯವತಿಯಂ ಅಂಬಾಲಿಕೆಯಲ್ಲಿ ಹುಟ್ಟಿದ ಆ ವಂಗನನ್ನು ಪಾಂಡುವರ್ಣವುಳ್ಳವನನ್ನಾಗಿ ತಿಳಿದು ಪುನಃ ಅಂಧತ್ವ ಪಾಂಡುತ್ವ ಮೊದಲಾದ ದೋಷಗಳಿಂದ ವಿರಹಿತನಾದ ಮಂತ್ರೊಬ್ಬ ಉತ್ತಮ ವಂಗನನ್ನು ಹುಟ್ಟಿಸು, ಎಂದು ಹೇಳಿದಳು; ॥ ೧೩೫ ॥

ಮೂ ॥ ಉಕ್ತ್ವೇತಿ ಕೃಷ್ಣಂ ಪುನರೇವ ಚ ಸ್ನುಷಾ-
ಮಾಹ ತ್ವಯಾಕ್ಷ್ಣೋರ್ನಿ ನಿಮಾಲನಂ ಪುರಾ ।
ಕೃತಂ ತತಸ್ತೇ ಸುತ ಏಸ ಚಾಂಧಃ
ತತಃ ಪುನಃ ಕೃಷ್ಣಮುಪಾಸ್ಯ ಭಕ್ತಿತಃ ॥ ೧೩೬ ॥

ಅ ॥ ಪುನಃ (ಸತ್ಪುತ್ರನನ್ನು ಹುಟ್ಟಿಸು ಎಂದು) ಕೃಷ್ಣನನ್ನು ಕುರಿತು ಹೇಳಿ ಸೊಸೆಯಾದ ಅಂಬಿಕೆಯನ್ನು ಕುರಿತು (ಸತ್ಯವತೀ ದೇವಿಯವು) ಹೇಳಿದಳು. ಮೊದಲು ನಿನ್ನಿಂದ ಕಣ್ಣುಗಳ ಮುಚ್ಚೋಣವು ಯಾವ ಕಾರಣದಿಂದ ಮಾಡಲ್ಪಟ್ಟಿತೋ ಆದಕಾರಣ ನಿನ್ನ ವಂಗನು ಅಂಧನು ಆದನು. ಆದುದರಿಂದ ದೋಷವಿಲ್ಲದಿರುವ ವಂಗನು ಹುಟ್ಟುವುದಕ್ಕಾಗಿ ಪುನಃ ಭಕ್ತಿಯಿಂದ ವೇದವ್ಯಾಸರನ್ನು ಭಜಿಸು. ॥ ೧೩೬ ॥

ಮೂ ॥ ಇತೀರಿತಾಪ್ಯಸ್ಯ ಹಿ ಮಾಯಯಾ ಸಾ
ಭೀತಾ ಭುಜಿಷ್ಯಾಂ ಕುಮತಿರ್ನ್ಯಯೋಜಯತ್ ।
ಸಾ ತಂ ಪರಾನಂದತನುಂ ಗುಣಾರ್ಣವಂ
ಸಂಪ್ರಾಪ್ಯ ಭಕ್ತ್ಯಾ ಪರಯೈವ ರೇಮೇ ॥ ೧೩೭ ॥

ಅ ॥ ಈ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟಾಗ್ಯೂ ವೇದವ್ಯಾಸರ ಮಾಯೆಯಿಂದ ಹೆದರಿದ ದುರ್ಬುದ್ಧಿಯುಳ್ಳ ಆ ಅಂಬಿಕೆಯು ಪರಿಚಾರಿಣಿಯಾದ ಊಢಳಾದ ಶೂದ್ರಾಸ್ತ್ರೀಯನ್ನು ಕಳುಹಿಸಿಕೊಟ್ಟಳು. ಆ ಪರಿಚಾರಿಣಿಯಿಂ ಉತ್ಕೃಷ್ಟವಾದ ಆನಂದಾತ್ಮಕ ಶರೀರವುಳ್ಳ ಗುಣಗಳಿಂದ ಸಮುದ್ರದಂತಿರುವ ಆ ವೇದವ್ಯಾಸರು ಉತ್ಕೃಷ್ಟವಾದ ಭಕ್ತಿಯಿಂದಲೇ ಹೊಂದಿ ಕ್ರೀಡಿಸಿದಳು. ॥ ೧೩೭ ॥

ಮೂ ॥ ತಸ್ಯಾಂ ಸ ದೇವೋಽಜನಿ ಧರ್ಮರಾಜೋ
ಮಾಂಡವ್ಯಶಾಪಾದ್ಯ ಉವಾಹ ಶೂದ್ರತಾಂ ।
ವಸಿಷ್ಠಸಾಮ್ಯಂ ಸಮುಭೀಪ್ಸಮಾನಂ
ಪ್ರಚ್ಯಾವಯನ್ನಿಚ್ಛಯಾ ಶಾಪಮಾಪ ॥ ೧೩೮ ॥

ಆ ॥ ಆ ಪರಿಚಾರಿಣಿಯಂಲ್ಲಿ ಯಾವ ಧರ್ಮರಾಜನಂ ಮಾಂಡವ್ಯಋಂಷಿಯಂ ಶೂದ್ರತ್ವ ಪ್ರಾಪಕವಾದ ಶಾಪದ್ದೆಸೆಯಿಂದ (ಶೂದ್ರ ಸ್ತ್ರೀಯಂಲ್ಲಿ ಹಂಟ್ಟಿರಃವುದರಿಂದ) ಶೂದ್ರತ್ವವನ್ನಂ ಹೊಂದಿರಂವನೊ. ಅಂತಹ ಪೂಜ್ಯನಾದ ಧರ್ಮರಾಜನಂ ಹಂಟ್ಟಿದನಂ. (ಹಾಗಾದರೆ ಯಂವಂನಿಗೆ ಶೂದ್ರತ್ವವು ಪ್ರಾಪ್ತಿಯಾಗಲಿಕ್ಕೆ ಏನಂ ಕಾರಣವು ಎಂದರೆ) ವಸಿಷ್ಠಋಂಷಿಯಿಂದ ಸದೃಶತ್ವವನ್ನಂ ಚೆನ್ನಾಗಿ ಇಚ್ಛಿಸತಕ್ಕ ಮಾಂಡವ್ಯ ಋಂಷಿಯನ್ನಂ (ವಸಿಷ್ಠನ ಸಾಮ್ಯ ಪ್ರಾಪ್ತಿಗಾಗಿ ಮಾಡಲ್ಪಟ್ಟ ತಪಸ್ಸಿನಿಂದ) ಬಿಡಿಸಂವವನಾಗಿ ತನ್ನ ಇಚ್ಛೆಯಿಂದಲೇ (ಅಂದರೆ ಬಂದ್ಧಿಪೂರ್ವಕವಾಗಿ) ಶೂದ್ರತ್ವ ಪ್ರಾಪಕವಾದ ಶಾಪವನ್ನು ಯಂವಂಧರ್ಮರಾಜನಂ ಹೊಂದಿದನಂ.

ವಿಶೇಷಾಂಶ—(1)ಹಾಗಾದರೆ ನೀಚಋಂಷಿಯಂ ಸಕಾಶದಿಂದ ಅತ್ಯುಚ್ಚನಾದ ಯಂವಂನಂ ಏಕೆ ಶಾಪವನ್ನು ಹೊಂದಿದನಂ ಎಂದರೆ ಉಚ್ಚನಾದ ತನ್ನಲ್ಲಿ ಆ ಋಂಷಿಯಂ ಶಾಪವನ್ನು ಕೊಟ್ಟ ದ್ದರಿಂದ ಆತನ ತಪಸ್ಸನ್ನು ಕೆಡಿಸಂವುದಕ್ಕಾಗಿ ಬಂದ್ಧಿಪೂರ್ವಕವಾಗಿಯೇ ಶಾಪವನ್ನು ಹೊಂದಿದನಂ: ॥ ೧೩೮ ॥

ಮೂ ॥ ಅಯೋಗ್ಯಸಂಪ್ರಾಪ್ತಿ ಕೃತಪ್ರಯತ್ನ-
ದೋಷಾತ್ ಸವಾರೋಪಿತಮೇವ ಶೂಲೇ ।
ಚೋರೈಹ್ರ್ತೇಽರ್ಥೇಽಪಿ ತು ಚೋರಬುದ್ಧ್ಯಾ
ಮುಕ್ಷ್ವೀವಧಾದಿತ್ಯವದದ್ಯಮುಸ್ತಂ ॥ ೧೩೯ ॥

ಅ ॥ ತನಗೆ ಅಯೋಗ್ಯವಾದ ವಸಿಷ್ಠ ಸಾಮ್ಯವನ್ನು ಹೊಂದುವ ವಿಷಯದಲ್ಲಿ ಮಾಡಲ್ಪಟ್ಟ ಪ್ರಯತ್ನದಿಂದಂಂಟಾದ ದೋಷ ನಿಮಿತ್ತದಿಂದಲೇ (ಒಬ್ಬಾನೊಬ್ಬ ಧನಿಕನ) ದ್ರವ್ಯವು ಕಳ್ಳರಿಂದಲೇ ಅಪಹರಿಸಲ್ಪಟ್ಟರೂ ಇವನೇ ಕಳ್ಳನೆಮ್ಮುವ ಬಂದ್ಧಿಯಿಂದ ಶೂಲದ ಮೇಲೆ ಚೆನ್ನಾಗಿ ಆರೋಪಿಸಿಕೊಳ್ಳಲ್ಪಟ್ಟ ಆ ಮಾಂಡವ್ಯಋಂಷಿಯನ್ನು ಯಂವಂನು, ನೊಣವನ್ನು ಕೊಂದಿರುವುದರಿಂದ (ನಿನಗೆಶೂಲಪ್ರಾಪ್ತಿಯಂ) ಎಂದಂ ಹೇಳಿದನಂ:

ವಿಶೇಷಾಂಶ—(1) ಒಬ್ಬ ಧನಿಕನ ದ್ರವ್ಯವನ್ನು ಕಳ್ಳರು ಅಪಹರಿಸಂತ್ತಿರಲಂ ಧನಿಕನ ದೂತರಂ ಕಳ್ಳರನ್ನು ಹಿಂಬಾಲಿಸಿದಾಗ ಆ ಕಳ್ಳರು ಅಸಂಪ್ರಜ್ಞಾತಸಮಾಧಿಯಂಲ್ಲಿರುತ್ತಿದ್ದ ಮಾಂಡವ್ಯ ಋಂಷಿಯಂ ಮಂಂಬಾಗದಲ್ಲಿ ದ್ರವ್ಯವನ್ನು ಸ್ಥಾಪಿಸಿ ಓಡಿಹೋದರಂ. ಆಗ ಹಿಂಬಾಲಿಸಿ ಬಂದ ದೂತರಂ ಮಾಂಡವ್ಯ ಋಷಿಯನ್ನು ನೋಡಿ ಇವನೇ ಕಳ್ಳನಂ, ಓಡಲಿಕ್ಕೆ ಅಶಕ್ತನಾಗಿ ಕಣ್ಣಿ ಮಂಚ್ಚಿಕೊಂಡಂ ಇದ್ದಾನೆ, ಆದಂದರಿಂದಲೇ ವಧಾರ್ಹನು, ಎಂದಂ ತಿಳಿದಂ ಶೂಲಕ್ಕೆ ಹಾಕಿದರಂ. ಆಗ ಅಲ್ಲಿಗೆ ಯಂವಂನಂ ಬಂದನಂ. ನನಗೆ ಶೂಲಾರೋಪಣಕ್ಕೆ ಏನಂ ಕಾರಣವು ಎಂದಂ ಋಷಿಯಂ ಯಂವಂನ ಹತ್ತಿರ ಪ್ರಶ್ನಿಸಂತ್ತಿರಲಂ, 'ನೀನು ವಸಿಷ್ಠನ ಸಾಮ್ಯವು ಸಿಗಬೇಕೆನ್ನುವ ಅಪೇಕ್ಷೆಯಿಂದ ತಪಸ್ಸನ್ನು ಮಾಡಿದ್ದರಿಂದ ನಿನಗೆ ಶೂಲಾರೋಪಣವು ಎನ್ನುವ ಮಂಖ್ಯ ದೋಷವನ್ನು ಹೇಳದೆ ಋಂಷಿಗೆ ಕೋಪವನ್ನು ಹಂಟ್ಟಿಸಂವುದಕ್ಕಾಗಿ ಮಂಕ್ಷಿಕೆಯನ್ನು (ನೊಣವನ್ನು) ಮಂಳ್ಳಿನ ತಂದಿಗೆ ಆರೋಪಿಸಿ ಕೊಂದಿರುತ್ತಿ. ಆ ದೋಷದಿಂದ ಶೂಲಪ್ರಾಪ್ತಿಯಾಯಿತು ಎಂದಂ ಹೇಳಿದೊಡನೆಯೇ ಸಟ್ಟುಗೊಂಡ ಮಾಂಡವ್ಯನಂ ಎಲೋ ಯಂವಂನೇ ನೀನು ಅಸತ್ಯವನ್ನು ಹೇಳಿದ್ದರಿಂದ ಶೂದ್ರನಾಗಿ ಹುಟ್ಟು, ಎಂದು ಯಂವಂನಿಗೆ ಶಾಪಕೊಟ್ಟನು. ॥೧೩೯ ॥

ಹಾಗಾದರೆ ವಸಿಷ್ಠನ ಸಾಮ್ಯಪ್ರಾಪ್ತಿಗಾಗಿ ಮಾಡಿದ ಪ್ರಯತ್ನದಿಂದಂಟಾದ ದೋಷವು ಶೂಲಾರೋಪಣಕ್ಕೆ ಹೇತುವಾದರೆ ಯಮನು ಮಂಕ್ಷೀವಧದಿಂದ ಎಂದೂ ಅಸತ್ಯವನ್ನು ಏಕೆ ಹೇಳಿದನು ಎಂದರೆ—

ಮೂ ॥ ನಾಸತ್ಯತಾ ತಸ್ಯ ಚ ತತ್ರ ಹೇತುತಃ
ಶಾಪಂ ಗೃಹೀತುಂ ಸ ತಥೈವ ಚೋಕ್ತ್ವಾ ।
ಅವಾಪ ಶೂದ್ರತ್ವಮಥಾಸ್ಯ ನಾಮ
ಚಕ್ರೇ ಕೃಷ್ಣಃ ಸರ್ವವಿತ್ವಂ ತಥಾದಾತ್ ॥ ೧೪೦ ॥

ಅ ॥ ಆ ಮಂಕ್ಷೀವಧಾಖ್ಯಪಾಪಕ್ಕೂ ಶೂಲಾರೋಹಣದಲ್ಲಿ ಅಲ್ಪ ಕಾರಣತ್ವವಿದ್ದ ಪ್ರಯತ್ನಕ್ಕೆ ಆ ಯಮನ ವಾಕ್ಯಕ್ಕೆ ಅಸತ್ಯತ್ವವಿಲ್ಲ. (ಮಾಂಡವ್ಯ ಋಷಿಯಂ ಮಂಕ್ಷೀವಧಕ್ಕೂ ಪ್ರಾಯಶ್ಚಿತ್ತವನ್ನು ಮಾಡದೆ ಇದ್ದುದರಿಂದ ಮಂಕ್ಷೀವಧವೂ ಶೂಲಾರೋಪಣಕ್ಕೆ ಕಾರಣವೇ. ಅಂತೂ ವಸಿಷ್ಠ ಸಾಮ್ಯವನ್ನು ಇಚ್ಛಿಸಿಕೊಂಡು ಮಾಡಿದ ತಪಸ್ಸೂ ಮಂಕ್ಷೀವಧವೂ ಎರಡೂ ಶೂಲಾರೋಪಣಕ್ಕೆ ಕಾರಣವೇ.) (ಹಾಗಾದರೆ ನಿಮಿತ್ತಗಳೆರಡೂ ಇದ್ದರೂ ಪ್ರಬಲವಾದ ನಿಮಿತ್ತವನ್ನು ಬಿಟ್ಟು ಅಲ್ಪವಾದ ನಿಮಿತ್ತವನ್ನು ಏಕೆ ಹೇಳಿದನು ಎಂದರೆ–) ಆ ಯಮನು ಶಾಪವನ್ನು ಸ್ವೀಕರಿಸುವುದಕ್ಕಾಗಿಯೇ ಮಂಕ್ಷೀವಧದ್ವೇಷಿಯಿಂದಲೇ ಎಂದೂ ಹೇಳಿ ಶೂದ್ರತ್ವವನ್ನು ಹೊಂದಿದನು; ಹುಟ್ಟಿದ ಮೇಲೆ ವೇದವ್ಯಾಸರು ದಾಸಿಯಲ್ಲಿ ಹುಟ್ಟಿದ ಯಮನಿಗೆ ಹೆಸರನ್ನು ಇಟ್ಟರು; ಹಾಗೆಯೇ ಈತನಿಗೆ ಸರ್ವಜ್ಞತ್ವವನ್ನೂ ಕೊಟ್ಟರು.

ವಿಶೇಷಾಂಶ—(1) ಉಪಪನ್ನವಾಗುವ, ಪ್ರಬಲಕಾರಣವನ್ನು ಹೇಳಿದರೆ ಮಾಂಡವ್ಯನಿಗೆ ಕೋಪವು ಹುಟ್ಟಲಾರದು. ಯತ್ಕಿಂಚಿತ್ ಅಲ್ಪಕಾರಣವನ್ನು ಹೇಳಿದರೆ ಕೋಪಗೊಂಡು ಶಪಿಸಿಯಾನು. ಆಗ ವಸಿಷ್ಠನ ಸಾಮ್ಯವು ಸಿಗಬೇಕೆನ್ನುವ ಉದ್ದೇಶದಿಂದ ಮಾಡಿದ ತಪಸ್ಸು ನಾಶವಾಗುವುದು ಎನ್ನುವ ಅಭಿಪ್ರಾಯದಿಂದ ಶಾಪವನ್ನು ಗ್ರಹಿಸುವುದಕ್ಕಾಗಿಯೇ ಮಂಕ್ಷೀವಧದ್ವೇಷಿಯಿಂದ ಎಂದೂ ಯಮನು ಹೇಳಿದನು. ॥ ೧೪೦ ॥

ಯಾವ ಹೆಸರು ಎಂದರೆ ನಿರುಕ್ತಿಪೂರ್ವಕವಾಗಿ ಅದನ್ನು ಹೇಳುತ್ತಾರೆ—

ಮೂ ॥ ವಿದ್ಯಾರತೇರ್ವಿದುರೋ ನಾಮ ಚಾಯಂ
ಭವಿಷ್ಯತಿ ಜ್ಞಾನಬಲೋಪಪನ್ನಃ ।
ಮಹಾಧನುರ್ಬಾಹುಬಲಾಧಿಕಶ್ಚ
ಸುನೀತಿವಾನಿತ್ಯವದತ್ ಸ ಕೃಷ್ಣಃ ॥ ೧೪೧ ॥

ಅ ॥ ಆ ವೇದವ್ಯಾಸರು, ತತ್ವಜ್ಞಾನದಲ್ಲಿ ಚೆನ್ನಾಗಿ ಆಸಕ್ತನಾದ ಪ್ರಯುಂಕ್ತ ವಿದುರನೆಂದೂ ಪ್ರಸಿದ್ಧನಾದ ಈ ಬಾಲಕನು ಸಜ್ಞಾನಾಧಿಕ್ಯದಿಂದ ಯುಂಕ್ತನೂ ಮಹಾಧನುಸ್ಸ್ಯವನೂ ಭುಜಗಳ ಬಲದಿಂದ ಶ್ರೇಷ್ಠನೂ ಉತ್ತಮವಾದ ನೀತಿಯನ್ನು ತಿಳಿದವನೂ ಆಗುವನು ಎಂದೂ ಹೇಳಿದರು. ॥ ೧೪೧ ॥

ಮೂ ॥ ಜ್ಞಾತ್ವಾಸ್ಯ ಶೂದ್ರತ್ವಮಥಾಸ್ಯ ಮಾತಾ
ಪುನಶ್ಚ ಕೃಷ್ಣಂ ಪ್ರಣತಾ ಯಯಾಚೇ ।
ಅಂಬಾಲಿಕಾಯಾಂ ಜನಯಾನ್ಯಮಿತ್ಯಥೋ
ನೈಚ್ಛತ್ಸ ಕೃಷ್ಣೋಽಭವದಪ್ಯದೃಶ್ಯಃ ॥ ೧೪೨ ॥

ಅ ॥ ವಿದುರನಂ ಹುಟ್ಟಿದಮೇಲೆ ಈ ವೇದವ್ಯಾಸದೇವರ ತಾಯಿಯಾದ ಸತ್ಯವತೀ ದೇವಿಯಂ ವಿದುರನಿಗೆ ಶೂದ್ರತ್ವವನ್ನು ತಿಳಿದಂ ಪುನಃ ವೇದವ್ಯಾಸರನ್ನು ನಮಂಸ್ಕರಿಸಿದವಳಾಗಿ ಅಂಬಾಲಿಕೆಯಲ್ಲಿ ಇನ್ನೊಬ್ಬ ಮಂಗನನ್ನು ಹುಟ್ಟಿಸಂ ಎಂದಂ ಬೇಡಿದಳಂ. ಮೂರಂ ಜನರಂ ಹುಟ್ಟಿದ ಮೇಲೆ ಆ ವೇದವ್ಯಾಸರಂ (ಪುನಃ ಪುತ್ರೋತ್ಪತ್ತಿಯಂನ್ನು ಮಾಡಲಿಕ್ಕೆ) ಇಚ್ಛಿಸಲಿಲ್ಲ; ಅದೃಶ್ಯರೂ ಕೂಡ ಆದರಂ. ॥ ೧೪೨ ॥

ಮೂ ॥ ಯೋಗ್ಯಾನಿ ಕರ್ಮಾಣಿ ತತಸ್ತು ತೇಷಾಂ
ಚಕಾರ ಭೀಷ್ಮೋ ಮುನಿಭಿರ್ಯಥಾವತ್ ।
ವಿದ್ಯಾಃ ಸಮಸ್ತಾ ಅದದಾಚ್ಚ ಕೃಷ್ಣಃ
ತೇಷಾಂ ಪಾಂಡೋರಸ್ತ್ರಶಸ್ತ್ರಾಣಿ ಭೀಷ್ಮಃ ॥ ೧೪೩ ॥

ಅ ॥ ಆ ಮೇಲೆ ಭೀಷ್ಮಾಚಾರ್ಯರಂ ಮಂನಿಗಳಿಂದ ಕೂಡಿಕೊಂಡಂ ಆ ಧೃತರಾಷ್ಟ್ರ ಮೊದಲಾದ ಮೂವರಿಗೆ (ಕ್ಷತ್ರಿಯರಿಗೂ ಶೂದ್ರರಿಗೂ) ಯೋಗ್ಯಗಳಾದ (ಜಾತಕರ್ಮ ಮೊದಲಾದ ಸಂಸ್ಕಾರ)ಕರ್ಮಗಳನ್ನು ಯಂಥಾಕ್ರಮದಿಂದ ಅಥವಾ ವಿಧ್ಯುಕ್ತಮಾರ್ಗದಿಂದ ಮಾಡಿದರಂ. (ಅಂದರೆ ಧೃತರಾಷ್ಟ್ರ, ಪಾಂಡಂ ಇವರಿಬ್ಬರಿಗೆ ಕ್ಷತ್ರಿಯರಿಗೆ ಯೋಗ್ಯಗಳಾದ ಸಂಸ್ಕಾರ ಕರ್ಮಗಳನ್ನೂ ವಿದುರನಿಗೆ ಶೂದ್ರ ಯೋಗ್ಯಗಳಾದ ಸಂಸ್ಕಾರ ಕರ್ಮಗಳನ್ನೂ ಮಾಡಿದರಂ.) ವೇದವ್ಯಾಸರಂ ಆ ಮೂವರಿಗೆ ಎಲ್ಲಾ ವಿದ್ಯೆಗಳನ್ನೂ ಉವದೇಶಿಸಿದರಂ. ಭೀಷ್ಮಾಚಾರ್ಯರಂ ಪಾಂಡಂ ರಾಜನಿಗೆ ಅಸ್ತ್ರವಿದ್ಯೆಗಳನ್ನೂ ಶಸ್ತ್ರವಿದ್ಯೆಗಳನ್ನೂ ಉಪದೇಶಿಸಿದರಂ. ॥ ೧೪೩ ॥

ಮೂ ॥ ತೇ ಸರ್ವವಿದ್ಯಾಪ್ರವರಾ ಬಭೂವುಃ
ವಿಶೇಷತೋ ವಿದುರಃ ಸರ್ವವೇತ್ತಾ ।
ಪಾಂಡುಃ ಸಮಸ್ತಾಸ್ತ್ರವಿದೇಕವೀರೋ
ಜಿಗಾಯ ಪೃಥ್ವೀಮಖಿಲಾಂ ಧನುರ್ಧರಃ ॥ ೧೪೪ ॥

ಅ ॥ ಆ ಮೂವರು ಎಲ್ಲಾ ವಿದ್ಯೆಗಳಲ್ಲಿಯಂ ಚತುರರು ಆದರಂ. ವಿದುರನಂ ವಿಶೇಷಾಚಾರವಾಗಿ ಸರ್ವವನ್ನೂ ತಿಳಿದವನಾದನಂ. ಸರ್ವ ಅಸ್ತ್ರಜ್ಞರಲ್ಲಿ ಪ್ರಧಾನನಾದ ಪಾಂಡುರಾಜನಂ ಧನುರ್ಧಾರಿಯಾಗಿ ಎಲ್ಲಾ ಭೂವಿಯನ್ನೂ ಗೆದ್ದನಂ. ॥ ೧೪೪ ॥

ಮೂ ॥ ಗವದ್ಗಣಾ ದಾಸ ಶಥೈವ ಸಂತಾತ್
ಸಮಸ್ತಗಂಧರ್ವಪತಿಃ ಸ ತುಂಬರುಃ ।
ಯ ಉದ್ವಹೋ ನಾಮ ಮರುತ್ತದಂಶ–
ಯುಕ್ತೋ ವಶೀ ಸಂಜಯನಾಮಧೇಯಃ ॥ ೧೪೫ ॥

ಅ ॥ ಹಾಗಿಯೇ ಎಲ್ಲಾ ಗಂಧರ್ವರಿಗೂ ಅಧಿಪತಿಯಾಪ ಯಾವ ತುಂಬುರುನಾವಂಕ ಗಂಧರ್ವನೋ, ಆ ತುಂಬುರುನಾವಂಕ ಗಂಧರ್ವನು ಉದ್ವಹನೆಂದು ಪ್ರಸಿದ್ಧನಾದ ಯಾವ ವಾಯುವೋ ಆತನ ಅಂಶದಿಂದೊಡಗೂಡಿದವನಾಗಿ ಜಿತೇಂದ್ರಿಯನಾಗಿ ಸಂಜಯನೆಂದು ಹೆಸರು ಳ್ಳವನಾಗಿ "ಸೂತಾತ್"=ವಿಚಿತ್ರವೀರ್ಯನ ಸಾರಥಿಯಾದ, ಗವಲ್ಗಣದ್ದೆಸೆಯಿಂದ ಆದನು; (ಹುಟ್ಟಿದನು.) ॥ ೧೪೫ ॥

ಮೂ ॥ ವಿಚಿತ್ರವೀರ್ಯಸ್ಯ ಸ ಸೂತಪುತ್ರಃ
ಸಖಾ ಚ ತೇಷಾಮುಭವತ್ ಪ್ರಿಯಶ್ಚ ।
ಸಮುಸ್ತ ವಿನ್ಮತಿವಾನ್ ವ್ಯಾಸಶಿಷ್ಯೋ
ವಿಶೇಷತೋ ಧೃತರಾಷ್ಟ್ರಾನುವರ್ತೀ ॥ ೧೪೬ ॥

ಅ ॥ ಸರ್ವಜ್ಞನಾದ ವಿವೇಕವುಳ್ಳ, ವೇದವ್ಯಾಸರ ಶಿಷ್ಯನಾದ ಆ ವಿಚಿತ್ರವೀರ್ಯರಾಜನ ಸೂತನಾದ (ಸಾರಥಿಯಾದ) ಗವಲ್ಗಣನ ಮಗನಾದ, ಆ ಸಂಜಯನು ಅವರಿಗೆ (ಅಂದರೆ ಧೃತರಾಷ್ಟ್ರ, ಪಾಂಡು, ವಿದುರ, ಈ ಮೂವರಿಗೆ) ಸಖನೂ ಪ್ರಿಯನೂ ಕೂಡ ಆದನು, ವಿಶೇಷಾಕಾರವಾಗಿ ಧೃತರಾಷ್ಟ್ರನಿಗೆ ಅನುಕೂಲನಾಗಿರುತ್ತಿದ್ದನು. ॥ ೧೪೬ ॥

ಧೃತರಾಷ್ಟ್ರಾದಿಗಳ ವಿವಾಹವನ್ನು ಹೇಳುತ್ತಾರೆ—

ಮೂ ॥ ಗಾಂಧಾರರಾಜಸ್ಯ ಸುತಾಮುವಾಹ
ಗಾಂಧಾರಿನಾವಿನ್ನಾಂ ಸುಬಲಸ್ಯ ರಾಜಾ ।
ಜ್ಯೇಷ್ಠೋ ಜ್ಯೇಷ್ಠಾಂ ಶಕುನೇರ್ದ್ಯಾವಪರಸ್ಯ
ನಾಸ್ತಿಕ್ಯರೂಪಸ್ಯ ಕುಕರ್ಮಹೇತೋಃ ॥ ೧೪೭ ॥

ಅ ॥ (ಪಾಂಡುರಾಜನ ಸಕಾಶದ್ದೆಸೆಯಿಂದ) ಜ್ಯೇಷ್ಠನಾದ ಧೃತರಾಷ್ಟ್ರರಾಜನು ಗಾಂಧಾರದೇಶಗಳಿಗೆ ಅಧಿಪತಿಯಾದ ಸುಬಲ ನಾವಂಕ ರಾಜನ ಮಗಳೂ ಮತ್ತು "ನಾಸ್ತಿ ಪರಲೋಕ" ಇತ್ಯಾದಿಗಳನ್ನೇ ಪ್ರಕಾಶಪಡಿಸತಕ್ಕವನು ಅಥವಾ ಪರದೇವತೆಯಿಲ್ಲ ಇತ್ಯಾದಿ ಮಿಥ್ಯಾಜ್ಞಾನ ರೂಪನೂ, ಕುತ್ಸಿತಕರ್ಮಗಳಿಗೆ ಕಾರಣಭೂತನೂ ಇಂತಹ ಮೂಲರೂಪದಲ್ಲಿ ದ್ವಾಪರನೆಂದು ಹೆಸರುಳ್ಳ ಶಕುನಿಯ ಜ್ಯೇಷ್ಠಭಗಿನಿಯೂ ಆದ ಗಾಂಧಾರೀ ನಾವಂಕಳನ್ನು (ಪೂರ್ವಜನ್ಮದಲ್ಲಿ ಮತಿಯೆಂದು ಹೆಸರುಳ್ಳವಳನ್ನು) ಮದುವೆಮಾಡಿಕೊಂಡನು.

ವಿಶೇಷಾಂಶ—(1) ದ್ವಯೋಃ ವಿರುದ್ಧಕೋಟ್ಯೋಃ ಪರಃ=ಎರಡು ವಿರುದ್ಧ ಕೋಟಿಗಳಲ್ಲಿ ತಾತ್ಪರ್ಯವಿರತಕ್ಕ ಜ್ಞಾನವು ದ್ವಿಪರವು. ತತ್ವಸಂಶಯವು ಪ್ರಾಯಶಃ ತತ್ವಸಂಶಯಕ್ಕೆ ಹೇತುಭೂತವಾಗಿರುವುದರಿಂದ ಮೂರನೇ ಯುಗವೂ ದ್ವಾಪರವು. ಅದಕ್ಕೆ ಅಭಿಮಾನಿಯಾದ ತತ್ವನಿಶ್ಚಯಕ್ಕೆ ವಿರೋಧಿಯಾದ ಶಕುನಿಯೂ ಕೂಡ ಮೂಲರೂಪದಲ್ಲಿ ದ್ವಾಪರನೆಂದು ಹೆಸರುಳ್ಳವನು. ಮತ್ತು ನಾಸ್ತಿಕ್ಯವೇವ ರೂಪಯಃ=ನಾಸ್ತಿಕ್ಯವನ್ನೇ ಪ್ರಕಾಶಪಡಿಸತಕ್ಕವನೂ ಅಥವಾ ಪರದೇವತೆಯಿಲ್ಲವೆಂದು ಮಿಥ್ಯಾಜ್ಞಾನ ರೂಪನು. ಇಂಥವನೇ ಶಕುನಿಯಾದನು (2) ಧೃತರಾಷ್ಟ್ರನ ಬುದ್ಧಿಯಲ್ಲಿ ಸಂಶಯವನ್ನು ಹುಟ್ಟಿಸಿ ಕೊನೆಗೆ ಆ ಬುದ್ಧಿಯನ್ನು ನಾಸ್ತಿಕ್ಯದಲ್ಲಿ ಸ್ಥಿರೀಕರಿಸಿ ದುಷ್ಟವಾದ ದ್ಯೂತಾದಿ ಕರ್ಮಗಳಲ್ಲಿ ರುಚಿಯನ್ನು ಹುಟ್ಟಿಸುತ್ತಾನೆ ಎಂದು ಸೂಚಿಸುವುದ

ಕ್ಯಾಗಿ ಮೂರು ವಿಶೇಷಣಗಳು. (3) ಶಕುನಿರ್ನಾಮ ಯಸ್ತ್ವಸೀದ್ರಾಜಾ ಲೋಕೇ ಮಹಾರಥಃ ! ದ್ವಾಪರಂ ವಿದ್ಧಿ ತಂ ರಾಜನ್ ಸಂಭೂತಮುರಿಮರ್ದನಂ ॥ ಶಕುನಿಯೆಂದು ಪ್ರಸಿದ್ಧನಾದ ಮಹಾರಥನಾದ ರಾಜನು ಇರುತ್ತಿದ್ದನು. ಆತನನ್ನು ದ್ವಾಪರನನ್ನಾಗಿ ತಿಳಿ. ॥ ೧೪೭ ॥

ಮೂ ॥ ಶೂರಸ್ಯ ಪುತ್ರೀ ಗುಣಶೀಲರೂಪ–
ಯುಕ್ತಾ ದತ್ತಾ ಸಖ್ಯುರೇವ ಸ್ವಪಿತ್ರಾ ।
ನಾಮ್ನಾ ಪೃಥಾ ಕುಂತಿಭೋಜಸ್ಯ ತೇನ
ಕುಂತೀ ಭಾರ್ಯಾ ಪೂರ್ವದೇಹೇಽಪಿ ಪಾಂಡೋಃ ॥ ೧೪೮ ॥

ಅ ॥ ಯಾವ ಸ್ತ್ರೀಯು ಪಾಂಡುರಾಜನಿಗೆ ಪರಾವಹಾಖ್ಯ ಮೂಲರೂಪದೇಹದಲ್ಲಿಯೂ ಕುಂತಿಯೆಂದು ಹೆಸರುಳ್ಳ ಹೆಂಡತಿಯಾಗಿದ್ದಳೋ, ಆವಳು ಶೂರರಾಜನ ಮಗಳಾದ, ಗುಣ, ಶೀಲ, ರೂಪಗಳಿಂದ ಯುಕ್ತಳಾದ ನಾಮದಿಂದ ಪೃಥಾ ಎಂದು ಪ್ರಸಿದ್ಧಳಾದವಳಾಗಿ ಹುಟ್ಟಿದಳು. ಅವಳು ಪೃಥೆಯು ತಂದೆಯಾದ ಶೂರರಾಜನಿಂದ ತನ್ನ ಮಿತ್ರನಾದ (ಮಕ್ಕಳಿಲ್ಲದಿರುವ) ಕುಂತಿ ಭೋಜನಿಗೆ ಕೊಡಲ್ಪಟ್ಟಳು. (ಅಂದರೆ ಮಕ್ಕಳಿಲ್ಲದಿರುವ ನೀನು ಈ ಪೃಥಾ ದೇವಿಯನ್ನು ಮಗಳಂತೆ ಪರಿಪಾಲಿಸು, ಎಂದು ಹೇಳಿ ಕೊಡಲ್ಪಟ್ಟಳು.) ಮತ್ತು ಕುಂತೀಭೋಜನಿಗೆ ಕೊಟ್ಟಿದ್ದರಿಂದಲೇ ಕುಂತೀ ಎಂದು ಹೆಸರಿನಿಂದ ಪ್ರಸಿದ್ಧಳಾದಳು.

ಹುಟ್ಟಿದರು. ತಥಾ ಚ ಪರಾವಹನಾಮಕ ವಾಯುವಿಗೆ ಸಿದ್ಧಿ ಅಥವಾ ಕುಂತಿಯೆಂದು ಹೆಸರುಳ್ಳ ಹೆಂಡತಿಯು ಇರುತ್ತಿದ್ದಳು. ಮತಿಯಾದರೂ ಸುಬಲರಾಜನ ಮಗಳಾದ ಗಾಂಧಾರಿಯಾಗಿ ಹುಟ್ಟಿದಳು. ॥ ೧೪೭ ॥

ಕುಂತೀಭೋಜನ ಸ್ವರೂಪವನ್ನು ಹೇಳುತ್ತಾರೆ—

ಮೂ ॥ ಕೂರ್ಮಶ್ಚ ನಾಮ್ನಾ ಮರುದೇವ ಕುಂತಿ–
ಭೋಜೋಽಥೈನಾಂ ವರ್ಧಯಾಮಾಸ ಸಮ್ಯಕ್ ।
ತತ್ಯಾಗಮುಚ್ಚಂಕರಾಂಶೋಽತಿಕೋಪೋ
ದುರ್ವಾಸಾಸ್ತಂ ಪ್ರಾಹ ಮಾಂ ವಾಸಯೇತಿ ॥ ೧೪೯ ॥

ಅ ॥ ಕುಂತಿಭೋಜನು (ಮೊದಲು) ನಾಮದಿಂದ ಕೂರ್ಮನೆನ್ನುವ ವಾಯುವೇ, ಆ ಮೇಲೆ ಕುಂತಿಭೋಜನು ಈ ಕುಂತೀದೇವಿಯನ್ನು ಪ್ರೀತಿಪೂರ್ವಕವಾಗಿ ಸಾಕಿಕೊಂಡು ಇದ್ದನು. ಅಲ್ಲಿಗೆ (ಅಂದರೆ ಕುಂತಿಭೋಜನ ಮನೆಗೆ) ರುದ್ರನ ಅವತಾರಭೂತರಾದ ಅತ್ಯಂತ ಕೋಪವುಳ್ಳ ದುರ್ವಾಸಮುನಿಗಳು ಬಂದರು. ನನ್ನನ್ನು ವಾಸಮಾಡಿಸು (ಅಂದರೆ ಚಾತುರ್ಮಾಸ್ಯ ವ್ರತವನ್ನು ಮಾಡಿಸು.) ಎಂದು ಕುಂತಿಭೋಜನನ್ನು ಕುರಿತು ಹೇಳಿದರು. ॥ ೧೪೯ ॥

ಮೂ ॥ ತವಾಹ ರಾಜಾ ಯದಿ ಕನ್ಯಕಾಯಾಃ
ಕ್ಷ್ವಿಂಷ್ಯಸೇ ಶಕ್ತಿತಃ ಕರ್ಮಕರ್ತ್ಯಾಃ ।
ಸುಖಂ ವಸೇತ್ಯೋವಿತಿ ತೇನ ಚೋಕ್ತೇ
ಶುಶ್ರೂಷಣಾಯಾದಿಶದಾಶು ಕುಂತೀಂ ॥ ೧೫೦ ॥

ಅ ॥ (ತನ್ನ) ಶಕ್ತ್ಯನುಸಾರವಾಗಿ (ಸೇವಾ ರೂಪವಾದ) ಕರ್ಮವನ್ನು ಮಾಡತಕ್ಕ ಹುಡು ಗಿಯಂ ಕರ್ಮವನ್ನು (ನೀವು) ಕ್ಷ್ವಿಂಸುವುದಾದರೆ (ಅಂದರೆ ಕೆಲವು ವೇಳೆ ಯತ್ಕಿಂಚಿತ್ ನ್ಯೂನ ವಾದರೂ ಸಹಿಸಿಕೊಳ್ಳುವುದಾದರೆ) ಸುಖವಾಗಿ ಆವಾಸ ಮಾಡಿರಿ, ಹೀಗೆ ಕುಂತಿಭೋಜರಾಜನು ಆ ದುರ್ವಾಸ ಋಷಿಗಳನ್ನು ಕುರಿತು ಹೇಳಿದನು. (ಆಗ) ಆ ದುರ್ವಾಸ ಋಷಿಗಳಿಂದ ಓವಿಂತಿ= ಹಾಗೆಯೇ ಆಗಲಿ, ಎಂದು ಹೇಳಲ್ಪಡುತ್ತಿರಲು ಕುಂತಿಭೋಜರಾಜನು (ಯತಿಗಳ) ಸೇವೆಗೋ ಸ್ಕರ ಶೀಘ್ರದಲ್ಲಿ ಕುಂತಿಯನ್ನು ಆಜ್ಞಾಪಿಸಿದನು. ॥೧೫೦॥

ಮೂ ॥ ಚಕಾರ ಕರ್ಮ ಸಾ ಪೃಥಾ ಮುನೇಃ ಸುಕೋಪನಸ್ಯ ಹಿ ।
ಯಥಾ ನ ಶಕ್ಯತೇ ಪರೈಃ ಶರೀರವಾಙ್ಮನೋಽನುಗಾ ॥ ೧೫೧ ॥

ಅ ॥ ಶರೀರ, ಮಾತು, ಮನಸ್ಸು ಇವುಗಳಿಂದ ಅನುಸರಿಸಿಕೊಂಡಿರುವ ಆ ಕುಂತೀದೇವಿಯು (ತಾನು ಹೊರತು) ಬೇರೆಯವರಿಂದ (ಮಾಡಲಿಕ್ಕೆ) ಹೇಗೆ ಶಕ್ಯವಾಗಲಾರದೋ (ಹಾಗೆಯೇ) ಅತಿ ಕೋಪಿಷ್ಠರಾದ ದುರ್ವಾಸಋಷಿಗಳ (ಸೇವಾ ರೂಪವಾದ) ಕರ್ಮವನ್ನು ಮಾಡಿದಳು; ಪ್ರಸಿದ್ಧವು. ॥ ೧೫೧ ॥

ಮೂ ॥ ಸ ವತ್ಸರತ್ರಯೋದಶಂ ತಯಾ ಯಥಾವದರ್ಚಿತಃ ।
ಉಪಾದಿಶತ್ ಪರಂ ಮನುಂ ಸಮಸ್ತ ದೇವವಶ್ಯದಂ ॥ ೧೫೨ ॥

ಅ ॥ ಆ ಕುಂತೀದೇವಿಯಿಂದ ಹದಿವಶೂರಂ (೧೩) ವರ್ಷ ಪರ್ಯಂತವಾಗಿ ಯೋಗ್ಯ ರೀತಿಯಿಂದ (ಅಂದರೆ ಪ್ರಥಮ ದಿನವನ್ನು ಆರಂಭಿಸಿ ಅಂತ್ಯ ದಿನ ಪರ್ಯಂತವಾಗಿ ಒಂದೇ ಪ್ರಕಾರ) ಪೂಜಿಸಿಕೊಳ್ಳಲ್ಪಟ್ಟ ಆ ದುರ್ವಾಸರಂ ಎಲ್ಲಾ ದೇವತೆಗಳನ್ನೂ ವಶೀಕರಿಸತಕ್ಕ ಶಕ್ತಿ ಯುನ್ನು ಕೊಡತಕ್ಕ ಉತ್ತಮವಾದ ಮಂತ್ರವನ್ನು (ಕುಂತಿಗೆ) ಉಪದೇಶಕೊಟ್ಟರು.

ವಿಶೇಷಾಂಶ—ಪರಂ ಮನುಂ ಎನ್ನುವ ಏಕವಚನದಿಂದ, ಒಂದೇ ಮಂತ್ರದಿಂದಲೇ ಯಾವ ಯಾವ ದೇವತೆಗಳನ್ನು ಕರೆಯುತ್ತಾಳೋ ಆ ಎಲ್ಲಾ ದೇವತೆಗಳೂ ಮಂತ್ರ ಶಕ್ತಿಯಿಂದ ತತ್ಕ್ಷಣದಲ್ಲಿಯೇ ಬರುತ್ತಾರೆಂದು ಸೂಚಿತವಾಯಿತು. ॥ ೧೫೨ ॥

ಮೂ ॥ ಋತೌ ತು ಸಾ ಸಮಾಪ್ಯ ತಾ ಪರೀಕ್ಷಣಾಯ ತನ್ಮನೋಃ ।
ಸಮಾಹ್ವಯದ್ದಿವಾಕರಂ ಸ ಚಾಜಗಾಮ ತತ್ಕ್ಷಣಾತ್ ॥ ೧೫೩ ॥

ಅ ॥ ಋತು ಕಾಲದಲ್ಲಿ ಆದರೂ ಸುಸ್ನಾನಳಾದ ಆ ಕುಂತಿಯು ಆ ಪ್ರಸಿದ್ಧ ಮಂತ್ರದ ಪರೀಕ್ಷೆ ಮಾಡುವುದಕ್ಕಾಗಿ ಸೂರ್ಯನನ್ನು (ಮಂತ್ರದಿಂದ) ಭಕ್ತಿಪೂರ್ವಕವಾಗಿ ಕರೆದಳು, ಆ ಸೂರ್ಯನಾದರೂ ಕ್ಷಣಮಾತ್ರದಿಂದಲೇ ಬಂದನು. ॥ ೧೫೩ ॥

ಮೂ ॥ ತತೋ ನ ಸಾ ವಿಸರ್ಜಿತುಂ ಶಶಾಕ ತಂ ವಿನಾ ರತಿಂ ।
ಸುವಾಕ್ಯಯತ್ನತೋಽಪಿ ತಮುಥಾಸಸಾದ ಭಾಸ್ಕರಃ ॥ ೧೫೪ ॥

ಅ ॥ ಸೂರ್ಯನು ಬಂದಮೇಲೆ ಸುವಾಕ್ ಪ್ರಯತ್ನತೋಽಪಿ=ನನ್ನಲ್ಲಿ ಕ್ರೀಡಿಸು ಎನ್ನುವ ವಚನವು, ಕರಗ್ರಹಣ ಪಾದಗ್ರಹಣ ಮೊದಲಾದ ಪ್ರಯತ್ನವು ಇವುಗಳಿಂದಲೂ ಕೂಡ (ಅಂಗೀಕಾರ ಮಾಡಿಸಲ್ಪಟ್ಟ ಆ ಕುಂತೀದೇವಿಯು ಅಥವಾ ನಾನು ಪರೀಕ್ಷಾರ್ಥವಾಗಿ ಕರದದ್ದು, ಕನ್ನಿಕೆಯಾದ ನನ್ನನ್ನು ಕ್ರೀಡಿಸಬಾರದು ಪೂಜ್ಯನೇ ಬಂದಹಾಗೆ ಹಿಂದೆ ಹೋಗು ಇದು ಮೊದಲಾದ) ಒಳ್ಳೆ ಮಾತುಗಳಿಂದಲೂ ಪಾರ್ಥನಾದಿ ರೂಪವಾದ ಪ್ರಯತ್ನದ್ದೆಸೆಯಿಂದಲೂ, ಕ್ರೀಡೆಯನ್ನು ಮಾಡದೆ ಆ ಸೂರ್ಯನನ್ನು ಬಿಡಲಿಕ್ಕೆ (ಹಿಂದೆ ಕಳುಹಿಸಲಿಕ್ಕೆ) ಸಮರ್ಥಳಾಗಲಿಲ್ಲ, ಆ ಮೇಲೆ ಸೂರ್ಯನು (ಸುವಾಕ್ ಪ್ರಯತ್ನತೋಷಿತಾಂ ಎನ್ನುವ ಪಾಠದಲ್ಲಿ ಸುಂದರಿಯೇ ನಿನಗೆ ಅಪಯಶಸ್ಸು ಬರುವುದಿಲ್ಲ, ನನ್ನ ಅನುಗ್ರಹದ್ದೆಸೆಯಿಂದ ನಿನಗೆ ಕನ್ಯಾತ್ವವೇ ಬರುತ್ತದೆ. ಇದು ಮೊದಲಾದ) ಒಳ್ಳೇ ಮಾತುಗಳೂ ಪ್ರಯತ್ನಗಳೂ ಇವುಗಳಿಂದ ಸಂತೋಷವನ್ನು ಹೊಂದಿಸಲ್ಪಟ್ಟ ಆ ಕುಂತಿಯನ್ನು ಹೊಂದಿದನು. (ಅಂದರೆ ಕ್ರೀಡಿಸಿದನು.) ॥ ೧೫೪ ॥

ಮೂ ॥ ಸ ತತ್ರ ಜಜ್ಞೀವಾನ್ ಸ್ವಯಂ ದ್ವಿತೀಯರೂಪಕೋ ವಿಭುಃ ।
ಸವರ್ಮದಿವ್ಯಕುಂಡಲೋ ಜ್ವಲನ್ನಿವ ಸ್ವತೇಜಸಾ ॥ ೧೫೫ ॥

ಅ ॥ ಕವಚದಿಂದಲೂ ದಿವ್ಯಗಳಾದ ಎರಡು ಕುಂಡಲಗಳಿಂದಲೂ ಕೂಡಿದ ಮೂಲರೂಪದಿಂದ ಅವತಾರ ರೂಪವುಳ್ಳ, ಆ ಸೂರ್ಯನು ತನ್ನ ತೇಜಸ್ಸಿನಿಂದ ಪ್ರಕಾಶಿಸುವವನಂತೆ ಆ ಕುಂತಿಯಲ್ಲಿ ತಾನೇ ಹುಟ್ಟಿದನು. ॥ ೧೫೫ ॥

ಮೂ ॥ ಪುರಾ ಸ ವಾಲಿವಾರಣಪ್ರಭೂತದೋಷಕಾರಣಾತ್ ।
ಸಹಸ್ರವರ್ಮನಾವಿನಾಸುರೇಣ ವೇಷ್ಟಿತೋಽಜನಿ ॥ ೧೫೬ ॥

ಅ ॥ ತ್ರೇತಾಯುಗದಲ್ಲಿ ಆ ಸೂರ್ಯನು ವಾಲಿಯನ್ನು ಸಂಹಾರಮಾಡಿಸಿದ್ದರಿಂದುಂಟಾದ ದೋಷದ ಕಾರಣದಿಂದ ಸಹಸ್ರವರ್ಮನೆಂದು ಹೆಸರುಳ್ಳ ಅಸುರನಿಂದ ಆವಿಷ್ಟನಾದವನಾಗಿ ಹುಟ್ಟಿದನು, ॥ ೧೫೬ ॥

ಮೂ ॥ ಯಥಾ ಗ್ರಹೈರ್ವಿದೂಷ್ಯತೇ ಮತಿರ್ನೃಣಾಂ ತಥೈವ ಹಿ ।
ಅಭೂಚ್ಚ ದೈತ್ಯದೂಷಿತಾ ಮತಿರ್ದಿವಾಕರಾತ್ಮನಃ ॥ ೧೫೭ ॥
ತಥಾಪಿ ರಾಮಸೇವನಾದ್ಧರೇಶ್ಚ ಸನ್ನಿಧಾನಯುಕ್ ।
ಸುದರ್ಶನೀಯಕರ್ಣತಃ ಸ ಕರ್ಣನಾಮಕೋಽಭವತ್ ॥ ೧೫೭ ॥

ಅ ॥ ಹೇಗೆ ಮನುಷ್ಯರ ಬುದ್ಧಿಯು ಪಿಶಾಚಿಗಳಿಂದ ದೂಷಿತವಾಗುತ್ತದೋ, ಹಾಗೆಯೇ ಸೂರ್ಯಸ್ವರೂಪನಾದವನ ಬುದ್ಧಿಯೂ (ಯದ್ಯಪಿ) ದೈತ್ಯನಿಂದ ದೂಷಿತವಾಯಿತು. ಆದಾಗ್ಯೂ, ಮೊದಲು ಮಾಡಿದ ರಾಮಚಂದ್ರ ದೇವರ ಸೇವೆಯದ್ದೆಸೆಯಿಂದ ಶ್ರೀಹರಿಯ ಸನ್ನಿಧಾನದಿಂದ ಯುಕ್ತನಾಗಿಯೇ ಹುಟ್ಟಿದನು, ನೋಡಲಿಕ್ಕೆ ಅತ್ಯಂತ ಯೋಗ್ಯಗಳಾದ ಪ್ರಶಸ್ತ ಕವಿಗಳು ಉಳ್ಳವನಾದುದರಿಂದ ಆ ಕುಂತೀಪುತ್ರನ ಕರ್ಣನೆನ್ನುವ ಹೆಸರುಳ್ಳವನಾಗಿ ಪ್ರಸಿದ್ಧನಾದನು. ॥ ೧೫೭ ॥ ೧೫೮ ॥

ಮೂ ॥ ಸ ರತ್ನಪೂರ್ಣಮಂಜುಷಾಗತೋ ವಿಸರ್ಜಿತೋ ಜಲೇ ।
ಜನಾಪವಾದಭೀತಿತಸ್ತಯಾ ಯಮಸ್ವಸುರ್ದ್ರುತಂ ॥ ೧೫೯ ॥
ನದೀಪ್ರವಾಹತೋ ಗತಂ ದದರ್ಶ ಸೂತನಂದನಃ ।
ತಮಗ್ರಹೀತ್ ಸರತ್ನಕಂ ಚಕಾರ ಪುತ್ರಕಂ ನಿಜಂ ॥ ೧೬೦ ॥

ಅ ॥ ಆ ಕುಂತೀದೇವಿಯಿಂದ, ಜನರ ಅಪವಾದದ ಹೆದರಿಕೆಯಿಂದ (ಅಂದರೆ ಕನ್ನಿಕೆಯಲ್ಲಿ ಈತನು ಹುಟ್ಟಿರುವನು ಎಂದು ಜನರು ನಿಂದಿಸಿಯಾರು ಎನ್ನುವ ಭಯದಿಂದ) (ಅಶ್ವನದಿಯ) ಜಲದಲ್ಲಿ ರತ್ನಗಳಿಂದ ತುಂಬಿದ* ಪೆಟ್ಟಿಗೆಯಲ್ಲಿರತಕ್ಕ ಆ ಕುಮಾರನು ಬಿಡಲ್ಪಟ್ಟನು. ಯಮನ ತಂಗಿಯಾದ ಯಮುನಾ ನದಿಯ ಸಕಾಶದ್ದೆಸೆಯಿಂದ ಶೀಘ್ರದಲ್ಲಿ ಗಂಗೆಯ ಪ್ರವಾಹದಿಂದ (ಚಂಪಾ ಪಟ್ಟಣವನ್ನು ಕುರಿತು) ಬಂದ ಕುಮಾರನನ್ನು ಸೂತನ ಪುತ್ರನಾದ ಅಧಿರಥನು ಕಂಡನು. ರತ್ನಗಳಿಂದ ಬಾಲಕನನ್ನು ಸ್ವೀಕರಿಸಿದನು. ತನ್ನ ಮಗನನ್ನಾಗಿ ಮಾಡಿದನು.

ವಿಶೇಷಾಂಶ—ಮಂಜೂಷಾ ತ್ವಶ್ವನದ್ಯಾಃ ಸಾ ಯಯೌ ಚರ್ಮಣ್ವತೀನದೀಂ ಚರ್ಮಣ್ವತ್ಯಾಶ್ಚ ಯಮುನಾಂ ತತೋ ಗಂಗಾಂ ಜಗಾಮ ಹ । ಗಂಗಾಯಾಂ ಸೂತ-ವಿಷಯಂ ಚಂಪಾಮಭ್ಯಗಮತ್ಪುರೀಂ ॥ ಕುಂತಿಯು ಅಶ್ವನದಿಯ ಜಲದಲ್ಲಿ ರತ್ನಗಳಿಂದಲೂ ಕುಮಾರನಿಂದಲೂ ಯುಕ್ತವಾದ ಪೆಟ್ಟಿಗೆಯನ್ನು ಬಿಟ್ಟಳು. ಆ ಪೆಟ್ಟಿಗೆಯು ಚರ್ಮಣ್ವತೀ ನದಿಗೆ ಹೋಯಿತು. ಚರ್ಮಣ್ವತೀ ನದಿಯಿಂದ ಯಮುನೆಗೂ ಯಮುನಾ ನದಿಯಿಂದ ಗಂಗಾ ನದಿಗೆ ಹೋಗಿ ಸೇರಿತು. ಗಂಗೆಯಲ್ಲಿ ಅಧಿರಥನ ದೇಶವಾದ ಚಂಪಾಪಟ್ಟಣಕ್ಕೆ ಹೋಯಿತು. ॥ ೨೫೯ ॥ ೧೬೦ ॥

ಮೂ ॥ ಸೂತೇನಾಧಿರಥೇನ ಲಾಲಿತತನುಸ್ತದ್ಭಾರ್ಯಯಾ ರಾಧಯಾ
ಸಂವೃದ್ಧೋ ನಿಖಿಲಾಃ ಶ್ರುತೀರಧಿಜಗೌ ಶಾಸ್ತ್ರಾಣಿ ಸರ್ವಾಣಿ ಚ ।
ಬಾಲ್ಯಾದೇವ ಮಹಾಬಲೋ ನಿಜಗುಣೈಃ ಸಂಭಾಸಮಾನೋ ವಸ-
ನ್ನಾಮ್ನಾಸೌ ವಸುಷೇಣತಾಮಗಮದಪ್ಯಾ (ಸ್ಯಾ) ಸೀದ್ಧ್ಯಮಾ
ತದ್ವಸು ॥ ೧೬೧ ॥

ಅ ॥ ಅಧಿರಥನಾಮಕ ಸೂತನಿಂದ ಕೊಂಡಾಡಲ್ಪಟ್ಟ ಶರೀರವುಳ್ಳವನು, ಅಧಿರಥನ ಹೆಂಡತಿಯಾದ ರಾಧೆಯಿಂದ ಬೆಳಿಸಲ್ಪಟ್ಟನು, ಬಾಲ್ಯಾವಸ್ಥೆಯನ್ನಾರಂಭಿಸಿಯೇ ಆವಾಸ ಮಾಡಿ ಕೊಂಡು ಇದ್ದವನು. ಮಹತ್ತಾದ ಬಲವುಳ್ಳವನು, ತನ್ನ (ಶೌರ್ಯ, ಔದಾರ್ಯ ಮೊದಲಾದ) ಗುಣಗಳಿಂದ ಚೆನ್ನಾಗಿ ಶೋಭಿಸಿಕೊಂಡು ಇರುವವನು, ಇಂತಹ ಕರ್ಣನು, ಎಲ್ಲಾ ವೇದಗಳನ್ನೂ ಎಲ್ಲಾ ಶಾಸ್ತ್ರಗಳನ್ನೂ ಅಧ್ಯಯನ ಮಾಡಿದನು. ಯಾವ ಕಾರಣದಿಂದ ಆ ಪೆಟ್ಟಿಗೆಯಲ್ಲಿರತಕ್ಕ ರತ್ನ ಮೊದಲಾದ ದ್ರವ್ಯವು, (ಕರ್ಣನ) ಸಮೀಪದಲ್ಲಿ ಅಥವಾ ಒಟ್ಟಿಗೇನೇ ಇರುತ್ತಿತ್ತೋ, (ಆ ಕಾರಣದಿಂದ) ಈ ಕರ್ಣನು ವಸುಷೇಣತ್ವವನ್ನೂ ಕೂಡ (ವಸುಷೇಣ ಎನ್ನುವ ಹೆಸರನ್ನೂ ಕೂಡ) ಹೊಂದಿದನು. ॥ ೧೬೧ ॥

---

* ಮಂಜೂಸಿ= ಮನೋಹರಗಳಾದ ರತ್ನಗಳು ದ್ರವ್ಯಗಳು ಸೀದಂತಿ= ಇರುತ್ತವೆ, ಅಸ್ಯಾಂ= ಪೆಟ್ಟಿಗೆಯಲ್ಲಿ. ಎನ್ನುವ ವ್ಯುತ್ಪತ್ತಿಯಿಂದ, ಮಂಜೂಷಾ= ಪೆಟ್ಟಿಗೆಯು.

ವಸುನಾ= ದ್ರವ್ಯದಿಂದ, ಸೇನತ್ವಾತ್= ಸಂಬದ್ಧನಾದ ಪ್ರಯುಕ್ತ ವಸುಷೇಣ. ಅಥವಾ ವಸು ರತ್ನಂ ವಸುದ್ರವ್ಯಂ ವಸುವೋಽಷ್ಟೌಧ್ರುವಾಯಃ ಎನ್ನುವುದರಿಂದ ವಸು ಸೇನಾ ಯಸ್ಯ ಸಃ ಎಂದು ವ್ಯುತ್ಪತ್ತಿಯು.

ಮೂ ॥ ಅಥ ಕುಂತೀ ದತ್ತಾ ಸಾ ಪಾಂಡೋಃ
ಸೋಽಪ್ಯೇತಯಾ ಚಿರಂ ರೇಮೇ ।
ಶೂರಾಚ್ಛೂದ್ರ್ಯಾಂ ಜಾತಾಂ ವಿದುರೋಽವಹ-
ದಾರುಣೀಂ ಗುಣಾಢ್ಯಾಂ ಸಃ (ಚ) ॥ ೧೬೨ ॥

ಅ ॥ ಕರ್ಣನು ಹುಟ್ಟಿದ ಮೇಲೆ ಆ ಕುಂತಿಯು ಪಾಂಡುರಾಜನಿಗೆ ಕೊಡಲ್ಪಟ್ಟಳು. ಆ ಪಾಂಡುರಾಜನಾದರೂ ಈ ಕುಂತೀದೇವಿಯಿಂದ ಬಹುಕಾಲದಲ್ಲಿ ಕ್ರೀಡಿಸಿಕೊಂಡು ಇದ್ದನು. (ವಿದುರನ ವಿವಾಹ ಪ್ರಕಾರವನ್ನು ಹೇಳುತ್ತಾರೆ.) ಆ ವಿದುರನು (ಕುಂತೀದೇವಿ ತಂದೆಯಾದ) ಶೂರರಾಜನದ್ದೆಸೆಯಿಂದ (ಪಾಣಿಗ್ರಹಣ ಧರ್ಮದಿಂದ ಸ್ವೀಕರಿಸಲ್ಪಟ್ಟ) ಶೂದ್ರಾಸ್ತ್ರೀಯಲ್ಲಿ ಹುಟ್ಟಿದ, ಗುಣಗಳಿಂದ ಸಂಪನ್ನಳಾದ ಆರುಣೀ ಎನ್ನುವವಳನ್ನು ವಿವಾಹವಾಡಿಕೊಂಡನು. ॥ ೧೬೨ ॥

ಪಾಂಡುರಾಜನು ಎರಡನೇ ಹೆಂಡತಿಯನ್ನು ವಿವಾಹವಾಡಿಕೊಂಡನು ಎಂದು ಹೇಳುವುದಕ್ಕಾಗಿ ಅದರ ಉಪೋದ್ಘಾತವನ್ನು ಹೇಳುತ್ತಾರೆ—

ಮೂ ॥ ಅಥ ಚಕರ್ಷಾಯನನಾಮಾ ಮುದ್ರೇಶಃ ಶಕ್ರತುಲ್ಯಪುತ್ರಾರ್ಥೀ ।
ಕನ್ಯಾರತ್ನಂ ಚಾಪ್ತುಂ ಚಕ್ರೇ ಬ್ರಾಹ್ಮಂ ತಪೋ ವರಂ ಚಾಪ ॥ ॥ ೧೬೩ ॥

ಅ ॥ ಕಥಾಂತರವನ್ನು ಆರಂಭಿಸುತ್ತಾರೆ, ದೇವೇಂದ್ರನಿಗೆ ಸದೃಶನಾದ ಮಗನನ್ನು ಇಚ್ಛಿಸುತ್ತಿದ್ದ ಮುದ್ರದೇಶಗಳಿಗೆ ಅಧಿಪತಿಯಾದ ಋತಾಯನನೆಂದು ಹೆಸರುಳ್ಳ, ರಾಜನು ಕನ್ಯಾಶ್ರೇಷ್ಠಳನ್ನು ಶ್ರೇಷ್ಠಪುತ್ರನನ್ನು ಕೂಡ ಹೊಂದುವುದಕ್ಕಾಗಿಯೂ ಬ್ರಹ್ಮನ ಸಂಬಂಧಿಯಾದ ತಪಸ್ಸನ್ನು ಮಾಡಿದನು. (ಈಪ್ಸಿತವಾದ) ವರವನ್ನೂ ಹೊಂದಿದನು. ॥ ೧೬೩ ॥

ಮೂ ॥ ಪ್ರಹ್ಲಾದಾವರಜೋ ಯಃ
ಸಹ್ಲಾದೋ ನಾಮತೋ ಹರೇರ್ಭಕ್ತಃ ।
ಸೋಽಭೂದ್ ಬ್ರಹ್ಮವರಾಂತೇ
ವಾಯೋರಾವೇಶಯುಕ್ ಸುತೋ ರಾಜ್ಞಃ ॥ ೧೬೪ ॥

ಅ॥ ಯಾವನು ಪ್ರಹ್ಲಾದನ ತಮ್ಮನೋ, ಶ್ರೀಹರಿಯ ಭಕ್ತನಾಗಿ ನಾಮದಿಂದ(ಮೊದಲು) ಸಹ್ಲಾದನೋ ಆತನು ಬ್ರಹ್ಮನ ವರದ ಸಮಾಪ್ತಿಯಲ್ಲಿ (ಅಂದರೆ ಋತಾಯನನು ಬ್ರಹ್ಮನಿಂದ ವರವನ್ನು ಹೊಂದಿದ ಮೇಲೆ) ವಾಯುದೇವರ ಆವೇಶದಿಂದ ಕೂಡಿದವನಾಗಿ ಋತಾಯನ ರಾಜನಿಗೆ ಮಗನಾಗಿ ಹುಟ್ಟಿದನು. ॥ ೧೬೪ ॥

ಮೂ ॥ ಸ ಮಾರುತಾವೇಶವಶಾತ್ ಪೃಥಿವ್ಯಾಂ
ಬಲಾಧಿಕೋಽಭೂದ್ವರತಶ್ಚ ಧಾತುಃ ।
ಶಲ್ಯಶ್ಚ ನಾಮ್ನಾಖಿಲಶಸ್ತ್ರಶಲ್ಯೋ
ಬಭೂವ ಕನ್ಯಾಸ್ಯ ಚ ಮಾದ್ರಿನಾಮ್ನೀ ॥ ೧೬೫ ॥

ಅ ॥ ಋಂತಾಯಂನರಾಜನ ವಂಗನಂ ವಾಯಂದೇವರ ಆವೇಶದಿಂದಲೂ ಬ್ರಹ್ಮನ ವರ ದಿಂದಲೂ ಕೂಡ ಪೃಥಿವಿಯಂಲ್ಲಿ ಬಲದಿಂದ ಅಧಿಕನಂ (ಅಂದರೆ ಅಧಿಕ ಬಲವುಳ್ಳವನಂ) ಆದನೂ, (ಯಾವ ಕಾರಣದಿಂದ) ಎಲ್ಲಾ ಶತ್ರುಗಳಿಗೆ ಶಲ್ಯ ರೂಪನೋ(ಆದಂದರಿಂದ)ಹೆಸರಿನಿಂದ ಶಲ್ಯನೂ ಆದನಂ. ಈ ಋಂತಾಯಂನನಿಗೆ ವಂಧ್ರೀ ನಾವಂಕಳಾದ ಕನ್ನಿಕೆಯಂಊ ಕೂಡ ಆಧಳಂ, (ಅಂದರೆ ಹಂಟ್ಟಿದಳಂ) ॥ ೧೬೫ ॥

ಕನ್ನಿಕೆಯಂ ವಂಂಲಸ್ವರೂಪವನ್ನಿ ಸ್ಪಷ್ಟೀಕರಿಸಂತ್ತಾರೆ—

ಮೂ ॥ ಸಾ ಪಾಂಡುಭಾರ್ಯೈವ ಚ ಪೂರ್ವಜನ್ಮ-
ನ್ಯಭೂತ್ಪುನಶ್ಚ ಪ್ರತಿಪಾದಿತಾಸ್ಮೈ ।
ಶಲ್ಯಶ್ಚ ರಾಜ್ಯಂ ಪಿತೃದತ್ತಮಂಜೋ
ಜುಗೋಪ ಧರ್ಮೇಣ ಸಮುಸ್ತಶಾಸ್ತ್ರವಿತ್ ॥ ೧೬೬ ॥

ಅ ॥ ಆ ಕನ್ನಿಕೆಯಂ ಪೂರ್ವಜನ್ಮದಲ್ಲಿ ಪಾಂಡುರಾಜನ ಹೆಂಡತಿಯೇ, (ಅಂದರೆ ಪಾಂಡು ರಾಜನ ವಂಂಲರೂಪವಾದ ಪರಾವಹ ಎನ್ನುವ ವಾಯಂವಿನ ಹೆಂಡತಿಯೇ.) ಪುನಶ್ಚ=ಅವತಾರ ದಲ್ಲಿಯೂ ಕೂಡ ಈ ಪಾಂಡುರಾಜನಿಗೋಸ್ಕರ (ವಂಧ್ರಿಯಂ. ಅಣ್ಣನಾದ ಶಲ್ಯನಿಂದ) (ಹೆಂಡತಿ ಯಾಗಿ) ಕೊಡಲ್ಪಟ್ಟಳಂ. ಸರ್ವಶಾಸ್ತ್ರಗಳನ್ನೂ ತಿಳಿದ ಶಲ್ಯನೂ ತಂದೆಯಿಂದ ಕೊಡಲ್ಪಟ್ಟ ರಾಜ್ಯ ವನ್ನು ಧರ್ಮದಿಂದ ಚೆನ್ನಾಗಿ ರಕ್ಷಿಸಿಕೊಂಡಿದ್ದನೂ. ॥ ೧೬೬ ॥

ಮೂ ॥ ಅಥಾಂಗನಾರತ್ನಮವಾಪ್ಯ ತದ್ವ್ಯಯಂ ।
ಪಾಂಡುಸ್ತು ಭೋಗಾನ್ ಬುಭುಜೇ ಯಥೇಷ್ಟತಃ ।
ಅಪೀಪಲದ್ಧರ್ಮಸಮಾಶ್ರಯೋ ವಹೀಂ
ಜ್ಯೇಷ್ಠಾಪಚಾಯೀ ವಿದುರೋಕ್ತವರ್ತ್ಮತಃ ॥ ೧೬೭ ॥

ಅ ॥ ವಂಧ್ರಿಯನ್ನು ವಂದುವೆ ಮಾಡಿಕೊಂಡ ಮೇಲೆ ಪಾಂಡುರಾಜನಾದರೂ ಕುಂತೀ ವಂಧ್ರೀ ಎನ್ನುವ ಶ್ರೇಷ್ಠರಾದ ಎರಡು ಹೆಂಡಂದಿರನ್ನು ಹೊಂದಿ ಇಚ್ಛಾನುಸಾರವಾಗಿ ಭೋಗ ಗಳನ್ನು ಭೋಗಿಸಿಕೊಂಡಂ ಇದ್ದನೂ ಧರ್ಮವನ್ನು ಚೆನ್ನಾಗಿ ಆಶ್ರಯಿಂಸಿಕೊಂಡಿರುವ (ಅಂದರೆ ಅತಿ ಧರ್ಮಿಷ್ಠನಾದ)* ಜ್ಯೇಷ್ಠನಾದ ಧೃತರಾಷ್ಟ್ರನನ್ನು ಧನಿಕನನ್ನಾಗಿ ವಂಾಡತಕ್ಕ ಪಾಂಡು ರಾಜನೂ ವಿದುರನಿಂದ ಹೇಳಲ್ಪಟ್ಟ ನೀತಿವಂರ್ಗದಿಂದ ಭೂವಿಯಂನ್ನು ರಕ್ಷಿಸಿಕೊಂಡಂ ಇದ್ದನೂ, ॥ ೧೬೭ ॥

ಹಾಗಾದರೆ ಪಾಂಡುರಾಜನೂ ಧರ್ಮಿಷ್ಠನೂ ಜ್ಯೇಷ್ಠನನ್ನು ಅನುಸರಿಸಿಕೊಂಡೇ ಇದ್ದವ ನಾದರೆ ಜ್ಯೇಷ್ಠನಾದ ಧೃತರಾಷ್ಟ್ರನು ಇರುವಾಗ ತಾನೂ ಹೇಗೆ ರಾಜ್ಯವನ್ನು ರಕ್ಷಿಸುತ್ತಾ ಇದ್ದನೂ, ಎಂದರೆ—

ಮೂ ॥ ಭೀಷ್ಮೋ ಹಿ ರಾಷ್ಟ್ರೇ ಧೃತರಾಷ್ಟ್ರಮೇವ
ಸಂಸ್ಥಾಪ್ಯ ಪಾಂಡುಂ ಯುವರಾಜಮೇವ ।

* ಜ್ಯೇಷ್ಠಂ ಅಪಚಿನೋತೀತಿ=ಅಣ್ಣನಾದ ಧೃತರಾಷ್ಟ್ರನನ್ನು ಧನವುಳ್ಳವನನ್ನಾಗಿ ಮಾಡುತ್ತಾನೆಂದು ವ್ಯುತ್ಪತ್ತಿಯು ಅಂದರೆ ತಾನು ದಿಗ್ವಿಜಯದಿಂದ ಸಂಪಾದಿಸಿದ ದ್ರವ್ಯವನ್ನು ಜ್ಯೇಷ್ಠನ ಮನೆಯಲ್ಲಿ ಸಂಗ್ರಹ ಮಾಡಿಕೊಂಡು ಇರುತ್ತಿದ್ದನು.

ಚಕ್ರೇ ತಥಾಪ್ಯಂಧ ಇತಿ ಸ್ಮ ರಾಜ್ಯಂ
ಚಕಾರ ನಾಸಾವಕರೋಚ್ಚ ಪಾಂಡುಃ ॥ ೧೬೮ ॥

ಅ ॥ (ಯದ್ಯಪಿ) ಭೀಷ್ಮಾಚಾರ್ಯರು ರಾಷ್ಟ್ರದಲ್ಲಿ ಧೃತರಾಷ್ಟ್ರನನ್ನೇ ಸಂಸ್ಥಾಪಿಸಿ (ಅಂದರೆ ಧೃತರಾಷ್ಟ್ರನನ್ನೇ ರಾಜನನ್ನಾಗಿ ಮಾಡಿ) ಪಾಂಡುರಾಜನನ್ನು ಯುವರಾಜನನ್ನಾಗಿಯೇ ಮಾಡಿದರು. ಆದಾಗ್ಯೂ ಈ ಧೃತರಾಷ್ಟ್ರನು (ತಾನು) ಅಂಧನು ಎನ್ನುವ (ಬುದ್ಧಿಯಿಂದ) ರಾಜ್ಯವನ್ನು ಯಾವ ಕಾರಣದಿಂದ ಪರಿಪಾಲಿಸಲಿಲ್ಲವೋ (ಆದ ಕಾರಣ) ಪಾಂಡುರಾಜನು ರಾಜ್ಯವನ್ನು ಪರಿಪಾಲಿಸಿಕೊಂಡಿದ್ದನು. ॥ ೧೬೮ ॥

ಮೂ ॥ ಭೀಷ್ಮಾಂಬಿಕೇಯೋಕ್ತಿಪರಃ ಸದೈವ
ಪಾಂಡುಃ ಶಶಾಸಾವನಿಮೇಕವೀರಃ ।
ಅಥಾಂಬಿಕೇಯೋ ಬಹುಭಿಶ್ಚ ಯಜ್ಞೈ-
ರೀಜೇ ಸ ಪಾಂಡುಶ್ಚ ಮಹಾಧನೌಘೈಃ ॥ ೧೬೯ ॥

ಅ ॥ ಪಾಂಡುರಾಜನು ಪ್ರತಿಭಟನಿಲ್ಲದಿದ್ದವನಾದಾಗ್ಯೂ ಯಾವಾಗಲೂ ಭೀಷ್ಮಾಚಾರ್ಯರೂ ಧೃತರಾಷ್ಟ್ರನೂ ಇವರ ಆಜ್ಞಾರೂಪವಾದ ವಾಕ್ಯದಲ್ಲಿಯೇ ಆಸಕ್ತನಾದವನಾಗಿ ಭೂಮಿಯನ್ನು ಪಾಲಿಸಿಕೊಂಡಿದ್ದನು. ಆಮೇಲೆ ಧೃತರಾಷ್ಟ್ರನು ೪ ಪಾಂಡುರಾಜನೂ ಕೂಡ ಅನರ್ಘ್ಯಗಳಾದ ರತ್ನಾದ್ಯುತ್ತಮ ಧನಗಳ ಸಮೂಹಗಳುಳ್ಳ ಬಹು ಯಾಗಗಳಿಂದ ಶ್ರೀಹರಿಯನ್ನು ಪೂಜಿಸಿಕೊಂಡು ಇದ್ದನು. ॥ ೧೬೯ ॥

ಆ ಕಾಲದಲ್ಲಿ ಉಂಟಾದ ಕಥಾಂತರವನ್ನು ಹೇಳುತ್ತಾರೆ—

ಮೂ ॥ ನೈಷಾ ವಿರೋಧೇ ಕುರುಪಾಂಡವಾನಾಂ
ಕಿಷ್ಕೇದಿತಿ ವ್ಯಾಸ ಉದೀರ್ಣಸದ್ಗುಣಃ ।
ಸ್ವಮಾತರಂ ಸ್ವಾಶ್ರಮಮೇವ ನಿನ್ಯೇ
ಸ್ನುಷೇ ಚ ತಸ್ಯಾ ಯಯತುಃ ಸ್ಮ ತಾವನು ॥ ೧೭೦ ॥

ಅ ॥ ಉತ್ಕೃಷ್ಟಗಳಾದ ನಿರ್ದೋಷ್ಟಗಳಾದ ಗುಣಗಳುಳ್ಳ ವೇದವ್ಯಾಸ ದೇವರು ಕೌರವರಿಗೂ ಪಾಂಡವರಿಗೂ ವಿರೋಧವು (ಪ್ರಾಪ್ತವಾಗುವಾಗ) ಈ ಸತ್ಯವತಿಯು (ಹಸ್ತಿನಾವತೀ ಪಟ್ಟಣದಲ್ಲಿ) ಇರಬಾರದು, ಎನ್ನುವ ಅಭಿಪ್ರಾಯದಿಂದ ತನ್ನ ತಾಯಿಯಾದ ಸತ್ಯವತೀ ದೇವಿಯನ್ನು ತನ್ನ ಬದರಿಕಾಶ್ರಮಕ್ಕೇನೇ ಕರಕೊಂಡು ಹೋದರು. ಆ ಸತ್ಯವತೀದೇವಿಯ ಸೊಸೆಯರಾದ ಅಂಬಿಕಾ ಅಂಬಾಲಿಕೆಯರು ಆ ಸತ್ಯವತೀದೇವಿಯನ್ನು ಅನುಸರಿಸಿಕೊಂಡು (ಬದರಿಕಾಶ್ರಮಕ್ಕೆ) ಹೋದರು. ॥ ೧೭೦ ॥

ಮೂ ॥ ಸುತೋಕ್ತವಾರ್ತೇನ ವಿಚಿಂತ್ಯ ತಂ ಹರಿಂ
ಸುತಾತ್ಮನಾ ಬ್ರಹ್ಮತಯಾ ಚ ಸಾ ಯಯೌ ।
ಪರಂ ಪದಂ ವೈಷ್ಣವಮೇವ ಕೃಷ್ಣ-
ಪ್ರಸಾದತಃ ಸ್ವರ್ಯಯತುಃ ಸ್ನುಷೇ ಚ ॥ ೧೭೧ ॥

ಅ ॥ ಆ ಸತ್ಯವತೀದೇವಿಯಂ ಮಂಗನಾದ ವ್ಯಾಸರಿಂದ ಹೇಳಲ್ಪಟ್ಟ ರೀತಿಯಿಂದ ಆ ವೇದ ವ್ಯಾಸರನ್ನು ಪುತ್ರಭಾವದಿಂದಲೂ ಪರಬ್ರಹ್ಮಭಾವದಿಂದಲೂ ಧ್ಯಾನಿಸಿ ವೇದವ್ಯಾಸರ ಅನುಗ್ರಹದಿಂದ ಉತ್ಕೃಷ್ಟವಾದ ವಿಷ್ಣುಸಂಬಂಧಿಯಾದ ಸ್ಥಾನವನ್ನೇ (ಅಂದರೆ ವೈಕುಂಠಲೋಕವನ್ನೇ) ಹೊಂದಿದಳು, ಸೊಸೆಯಂದಿರಾದ ಅಂಬಿಕಾ ಅಂಬಾಲಿಕೆಯಂದಿರೂ ಕೂಡ ವೇದವ್ಯಾಸರ ಅನುಗ್ರಹದೆಸೆಯಿಂದ ಸ್ವರ್ಗವನ್ನು ಹೊಂದಿದರು. ॥ ೧೭೧ ॥

ಮೂ ॥ ಮಾತಾ ಚ ಸಾ ವಿದುರಸ್ಯಾಪ ಲೋಕಂ
ವೈರಿಂಚಮನ್ವೇವ ಗತಾಂಬಿಕಾಂ ಸತೀ ।
ವ್ಯಾಸಪ್ರಸಾದಾತ್ ಸುತಸದ್ಗುಣೈಶ್ಚ
ಕಾಲೇನ ಮುಕ್ತಿಂ ಚ ಜಗಾಮ ಸನ್ಮತಿಃ ॥ ೧೭೨ ॥

ಅ ॥ (ತನ್ನ ಸ್ವಾಮಿಯಾದ) ಅಂಬಿಕೆಯನ್ನು ಅನುಸರಿಸಿಕೊಂಡೇ (ವ್ಯಾಸಾಶ್ರಯಂವನ್ನು ಕೊರಿತಃ) ಹೋದ ಪತಿವ್ರತೆಯಾದ ಆದಾವ ವಿದುರನ ತಾಯಿಯಂಯೂ ಕೂಡ ವೇದವ್ಯಾಸರ ಅನುಗ್ರಹದ್ದೆಸೆಯಿಂದಲೂ (ಅಂದರೆ ಕ್ರೀಡಾಕಾಲದಲ್ಲಿ ಪರಮಂಭಕ್ತಿಯನ್ನು ಮಾಡಿದ್ದರಿಂದಂ ಟಾದವ್ಯಾಸಾನುಗ್ರಹದ್ದೆಸೆಯಿಂದಲೂ) ಮಂಗನ ಸದ್ಗುಣಗಳಿಂದಲೂ (ಅಂದರೆ ಮಂಗನಾದ ವಿದುರನಂ ಪಾಂಡ್ವಾದಿಗಳಿಂದಲೂ ಸ್ವರೂಪತಃ ಉತ್ತಮಂನಾದ ಯಂಮನ ರೂಪನಾಗಿರಂವುದರಿಂದ ಅತನ ಉತ್ತಮಂ ಭಕ್ತ್ಯಾದಿಗುಣಗಳಿಂದಲೂ) ಬ್ರಹ್ಮಸಂಬಂಧಿಯಾದ ಸತ್ಯಲೋಕವನ್ನು ಕೊರಿತಂ ಹೋದಳಂ. ನಿರ್ದೋಷನಾದ ಶ್ರೀಹರಿಯಲ್ಲಿ ಮನಸ್ಸನ್ನಿಟ್ಟ ವಿದುರನ ತಾಯಿಯಂಂ ವ್ಯಾಸಾನುಗ್ರಹದಿಂದಲೂ ಮಂಗನಾದ ವಿದುರನ ಸದ್ಗುಣಗಳಿಂದಲೂ ಯೋಗ್ಯತಾಪೂರ್ತಿಕಾಲದಿಂದ ಮುಕ್ತಿಯನ್ನೂ ಹೊಂದಿದಳು,

ವಿಶೇಷಾಂಶ—(1) ವೇದವ್ಯಾಸರಾದರೂ ಮಾತೃಭಕ್ತಿಯಿಂದ ತನ್ನ ತಾಯಿಯನ್ನು ತನ್ನ ಆಶ್ರಮಕ್ಕೆ ಕರೆದುಕೊಂಡುಹೋದರು ಕೊನೆಗೆ ಮುಕ್ತಿಸ್ಥಾನವನ್ನೂ ಕೊಟ್ಟರಂ. (2) ಅಂಬಿಕಾ ಅಂಬಾಲಿಕೆಯಾದರೂ ರಮಣಸಮಯದಲ್ಲಿ ವೇದವ್ಯಾಸರಲ್ಲಿ ಅತಿಶಯಿತಭಕ್ತಿಯನ್ನು ಮಾಡದೆ ಇದ್ದುದರಿಂದಲೂ ಬೇರೆ ಸಮಯದಲ್ಲಿ ಭಕ್ತಿಯನ್ನು ಮಾಡಿದ್ದರಿಂದಲೂ ಸ್ವರ್ಗವನ್ನೇ ಹೊಂದಿದರು.(3)ವಿದುರನ ತಾಯಿಯಾದರೂ ದಾಸಿಯಾಗಿದ್ದರೂ ಭಕ್ತ್ಯಧಿಕ್ಯದಿಂದ ಸತ್ಯಲೋಕವನ್ನು ಹೊಂದಿದಳು. ಮುಕ್ತಿಕಾಲದಲ್ಲಿ ಆದರೂ ಸರ್ವರೂ ಮುಕ್ತಿಯನ್ನು ಹೊಂದುವರು. ॥ ೧೭೨ ॥

ಮೂ ॥ ಅಂಬಾಲಿಕಾಪಿ (ತು) ಕ್ರಮಯೋಗತೋಽಗಾತ್
ಪರಾಂ ಗತಿಂ ನೈವ ತಥಾಂಬಿಕಾ ಯಯೌ ।
ಯಥಾ ಯಥಾ ವಿಷ್ಣು ಪರಶ್ಮಿದಾತ್ಮ್ಯ
ತಥಾ ತಥಾ ಹ್ಯಸ್ಯ ಗತಿಃ ಪರತ್ರ ॥ ೧೭೩ ॥

ಅ ॥ ಅಂಬಾಲಿಕೆಯಾದರೂ ಕಾಲಕ್ರಮದಿಂದ ಸಂಪಾದಿತವಾದ ಮೋಕ್ಷೋಪಾಯದ್ದೆಸೆಯಿಂದ ಉತ್ತಮಂವಾದ ವೈಕುಂಠಾದಿ ಸ್ಥಾನವನ್ನು ಹೊಂದಿದಳಂ. ಅಂಬಿಕೆಯಾದರೂ (ತಾನು ಹೋಗದೆ ದಾಸಿಯನ್ನು ಕಳುಹಿಸಿಕೊಟ್ಟದರಿಂದುಂಟಾದ ಅಪರಾಧದಿಂದ) ಹಾಗೆ (ಅಂದರೆ ಅತ್ತೆಯಾದ ಸತ್ಯವತಿಯಂತೆಯೂ ತಂಗಿಯಾದ ಅಂಬಾಲಿಕೆಯಂತೆಯೂ ದಾಸಿಯಂತೆಯೂ) ವೈಕುಂಠಾದಿರೂಪವಾದ ಉತ್ತಮಂಸ್ಥಾನವನ್ನು ಹೊಂದಲೇ ಇಲ್ಲ. (ಮುಕ್ತಿ ಸಾರೂಪ್ಯರೂಪವಾದ

ಮೋಕ್ಷವನ್ನು ಮಾತ್ರ ಹೊಂದಿರುವಳು) (ಹಾಗಾದರೆ ಜೀವನರಿಗೆ ನಾನಾವಿಧವಾದ ಗತಿಗೆ ಕಾರಣವೇನೆಂದರೆ) ಜ್ಞಾನಸ್ವರೂಪಿಯಾದ ಜೀವನು ಹೇಗೆ ಹೇಗೆ ತನ್ನ ಸ್ವರೂಪಯೋಗ್ಯ ತಾರತಮ್ಯಾನುಸಾರವಾಗಿ ಶ್ರೀವಿಷ್ಣುವಿನಲ್ಲಿ ತಾತ್ಪರ್ಯ (ಭಕ್ತಿ) ಯನ್ನುಳ್ಳವನೋ ಹಾಗೆ ಹಾಗೆಯೇ (ಅಂದರೆ ತಂತಮ್ಮ ಯೋಗ್ಯತಾನುರೂಪವಾದ ಭಕ್ತ್ಯನುಸಾರವಾಗಿಯೇ) ಈ ಜೀವನಿಗೆ ಪರಲೋಕದಲ್ಲಿ ಗತಿಯನ್ನು (ಆಗುತ್ತದೆ) ಪ್ರಸಿದ್ಧವು.

ವಿಶೇಷಾಂಶ— (1) ಅಂಬಿಕೆಯಾದರೂ ತಾನು ಹೋಗದೆ ದಾಸಿಯನ್ನು ಕಳುಹಿಸಿ ಕೊಟ್ಟರುವುದರಿಂದ ಸತ್ಯವತ್ಯಾದಿಗಳಂತೆ ಉತ್ತಮ ಮುಕ್ತಿಯನ್ನು ಹೊಂದಲಿಲ್ಲ. ಮತ್ತೆ ಸಾರೂಪ್ಯ ಮೋಕ್ಷವನ್ನು ಮಾತ್ರ ಹೊಂದಿರುವಳು. ವೈಕುಂಠಲೋಕದಿಂದ ಇತರವಾದ ಲೋಕದಲ್ಲಿಯೇ ಅಥವಾ ಮುಕ್ತರಂತೆಯೇ ಸಂಚರಿಸಿಕೊಂಡು ಇರುತ್ತಿದ್ದಳು. ಸತ್ಯವತ್ಯಾದಿಗಳಂತೆ ಸಾಲೋಕ್ಯ ಮೋಕ್ಷವನ್ನು ಹೊಂದಲಿಲ್ಲ. ಹೀಗೆ ತಥಾ ಎಂದು ಹೇಳತಕ್ಕ ಗ್ರಂಥಕಾರರ ಅಭಿಪ್ರಾಯವು. ಮುಕ್ತಿಯೋಗ್ಯತೆಯಿಲ್ಲದೆ ವ್ಯಾಸರ ಅಂಗಸಂಗವು ಆಗಲಾರದು. ಆದಕಾರಣ ಇವರು ಮೂವರೂ ಯಥಾಯೋಗ್ಯವಾಗಿ ಮುಕ್ತಿಯನ್ನು ಹೊಂದುವರು. ॥ ೧೭೩ ॥

ಮೂ ॥ ಪಾಂಡುಸ್ತತೋ ರಾಜ್ಯಭರಂ ನಿಧಾಯ
ಜ್ಯೇಷ್ಠೇ ಽನುಜೇ ಚೈವ ವನಂ ಜಗಾಮ ।
ಪತ್ನೀದ್ವಯೇನಾನುಗತೋ ಬದರ್ಯಾ–
ಮುವಾಸ ನಾರಾಯಣಪಾಲಿತಾಯಾಂ ॥ ೧೭೪ ॥

ಅ ॥ ಸತ್ಯವತ್ಯಾದಿಗಳು ಪರಲೋಕಕ್ಕೆ ಹೋದಮೇಲೆ ಪಾಂಡುರಾಜನು ರಾಜ್ಯಭಾರವನ್ನು ಜ್ಯೇಷ್ಠನಾದ ಧೃತರಾಷ್ಟ್ರನಲ್ಲಿಯೂ ತಮ್ಮನಾದ ವಿದುರನಲ್ಲಿಯೂ ಇಟ್ಟು ಕುಂತೀಮಾದ್ರಿಯೆಂಬ ಇಬ್ಬರು ಹೆಂಡಂದಿರಿಂದ ಯುಕ್ತನಾಗಿ ಕಾಡನ್ನು ಕುರಿತು ಹೋದನು. ನಾರಾಯಣನಿಂದ ರಕ್ಷಿಸಿಕೊಳ್ಳಲ್ಪಟ್ಟ ಬದರಿಕಾಶ್ರಯದಲ್ಲಿ ಆವಾಸಮಾಡಿಕೊಂಡು ಇದ್ದನು. ॥ ೧೭೪ ॥

ಮೂ ॥ ಗೃಹಾಶ್ರಮೇಣೈವ ವನೇ ನಿವಾಸಂ
ಕುರ್ವನ್ ಸ ಭೋಗಾನ್ ಬುಭುಜೇ ತಪಶ್ಚ ।
ಚಕ್ರೇ ಮುನೀಂದ್ರೈಃ ಸಹಿತೋ ಜಗತ್ಪತಿಂ
ರಮಾಪತಿಂ ಭಕ್ತಿಯುತೋ ಽಭಿಪೂಜಯನ್ ॥ ೧೭೫ ॥

ಅ ॥ ಗೃಹಸ್ಥಾಶ್ರಮದಿಂದಲೇ ಕಾಡಿನಲ್ಲಿ (ಬದರಿಕಾಶ್ರಮದಲ್ಲಿ) ಆವಾಸವನ್ನು ಮಾಡಿಕೊಂಡು ಇರುತ್ತಿದ್ದ ಆ ಪಾಂಡುರಾಜನು ಭೋಗಗಳನ್ನು ಭೋಗಿಸುತ್ತಿದ್ದನು. ಋಷಿಶ್ರೇಷ್ಠರಿಂದ ಕೂಡಿಕೊಂಡು ಇರುತ್ತಿದ್ದ ಆ ಪಾಂಡುರಾಜನು ಜಗತ್ಪತಿಯಾದ ಶ್ರೀಲಕ್ಷ್ಮೀಪತಿಯಾದ ಶ್ರೀಪರಮಾತ್ಮನನ್ನು ಪೂಜಿಸುತ್ತಾ ತಪಸ್ಸನ್ನು ಮಾಡಿಕೊಂಡು ಇರುತ್ತಿದ್ದನು. ॥ ೧೭೫ ॥

ಮೂ ॥ ಸ ಕಾಮತೋ ಹರಿಣತ್ವಂ ಪ್ರಪನ್ನಂ
ದೈವಾದೃಷಿಂ ಗ್ರಾಮ್ಯಕರ್ಮಾನುಷಕ್ತಂ ।
ವಿದ್ಧ್ವಾ ಶಾಪಂ ಪ್ರಾಪ ತಸ್ಮಾತ್ ಸ್ತ್ರಿಯಾ ಯುಜ್
ಮರಿಷ್ಯಸೀತ್ಯೇವ ಬಭೂವ ಚಾರ್ತಃ ॥ ೧೭೬ ॥

ಅ ॥ ಆ ಪಾಂಡುರಾಜನು (ಶಾಪಾದಿಗಳು ಇಲ್ಲದೆ) ಹರೀಚ್ಛಾಧೀನವಾದ ತನ್ನ ಇಚ್ಛೆಯಿಂದಲೇ ಜಿಂಕೆಯ ರೂಪವನ್ನು ಹೊಂದಿದ ಹರೀಚ್ಛೆಯಿಂದಲೇ ಗ್ರಾಮ್ಯಕರ್ಮದಲ್ಲಿ ಅಂದರೆ (ರತಿಕರ್ಮದಲ್ಲಿ) ಪ್ರವೃತ್ತನಾದ ಕಿಂದಮಋಷಿಯನ್ನು ಹರೀಚ್ಛೆಯಿಂದ ಬಾಣದಿಂದ ಹೊಡೆದು ಆ ಕಿಂದಮಋಷಿಯ ದೆಸೆಯಿಂದ (ನೀನು) ಸ್ತ್ರೀಯರಿಂದ ಯುಕ್ತನಾಗಿಯೇ (ಅಂದರೆ ಕ್ರೀಡೆಯಲ್ಲಿರತ್ಕವನಾಗಿಯೇ) ಮರಣವನ್ನು ಹೊಂದುವಿ ಎಂದು ಶಾಪವನ್ನು ಹೊಂದಿದನು. ಆ ಪಾಂಡುರಾಜನು ಅತಿ ದುಃಖಿವುಳ್ಳವನು ಆದನು.

ವಿಶೇಷಾಂಶ—(1) ಸ ಚ ರಾಜನ್ ಮಹಾತೇಜಾಃ ಋಷಿಪುತ್ರಸ್ತಪೋಧನಃ ।
ಭಾರ್ಯಯಾ ಸಹ ತೇಜಸ್ವೀ ಮೃಗರೂಪೇಣ ಸಂಗತಃ ॥ ೧೪ ॥.....
.....ಅಹಂ ಹಿ ಕಿಂದಮೋ ನಾಮ ತಪಸಾ ಭಾವಿತೋ ಮುನಿಃ । ವ್ಯಪತ್ರಪನ್ಮನುಷ್ಯಾಣಾಂ ಮೃಗ್ಯಾಂ ಮೈಥುನಮಾಚರಂ ॥ ೩೫ ॥ (ಭಾರತ ಆದಿಪರ್ವ ಅಧ್ಯಾ. ೧೨೩)॥ ಕಿಂದಮ ಋಷಿಯು ಹರೀಚ್ಛಾಧೀನವಾದ ತನ್ನ ಇಚ್ಛೆಯಿಂದ ಜಿಂಕೆಯ ರೂಪವನ್ನು ಹೊಂದಿ ಹರಿಣೀ ರೂಪವನ್ನೇ ಹೊಂದಿದ ತನ್ನ ಹೆಂಡತಿಯಿಂದ ಕ್ರೀಡಿಸುತ್ತಿದ್ದನು. ಆಗ ಪಾಂಡುರಾಜನು ಹರೀಚ್ಛೆಯಿಂದಲೇ ಬಾಣದಿಂದ ಹೊಡೆದನು, ಆಗ ಆ ಜಿಂಕೆಯು ನಾನು ಕಿಂದಮನೆನ್ನುವ ಋಷಿಯು. ಮನುಷ್ಯರೂಪದಿಂದ ಸರ್ವದಾ ಕ್ರೀಡಿಸಲಿಕ್ಕೆ ನಾಚಿಗೆ ಪಟ್ಟವನಾಗಿ ಜಿಂಕೆಯ ರೂಪವನ್ನು ಹೊಂದಿಕೊಂಡು ಹೆಂಡತಿಯಲ್ಲಿ ಮೈಥುನವನ್ನು ಮಾಡುವೆನು. ಆಗ ಹೊಡೆದಿರುವುದರಿಂದ ನೀನೂ ಕೂಡ ಕ್ರೀಡಾಸಕ್ತನಾದ ಕೂಡಲೇ ಮರಣವನ್ನು ಹೊಂದುವಿ ಎಂದು ಶಾಪ ಕೊಟ್ಟಿತು. ॥ ೧೨೬ ॥

ಮೂ ॥ ನ್ಯಸಿಷ್ಣುರುಕ್ತಃ ಪೃಥಯಾ ಸ ನೇತಿ
ಪ್ರಣಾಮಪೂರ್ವಂ ನ್ಯವಸತ್ತಥೈವ ।
ತಾಭ್ಯಾಂ ಸಮೇತಃ ಶತಶೃಂಗಪರ್ವತೇ
ನಾರಾಯಣಸ್ಯಾಶ್ರಮಮಧ್ಯಗೇ ಪುರಃ ॥ ೧೨೭ ॥

ಅ ॥ ಸನ್ಯಾಸಾಶ್ರಮವನ್ನು ಸ್ವೀಕರಿಸಲಿಕ್ಕೆ ಇಚ್ಛಿಸಿಕೊಂಡು ಇರುತ್ತಿದ್ದ ಆ ಪಾಂಡು ರಾಜನು 'ಕುಂತಿಯಿಂದ ಪ್ರಣಾಮಪೂರ್ವಕವಾಗಿ ಸನ್ಯಾಸ ಸ್ವೀಕಾರವು ಮಾಡಬಾರದು' ಎಂದು ಪ್ರಾರ್ಥಿಸಿಕೊಳ್ಳಲ್ಪಟ್ಟವನಾಗಿ ಹಾಗೆಯೇ (ಅಂದರೆ ಗೃಹಸ್ಥಧರ್ಮದಿಂದಲೇ) ಕುಂತೀ ಮಾದ್ರೀ ಎನ್ನುವ ಇಬ್ಬರು ಹೆಂಡಂದಿರಿಂದ ಕೂಡಿದವನಾಗಿಯೇ ಉತ್ತರದಲ್ಲಿ* ಶತಶೃಂಗ ಪರ್ವತದ ಮಧ್ಯದಲ್ಲಿರತಕ್ಕ ನಾರಾಯಣಾಶ್ರಮವುಳ್ಳ ಶತಶೃಂಗ ಪ್ರದೇಶದಲ್ಲಿ ಆವಾಸ ಮಾಡಿಕೊಂಡಿದ್ದನು.

ವಿಶೇಷಾಂಶ—(1) ಪೂರ್ವ ಪಶ್ಚಿಮ ಸಮುದ್ರ ಪರ್ಯಂತವಾಗಿ ಒಂದು ಲಕ್ಷವೂ ಇಪ್ಪತ್ತೈದು ಸಾವಿರ (೧೨೫೦೦೦) ಶೃಂಗಗಳು ಇದ್ದ ಪ್ರಯುಕ್ತ ಶ್ರೇಷ್ಠವಾದ ಸಪಾದ ಲಕ್ಷಾಖ್ಯವಾದ ಪರ್ವತವು ಇದೆ, ಅದರ ಮಧ್ಯದಲ್ಲಿ ಶತಶೃಂಗಾಖ್ಯವಾದ ಅವಾಂತರ ಪರ್ವತವಿದೆ. ಅದರ ಮಧ್ಯದಲ್ಲಿ ಪೂರ್ವದಲ್ಲಿಯೂ ಪಶ್ಚಿಮದಲ್ಲಿಯೂ ಪುರ ನಾರಾಯಣ ಶೃಂಗಗಳಿಂದಲೂ ಮಧ್ಯದಲ್ಲಿ ಅಳಕ

* ನಾರಾಯಣಸ್ಯಾಶ್ರಮಃ ಮಧ್ಯಗಃ ಯಸ್ಮಿನ್ ಸಃ ನಾರಾಯಣಸ್ಯಾಶ್ರಮಮಧ್ಯಗಃ = ಶತಶೃಂಗ ಪರ್ವತ ಮಧ್ಯಸ್ಥವಾದ ನಾರಾಯಣಾಶ್ರಮವುಳ್ಳದ್ದು. ಈತಹ ಶತಶೃಂಗ ಪ್ರದೇಶವಾದ ಪಂಡಕೇಶ್ವರಾಖ್ಯವಾದ ಪುಣ್ಯಕ್ಷೇತ್ರವು. ತಸ್ಮಿನ್ ಎಂದು ವ್ಯುತ್ಪತ್ತಿಯು. ಅಗ್ರಾಹಿತಾದಿಗಳಂತೆಯೇ ವಿಶೇಷಣಕ್ಕೆ ಉಪರಿ ನಿಪಾತವೂ ನಾರಾಯಣಸ್ಯ ಎನ್ನುವ ಷಷ್ಠಿಗೆ ಅಲುಕ್ಸಮಾಸವು.

ನಂದಾಯೆನ್ನುವ ನದಿಯಿಂದಲೂ ಅಲಂಕೃತವಾದ ಬದರಿಕಾಶ್ರಮವೆನ್ನುವ ನಾರಾಯಣಾಶ್ರಮವು ವಿದೆ. ಅದರ ದಕ್ಷಿಣ ಭಾಗದಲ್ಲಿ ಒಂದು ಯೋಜನ ದೂರದಲ್ಲಿ ಪಾಂಡು ಚಕ್ರವರ್ತಿಯಿಂದ ಅಧಿಷ್ಠಿತವಾಗಿರುವುದರಿಂದ ಪಂಡಕೇಶ್ವರವೆನ್ನುವ ಪುಣ್ಯಕ್ಷೇತ್ರವಿದೆ, ಎಂದು ವಸ್ತುಸ್ಥಿತಿಯು. ಏವಂ ಚ ದಕ್ಷಿಣದಿಕ್ಕಿನಿಂದ ಬದರಿಕಾಶ್ರಮಕ್ಕೆ ಯಾತ್ರೆ ಮಾಡುವಾಗ ಯಾವ ಆಶ್ರಮವಿದ್ದೆಸೆಯಿಂದ ಉತ್ತರ ದಿಕ್ಕಿನಲ್ಲಿ ನಾರಾಯಣಾಶ್ರಮವು ಶತಶೃಂಗ ಪರ್ವತದ ಮಧ್ಯಸ್ಥವಾಗಿ ಇದೆಯೋ,ಅಂತಹ ಶತಶೃಂಗ ಪ್ರದೇಶದಲ್ಲಿ ಪಾಂಡುಚಕ್ರವರ್ತಿಯು ಸಪತ್ನೀಕನಾಗಿ ಆವಾಸಮಾಡಿಕೊಂಡು ಇದ್ದನು. (2) ನಾರಾಯಣಾಶ್ರಮದಲ್ಲಿ ಹಿಮಕಾಲದಲ್ಲಿ ಆರು ತಿಂಗಳು ತನಕ ಆಕಾಶದಿಂದ ಬೀಳತಕ್ಕ ಗಿರಿಶೃಂಗಕ್ಕೆ ಸದೃಶಗಳಾದ ಕಲ್ಲುಗಳಂತಿರುವ ಹಿಮಗಡ್ಡೆಗಳ ಭಯದಿಂದ ಅಲ್ಲಿರತಕ್ಕ ಪಶುಗಳೂ, ಪಕ್ಷಿಗಳೂ, ಮೃಗಗಳೂ, ಮನುಷ್ಯರೂ ಪಂಡಕ ಕ್ಷೇತ್ರಕ್ಕೆ ಬರುತ್ತಾರೆ. ಆದಕಾರಣ ಕುಂತೀ ಮಾದ್ರೀ ಇವರಿಬ್ಬರಿಂದಲೂ ಭೃತ್ಯರಿಂದಲೂ ಕೂಡಿಕೊಂಡು ನಿರಂತರದಲ್ಲಿಯೂ ಆವಾಸಕ್ಕೆ ಇದೇ ಸ್ಥಲವು ಯೋಗ್ಯವೆಂದು ಋಷಿಗಳು ಹೇಳಿರುವುದರಿಂದ ಪಂಡಕಕ್ಷೇತ್ರದಲ್ಲಿಯೇ ಆವಾಸಮಾಡಿಕೊಂಡು ಇದ್ದನು. ॥ ೧೭೭ ॥

ಮೂ ॥ ತಪೋ ನಿತಾಂತಂ ಸ ಚಕಾ (ಚಾ)ರ ತಾಭ್ಯಾಂ
ಸಮನ್ವಿತಃ ಕೃಷ್ಣಪದಾಂಬುಜಾಶ್ರಯುಃ ।
ತತ್ಸಂಗಪೂತದ್ಯುಸರಿದ್ವರಾಂಭಃ
ಸದಾವಗಾಹಾತಿಪವಿತ್ರಿತಾಂಗಃ ॥ ೧೭೮ ॥

ಅ ॥ ತ್ರಿವಿಕ್ರಮಾವತಾರನಾದ ಶ್ರೀಹರಿಯು ನಖಸಂಬಂಧದಿಂದ ಪವಿತ್ರವಾದ ಭಾಗೀರಥಿಯ ಉತ್ತಮ ಜಲದಲ್ಲಿ ನಿಯತ ಕಾಲಗಳಲ್ಲಿ ಅವಗಾಹನ ಸ್ನಾನದಿಂದ ಅತಿಶಯವಾಗಿ ಪವಿತ್ರೀಕೃತವಾದ ಅಂಗಗಳುಳ್ಳವನು, ಶ್ರೀಕೃಷ್ಣನ ಪಾದಕಮಲವನ್ನು ಆಶ್ರಯಿಸಿಕೊಂಡು ~~ಇರುವವನು, ಇಂತಹ ಆ ಪಾಂಡುಚಕ್ರವರ್ತಿಯು ಕುಂತೀ ಮಾದ್ರೀ ಇವರಿಬ್ಬರಿಂದ ಕೂಡಿದವ~~ ನಾಗಿ, ನಿತಾಂತಂ=ದುಷ್ಕರವಾದ ತಪಸ್ಸನ್ನು ಮಾಡಿಕೊಂಡು ಇದ್ದನು ॥ ೧೭೮ ॥

ಶ್ರೀಕೃಷ್ಣಾವತಾರವನ್ನು ಹೇಳುವವರಾಗಿ ಅದರ ಉಪೋದ್ಘಾತವನ್ನು ಹೇಳುತ್ತಾರೆ—

ಮೂ ॥ ಏತಸ್ಮಿನ್ನೇವ ಕಾಲೇ ಕಮಲಭವಶಿವಾ-
ಗ್ರೇಸರಾಃ ಶಕ್ರಪೂರ್ವಾ
ಭೂಮ್ಯಾ ಪಾಪಾತ್ಮ ದೈತ್ಯೈರ್ಭರ್ಭವಿ ಕೃತನಿಲಯೈ-
ರಾಕ್ರಮಂ ಚಾಸಹಂತ್ಯಾ ।
ಈಯುರ್ದೇವಾಧಿದೇವಂ ಶರಣಮಜಗು(ಮು) ರುಂ
ಪೂರ್ಣಷಾಡ್ಗುಣ್ಯಮೂರ್ತಿಂ
ಕ್ಷೀರಾಬ್ಧೌ ನಾಗಭೋಗೇ ಶಯಿತಮನುಪಮಾ-
ನಂದಸಂದೋಹದೇಹಂ ॥ ೧೭೯ ॥

ಅ ॥ ಇದೇ ಕಾಲದಲ್ಲಿ (ಅಂದರೆ ಪಾಂಡುಚಕ್ರವರ್ತಿಯು ತಪಸ್ಸನ್ನು ಮಾಡುತ್ತಿರುವ ಕಾಲದಲ್ಲಿ) ಭಕ್ತಾಗ್ರೇಸರನಾದ ಬ್ರಹ್ಮನು ರುದ್ರನು ಇವರೇವೇ ಪುರಸ್ಸರರಾಗಿ ಉಳ್ಳ, ಇಂದ್ರಾದಿ

ದೇವತೆಗಳಂ ಪಾಪವೇ ಸ್ವರೂಪವಾಗಿ ಉಳ್ಳ ಭೂಲೋಕದಲ್ಲಿ ನಿರ್ಮಿತಗಳಾದ ಮಂದಿರಗಳಂಳ್ಳ ದೈತ್ಯರಿಂದ ಆಕ್ರಮಣವನ್ನು ಸಹಿಸಲಿಕ್ಕೆ ಅಶಕ್ತಳಾದ ಭೂದೇವಿಯಿಂದ (ಕೂಡಿಕೊಂಡು) ದೇವತೆಗಳಿಗೂ ಶ್ರೇಷ್ಠ ದೇವನು (ಅಂದರೆ ಸರ್ವಾಧಿಕನು) ರಕ್ಷಕನು, ಬ್ರಹ್ಮನಿಗೂ ಗುರುವಾದವನು, ಪೂರ್ಣಗಳಾದ ಐಶ್ವರ್ಯಾದಿ ಷಡ್ಗುಣಗಳೇ ಸ್ವರೂಪವಾಗಿ ಉಳ್ಳವನು, ಕ್ಷೀರ ಸಮುದ್ರದಲ್ಲಿ ಶೇಷದೇವರ ಶರೀರದಲ್ಲಿ ಮಲಗಿಕೊಂಡು ಇರುವವನು, ಅಸದೃಶವಾದ ಆನಂದದ ಸಮೂಹವೇ ಶರೀರವಾಗಿ ಉಳ್ಳವನು ಇಂತಹ ಶ್ರೀಹರಿಯನ್ನು ಮರೆ ಹೊಂದಿದರು.

ವಿಶೇಷಾಂಶ—ಭಕ್ತಾಗ್ರೇಸರನಾದ ಬ್ರಹ್ಮನೇ ಮೊದಲು ಹೋಗುತ್ತಾನೆ. ಆ ಮೇಲೆ ರುದ್ರನು, ಆ ಮೇಲೆ ಸರ್ವ ದೇವತೆಗಳು ದೇವೇಂದ್ರನನ್ನು ಮುಂದೆ ಮಾಡಿಕೊಂಡು ಹೋಗುತ್ತಾರೆ. ಎನ್ನುವ ಕ್ರಮವನ್ನು ಸೂಚಿಸುವುದಕ್ಕಾಗಿ ಕಮಲಭವಶಿವಾಗ್ರೇಸರಾಃ ಶಕ್ರಪೂರ್ವಾಃ ಎಂದು ಹೇಳಿರುವರು. ॥ ೧೭೯ ॥

ಮೂ ॥ ಊಚುಃ ಪರಂ ಪುರುಷಮೇನಮನಂತಶಕ್ತಿಂ
ಸೂಕ್ತೇನ ತೇಽಬ್ಜಜಮುಖಾ ಅಪಿ ಪೌರುಷೇಣ ।
ಸ್ತುತ್ವಾ ಧರಾಽಸುರವರಾಕ್ರಮಣಾರ್ತ್ ಪರೇಶ
ಖಿನ್ನಾ ಹ್ಯತೋಽಶಿ(ಯತೋ ಹಿ) ವಿಮುಖಾಸ್ತವ ತೇಽತಿಪಾಪಾಃ ॥ ೧೮೦ ॥

ಅ ॥ ಚತುರ್ಮುಖನೇ ಮೊದಲಾಗಿ ಉಳ್ಳ ಆ ದೇವತೆಗಳೂ ಕೂಡ, ಸರ್ವೋತ್ತಮನಾದ ಶ್ರೀಹರಿಯನ್ನೇ ಪ್ರತಿಪಾದಿಸತಕ್ಕ ಪುರುಷಸೂಕ್ತದಿಂದ, ಅಪರಿಮಿತ ಶಕ್ತಿಯುಳ್ಳ, ಸರ್ವೋತ್ತಮನಾದ ಪುರುಷಶಬ್ದವಾಚ್ಯನಾದ ಈ ಶ್ರೀಹರಿಯನ್ನು ಸ್ತೋತ್ರಮಾಡಿ, ಉತ್ತಮರಾದ ಬ್ರಹ್ಮಾದಿಗಳಿಗೂ ಸ್ವಾಮಿಯಾದ ಶ್ರೀಪರಮಾತ್ಮನೇ ಯಾವ ಕಾರಣದ್ವೇಷದಿಂದ ಆ ಅಸುರರು ಅತ್ಯಂತ ಪಾಪರೂಪರಾಗಿರುತ್ತಾರೋ, ನಿನಗೆ ಅತಿ ವಿಮುಖರಾಗಿರುತ್ತಾರೋ, (ಆದ ಕಾರಣ) ಭೂದೇವಿಯು ದೈತ್ಯಶ್ರೇಷ್ಠರ ಆಕ್ರಮಣದ್ವೇಷದಿಂದ ಅತಿ ಖೇದಯುಕ್ತಳಾಗಿದ್ದಾಳೆ ಎಂದು ಹೇಳಿದರು. ಅಪಿ=ಚತುರ್ಮುಖಾದಿಗಳಿಗೆ ಸರ್ವೋತ್ತಮತ್ವ ಮತ್ತವು ಅತಿಗರ್ಹ್ಯವು. ॥ ೧೮೦ ॥

ಮೂ ॥ ದುಸ್ಸಂಗತಿರ್ಭವತಿ ಭಾರವದೇವ ದೇವ
ನಿತ್ಯಂ ಸತಾಮಪಿ ಹಿ ನಃ ಶೃಣು ವಾಕ್ಯವಿನಾಶ ।
ಪೂರ್ವಂ ಹತಾ ದಿತಿಸುತಾ ಭವತಾ ರಣೇಷು
ಹ್ಯಸ್ಮತ್ಪ್ರಿಯಾರ್ಥಮುಧುನಾ ಭುವಿ ತೇಽಭಿಜಾತಾಃ ॥ ೧೮೧ ॥

ಅ ॥ ಎಲೋ ಶ್ರೀಹರಿಯೇ! ನಿತ್ಯದಲ್ಲಿಯೂ ದುಷ್ಟರ ಸಮಾಗಮವು (ಸರ್ವಸಹಿಷ್ಣುಗಳಾದ) ಸಜ್ಜನರಿಗೂ ಭಾರದಂತೆಯೇ ಆಗುತ್ತದೆ. ಹಿ=ಶಿಷ್ಟವಾದ ಗೋವಿಗೆ ದುಷ್ಟವಾದ ಗೃಷ್ಟಿಯು (ಒಂದಾವರ್ತಿ ಕರುಹಾಕಿದ ಗೋವಿನ) ಸಂಗದಿಂದ ಕುತ್ತಿಗೆಯಲ್ಲಿ ಕಾಷ್ಠಭಾರದ ಬಂಧನವು ಪ್ರಸಿದ್ಧವಷ್ಟೆ, (ಆದುದರಿಂದ) ಎಲೋ ಶ್ರೀಹರಿಯೇ! ನಮ್ಮ ಮಾತನ್ನು ಕೇಳು. ನಿನ್ನಿಂದ ಮೊದಲು ನಮ್ಮ ಸಂತೋಷಕ್ಕಾಗಿಯುದ್ಧಗಳಲ್ಲಿ(ಯಾವ)ದೈತ್ಯರು ಸಂಹೃನರಾಗಿರುತ್ತಾರೋ, ಆ ದೈತ್ಯರು ಈಗ ಭೂಮಿಯಲ್ಲಿ ಹುಟ್ಟಿರುತ್ತಾರೆ. ಹಿ=ಆಪ್ತಕಾಮುಸ್ಯ ಕಾ ಸ್ಪೃಹಾ ಇತ್ಯಾದಿ ಶ್ರುತಿಗಳದ್ವೇಷದಿಂದ ದೈತ್ಯಾದಿಗಳಸಂಹಾರದಿಂದ ಶ್ರೀಹರಿಗೆಸ್ವಪ್ರಯೋಜನವಿಲ್ಲವೆನ್ನುವುದುಪ್ರಸಿದ್ಧವು. ॥೧೮೧॥

ಮೂ ॥ ಆಸೀತ್ ಪುರಾ ದಿತಿಸುರೈರವಮರೋತ್ತಮಾನಾಂ
ಸಂಗ್ರಾಮ ಉತ್ತಮಗಜಾಶ್ವರಥದ್ವಿಶದ್ಭಿಃ ।
ಅಕ್ಷೌಹಿಣೀಶತಮಹೌಘಮಹೌಘಮೇವ
ಸೈನ್ಯಂ ಸುರಾತ್ಮಕಮಭೂತ್ ಪರಮಾಸ್ತ್ರಯುಕ್ತಂ ॥ ೧೪೨ ॥

ಅ ॥ ಮೊದಲಂ ದೈತ್ಯರಿಂದ ಕೂಡಿಕೊಂಡು ದೇವಶ್ರೇಷ್ಠರಿಗೆ ಯುಂದ್ಧವು ಆಯಿತು. (ಅದ ರಲ್ಲಿ ದೇವತೆಗಳ ಸೈನ್ಯ ಸಂಖ್ಯೆಯಂನ್ನು ಹೇಳುತ್ತಾರೆ.) ಉತ್ತಮಂಗಳಾದ ಆನೆಗಳಂ, ಕುದುರೆಗಳಂ, ರಥಗಳಂ, ಪದಾತಿಗಳೂ ಇವುಗಳಿಂದ (ಸಹಿತವಾದ) ಅಕ್ಷೌಹಿಣಿಗಳ ನೂರರಿಂದ ಸಹಿತವಾದ ಮಂಹೌಘಗಳ ಮಹೌಘವುಳ್ಳ, ದಿವ್ಯ ಅಸ್ತ್ರಗಳಿಂದ ಯುಂಕ್ತವಾದ ದೇವಸಂಬಂಧಿಯಾದ ಸೈನ್ಯವು ಆಯಿಂತಂ. ॥ ೧೪೨ ॥

ಅಸುರರಂ ಸೈನ್ಯಸಂಖ್ಯೆಯಂನ್ನು ಹೇಳುತ್ತಾರೆ—

ಮೂ ॥ ತಸ್ಮಾನ್ಮಹೌಘಗುಣಮಾಸ ಮಹಾಸುರಾಣಾಂ
ಸೈನ್ಯಂ ಶಿಲಾಗಿರಿಮಹಾಸ್ತ್ರಧರಂ ಸುಘೋರಂ ।
ತೇಷಾಂ ರಥಾಶ್ಚ ಬಹುನಲ್ವಪರಿಪ್ರಮಾಣಾ
ದೇವಾಸುರಪ್ರವರಕಾರ್ಮುಕಬಾಣಪೂರ್ಣಾಃ ।
ನಾನಾಂಬರಾಭರಣವೇಷವರಾಯುಧಾಢ್ಯಾ
ದೇವಾಸುರಾಃ ಸಸೃಪುರಾಶು ಪರಸ್ಪರಂ ತೇ ॥ ೧೪೩ ॥

ಅ ॥ ಆ ದೇವತೆಗಳ ಸೈನ್ಯಸಂಖ್ಯೆಗಿಂತ ಮಂಹೌಘದಿಂದ ಗುಣಿತವಾದಂದಂ, ಬಂಡೆಕಲ್ಲುಂ ಗಳುಂ ಬೆಟ್ಟಗಳುಂ ಮಂಹತ್ತಾದ ಅಸ್ತ್ರಗಳೂ ಇವುಗಳನ್ನು ಧರಿಸುತ್ತಿರುವುದುಂ, ಅತಿ ಭಯಂಕರವಾ ದುದುಂ ಇಂತಹುದುಂ ಮಂಹಾಸುರರ ಸೈನ್ಯವು ಇತ್ತು. ಆ ದೇವಾಸುರರ ರಥಗಳಾದರೂ ಬಹುಂ •ನಲ್ವಗಳ ಪ್ರಮಾಣವುಳ್ಳವುಗಳಾಗಿ ದೇವಾಸುರರ ಶ್ರೇಷ್ಠಗಳಾದ ಧನುಸ್ಸುಗಳಿಂದಲೂ ಬಾಣಗ ಳಿಂದಲೂ ಪೂರ್ಣಗಳಾಗಿ ಇರುತ್ತಿದ್ದುವು, ನಾನಾ ಪ್ರಕಾರಗಳಾದ ವಸ್ತ್ರಗಳಿಂದಲೂ ಆಭರಣ ಗಳಿಂದಲೂ ಪ್ರಶಸ್ತವಾದ ವೇಷವುಳ್ಳವರೂ, ಉತ್ಕೃಷ್ಟ ಆಯುಂಧಗಳಿಂದ ಶ್ರೇಷ್ಠರಾದವರುಂ, ಇಂತಹ ಆ ದೇವಾಸುರರುಂ ಶೀಘ್ರದಲ್ಲಿ ಪರಸ್ಪರವಾಗಿ ಯುಂದ್ಧದೂಡಲಿಕ್ಕೆ ಹೊಂದಿದರು. ॥ ೧೪೩ ॥

ಮೂ ॥ ಜಘ್ನುರ್ಗಿರೀಂದ್ರತಲಮುಷ್ಟಿಮಹಾಸ್ತ್ರಶಸ್ತ್ರೈ-
ಶ್ಚಕ್ರುರ್ನದೀಶ್ಚ ರುಧಿರೌಘವಪಾ ಮಹೌಘಂ ।
ತತ್ರ ಸ್ಮ ದೇವವೃಷಭೈರಸುರೇಶಚಮ್ವಾ
ಯುದ್ಧೇ ನಿಷೂದಿತ ಉತೌಘಬಲೈಃ ಶತಾಂ (ಬಲಾಚ್ಛತಾಂ) ಶಃ ॥೧೪೪॥

ಅ ॥ (ಆ ದೇವಾಸುರರುಂ) ಪರ್ವತ ಶ್ರೇಷ್ಠಗಳಿಂದಲೂ ಹಸ್ತ ಪಾದಗಳ ಪ್ರದೇಶಗಳಿಂದಲೂ ಮುಷ್ಟಿಪ್ರಹಾರಗಳಿಂದಲೂ (ಮಹಾಸ್ತ್ರ) ಮಂತ್ರಯುಂಕ್ತಗಳಾದ ಆಯುಂಧಗಳಿಂದಲೂ ಖಡ್ಗ

•ಕಿಷ್ಕುರ್ಹಸ್ತೇ ವಿತಸ್ತೌಚಂ ನಲ್ವಃ ಕಿಷ್ಕು ಚತುಃ ಶತಂ ಎನ್ನುವ ಕೋಶದಿಂದ ನಾಲ್ಕುನೂರು (400) ಹಸ್ತ ಪರಿಮಾಣವು ನಲ್ವ ಎನ್ನಿಸಿಕೊಳ್ಳುತ್ತದೆ.

ಮೊದಲಾದ ಶಸ್ತ್ರಗಳಿಂದಲೂ ಪರಸ್ಪರವಾಗಿ ಹೊಡೆದಂಕೊಂಡರು. ಮಹತ್ತಾದ ಪ್ರವಾಹವು ಹೇಗೆ ಆಗುತ್ತದೋ ಹಾಗೆ, ರಕ್ತಗಳ ಸಮೂಹದಾಯದಿಂದ ಹರಿಯುತ್ತಿರುವ ನದಿಗಳನ್ನು ಮಾಡಿದರು. ಆ ಯುದ್ಧದಲ್ಲಿ ಓಘಬಲೈಃ=ಮಹಾ ಬಲವುಳ್ಳ (ಅಂದರೆ ಓಘಃ ಪರಂಪರಾಯಾಂ ಸ್ಯಾತ್ ಎನ್ನುವ ಕೋಶದಿಂದ ಪರಂಪರೆಯಿಂದ ಯುಕ್ತವಾದ ಸೇನೆಯುಳ್ಳ) ದೇವಶ್ರೇಷ್ಠರಿಂದ ಅಸುರಶ್ರೇಷ್ಠರ ಸೈನ್ಯದ (ಅಥವಾ § ಓಘಬಲಾತ್=ಎನ್ನುವ ಪಾಠದಲ್ಲಿ ಪುಂಜೀಭೂತವಾದ ಸೈನ್ಯದ್ದೆಸೆಯಿಂದ ಅಥವಾ ಓಘಸಂಖ್ಯಾಕ ಸೈನ್ಯದ್ದೆಸೆಯಿಂದ) ನೂರು ಭಾಗಗಳಲ್ಲಿ ಒಂದು ಭಾಗವು ಸಂಹರಿಸಿಕೊಳ್ಳಲ್ಪಟ್ಟಿತು. ॥ ೧೪೪ ॥

ಮೂ ॥ ಅಥಾತ್ಮ ಸೇನಾಮುವವ್ಯೂಢಾನಾಂ
ವೀಕ್ಷ್ಯಾಸುರಃ ಶಂಬರನಾಮುಧೇಯಃ ।
ಸಸಾರ ಮಾಯಾವಿದಸಹ್ಯಮಾಯೋ
ವರಾದುಮೇಶಸ್ಯ ಸುರಾನ್ ವಿಮೋಹಯನ್ ॥ ೧೪೫ ॥
ಮಾಯಾಸಹಸ್ರೇಣ ಸುರಾ ವಿ (ಸ್ಮ) ಮರ್ದಿತಾ
ರಣೇ ವಿಷೇದುಃ ಶಶಿಸೂರ್ಯಮುಖ್ಯಾಃ ।
ತಾನ್ ವೀಕ್ಷ್ಯ ವಜ್ರೀ ಪರಮಾಖ್ಯ (ಮಾಂ ತು) ವಿದ್ಯಾಂ
ಸ್ವಯಂಭುದತ್ತಾಂ ಪ್ರಯುಯೋಜ ವೈಷ್ಣವೀಂ ॥ ೧೪೬ ॥

ಅ ॥ ಆ ಮೇಲೆ ಇಂದ್ರಜಾಲ ಮಾಯೆಯನ್ನು ತಿಳಿದವನು ರುದ್ರನ ವರದ್ದೆಸೆಯಿಂದ ಸಹಿಸಲಿಕ್ಕೆ ಅಶಕ್ಯವಾದ ಮಾಯೆಯುಳ್ಳವನು, ಇಂತಹ ಶಂಬರನೆಂದು ಹೆಸರುಳ್ಳ ಅಸುರನು ಪೀಡಿಸಿಕೊಳ್ಳಲ್ಪಟ್ಟ ತನ್ನ ಸೈನ್ಯವನ್ನು ನೋಡಿ ಇಂದ್ರಜಾಲ ಮಾಯೆಗಳ ಸಹಸ್ರದಿಂದ ದೇವತೆಗಳನ್ನು ಮೋಹಿಸುವವನಾಗಿ ಹೊಂದಿದನು, ಯುದ್ಧದಲ್ಲಿ ಇಂದ್ರಜಾಲ ಮಾಯೆಗಳ ಸಹಸ್ರದಿಂದ ಚೆನ್ನಾಗಿ ಪೀಡಿಸಿಕೊಳ್ಳಲ್ಪಟ್ಟ ಚಂದ್ರ ಸೂರ್ಯ ಮೊದಲಾದ ದೇವತೆಗಳು ಶ್ರಾಂತರಾದರು. ವಜ್ರಧಾರಿಯಾದ ಇಂದ್ರನು ಆ ದೇವತೆಗಳನ್ನು ನೋಡಿ ಬ್ರಹ್ಮನಿಂದ ಕೊಡಲ್ಪಟ್ಟ, ವಿಷ್ಣುದೇವತಾಕವಾದ ಪರಮವಿದ್ಯೆಯನ್ನು (ಅಂದರೆ ವೈಷ್ಣವೀ ಮಹಾಮಾಯೆಯನ್ನು) ಪ್ರಯೋಗಿಸಿದನು. ॥ ೧೪೫ ॥ ॥ ೧೪೬ ॥

ಮೂ ॥ ಸಮಸ್ತಮಾಯಾಪಹಯಾ ತಯೈವ
ವರಾದ್ರುಮೇಶಸ್ಯ ಸದಾಪ್ಯಸಹ್ಯಯಾ ।
ಮಾಯಾ ವಿನೇಶುರ್ದಿತಿಜೇಂದ್ರಸೃಷ್ಟಾ
ವಾರೀಶವಹ್ನೀಂದುಮುಖಾಶ್ಚ ಮೋಚಿತಾಃ ॥ ೧೪೭ ॥

ಅ ॥ ಎಲ್ಲಾ ಮಾಯೆಗಳನ್ನೂ ನಾಶ ಮಾಡತಕ್ಕದು, ರುದ್ರದೇವರ ವರದ್ದೆಸೆಯಿಂದಲೂ ಯಾವಾಗಲೂ ಸಹಿಸಲಿಕ್ಕೆ ಅಶಕ್ಯವಾದುದು, ಅಂತಹ ವೈಷ್ಣವ ಮಾಯೆಯಿಂದಲೇ ದೈತ್ಯಶ್ರೇಷ್ಠನಾದ ಶಂಬರಾಸುರನಿಂದ ಸೃಷ್ಟಿಸಲ್ಪಟ್ಟ ಮಾಯೆಗಳು ನಷ್ಟಗಳಾದುವು. ಜಲಾಧಿಪತಿಯಾದ ವರುಣನು ಅಗ್ನಿಯು ಚಂದ್ರನೂ ಇವರೇ ಮೊದಲಾದವರೂ (ಆ ಶಂಬರನ ಮಾಯೆಯಿಂದ) ಬಿಡಿಸಿಕೊಳ್ಳಲ್ಪಟ್ಟರು. ॥ ೧೪೭ ॥

§ ಮಹಾನ್ ಓಘಃ ಪ್ರವಾಹೋ ಯಥಾ ಭವತಿ ತಥಾ ಮಹಾಘಂ ಎಂದು ವ್ಯುತ್ಪತ್ತಿಯು.

ಮೂ ॥ ಯಮೇಂದುಸೂರ್ಯಾದಿಸುರಾಸ್ತತೋಽಸುರಾನ್
ನಿಜಘ್ನುರಾಪ್ಯಾಯಿತವಿಕ್ರಮಾಸ್ತದಾ।
ಸುರೇಶ್ವರೇಣೋರ್ಜಿತಪೌರುಷಾ ಬಹೂನ್
ವಜ್ರೇಣ ವಜ್ರೀ ನಿಜಘಾನ ಶಂಬರಂ ॥ ೧೪೪ ॥

ಅ ॥ ವಾಯು ಬಂಧನವನ್ನು ಬಿಡಿಸಿದ ನೀಲೆ ದೇವೇಂದ್ರನಿಂದ ವರ್ಧಿತವಾದ ಪರಾಕ್ರಮವುಳ್ಳ, ಉತ್ಕೃಷ್ಟವಾದ ಪರಾಕ್ರಮವುಳ್ಳ ಯಮ, ಚಂದ್ರ, ಸೂರ್ಯ ಮೊದಲಾದ ದೇವತೆಗಳು ಬಹುವಂದಿ ಅಸುರರನ್ನು ಸಂಹರಿಸಿದರು. ಇಂದ್ರನು ವಜ್ರದಿಂದ ಶಂಬರಾಸುರನನ್ನು ಸಂಹರಿಸಿದನು.

ವಿಶೇಷಾಂಶ—ಇಂದ್ರನಿಂದ ಸಂಹರಿಸಿಕೊಳ್ಳಲ್ಪಟ್ಟ ಶಂಬರಾಸುರನು ಆದಿ ಶಂಬರನು; ಕೃಷ್ಣಾವತಾರದಲ್ಲಿ ಪ್ರದ್ಯುಮ್ನನಿಂದ ಸಂಹರಿಸಿಕೊಳ್ಳಲ್ಪಡುವ ಶಂಬರಾಸುರವು ಮತ್ತೊಬ್ಬನು; ॥ ೧೪೪ ॥

ಮೂ ॥ ತಸ್ಮಿನ್ ಹತೇ ದಾನವಲೋಕಪಾಲೇ
ದಿತೇಃ ಸುತಾ ದುದ್ರುವುರಿಂದ್ರಭೀಷಿತಾಃ ।
ತಾನ್ ವಿಪ್ರಚಿತ್ತಿರ್ನಿವಾರ್ಯ ಧನ್ವೀ
ಸಸಾರ ಶಕ್ರಪ್ರಮುಖಾನ್ ಸುರೋತ್ತಮಾನ್ ॥ ೧೪೫ ॥

ಅ ॥ ದೈತ್ಯಜನರನ್ನು ರಕ್ಷಿಸುತ್ತಿರುವ ಆ ಶಂಬರಾಸುರನು ಸಂಹರಿಸಿಕೊಳ್ಳಲ್ಪಡುತ್ತಿರಲು ದೈತ್ಯರು ಇಂದ್ರನಿಂದ ಭಯಗ್ರಸ್ತರಾಗಿ ಓಡಿಹೋದರು. ಧನುರ್ಧಾರಿಯಾದ ವಿಪ್ರಚಿತ್ತಿಯು ಓಡತಕ್ಕ ದೈತ್ಯರನ್ನು ತಡೆದು ಇಂದ್ರನೇ ಮೊದಲಾಗಿ ಉಳ್ಳ ಆ ದೇವಶ್ರೇಷ್ಠರನ್ನು ಯುದ್ಧಕ್ಕಾಗಿ ಹೊಂದಿದನು. ॥ ೧೪೫ ॥

ಮೂ ॥ ವರಾದಜೇಯೇನ ವಿಧಾತುರೇವ
ಸುರೋತ್ತಮಾಂಸ್ತೇನ ಶರೈರ್ನಿಪಾತಿತಾನ್ ।
ನಿರೀಕ್ಷ್ಯ ಶಕ್ರಂ ಚ ವಿಮೋಹಿತಂ ದ್ರುತಂ
ನ್ಯವಾರಯತ್ತಂ ಪವನಃ ಶಮೈಷ್ಟೈಃ ॥ ೧೪೦ ॥

ಅ ॥ ಬ್ರಹ್ಮದೇವರ ವರದ್ವಿಸೆಯಿಂದಲೇ ಗೆಲ್ಲಲಿಕ್ಕೆ ಅಶಕ್ಯನಾದ ಆ ವಿಪ್ರಚಿತ್ತಿಯಿಂದ ಬಾಣಗಳಿಂದ ಬೀಳಿಸಿಕೊಳ್ಳಲ್ಪಟ್ಟ ದೇವಶ್ರೇಷ್ಠರನ್ನೂ ಮೂರ್ಛಾವಸ್ಥೆಯನ್ನು ಹೊಂದಿದ ದೇವೇಂದ್ರನನ್ನೂ ನೋಡಿ, ದ್ರುತಂ=ಓಡುತ್ತಿರುವ ಆ ವಿಪ್ರಚಿತ್ತಿಯನ್ನು ವಾಯುದೇವರು ಬಾಣಗಳ ಸಮೂಹಗಳಿಂದ ತಡೆದರು. ॥ ೧೪೦ ॥

ಮೂ ॥ ಅಸ್ತ್ರೇಣ ತಸ್ಯಾಸ್ತ್ರವರೈರ್ನಿವಾರ್ಯ
ಚಿಕ್ಷೇಪ ತಸ್ಯೋರಸಿ ಕಾಂಚನೀಂ ಗದಾಂ ।
ವಿಚೂರ್ಣಿತೋಽಸೌ ನಿಪಪಾತ ಮೋರ್ವೀ
ಮಹಾಬಲೋ ವಾಯುಬಲಾಭಿನುನ್ನಃ ॥ ೧೪೧ ॥

ಅ ॥ ಆ ವಿಪ್ರಚಿತ್ತಿನಾಮಕ ಅಸುರನ ಅಸ್ತ್ರಗಳನ್ನು ಅಸ್ತ್ರಶ್ರೇಷ್ಠಗಳಿಂದ ತಡೆದು ಆ ವಿಪ್ರಚಿತ್ತಿಯು ವಕ್ಷಃಸ್ಥಳದಲ್ಲಿ ಹೇವುವುಯುವಾದ ಗದೆಯನ್ನು (ವಾಯುದೇವರು) ಬಿಸಾಡಿದರು. ಮಹತ್ತಾದ ಸಾಮರ್ಥ್ಯವುಳ್ಳ ಈ ವಿಪ್ರಚಿತ್ತಿಯು ಚೂರ್ಣೀಕೃತನಾಗಿ ವಾಯುದೇವರ ಬಲದಿಂದ ಪ್ರೇರಿಸಿಕೊಳ್ಳಲ್ಪಟ್ಟವನಾಗಿ ಮೇರುಪರ್ವತದಲ್ಲಿ ಬಿದ್ದನು. ॥ ೧೯೧ ॥

ಮೂ ॥ ಅಥಾಸಸಾದಾಶು ಸ ಕಾಲನೇಮಿ-
ಸ್ತ್ವದಾಜ್ಞಯಾ ಯಸ್ಯ ವರಂ ದದೌ ಪುರಾ ।
ಸರ್ವೈರಜೇಯತ್ವಮಜೋಽಸುರಃಸ
ಸಹಸ್ರಶೀರ್ಷ್ಣೋ ದ್ವಿಸಹಸ್ರಬಾಹುಯುಕ್ ॥ ೧೯೨ ॥

ಅ ॥ ವಿಪ್ರಚಿತ್ತಿಯು ಬಿದ್ದಮೇಲೆ ಬ್ರಹ್ಮನು ಮೊದಲು ನಿನ್ನ ಅಪ್ಪಣೆಯಿಂದ ಯಾವ ಕಾಲನೇಮಿಗೆ (ಅಜೇಯತ್ವ ರೂಪವಾದ)ವರವನ್ನು ಕೊಟ್ಟಿರುವನೋ, ಅಂತಹ ಸಹಸ್ರ(೧೦೦೦) ಶಿರಸ್ಸುಗಳಿಂದ ಕೂಡಿದ, ಎರಡು ಸಹಸ್ರ (೨೦೦೦) ಭುಜಗಳಿಂದ ಕೂಡಿರುವ ಕಾಲನೇಮಿ ನಾಮಕನಾದ ಆ ಅಸುರನು ಶೀಘ್ರದಲ್ಲಿ (ವಾಯುದೇವರನ್ನು) ಹೊಂದಿದನು. ॥ ೧೯೨ ॥

ಮೂ ॥ ತವಾಪತಂತಂ ಪ್ರಸಮೀಕ್ಷ್ಯ ಮಾರುತ-
ಸ್ತ್ವದಾಜ್ಞಯಾ ದತ್ತವರಸ್ತ್ವಯೈವ ।
ಹಂತವ್ಯ ಇತ್ಯಸ್ಮರದಾಶು ಹಿ ತ್ವಾಂ
ತದಾವಿರಾಸೀಸ್ತ್ವಮನಂತಪೌರುಷಃ ॥ ೧೯೩ ॥

ಅ ॥ ವಾಯುದೇವರು ಹಾರಿಬರುತಲಿಕ್ಕೆ ಆ ಕಾಲನೇಮಿಯನ್ನು ನೋಡಿ (ಕಾಲನೇಮಿಗೆ ಅವಧ್ಯತ್ವವನ್ನು ಕೊಡು ಎನ್ನುವ) ನಿನ್ನ ಆಜ್ಞೆಯಿಂದ (ಬ್ರಹ್ಮನಿಂದ) ಕೊಡಲ್ಪಟ್ಟ ವರವುಳ್ಳ ಕಾಲನೇಮಿಯು ನಿನ್ನಿಂದಲೇ ಸಂಹರಿಸಿಕೊಳ್ಳಲ್ಪಡಲಿಕ್ಕೆ ಯೋಗ್ಯನು, ಈ ಅಭಿಪ್ರಾಯದಿಂದ ಶೀಘ್ರದಲ್ಲಿ ನಿನ್ನನ್ನು ಯಾವಾಗ ಸ್ಮರಿಸಿದನೋ, ಆಗ ಅಪರಿಮಿತ ಪರಾಕ್ರಮವುಳ್ಳ ನೀನು ಆವಿರ್ಭವಿಸಿರುತ್ತಿ. ಹಿ=ಮುಂಖ್ಯಪ್ರಾಣದೇವರು ಶ್ರೀಹರಿಗೆ ಯಾವಾಗಲೂ ವಿರೋಧಾದಿಗಳನ್ನು ಮಾಡದಿರುವುದರಿಂದ ವಿಷ್ಣುವಿಷಯದಲ್ಲಿ ವಿಸ್ಮರಣವಿಲ್ಲವೆನ್ನುವುದು ಪ್ರಸಿದ್ಧವು. ॥ ೧೯೩ ॥

ಮೂ ॥ ತಮುಸ್ರಶಸ್ತ್ರಾಣಿ ಬಹೂನಿ ಬಾಹುಭಿಃ
ಪ್ರಗರ್ಹಮಾಣಂ ಭುವನಾಪ್ತದೇಹಂ ।
ಚಕ್ರೇಣ ಬಾಹೂನ್ವಿನಿಕೃತ್ತ್ಯ ಕಾನಿ ಚ
ನ್ಯವೇದಯಶ್ಚಾಶು ಯಮಾಯ ಪಾಪಂ ॥ ೧೯೪ ॥

ಅ ॥ (ಎಲೋ ಶ್ರೀಹರಿಯೇ) ಬಹು ಅಸ್ತ್ರಶಸ್ತ್ರಗಳನ್ನು ಬಾಹುಗಳಿಂದ ಸುರಿಸುತ್ತಿರುವ, ಭೂಪ್ರದೇಶವನ್ನು ವ್ಯಾಪಿಸಿಕೊಂಡಿರುವ ಶರೀರವುಳ್ಳ, ಪಾಪಿಷ್ಠನಾದ ಆ ಕಾಲನೇಮಿಯನ್ನು ಸುದರ್ಶನದಿಂದ ಭುಜಗಳನ್ನೂ ಶಿರಸ್ಸುಗಳನ್ನೂ ಛೇದಿಸಿ ಯಮನಿಗೋಸ್ಕರ ಶೀಘ್ರದಲ್ಲಿ ಹೊಂದಿಸಿರುವಿ. ॥ ೧೯೪ ॥

ಮೂ ॥ ತತೋಽಸುರಾಸ್ತೇ ನಿಹತಾ ಅಶೇಷಾ-
ಸ್ತ್ವಯಾ ತ್ರಿಭಾಗಾ ನಿಹತಾಶ್ಚತುರ್ಥಂ ।
ಜಘಾನ ವಾಯುಃ ಪುನರೇವ ಜಾತಾ-
ಸ್ತೇ ಭೂತಲೇ ಧರ್ಮಬಲೋಪಪನ್ನಾಃ ॥ ೧೯೫ ॥

ಅ ॥ (ಎಲೋ ಶ್ರೀಹರಿಯೇ) ಆ ಕಾಲನೇವಿಯನ್ನು ಸಂಹರಿಸಿದ ಮೇಲೆ ಎಲ್ಲಾ ಆ ಅಸುರರು ನಾಲ್ಕು ಭಾಗಗಳ ಮಧ್ಯದಲ್ಲಿ ಮೂರು ಭಾಗಗಳು ನಿನ್ನಿಂದ ಸಂಹೃತರಾದರು, ಉಳಿದ ಶಿಷ್ಟವಾದ ನಾಲ್ಕನೇ ಭಾಗವನ್ನು ಮುಂಖ್ಯಪ್ರಾಣದೇವರು ಸಂಹರಿಸಿದರು. ಆ ಅಸುರರೇ ಧರ್ಮ ಬಲ ಇವುಗಳಿಂದ ಕೂಡಿದವರಾಗಿ ಭೂಮಿಯಲ್ಲಿ ಪುನಃ ಹುಟ್ಟಿರುತ್ತಾರೆ. ॥ ೧೯೫ ॥

ಮೂ ॥ ರಾಜ್ಞಾಂ ಮಹಾವಂಶಸುಜನ್ಮನಾಂ ತು
ತೇಷಾಮಭೂದ್ಧರ್ಮಮತಿರ್ವಿಪಾಪಾ ।
ಶಿಕ್ಷಾಮವಾಪ್ಯ ದ್ವಿಜಪುಂಗವಾನಾಂ
ತ್ವದ್ಭಕ್ತಿರಪ್ಯೇಷು ಹಿ ಕಾಚನ ಸ್ಯಾತ್ ॥ ೧೯೬ ॥

ಅ ॥ ತು=ತಪೋವಿಶೇಷದಿಂದ. ಪ್ರಸಿದ್ಧ ವಂಶದಲ್ಲಿ, ಸು=ವಿಶಿಷ್ಟ ಮಾತಾಪಿತೃಗಳಿಂದ, ಉತ್ಪತ್ತಿಯುಳ್ಳ, ಆ ಅಸುರರಾದ ರಾಜರಿಗೆ ದೋಷರಹಿತವಾದ ಧರ್ಮಬುದ್ಧಿಯು ಉಂಟಾಗಿ ಯುದೆ ಬ್ರಾಹ್ಮಣೋತ್ತಮರ ದೀಕ್ಷೆಯನ್ನು ಹೊಂದಿ ಈ ಅಯೋಗ್ಯರಾದ ಅಸುರರಲ್ಲಿಯೂ ಸ್ವಲ್ಪ ನಿನ್ನಲ್ಲಿ ಭಕ್ತಿಯು ಉಂಟಾಗಬಹುದು (ಎಂದು ಊಹಿಸುತ್ತೇವೆ.) ಹಿ=ಸ್ಪಟಿಕವರ್ಣಯಲ್ಲಿ ಜಪಾಕುಸುಮ (ಕೆಂಪು ದಾಸನ ಹೂ) ರೂಪ ಉಪಾಧಿಯಿಂದ ಕೆಂಪುಬಣ್ಣವು ತೋರುವಂತೆ ಸಜ್ಜನರ ಸಮಾಗಮರೂಪ ಉಪಾಧಿಗೂ ಶಕ್ತಿಯಿದೆ ಎನ್ನುವ ಪ್ರಸಿದ್ಧವು. ॥ ೧೯೬ ॥

ಭಕ್ತಿಯು ಉಂಟಾದರೆ ಬಾಧಕವೇನೆಂದರೆ—

ಮೂ ॥ ತ್ವದ್ಭಕ್ತಿಲೇಶಾಭಿಯುತಃ ಸುಕರ್ಮಾ
ವ್ರಜೇನ್ನ ಪಾಪಾಂ ತು ಗತಿಂ ಕಥಂಚಿತ್ ।
ದೈತ್ಯೇಶ್ವರಾಣಾಂ ಚ ತವೋಽಂಧಮೇವ
ತ್ವಯೈವ ಕ್ಲೃಪ್ತಂ ನನು ಸತ್ಯಕಾಮ ॥ ೧೯೭ ॥

ಅ ॥ ನಿನ್ನ ಭಕ್ತಿಯ ಲೇಶದಿಂದೊಡಗೂಡಿದವನು. ಶೋಭನ ಕರ್ಮಗಳುಳ್ಳವನು ಇಂತಹ ಪುರುಷನು ನರಕರೂಪವಾದ ಗತಿಯನ್ನು ಯಾವ ಪ್ರಕಾರದಿಂದಲೂ ಹೊಂದಲಾರನು. (ಅವರಿಗೆ ಸದ್ಗತಿಯಾಗಲಿ ಎಂದರೆ) ಎಲೋ ಸತ್ಯಕಾಮನೇ (ಅಮೋಘವಾದ ಇಚ್ಛೆಯುಳ್ಳವನೇ) ದೈತ್ಯಶ್ರೇಷ್ಠರಿಗೆ ಅಂಧಂತಮಸ್ಸೇ ನಿನ್ನಿಂದಲೇ ಕ್ಲೃಪ್ತವೇ ಆಗಿದೆಯಷ್ಟೆ. ॥ ೧೯೭ ॥

ವಿಶೇಷಾಂಶ— (ಶ್ಲೋಕ ॥ ೧೯೬ ॥ ೧೯೭ ॥) (1) ಆವಾವ ಕುಲಪುರೋಹಿತರು ವಂಶಾನುಸಾರವಾಗಿ ಮಂತ್ರವನ್ನು ಅಭ್ಯಾಸ ಮಾಡಿಸುತ್ತಾರೆ. ಆಗ 'ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ' ಎಂದೇ ಸರ್ವಕರ್ಮಗಳನ್ನೂ ಆರಂಭಿಸುತ್ತಾರೆ. ಕೊನೆಗೆ 'ನಾರಾಯಣಾಯೇತಿ ಸಮರ್ಪಯೇತ್ತತ್' ಎನ್ನುವ ವಚನದಿಂದಲೂ 'ಸರ್ವದೇವನಮಸ್ಕಾರಃ

ಕೇಶವಂ ಪ್ರತಿ ಗಚ್ಛತಿ' ಎನ್ನುವ ಮಂತ್ರಬಲದಿಂದಲೂ ಶ್ರೀಕೃಷ್ಣನಲ್ಲಿಯೇ ಸಮರ್ಪಿಸುತ್ತಾರೆ. (2) ಮತ್ತು 'ಅಮುಕಶರ್ಮಾ ಅಹಂ ಭೋ ಅಭಿವಾದಯೇ' ಎಂದು ಹಿರಿಯರುಗಳನ್ನು ನಮಸ್ಕರಿಸುತ್ತಾರೆ. (3) ಮತ್ತು ದೇವರ್ಷಿಪಿತ್ರಾದಿಗಳಿಗೆ ತರ್ಪಣವನ್ನೂ ಕೊಡುತ್ತಾರೆ. ಆದ ಕಾರಣ ಸತ್ಸಹವಾಸದಿಂದ ಧರ್ಮದಲ್ಲಿ ಬುದ್ಧಿಯು ಹುಟ್ಟುತ್ತದೆ. ಶ್ರೀಹರಿಯಲ್ಲಿ ಸ್ವಲ್ಪ ಭಕ್ತಿಯೂ ಹುಟ್ಟುತ್ತದೆ. ಹೀಗೆ ಧರ್ಮಿಷ್ಠರೂ ನಿನ್ನಲ್ಲಿ ಸ್ವಲ್ಪ ಭಕ್ತಿಯುಳ್ಳವರೂ ಆದವರಿಗೆ ಅಂಧಂತಮಸ್ಸು ಆಗಲಿಕ್ಕೆ ಸರ್ವಥಾ ಯೋಗ್ಯವಲ್ಲ. ಮತ್ತೆ ಮುಕ್ತಿಯೇ ಆಗಬೇಕಾಗುವುದು. ತಥಾ ಚ 'ಶೃಣ್ವೇ ವೀರ ಉಗ್ರಮುಗ್ರಂ ದಮಾಯನ್' ಇತ್ಯಾದಿ ಶ್ರುತಿಗಳಿಗೂ 'ಮಾಮುಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ' ಇತ್ಯಾದಿ ಸ್ಮೃತಿಗಳಿಗೂ ಅಪ್ರಾಮಾಣ್ಯವು ಬರ ಬೇಕಾಗುವುದು, ಎಂದು ವಾಕ್ಯಸಮುದಾಯದ ಅಭಿಪ್ರಾಯವು. ॥ ೧೯೬ ॥ ॥ ೧೯೭ ॥

ತನ್ನ ಪ್ರಾರ್ಥನೆಗೆ ಫಲವನ್ನು ಸಾಧಿಸಿ ಅದನ್ನೇ ಸ್ಪಷ್ಟೀಕರಿಸಿಕೊಂಡು ಉಪಸಂಹಾರ ಮಾಡುತ್ತಾರೆ—

ಮೂ ॥ ಧರ್ಮಸ್ಯ ವಿಘ್ನ್ಯತ್ವಭಯಾದ್ವಯಂ ತ್ವಾ-
ಮಥಾಪಿ ವಾ ದೈತ್ಯಶುಭಾಪ್ತಿ ಭೀಷಾ ।
ಸಂಪ್ರಾರ್ಥಯಾವೋ ದಿತಿಜಾನ್ ಸುಕರ್ಮಣಾ-
ಸ್ತ್ವದ್ಭಕ್ತಿತಶ್ಚಾಲ (ಶ್ಚ್ಯಾವ) ಯಿತುಂ ಚ ಶೀಘ್ರಂ ॥ ೧೯೭ ॥

ಅ ॥ ಧರ್ಮಕ್ಕೆ ವೈಯರ್ಥ್ಯ ಬರುತ್ತದೆನ್ನುವ ಭಯದಿಂದ (ಅಂದರೆ ಧರ್ಮಿಷ್ಠರಿಗೂ ಸದ್ಗತಿಯಾಗದಿದ್ದರೆ ನಿನ್ನ ಭಕ್ತ್ಯಾತ್ಮಕ ಧರ್ಮವು ವ್ಯರ್ಥವಾಗುತ್ತದೆನ್ನುವ ಹೆದರಿಕೆಯಿಂದ ಅಂತೂ ವಿಪರೀತ ಫಲವನ್ನು ಹುಟ್ಟಿಸುತ್ತದೆನ್ನುವ ಭಯದಿಂದ) ಅಥಾಪಿ ವಾ=ನಿನ್ನ ಭಕ್ತ್ಯಾತ್ಮಕವಾದ ಧರ್ಮವು ವ್ಯರ್ಥವಾಗಬಾರದು ಎನ್ನುವುದಕ್ಕಾಗಿ ದೈತ್ಯರಿಗೆ ಸದ್ಗತಿಯನ್ನು ಕೊಡುವ ಪಕ್ಷದಲ್ಲಿ, ದೈತ್ಯರಿಗೆ ಸದ್ಗತಿಯೂ ಪ್ರಾಪ್ತಿಯಾಗುತ್ತದೆನ್ನುವ ಭಯದಿಂದ ದೈತ್ಯರನ್ನು ನಿನ್ನ ಭಕ್ತಿಯನ್ನು ಹುಟ್ಟಿಸತಕ್ಕ ಸತ್ಕರ್ಮದ್ವೆಸೆಯಿಂದಲೂ ನಿನ್ನ ಭಕ್ತಿಯಿಂದಲೂ ಶೀಘ್ರದಲ್ಲಿ ಬಿಡಿಸುವುದಕ್ಕಾಗಿ ನಾವು ನಿಮ್ಮನ್ನು ಪ್ರಾರ್ಥಿಸುತ್ತೇವೆ.

ವಿಶೇಷಾಂಶ—ಎಲೋ ಶ್ರೀಹರಿಯೇ ನೀನಾದರೂ ಕೃಷ್ಣಾವತಾರ ಸಮಯದಲ್ಲಿಯೇ 'ನಿನ್ನನ್ನು ಕೊಲ್ಲುವವನು ಗೋಕುಲದಲ್ಲಿ ಹುಟ್ಟಿರುತ್ತಾನೆ.' ಎನ್ನುವ ದುರ್ಗಾದೇವಿಯ ವರಾತಿನಿಂದಲೇ ನಿನ್ನಲ್ಲಿ ದ್ವೇಷವನ್ನು ಹುಟ್ಟಿಸಿಕೊಂಡು ಕಂಸಾದಿಗಳ ಭಕ್ತಿಲೇಶವನ್ನು ನಾಶಪಡಿಸುವಿ, ಪ್ರತಿಗ್ರಾಮದಲ್ಲಿಯೂ ಶಿಶುಗಳ ಹಿಂಸೆಯನ್ನು ಮಾಡುವುದರಿಂದ ಪೂತನಾದಿಗಳ ಧರ್ಮರತಿಯನ್ನು ನಾಶಪಡಿಸುವಿ. ಬಹುಧಾ ಅಧರ್ಮಸಂಪಾದನೆಯನ್ನು ಸ್ವಕೌಶಲದಿಂದಲೇ ಮಾಡಿಸುವಿ ಎನ್ನುವ ಅಭಿಪ್ರಾಯದಿಂದ ಸಂಕರ್ಷಣದಿಂದಲೂ ನಿನ್ನ ಭಕ್ತಿಯಿಂದಲೂ ದೈತ್ಯರನ್ನು ಶೀಘ್ರದಲ್ಲಿ ತಪ್ಪಿಸುವುದಕ್ಕಾಗಿ ನಿನ್ನನ್ನೇ ಪ್ರಾರ್ಥಿಸುತ್ತೇವೆಂದು ಹೇಳಿರುವರು. ॥ ೧೯೭ ॥

"ಭುವಿ ತೇ ಪ್ರಜಾತಾಃ" ಎಂದು ಹೇಳಿದ್ದನ್ನು ವಿಸ್ತರಿಸಿಕೊಂಡು ಹೇಳುತ್ತಾರೆ—

ಮೂ ॥ ಯ ಉಗ್ರಸೇನಃ ಸುರಗಾಯಕಃ ಸ
ಜಾತೋ ಯದುಷ್ವೇವ ತಥಾಭಿಧೇಯಃ ।
ತವೈವ ಸೇವಾರ್ಥಮಮುಷ್ಯ ಪುತ್ರೋ
ಜಾತೋಽಸುರಃ ಕಾಲನೇಮಿಃ ಸ ಈಶ ॥ ೧೯೮ ॥

ಅ ॥ ಯಾವನಂ (ಮೊದಲಂ) ಉಗ್ರಸೇನನಾವಂಕನಾದ, ದೇವತೆಗಳನ್ನಿ ಗಾನಮಾಡತಕ್ಕ ಗಂಧರ್ವನಂ ಇರಂತ್ತಿದ್ದನೋ, ಆ ಗಂಧರ್ವನಂ ಯಾದವರಲ್ಲಿ (ಮೊದಲಂ ಯಾವ ಹೆಸರಂಳ್ಳವನಾಗಿ ಆಗಿದ್ದನೋ) ಹಾಗೇ ನಾವಂಧೇಯಂವುಳ್ಳವನಾಗಿಯೇ (ಅಂದರೆ ಉಗ್ರಸೇನನಾವಂಕನಾಗಿಯೇ) ನಿನ್ನ ಸೇವೆಗೋಸ್ಕರವೇ ಹಂಟ್ಟಿರುವನಂ. ಎಲೋ ಶ್ರೀಹರಿಯೇ ವಾಯಂವಿನಿಂದ ಕೊಲ್ಲಲ್ಪಡಲಿಲ್ಲವೆಂದಂ ಪ್ರಸಿದ್ಧನಾದ ಅಸುರನಾದ ಕಾಲನೇಮಿಯಂ ಈ ಉಗ್ರಸೇನನಿಗೆ ಪುತ್ರನಾಗಿ ಹಂಟ್ಟಿದನಂ. ॥ ೧೯೯ ॥

ಮೂ ॥ ಯಸ್ತ್ವತ್ಪ್ರಿಯಾರ್ಥಂ ನ ಹತೋ ಹಿ ವಾಯುನಾ
ಭವತ್ಪ್ರಸಾದಾತ್ಪರವಿನಾಶಿತಾಪಿ ।
ಸ ಏಷ ಭೋಜೇಷು ಪುನಶ್ಚ ಜಾತೋ
ವರಾದುಮೇಶಸ್ಯ ಪರೈರಜೇಯಃ ॥ ೨೦೦ ॥

ಅ ॥ ಯಾವ ವಾಯಂದೇವರಂ ನಿನ್ನ ಅನುಗ್ರಹದ್ದೆಸೆಯಿಂದ ಅತ್ಯಂತವಾಗಿ ಸಮರ್ಥರಾಗಿರುತ್ತಾರೋ, (ಅಂತಹ) ವಾಯಂದೇವರಿಂದಲೂ ನಿನ್ನ ಪ್ರೀತಿಗೋಸ್ಕರವೇ ಯಾವ ಕಾಲನೇಮಿಯಂ ಸಂಹರಿಸಿಕೊಳ್ಳಲ್ಪಡಲಿಲ್ಲವೋ ಅಂತಹ ಈ ಕಾಲನೇಮಿಯಂ ರಂದ್ರನ ವರದ್ದೆಸೆಯಿಂದ ಇತರರಿಂದ ಜಯಿಸಿಕೊಳ್ಳಲ್ಪಡಲಿಕ್ಕೆ ಅಶಕ್ಯನಾದವನಾಗಿ ಭೋಜಾಖ್ಯವಿಶೇಷಣದಿಂದ ಪ್ರಸಿದ್ಧರಾದ ಯಾದವರಲ್ಲಿ ಪುನಃ ಹುಟ್ಟಿದವಂ. ॥ ೨೦೦ ॥

ಕಂಸನಿಗೆ ಹಂಟ್ಟಿದ ಲಾಗ್ಯಾತಂ ಕೃಷ್ಣನಲ್ಲಿ ದ್ವೇಷದಂರ್ಬೀಜತ್ವರೂಪವಾದ ಕಾರಣವೂ ಕೂಡಾ ಇದೆ ಎನ್ನುತ್ತಾರೆ—

ಮೂ ॥ ಸ ಚೌಗ್ರಸೇನೇ ಜನಿತೋಽಸುರೇಣ
ಕ್ಷ್ವೇತ್ರೇ ಹಿ ತದ್ರೂಪಧರೇಣ ಮಾಯಯಾ ।
ಗಂಧರ್ವಜೇನ ದ್ರವಿಲೇನ ನಾಮ್ನಾ
ಕಂಸೋ ಜಿತೋ ಯೇನ ವರಾಚ್ಛಚೀಪತಿಃ ॥ ೨೦೧ ॥

ಅ ॥ ಗಂಧರ್ವಮಾಯೆಯಿಂದ ಆ ಉಗ್ರಸೇನನ ರೂಪವನ್ನು ಧರಿಸಿರುವ ಗಂಧರ್ವಕುಲದಲ್ಲಿ ಹಂಟ್ಟಿರುವ ಹೆಸರಿನಿಂದ ದ್ರವಿಲಸೆನ್ನುವ ಅಸುರನಿಂದ ಉಗ್ರಸೇನ ಸಂಬಂಧಿಯಾದ ಧರ್ಮಪತ್ನಿಯಲ್ಲಿ ಆ ಕಾಲನೇಮಿಯಂ ನಾವಂದಿಂದ ಕಂಸನೆಂದಂ ಹುಟ್ಟಿಸಿಕೊಳ್ಳಲ್ಪಟ್ಟನಂ. ಯಾವ ಕಂಸನಿಂದ (ರಂದ್ರನ) ವರನಿವಿಂತ್ತವಾಗಿ ಶಚೀಪತಿಯಾದ ಪುರಂದರನಂ ಪರಾಜಿತನಾಗಿರುವನೋ ॥ ೨೦೧ ॥

ಮೂ ॥ ಜಿತ್ವಾ ಜಲೇಶಂ ಚ ಹೃತಾನಿ ಯೇನ
ರತ್ನಾನಿ ಯಕ್ಷಾಶ್ಚ ಜಿತಾಃ ಶಿವಸ್ಯ ।
ಕನ್ಯಾವನಾರ್ಥಂ ಮಗಧಾಧಿಪೇನ
ಪ್ರಯೋಜಿತಾಸ್ತೇ ಚ ಹೃತೇ ಬಲೇನ ॥ ೨೦೨ ॥

ಅ ॥ ಯಾವ ಕಂಸನಿಂದ ಜಲಾಧಿಪತಿಯಾದ ವರುಣನನ್ನು ಗೆದ್ದು(ಸವಂದ್ರದ)ರತ್ನಗಳೂ ಅಪಹರಿಸಲ್ಪಟ್ಟವೆಯೋ, ಯಾವ ಕಂಸನಿಂದ ಮಗಧದೇಶಕ್ಕೆ ಅಧಿಪತಿಯಾದ ಜರಾಸಂಧನಿಂದ

(ತನ್ನ) ಹಂಡಂಗಿಯಂರನ್ನು ರಕ್ಷಿಸಂವುದಕ್ಕಾಗಿ ನಿಯಂಕ್ತರಾದ ಶಿವನ ಯಂಕ್ಷರೂ ಕೂಡ ಸೊಲಿಸ ಲ್ಪಟ್ಟಿದ್ದಾರೋ, ಆದಾವ ಅಸ್ತಿ, ಪ್ರಾಸ್ತಿ ಎಂದಂ ಹೆಸರಂಳ್ಳ ಜರಾಸಂಧನ ಇಬ್ಬರಂ ಕನ್ನಿಕೆಯಂರೂ ಕೂಡ ಬಲಾತ್ಕಾರದಿಂದಲೇ ಅಪಹೃತರಾಗಿರಂತ್ತಾರೋ (ಅಂತಹ ಪ್ರಸಿದ್ಧನಾದ ಕಂಸನಂ ಹಂಟ್ಟಿದನಂ.) ॥ ೨೦೨ ॥

ಮಗಧಾಧಿಪನಂ ಮೊದಲಂ ಯಾರೆಂದರೆ—

ಮೂ ॥ ಸ ವಿಪ್ರಚಿತ್ತಿಶ್ಚ ಜರಾಸುತೋಽಭೂ
ದ್ವರಾದ್ವಿಧಾತುರ್ಗಿರಿಶಸ್ಯ ಚೈವ।
ಸರ್ವೈರಜೇಯೋ ಬಲಮುತ್ತಮಂ ತತ್ (ತತೋ)
ಜ್ಞಾತ್ವೈವ ಕಂಸಸ್ಯ ಮುದಾ ಸುತೇ ದದೌ ॥ ೨೦೩ ॥
ನಿವಾರಯಾವಾಸ ನ ಕಂಸಮುದ್ಧತಂ
ಬಕೋಽಪಿ ಯೋ ಯಸ್ಯ ಬಲೇನ ಕಶ್ಚಿತ್ ।
ತುಲ್ಯಃ ಪೃಥಿವ್ಯಾಂ ವಿವರೇಷು ವಾ ಕ್ವಚಿತ್
ವಶೇ ಬಲಾಢ್ಯೋ (ದ್ಯೋ) ನೃಪತೀಂಶ್ಚ ಚಕ್ರೇ ॥ ೨೦೪ ॥

ಅ ॥ ಆ ವಿಪ್ರಚಿತ್ತಿಯೇ ಜರಾಸಂಧನಾದನಂ. ಆತನು ಬ್ರಹ್ಮನ ವಂತ್ತು ರಂದ್ರನ ವರ ದಿಂದಲೇ ಎಲ್ಲವರಿಂದಲೂ ಜಯಿಸಲಿಕ್ಕೆ ಅಶಕ್ಯನಾದವನಂ ಆದನಂ. (ಜರಾಸಂಧನಂ ಸವಂರ್ಥನಾದಾಗ್ಯೂ) ಕಂಸನ ಆ (ಅಂದರೆ ಇಂದ್ರಾದಿಗಳ ಜಯಂದಿಂದ ಪ್ರಸಿದ್ಧವಾದ) ಉತ್ತಮಂವಾದ ಬಲವನ್ನು ತಿಳಿದಂಕೊಂಡಂ ಸಂತೋಷದಿಂದಲೇ ಇಬ್ಬರಂ ಕನ್ನಿಕೆಯಂರನ್ನು ಕೊಟ್ಟನಂ. (ಅಂದರೆ ಕಂಸನಿಂದ ಅಪಹೃತರಾದ ಅಸ್ತಿಪ್ರಾಸ್ತಿಯಂರೆನ್ನುವ ಕನ್ನಿಕೆಯಂರನ್ನು ಪುನಃ ಕಂಸನಿಗೋಸ್ಕರವೇ ಮಂದುವೆ ಮಾಡಿಕೊಟ್ಟನು.

ಯಾವ ಜರಾಸಂಧನ ಬಲ ವಿಷಯಂದಲ್ಲಿ, ಪೃಥ್ವಿಯಂಲ್ಲಿಯಂ ಸಪ್ತ ಪಾತಾಲಾಖ್ಯ ಭೂ ವಿವರಗಳಲ್ಲಿಯಂ ಅಥವಾ ಪಾತಾಲಾದಿ ಏಳಂ (೭) ಲೋಕಗಳಲ್ಲಿ ಆಗಲೀ ಯಾವ ಕಾಲ ದಲ್ಲಿಯಂ ಯಾವನೊಬ್ಬ ಪುರುಷನೂ ಸವಾಸಿಕನಂ ಇಲ್ಲವೋ, (ಆದಂದರಿಂದಲೇ) ಬಲದಿಂದ ಸಂಪನ್ನನಾದ ಜರಾಸಂಧನು ಶಲ್ಯ ಬಾಹ್ಲೀಕ ಮೊದಲಾದ ರಾಜರನ್ನು (ತನ್ನ) ಆಧೀನದಲ್ಲಿಯೇ (ಇರತಕ್ಕವರನ್ನಾಗಿ) ಮಾಡಿರುವನೋ, ಜರಾಸಂಧನು (ಕಂಸನದೆಸೆಯಿಂದ ಕನ್ನಿಕೆಯಂರನ್ನು ಬಿಡಿಸಲಿಕ್ಕೆ) ಸವಂರ್ಥನಾದಾಗ್ಯೂ ಉದ್ಧತನಾದ (ಅಂದರೆ ತನ್ನಂಕ್ಕಿಂತಲೂ ಬಲಿಷ್ಠನ ಕನ್ನಿಕೆಯಂ ರನ್ನು ಅಪಹರಿಸಿರುವುದರಿಂದ ದೃಪ್ತನಾದ) ಕಂಸನನ್ನು ತಡೆಯಂಲಿಲ್ಲ. (ಮಂತ್ತೆ) ಕಂಸನ ಬಲ ವನ್ನು ತಿಳಿದಂ ಕಂಸನಿಗೋಸ್ಕರವೇ ಕೊಟ್ಟನಂ. ॥ ೨೦೩-೨೦೪

ಮೂ ॥ ಹತೌ ಪುರಾ ಯೌ ಮಧುಕೈಟಭಾಖ್ಯೌ
ತ್ವಯೈವ ಹಂಸೋ ಡಿಭಿ(ಭ)ಕಶ್ಚ ಜಾತೌ
ವರಾದಜೇಯೌ ಗಿರಿಶಸ್ಯ ವೀರೌ
ಭಕ್ತೌ ಜರಾಸಂಭಮನು ಸ್ಮ ತೌ ಶಿವೇ ॥ ೨೦೫ ॥

ಅ ॥ ಮೊದಲಂ (ಹಯಗ್ರೀವಾವತಾರವನ್ನು ಮಾಡಿದ) ನಿನ್ನಿಂದಲೇ ಮಂಧುಕೈಟಭ ಎಂದಂ ಹೆಸರಂಳ್ಳ ಯಾವ ದೈತ್ಯರಂ ಸಂಹೃತರಾಗಿರಂತ್ತಾರೋ, (ಅವರೇವೇ) ಹಂಸ, ಡಿಭಿಕರೆಂದಂ ಪ್ರಸಿದ್ಧ

① ದುರ್ಯೋಧನನ ಜನನ ಪೂರ್ವದಲ್ಲಿಯೇ ಈ ಪ್ರಾರ್ಥನೆ ಅಲ್ಲವೇ?

ರಾಗಿ (ಬ್ರಹ್ಮದತ್ತನದೆಸೆಯಿಂದ) ಹುಟ್ಟಿದರುವರು. ರುದ್ರನ ವರದ್ದೆಸೆಯಿಂದ ಸೋಲಿಸಲಿಕ್ಕೆ ಅಶಕ್ಯರಾದ ಪರಾಕ್ರಮಶಾಲಿಗಳಾದ ಆ ಹಂಸ ಡಿಭಿಕರು ಜರಾಸಂಧನ ಅನಂತರದಲ್ಲಿ ಶಿವನಲ್ಲಿ (ವಿುಖ್ಯ) ಭಕ್ತರಾಗಿದ್ದರು.

ವಿಶೇಷಾಂಶ—(1) ಹಯಗ್ರೀವ ದೇವರಿಗೂ ಶ್ರೀನಾರಾಯಣನಿಗೂ ಅಭೇದವನ್ನು ಸೂಚಿಸುವುದಕ್ಕಾಗಿ ಏವ ಶಬ್ದವು. (2) ಅನು ಎನ್ನುವುದರಿಂದ ಶಿವಭಕ್ತಿಯಲ್ಲಿ ಜರಾಸಂಧನಿಗೂ ಹಂಸಡಿಭಿಕರಿಗೂ ತಾರತಮ್ಯವೂ ಉಕ್ತವಾಯಿತು. ॥ ೨೦೫ ॥

ಮೂ ॥ ಅನ್ಯೇಽಪಿ ಭೂವಸುರಾಃ ಪ್ರಜಾತಾ-
ಸ್ತ್ವಯಾ ಹತಾ ಯೇ ಸುರದೈತ್ಯಸಂಗರೇ ।
ಅನ್ಯೇ ತಥೈವಾಂಧತಮಃ ಪ್ರಪೇದಿರೇ
ತಾರ್ಯಾ ತಥೈಷಾಂ ಚ ತಮೋ ಗತಿಸ್ತ್ವಯಾ ॥ ೨೦೬ ॥

ಅ ॥ ದೇವತೆಗಳೂ ದೈತ್ಯರೂ ಇವರ ಯುದ್ಧದಲ್ಲಿ (ಹಿಂದೆ ಹೇಳಿದವರಿಂದ) ಇತರರಾದ ಯಾವ ಅಸುರರು ನಿನ್ನಿಂದ ಸಂಹೃತರಾಗಿರುತ್ತಾರೋ ಆ ಅಸುರರೂ ಹಾಗೆಯೇ ಸಂಹೃತರಿಂದ ಇತರರಾದ ಭಗವದ್ದ್ವೇಷಿಗಳೂ ಅಂಧತಮಸ್ಸನ್ನು ಹೊಂದಿರುತ್ತಾರೆ. (ಅಂದರೆ ಸಂಹೃತರಾದ ಅಸುರರಲ್ಲಿ ಆದರೂ ಕೆಲವರು ತಮಸ್ಸನ್ನು ಹೊಂದಿರುತ್ತಾರೆ.) (ಕೆಲವರು) ಭೂಮಿಯಲ್ಲಿ ಹುಟ್ಟಿರುತ್ತಾರೆ; ಭೂಮಿಯಲ್ಲಿ ಹುಟ್ಟಿದ ಆ ಅಸುರರಿಗೂ ಕೂಡ ಹಾಗೆಯೇ (ಅಂದರೆ ಹೇಗೆ ಇತರರು ತಮಸ್ಸನ್ನು ಹೊಂದಿರುವರೋ ಹಾಗೆಯೇ) ನಿನ್ನಿಂದ ತಮಃಪ್ರಾಪ್ತಿಯು ಮಾಡತಕ್ಕದ್ದು ॥೨೦೬॥

ಮೂ ॥ ವ್ಯಾಸಾವತಾರೇ ನಿಹತಸ್ತ್ವಯಾ ಯಃ
ಕಲಿಃ ಸುಶಾಸ್ತ್ರೋಕ್ತಿಭಿರೇವ ಪೂರ್ವಂ
ಶ್ರುತ್ವಾ ತ್ವದುಕ್ತೇಃ ಪುರುಷೇಷು ತಿಷ್ಠ-
ನ್ನೀಷಚ್ಚಕಾರೇವ ಮನಸ್ತ್ವಯಿಶ ॥ ೨೦೭ ॥

ಅ ॥ ಎಲೋ ಶ್ರೀಪರಮಾತ್ಮನೇ ವೇದವ್ಯಾಸಾವತಾರದಲ್ಲಿ ನಿನ್ನಿಂದ ವಿುಥ್ಯಾಜ್ಞಾನರೂಪಿಯಾದ ಯಾವ ಕಲಿಯು ಶೋಭನಗಳಾದ ಶಾಸ್ತ್ರಗಳ ವಚನಗಳಿಂದಲೇ ಸಂಹರಿಸಿಕೊಳ್ಳಲ್ಪಟ್ಟಿರುತ್ತಾನೋ, (ಅಲ್ಲದೆ ನಿನ್ನ ಚಕ್ರಾದ್ಯಾಯುಧಗಳಿಂದ ಕಾಲನೇವಿುಯಂತೆ ಸರ್ವಥಾ ಸಂಹೃತನಾಗಲಿಲ್ಲವೋ:)(ಆ ಕಲಿಯೇ)ಈಗ (ಅವಶಿಷ್ಟವಾದ ನಿಜರೂಪದಿಂದ) ಸತ್ಪುರುಷರಲ್ಲಿ ಇರುವವನಾಗಿ ನಿನ್ನ ಉಕ್ತಿಗಳನ್ನು (ಅಂದರೆ ಸತ್ಪುರುಷರಿಂದ ಕಲಿಯಬಲ್ಲಡತಕ್ಕ ಬ್ರಹ್ಮವಿುಮಾಂಸಾ ಮೊದಲಾದ ನಿರ್ಣಯಕೋಕ್ತಿಗಳನ್ನು) ಕೇಳಿ ನಿನ್ನಲ್ಲಿ ಸ್ವಲ್ಪ ಮನಸ್ಸನ್ನು ಮಾಡುವವನಂತೆ ಇದ್ದಾನೆ.

ವಿಶೇಷಾಂಶ—ಪ್ರಾಯಶಃ ವಿುಥ್ಯಾಜ್ಞಾನವನ್ನು ನೀನೇ ನಾಶಮಾಡಿರುವುದರಿಂದ ವಿುಥ್ಯಾಜ್ಞಾನದಲ್ಲಿಯೇ ದಾಢ್ರ್ಯವನ್ನು ಮಾಡಲಿಕ್ಕೆ ಅಶಕ್ಯನಾಗಿ ಶ್ರೀಹರಿಯು ಸರ್ವೋತ್ತಮನು ಆಹುದೋ ಅಲ್ಲವೋ ಎಂದು ಸಂಶಯಗ್ರಸ್ತನಾಗಿ ಇರುತ್ತಾನೆ, ಆದಕಾರಣ ಆ ಕಲಿಗೂ ತಮಸ್ಸು ಆಗಲಾರದು. ಸದ್ಗತಿಯೇ ಆಗಬೇಕಾಗುವುದು. ಇತರ ದೈತ್ಯರಿಗೂ ಸದ್ಗತಿಯಾಗಬೇಕಾಗುವುದು. ಆದುದರಿಂದ ಆ ಕಲಿಯು ದುರ್ಯೋಧನ ರೂಪದಿಂದ ಭೂಮಿಯಲ್ಲಿ ಹುಟ್ಟಿರುತ್ತಾನೆ. ಆತನನ್ನು ಭೀಮನ ಗದೆಯಿಂದ ಸರ್ವಪ್ರಕಾರದಿಂದಲೂ ಕೊಲ್ಲಿಸಬೇಕು. ॥ ೨೦೭ ॥

ಮೂ ॥ ರಾವಣಾತ್ಮನಾ ಯೇ ನಿಹತಾಶ್ಚ ರಾಕ್ಷಸಾ
ದೃಷ್ಟ್ವಾ ಬಲಂ ತೇಽಪಿ ತದಾ ತವಾದ್ಯ ।
ಸಮಂ ತವಾನ್ಯಂ ನ ಹಿ ಚಿಂತಯಂತಿ
ಸುಪಾಪಿನೋಽಪೀಶ ತಥಾ ಹನೂಮತಃ ॥ ೨೦೯ ॥

ಅ ॥ ಎಲೋ ಶ್ರೀಹರಿಯೇ ರಾಘವಸ್ವರೂಪದಿಂದ ಯಾವ ರಾಕ್ಷಸರು ಸಂಹೃತರಾಗಿರು ತ್ತಾರೋ ಅಂತಹ ರಾಕ್ಷಸರೂ ಕೂಡ ರಾವಣಾವತಾರದಲ್ಲಿ ನಿನ್ನ ಬಲವನ್ನು ನೋಡಿ ಈ ಕಾಲ ದಲ್ಲಿ ಅತಿ ಪಾಪಿಷ್ಠರಾದವರಾದಾಗ್ಯೂ ನಿನಗೆ ಸಮಾನಿಕನಾದ ಮತ್ತೊಬ್ಬ ಪುರುಷನನ್ನು ತಿಳಿಯುವುದಿಲ್ಲ. ಹಾಗೆಯೇ ಹನುಮಂತನಿಗೆ ಸಮಾನಿಕನಾದವನನ್ನು ಮತ್ತೊಬ್ಬನನ್ನು ತಿಳಿಯುವುದಿಲ್ಲ. ॥ ೨೦೯ ॥

ಮೂ ॥ ಯೇ ಕೇಶವ ತ್ವದ್ಬಹುಮಾನಯುಕ್ತಾ-
ಸ್ತಥೈವ ವಾಯೌ ನ ಹಿ ತೇ ತಮೋಽಂಧಂ ।
ಯೋಗ್ಯಾಃ ಪ್ರವೇಷ್ಟುಂ ತದತೋ ಹಿ ಮಾರ್ಗಾ-
ಚ್ಚಾಲ್ಯಾಸ್ತ್ವಯಾ ಜನಯಿತ್ವೈವ ಭೂಮೌ ॥ ೨೦೯ ॥

ಅ ॥ ಬ್ರಹ್ಮರುದ್ರರನ್ನು ಆಯಾಯಾ ಪದವಿಯಲ್ಲಿ ಇರಿಸಿದ ಶ್ರೀಪರಮಾತ್ಮನೇ ಯಾವ ಪ್ರಾಣಿಗಳು ನಿನ್ನಲ್ಲಿ ಮಹತ್ವಬುದ್ಧಿಯಿಂದೊಡಗೂಡಿದವರೋ, ಹಾಗೆಯೇ ವಾಯುವಿನಲ್ಲಿಯೂ ಮಹತ್ವಬುದ್ಧಿಯಿರತಕ್ಕವರೋ, ಅಂತಹ ಪ್ರಾಣಿಗಳು ಅಂಧಂತಮಸ್ಸನ್ನು ಪ್ರವೇಶಮಾಡಲಿಕ್ಕೆ ಹಿ=ಯಾವ ಕಾರಣದಿಂದ ಯೋಗ್ಯರಲ್ಲವೋ, ಆದಕಾರಣ ನಿನ್ನಿಂದ ಭೂಮಿಯಲ್ಲಿ (ತನ್ನ ರೂಪವನ್ನು) ಪ್ರಾದುರ್ಭವಿಸಿಕೊಂಡು ಪೂರ್ವೋಕ್ತವಾದ ಸಜ್ಞಾನಮಾರ್ಗದ್ದೆಸೆಯಿಂದ ಅಲ್ಲಾಡಿಸಿ ~~ಕೊಳ್ಳಲ್ಪಡಲಿಕ್ಕೇನೇ ಅರ್ಹರು. (ಅಂದರೆ ಆ ಅಸುರರನ್ನು ಸನ್ಮಾರ್ಗಭ್ರಷ್ಟರನ್ನಾಗಿ ಮಾಡಲೇ~~ ಬೇಕು.) ॥ ೨೦೯ ॥

ಸನ್ಮಾರ್ಗದಿಂದ ತಪ್ಪಿಸುವ ಉಪಾಯಂವನ್ನು ತೋರಿಸುತ್ತಾರೆ—

ಮೂ ॥ ನಿತಾಂತಮುತ್ಪಾದ್ಯ ಭವದ್ವಿರೋಧಂ
ತಥೈವ (ಥಾ ಚ) ವಾಯೌ ಬಹುಭಿಃ ಪ್ರಕಾರೈಃ ।
ಸರ್ವೇಷು ದೇವೇಷು ಚ ಪಾತನೀಯಾ-
ಸ್ತಮಸ್ಯಥಾಂಧೇ ಕಲಿಪೂರ್ವಕಾಸುರಾಃ ॥ ೨೧೦ ॥

ಅ ॥ (ಎಲೋ ಶ್ರೀಹರಿಯೇ) ಅತ್ಯಂತವಾಗಿ ನಿನ್ನಲ್ಲಿ ವಿರೋಧವನ್ನು ಹಾಗೆಯೇ ವಾಯು ದೇವರಲ್ಲಿಯೂ ಎಲ್ಲಾ ದೇವತೆಗಳಲ್ಲಿಯೂ ವಿರೋಧವನ್ನು ಅನೇಕ ಪ್ರಕಾರಗಳಾದ ಉಪಾಯ ಗಳಿಂದ ಅತ್ಯಂತವಾಗಿ ಹುಟ್ಟಿಸಿ ಆಮೇಲೆ ಅಂಧಂತಮಸ್ಸಿನಲ್ಲಿ ಕಲಿಯೇ ಮೊದಲಾಗಿ ಉಳ್ಳ ಅಸುರರು ಬೀಳಿಸಲ್ಪಡಬೇಕು. ॥ ೨೧೦ ॥

ಮೂ ॥ ಹತೌ ಚ ಯೌ ರಾವಣಕುಂಭಕರ್ಣೌ
ತ್ವಯಾ ತ್ವದೀಯೌ ಪ್ರತಿಹಾರಪಾಲೌ ।

ಮಹಾಸುರಾವೇಶಯುತೌ ಹಿ ಶಾಪಾತ್
ತ್ವಯೈವ ತಾವದ್ಯ ವಿಮೋಚನೀಯೌ ॥ ೨೧೧ ॥

ಅ ॥ ನಿನ್ನವರಾದ (ಅಂದರೆ ನಿನ್ನ ಭಕ್ತರಾದ) ದ್ವಾರಪಾಲಕರಾದ (ಸನಕಾದಿಗಳ) ಶಾಪದ್ದೆಸೆಯಿಂದ ಶ್ರೇಷ್ಠರಾದ ಅಸುರರ ಆವೇಶದಿಂದ ಕೂಡಿರುವ ಯಾವ ರಾವಣ, ಕುಂಭಕರ್ಣರು ನಿನ್ನಿಂದ(ರಾಮಾವತಾರದಲ್ಲಿ) ಸಂಹೃತರಾಗಿರುತ್ತಾರೋ ಆ ದ್ವಾರಪಾಲಕರಾದ ಜಯವಿಜಯರು ಈಗ (ಶಿಶುಪಾಲ ದಂತವಕ್ರ ಜನ್ಮದಲ್ಲಿ) ಶಾಪದಿಂದ ನಿನ್ನಿಂದಲೇ ಬಿಡಿಸಿಕೊಳ್ಳಲ್ಪಡಲಿಕ್ಕೆ ಅರ್ಹರೇ ಆಗಿರುತ್ತಾರೆ. ॥ ೨೧೧ ॥

ಮೂ ॥ ಯೌ ತೌ ಶವಾರೀಹ ತಯೋಃ ಪ್ರವಿಷ್ಟೌ
ದೈತ್ಯೌ ತು ತಾವಂಧತಮಃ ಪ್ರವೇಶ್ಯ ।
ಯೌ ತೌ ತ್ವದೀಯೌ ಭವದೀಯವೇಶ್ಮ
ತ್ವಯಾ ಪುನಃ ಪ್ರಾಪಣೀಯೌ ಪರೇಶ ॥ ೨೧೨ ॥

ಅ ॥ ಬ್ರಹ್ಮಾದಿಗಳಿಗೆ ಸ್ವಾಮಿಯಾದ ಶ್ರೀಹರಿಯೇ ನಿನಗೆ ಶತ್ರುಗಳೆಂದೂ ಪ್ರಸಿದ್ಧರಾದ ಶಿಶುಪಾಲ ದಂತವಕ್ರ ನಾಮಕರಾದ ಯಾವ ದೈತ್ಯರೂ ಆ ದ್ವಾರಪಾಲಕರಲ್ಲಿ ಪ್ರವಿಷ್ಟರಾಗಿರುತ್ತಾರೋ, ಅಂತಹ ದೈತ್ಯರು ಶಿಶುಪಾಲ ದಂತವಕ್ರ ಜನ್ಮದಲ್ಲಿಯೇ ಅಂಧತಮಸ್ಸನ್ನು ಪ್ರವೇಶ ಮಾಡಿಸಿಕೊಳ್ಳಲಿಕ್ಕೆ ಅರ್ಹರೇ ಆಗಿರುತ್ತಾರೆ, ಮತ್ತು ನಿನ್ನ ಭಕ್ತರಾದ ಯಾವ ಜಯವಿಜಯರೋ ಅವರು ನಿನ್ನಿಂದ ಪುನಃ ನಿನ್ನ ಸಂಬಂಧಿಯಾದ ವೈಕುಂಠಲೋಕವನ್ನೇ ಹೊಂದಿಸಿಕೊಳ್ಳಲ್ಪಡಲಿಕ್ಕೇನೇ ಅರ್ಹರಾಗಿರುತ್ತಾರೆ. ॥ ೨೧೨ ॥

ಮೂ ॥ ಆವಿಶ್ಯ ಯೋ ಬಲಿಮುಂಜಶ್ಚಕಾರ
ಪ್ರತೀಪಮುಸ್ಮಾಸು ತಥಾ ತ್ವಯಿಶ ।
ಸ ಚಾಸುರೋ ಬಲಿನಾಮೈವ ಭೂಮೌ
ಸಾಲ್ವೋ ನಾಮ್ನಾ ಬ್ರಹ್ಮದತ್ತಸ್ಯ ಜಾತಃ ॥ ೨೧೩ ॥

ಅ ॥ ಎಲೌ ಶ್ರೀಹರಿಯೇ ಯಾವ ಬಲಿನಾಮಕನಾದ ಅಸುರನು (ಕರ್ದಮದೇವತೆಯಾದ ಪ್ರಹ್ಲಾದನ ಪೌತ್ರ) (ಮೊಮ್ಮಗನಾದ) ಬಲಿಚಕ್ರವರ್ತಿಯನ್ನು ಪ್ರವೇಶವಾಡಿ ನಮ್ಮಲ್ಲಿಯೂ ಹಾಗೆಯೇ ನಿನ್ನಲ್ಲಿಯೂ ವಿರೋಧವನ್ನು ಚೆನ್ನಾಗಿ ಮಾಡಿರುವನೋ, ಅಂತಹ ಬಲಿನಾಮಕನಾದ ಅಸುರನೇ ಭೂಮಿಯಲ್ಲಿ ಹೆಸರಿನಿಂದ ಸಾಲ್ವನೆಂದೂ (ಪ್ರಸಿದ್ಧನಾಗಿ) ಬ್ರಹ್ಮದತ್ತನ ದೆಸೆಯಿಂದ ಹುಟ್ಟಿರುತ್ತಾನೆ. ॥ ೨೧೩ ॥

ಮೂ ॥ ಮಾಯಾಮಯಂ ತೇನ ವಿಮಾನಮುಗ್ರ್ಯ-
ಮುಭೇದ್ಯಮಾಪ್ತಂ ಸಕಲೈರ್ಗಿರೀಶಾತ್ ।
ವಿದ್ರಾವಿತೋ ಯೋ ಬಹುಶಸ್ತ್ವಯೈವ
ರಾಮಸ್ವರೂಪೇಣ ಭೃಗೂದ್ವಹೇನ ॥ ೨೧೪ ॥

ಅ ॥ ಯಾವ ಸಾಲ್ವನು ಭೃಗುಕುಲದಲ್ಲಿ ಅವತಾರವಾಡಿದ, ಪರಶುರಾಮ ಸ್ವರೂಪವುಳ್ಳ ನಿನ್ನಿಂದಲೇ ಅನೇಕಾವರ್ತಿ (ಯುದ್ಧವಾಡುವವನಾಗಿ) ಓಡಿಹೋಗಿರುವನೋ, ಆ ಸಾಲ್ವನಿಂದ ಇಂದ್ರಜಾಲವಾಯಾಪ್ರಚುರವಾದ ಸರ್ವರಿಂದಲೂ ಭೇದಿಸಲಿಕ್ಕೆ ಅಶಕ್ಯವಾದ ಅತಿ ಶ್ರೇಷ್ಠವಾದ ವಿಮಾನವು ರುದ್ರದೇವರದೆಸೆಯಿಂದ ಹೊಂದಲ್ಪಟ್ಟಿತು. (ಅಂದರೆ ತಪಸ್ಸಿನಿಂದ ರುದ್ರನನ್ನು ಸಂತೋಷೀಕರಿಸಿ ಸಾಲ್ವನು ಸೌಭಾಖ್ಯ ವಿಮಾನವನ್ನು ಹೊಂದಿರುತ್ತಾನೆ.) ॥ ೨೧೪ ॥

ಹಾಗಾದರೆ ಪರಶುರಾಮದೇವರಿಗೆ ಈ ಸಾಲ್ವನನ್ನು ಕೊಲ್ಲಲಿಕ್ಕೆ ಶಕ್ತಿಯಿಲ್ಲದಿರುವುದರಿಂದ ಓಡಿಸಿದ್ದೋ ಏನು ಎಂದು ಶಂಕಿಸಿದರೆ—

ಮೂ ॥ ನಾಸೌ ಹತಃ ಶಕ್ತಿಮತಾಪಿ ತತ್ರ
ಕೃಷ್ಣಾವತಾರೇ ಸ ಮಯೈವ ವಧ್ಯಃ।
ಇತ್ಯಾತ್ಮಸಂಕಲ್ಪಮೃತಂ ವಿಧಾತುಂ
ಸ ಚಾತ್ರ ವಧ್ಯೋ ಭವತಾತಿಪಾಪೀ ॥ ೨೧೫ ॥

ಅ ॥ ಶ್ರೀಕೃಷ್ಣರೂಪಿಯಾದ ನನ್ನಿಂದಲೇ ಆ ಸಾಲ್ವನು ಕೃಷ್ಣಾವತಾರದಲ್ಲಿ ಸಂಹರಿಸಿ ಕೊಳ್ಳಲ್ಪಡಲಿಕ್ಕೆ ಅರ್ಹನು ಎನ್ನುವ ತನ್ನ ಸಕಂಲ್ಪವನ್ನು ಸತ್ಯವನ್ನಾಗಿ ಮಾಡುವುದಕ್ಕೋಸ್ಕರವೇ (ಕೊಲ್ಲಲಿಕ್ಕೆ) ಸಾಮರ್ಥ್ಯವಿರತಕ್ಕವನಾದಾಗ್ಯೂ ಪರಶುರಾಮನಿಂದ ಪರಶುರಾಮಾವತಾರದಲ್ಲಿ ಈ ಸಾಲ್ವನು (ಯಾವ ಕಾರಣದಿಂದ) ಸಂಹರಿಸಿಕೊಳ್ಳಲ್ಪಡಲಿಲ್ಲವೋ, (ಆದಕಾರಣ) ಅತಿ ಪಾಪಿಷ್ಠನಾದ ಆ ಸಾಲ್ವನು ಈ ಕೃಷ್ಣಾವತಾರದಲ್ಲಿ ನಿನ್ನಿಂದಲೇ ಸಂಹರಿಸಿಕೊಳ್ಳಲ್ಪಡಲಿಕ್ಕೆ ಯೋಗ್ಯನು. ॥ ೨೧೫ ॥

ಹಾಗಾದರೆ ಸಾಲ್ವನು ಸೌಭವಿಮಾನವನ್ನು ಹೊಂದಿರುವುದಾದರೆ ಅವನ ತಂದೆಯಾದ ಬ್ರಹ್ಮದತ್ತನಿಗೆ ಸೌಭಪತಿಯೆನ್ನುವ ವ್ಯವಹಾರವು ಹೇಗೆ ಕೂಡುತ್ತದೆ ಎಂದರೆ—

ಮೂ ॥ ಯದೀಯಮಾರುಹ್ಯ ವಿಮಾನಮಸ್ಯ
ಪಿತಾಭವತ್ ಸೌಭಪತಿಶ್ಚನಾಮ್ನಾ।
ಯದಾ ಸ ಭೀಷ್ಮೇಣ ಜಿತಃ ಪಿತಾಸ್ಯ
ತದಾ ಸ ಸಾಲ್ವಸ್ತಪಸಿ ಸ್ಥಿತೋಽಭೂತ್ ॥ ೨೧೬ ॥

ಅ ॥ ಈ ಸಾಲ್ವನ ತಂದೆಯಾದ ಬ್ರಹ್ಮದತ್ತನು ಯಾವ ಸಾಲ್ವಸಂಬಂಧಿಯಾದ ವಿಮಾನವನ್ನು ಏರಿ ನಾಮದಿಂದ ಸೌಭಪತಿಯಾದನು. (ಅಂದರೆ ಸಾಲ್ವನೇ ಸೌಭಪತಿಯಾಗಿದ್ದಾಗ್ಯೂ ಅವನ ವಿಮಾನವನ್ನು ಬ್ರಹ್ಮದತ್ತನು ಏರಿಕೊಂಡು ಇದ್ದುದರಿಂದಲೇ ಸೌಭಪತಿಯೆನ್ನುವ ವ್ಯವಹಾರವು) (ಹಾಗಾದರೆ ಅತಿ ಸಮರ್ಥನಾದ ಸಾಲ್ವನು ಇರುವಾಗ ಭೀಷ್ಮಾಚಾರ್ಯರು ಸಾಲ್ವನ ತಂದೆಯಾದ ಬ್ರಹ್ಮದತ್ತನನ್ನು ಹೇಗೆ ಸೋಲಿಸಿರುವರು ಎಂದರೆ) ಯಾವಾಗ ಈ ಸಾಲ್ವನ ತಂದೆಯಾದ ಆ ಬ್ರಹ್ಮದತ್ತನು ಭೀಷ್ಮಾಚಾರ್ಯರಿಂದ ಸೋಲಿಸಿಕೊಳ್ಳಲ್ಪಟ್ಟನೋ ಆಗ ಆ ಸಾಲ್ವನು (ಸೌಭ ವಿಮಾನ ಪ್ರಾಪ್ತಿಗಾಗಿ) ತಪಸ್ಸಿನಲ್ಲಿರುತ್ತಿದ್ದನು. (ತಥಾಚ ಆಗ ಬಾಲಕನಾದ ಸಾಲ್ವನು ಸಮೀಪದಲ್ಲಿಲ್ಲದಿರುವುದರಿಂದಲೇ ಬ್ರಹ್ಮದತ್ತನನ್ನು ಭೀಷ್ಮಾಚಾರ್ಯರು ಸೋಲಿಸಿರುವರು.) ॥ ೨೧೬ ॥

ಮೂ ॥ ಸ ಚಾದ್ಯ ತಸ್ಮಾತ್ತಪಸೋ ನಿವೃತ್ತೋ
ಜರಾಸುತಸ್ಯಾನುಮತೇ ಸ್ಥಿತೋ ಹಿ ।
ಅನನ್ಯವಧ್ಯೋ ಭವತಾದ್ಯ ವಧ್ಯಃ
ಸ ಪ್ರಾಪಣೀಯಶ್ಚ ತಮುಸ್ಯತೋಽಂಧೇ (ಥೋಽಗ್ರೇ) ॥ ೨೧೭ ॥

ಅ ॥ ಆ ಸಾಲ್ವನಾದರೂ ಈಗ (ಆ ಸೌಭವಿಮಾನಪ್ರಾಪ್ತಿಗಾಗಿ ಮಾಡಿದ) ತಪಸ್ಸಿನದೆಸೆಯಿಂದ ಹಿಂದೆ ತಿರುಗಿದವನಾಗಿ (ಅಂದರೆ ತಪಸ್ಸಿನಿಂದ ಸಂತುಷ್ಟನಾದ ರುದ್ರನಿಂದ ವಿಮಾನವನ್ನು ಹೊಂದಿ ತಿರುಗಿ ಬಂದವನಾಗಿ) ಜರಾಸಂಧನ ಅನುಮತದಲ್ಲಿಯೇ ಇರುತ್ತಾನೆ (ಅಂದರೆ ಜರಾಸಂಧನಿಗೆ ಅನುಕೂಲನಾಗಿಯೇ ಇರುತ್ತಾನೆ.) ಆ ಸಾಲ್ವನು ಯಾವಕಾರಣದಿಂದ ನೀನು ಹೊರತು ಬೇರೆ ಯಾರಿಂದಲೂ ಕೊಲ್ಲಿಸಿಕೊಳ್ಳಲ್ಪಡಲಿಕ್ಕೆ ಅಶಕ್ಯನೋ (ಅದಕಾರಣ) ನಿನ್ನಿಂದಲೇ ಈಗ (ಕೃಷ್ಣಾವತಾರದಲ್ಲಿ) ಸಂಹರಿಸಿಕೊಳ್ಳಲ್ಪಡಲಿಕ್ಕೆ ಅರ್ಹನು. ಆಮೇಲೆ ಆ ಸಾಲ್ವನು ಕ್ರೂರವಾದ ಅಂಧಂತಮಸ್ಸಿನಲ್ಲಿ ಬೀಳಿಸಿಕೊಳ್ಳಲ್ಪಡಲಿಕ್ಕೆ ಅರ್ಹನೂ ಆಗಿರುತ್ತಾನೆ. ॥ ೨೧೭ ॥

ಮೂ ॥ ಯೋ ಬಾಣಮಾವಿಶ್ಯ ಮಹಾಸುರೋಽಭೂತ್
ಸ್ಥಿತಃ ಸನಾಮ್ನಾ ಪ್ರಥಿತೋಽಪಿ ಬಾಣಃ ।
ಸ ಕೀಚಕೋ ನಾಮ ಬಭೂವ ರುದ್ರ-
ವರಾದವಧ್ಯಃ ಸ ತವಃ ಪ್ರವೇಶ್ಯಃ ॥ ೨೧೮ ॥

ಅ ॥ ಯಾವಾತನು ಕರ್ಮದೇವತೆಯಾದ ಬಲಿಯ ಪುತ್ರನಾದ ಬಾಣಾಖ್ಯ ದೇವತೆಯನ್ನು ಪ್ರವೇಶವಾಡಿ, ಸನಾಮ್ನಾ=ಸಮಾನ ನಾಮದಿಂದ (ಅಂದರೆ ಬಾಣನೆನ್ನುವ ಹೆಸರಿನಿಂದಲೇ) ಪ್ರಸಿದ್ಧನಾದ ಮಹಾಸುರನು ಇರುತ್ತಿದ್ದನೋ, ಆ ಅಸುರಾತ್ಮಕನಾದ (ಬಾಣನೇ ಕೀಚಕನೆಂದು ಪ್ರಸಿದ್ಧನಾದನು, ಆತನು ರುದ್ರನ ವರದ್ದೆಸೆಯಿಂದ (ಯಾರಿಂದಲೂ) ಕೊಲ್ಲಿಸಿಕೊಳ್ಳಲ್ಪಡಲಿಕ್ಕೆ ಅಶಕ್ಯನಾಗಿರುನ್ನಾನೆ. ಆತನು ಅಂಧಂತಮಸ್ಸಿನಲ್ಲಿ ಬೀಳಿಸಲ್ಪಡಲಿಕ್ಕೆ ಅರ್ಹನಾಗಿರುತ್ತಾನೆ. ॥ ೨೧೮ ॥

ತವಂಗೆ ಅಭಿಪ್ರೇತವಾದುದನ್ನು ಹೇಳಿ ಉಪಸಂಹಾರ ಮಾಡುತ್ತಾರೆ—

ಮೂ ॥ ಅತಸ್ತ್ವಯಾ ಭುವ್ಯವತೀರ್ಯ ದೇವ-
ಕಾರ್ಯಾಣಿ ಕಾರ್ಯಾಣ್ಯಖಿಲಾನಿ ದೇವ ।
ತ್ವಮೇವ ದೇವೇಶ ಗತಿಃ ಸುರಾಣಾಂ
ಬ್ರಹ್ಮೇಶಶಕ್ರೇಂದುಯಮಾದಿಕಾನಾಂ ॥ ೨೧೯ ॥

ಅ ॥ ಕ್ರೀಡಾದಿಗುಣವಿಶಿಷ್ಟನಾದ ಶ್ರೀಹರಿಯೇ, ಆದಕಾರಣ ಭೂಲೋಕದಲ್ಲಿ ಅವತಾರವಾಡಿ ದೇವತೆಗಳಿಗೆ ಮಾಡಲಿಕ್ಕೆ ಯೋಗ್ಯಗಳಾದ ಎಲ್ಲಾ ಕರ್ಮಗಳೂ ನಿನ್ನಿಂದಲೇ ಮಾಡಲ್ಪಡಬೇಕು. (ನಾನೇ ಏತಕ್ಕೆ ಮಾಡಬೇಕೆಂದರೆ,) ಸರ್ವ ದೇವತೆಗಳಿಗೂ ನಿಯಾಮಕನಾದ ಶ್ರೀಹರಿಯೇ ನೀನೇ ಬ್ರಹ್ಮ, ರುದ್ರ, ದೇವೇಂದ್ರ, ಚಂದ್ರ, ಯಮ ಮೊದಲಾದ ದೇವತೆಗಳಿಗೆ ಪ್ರಾಪ್ಯನು. (ಮಂತ್ರೊಬ್ಬನಲ್ಲ) ॥ ೨೧೯ ॥

ದೇವೇಶ ಎಂದು ಹೇಳಿದ್ದನ್ನೇ ವಿವರಿಸುತ್ತಾರೆ—

ಮೂ ॥ ತ್ವಮೇವ ನಿತ್ಯೋದಿತಪೂರ್ಣಶಕ್ತಿ-
ಸ್ತ್ವಮೇವ ನಿತ್ಯೋದಿತಪೂರ್ಣಚಿದ್ಘನಃ ।
ತ್ವಮೇವ ನಿತ್ಯೋದಿತಪೂರ್ಣಸತ್ಸುಖ-
ಸ್ತ್ವಾದೃಙ್ನ ಕಶ್ಚಿತ್ಕುತ ಏವ ತೇಽಧಿಕಃ ॥ ೨೨೦ ॥

ಅ ॥ ನೀನೇ ಸರ್ವದಾ ಅಭಿವ್ಯಕ್ತಗಳಾದ ಪರಿಪೂರ್ಣಗಳಾದ ಶಕ್ತಿಗಳುಳ್ಳವನು. ನೀನೇ ನಿತ್ಯದಲ್ಲಿಯೂ ಅಭಿವ್ಯಕ್ತವಾದ ಪೂರ್ಣವಾದ ಜ್ಞಾನದಿಂದ ನಿಬಿಡನು. ನೀನೇ ನಿತ್ಯದಲ್ಲಿಯೂ ಅಭಿವ್ಯಕ್ತವಾದ ಪೂರ್ಣವಾದ ದುಃಖಾಸ್ಪೃಷ್ಟವಾದ ಆನಂದವುಳ್ಳವನು ನಿನಗೆ ಸದೃಶನಾದವನು ಯಾವನೊಬ್ಬ ಪುರುಷನೂ ಇಲ್ಲ. ನಿನ್ನಿಂದ ಉತ್ತಮನು ಹೇಗೆ ತಾನೇ ಇದ್ದಾನು? ಇಲ್ಲವೇ ಇಲ್ಲ. ॥ ೨೨೦ ॥

ಮೂ ॥ ಇತೀರಿತೋ ದೇವವರೈರುದಾರ-
ಗುಣಾರ್ಣವೋಽಕ್ಷೋಭ್ಯತಮಾಮೃತಾಕೃತಿಃ ।
ಉತ್ಥಾಯ ತಸ್ಮಾತ್ ಪ್ರಯಯಾವನಂತ-
ಸೋಮಾರ್ಕಕಾಂತಿದ್ಯುತಿರನ್ವಿತೋಽಮರೈಃ ॥ ೨೨೧ ॥

ಅ ॥ ಈ ಪ್ರಕಾರ ದೇವಶ್ರೇಷ್ಠರಿಂದ ಹೇಳಿಸಿಕೊಳ್ಳಲ್ಪಟ್ಟವನು, ಉತ್ಕೃಷ್ಟಗಳಾದ ಜ್ಞಾನಾನಂದಾದಿ ಗುಣಗಳಿಂದ ಸಮುದ್ರದಂತಿರುವವನು, ಯಾರಿಂದಲೂ ಸರ್ವಥಾ ಕಳವಳಪಡಿಸಲಿಕ್ಕೆ ಅಶಕ್ಯವಾದ ಸರ್ವಥಾ ಮೃತಿರಹಿತವಾದ ಆಕಾರವುಳ್ಳವನು, ಅಪರಿಮಿತರಾದ ಚಂದ್ರರು ಸೂರ್ಯರೂ ಇವರ ಕಾಂತಿ (ಶೋಭೆ) ಯೂ ಪ್ರಕಾಶವೂ ಇವುಗಳುಳ್ಳವನು, ಇಂತಹ ಶ್ರೀಹರಿಯು ಶೇಷನ ಶರೀರದ್ದೆಸೆಯಿಂದ ಎದ್ದು ದೇವತೆಗಳಿಂದ ಕೂಡಿದವನಾಗಿ (ಮೇರು ಪರ್ವತಕ್ಕೆ) ಹೋದನು.

ವಿಶೇಷಾಂಶ—ಕಾಂತಿ ದ್ಯುತಿ ಪದಗಳು ಪರ್ಯಾಯಗಳಾಗಿದ್ದಾಗ್ಯೂ ಚಂದ್ರನಲ್ಲಿರುವುದು ಕಾಂತಿಯು. (ಶೋಭೆಯು) ಸೂರ್ಯನಲ್ಲಿರುವುದು ದ್ಯುತಿಯು. (ಪ್ರತಾಪವು) ಹೀಗೆ ಅವಾಂತರ ವಿಶೇಷಗಳನ್ನು ಇಟ್ಟುಕೊಂಡು ಸಹ ಪ್ರಯೋಗವು. ॥ ೨೨೧ ॥

ಮೂ ॥ ಸ ಮೇರುಮಾಪ್ಯಾಹ ಚತುರ್ಮುಖಂ ಪ್ರಭು-
ರ್ಯತ್ರ ತ್ವಯೋಕ್ತೋಽಸ್ಮಿ ಹಿ ತತ್ರ ಸರ್ವಥಾ ।
ಪ್ರಾದುರ್ಭವಿಷ್ಯೇ ಭವತೋ ಹಿ ಭಕ್ತ್ಯಾ
ವಶಸ್ತ (ಸ್ತ್ವಿ) ವಾಹಂ ಸ್ವವಶೋಽಪಿ ಚೇಚ್ಛಯಾ ॥ ೨೨೨ ॥

ಅ ॥ ಸರ್ವಸದುರ್ಥನಾದ ಆ ಶ್ರೀಪರಮಾತ್ಮನು ಮೇರುಪರ್ವತವನ್ನು ಹೊಂದಿ ಚತುರ್ಮುಖ ಬ್ರಹ್ಮನನ್ನು ಕುರಿತು ಹೇಳಿದನು. ಯಾವ ಕುಲದಲ್ಲಿ (ಅವತಾರವನ್ನು ಮಾಡು ಎಂದು) ನಿನ್ನಿಂದ ಹೇಳಿಸಿಕೊಳ್ಳಲ್ಪಡುವೆನೋ ಅಲ್ಲಿ ಸರ್ವಥಾ ಅವತಾರವನ್ನು ಮಾಡುವೆನು. ಹಿ = ಜನ್ಮಾ ಭಾವವು ಪ್ರಸಿದ್ಧವು. ನಾನು ನನ್ನ ವಶವೇ ಆದವನಾದಾಗ್ಯೂ (ಅಂದರೆ ಸ್ವತಂತ್ರನೇ ಆದವನಾದಾಗ್ಯೂ) ತು = ವಿಶೇಷಾಕಾರವಾಗಿ, ನಿನ್ನ ಭಕ್ತಿಯಿಂದಲೂ (ನನ್ನ) ಇಚ್ಛೆಯಿಂದಲೂ ನಿನ್ನ ವಶನಂತೆ ಇರುವೆನು. (ಅಂದರೆ ನಿನ್ನ ಅಧೀನದಲ್ಲಿದ್ದವನಂತೆ ತೋರಿಸಿಕೊಳ್ಳುವೆನು.)

ವಿಶೇಷಾಂಶ—(1) ಹಿ ಶಬ್ದದಿಂದ 'ಅಹಂ ಭಕ್ತಪರಾಧೀನೋ ಹ್ಯಸ್ವತಂತ್ರ ಇವ ದ್ವಿಜ । ವಶೀಕುರ್ವಂತಿ ಮಾಂ ಭಕ್ತ್ಯಾ ಸತ್‌ಸ್ತ್ರಿಯಃ ಸತ್ಪತಿಂ ಯಥಾ ॥ ಎನ್ನುವ ಪ್ರಮಾಣ ಪ್ರಸಿದ್ಧಿಯನ್ನು ಸೂಚಿಸಿದರು. ಬ್ರಹ್ಮಾ ತದುಪಧಾಯಾರ್ಥ ಸಹ ದೇವೈಸ್ತಯಾ ಸಹ । ಜಗಾಮ ಸತ್ರಿನಯನಃ ತೀರಂ ಕ್ಷೀರಪಯೋನಿಧೇಃ=ಬ್ರಹ್ಮನು ಅದನ್ನು ನಿಶ್ಚಯಿಸಿಕೊಂಡ ದೇವತೆಗಳಿಂದಲೂ ಭೂದೇವಿಯಿಂದಲೂ ರುದ್ರನಿಂದಲೂ ಕೂಡಿಕೊಂಡು ಕ್ಷೀರ ಸಮುದ್ರದ ತೀರಕ್ಕೆ ಹೋದನು ಎಂದು ಭಾಗವತದಲ್ಲಿ ಹೇಳಿರುವರು. (2) ಸತ್ಯಲೋಕದಲ್ಲಿರತಕ್ಕ ಬ್ರಹ್ಮನು ಶ್ರೀವಿಷ್ಣುವಿಗೆ ಸರ್ವೋತ್ತಮತ್ವವನ್ನು ತೋರಿಸುವುದಕ್ಕಾಗಿಯೂ ತನಗೆ ಆತನಲ್ಲಿ ನಿರವಧಿಕವಾದ ಭಕ್ತಿಯನ್ನು ಪ್ರಕಟೀಕರಿಸುವುದಕ್ಕಾಗಿಯೂ ದೇವತೆಗಳಿಂದ ಕೂಡಿಕೊಂಡೇ ಮೊದಲು ಶ್ವೇತದ್ವೀಪಕ್ಕೆ ಹೋಗಿದ್ದನು. ಶ್ವೇತದ್ವೀಪದಲ್ಲಿಯೂ ಶ್ರೀಹರಿಯು ಸರ್ವರಿಗೆ ಅದೃಶ್ಯನಾಗಿಯೇ ಬ್ರಹ್ಮನಿಗೆ ಮಾತ್ರ ತನ್ನ ಮಾತನ್ನು ಕೇಳಿಸಿದನು. ಆಮೇಲೆ ಶ್ರೀಪರಿಯು ಸತ್ಯಲೋಕದಿಂದ ಬಂದಿರತಕ್ಕ ಚತುರ್ಮುಖಿ ಬ್ರಹ್ಮನಿಂದಲೂ ದೇವತೆಗಳಿಂದಲೂ ಕೂಡಿಕೊಂಡೇ ರಾಜನು ಕೋಶ ರಕ್ಷಕನನ್ನೆಂಬಂತೆ ಭೂಮಿಯನ್ನು ರಕ್ಷಿಸುವುದಕ್ಕಾಗಿ ಮೇರು ಪರ್ವತದಲ್ಲಿರತಕ್ಕ ಚತುರ್ಮುಖಿ ಬ್ರಹ್ಮನನ್ನೂ ಕೂಡ ಕೃಪೆಯಿಂದ ಅನುಕೂಲೀಕರಿಸುವುದಕ್ಕಾಗಿ ಮೇರುಪರ್ವತದಲ್ಲಿರತಕ್ಕ ಬ್ರಹ್ಮನಿಂದ ಕಾಶ್ಯಪನಿಗೆ ಕೊಟ್ಟ ಶಾಪವನ್ನೂ ಆ ಬ್ರಹ್ಮನ ಮುಖದಿಂದಲೇ ಕೇಳಿ ಅದನ್ನು ಮನ್ನಿಸುವುದಕ್ಕಾಗಿಯೂ 'ವಸುಂಧರಾತಳೋದ್ಭವೋನ್ಮುಖಂ ದಿತೇಃ ಸುತೈಃ' ಎಂದು ಮುಂದಕ್ಕೆ ಹೇಳುವುದರಿಂದ ಅಸುರರಿಗೆ ಅಗಮ್ಯವಾದ ಶ್ವೇತದ್ವೀಪವನ್ನು ಬಿಟ್ಟು ಅಸುರರಿಗೆ ಹೋಗಲಿಕ್ಕೆ ಶಕ್ಯವಾದ ಮೇರು ಪರ್ವತವನ್ನು ಹೊಂದಿ "ದೇವತೆಗಳು ಅವತಾರ ಮಾಡಲಿಕ್ಕೆ ಉದ್ಯೋಗ ಮಾಡುತ್ತಾ ಇದ್ದಾರೆ ಎನ್ನುವುದನ್ನು ಅಸುರರಿಗೂ ಕೇಳಿಸುವುದಕ್ಕಾಗಿಯೂ ಮೇರು ಪರ್ವತಕ್ಕೆ ಬಂದು ದೃಶ್ಯನಾಗಿಯೇ ಆ ಬ್ರಹ್ಮನ ಮಾತಿನಿಂದಲೇ ಸರ್ವ ಕಾರ್ಯವನ್ನು ಕೂಡ ಮಾಡಿದನು. ಎಂದು ತಿಳಿಯತಕ್ಕದ್ದು. ಆದಕಾರಣ ಭಾಗವತ ಹರಿವಂಶೋಕ್ತಿಗಳಿಗೆ ವಿರೋಧವಿಲ್ಲ. ॥೨೨೨॥

ಮೂ ॥ ಬ್ರಹ್ಮಾ ಪ್ರಣಮ್ಯಾಹ ತಮಾತ್ಮಕಾರಣಂ
ಪ್ರಾದಾಂ ಪುರಾಹಂ ವರುಣಾಯ ಗಾಃ ಶುಭಾಃ ।
ಜಹಾರ ತಾಸ್ತಸ್ಯ ಪಿತಾಮೃತಸ್ರವಾಃ
ಸ ಕಶ್ಯಪೋ ದ್ರಾಕ್ಸಹಸಾತಿಗರ್ವಿತಃ ॥ ೨೨೩ ॥

ಅ ॥ ಚತುರ್ಮುಖಿ ಬ್ರಹ್ಮನು, ತನ್ನ ಉತ್ಪತ್ತಿಗೆ ಕಾರಣನಾದ ಶ್ರೀಹರಿಯನ್ನು ನಮಸ್ಕರಿಸಿ ಹೇಳಿದನು. ಮೊದಲು ನಾನು ವರುಣನಿಗೋಸ್ಕರ ಶೋಭನಗಳಾದ ಗೋವುಗಳನ್ನು ಕೊಟ್ಟಿರುವೆನು. ಆ ವರುಣನ ತಂದೆಯಾದ, ಸಃ=ದೇವತೆಗಳಿಗೆ ತಂದೆಯೆಂದು ಪ್ರಸಿದ್ಧನಾದ ಕಶ್ಯಪ ಋಷಿಯು ಪಿತೃತ್ವ ಬಲದಿಂದ ಅತಿ ಗರ್ವವುಳ್ಳವನಾಗಿ ಶೀಘ್ರದಲ್ಲಿ ಅಮೃತವನ್ನು ಕರೆಯುವ ಆ (ನಾನು ಕೊಟ್ಟ) ಗೋವುಗಳನ್ನು ಅಪಹರಿಸಿದನು. ॥ ೨೨೩ ॥

ಮೂ ॥ ಮಾತ್ರಾ ಕ್ಷ್ವದಿತ್ಯಾ ಚ ತಥಾ ಸುರಭ್ಯಾ
ಪ್ರಚೋದಿತೇನೈವ ಹೃತಾಸು ತಾಸು ।
ಶ್ರುತ್ವಾ ಜಲೇಶಾತ್ ಸ ಮಯಾಭಿ(ತು) ಶಪ್ತಃ
ಕ್ಷತ್ರೇಷು ಗೋಜೀವನಕೋ ಭವೇತಿ ॥ ೨೨೪ ॥

ಅ ॥ ವರುಣನ ತಾಯಿಯಾದ ಅದಿತಿಯಿಂದಲೂ ಹಾಗೆಯೇ ತಾಯಿಯಾದ ಸುರಭಿಯಿಂದಲೂ ಪ್ರೇರಿಸಿಕೊಳ್ಳಲ್ಪಟ್ಟವನೇ ಆದ ಕಶ್ಯಪನಿಂದಲೇ ಆ ಗೋವುಗಳು ಅಪಹರಿಸಿಕೊಳ್ಳಲ್ಪಡುತ್ತಿರಲು ಜಲಾಧಿಪತಿಯಾದ ವರುಣನದೆಸೆಯಿಂದ (ಕಶ್ಯಪನ ಕರ್ಮವನ್ನು) ಕೇಳಿ ನನ್ನಿಂದ ಆ ಕಶ್ಯಪ ಋಷಿಯು ಕ್ಷತ್ರಿಯರಲ್ಲಿ ಗೋವುಗಳಿಂದ ಜೀವನೋಪಾಯವುಳ್ಳವನಾಗು ಎಂದು ಶಪಿಸಲ್ಪಟ್ಟನು.

ವಿಶೇಷಾಂಶ—ಗೋರಸ, ಗೋಮಯ, ಗೋವು ಎತ್ತು ಇವುಗಳನ್ನು ಮಾರಾಟಮಾಡಿ ಜೀವನೋಪಾಯವುಳ್ಳವನಾಗು ಕ್ಷತ್ರಿಯರಲ್ಲಿ ಹುಟ್ಟಿದವರಿಗೆ ಗೋಜೀವನವು ನೀಚವೃತ್ತಿಯು. ಆದಕಾರಣ ಗೋವುಗಳಿಂದ ಜೀವಿಸಿಕೊಂಡು ಇರು ಎಂದು ನಾನು ಶಾಪ ಕೊಟ್ಟೆರುವೆನು, ಎಂದು ಬ್ರಹ್ಮನು ಶ್ರೀಹರಿಯ ಹತ್ತಿರ ಹೇಳಿದನು. ॥ ೨೨೪ ॥

ಮೂ ॥ ಶೂರಾತ್ ಸ ಜಾತೋ ಬಹುಗೋಧನಾಢ್ಯೋ
ಭೂವಸೌ ಯುವಾಹುರ್ವಸುದೇವ ಇಚ್ಯಪಿ ।
ತಸ್ಯೈವ ಭಾರ್ಯಾ ತ್ವದಿತಿಶ್ಚ ದೇವಕೀ
ಬಭೂವ ಚಾನ್ಯಾ ಸುರಭಿಶ್ಚ ರೋಹಿಣೀ ॥ ೨೨೫ ॥

ಅ ॥ ಆ ಕಶ್ಯಪ ಋಷಿಯು ಶೂರನಾಮಕ ಯಾದವನದೆಸೆಯಿಂದ ಬಹಳ ಗೋರೂಪ ದ್ರವ್ಯಗಳಿಂದ ಶ್ರೇಷ್ಠ (ಸಂಪನ್ನ)ನಾಗಿ ಹುಟ್ಟಿರುವನು. ಭೂವಿಯಲ್ಲಿ ವಸುದೇವ=ಗೋಧನಗಳಿಗೆ ಸ್ವಾಮಿಯಾದುದರಿಂದಲೇ ವಸುದೇವನೆಂತೆಂದು ಯಾವ ಶೂರ ಪುತ್ರನನ್ನು (ಜನರು) ಹೇಳುತ್ತಾರೋ, ಅಂತಹ ಕಶ್ಯಪನಿಗೇನೇ ಹೆಂಡತಿಯಾದ ಅದಿತಿಯಾದರೂ ದೇವಕಿಯಾದಳು, ಮತ್ತೊಬ್ಬಳು ಎರಡನೇ ಹೆಂಡತಿಯಾದ ಸುರಭಿಯಾದರೂ ರೋಹಿಣಿಯಾದಳು. ॥ ೨೨೫ ॥

ಮೂ ॥ ತತ್ತ್ವಂ ಭವಸ್ವಾಶು ಚ ದೇವಕೀಸುತ-
ಸ್ತಥೈವ ಯೋ ದ್ರೋಣನಾಮಾ ವಸುಃ ಸಃ ।
ಸ್ವಭಾರ್ಯಯಾ ಧರಯಾ ತ್ವತ್ಪಿತೃತ್ವಂ
ಪ್ರಾಪ್ತುಂ ತಪಸ್ತೇಪ ಉದಾರಮಾನಸಃ ॥ ೨೨೬ ॥

ಅ ॥ ಆದಕಾರಣ ನೀನು ಶೀಘ್ರದಲ್ಲಿ ದೇವಕೀ ಪುತ್ರನು ಆಗು. ತಥೈವ=ಹೇಗೆ ದೇವಕೀ ಪುತ್ರತ್ವದಲ್ಲಿ ಕಾರಣವಿದೆಯೋ ಹಾಗೆಯೇ ಬೇರೆಯೂ ಕಾರಣವಿದೆ. (ಮೊದಲು) ದ್ರೋಣ ನಾಮಕನಾದ ಯಾವ ವಸುವು ಇದ್ದಾನೋ, ಆತನು ತನ್ನ ಹೆಂಡತಿಯಾದ ಧರಾದೇವಿಯಿಂದ (ಕೂಡಿಕೊಂಡು) ಅತ್ಯುತ್ತಮವಾದ ಅಂತಃಕರಣವುಳ್ಳವನಾಗಿ ನಿನ್ನ ಪಿತೃತ್ವವನ್ನು ಹೊಂದುವುದಕ್ಕಾಗಿ (ನನ್ನ ಸಂಬಂಧಿಯಾದ) ತಪಸ್ಸನ್ನು ಮಾಡಿರುವನು, ॥ ೨೨೬ ॥

ಮೂ ॥ ತಸ್ಮೈ ವರಃ ಸ ಮಯೇಃ ಸನ್ನಿಸೃಷ್ಟಕೆ
ಸ ಚಾಸ ನಂದಾಖ್ಯ ಉತಾಸ್ಯ ಭಾರ್ಯಾ ।
ನಾಮ್ನಾ ಯಶೋದಾ ಸ ಚ ಶೂರತಾತ-
ಸುತಸ್ಯ ವೈಶ್ಯಾಪ್ರಭವೋಽಥ ಗೋಪಃ ॥ ೨೨೭ ॥

ಅ ॥ ಆ ದ್ರೋಣನಾಮಕ ವಸುವಿಗೋಸ್ಕರ, ನನ್ನಿಂದ ಆ (ನಿನ್ನ ಪಿತೃತ್ವಪ್ರಾಪ್ತಿ ರೂಪವಾದ) ವರವು ಕೊಡಲ್ಪಟ್ಟಿದೆ. ಆ ದ್ರೋಣನಾಮಕ ವಸುವು, ನಂದಗೋಪನೆಂದೂ ಹೆಸರುಳ್ಳವನಾಗಿ ಹುಟ್ಟಿರುವನು. ನಂದಗೋಪನು ಹುಟ್ಟಿದ ಮೇಲೆ, ಈ ದ್ರೋಣಾಖ್ಯ ವಸುವಿನ ಹೆಂಡತಿಯಾದ ಧರಾದೇವಿಯು ಹೆಸರಿನಿಂದ ಯಶೋದಾ ಎನ್ನುವವಳು. ಆದಳು.(ಅಂದರೆ ಹುಟ್ಟಿದಳು) ಆ ನಂದನಾದರೂ ಶೂರನ ತಂದೆಯು ವಂಗನಾದ ಶೂರರಾಜನ ಸಕಾಶದಿಂದ, ವಿವಾಹ ಧರ್ಮದಿಂದ ಸ್ವೀಕರಿಸಲ್ಪಟ್ಟ ವೈಶ್ಯ ಸ್ತ್ರೀಯಲ್ಲಿ ಹುಟ್ಟಿದವನು. ಅಥ=ವೈಶ್ಯನ ಪುತ್ರನಾದ ಪ್ರಯುಕ್ತವೇ, ಗೋಪಾಲಕನಾದನು. ॥ ೨೨೭ ॥

ತತ್ತ್ವಂ ಭವಸ್ವಾಶು ಚ ದೇವಕೀಸುತಃ ಎಂದು ಹೇಳಿದ್ದಕ್ಕೆ ಕಾರಣವನ್ನು ವಿಶದೀಕರಿಸುತ್ತಾ ವಸುದೇವ, ನಂದಗೋಪ ಇಬ್ಬರಿಗೂ ಕೃಷ್ಣ ಪಿತೃತ್ವವನ್ನು ಕೂಡಿಸುತ್ತಾರೆ—

ಮೂ ॥ ತೌ ದೇವಕೀವಸುದೇವೌ ಚ ತೇಪತು-
ಸ್ತಪಸ್ತ್ವದೀಯಂ ಸುತಮಿಚ್ಛಮಾನೌ ।
ತ್ವಾಮೇವ ತಸ್ಮಾತ್ ಪ್ರಥಮಂ ಪ್ರದರ್ಶ್ಯ
ತತ್ರ ಸ್ವರೂಪಂ ಹಿ ತತೋ ವ್ರಜಂ ವ್ರಜ ॥ ೨೨೮ ॥

ಅ ॥ ಆ ದೇವಕೀ ವಸುದೇವರು ನಿನ್ನನ್ನೇ ವಂಗನನ್ನಾಗಿ ಇಚ್ಛಿಸುವವರಾಗಿ ನಿನ್ನ ಸಂಬಂಧಿಯಾದ ತಪಸ್ಸನ್ನು ಮಾಡಿರುವರು. ಆದುದರಿಂದ ನೀನು ಪ್ರಥಮದಲ್ಲಿ ಆ ದೇವಕಿಯಲ್ಲಿ ಸ್ವರೂಪವನ್ನು ತೋರಿಸಿ ಪ್ರಾದುರ್ಭಾವಾನಂತರದಲ್ಲಿ ನಂದಗೋಪನ ವನಿತೆಯನ್ನು ಕುರಿತು ಹೋಗು.

ವಿಶೇಷಾಂಶ—ತನ್ನ ರೂಪವನ್ನು ತೋರಿಸುವುದೇ ಶ್ರೀಹರಿಗೆ ಉತ್ಪತ್ತಿಯು, ಬೇರೆಯಲ್ಲವೆಂದೂ ಹಿ ಶಬ್ದದಿಂದ ಸೂಚಿಸಿರುವರು. ॥ ೨೨೮ ॥

ಮೂ ॥ ಇತೀರಿತಃ (ತೇ) ಸೋಽಬ್ಜಭವೇನ ಕೇಶವ-
ಸ್ತಥೇತಿ ಚೋಕ್ತ್ವಾ ಪುನರಾಹ ದೇವತಾಃ ।
ಸರ್ವೇ ಭವಂತೋ ಭವತಾಪಿ ಮಾನುಷೇ
ಕಾರ್ಯಾನುಸಾರೇಣ ಯಥಾನುರೂಪತಃ ॥ ೨೨೯ ॥

ಅ॥ ಈ ಪ್ರಕಾರವಾಗಿ ಚತುರ್ಮುಖಿ ಬ್ರಹ್ಮನಿಂದ ಹೇಳಿಸಿಕೊಳ್ಳಲ್ಪಟ್ಟ ಆ ಶ್ರೀಪರಮಾತ್ಮನು ಹಾಗೆಯೇ ಆಗಲಿ ಎಂದೂ ಹೇಳಿ ಪುನಃ ನೀವು ಎಲ್ಲರೂ ಶೀಘ್ರದಲ್ಲಿ ಮನುಷ್ಯ ಲೋಕದಲ್ಲಿ ತಂತಮ್ಮ ಕಾರ್ಯಾನುರೂಪವಾಗಿ ಅಥವಾ ಬಲಕಾರ್ಯಾನುಸಾರವಾಗಿ ನಾಲ್ಕು ವರ್ಣಗಳಲ್ಲಿ ಯೋಗ್ಯತಾನುಸಾರವಾಗಿ (ಅಂದರೆ ಯಾರು ಎಲ್ಲಿ ಹುಟ್ಟಲಿಕ್ಕೆ ಯೋಗ್ಯರೋ ಹಾಗೆಯೇ) ಆಗಬೇಕು, (ಅಂದರೆ ಹುಟ್ಟಬೇಕು.) ಎಂದು ದೇವತೆಗಳನ್ನು ಕುರಿತು ಹೇಳಿದನು.

ವಿಶೇಷಾಂಶ—(1) ಭಾಗವತ ಹರಿವಂಶಾದಿ ಗ್ರಂಥಗಳಲ್ಲಿ ಇವನು ಇವನ ದೆಸೆಯಿಂದ ಹುಟ್ಟಿದವನು, ಇವನು ಇವನ ದೆಸೆಯಿಂದ ಹುಟ್ಟಿದವನು ಎಂದೂ ಹೇಗೆ ನಿರೂಪಿಸಿರುವರೋ, ಅದಕ್ಕೆ ಅನುಕೂಲವಾದ ರೂಪದ್ದೆಸೆಯಿಂದ ಎಂದರ್ಥವು. ಅಥವಾ ಮನುಷ್ಯರಲ್ಲಿ ಅನುಕೂಲವಾದ ರೂಪದ್ದೆಸೆಯಿಂದ ಎಂದೂ ಅರ್ಥವು. ಹೀಗೆ ಹೇಳುವಾಗ ಯಾವ ಬೃಹಸ್ಪತ್ಯಾದಿಗಳಿಗೆ

(1) ಇದಕ್ಕೆ ವಿರುದ್ಧವಾಗಿ ಉತ್ಪತ್ತಿ (ಹುಟ್ಟು) ರಾಗಿ ಹುಟ್ಟಿದ್ದಾಳೆ.
ಓ 12-101

ಬ್ರಾಹ್ಮಣರಲ್ಲಿ ಉತ್ಪತ್ತಿಯಂ ಹೇಳಲ್ಪಟ್ಟಿದೋ, ಆ ಬೃಹಸ್ಪತ್ಯಾದಿಗಳಂ ಬ್ರಾಹ್ಮಣ ರೂಪದಿಂದ ಹುಟ್ಟಲಿ, ಯಾವ ಧರ್ಮರಾಜಾದಿಗಳಿಗೆ ಕ್ಷತ್ರಿಯರಾಗಿ ಉತ್ಪತ್ತಿಯಂ ಹೇಳಲ್ಪಟ್ಟಿದೋ ಅವರಂ ಕ್ಷತ್ರಿಯರಾಗಿ ಹುಟ್ಟಲಿ. ಯಾರಿಗೆ ಶಾಪಾದಿನಿಮಿತ್ತದಿಂದ ಶೂದ್ರರಾಗಿ ಉತ್ಪತ್ತಿಯಂ ಹೇಳಲ್ಪಟ್ಟಿದೋ, ಅಂತಹ ವಿದುರಾದಿಗಳಂ ಶೂದ್ರರೂಪರಾಗಿ ಹುಟ್ಟಲಿ. ಇತ್ಯಾದಿಗಳಂ ಸೂಚಿತಗಳಾದವು. ॥ ೨೨೯ ॥ (1)

ಮೂ ॥ ಅಥಾವತೀರ್ಣಾಃ ಸಕಲಾಶ್ಚ ದೇವತಾ
ಯಥಾಯಥೈವಾಹ ಹರಿಸ್ತಥಾತಥಾ ।
ವಿತ್ತೇಶ್ವರಃ ಪೂರ್ವಮಭೂದ್ಧಿ ಭೌವನಾ-
ದ್ಧರೇಃ ಸುತತ್ವೇಽಪಿ ತದಿಚ್ಛಯಾಸುರಾತ್ ॥ ೨೩೦ ॥

ಅ ॥ ಶ್ರೀಹರಿಯಂ ಆಜ್ಞೆಯಾದ ಮೇಲೆ, ಶ್ರೀಹರಿಯಂ ಹೇಗೆ ಹೇಗೆ ಹೇಳಿರುವನೋ ಹಾಗೆ ಹಾಗೆಯೇ (ಅಂದರೆ ಅದನ್ನು ಅನುಸರಿಸಿಯೇ) ಎಲ್ಲಾ ದೇವತೆಗಳೂ ಅವತಾರ ಮಾಡಿದರಂ. (ಆ ಉತ್ಪತ್ತಿ ಕ್ರಮವನ್ನೇ ವಿವರಿಸುತ್ತಾರೆ) ವರಾಹರೂಪಿಯಾದ ಶ್ರೀಹರಿಯಂ ಪುತ್ರನಾಗಿದ್ದಾಗ್ಯೂ ಅಸುರನೇ ಆದ ಭೂವಿಂಪುತ್ರನಾದ ನರಕಾಸುರನದೆಸೆಯಿಂದ ಧನಾಧಿಪತಿಯಾದ ಕುಬೇರನಂ ಶ್ರೀಹರಿಯಂ ಇಚ್ಛೆಯಿಂದಲೇ ಶ್ರೀಹರಿಯಂ ಆಜ್ಞೆಯಾದ ಮೇಲೆ ಹುಟ್ಟಿದ ದೇವತೆಗಳದೆಸೆಯಿಂದ ಮೊದಲೇ ಹುಟ್ಟಿರುವನು. ಹಿ=ಹಾಗೆ ಪ್ರಮಾಣವು ಪ್ರಸಿದ್ಧವಾಗಿದೆ. ಅಥವಾ ಅಸುರನಿಂದ ಕುಬೇರನಂ ಹುಟ್ಟಲಿಕ್ಕೆ ಪ್ರಯೋಜನವು ಪ್ರಸಿದ್ಧವಾಗಿದೆ.

ವಿಶೇಷಾಂಶ—(1) ಅಸುರನಾದವನಂ ಭೂದೇವಿಯಂಲ್ಲಿ ಶ್ರೀವರಾಹರೂಪಿಯಾದ ಶ್ರೀಹರಿಯಂದೆಸೆಯಿಂದ ಹುಟ್ಟಿದ್ದು ಹೇಗೆಂದರೆ—ಅಸುರನಾದಾಗ್ಯೂ ಶ್ರೀಹರಿಯು ಇಚ್ಛೆಯಿಂದಲೇ ~~ಪುತ್ರತ್ವವನ್ನು ಹೊಂದಿದಮಂ. (2) ಶ್ರೀಹರಿಯು ಪುತ್ರನಿಗೆ ಅಸುರತ್ವವು ನ್ಯಾಯಂಶಃ ನಿಂದಿತವು~~ ಎಂದಂ ಸೂಚಿಸುವುದಕ್ಕಾಗಿ ಅಪಿ ಪದವು. ॥ ೨೩೦ ॥

ಕುಬೇರನಂ ಅಸುರನಿಂದ ಹುಟ್ಟಲಿಕ್ಕೆ ಪ್ರಯೋಜನವನ್ನು ವಿಶದೀಕರಿಸುತ್ತಾರೆ—

ಮೂ ॥ ಪಾಪೇನ ತೇನಾಪಹೃತೋ ಹಿ ಹಸ್ತೀ
ಶಿವಪ್ರದತ್ತಃ ಸುಪ್ರತೀಕಾಭಿಧಾನಃ ।
ತದರ್ಥಮೇವಾಸ್ಯ ಸುತೋಽಭಿಜಾತೋ
ಧನೇಶ್ವರೋ ಭಗದತ್ತಾಭಿಧಾನಃ ॥ ೨೩೧ ॥

ಅ॥ ಪಾಪಸ್ವರೂಪನಾದ ಆ ನರಕಾಸುರನಿಂದ ಶಿವನಿಂದ ಕೊಡಲ್ಪಟ್ಟ ಸುಪ್ರತೀಕವೆಂದುಂ ಹೆಸರುಳ್ಳ (ಕುಬೇರನ) ಆನೆಯಂ ಅಪಹರಿಸಿಕೊಳ್ಳಲ್ಪಟ್ಟಿತು, ಪ್ರಸಿದ್ಧವು, ಆ ಸುಪ್ರತೀಕವೆನ್ನುವ ಆನೆಗೋಸ್ಕರವೇ ಧನಾಧಿಪತಿಯಾದ ಕುಬೇರನಂ ಭಗದತ್ತನೆಂದುಂ ಹೆಸರುಳ್ಳವನಾಗಿ ಈ ನರಕಾಸುರನಿಗೆ ಮಗನಾಗಿ ಹುಟ್ಟಿದನು. ॥ ೨೩೧ ॥

ಮೂ ॥ ಮಹಾಸುರಸ್ಯಾಂಶಯುತಃ ಸ ಏವ
ರುದ್ರಾನೇಶಾದ್ಬಲವಾನಸ್ತವಾಂಶ್ಚ ।

ಶಿಷ್ಯೋ ಽಮಹೇಂದ್ರಸ್ಯ ಹತೇ ಬಭೂವ
ತಾತೇ ಸ್ವಧರ್ಮಾಭಿರತಶ್ಚ ನಿತ್ಯಂ ॥ ೨೩೨ ॥

ಅ॥ ಆ ಭಗದತ್ತನು (ಬಾಷ್ಕಲನೆಂದು ಹೆಸರುಳ್ಳ) ಶ್ರೇಷ್ಠ ಅಸುರನ ಅಂಶದಿಂದ ಕೂಡಿದವನು. ಆತನೇ ರುದ್ರದೇವರ ಆವೇಶ ನಿಮಿತ್ತದಿಂದ ಬಲಿಷ್ಠನು. ದೇವೇಂದ್ರನ ಶಿಷ್ಯನು. (ಆದುದರಿಂದಲೇ) ಅಸ್ತ್ರಜ್ಞನು. ತಂದೆಯಾದ ನರಕಾಸುರನು ಸಂಹರಿಸಿಕೊಳ್ಳಲ್ಪಡುತ್ತಿರಲು ನಿತ್ಯದಲ್ಲಿಯೂ ತಮ್ಮ ಧರ್ಮಗಳಲ್ಲಿ (ಅಂದರೆ ದೇವತೆಗಳ ಅವತಾರಗಳಿಗೆ ಯೋಗ್ಯಗಳಾದ ಧರ್ಮಗಳಲ್ಲಿಯೇ) ಆಸಕ್ತನು ಆದನು. (ಅಂದರೆ ನರಕಾಸುರನ ಸಂಹಾರವಾದ ಮೇಲೆ ಅಸುರಾವೇಶವು ನಷ್ಟವಾಯಿತು.) ॥ ೨೩೨ ॥

ಮೂ ॥ ಅಭೂಚ್ಛಿನಿನಾಮ್ನಿ ಯದುಪ್ರವೀರ-
ಸ್ತಸ್ಯಾತ್ಮಜಃ ಸತ್ಯಕ ಆಸ ತಸ್ಮಾತ್ ।
ಕೃಷ್ಣಃ ಪಕ್ಷ್ಮೋ ಯುಯುಧಾನಾಭಿಧೇಯೋ
ಗರುತ್ಮತೋಽಂಶೇನ ಯುತೋ ಬಭೂವ ॥ ೨೩೩ ॥

ಅ ॥ ಶಿನಿಯೆಂದು ಪ್ರಸಿದ್ಧನಾದ ಯಾದವ ಶ್ರೇಷ್ಠನು ಇರುತ್ತಿದ್ದನು. ಆ ಶಿನಿಗೆ ಸತ್ಯಕ ನೆನ್ನುವ ಮಗನು ಇರುತ್ತಿದ್ದನು. ಆ ಸತ್ಯಕನ ದೆಸೆಯಿಂದ ಕೃಷ್ಣಪಕ್ಷಾಭಿಮಾನಿಯಾದ ದೇವತೆಯಂ ಗರುಡನ ಅಂಶದಿಂದ ಕೂಡಿದವನಾಗಿ ಯುಯುಧಾನನೆಂದು ಹೆಸರುಳ್ಳವನಾಗಿ ಆದನು ॥ ೨೩೩ ॥

ಮೂ ॥ ಯಃ ಸಂವಹೋ ನಾಮ ಮರುತ್ತದಂಶ-
ಶ್ಚಕ್ರಸ್ಯ ವಿಷ್ಣೋಶ್ಚ ಬಭೂವ ತಸ್ಮಿನ್ ।
ಯದುಷ್ವಭೂದ್ಧೃದಿಕೋ ಭೋಜವಂಶೇ
ಸಿತಃ ಪಕ್ಷ್ಮಸ್ಯ ಸುತೋ ಬಭೂವ ॥ ೨೩೪ ॥

ಅ ॥ ಆ ಯುಗಯುಗಾಧಾನನಲ್ಲಿ ಸಂವಹನೆಂದು ಪ್ರಸಿದ್ಧನಾದ ಯಾವ ವಾಯುವೋ, ಆ ಸಂವಹನ ಅಂಶವೂ ಚಕ್ರಾಭಿ (ಸುದರ್ಶನಾಭಿ) ಮಾನಿಯಾದ ಶಾಮನ ಅಂಶವೂ ವಿಷ್ಣುವಿನ ಅಂಶವೂ ಕೂಡ ಇತ್ತು. ಯದುಗಳ ಮಧ್ಯದಲ್ಲಿ ಭೋಜಾಖ್ಯ ವಂಶದಲ್ಲಿ ಹೃದಿಕನೆಂದು ಪ್ರಸಿದ್ಧವಾದವನು ಇರುತ್ತಿದ್ದನು. ಆ ಹೃದಿಕನಿಗೆ ಶುಕ್ಲಪಕ್ಷಾಭಿಮಾನಿಯಾದ ದೇವನು ಮಗನು ಆದನು. ॥ ೨೩೪ ॥

ಮೂ ॥ ಸ ಪಾಂಚಜನ್ಯಾಂಶಯುತೋ ಮರುತ್ತ್ಸ
ತಥಾಂಶಯುಕ್ತಃ ಪ್ರವಹಸ್ಯ ವೀರಃ ।
ನಾಮಾಸ್ಯ ಚಾಭೂತ್ ಕೃತವರ್ಮೇತ್ಯಥಾನ್ಯೇ
ಯೇ ಯಾದವಾಸ್ತೇಽಪಿ ಸುರಾಃ ಸಗೋಪಾಃ ॥ ೨೩೫ ॥

ಅ ॥ ಆ ಹೃದಿಕನ ಮಗನು ಪಾಂಚಜನ್ಯದ (ಶ್ರೀಪರಿಯು ಶಂಖಾಭಿಮಾನಿಯಾದ ಆನಿರುದ್ಧನ) ಅಂಶದಿಂದ ಕೂಡಿದವನು, ಹಾಗೆಯೇ ವಾಯುಗಳ ಮಧ್ಯದಲ್ಲಿ ಪ್ರವಹಾಖ್ಯ ವಾಯು

ವಿನ ಅಂಶದಿಂದ ಕೂಡಿದವನು, ಆರಬ್ಧಾಂತಗಾವಿಯು. ಈ ಹೃದಿಕನ ಮಂಗನಿಗೆ ಕೃತವರ್ಮವೆ ನ್ನುವ ಹೆಸರು ಆಯಿತು. ಮತ್ತು ಗೋಪಾಲಕರಿಂದ ಕೂಡಿರುವ, ಹಿಂದೆ ಹೇಳಿದವರಿಂದ ಇತರರಾದ ಯಾವ ಯಾದವರೋ (ಅಂದರೆ ಗೋಪರು. ಇತರರಾದ ಯಾದವರೂ ಕೂಡ ಯಾರು ಯಾರು ಹುಟ್ಟುವರೋ) ಅವರೂ ಕೂಡ ದೇವತೆಗಳೇ. ॥ ೨೩೫ ॥

ಹುಟ್ಟಿರುವ ದೇವಾದಿಗಳ ವಿಭಾಗವನ್ನು ಹೇಳುತ್ತಾರೆ—

ಮೂ ॥ ಯೇ ಪಾಂಡವಾನಾಮಭವನ್ ಸಹಾಯಾ
ದೇವಾಶ್ಚ ದೇವಾನುಚರಾಃ ಸಮಸ್ತಾಃ ।
ಅನ್ಯೇಽಪಿ (ತು) ಸರ್ವೇ ತ್ವ (ಪ್ಯ) ಸುರಾ ಹಿ ಮಧ್ಯಮಾ
ಯೇ ಮಾನುಷಾಸ್ತೇ ಚಲಬುದ್ಧಿವೃತ್ತಯಃ ॥ ೨೩೬ ॥

ಅ ॥ ಯಾರು ಯಾರು ಪಾಂಡವರಿಗೆ ಸಹಾಯಂಕರು ಆಗಿರುವರೋ ಅವರೆಲ್ಲರೂ ದೇವತೆಗಳ ಅವತಾರಭೂತರು ಮತ್ತು ದೇವತೆಗಳಿಗೆ ಅನುಕೂಲರಾದ ಗಂಧರ್ವಾದಿಗಳು. ಪಾಂಡವರಿಗೆ ಪ್ರತಿಕೂಲರಾದವರು ಯಾರೋ ಅವರೆಲ್ಲರೂ ಅಸುರರು. ಚಂಚಲವಾದ ಬುದ್ಧಿಯುಳ್ಳವರು. (ಅಂದರೆ ಸಂಶಯ ಜ್ಞಾನವುಳ್ಳವರು) ಯಾವ ಮನುಷ್ಯರೋ ಅವರಾದರೂ ಮಧ್ಯಮರು. (ಉದಾಸೀನರು.) ॥ ೨೩೬ ॥

ದೇವಾಸುರ ನಿಶ್ಚಾಯಂಕ ಲಿಂಗವನ್ನು ಹೇಳುತ್ತಾರೆ—

ಮೂ ॥ ಲಿಂಗಂ ಸುರಾಣಾಂ ಹಿ ಪರೈವ ಭಕ್ತಿ-
ರ್ವಿಷ್ಣೌ ತದನ್ಯೇಷು ಚ ತತ್ಪ್ರತೀಪತಾ ।
ಅತ್ರೋತ್ತರೇ ಯೇ ಯೇ ಹರಿಭಕ್ತಿತತ್ಪರಾ-
ಸ್ತೇ ತೇ ಸುರಾಸ್ತದ್ವಿಪರೀತಾ ವಿಶೇಷತಃ ॥ ೨೩೭ ॥

ಅ ॥ ಶ್ರೀವಿಷ್ಣುವಿನಲ್ಲಿ ಸರ್ವೋತ್ಕೃಷ್ಟವಾದ ಭಕ್ತಿಯೇ ದೇವತೆಗಳಿಗೆ ಲಿಂಗ (ಲಕ್ಷಣ) ವು. ತದನ್ಯೇಷು=ಆ ದೇವತೆಗಳ ವಿರೋಧಿಗಳಾದ ದೈತ್ಯರಲ್ಲಿ, ಶ್ರೀವಿಷ್ಣುವಿನಲ್ಲಿ ವಿರುದ್ಧತ್ವವು (ದ್ವೇಷವು) ಚ=ಭಕ್ತ್ಯಭಾವವೂ ಕೂಡ, ಲಿಂಗವು. ಮತ್ತು *ಸುರಾಣಾಂ=ದೇವತೆಗಳಿಗೂ ಗಂಧರ್ವಾದಿಗಳಿಲ್ಲರಿಗೂ, ಶ್ರೀಹರಿಯಲ್ಲಿ ಸರ್ವೋತ್ಕೃಷ್ಟವಾದ ಭಕ್ತಿಯೇ ಲಿಂಗವು. ಅವರಿಂದ ಇತರರಾದ ಅಸುರಾದಿಗಳಲ್ಲಿ ತತ್ಪ್ರತೀಪತಾ=ಆ ಶ್ರೀವಿಷ್ಣುವಿಗೂ, ಮತ್ತು ವಿಷ್ಣುಭಕ್ತರಾದ ದೇವಾದಿಗಳಿಗೂ ವಿರುದ್ಧತ್ವವೇ ಲಿಂಗವು. ಅತಃ=ಅದಕಾರಣ ಅತ್ರ=ಕುರು ಪಾಂಡವರ ಸೈನ್ಯಗಳಲ್ಲಿ ಯೇ ಯೇ=ಯಾರು ಯಾರು ಹರಿಭಕ್ತಿತತ್ಪರಾಃ=ಶ್ರೀಹರಿಯ ಭಕ್ತಿಯಲ್ಲಿಯೇ ತಾತ್ಪರ್ಯವುಳ್ಳವರೋ (ಯುಧಿಷ್ಠಿರ, ಭೀಮ, ಅರ್ಜುನ, ದ್ರೋಣ, ಕರ್ಣ, ಭೀಷ್ಮ ಮೊದಲಾದ) ಅವರೆಲ್ಲರೂ, ಸುರಾಃ=ಸಾಕ್ಷಾತ್ ದೇವತೆಗಳೇ. (ಮತ್ತು) ಯೇ ಯೇ=ಯಾರು ಯಾರು ಹರಿಭಕ್ತಿತತ್ಪರಾಃ=ಶ್ರೀಹರಿಯ ಭಕ್ತಿಯಲ್ಲಿ ತಾತ್ಪರ್ಯವುಳ್ಳವರೋ, (ಧೃತರಾಷ್ಟ್ರ, ದ್ರುಪದ, ವಿರಾಟ ಮೊದಲಾದವ

* ಸುಷ್ಟು ರಾಂತಿ=ಪ್ರಕಾಶಂತೆ ಎನ್ನುವ ವ್ಯುತ್ಪತ್ತಿಯಿಂದ ಸುರಾಃ=ದೇವತೆಗಳು. ರಯಿ ಕಯಿ ಗಯಿ ಶಬ್ದೇ ಎನ್ನುವ ಧಾತುವಿನ ದೆಸೆಯಿಂದ ಸುಷ್ಟು ರಾಯಂತಿಗಾಯಂತಿ ಎನ್ನುವ ವ್ಯುತ್ಪತ್ತಿಯಿಂದ ಸುರಾಃ=ದೇವಗಂಧರ್ವರು, ಮನುಷ್ಯಗಂಧರ್ವರು ಇತ್ಯಾದಿಗಳೆಲ್ಲರೂ ಎಂದರ್ಥವು.

ರೆಲ್ಲರೂ) ವಿಶೇಷತಃ = ವಿಶೇಷಾಕಾರವಾಗಿ, ತದ್ಬರಿತಾಃ=ಆ ದೇವತೆಗಳಿಂದ ಅವಿಷ್ಟರಾದ, ಸುರಾಃ = ಚೆನ್ನಾಗಿ ಗಾಯಕರಾದ ಗಂಧರ್ವರು. ಅತಃ=ಶ್ರೀವಿಷ್ಣುವೈಷ್ಣವ ವಿರೋಧಕ್ಕೆ ಅಸುರ ಲಿಂಗತ್ವವಿದ್ದಪ್ರಯುಕ್ತ. ಯೇ ಯೇ = ಯಾರು ಯಾರು,ಅಹರಿಭಕ್ತಿತತ್ಪರಾಃ=ಶ್ರೀಹರಿಯು ಭಕ್ತಿಯಲ್ಲಿ ಆಸಕ್ತರಾಗುವುದಿಲ್ಲವೋ, ತೇ ತೇ=ಅವರೆಲ್ಲರೂ (ಅಂದರೆ ಶ್ರೀಹರಿಯಲ್ಲಿಯೂ ಶ್ರೀಹರಿ ಭಕ್ತರಲ್ಲಿಯೂ ವಿರುದ್ಧರಾದ ದುರ್ಯೋಧನಾದಿಗಳೆಲ್ಲರೂ) ಅಸುರಾಃ=ಅಸುರರೇ.

ವಿಶೇಷಾಂಶ—ಹೀಗೆ ಆವೃತ್ತಿ ಮಾಡಿಕೊಂಡು ಅರ್ಥವನ್ನು ಹೇಳಬೇಕು. ಆದಕಾರಣ ಆರಬ್ಧಗಳಾದ ಎರಡು ಅರ್ಥಗಳನ್ನು ಉಪಸಂಹಾರದಲ್ಲಿಯೂ ನಿಗಮನ ಮಾಡಿದ್ದರಿಂದ ಸರ್ವಜ್ಞಾಚಾರ್ಯರ ವಾಕ್ಯದಲ್ಲಿ ನ್ಯೂನತೆಯನ್ನು ಶಂಕಿಸಕೂಡದು. ॥ ೨೩೭ ॥

ಮೂ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಭಗವದವತಾರ-
ಪ್ರತಿಜ್ಞಾ ನಾಮ ಏಕಾದಶೋऽಧ್ಯಾಯಃ ॥ ೧೧ ॥

ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ನಿರ್ಮಿಸಲ್ಪಟ್ಟ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಶ್ರೀಹರಿಯ ಅವತಾರ ಪ್ರತಿಜ್ಞೆಯೆನ್ನುವ ಹನ್ನೊಂದನೇ ಅಧ್ಯಾಯವು ಸಮಾಪ್ತವಾಯಿತು. ॥ ೧೧ ॥

ಶ್ರೀಕೃಷ್ಣಚರಿತಾರ್ಥ
ಪ್ರಾಂಡವ್ಯಪ್ರವೃತ್ತಿನಾಮ್ನೀ ಚ

॥ ಶ್ರೀಃ ॥

ಹನ್ನೆರಡನೇ ಅಧ್ಯಾಯವು

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ಶ್ರೀಕೃಷ್ಣನ ಪಿತೃವಂಶವನ್ನು ಸಂಕ್ಷೇಪದಿಂದ ಹೇಳಿ ಮಾತೃವಂಶವನ್ನು ನಿರೂಪಿಸುತ್ತಾರೆ—

ಮೂ ॥ ಓಂ ॥ ಬಭೂವ ಗಂಧರ್ವಮುನಿಸ್ತು ದೇವಕಃ
ಸ ಆಸ ಸೇವಾರ್ಥಮಥಾಹುಕಾದ್ಧರೇಃ ।
ಸ ಉಗ್ರಸೇನಾವರಜಸ್ತಥೈವ
ನಾಮಾಸ್ಯ ತಸ್ಮಾದಜನಿ ಸ್ಮ ದೇವಕೀ ॥ ೧ ॥

ಅ ॥ (ಮೊದಲು) ದೇವಕನಾಮಕನಾದ (ಯಾವ) ಗಂಧರ್ವಮುನಿಯು ಇರುತ್ತಿದ್ದನೋ ಆತನು ಶ್ರೀಹರಿಯ ಸೇವೆಗೋಸ್ಕರ ಆಹುಕ ನಾಮಕನಾದ ಯಾದವನ ದೆಸೆಯಿಂದ ಹುಟ್ಟಿದನು, ಅವನು ಉಗ್ರಸೇನನ ತಮ್ಮನು, (ಜ್ಯೇಷ್ಠನಲ್ಲ.) ಈ ಉಗ್ರಸೇನನ ತಮ್ಮನಿಗೆ ಹಾಗೆಯೇ ನಾಮಧೇಯವು. (ಅಂದರೆ ಪೂರ್ವಜನ್ಮದಲ್ಲಿ ಯಾವ ನಾಮವುಳ್ಳವೋ ಅದೇವೇ ನಾಮಧೇಯವು ಅಂತೂ ದೇವಕನೆಂದೇ ಹೆಸರು.) ಆ ದೇವಕನದೆಸೆಯಿಂದ ದೇವಕಿಯು ಹುಟ್ಟಿದಳು, ॥ ೧ ॥

ಮೂ ॥ ಅನ್ಯಾಶ್ಚ ಯಾಃ ಕ (ಕಾ) ಶ್ಯಪಸ್ಯೈವ ಭಾರ್ಯಾ
ಜ್ಯೇಷ್ಠಾಂ ತು ತಾಮಾಹುಕ ಆತ್ಮಪುತ್ರೀಂ ।
ಚಕಾರ ತಸ್ಮಾದ್ಧಿ ಪಿತೃಷ್ವಸಾ ಸಾ
ಸ್ವಸಾ ಚ ಕಂಸಸ್ಯ ಬಭೂವ ದೇವಕೀ ॥ ೨ ॥

ಅ ॥ ಇತರರೂ ಕೂಡ ಯಾರು ಕಶ್ಯಪನಿಗೇನೇ ಹೆಂಡಂದಿಯರೋ, (ಅವರೂ ಕೂಡ ದೇವಕನದೆಸೆಯಿಂದ ಹುಟ್ಟಿದರು) ಜ್ಯೇಷ್ಠಳಾದ ದೇವಕೀದೇವಿಯನ್ನಾದರೂ ದೇವಕನ ತಂದೆಯಾದ ಆಹುಕನು ತನ್ನ ಮಗಳನ್ನಾಗಿ ಯಾವ ಕಾರಣದಿಂದ ಮಾಡಿದನೋ, (ಅಂದರೆ ಮಗಳ ಮಗಳನ್ನು ಮಗಳನ್ನಾಗಿ ರಕ್ಷಿಸುತ್ತಾ ಇದ್ದನೋ,) ಆದ ಕಾರಣ ಆ ದೇವಕೀದೇವಿಯು ಕಂಸನಿಗೆ, ತಂದೆಯ ತಂಗಿಯೂ (ಸೋದರ ಅತ್ತೆಯೂ) ತಂಗಿಯೂ ಕೂಡ ಆದಳು,

ವಿಶೇಷಾಂಶ—(1) ದೇವಕಿಯು ಉಗ್ರಸೇನನ ತಂದೆಯಾದ ಆಹುಕರಾಜನಿಗೆ ಔದತ್ತ ಪುತ್ರಿಯಾದ ಪ್ರಯುಂಕ್ತ, ಉಗ್ರಸೇನನಿಗೆ ತಂಗಿಯಾದಳು, ಆದುದರಿಂದ ಉಗ್ರಸೇನನ ಮಗನಾದ ಕಂಸನಿಗೆ ಸೋದರ ಅತ್ತೆಯಾದಳು. ಮತ್ತು ಉಗ್ರಸೇನನ ತಮ್ಮನಾದ ದೇವಕನ ಮಗಳಾದ ಪ್ರಯುಂಕ್ತ, ಉಗ್ರಸೇನನ ಮಗನಾದ ಕಂಸನಿಗೆ ತಂಗಿಯೂ ಆದಳು. (2) ಕಾಶ್ಯಪಾಯ ತ್ರಯೋದಶ ಎಂದು ಭಾಗವತದಲ್ಲಿ ಹೇಳಿರುವುದರಿಂದ ಕಾಶ್ಯಪನಿಗೆ ಹದಿಮೂರು (೧೩) ಹೆಂಡಂದಿಯರು ಇರುತ್ತಾರೆ. ಅವರಲ್ಲಿ ಅದಿತಿಯೇ ದೇವಕಿಯಾಗಿ ಹುಟ್ಟಿದ್ದು. ಕಾಶ್ಯಪನ ಹೆಂಡಂದಿಯರಾದ ಸುರಭಿ, ದಿತಿ, ದನು ಈ ಮೂವರು ಬಾಲ್ಹೀಕೇಶ್ವರ, ಕಾಶಿರಾಜ, ಕರವೀರೇಶ್ವರ ಇವರ ಪುತ್ರಿಯರಾಗಿ ಹುಟ್ಟಿ ವಸುದೇವನ ಹೆಂಡಂದಿಯರು ಆಗುವರು ಎಂದು ಹೇಳುವವು. ಸುರಭಿ, ಅದಿತಿ, ದಿತಿ, ದನು ಈ ನಾಲ್ವರಿಂದ ಇತರರಾದ ಆರು (೬) ಮಂದಿ ಹೆಂಡಂದಿಯರು ದೇವಕಿಯಿಂದ ತಂಗಿ

ಯಂರಾಗಿ ಹುಟ್ಟಿದರಂ. ಈ ಪ್ರಕಾರೆ ಹತ್ತು ಮಂದಿ (೧೦) ವಸುದೇವನ ಹೆಂಡಂದಿಯಂರಿಗೆ ಭೂವಿಯಂಲ್ಲಿ ಉತ್ಪತ್ತಿಯಿಂದೆ, ಬಾಕಿ ಮೂರಂ ಜನರಿಗೆ ಪ್ರಯೋಜನವಿಲ್ಲದಿರುವುದರಿಂದ ಉತ್ಪತ್ತಿಯಿಲ್ಲವೆಂದಂ ತಿಳಿಯಬಹುದಂ. ॥ ೨ ॥

ಮೂ ॥ ಸೈವಾದಿತಿರ್ವಸುದೇವಸ್ಯ ದತ್ತಾ
ತಸ್ಯಾ ರಥಂ ಮಾಂಗಲಂ ಕಂಸ (ಮುಂಗಲಕಂ ಸ) ಏವ ।
ಸಂಯಾಪಯಾವಾಸ ತದಾ ಹಿ ವಾಯು-
ರ್ಜಗಾದ ವಾಕ್ಯಂ ಗಗನಸ್ಥಿತೋಽಮುಂ ॥ ೩ ॥

ಅ ॥ ಆ ಅದಿತಿಯೇ ವಸುದೇವನಿಗೆ (ಕನ್ಯಾದಾನ ರೂಪದಿಂದ) ಕೊಡಲ್ಪಟ್ಟಳು. ಕಂಸನೇ ತಾನೇವೇ ಆ ದೇವಕೀದೇವಿಗೆ ಗೃಹಪ್ರವೇಶೋತ್ಸವ ಸಂಬಂಧಿಯಾದ ರಥವನ್ನು (ವರಗೃಹವನ್ನು ಕುರಿತು) ಹೊಂದಿಸಿಕೊಟ್ಟನು. ಗೃಹಪ್ರವೇಶೋತ್ಸವ ಕಾಲದಲ್ಲಿ ಆಕಾಶದಲ್ಲಿರತಕ್ಕ ವಾಯುಂ ದೇವರು ಈ ಕಂಸನನ್ನು ಕುರಿತು ಮಾತನ್ನು ಹೇಳಿದರು. ॥ ೩ ॥

ವಾಯುದೇವರು ಮಾತನ್ನು ಏತಕ್ಕೆ ಹೇಳಿದರೆಂದರೆ—

ಮೂ ॥ •ವಿನಾಪರಾಧಾದ್ಧಿ (ನ್ನ) ತತೋ ಗರೀಯಸೋ
ನ ಮಾತುಲೋ ವಧ್ಯತಾಮೇತಿ ವಿಷ್ಣೋಃ ।
ಲೋಕಸ್ಯ ಧರ್ಮಾನನುವರ್ತತೋಽತಃ
ಪಿತ್ರೋರ್ವಿರೋಧಾರ್ಥಮುವಾಚ ವಾಯುಃ ॥ ೪ ॥

ಅ ॥ ಮಾತುಳನು (ಸೋದರ ಮಾವನು) ವಧಾರ್ಹತ್ವವನ್ನು ಹೊಂದುವುದಿಲ್ಲ (ಏಂದು ಲೋಕಧರ್ಮವಿದೆ, ಆದ ಕಾರಣ) ಲೋಕಧರ್ಮಗಳನ್ನು ಅನುಸರಿಸಿಕೊಂಡಿರುವ ಶ್ರೀಕೃಷ್ಣನಿಗೂ ಕೂಡ ಸೋದರ ಮಾವನಾದ ಕಂಸನು, ಮಾತುಳನಾದ ಕಂಸನದ್ದಿಸೆಯಿಂದ ಶ್ರೇಷ್ಠನಾದ ಪುರುಷನ ಅಪರಾಧವಿಲ್ಲದೆ ವಧ್ಯತ್ವವನ್ನು ಹೊಂದುವುದಿಲ್ಲ, ಆದಕಾರಣ ಶ್ರೀಕೃಷ್ಣನ ಮಾತಾ ಪಿತೃಗಳಾದ ದೇವಕೀ ವಸುದೇವರ ವಿಷಯದಲ್ಲಿ (ಕಂಸನಿಗೆ) ವಿರೋಧವನ್ನು ಹುಟ್ಟಿಸುವುದ ಕ್ಕಾಗಿ ವಾಯುದೇವರು ಹೇಳಿದರು.

ವಿಶೇಷಾಂಶ—(1) ಹಾಗಾದರೆ ದೇವಕಿಯುಂ ಕಂಸನ ತಂಗಿಯಲ್ಲ. ಆದಕಾರಣ ಕಂಸನಿಂದಲೂ ಲಘುಭೂತಳೇ; ವಸುದೇವನಾದರೂ ಕಂಸನಿಗೆ ಭಾವುಕನು. ಆದಕಾರಣ ಲೋಕನ್ಯಾಯದಿಂದ ಇಬ್ಬರೂ ಸವಧಾನಿಕರು. ಏವಂ ಚ ದೇವಕೀ ವಸುದೇವರ ಅಪರಾಧವು ಮಾತೃಳನ ದೆಸೆಯಿಂದ ಶ್ರೇಷ್ಠರಾದವರ ಅಪರಾಧವು ಹೇಗೆ ಆಗುವುದೆಂದರೆ—ಅಹುದು. ಆದರೆ, ತನ್ನ ಸಂಬಂಧವನ್ನು ವಿವಕ್ಷೆ ಮಾಡಿದರೆ ಮಾತುಳನದೆಸೆಯಿಂದಲೂ ಮಾತಾಪಿತೃಗಳು ಶ್ರೇಷ್ಠರು. ಆದ ಕಾರಣ ತನ್ನ ಮುಂಖ್ಯ ಸಂಬಂಧಿಗಳಾದ ಮಾತಾಪಿತೃಗಳಿಗೆ ವಿರೋಧವಾದರೆ ಅವರಕ್ಕಿಂತ ತನಗೆ ಅಮುಂಖ್ಯ ಸಂಬಂಧಿಯಾದ ಮಾತುಳನು ಲಘುಭೂತನಾಗಿರುವುದರಿಂದ ಇತನ ವಧವು ಯೋಗ್ಯವು ಎಂದು ಗ್ರಂಥಕಾರರಿಗೆ ಅಭಿಪ್ರೇತವಾಗಿದೆ. ॥ ೪ ॥

• ಭಾವಪ್ರಕಾಶಿಕೆಯಲ್ಲಿ ವಿನಾಪರಾಧಂ ನ ಎಂದು ಪಾಠವಿದೆ.

ವಿರೋಧವನ್ನು ಹುಟ್ಟಿಸತಕ್ಕ ಪ್ರಕಾರವನ್ನು ಹೇಳುತ್ತಾರೆ—

ಮೂ ॥ ಮೃತ್ಯುಸ್ತವಾಸ್ಯಾ ಭವಿತಾಷ್ಟಮಃ ಸುತೋ
ಮೂಢೇತಿ ಚೋಕ್ತೋ ಜಗೃಹೇ ಕೃಪಾಣಂ ।
ಪುತ್ರಾನ್ ಸಮುಪಾರ್ಹ್ಯ ಚ ಶೂರಸೂನುಃ
ವಿಮೋಚ್ಯ ತಾಂ ತಕ್ಷಸಹಿತೋ ಗೃಹಂ ಯಯೌ ॥ ೫ ॥

ಅ ॥ ಎಲೋ ಮೂಢನೇ ಈ ದೇವಕೀದೇವಿಯ ಎಂಟನೇ ಮಗನು ನಿನಗೆ ಮಾರಕನು ಆಗುವನು. ಹೀಗೆ ಹೇಳಿಸಿಕೊಳ್ಳಲ್ಪಟ್ಟ ಕಂಸನು (ದೇವಕಿಯನ್ನು ಕೊಲ್ಲುವುದಕ್ಕಾಗಿ) ಖಡ್ಗವನ್ನು ಹಿಡಿದುಕೊಂಡನು, ಶೂರರಾಜನ ಮಗನಾದ ವಸುದೇವನು (ನಿನ್ನ ತಂಗಿಯಾದ ದೇವಕಿಯನ್ನು ಕೊಲ್ಲಬೇಡ. ಇವಳ ಎಂಟನೇ ಗರ್ಭವು ನಿನ್ನನ್ನು ಕೊಲ್ಲತಕ್ಕದು ಎಂದು ನೀನು ತಿಳಿಯುವುದಾದರೆ ಇವಳಲ್ಲಿ ಮುಂದಕ್ಕೆ ಹುಟ್ಟುವ ಎಲ್ಲಾ ಮಕ್ಕಳನ್ನು ನಿನಗೆ ಕೊಡುವೆನು ಎಂದು ಹೇಳಿ) ಈ ಕಂಸನಿಗೆ (ಮುಂದಕ್ಕೆ ಹುಟ್ಟುವ) ಮಕ್ಕಳನ್ನು ಸಮರ್ಪಿಸಿ ಆ ದೇವಕಿಯನ್ನು (ಮೃತ್ಯುವಿನಿಂದ) ಬಿಡಿಸಿ ಆ ದೇವಕಿಯಿಂದ ಕೂಡಿದವನಾಗಿ ಮನೆಯನ್ನು ಕುರಿತು ಹೋದನು. ॥ ೫ ॥

ಮೂ ॥ ಷಟ್ ಕನ್ಯಕಾಶ್ಚಾವರಜಾ ಗೃಹೀತಾ-
ಸ್ತೇನೈವ ತಾಭಿಶ್ಚ ಮುಮೋದ ಶೂರಜಃ ।
ಬಾಹ್ಲೀಕಪುತ್ರೀ ಚ ಪುರಾ ಗೃಹೀತಾ
ಪುರಾಸ್ಯ ಭಾರ್ಯಾ ಸುರಭಿಸ್ತು ರೋಹಿಣೀ ॥ ೬ ॥

ಅ ॥ ಆ ವಸುದೇವನಿಂದ ದೇವಕಿಯ ಅನಂತರದಲ್ಲಿ ಹುಟ್ಟಿರುವ ಆರು ಮಂದಿ ದೇವಕನ ಪುತ್ರಿಯರು (ಹೆಂಡಂದಿಯರಾಗಿ) ಸ್ವೀಕರಿಸಿಕೊಳ್ಳಲ್ಪಟ್ಟರು. ಆ ಸ್ತ್ರೀಯರಿಂದ ವಸುದೇವನು ಸಂತೋಷಪಟ್ಟನು. ಬಾಹ್ಲೀಕರಾಜನ ಮಗಳು ಆರು ಕನ್ನಿಕೆಯರನ್ನು ವಿವಾಹವಾಡಿಕೊಳ್ಳುವುದಕ್ಕಿಂತ ಮೊದಲೇ ದೇವಕಿಯನ್ನು ಮುದುವೆಮಾಡಿಕೊಂಡ ಮೇಲೆ, ವಸುದೇವನಿಂದ ಪಾಣಿಗ್ರಹಣಮಾಡಿಸಿಕೊಳ್ಳಲ್ಪಟ್ಟಳು. (ಅವಳ ಮೂಲಸ್ವರೂಪವನ್ನು ಹೇಳುತ್ತಾರೆ) ಪೂರ್ವಜನ್ಮದಲ್ಲಿ ದಸುದೇವನ ಹೆಂಡತಿಯು ಯಾರು ಸುರಭಿಯೋ, (ಅವಳೇ) ರೋಹಿಣಿಯು.

ವಿಶೇಷಃಂಶ—ಪೌರವೀ ರೋಹಿಣೀ ನಾಮ ಬಾಹ್ಲೀಕಸ್ಯಾತ್ಮಜಾऽಭವತ್ ।
ಜ್ಯೇಷ್ಠಾ ಪತ್ನೀ ಮಹಾರಾಜ ದಯಿತಾನಕದುಂದುಭೇಃ ॥ ಎಂದು ಹರಿವಂಶದಲ್ಲಿ ಹೇಳಿದ ಪ್ರಕಾರ ವಸುದೇವನಿಗೆ ಬಾಹ್ಲೀಕರಾಜನ ಮಗಳಾದ ರೋಹಿಣೀ ಎನ್ನುವವಳು ಹೆಂಡತಿಯಾದಳು. ॥ ೬ ॥

ಮೂ ॥ ರಾಜ್ಞಶ್ಚ ಕಾಶೀಪ್ರಭವಸ್ಯ ಕನ್ಯಕಾಂ
ಸ ಪುತ್ರಿಕಾಪುತ್ರಕಧರ್ಮತೋऽವಹತ್ ।
ಕನ್ಯಾಂ ತಥಾ ಕರವೀರೇಶ್ವರಸ್ಯ
ತೇನೈವ ಧರ್ಮೇಣ ದಿತಿಂ ದನುಂ ಪುರಾ ॥ ೭ ॥

ಅ ॥ ಆ ವಸುದೇವನು ಮೊದಲು ದಿತಿನಾಮಕಳಾದ ಕಾಶಿಯಲ್ಲಿ ಹುಟ್ಟಿರತಕ್ಕ ಕಾಶಿರಾಜನ ಮಗಳನ್ನು ಪುತ್ರಿಕಾಪುತ್ರಧರ್ಮದಿಂದಲೇ (ಅಂದರೆ ಇವಳಲ್ಲಿ ಹುಟ್ಟುತಕ್ಕ ಮಗನು ನನಗೆ ಮಗ

ವಾಗಬೇಕು ಎಂದು ಕನ್ಯಾಪ್ರದಾನ ಧರ್ಮದಿಂದಲೇ) ಮಂದುವೆಯಾಡಿಕೊಂಡನು. ಹಾಗೆಯೇ ಮೊದಲು ದನು ನಾವುಂಕಳಾದ ಕರವೀರ ಪಟ್ಟಣಕ್ಕೆ ಅಧಿಪತಿಯಾದ ರಾಜನ ಕನ್ನಿಕೆಯನ್ನು ಪುತ್ರಿಕಾಪುತ್ರ ಧರ್ಮದಿಂದಲೇ ವಿವಾಹವಾಡಿಕೊಂದನು. ॥ ೭ ॥

ಮೂ ॥ ಯೋ ಮನ್ಯತೇ ವಿಷ್ಣುರೇವಾಹಮಿತ್ಯಸೌ
ಪಾಪೋ ವೇನಃ ಪೌಂಡ್ರಕೋ ವಾಸುದೇವಃ ।
ಜಾತಃ ಪುನಃ ಶೂರಜಾತ್ ಕಾಶಿಜಾಯಾಂ
ನಾನ್ಯೋ ಮತ್ತೋ ವಿಷ್ಣುರಸ್ತೀತಿ ವಾದೀ ॥ ೮ ॥

ಅ ॥ ಯಾವ ಪಾಪಿಷ್ಠನಾದ ವೇನನು ನಾನೇ ವಿಷ್ಣುವು ಎಂದು ತಿಳಿದುಕೊಳ್ಳುತ್ತಾನೋ, ಈ ವೇನನು ಶೂರರಾಜನ ಪುತ್ರನಾದ ವಸುದೇವನಿಂದ ಕಾಶಿರಾಜನ ಕನ್ನಿಕೆಯಲ್ಲಿ ಪೌಂಡ್ರಕ ವಾಸುದೇವನೆಂದು (ಹೆಸರಿನಿಂದ) ಹುಟ್ಟಿದನು. ಸತ್ಕುಲದಲ್ಲಿ ಹುಟ್ಟಿದ ಮೇಲೆಯೂ ನನ್ನ ದೆಸೆಯಿಂದ ಮತ್ತೊಬ್ಬನು ಶ್ರೀವಿಷ್ಣುವು ಇಲ್ಲ. (ನಾನೇ ವಿಷ್ಣುವು) ಎಂದು ಹೇಳುವವ ನಾದನು. ॥ ೮ ॥

ಮೂ ॥ ಧುಂಧುರ್ಹತೋ ಯೋ ಹರಿಣಾ ಮಧೋಃ ಸುತ
ಆಸೀತ್ ಸುತಾಯಾಂ ಕರವೀರೇಶ್ವರಸ್ಯ ।
ಸೃಗಾಲನಾಮಾ ವಸುದೇವೋಽಥ ದೇವಕೀ-
ಮುದೂಹ್ಯ ಶೌರಿರ್ನ ಯಯಾವುಭೇ ತೇ ॥ ೯ ॥

ಅ ॥ ಕುವಲಯಾಶ್ವ ರಾಜದಲ್ಲಿರತಕ್ಕ ಶ್ರೀಹರಿಯಿಂದ ಮಧುನಾಮಕ ಅಸುರನು ಮಗನಾದ ಯಾವ ಧುಂಧುನಾಮಕ ಅಸುರನು ಸಂಹೃತನಾಗಿರುತ್ತಾನೋ ಆತನು ಕರವೀರೇಶ್ವರ ಮಗಳಲ್ಲಿ ವಸುದೇವನ ಮಗನಾದುದರಿಂದ ವಾಸುದೇವನೆನ್ನಿಸುವ ಸೃಗಾಲನೆಂದು ಹೆಸರುಳ್ಳವನು (ಅಂದರೆ ಸೃಗಾಲ ವಾಸುದೇವನು) ಹುಟ್ಟಿದನು. ಪೌಂಡ್ರಕವಾಸುದೇವ ಸೃಗಾಲವಾಸುದೇವ ಇವರಿಬ್ಬರು ಹುಟ್ಟಿದ ಮೇಲೆ ವಸುದೇವನು ದೇವಕಿಯನ್ನು ಮದುವೆಮಾಡಿಕೊಂಡು ಆ ಇಬ್ಬರನ್ನು (ಅಂದರೆ ಕಾಶಿರಾಜ ಕರವೀರೇಶ್ವರರ ಪುತ್ರಿಯರನ್ನು) ಹೊಂದಲಿಲ್ಲ. (ಅಂದರೆ ಆ ಸ್ತ್ರೀಯರಿಂದ ಕೂಡಿಕೊಂಡು ಕ್ರೀಡಾದಿಗಳನ್ನು ಮಾಡಲೇ ಇಲ್ಲ.) ॥ ೯ ॥

ಮೂ ॥ ತಶಸ್ತು ತೌ ವೃಷ್ಣಿಶತಾ ಬಭೂವತು-
ರ್ಜ್ಯೇಷ್ಠೌ ಸುತೌ ಶೂರಸುತಸ್ಯ ನಿತ್ಯಂ ।
ಅನ್ಯಾಸು ಚ ಪ್ರಾಪ ಸುತಾನುದಾರಾನ್
ದೇವಾವತಾರಾನ್ ವಸುದೇವೋಽಖಿಲಜ್ಞಃ ॥ ೧೦ ॥

ಅ ॥ ಶೂರರಾಜನ ಮಗನಾದ ವಸುದೇವನ ಜ್ಯೇಷ್ಠ ಪುತ್ರರಾದ, ಆ ಪೌಂಡ್ರಕವಾಸುದೇವ ಸೃಗಾಲವಾಸುದೇವ ಇವರಿಬ್ಬರು ತಮ್ಮ ತಮ್ಮ ತಾಯಂದಿಯರನ್ನು ಪರಿತ್ಯಾಗಮಾಡಿದ್ದರಿಂದ ನಿತ್ಯದಲ್ಲಿಯೂ ಯಾದವರಿಗೆ ಶತ್ರುಗಳಾದರು. ಸರ್ವಜ್ಞನಾದ ವಸುದೇವನು ಬೇರೆ ಹೆಂಡಂದಿಯರಲ್ಲಿ ದೇವತೆಗಳ ಅವತಾರಭೂತರಾದ ಉತ್ತಮರಾದ ಪುತ್ರರನ್ನು ಹೊಂದಿದನು. ॥ ೧೦ ॥

ಮೂ ॥ ಯೇಯೇ ಹಿ ದೇವಾಃ ಪೃಥಿವೀಂ ಗತಾಸ್ತೇ
ಸರ್ವೇ ಶಿಷ್ಯಾಃ ಸತ್ಯವತೀಸುತಸ್ಯ ।
ವಿಷ್ಣೋರ್ಜ್ಞಾನಂ ಪ್ರಾಪ್ಯ ಸರ್ವೇಽಖಿಲಜ್ಞಾ-
ಸ್ತಸ್ಮಾದ್ಯಥಾಯೋಗ್ಯತಯಾ ಬಭೂವುಃ ॥ ೧೧ ॥

ಅ ॥ ಯಾವ ಯಾವ ದೇವತೆಗಳು ಭೂಲೋಕವನ್ನು ಹೊಂದಿರುವರೋ ಅವರೆಲ್ಲರೂ ಸತ್ಯವತೀದೇವಿಯ ಪುತ್ರನಾದ ವ್ಯಾಸಾವತಾರಭೂತನಾದ ಶ್ರೀವಿಷ್ಣುವಿನ ಶಿಷ್ಯರಾದರು, ಎಲ್ಲರೂ ಆ ವೇದವ್ಯಾಸರದ್ದೆಸೆಯಿಂದ ಜ್ಞಾನವನ್ನು ಹೊಂದಿ ಯೋಗ್ಯತಾನುಸಾರವಾಗಿ ಸರ್ವಜ್ಞರಾದರು. ॥ ೧೧ ॥

ಮೂ ॥ ಮರೀಚಿಜಾಃ ಷಣ್ಮನಯೋ ಬಭೂವು-
ಸ್ತೇ ದೇವಕಂ (ಲಂ) ಪ್ರಾಹಸನ್ ಕಾರ್ಶ್ಯಹೇತೋಃ ।
ತಚ್ಛಾಪತಃ ಕಾಲನೇಮಿಪ್ರಸೂತಾ
ಅವಧ್ಯತಾರ್ಥಂ ತಪ ಏವ ಚಕ್ರುಃ ॥ ೧೨ ॥

ಅ ॥ ಮರೀಚಿಋಷಿಯ ಪುತ್ರರಾದ ಆರು ಮಂದಿನಿಗಳು ಇದ್ದರು ಆ ಮರೀಚಿ ಪುತ್ರರು ದೇವಲ ಋಷಿಯನ್ನು ಕಾವಂಜ್ವರದಿಂದ ಕೃಶಾಂಗತ್ವ ನಿಮಿತ್ತವಾಗಿ ಅಪಹಾಸಮಾಡಿದರು, ಅವರು ದೇವಲನ ಶಾಪದ್ದೆಸೆಯಿಂದ ಕಾಲನೇಮಿನಾಮಂಕನಾದ ಅಸುರನದ್ದೆಸೆಯಿಂದ ಹುಟ್ಟಿದವರಾಗಿ ಅವಧ್ಯತ್ವವನ್ನು ಹೊಂದುವುದಕ್ಕಾಗಿಯೇ ತಪಸ್ಸನ್ನು ಮಾಡಿದರು. ॥ ೧೨ ॥

ಮೂ ॥ ಧಾತಾ ಪ್ರಾದಾದ್ವರಮೇಷಾಂ ತಥೈವ
ಶಶಾಪ ತಾನ್ ಕ್ಷ್ಮಾತಲೇ ಸಂಭವಧ್ವಂ ।
ತತ್ರ ಸ್ವಶಾತೋಽಪಿ ಭವತಾಂ ನಿಹಂತೇ-
ತ್ಯಾತ್ಮನ್ಯತೋ ವರಲಿಪ್ಸುನ್ ಹಿರಣ್ಯಃ ॥ ೧೩ ॥

ಅ ॥ ಬ್ರಹ್ಮನು ಕಾಲನೇಮಿಯಿಂದ ಹುಟ್ಟಿರುವ ಮರೀಚಿ ಪುತ್ರರಿಗೆ ಹೇಗೆ ಅವಧ್ಯತ್ವವು ಬಂದಿತೋ ಹಾಗೆಯೇ ವರವನ್ನು ಕೊಟ್ಟನು ಹಿರಣ್ಯಕಶಿಪುವು ತನ್ನದ್ದೆಸೆಯಿಂದ ಇತರನಾದ ಬ್ರಹ್ಮನದ್ದೆಸೆಯಿಂದ ವರವನ್ನು ಇಚ್ಛಿಸುವ, (ಹಾಗೆಯೇ ವರವನ್ನು ಹೊಂದಿರುವ) ಕಾಲನೇಮಿ ಪುತ್ರರನ್ನು, (ನೀವು) ಭೂತಳದಲ್ಲಿ ಹುಟ್ಟುವಿರಿ. ಆ ಜನ್ಮದಲ್ಲಿ ನಿಮ್ಮ ತಂದೆಯಾದ ಕಾಲನೇಮಿಯಂ (ನನ್ನ ಶಾಪದಿಂದ ಹುಟ್ಟಿರುವ) ನಿಮಗೆ ಸಂಹಾರಕನು ಆಗುವನು! ಹೇಗೆ ಶಾಪ ಕೊಟ್ಟನು

ವಿಶೇಷಾಂಶ—ಹಿರಣ್ಯಕಶಿಪುವು ಚತುರ್ಮುಖನದೆಸೆಯಿಂದ ವರವನ್ನು ಹೇಗೆ ಸ್ವೀಕರಿಸಿದನು ಎಂದರೆ, ಆಗ ಹಿರಣ್ಯಕಶಿಪುವಿಗೆ ಮಹತ್ತಾದ ಅಹಂಕಾರವು ಇರಲಿಲ್ಲ. ಬ್ರಹ್ಮನು ವರವನ್ನು ಕೊಟ್ಟ ಮೇಲೆ 'ಯಸ್ತ್ವಯಾ ಮಂದಭಾಗ್ಯೋಕ್ತೌ ಮದನ್ಯೋ ಜಗದೀಶ್ವರಃ । ಕ್ವಾಸೌ ಯದಿ ಸ ಸರ್ವತ್ರ ಸ್ತಂಭೇ ಕಸ್ಮಾನ್ನ ದೃಶ್ಯತೇ' ಎಂದು ಭಾಗವತದಲ್ಲಿ ಹೇಳಿದ ಪ್ರಕಾರ ಅತಿದೃಪ್ತನಾಗಿ ಶ್ರೀಹರಿಯನ್ನು ತಿರಸ್ಕರಿಸುವವನಾಗಿ ಚತುರ್ಮುಖಿ ಬ್ರಹ್ಮನನ್ನು ತೃಣಪ್ರಾಯನನ್ನಾಗಿ ಮಾಡಿಕೊಂಡು ಅಹಂಕಾರವಶದಿಂದ ಶಾಪಕೊಟ್ಟರುವನು. ॥ ೧೩ ॥

ಈಗ ಬ್ರಹ್ಮನ ವರವನ್ನೂ ಹಿರಣ್ಯಕಶಿಪುವಿನ ಶಾಪವನ್ನೂ ಕೂಡ ಕೂಡಿಸುವುದಕ್ಕಾಗಿ ಹೇಳುತ್ತಾರೆ—

ಮೂ ॥ ದುರ್ಗಾ ತದಾ ತಾನ್ ಭಗವತ್ಪ್ರಚೋದಿತಾ
ಪ್ರಸ್ಥಾಪಯಿತ್ವಾ ಪ್ರಚಕರ್ಷ ಕಾಯತ್।
ಕ್ರಮಾತ್ಸಮಾವೇಶಯದಾಶು ದೇವಕೀ-
ಗರ್ಭಾಶಯೇ ತಾನ್ಸ್ಯಹನಚ್ಚ ಕಂಸಃ ॥ ೧೪ ॥

ಅ ॥ ಹಿರಣ್ಯಕಶಿಪುವಿನ ಶಾಪಕಾಲದಲ್ಲಿ ಶ್ರೀಹರಿಯಿಂದ ಪ್ರೇರಿಸಿಕೊಳ್ಳಲ್ಪಟ್ಟ ದುರ್ಗಾದೇವಿಯು ಆಸುರ ದೇಹಗಳಲ್ಲಿರತಕ್ಕ ಕಾಲನೇಮಿ ಪುತ್ರರನ್ನು ಕ್ರಮವಾಗಿ ಒಂದು ಸಂವತ್ಸರ ಪರ್ಯಂತ ನಿದ್ರಿತರನ್ನಾಗಿ ಮಾಡಿಸಿ ಜೀವಿಸಿಕೊಂಡೇ ಇರುವ ಅವರ ಶರೀರದ್ದೆಸೆಯಿಂದ ಶೆಳೆದಳು. (ಅಂದರೆ ಕೇವಲ ಜೀವರನ್ನು ಶೆಳೆದಳು.) ಜ್ಯೇಷ್ಠಾದಿ ಕ್ರಮದಿಂದ ಆ ಆರೂ ಜೀವರನ್ನು ದೇವಕೀ ದೇವಿಯ ಜರಾಯುವಿನಲ್ಲಿ (ಗರ್ಭಾವರಕವಾದ ಚರ್ಮಪುಟಕದಲ್ಲಿ) ಅಥವಾ ದೇವಕೀದೇವಿಯ ಉದರದಲ್ಲಿ ಸ್ಥಾನವಿಶೇಷದಲ್ಲಿ ಶೀಘ್ರದಲ್ಲಿ (ಹುಟ್ಟುವುದಕ್ಕಾಗಿ) ಪ್ರವೇಶ ಮಾಡಿಸಿದಳು. ಕಂಸನು ದೇವಕೀ ಗರ್ಭಜಾತರನ್ನು ಹುಟ್ಟಿದೊಡನೆಯೇ ಸಂಹರಿಸಿದನು. ಮತ್ತು ಆವಾಗಲೇ ದುರ್ಗಾದೇವಿಯು ಪುನಃ ಸುಪ್ತ ಶರೀರಗಳಲ್ಲಿ ಪ್ರವೇಶಮಾಡಿಸಿದಳು.

ವಿಶೇಷಾಂಶ—(1) ಪ್ರಸ್ಥಾಪಯಿತ್ವಾ ಪ್ರಚಕರ್ಷ ಕಾಯಾತ್ ಎನ್ನುವ ವಚನದ್ದೆಸೆಯಿಂದ ದುರ್ಗಾದೇವಿಯು ಒಬ್ಬೊಬ್ಬ ಪುತ್ರನನ್ನು ದೇವಕೀದೇವಿಯ ಗರ್ಭದಲ್ಲಿ ಕೇವಲ ಸಂವತ್ಸರ ಪರ್ಯಂತವಾಗಿ ಸ್ಥಾಪಿಸಿ ಆ ಮೇಲೆ ಒಂದೊಂದು ಮಗುವನ್ನು ಕಂಸನು ಸಂಹರಿಸುತ್ತಿರಲು ಪುನಃ ಕ್ರಮದಿಂದ ಆ ಮಕ್ಕಳನ್ನು ತಮ್ಮ ತಮ್ಮ ಪೂರ್ವದೇಹಗಳಲ್ಲಿ ಪ್ರವೇಶ ಮಾಡಿಸುತ್ತಾಳೆ. ಏವಂ ಚ ಯಾವ ಶರೀರಗಳಲ್ಲಿ ಬ್ರಹ್ಮನು ಅವಧ್ಯತ್ವ ವರವನ್ನು ಕೊಟ್ಟಿರುವನೋ ಆ ಶರೀರಗಳಿಗೆ ಹನನವಿಲ್ಲದಿರುವುದರಿಂದ ಬ್ರಹ್ಮನ ವರವೂ ಸಾರ್ಥಕವಾಯಿತು ಶರೀರಾಂತರದಿಂದ ಭೂಮಿಯಲ್ಲಿ ಹುಟ್ಟಿರುವವರನ್ನು ಕಂಸನೆಂದು ಹೆಸರುಳ್ಳ ತಮ್ಮ ಪಿತೃಭೂತನಾದ ಕಾಲನೇಮಿಯು ತನ್ನ ಕೈಯಿಂದಲೇ ಸಂಹರಿಸಿರುವುದರಿಂದ ಹಿರಣ್ಯಕಶಿಪುವಿನ ಶಾಪವೂ ಸಾರ್ಥಕವಾಯಿತು. ಇವು ಎರಡನ್ನೂ ಕೂಡ ಅಘಟಿತಘಟನಾಶಕ್ತಿಯುಳ್ಳ ಶ್ರೀವಿಷ್ಣುವಿನ ಮಾಯಾರೂಪಳಾದ ದುರ್ಗಾದೇವಿಯೇ ಕೂಡಿಸಬೇಕು.ಎಂದು ತಾತ್ಪರ್ಯವು. ಆದುದರಿಂದಲೇ ದೇವಕೀದೇವಿಯು ದ್ವಾರಾವತೀ ಪಟ್ಟಣದಲ್ಲಿ(೭)ಆರು ಮಕ್ಕಳನ್ನು ನೋಡಬೇಕೆಂದೂ ಶ್ರೀಕೃಷ್ಣನ ಹತ್ತಿರ ಪಾರ್ಥಿಸುತ್ತಿರಲು ಶ್ರೀಕೃಷ್ಣನು ಬಲಿಲೋಕದಲ್ಲಿ ಬ್ರಹ್ಮನು ಕೊಟ್ಟ ವರದಿಂದ ಅವಧ್ಯ ಪೂರ್ವದೇಹದಲ್ಲಿರತಕ್ಕ ಆ ಮಕ್ಕಳನ್ನು ಬಲಿಚಕ್ರವರ್ತಿಯು ಮುಂದಿರದಿಂದ ಅವರ ಮೊದಲಿನ ಶರೀರಗಳನ್ನು ನಾಶಪಡಿಸಿ ಶಿಶುರೂಪದಿಂದ ತಂದು ತಾಯಿಗೆ ತೋರಿಸಿ ಬ್ರಹ್ಮನ ವರವನ್ನು ದೇವಲನ ಶಾಪವನ್ನು ದುರ್ಬಲವಾಗಿರುವುದರಿಂದ ತನ್ನ ಶಕ್ತಿಯಿಂದ ಉಲ್ಲಂಘಿಸಿ ಅವರಿಗೆ ದಿವ್ಯವಾದ ಗತಿಯನ್ನು ಶ್ರೀಕೃಷ್ಣನು ಕೊಟ್ಟಿರುತ್ತಾನೆನ್ನುವ ಭಾಗವತ ಕಥೆಯೂ ಉಪಪನ್ನವೇ ಆಗುವುದು. (2) ಪೀತ ಶೇಷಂ ಗದಾಭೃತಃ ಎಂದು ಭಾಗವತದಲ್ಲಿ ಹೇಳಿದ ಪ್ರಕಾರ ಶ್ರೀಕೃಷ್ಣನು ಚತುರ್ಭುಜ ರೂಪವನ್ನು ತೋರಿಸಿದ ಮೇಲೆ ಶಿಶುರೂಪವನ್ನು ಧರಿಸಿಕೊಂಡು ಆವಾಗಲೇ ದೇವಕೀದೇವಿಯು ಸ್ತನ್ಯವನ್ನು ಕುಡಿದು ಪುನಃ ಗೋಕುಲಕ್ಕೆ ಹೋದನು, ಎನ್ನುವ ಪ್ರಮೇಯವನ್ನು ಸೂಚಿಸಿದರು. (3) ಕೈಯಲ್ಲಿರತಕ್ಕ ವರಾಹಗಳನ್ನು ಒಂದೊಂದನ್ನು ಆರಂಭಿಸಿ ಗಣನೆ ಮಾಡಿದರೆ ಎಲ್ಲವೂ ಹೇಗೆ ಹತ್ತನೇದ್ದು ಆಗುತ್ತವೋ, ಹೀಗೆಯೇ ಕ್ರಮವನ್ನು ವಿವಕ್ಷಾ ಮಾಡದೆ ಸ್ವರೂಪವನ್ನು ಮಾತ್ರ

ಗಣನೆ ಮಾಡಿದರೆ ಎಲ್ಲವೂ ಎಂಟನೇದ್ದಾಗುತ್ತವೆ, ಹೀಗೆ ಎಲ್ಲಾ ವರಗಳಲ್ಲಿಯೂ ಎಂಟನೆಯವನು ಎನ್ನುವ ಸಂಶಯದಿಂದ ಕಂಸನು ಆ ಮಕ್ಕಳನ್ನು ಸಂಹರಿಸಿದನು, (4) ಆದುದರಿಂದಲೇ ಭಾಗವತದಲ್ಲಿ 'ಜಾತಂ ಜಾತಂ ತಯೋಃ ಪುತ್ರಮಹನ್ನ ಜನಶಂಕಯಾ! ಕಂಸನು ತನ್ನನ್ನು ಕೊಲ್ಲಲಿಕ್ಕೆ ದೇವಕಿಯ ಗರ್ಭದಲ್ಲಿ ಹುಟ್ಟಿರುವ ವಿಷ್ಣುವಿನ ಅಂಶವನ್ನು ನಾರದನ ವಾಕ್ಯದಿಂದ ವಿಷ್ಣುವು ಹೊರತು ಮತ್ತೊಬ್ಬನು ನನ್ನನ್ನು ಕೊಲ್ಲಲಿಕ್ಕೆ ಸಮರ್ಥನಲ್ಲವೆಂದು ಯುಕ್ತಿಯಿಂದಲೂ ತಿಳಿಯುವವನಾಗಿ ಆ ದೇವಕೀ ವಸುದೇವರ ಸಕಾಶದಿಂದ ಹುಟ್ಟಿರುವ ಎಲ್ಲಾ ಮಕ್ಕಳನ್ನೂ ಉತ್ಪತ್ತಿಯಿಲ್ಲದಿರುವ ಪರಮಾತ್ಮನೇ ಹುಟ್ಟಿರುವನು ಎನ್ನುವ ಸಂಶಯದಿಂದ ಸಂಹರಿಸಿದನು, (5) ಮತ್ತು 'ಅಸ್ಯಾಸ್ತ್ವಮಷ್ಟಮೋ ಗರ್ಭೋ ಹಂತಾ ಯಾಂ ನಯಸೇಽಬುಧ! ಎಲೋ ಅಜ್ಞನೇ ಯಾರನ್ನು ನೀನು ಕರಕೊಂಡು ಹೋಗುತ್ತಿಯೋ ಇವಳ ಎಂಟನೇ ಗರ್ಭವು ನಿನ್ನನ್ನು ಸಂಹರಿಸುವುದು ಎಂದು ಸಾಮಾನ್ಯವಾಗಿ ಹೇಳಿರುವುದರಿಂದ ಇವನೇ ವಿಷ್ಣುವು ಎನ್ನುವ ಜ್ಞಾನ ವಿಲ್ಲದಿರುವುದರಿಂದ ಸಂಹರಿಸಿದನು. ಇದೇವೇ ವೇದವ್ಯಾಸರ ಹೃದಯವು ಎಂದು ಭಾವವು (6) ಮತ್ತು ಬುದ್ಧಿಃ ಕರ್ಮಾನುಸಾರಿಣೀ ಎಂದು ಹೇಳಿದ್ರಿಂದ ಹಿರಣ್ಯಕಶಿಪುವಿನ ಶಾಪದಿಂದ ಹುಟ್ಟಿರುವ ದುರದೃಷ್ಟವೂ ಕೂಡ ಇಂತಹ ದುರ್ಬುದ್ಧಿಗೆ ಕಾರಣವು. ॥ ೧೪ ॥

ಶ್ರೀಕೃಷ್ಣಾವತಾರದ್ದೆಸೆಯಿಂದ ಮೊದಲು ಧರ್ಮರಾಜನು ಹುಟ್ಟಿರುವುದರಿಂದ ಶ್ರೀಕೃಷ್ಣನ ಕಥೆಯನ್ನು ಮಧ್ಯದಲ್ಲಿ ಸ್ಥಾಪಿಸಿ ಧರ್ಮರಾಜನ ಉತ್ಪತ್ತಿಯನ್ನು ಮೊದಲು ಹೇಳುವುದಕ್ಕಾಗಿ ಪಾಂಡುರಾಜನ ಕಥೆಯನ್ನು ಪಕ್ರವಿಸುತ್ತಾರೆ—

ಮೂ ॥ ತದಾ ಮುನೀಂದ್ರಸಂಯುತಃ ಸದೋ ವಿಧಾತುರತ್ತಮಂ ।
ಸ ಪಾಂಡುರಾಪ್ತುಮೈಚ್ಛತ ನ್ಯವಾರಯಂಶ್ಚ ತೇ ತದಾ ॥ ೧೫ ॥

ಅ ॥ ದೇವಕೀದೇವಿಯು ಆರು ಗರ್ಭಗಳ ಪಾತದ ಅವಸಾನ ಸಮಯದಲ್ಲಿ, (ಮುನಿಶ್ರೇಷ್ಠರಿಂದ ಕೂಡಿಕೊಂಡು ಪಾಂಡುಚಕ್ರವರ್ತಿಗೆ ಬ್ರಹ್ಮಲೋಕಕ್ಕೆ ಹೋಗಲಿಕ್ಕೆ ಉದ್ಯೋಗವಿಲ್ಲದಿರುವುದರಿಂದ) ಮುನಿಶ್ರೇಷ್ಠರಿಂದ ಕೂಡಿಕೊಂಡು ಅವರ ಸಭೆಯಲ್ಲಿ ಕೂತುಕೊಂಡಿದ್ದ ಅಥವಾ ಮುನಿಶ್ರೇಷ್ಠರಿಂದ ಅವಿಶ್ರಿತನೇ ಆದ (ಅಂದರೆ ಅವರನ್ನು ಬಿಟ್ಟು) ಆ ಪಾಂಡುರಾಜನು ಬ್ರಹ್ಮನ ಉತ್ತಮವಾದ ಸಭೆಯನ್ನು ಹೊಂದಲಿಕ್ಕೆ ಇಚ್ಛಿಸಿದನು. ಆಗ ಆ ಮುನಿಗಳು (ಪಾಂಡು ಚಕ್ರವರ್ತಿಯನ್ನು) ತಡೆದರು. ॥ ೧೫ ॥

ಋಷಿಗಳು ಪಾಂಡುಚಕ್ರವರ್ತಿಯನ್ನು ಏಕೆ ತಡೆದರು ಎಂದರೆ—

ಮೂ ॥ ಯದರ್ಥಮೇಷ ಜಾಯತೇ ಪುಮಾನ್ ಹಿ ತಸ್ಯ ಸೋಽಕೃತೇಃ ।
ಶುಭಾಂ ಗತಿಂ ನ ತು ವ್ರಜೇದ್ಧ್ರುವಂ ತತೋ ನ್ಯವಾರಯನ್ ॥ ೧೬ ॥

ಅ ॥ ಯಾವನಾದರೂ ಪುರುಷನು ಯಾವ ಪ್ರಯೋಜ (ಕಾರ್ಯ)ಕ್ಕಾಗಿ ಹುಟ್ಟುತ್ತಾನೋ ಆ ಪುರುಷನು ಆ ಕಾರ್ಯವನ್ನು ಮಾಡದಿರುವುದರಿಂದ ಸದ್ಗತಿಯನ್ನು ನಿಶ್ಚಯವಾಗಿಯೂ ಯಾವ ಕಾರಣದಿಂದ ಹೊಂದಲಾರನೋ ಆದಕಾರಣ (ಮುನಿಗಳು) ತಡೆದರು. ॥ ೧೬ ॥

ಹಾಗಾದರೆ ಪಾಂಡುರಾಜನು ಯಾವ ಪ್ರಯೋಜನಕ್ಕಾಗಿ ಹುಟ್ಟಿರುವನು ಎಂದರೆ—

ಮೂ ॥ ಪ್ರಧಾನದೇವತಾಜನೌ ನಿಯೋಕ್ತುಮಾತ್ಮನಃ ಪ್ರಿಯಾಂ ।
ಬಭೂವ ಪಾಂಡುರೇಷ ತದ್ವಿನಾ ನ ತಸ್ಯ ಸದ್ಗತಿಃ ॥ ೧೭ ॥

ಅ ॥ ಪಾಂಡುರಾಜನಂ (ವಾಯುಂ ಮೊದಲಾದ) ಉತ್ತಮಂ ದೇವತೆಗಳನ್ನು ಹುಟ್ಟಿಸೇವ ವಿಷಯಂದಲ್ಲಿ ತನ್ನ ಹೆಂಡತಿಯಾದ ಕುಂತೀದೇವಿಯಂನ್ನು ಆಜ್ಞಾಪಿಸುವುದಕ್ಕಾಗಿಯೇ ಹುಟ್ಟಿರುವನು. ಅದನ್ನು (ಅಂದರೆ ಕುಂತಿಗೆ ವಾಯುಂ ಮೊದರಾದ ಉತ್ತಮಂ ದೇವತೆಗಳನ್ನು ಹುಟ್ಟಿಸುವುದರಲ್ಲಿ ಆಜ್ಞಾರೂಪವಾದ ಕಾರ್ಯವನ್ನು) ಹೊರತು ಆ ಪಾಂಡುರಾಜನಿಗೆ ಸದ್ಗತಿಯಾಗುವುದಿಲ್ಲ (ಎನ್ನುವ ಅಭಿಪ್ರಾಯದಿಂದಲೇ ವುನಿಗಳು ತಡೆದರು.) ॥ ೧೭ ॥

ಹಾಗಾದರೆ ನಾಪುತ್ರಸ್ಯ ಲೋಕೋಽಸ್ತಿ ಎನ್ನುವ ವಚನದ್ವೆಷೆಯಿಂದ ಪಾಂಡುಚಕ್ರವರ್ತಿಗೆ ಮಕ್ಕಳು ಇಲ್ಲದಿರುವುದರಿಂದಲೇ ವುನಿಗಳು ತಡೆದರು ಎಂದ್ದೂ ಏಕೆ ಆಗಲಾರದು ಎಂದರೆ—

ಮೂ ॥ ಅತೋಽನ್ಯಥಾ ಸುತಾನ್ಮತೇ ವ್ರಜಂತಿ ಸದ್ಗತಿಂ ನರಾಃ ।
ಯಥೈವ ಧರ್ಮಭೂಷಣೋ ಜಗಾಮ ಸಂಧ್ಯಕಾಸುತಃ ॥ ೧೮ ॥

ಅ ॥ (ಭಾವಪ್ರಕಾಶಿಕಾ) ಅತಃ=ತನಗೆ ಸಾಕ್ಷಾತ್ ಸಂತಾನವಿಲ್ಲದಿದ್ದರೂ ಸಂತಾನಕ್ಕಾಗಿ ತನ್ನ ಹೆಂಡತಿಗೆ ನಿಯೋಗಾಖ್ಯವಾದ ಪುಣ್ಯಕಾರ್ಯವನ್ನು ಮಾಡಿದ್ರಿಂದಲೂ ಪಾಂಡುವಿಗೆ ಸದ್ಗತಿಪ್ರಾಪ್ತಿ ರೂಪವಾದ ಕಾರಣದ್ವೆಷೆಯಿಂದ. ಸುತಾನ್ ಋತೇ=ಸರ್ವಪ್ರಕಾರದಿಂದಲೂ ವುಕ್ಕಳನ್ನು ಹೊರತು, ಪುತ್ರೋತ್ಪತ್ತಿಗಾಗಿ ನಿಯೋಗಾಖ್ಯವಾದ ಪುಣ್ಯಕಾರ್ಯವನ್ನು ಕೂಡಾ ಹೊರತು, ಅನ್ಯಥಾ=ಪ್ರಬಲವಾದ ಪುಣ್ಯಾಂತರವನ್ನು ಮಾಡಿದ್ರಿಂದಲೂ, ನರಾಃ=ಮನುಷ್ಯರು, ಸದ್ಗತಿಂ=ಸದ್ಗತಿಯಂನ್ನು ವ್ರಜಂತಿ ಹೊಂದುತ್ತಾರೆ. ಅಥವಾ (ಜನಾರ್ದನಭಟ್ಟೀಯಂ) ಅತೋಽನ್ಯಥಾ ಸುತಾನ್ ಋತೇ=ವುಕ್ಕಳನ್ನು ಹೊರತೂ ಕೂಡ, ವುನುಷ್ಯರು, ಸದ್ಗತಿಯನ್ನು ಹೊಂದುತ್ತಾರೆ, (ಆದಕಾರಣ ನಾಪುತ್ರಸ್ಯ ಲೋಕೋಽಸ್ತಿ ಎನ್ನುವ ಶ್ರುತಿಗೆ ಪುತ್ರರನ್ನು ಹುಟ್ಟಿಸುವುದಕ್ಕಾಗಿ ಹುಟ್ಟಿದವನು ಪುತ್ರೋತ್ಪತ್ತಿಯಂನ್ನು ಮಾಡದೆ ಸದ್ಗತಿಯಂನ್ನು ಹೊಂದುವುದಿಲ್ಲ ಎಂದು ಶ್ರುತ್ಯರ್ಥವನ್ನು ತಿಳಿಯತಕ್ಕದ್ದು.) (ಹಾಗಾದರೆ ವುಕ್ಕಳಿಲ್ಲದಿರುವವನು ಯಾರು ಸದ್ಗತಿಯಂನ್ನು ಹೊಂದಿರುವನು. ಏಕೆ ಶ್ರುತ್ಯರ್ಥವನ್ನು ಸಂಕೋಚ ಮಾಡಬೇಕೆಂದರೆ,) (ರುಂಗ್ಮಾಂಗದನಿಂದ ಹುಟ್ಟಿರುವ) ಸಂಧ್ಯಕೆಯು ವುಗನಾದ ಧರ್ಮಭೂಷಣನು ಹೇಗೆ (ಸದ್ಗತಿಯಂನ್ನು) ಹೊಂದಿರುವನೋ, (ಹಾಗೆಯೇ)

ವಿಶೇಷಾಂಶ—(1) ಸಂಧ್ಯಾವಳೀ ಕುವಾರನಾದ ಧರ್ಮಾಂಗದನು ಸಾಕ್ಷಾತ್ ಸಂತಾನವನ್ನೂ ಪಾಂಡುವಿನಂತೆ ಸಂತಾನಕ್ಕಾಗಿ ನಿಯೋಗವನ್ನೂ ಮಾಡದೆ, ಏಕಾದಶೀ ವ್ರತದಿಂದಲೇ ಸದ್ಗತಿಯಂನ್ನು ಹೊಂದಿರುವನು. ಹೇಗೆಂದರೆ—ಮೋಹಿನಿಯು ಎಲೇ ರುಂಗ್ಮಾಂಗದನೇ ನೀನು ಏಕಾದಶೀ ವ್ರತವನ್ನು ಬಿಟ್ಟುಬಿಡಬೇಕು. ಇಲ್ಲದಿದ್ದರೆ ನಿನ್ನ ವುಗನಾದ ಧರ್ಮಾಂಗದನ ಶಿರಸ್ಸನ್ನಾಗಿ ಕತ್ತರಿಸಿಕೊಡಬೇಕು ಹೀಗೆ ಮೋಹಿನಿಯು ಹೇಳುತ್ತಿರಲು ರುಕ್ಮಾಂಗದನು ವುಗನಾದ ಧರ್ಮಾಂಗದನ ಹತ್ತಿರ ಕೇಳಿದನು ಆಗ ಧರ್ಮಾಂಗದನು ತಾವು ತಾಯಿವ್ಮನವರೂ ಕೂಡ ಸರ್ವಥಾ ಏಕಾದಶೀ ವ್ರತವನ್ನು ಬಿಡಬಾರದು. ನಾನೂ ಕೂಡ ಸರ್ವಥಾ ಬಿಡಲಾರೆನು, ನನ್ನ ಶಿರಸ್ಸನ್ನೇ ಕತ್ತರಿಸಿಕೊಡು, ಹೀಗೆ ತಂದೆಯವರ ಹತ್ತಿರ ಹೇಳಿದನು. ಹೀಗೆ ಏಕಾದಶೀ ವ್ರತದಲ್ಲಿ ಧರ್ಮಾಂಗದನಿಗೆ ಅತ್ಯಾದರವಿದ್ದುದರಿಂದ ಪರವಾದರಾಖ್ಯ ಪುಣ್ಯವನ್ನು ಮಾಡಿರುವುದರಿಂದ ತಾಯಿಯಿಂದಲೂ ತಂದೆಯಿಂದಲೂ ಕೂಡಿಕೊಂಡೇ ಸಂತುಷ್ಟನಾದ ಶ್ರೀಹರಿಯಿಂದ ಕಳುಹಿಸಿಕೊಳ್ಳಲ್ಪಟ್ಟ ವಿವಾನದಲ್ಲಿ ಕೂತುಕೊಂಡೇ ಹೇಗೆ ವೈಕುಂಠಕ್ಕೆ ಹೋಗಿರುವನೋ, ಹಾಗೆಯೇ ಸದ್ಗತಿಯನ್ನು ಹೊಂದಿರುವರು. ॥ ೧೮ ॥

ಮೂ ॥ ತದಾ ಕಲಿಶ್ಚ ರಾಕ್ಷಸಾ ಬಭೂವುರಿಂದ್ರಜಿನ್ಮುಖಾಃ ।
ವಿಚಿತ್ರವೀರ್ಯನಂದನಪ್ರಿಯೋದರೇ ಹಿ ಗರ್ಭಗಾಃ ॥ ೧೯ ॥

ಅ ॥ ಆ ಕಾಲದಲ್ಲಿ ಕಲಿಯೂ ಇಂದ್ರಜಿತೇ ಮೊದಲಾಗಿವುಳ್ಳ ರಾಕ್ಷಸರೂ ಕೂಡ ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನ ಹೆಂಡತಿಯಾದ ಗಾಂಧಾರಿಯ ಗರ್ಭಸ್ಥಾನವನ್ನು ಹೊಂದಿದವರು ಅದರು. ॥ ೧೯ ॥

ಮೂ ॥ ತದಾಸ್ಯ ಸೋಽನುಜೋಽಶೃಣೋನ್ಮುನೀಂದ್ರಭಾಷಿತಂ ಚ ತತ್ ।
ವಿಚಾರ್ಯ ಚ ಪ್ರಿಯಾವಿದಂ ಜಗಾದ ವಾಸುದೇವಧೀಃ ॥ ೨೦ ॥

ಅ ॥ ಆಗ ಧೃತರಾಷ್ಟ್ರನ ತಮ್ಮನಾದ ಆ ಪಾಂಡುಚಕ್ರವರ್ತಿಯು (ಹಸ್ತಿನಾವತೀ ಪಟ್ಟಣದಿಂದ ಬಂದಿರುವ) ಋಷಿಶ್ರೇಷ್ಠರಿಂದ ಹೇಳಲ್ಪಟ್ಟ ಗಾಂಧಾರಿಯಲ್ಲಿ ಗರ್ಭಪ್ರಾಪ್ತಿಯನ್ನು ಕೇಳಿದನು. ವಾಸುದೇವನಲ್ಲಿ ಬುದ್ಧಿಯಿರುವ ಪಾಂಡುಚಕ್ರವರ್ತಿಯು ವಿಚಾರ ಮಾಡಿ ಹೆಂಡತಿಯಾದ ಕುಂತಿಯನ್ನು ಕುರಿತು ಹೇಳಿದನು.

ವಿಶೇಷಾಂಶ—ಪುತ್ರರನ್ನು ಹುಟ್ಟಿಸುವುದು ಶ್ರೀಹರಿಯ ಸೇವೆಯೇ ಎಂದು ಬುದ್ಧಿಯುಳ್ಳ ಪಾಂಡುಚಕ್ರವರ್ತಿಯು 'ಬ್ರಹ್ಮನ ಸಭೆಯನ್ನು ಕುರಿತು ಹೋಗಬೇಡ. ಪುತ್ರೋತ್ಪತ್ತಿಗಾಗಿ ನಿಯೋಗಾದಿಗಳನ್ನು ಮಾಡದೆ ಸದ್ಗತಿಯಾಗಲಾರದು.' ಎಂದು ಋಷಿಗಳು ಹೇಳಿದ ಮಾತನ್ನು ತಾನೂ ಚೆನ್ನಾಗಿ ವಿಚಾರಮಾಡಿ ತನ್ನ ಪ್ರಿಯೆಯ ಹತ್ತಿರ ಋಷಿಗಳು ಹೇಳಿದ ಮಾತನ್ನು ಹೇಳಿದನು. ॥ ೨೦ ॥

ಮೂ ॥ ಯ ಏವ ಮದ್ಗುಣಾಧಿಕಸ್ತತಃ ಸುತಂ ಸಮಾಪ್ನುಹಿ ।
ಸುತಂ ವಿನಾ ನ ನೋ ಗತಿಂ ಶುಭಾಂ ವದಂತಿ ಸಾಧವಃ ॥ ೨೧ ॥

ಅ॥ ಯಾರು ನನ್ನಿಂದ ಸದ್ಗುಣಗಳಿಂದ ಅಧಿಕನಾಗಿರುತ್ತಾನೋ ಅತನಿಂದಲೇ ಪುತ್ರನನ್ನು ಹೊಂದು. ಮಂಗವನ್ನು ಹೊರತು ನಮಗೆ ಸದ್ಗತಿಯನ್ನು ಸವಿಶಾಚೀನರಾದ ಮುನೀಂದ್ರರು ಹೇಳುವುದಿಲ್ಲ. ॥ ೨೧ ॥

ಮೂ ॥ ತದಸ್ಯ ಕೃಚ್ಛ್ರತೋ ವಚಃ ಪ್ರಥಾಗ್ರಹೀಜ್ಜಗಾದ ಚ ।
ಮವಾಸ್ತಿ ದೇವವಶ್ಯದೋ ಮನೂತ್ತಮಃ ಸುತಾಪ್ತಿದಃ ॥ ೨೨ ॥

ಅ ॥ ಕುಂತೀದೇವಿಯು ಈ ಪಾಂಡುರಾಜನ ಆ ಮಾತನ್ನು ಬಹು ಕಷ್ಟದಿಂದ ಸ್ವೀಕರಿಸಿದಳು. ಮುಂತ್ರ ಕುಂತಿಯು ನನಗೆ ದೇವತೆಗಳ ವಶತ್ವವನ್ನು ಕೊಡತಕ್ಕ, (ಅಂದರೆ ದೇವತೆಗಳನ್ನು ವಶೀಕರಿಸತಕ್ಕ) ಪುತ್ರರ ಪ್ರಾಪ್ತಿಯನ್ನು ಕೊಡತಕ್ಕ ಅತ್ಯುತ್ತಮವಾದ ಮುಂತ್ರವು ಇದೆ, ಎಂದೂ ಹೇಳಿದಳು. ॥ ೨೨ ॥

ಮೂ ॥ ನ ತೇ ಸುರಾನೃತೇ ಸಮಃ ಸುರೇಷು ಕೇಚಿದೇವ ಚ ।
ಅತಸ್ತವಾಧಿಕಂ ಸುರಂ ಕ್ಷಮಾಹ್ವಯೇತ್ವದಾಜ್ಞಯಾ ॥ ೨೩ ॥

ಅ ॥ ದೇವತೆಗಳನ್ನು ಹೊರತು ನಿನಗೆ ಸವಾನಿಕನು ಇಲ್ಲ. ದೇವತೆಗಳಲ್ಲಿಯೂ ಕೆಲವರೇ ಸವಾನಿಕರು ಇರುತ್ತಾರೆ. ಅಧಿಕರೂ ಇದ್ದೇ ಇದ್ದಾರೆ. ಆದುದರಿಂದ ದೇವತೆಗಳನ್ನು ವಶೀಕರಿಸತಕ್ಕ ಉತ್ತಮ ಮಂತ್ರವಿದ್ದಪ್ರಯುಂಕ್ತನಿವ್ಮ ಸಕಾಶದಿಂದ ಅಧಿಕನಾದ ಯಾವ ದೇವತೆಯನ್ನು (ಕರೆಯಲಿಕ್ಕೆ ಆಜ್ಞೆಯನ್ನು ಕೊಡುತ್ತೀಯೋ ಆತನನ್ನು) ನಿವ್ಮ ಅಪ್ಪಣೆಯಿಂದ ಕರೆಯುವೆನು. ॥ ೨೩ ॥

ಅತಸ್ತವಾಧಿಕಂ ಸುರಂ ಕವಾಹ್ವಯೇ ಎಂದು ಹೇಳಿದ್ದಕ್ಕೆ ಹೇತುವನ್ನು ವಿಶದೀಕರಿಸುತ್ತಾರೆ—

ಮೂ ॥ ವರಂ ಸವಾಶ್ರಿತಾ ಪತಿಂ ವ್ರಜೇತ ಯಾ ತತೋಽಧಮಂ ।
ನ ಕಾಚಿದಸ್ತಿ ನಿಷ್ಕೃತಿರ್ನ ಭರ್ತೃಲೋಕಮೃಚ್ಛತಿ ॥ ೨೪ ॥

ಅ ॥ ಯಾರು ಉತ್ಕೃಷ್ಟನಾದ ಪತಿಯನ್ನು ಆಶ್ರಯಿಸಿದವಳಾಗಿ ಗಂಡನಿಗಿಂತ ನೀಚನಾದ ಪುರುಷನನ್ನು (ನೀಚ ಪುರುಷನ ಸಂಗವನ್ನು) ಹೊಂದುವಳೋ, (ಆವಳಿಗೆ) ಯಾವ ಪ್ರಾಯಶ್ಚಿತ್ತವೂ ಇಲ್ಲ. ಆವಳು ಗಂಡನು ಹೊಂದಿದ ಲೋಕವನ್ನು ಹೊಂದುವುದಿಲ್ಲ ॥ ೨೪ ॥

ಹಾಗಾದರೆ ಉತ್ಕೃಷ್ಟನಾದ ಪತಿಯನ್ನು ಆಶ್ರಯಿಸಿರತಕ್ಕ ದೇವಸ್ತ್ರೀಯರಿಗೆ ಅವರನಾದ ಪತಿಯು ಪ್ರಾಪ್ತಿಯೂ ಕಂಡು ಬರುವುದರಿಂದ ಹಿಂದೆ ಹೇಳಿದ ದೋಷೋಕ್ತಿಯು ಹೇಗೆ ಕೂಡುತ್ತದೆ, ಎಂದಾಶಂಕಿಸಿದರೆ ದೇವಸ್ತ್ರಿಯರಿಗೆ ಅವರನಾದ ಪತಿಯು ಪ್ರಾಪ್ತಿ ದರ್ಶನವು ಕೃತಯುಗದಲ್ಲಿಯೋ ಅಥವಾ ಕೃತಯುಗದ ಅಂತ್ಯದಲ್ಲಿಯೋ, ಎಂದಾಶಂಕಿಸಿಕೊಂಡು ಒಂದನೇದ್ದನ್ನು ನಿಷೇಧಿಸುತ್ತಾರೆ—

ಮೂ ॥ ಕೃತೇ ಪುರಾ ಸುರಾಸ್ತ್ರಿಯಾ ಸುರಾಂಗನಾಶ್ಚ ಕೇವಲಂ ।
ನಿಮಿತ್ತತೋಽಪಿ ತಾಃ ಕ್ವಚಿನ್ನ ತಾನ್ವಿಹಾಯ ರೇಮಿರೇ ॥ ೨೫ ॥

ಅ ॥ ಮೊದಲು ಕೃತಯುಗದಲ್ಲಿ ದೇವತೆಗಳು ಯಾವುದಾದರೊಂದು ಕಾರಣದಿಂದ ಕೆಲವು ಕಡೆ ಅವರನ್ನು (ಅಂದರೆ ನಿಯಂತರಾದ ತಮ್ಮ ತಮ್ಮ ಸ್ತ್ರೀಯರನ್ನು) ಬಿಟ್ಟು (ಅನಿಯಂತರಾದ ಸ್ತ್ರೀಯರನ್ನು) ಕ್ರೀಡಿಸುತ್ತಾ ಇದ್ದರು. ಹಾಗೆಯೇ ದೇವತೆಗಳ ನಿಯಂತ ಸ್ತ್ರೀಯರು ಯಾವ ಕಾರಣದಿಂದಲೂ ಎಲ್ಲಿಯೂ ಅವರನ್ನು (ಅಂದರೆ ತಮ್ಮ ತಮ್ಮ ನಿಯಂತ ಪತಿಗಳನ್ನು) ಬಿಟ್ಟು (ಪರಪುರುಷರನ್ನು) ಕ್ರೀಡಿಸುವುದಿಲ್ಲ. ॥ ೨೫ ॥

ಮೂ ॥ ಮನೋವಚಶ್ಶರೀರತೋ ಯತೋ ಹಿ ತಾಃ ಪತಿವ್ರತಾಃ ।
ಅನಾದಿಕಾಲತೋಽಭವಂಸ್ತತಃ ಸಭರ್ತೃಕಾಃ ಸದಾ ॥ ೨೬ ॥

ಅ ॥ ಆ ಸುರಾಂಗನೆಯರು ಅನಾದಿಕಾಲದಿಂದ ಮನಸ್ಸು ವಚನ ಶರೀರಗಳಿಂದ ಯಾವ ಕಾರಣದಿಂದ ಪತಿಯಲ್ಲಿಯೇ ಆಸಕ್ತರಾಗಿರುವರೋ, ಆ ಕಾರಣದಿಂದ ಯಾವಾಗಲೂ ಭರ್ತೃಗಳಿಂದ ಕೂಡಿದವರು ಆದರು, ಶ್ರುತ್ಯಾದಿ ಪ್ರಸಿದ್ಧವು. ॥ ೨೬ ॥

ಮೂ ॥ ಸ್ವಭರ್ತೃಭಿರ್ವಿಮುಕ್ತಿಗಾಃ ಸಹೈವ ತಾ ಭವಂತಿ ಹಿ ।
ಕೃತಾಂತವಾಪ್ಯ ಚಾಪ್ಸರಃಸ್ತ್ರಿಯೋ ಬಭೂವುರೂರ್ಜಿತಾಃ ॥ ೨೭ ॥

ಅ ॥ ಆ ದೇವಾಂಗನೆಯಂರು ತಮ್ಮ ತಮ್ಮ ಭರ್ತೃಗಳಿಂದ ಕೂಡಿಕೊಂಡೇ ಮೋಕ್ಷವನ್ನು ಹೊಂದುವವರು ಆಗುತ್ತಾರೆ. (ಹೀಗಾದರೆ ದೇವತೆಗಳಿಗೆ ಉರ್ವಶ್ಯಾದಿಗಳ ಭೋಗವು ಹೇಗೆ ಕೂಡುತ್ತದೆ ಎಂದಾಶಂಕಿಸಿದರೆ–) ಕೃತಯುಗದ ಪೂರ್ತಿಯನ್ನು ಹೊಂದಿ (ಅಂದರೆ ಕೃತಯುಗಾನಂತರದಲ್ಲಿ) ಉತ್ಕೃಷ್ಟರಾದ ಬಹುಸಂಖ್ಯಾತ ಸ್ತ್ರೀಯಂರು ಅಪ್ಸರಃಸ್ತ್ರೀಯಂರು (ಅಂದರೆ ಭೋಗಾಂಗನೆಯಂರು) ಆದರಂ. ॥ ೨೭ ॥

ಮೂ ॥ ಅನಾವೃತಾಶ್ಚ ತಾಸ್ತಥಾ ಯಥೇಷ್ಟಭರ್ತೃಕಾಃ ಸದಾ ।
ಅತಸ್ತು ತಾ ನ ಭರ್ತೃಭಿರ್ವಿಮುಕ್ತಿಮಾಪುರುತ್ತಮಾಂ ॥ ೨೮ ॥

ಅ ॥ (ಯಾವ ಕಾರಣದಿಂದ) ಆ ಅಪ್ಸರಃ ಸ್ತ್ರೀಯಂರು ಪಾಣಿಗ್ರಹಣ ಧರ್ಮದಿಂದ ಸ್ವೀಕರಿಸಲ್ಪಡಲಿಲ್ಲವೋ ಅಥವಾ ನಾಚಿಗೆಯಿಲ್ಲದಿರುವವರೋ ಹಾಗೆಯೇ ನಿತ್ಯದಲ್ಲಿಯಂೂ ಬಹು ಭರ್ತೃಗಳುಳ್ಳವರೋ ಅಥವಾ ತಮ್ಮ ಮನಸ್ಸಿಗೆ ಅಭೀಷ್ಟರಾದ ಭರ್ತೃಗಳುಳ್ಳವರೋ ಆದ ಕಾರಣ ಆ ಅಪ್ಸರಃಸ್ತ್ರೀಯಂರು ಭರ್ತೃಗಳಿಂದ (ಕೂಡಿಕೊಂಡೂ) ಉತ್ತಮವಾದ ವಿಮುಂಕ್ತಿಯನ್ನು ಹೊಂದಲಿಲ್ಲ.

ವಿಶೇಷಾಂಶ—ನಿಯತ ಭರ್ತೃಗಳುಳ್ಳ ಶಚ್ಯಾದಿ ಸ್ತ್ರೀಯಂರಂತೆ ಯಾವನೊಬ್ಬ ತನ್ನ ಗಂಡನನ್ನು ಮುಂದೆ ಮಾಡಿಕೊಂಡೂ ಆತನಿಂದ ಕೂಡಿಕೊಂಡೂ ಮುಂಕ್ತಿಯನ್ನು ಅಪ್ಸರಃಸ್ತ್ರೀಯಂರೂ ಹೊಂದಲಾರರು ಮತ್ತೆ ಮುಂಕ್ತಿಯಲ್ಲಿಯಂೂ ದೇವತೆಗಳಿಲ್ಲರೂ ಜಾರರೇ, ಭರ್ತೃಗಳಲ್ಲ. ಶಾವಾದರೂ ಸ್ವೇಚ್ಛಾನುಸಾರವಾಗಿ ಇರುವವರು. ಏಕೆಂದರೆ ಚತುರ್ಮುಖ ಬ್ರಹ್ಮನ ಸಂಗಡವೇ ಅವರಿಗೂ ಮುಂಕ್ತಿಯಾಗಿದೆ. ॥ ೨೮ ॥

ಹಾಗಾದರೆ ನಿಯತಾಂಗನೆಯಂರಾದ ತಾರಾದಿಗಳಿಗೆ ವ್ಯಭಿಚಾರ ಪ್ರಸಂಗವು ಕೃತಯುಗಾಂತ್ಯದಲ್ಲಿ ಹೇಗೆ ಎನ್ನುವ ಎರಡನೇ ಪಕ್ಷವನ್ನು ಆಶಂಕಿಸಿಕೊಂಡೂ ಹೇಳುತ್ತಾರೆ—

ಮೂ ॥ ಸುರಸ್ತ್ರಿಯೋಽತಿಕಾರಣೈರ್ಯದಾನ್ಯಥಾ ಸ್ಥಿತಾಃ ಸದಾ ।
ದುರನ್ವಯಾ ಸುದುಸ್ಸಹಾ ವಿಪತ್ತತೋ ಭವಿಷ್ಯತಿ ॥ ೨೯ ॥

ಅ ॥ ಯಾವಾಗ ನಿಯಂತರಾದ ದೇವಸ್ತ್ರೀಯರೂ ತಮ್ಮ ತಮ್ಮ ಪತಿಗಳನ್ನು ಅತಿಕ್ರಮಿಸಿ ಪ್ರಬಲ ಕಾರಣಗಳಿಂದಲೂ ಯಜ್ಞವಾಗಲೂ ಪರಪುರುಷ ಸಂಯೋಗದಿಂದ ಇರುತ್ತಾರೋ, (ಆಗ) ದುಃಖಿಪ್ರದವಾದ ಸಂಬಂಧವುಳ್ಳ ಅಥವಾ ಬಹುಕಾಲದಲ್ಲಿ ಭರ್ತೃಸಂಬಂಧವಿಲ್ಲದಿರುವ ಅತ್ಯಂತವಾಗಿ ಸಹಿಸಲಿಕ್ಕೆ ಅಶಕ್ಯವಾದ ಆಪತ್ತು, (ತತಃ =) ತಮಗೆ ಯೋಗ್ಯವಾದ ಪಾತಿವ್ರತ್ಯದ ಭಂಗದಿಂದುಂಟಾದ ಪಾಪದ್ದೆಸೆಯಿಂದ, ಉಂಟಾಗುವುದು.

ವಿಶೇಷಾಂಶ—ಆದುದರಿಂದ ನಿಯಂತರಾದ ದೇವಸ್ತ್ರೀಯರಿಗೂ ತಮ್ಮ ತಮ್ಮ ಪತಿಗಳದೆಸೆಯಿಂದ ಅಧಿಕನಾದ ಪುರುಷನನ್ನು ಪರಿಗ್ರಹಿಸಿದರೆ ಪರಲೋಕಕ್ಕೆ ವಿರೋಧಿಯಾದ ಪಾಪವು ಇಲ್ಲದಿದ್ದರೂ ಐಹಿಕ ದುಃಖವನ್ನು ಕೊಡತಕ್ಕ ಪಾಪವು ಗಂಡನಿಗೂ, ಮಕ್ಕಳಿಗೂ, ತಾಯಿಗೂ ಬರುತ್ತದೆ. ॥ ೨೯ ॥

ಮೂ ॥ ಅಯುಕ್ತಮುಕ್ತವಾಂಸ್ತತೋ ಭವಾಂಸ್ತಥಾಪಿ ತೇ ವಚಃ।
ಅಲಂಘ್ಯಮೇವ ಮೇ ತತೋ ವದಸ್ವ ಪುತ್ರದಂ ಸುರಂ ॥ ೩೦ ॥

ಅ ॥ ಆ ಕಾರಣದಿಂದ ತಾವು ಯಾದ್ಯಪಿ ಆಯುಃಕ್ಷವಾದ ವಹಾತನ್ನು ಹೇಳಿರುವಿರಿ. ಆದಾಗ್ಯೂ ನಿಮ್ಮ ಮಾತು ನನ್ನಿಂದ ಉಲ್ಲಂಘಿಸಲಿಕ್ಕೆ ಅಶಕ್ಯವೇ ಆಗಿದೆ. ಆದಕಾರಣ ಪುತ್ರನನ್ನು ಕೊಡತಕ್ಕ ದೇವತೆಯನ್ನು ಹೇಳಿ. ॥ ೩೦ ॥

ಮೂ ॥ ಇತೀರಿತೋಽಬ್ರವೀನ್ನೃಪೋ ನ ಧರ್ಮತೋ ವಿನಾ ಭುವಃ ।
ನೃಪೋಽಭಿರಕ್ಷಿತಾ ಭವೇತ್ತದಾಹ್ವಯಾಶು ತಂ ವಿಭುಂ ॥ ೩೧ ॥

ಅ ॥ ಈ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟ ಪಾಂಡುರಾಜನು ಹೇಳಿದನು. ರಾಜನು ಧರ್ಮವನ್ನು ಹೊರತು ಭೂಮಿಯನ್ನು ರಕ್ಷಿಸತಕ್ಕವನು ಯಾವ ಕಾರಣದಿಂದ ಆಗಲಾರನೋ ಆ ಕಾರಣದಿಂದ ಧರ್ಮಾತ್ಮಕನಾದ (ಪುತ್ರೋತ್ಪತ್ತಿಯನ್ನು ಮಾಡುವುದರಲ್ಲಿ) ಸಮರ್ಥನಾದ ದೇವತೆಯನ್ನು ಶೀಘ್ರದಲ್ಲಿ ಕರೆ. ॥ ೩೧ ॥

ಮೂ ॥ ಸ ಧರ್ಮಜಃ ಸುಧಾರ್ಮಿಕೋ ಭವೇದ್ಧಿ ಸೂನುರುತ್ತಮಃ।
ಇತೀರಿತೇ ತಯಾ ಯಮೌ ಸಮಾಹುತೋಽಗಮದ್ರುತಂ ॥ ೩೨ ॥

ಅ ॥ ಯಮನಿಂದ ಹುಟ್ಟಿರುವ ಆ ಉತ್ತಮನಾದ ಪುತ್ರನು ಅತಿ ಧಾರ್ಮಿಕನು ಆಗುವನು. ಪ್ರಸಿದ್ಧವು. ಈ ಪ್ರಕಾರವಾಗಿ (ರಾಜನಿಂದ) ಹೇಳಲ್ಪಡುತ್ತಿರಲು ಆ ಕುಂತಿಯಿಂದ, ಬಾ ಎಂದು ಚೆನ್ನಾಗಿ ವಚನವನ್ನು ಹೇಳಿ ಮಂತ್ರದಿಂದ ಕರಿಸಲ್ಪಟ್ಟ ಯಮನು ಶೀಘ್ರದಲ್ಲಿ ಬಂದನು.

ವಿಶೇಷಾಂಶ—ಸಂವತ್ಸರೇ ಧೃತೇ ಗರ್ಭೇ ಗಾಂಧಾರ್ಯಾ ಜನಮೇಜಯ ।
ಆಹ್ವಯಾ ವಾಸ ವೈ ಕುಂತೀ ಗರ್ಭಾರ್ಥೇ ಧರ್ಮಮುಚ್ಯತಂ ॥ ಎಂದು ಆದಿ ಪರ್ವತದಲ್ಲಿ ಹೇಳಿದ ಪ್ರಕಾರ ಗಾಂಧಾರಿಯು ಗರ್ಭಕ್ಕೆ ಒಂದು ಸಂವತ್ಸರವಾದ ಮೇಲೆ ಕುಂತಿಯು ಯುಧರ್ಮರಾಜನನ್ನು ಕರೆದಳು. ॥ ೩೨ ॥

ಮೂ ॥ ತತಶ್ಚ (ಸ್ತು) ಸದ್ಯ ಏವ ಸಾ ಸುಷಾವ ಪುತ್ರಮುತ್ತಮಂ ।
ಯುಧಿಷ್ಠಿರಂ ಯಮೋ ಹಿ ಸ ಪ್ರಪೇದ ಆತ್ಮ ಪುತ್ರತಾಂ ॥ ೩೩ ॥

ಅ ॥ ಆ ಕುಂತೀದೇವಿಯು ತತ್‌ಕ್ಷಣದಲ್ಲಿಯೇ ಆ ಯಮನನ್ನು ಯುಧಿಷ್ಠಿರನಾಮಕನಾದ ಉತ್ತಮ ಪುತ್ರನನ್ನು ಹಡೆದಳು. ಯಾವ ಕಾರಣದಿಂದ ಆ ಯುಧಿಷ್ಠಿರನು ಯಮನನ್ನೇ, (ಆದಕಾರಣ) ತಾನೇ ಪುತ್ರತ್ವವನ್ನು ಹೊಂದಿದನು. ॥ ೩೩ ॥

ಮೂ ॥ ಯಮೇ ಸುತೇ ತು ಕುಂತಿತಃ ಪ್ರಜಾತ ಏವ ಸೌಬಲೀ ।
ಅದಹ್ಯತೇರ್ಷ್ಯಯಾ ಚಿರಂ ಬಭಂಜ ಗರ್ಭಮೇವ ಚ ॥ ೩೪ ॥

ಅ ॥ ಕುಂತಿಯಂದೆಸೆಯಿಂದ ಯುವಾತ್ಮಕನಾದ ಯಮನು ಹುಟ್ಟುತ್ತಿರಲು (ಅಂದರೆ ಕುಂತಿಗೆ ಪುತ್ರೋತ್ಪತ್ತಿಯು ಆಯಿತು ಎಂದು ಕೇಳಿದೊಡನೆಯೇ) ಗಾಂಧಾರಿಯು (ನನ್ನಕ್ಕಿಂತ ಮೊದಲೇ ಕುಂತೀದೇವಿಗೆ ಯಮನು ಹುಟ್ಟಿದನು ಎನ್ನುವ) ಮಾತ್ಸರ್ಯದಿಂದ ಸುಡಿಸಿಕೊಳ್ಳಲ್ಪಟ್ಟಳು. (ಅಂದರೆ ದುಃಖಾಗ್ನಿಯಿಂದ ತನ್ನನ್ನು ಸುಡಿಸಿಕೊಂದಳು.) (ಅದನ್ನೇ ತೋರಿಸುತ್ತಾರೆ-) ತತ್‌ಕ್ಷಣದಿಂದಲೇ ತನ್ನ ಗರ್ಭವನ್ನು ಪುನರಿದುಕೊಂಡಳು. (ಅಂದರೆ ಗರ್ಭಪಾತವು ಹೇಗೆ ಆದೀತೋ ಹಾಗೆಯೇ ವಂಚಿಪ್ಪಿಯಿಂದ ಹೊಡೆದುಕೊಂಡಳು.) ॥ ೩೪ ॥

ಮೂ ॥ ಸ್ವಗರ್ಭಪಾತನೇ ಕೃತೇ ತಯಾ ಜಗಾಮ ಕೇಶವಃ ।
ಪರಾಶರಾತ್ಮಜೋ ನ್ಯಧಾದ್ಘಟೇಷು ತಾನ್ವಿಭಾಗಶಃ ॥ ೫೫ ॥

ಅ ॥ ಆ ಗಾಂಧಾರಿಯಿಂದ ತನ್ನ ಗರ್ಭಪಾತವು ಮಾಡಲ್ಪಡುತ್ತಿರಲು ಪರಾಶರರ ಪುತ್ರರಾದ ವೇದವ್ಯಾಸರು ಹೋದರು. ಮಾಂಸಖಂಡದಲ್ಲಿರತಕ್ಕ ಜಂತುಗಳನ್ನು ಅಂಗುಷ್ಟಪರ್ವ ವಾಕ್ಯ ದಿಂದ ನೂರ ಒಂದು (೧೦೧) ವಿಭಾಗಮಾಡಿ ಘಟಗಳಲ್ಲಿ ಸ್ಥಾಪಿಸಿದರು.

ವಿಶೇಷಾಂಶ—ಅಂಗುಷ್ಠಪರ್ವಮಾತ್ರಾಣಾಂ ಭಾಗಾನಾಂ ಪೃಥಗೇವ ತು। ಏಕ ಧಿಕಂ ಶತಂ ಪೂರ್ಣಂ ಯಥಾಯೋಗವಿಶೇಷತಃ । ಮಾಂಸಪೇಶ್ಯಾಸ್ತತೋರಾಜನ್ ಇತ್ಯಾದಿ ಆದಿ ಪರ್ವ ವಾಕ್ಯದ್ವೆಸೆಯಿಂದ ಈ ಅರ್ಥವನ್ನು ತಿಳಿಯಬೇಕು. ॥ ೫೫ ॥

ಮೂ ॥ ಶತಾತ್ಮನಾ ವಿಭೇದಿತಾಃ ಶತಂ ಸುಯೋಧನಾದಯಃ ।
ಬಭೂವುರನ್ವಹಂ ತತಃ ಶತೋತ್ತರಾ ಚ ದುಶ್ಶಲಾ ॥ ೫೬ ॥

ಅ ॥ ನೂರು ಪ್ರಕಾರವಾಗಿ ವಿಭಾಗವನ್ನು ಹೊಂದಿಸಿಕೊಳ್ಳಲ್ಪಟ್ಟ ಸುಯೋಧನನೇ ಮೊದಲಾದ ನೂರು (೧೦೦) ಮಂದಿಯು ಪ್ರತಿ ದಿನದಲ್ಲಿಯೂ ಘಟಗಳ ದೆಸೆಯಿಂದ ಹುಟ್ಟಿ ದರು. ಶತಭಾಗಗಳದೆಸೆಯಿಂದ ಅಧಿಕವಾದ ಅವಶಿಷ್ಟವಾದ (ಯಾವ ಮಾಂಸಖಂಡವೋ) ಅದರ ಸಕಾಶದಿಂದ ದುಃಶಲಾನಾಮಕಳಾದ ಕನ್ನಿಕೆಯು ಹುಟ್ಟಿದಳು. ॥ ೫೬ ॥

ಮೂ ॥ ಸ ದೇವಕಾರ್ಯಸಿದ್ಧಯೇ ರರಕ್ಷ ಗರ್ಭವಿಶ್ವರಃ ।
ಪರಾಶರಾತ್ಮ ಜೋ ವಿಭುರ್ವಿಚಿತ್ರವೀರ್ಯಜೋದ್ಭವಂ ॥ ೫೭ ॥

ಅ ॥ ಸರ್ವನಿಯಾಮಕರಾದ ಸರ್ವಸಮರ್ಥರಾದ ಪರಾಶರ ಪುತ್ರರಾದ ಆ ವೇದ ವ್ಯಾಸರು ವಿಚಿತ್ರವೀರ್ಯನಿಂದ ಹುಟ್ಟಿರುವ ಧೃತರಾಷ್ಟ್ರನಿಂದ ಉತ್ಪತ್ತಿಯಾಗಿ ಗರ್ಭವನ್ನು ರಕ್ಷಿಸಿದನು. ॥ ೫೭ ॥

ಮೂ ॥ ಕಲಿಃ ಸುಯೋಧನೋಽಜನಿ ಪ್ರಭೂತಬಾಹುವೀರ್ಯಯುಕ್ ।
ಪ್ರಧಾನವಾಯುಸನ್ನಿಧೇರ್ಬಲಾಧಿಕತ್ವಮಸ್ಯ ತತ್ ॥ ೫೮ ॥

ಅ ॥ ಕಲಿಯು ಉತ್ಕೃಷ್ಟವಾದ ಭುಜಪರಾಕ್ರಮದಿಂದ ಕೂಡಿದವನಾಗಿ ಸುಯೋಧನ ನಾಮಕನಾಗಿ ಹುಟ್ಟಿದನು. ಈ ಸುಯೋಧನನಿಗೆ ಆ ಪೂರ್ವೋಕ್ತವಾದ ಬಲಾಧಿಕ್ಯವು ಮುಖ್ಯ ಪ್ರಾಣನ ಸನ್ನಿಧಾನ ನಿಮಿತ್ತದಿಂದ. ॥ ೫೮ ॥

ವಿಶಿಷ್ಟ ಬಲವುಳ್ಳ ಕಲಿಯು ಹುಟ್ಟಲಿಕ್ಕೆ ಕಾರಣವನ್ನು ಹೇಳುತ್ತಾರೆ—

ಮೂ ॥ ಪುರಾ ಹಿ ಮೇರುಮೂರ್ಧನಿ ತ್ರಿನಿಷ್ಟಪೌಕಸಾಂ ವಚಃ ।
ವಸುಂಧರಾತಲೋದ್ಭವೋನ್ಮುಖಂ ಶ್ರುತಂ ದಿತೇಃ ಸುತೈಃ ॥ ೫೯ ॥

ಅ ॥ ಮೊದಲು ಮೇರುಪರ್ವತದ ಮೇಲಿನ ಭಾಗದಲ್ಲಿ, ಭೂತಳದಲ್ಲಿ ಹುಟ್ಟುವುದಕ್ಕಾಗಿ ಉದ್ಯುಕ್ತವಾದ ಸ್ವರ್ಗದಲ್ಲಿ ಮಂದಿರವುಳ್ಳ ದೇವತೆಗಳ ಮಾತು ದೈತ್ಯರಿಂದ ಕೇಳಲ್ಪಟ್ಟಿತು. ॥೫೯॥

ಮೂ ॥ ತತಸ್ತು ತೇ ತ್ರಿಲೋಚನಂ ತಪೋಬಲಾದತೋಷಯನ್ ।
ವೃತಶ್ಚ ದೇವಕಂಟಕೋ ಹ್ಯವದ್ಯ ಏವ ಸರ್ವತಃ ॥ ೪೦ ॥

ಅ ॥ ಆಮೇಲೆ ಆ ದೈತ್ಯರು ತಪಸ್ಸಿನ ಸಾಮರ್ಥ್ಯದ್ದೆಸೆಯಿಂದ ರುದ್ರನನ್ನು ಸಂತೋಷೀಕರಿಸಿದರು. ದೇವತೆಗಳಿಗೆ ದ್ವೇಶಿಯಾದ ಕಲಿಯು ಸರ್ವರಿಂದಲೂ ಸಂಹರಿಸಿಕೊಳ್ಳಲ್ಪಡದಿರುವ ವನು (ಆಗಲಿ, ಎನ್ನುವ ವರವು ಸಂತುಷ್ಟನಾದ ರುದ್ರನದೆಸೆಯಿಂದ, ಎಲ್ಲಾ ಅಸುರರಿಂದಲೂ) ಅಂಗೀಕೃತವಾಯಿತು.

ವಿಶೇಷಾಂಶ— ಕಲಿಯು ದೈತ್ಯರ ಸಮೂಹದಾಯಂಗಳಿಗೆ ಅಗ್ರೇಸರನಾಗಿರುವುದರಿಂದ ದೈತ್ಯರು ತಾವೇ ತಪಸ್ಸನ್ನು ಮಾಡಿ ಕಲಿಯು ಶ್ರೇಯಸ್ಸನ್ನೇ ಪ್ರಾರ್ಥಿಸಿಕೊಂಡರು. ॥ ೪೦ ॥

ಮೂ ॥ ವರಾದುವಾಪತೇಸ್ತತಃ ಕಲಿಃ ಸ ದೇವಕಂಟಕಃ ।
ಬಭೂವ ವಜ್ರಕಾಯಯುಕ್ಸ್ಸಯೋಧನೋ ಮಹಾಬಲಃ ॥ ೪೧ ॥

ಅ ॥ ಆಮೇಲೆ ರುದ್ರನ ವರದ್ದೆಸೆಯಿಂದ ದೇವತೆಗಳಿಗೆ ದ್ವೇಷಿಯಾದ ಮಹಾಪರಾಕ್ರಮಶಾಲಿಯಾದ ಆ ಕಲಿಯು ವಜ್ರದಂತೆ ಕಠಿಣವಾದ ದೇಹದಿಂದ ಕೂಡಿದವನಾಗಿ (ಅಂದರೆ ಸರ್ವರಿಂದಲೂ ಅವಧ್ಯನಾಗಿ) ಸುಯೋಧನ (ದುರ್ಯೋಧನ) ನಾಮಕನಾಗಿ ಆದನು. ॥ ೪೧ ॥

ಮೂ ॥ ಅವಧ್ಯ ಏವ ಸರ್ವತಃ ಸುಯೋಧನೇ ಸಮುಸ್ಥಿತೇ ।
ಘೃತಾಭಿಪೂರ್ಣಕುಂಭತಃ ಸ ಇಂದ್ರಜಿತ್ ಸಮುಸ್ಥಿತಃ ॥ ೪೨ ॥

ಅ ॥ ಘೃತದಿಂದ ತುಂಬಿದ ಘಟದ್ದೆಸೆಯಿಂದ ಸರ್ವರಿಂದಲೂ ಅವಧ್ಯನೇ ಆದ ಸುಯೋಧನನು ಹುಟ್ಟುತ್ತಿರಲು ಘೃತದಿಂದ ತುಂಬಿದ ಘಟದ್ದೆಸೆಯಿಂದ ರಾವಣಪುತ್ರನೆಂದು ಪ್ರಸಿದ್ಧನಾದ ಇಂದ್ರಜಿತ್ ಎನ್ನುವ ರಾಕ್ಷಸನು ಹುಟ್ಟಿದನು. ॥ ೪೨ ॥

ಮೂ ॥ ಸ ದುಃಖಶಾಸನೋಽಭವತ್ತತೋಽತಿಕಾಯಸಂಭವಃ ।
ಸ ವೈ ವಿಕರ್ಣ ಉಚ್ಯತೇ ತತಃ ಖರೋಽಭವದ್ಬಲೀ ॥ ೪೩ ॥

ಅ ॥ ಆ ಇಂದ್ರಜಿತ್ ಎನ್ನುವ ರಾಕ್ಷಸನೇ ದುಃಖದಿಂದ ಶಾಸನವು (ಶಿಕ್ಷೆಯು)ಉಳ್ಳವನಾದುದರಿಂದ ದುಃಶಾಸನನಾಮಕನಾದನು. ಆಮೇಲೆ ಅತಿಕಾಯನೆನ್ನುವ ರಾಕ್ಷಸನಿಗೆ ಉತ್ಪತ್ತಿಯಾಯಿತು. ಆ ಅತಿಕಾಯನೇ ವಿಕರ್ಣನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ. ಆಮೇಲೆ ಬಲಿಷ್ಠನಾದ ಖರಾಸುರನು ಹುಟ್ಟಿದನು. ॥ ೪೩ ॥

ಮೂ ॥ ಸ ಚಿತ್ರಸೇನನಾಮಕಸ್ತಥಾಪರೇ ಚ ರಾಕ್ಷಸಾಃ ।
ಬಭೂವುರುಗ್ರಪೌರುಷಾ ವಿಚಿತ್ರವೀರ್ಯಜಾತ್ಮಜಾಃ ॥ ೪೪ ॥

ಅ ॥ ಆ ಖರಾಸುರನೇ ಚಿತ್ರಸೇನನೆಂದು ಹೆಸರುಳ್ಳವನಾದನು; ಹಾಗೆಯೇ ಬೇರೆ ರಾಕ್ಷಸರು ಮಹಾಪರಾಕ್ರಮವುಳ್ಳವರು ಧೃತರಾಷ್ಟ್ರನಿಗೆ ಪುತ್ರರಾಗಿ ಹುಟ್ಟಿದರು. ॥ ೪೪ ॥

ಮೂ ॥ ಸಮುಪ್ತದೋಷರೂಪಿಣಃ ಶರೀರಿಣೋ ಹಿ ತೇಽಭವನ್ ।
ಮೃಷೇತಿ ನಾಮತೋ ಹಿ ಯಾ ಬಭೂವ ದುಶ್ಶಲಾಸುರೀ ॥ ೪೫ ॥
ಕುಹುಪ್ರವೇಶಸಂಯುತಾ ಯಯಾರ್ಜುನೇರ್ವಧಾಯ ಹಿ ।
ತಪಃ ಕೃತಂ ತ್ರಿಶೂಲಿನೇ ತತೋ ಹಿ ಸಾತ್ರ ಜಜ್ಞುಷೀ ॥ ೪೬ ॥

ಅ ॥ ಶರೀರಿಣಃ=ಘಟದಲ್ಲಿರತಕ್ಕ ವಾಂಸಪಿಂಡದ್ದೆಸೆಯಿಂದ ಹುಟ್ಟಿದ ಶರೀರವುಳ್ಳವರು (ಯಾರು) ಆಗಿರುವರೋ ಆ ದುರ್ಯೋಧನಾದಿಗಳು ಅಜ್ಞಾನ ಹರಿದ್ವೇಶ ಮೊದಲಾದ ಸರ್ವ ದೋಷಗಳಿಗೆ ಅಭಿಮಾನಿಗಳಾದರು. (ಮೂಲರೂಪದಲ್ಲಿ) ಮೃಷಾ ಎನ್ನುವ ನಾಮದ್ದೆಸೆಯಿಂದ ಯಾವ ಅಸುರಸ್ತ್ರೀಯು ಇರುತ್ತಿದ್ದಳೋ ಅವಳು ದುಃಶಲಾ ಎನ್ನುವ ನಾಮವುಳ್ಳವಳು ಆದಳು ಅವಳು ನಪ್ಪಗಳಾದ ಚಂದ್ರನ ಕಲೆಗಳುಳ್ಳ ಅಮಾವಾಸ್ಯೆಗೆ ಅಭಿಮಾನಿನಿಯಾದ ದೇವತೆಯು ಪ್ರವೇಶದಿಂದ ಕೂಡಿದವಳು. ಯಾವ ಮೃಷಾ ಎನ್ನುವ ಅಸುರಸ್ತ್ರೀಯಿಂದ ಅರ್ಜುನಪುತ್ರನಾದ ಅಭಿಮನ್ಯುವಿನ ಸಂಹಾರಕೋಸ್ಕರ ರುದ್ರನನ್ನುದ್ದೇಶಿಸಿಕೊಂಡು ಯಾವ ಕಾರಣದಿಂದ ತಪಸ್ಸು ಮಾಡಲ್ಪಟ್ಟಿದೋ ಆ ಕಾರಣದಿಂದ ಆ ಮೃಷೆಯು ಧೃತರಾಷ್ಟ್ರನ ಮನೆಯಲ್ಲಿ ದುಃಶಲಾನಾಮಕಳಾಗಿ ಹುಟ್ಟಿದಳು. ॥ ೪೫ ॥ ೪೬ ॥

ಹಾಗಾದರೆ ಅಭಿಮನ್ಯುವನ್ನು ದುಃಶಾಸನ ಪುತ್ರನು ಸಂಹರಿಸುವುದರಿಂದ ಅಭಿಮನ್ಯುವಿನ ಸಂಹಾರಕ್ಕಾಗಿ ದುಃಶಲೆಯು ಹುಟ್ಟಿದಳು ಎನ್ನುವುದು ಹೇಗೆ ಕೂಡುತ್ತದೆ ಎಂದರೆ ದುಃಶಲೆಯಿಂದ ಹೇಳಿಸಿಕೊಳ್ಳಲ್ಪಟ್ಟ ಜಯದ್ರಥನು ಪಾಂಡವರನ್ನು ನಿರೋಧಿಸಿರುವುದರಿಂದ ಸಹಾಯವಿಲ್ಲದಿರುವ ಅಭಿಮನ್ಯುವನ್ನು ದುಃಶಾಸನ ಪುತ್ರನು ಸಂಹರಿಸಿರುವನು. ಹೀಗೆ ದುಃಶಲೆಯು ಅಭಿಮನ್ಯುವನ್ನು ಸಂಹರಿಸಲಿಕ್ಕೆ ಕಾರಣಳೆನ್ನುತ್ತಾರೆ—

ಮೂ ॥ ತಯೋದಿತೋ ಹಿ ಸೈಂಧವೋ ಬಭೂವ ಕಾರಣಂ ವಧೇ ।
ಸ ಕಾಲಕೇಯದಾನವಸ್ತದರ್ಥವಾಸ ಭೂತಲೇ ॥ ೪೭ ॥

ಅ ॥ ಆ ದುಃಶಲೆಯಿಂದ ಹೇಳಿಸಿಕೊಳ್ಳಲ್ಪಟ್ಟ ಸೈಂಧವನು (ಜಯದ್ರಥನು) ಅಭಿಮನ್ಯುವನ್ನು ಸಂಹರಿಸುವ ವಿಷಯದಲ್ಲಿ ಕಾರಣನು ಆದನು. ಆ ಸೈಂಧವನು ಕಾಲಕೇಯ ಗಣಗಳಲ್ಲಿ ಇರತಕ್ಕ ಒಬ್ಬಾನೊಬ್ಬ ದಾನವನು. ಅತನು ಅಭಿಮನ್ಯುವನ್ನು ಸಂಹರಿಸುವುದಕ್ಕಾಗಿಯೇ ಭೂಮಿಯಲ್ಲಿ ಹುಟ್ಟಿರುವನು. ॥ ೪೭ ॥

ಮೂ ॥ ತಥಾಸ ನಿರ್ಋತಾಭಿಧೋಽನುಜಃ ಸ ನಿರ್ಋತೇರಭೂತ್ ।
ಸ ನಾಸಿಕಾವುರುದ್ಯುತೋ ಯುಯುತ್ಸುನಾಮುಕಃ ಕೃತೀ ॥ ೪೮ ॥

ಅ ॥ ಕಥಾಂತರವನ್ನು ಆರಂಭಿಸುತ್ತಾರೆ. ನಿರ್ಋತಿ ದೇವನ ಅನುಜನು (ಯಾವನೋ) ಅತನು ನಿರ್ಋತನೆಂದು ಹೆಸರುಳ್ಳವನಾಗಿ, (ಅಸ=) ದೇವತೆಗಳಲ್ಲಿ ಇರುತ್ತಿದ್ದನು. ಅತನು ನಾಸಿಕಾಗೊಳಕಕ್ಕೆ ಅಭಿಮಾನಿಯಾದ ವಾಯುವಿನಿಂದ ಯುಕ್ತನಾಗಿ ಸತ್ಕರ್ಮದಲ್ಲಿ ನಿಪುಣವಾದವನಾಗಿ ಯುಯುತ್ಸುನಾಮಕನಾಗಿ (ಭೂಮಿಯಲ್ಲಿ) ಹುಟ್ಟಿದನು. ॥ ೪೮ ॥

ಮೂ ॥ ಸ ಚಾಂಬಿಕೇಯವೀರ್ಯಜಃ ಸುಯೋಧನಾದನಂತರಃ ।
ಬಭೂವ ವೈಶ್ಯಕನ್ಯಕೋದರೋದ್ಭವೋ ಹರಿಪ್ರಿಯಃ ॥ ೪೯ ॥

① ಪ್ರಥಮ ಪ್ರತ್ಯೇತ್ಪತ್ತಿಯಾದ ಮೇಲೆ, ಬ್ರಹ್ಮಸಭಾ ಪ್ರವೇಶಾಧಿಕಾರ ದೊಕೆಯಿತು ಪಾಂಡುರಾಜಗೆ. ದ್ವಿತೀಯ ಮತ್ತು ತೃತೀಯಪುತ್ರ ಪರಪುರುಷರಿಂದ ದೋಷವಾಗಲಿಲ್ಲವೇ?

ಅ ॥ ಆ ಯಂಯಂತ್ಸುವಾದರೂ ಅಂಬಿಕಾ ಪುತ್ರನಾದ ಧೃತರಾಷ್ಟ್ರನ ರೇತಸ್ಸಿನಿಂದ ಹುಟ್ಟಿದವನು, ಸುಯೋಧನನದೆಸೆಯಿಂದ ಮೇಲಿನವನು, (ಅಂದರೆ ದುರ್ಯೋಧನನ ತಮ್ಮನು. ದುಃಶಾಸನನ ಅಣ್ಣನು.) ಧೃತರಾಷ್ಟ್ರನಿಂದ ಊಢಳಾದ ವೈಶ್ಯಸ್ತ್ರೀಯ ಉದರದಿಂದ ಹುಟ್ಟಿದವನು, ಶ್ರೀಹರಿಯೇ ಪ್ರಿಯನಾಗಿ ಉಳ್ಳವನು. ಅಥವಾ ಶ್ರೀಹರಿಗೆ ಪ್ರೀತಿಪಾತ್ರನು, (ಅಂದರೆ ಹರಿಭಕ್ತನು. ॥ ೪೯ ॥

ವಾಯುವಿನ ಅವತಾರ ಪ್ರಸಕ್ತಿಯನ್ನು ಹೇಳುತ್ತಾರೆ—

ಮೂ ॥ ಯುಧಿಷ್ಠಿರೇ ಜಾತ ಉವಾಚ ಪಾಂಡು-
ರ್ಬಾಹ್ವೋರ್ಬಲಾಜ್ಜ್ಞಾನಬಲಾಚ್ಚ ಧರ್ಮಃ ।
ರಕ್ಷ್ಯೋಽನ್ಯಥಾ ನಾಶಮುಪೈತಿ ತಸ್ಮಾತ್
① ಬಲದ್ವಯಾಢ್ಯಂ ಜನಯಾಶು ಪುತ್ರಂ ॥ ೫೦ ॥

ಅ ॥ ಯುಧಿಷ್ಠಿರನು ಹುಟ್ಟಿದ ಮೇಲೆ ಪಾಂಡುರಾಜನು ಹೇಳಿದನು. ಬಾಹುಗಳ ಬಲದಿಂದಲೂ ಜ್ಞಾನಬಲದಿಂದಲೂ ಧರ್ಮವು ರಕ್ಷಿಸಲಿಕ್ಕೆ ಯೋಗ್ಯವು. ಬಾಹುಬಲ ಜ್ಞಾನಬಲಗಳು ಇವೆರಡು ಇಲ್ಲವಾದರೆ ಧರ್ಮವು ನಾಶವನ್ನು ಹೊಂದುತ್ತದೆ. ಆದುದರಿಂದ ಬಾಹುಬಲ ಜ್ಞಾನಬಲ ಇವೆರಡು ಬಲಗಳಿಂದ ಕೂಡಿರುವ ಮಗನನ್ನು ಶೀಘ್ರದಲ್ಲಿ ಹುಟ್ಟಿಸಿಕೊಳ್ಳು. ॥ ೫೦ ॥

ಮೂ ॥ ಯಜ್ಞಾಧಿಕೋ ಹ್ಯಶ್ವಮೇಧೋ ಮನುಷ್ಯ-
ದೃಶ್ಯೇಷು ತೇಜಸ್ವಧಿಕೋ ಹಿ ಭಾಸ್ಕರಃ ।
ವರ್ಣೇಷು ವಿಪ್ರಃ ಸಕಲೈರ್ಗುಣೈರ್ವರೋ
ದೇವೇಷು ವಾಯುಃ ಪುರುಷೊತ್ತಮಾದೃತೇ ॥ ೫೧ ॥

ಅ ॥ ಅಶ್ವಮೇಧವು ಯಜ್ಞಗಳಲ್ಲಿ ಶ್ರೇಷ್ಠವಾದುದು ಸೂರ್ಯನು ತೇಜಸ್ಸುಗಳಲ್ಲಿ ಶ್ರೇಷ್ಠನಾದವನು. ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರಜಾತಿಗಳಲ್ಲಿ ಬ್ರಾಹ್ಮಣನು ಶ್ರೇಷ್ಠನು. ಮನುಷ್ಯರಿಗೆ ನೋಡಲಿಕ್ಕೆ ಯೋಗ್ಯರಾದ ದೇವತೆಗಳಲ್ಲಿ ಮುಖ್ಯಪ್ರಾಣನು ಪುರುಷೋತ್ತಮನಾದ ಶ್ರೀನಾರಾಯಣನನ್ನು ಹೊರತು ಎಲ್ಲಾ ಗುಣಗಳಿಂದ ಶ್ರೇಷ್ಠನು. ॥ ೫೧ ॥

ಹಾಗಾದರೆ ಪುರುಷೋತ್ತಮನನ್ನೇ ಪುತ್ರನಿಗೋಸ್ಕರ ಹೊಂದುವೆನು, ಎಂದರೆ—

ಮೂ ॥ ವಿಶೇಷತೋಽಪ್ಯೇಷ ಪಿತೈವ ಮೇ ಪ್ರಭು-
ರ್ವ್ಯಾಸಾತ್ಮನಾ ವಿಷ್ಣುರನಂತಪೌರುಷಃ ।
ಅತಶ್ಚ ತೇ ಶ್ವಶುರೋ ನೈವ ಯೋಗ್ಯೋ
ದಾತುಂ ಪುತ್ರಂ ವಾಯುಮುಪೈಹಿ ತಂ ಪ್ರಭುಂ ॥ ೫೨ ॥

ಅ ॥ ಈದಾವ ಸರ್ವಸಮರ್ಥನಾದ ಅಪರಿಮಿತ ಪ್ರರಾಕ್ರಮವುಳ್ಳ ಶ್ರೀಹರಿಯು ಶ್ರೀವೇದವ್ಯಾಸರೂಪದಿಂದ ನನ್ನ ಮಾತೃಯೋನಿಯಲ್ಲಿ ವೀರ್ಯಸೇಚಕತ್ವಾಖ್ಯ ವಿಶೇಷದಿಂದ ತಂದೆಯೇ ನಿಶ್ಚಯವು, (ವಿಚಿತ್ರವೀರ್ಯನಂತೆ ನಾಮಮಾತ್ರದಿಂದ ತಂದೆಯಲ್ಲ.) ಆದುದರಿಂದ ನಿನ್ನ ಶ್ವಶುರನು ಮಗನನ್ನು ಹುಟ್ಟಿಸಲಿಕ್ಕೆ ಯೋಗ್ಯನೇ ಅಲ್ಲ. ಆದಕಾರಣ ಪ್ರಭುವಾದ ವಾಯುದೇವರನ್ನು ಹೊಂದು. ॥ ೫೨ ॥

ಮೂ ॥ ಇತೀರಿತೇ ಪೃಥಯಾಹೂತವಾಯು-
ಸಂಸ್ಪರ್ಶಮಾತ್ರಾದಭವದ್ಬಲದ್ವಯೇ ।
ಸಮೋ ಜಗತ್ಯಸ್ತಿ ನ ಯಶ್ಚ ಕಶ್ಚಿತ್
ಭಕ್ತೌ ಚ ವಿಷ್ಣೋರ್ಭಗವದ್ವಶಃ ಸುತಃ ॥ ೫೫ ॥

ಅ ॥ ಹಿಂದೆ ಹೇಳಿದ ಪ್ರಕಾರ (ಪಾಂಡುರಾಜನಿಂದ) ಹೇಳಲ್ಪಡುತ್ತಿರಲು ಕುಂತೀದೇವಿಯಿಂದ (ಮಂತ್ರದಿಂದ ಪ್ರಾರ್ಥನಪೂರ್ವಕವಾಗಿ) ಕರೆಸಲ್ಪಟ್ಟ ಮುಖ್ಯಪ್ರಾಣ ದೇವರ ಸ್ಪರ್ಶ ರೂಪವಾದ ರಮಣದೆಸೆಯಿಂದ ಮಗನು ಆದನು. ಯಾವ ಮುಖ್ಯಪ್ರಾಣದೇವರಿಗೆ ಲೋಕದಲ್ಲಿ ಬಾಹುಬಲ ಜ್ಞಾನಬಲ ಇವೆರಡರಲ್ಲಿಯೂ ಸಮಾನಿಕನಾದವನು ಯಾವ ಪುರುಷನೂ ಇಲ್ಲವೋ, ಶ್ರೀವಿಷ್ಣುವಿನ ಭಕ್ತಿ ವಿಷಯದಲ್ಲಿಯೂ ಸಮಾನಿಕನು ಇಲ್ಲವೋ, (ಅಂತಹ) ತನ್ನ ಭಕ್ತಿಯಿಂದ ಶ್ರೀಹರಿಯನ್ನು ವಶೀಕರಿಸಿಕೊಂಡಿರತಕ್ಕ ಪುತ್ರನು ಹುಟ್ಟಿದನು.

ವಿಶೇಷಾಂಶ—ಸಂತಿ ದೇವನಿಕಾಯಾಶ್ಚ ಸಂಸ್ಪರ್ಶಾಜ್ಜನಯಂತಿ ಯೇ । ವಾಚ್ಯಾ ದೃಷ್ಟ್ಯಾ ತಥಾ ಸ್ಪರ್ಶಾತ್ ಸಂಪೂರ್ಷ್ಣೇಣೇತಿ ಪಂಚಧಾ ॥ ಸಂಸ್ಪರ್ಶಾದಿ ರೂಪವಾದ ಐದು ಪ್ರಕಾರ ಯಾರು ಹುಟ್ಟಿಸುತ್ತಾರೋ ಅಂತಹ ದೇವತೆಗಳ ಸಮೂಹಗಳು ಇರುತ್ತವೆ. ॥ ೫೩ ॥

ಮೂ ॥ ಸ ವಾಯುರೇವಾಭವದತ್ರ ಭೀಮ-
ನಾಮಾ ಭೃತಾ ಮಾಃ ಸಕಲಾ ಹಿ ಯಸ್ಮಿನ್ ।
ಸ ವಿಷ್ಣುನೇಶೇನ ಯುತಃ ಸದೈವ
ನಾಮ್ನಾ ಸೇನೋ ಭೀಮಸೇನಸ್ತತೋಽಸೌ ॥ ೫೪ ॥

ಅ ॥ ಆ ಪುತ್ರನಾದ ವಾಯುವೇ ಭೂಲೋಕದಲ್ಲಿ ಭೀಮನೆಂದೂ ಹೆಸರುಳ್ಳವನಾದನು, (ಯಾರಲ್ಲಿ) ಎಲ್ಲಾ ವಿದ್ಯೆಗಳೂ ಯಾವ ಕಾರಣದಿಂದ ಪೂರ್ಣಗಳಾಗಿವೆಯೋ, (ಆ ಕಾರಣದಿಂದ ಭೃತಾಃ ಮಾಃ ಯಸ್ಮಿನ್ ಎನ್ನುವ ವ್ಯುತ್ಪತ್ತಿಯಿಂದ ಭೀಮನೆನ್ನಿಸುತ್ತಾನೆ.). ಆ ಭೀಮನು ಪ್ರಭುವಾದ ವಿಷ್ಣುವಿನಿಂದ ಯಾವಾಗಲೂ ಕೂಡಿದವನೇ. ಆದುದರಿಂದ ನಾಮದಿಂದ (ಇನೇನ ಸಹಿತಃ ಎನ್ನುವ ವ್ಯುತ್ಪತ್ತಿಯಿಂದ) ಸೇನನು, ಆದಕಾರಣ ಸರ್ವವಿದ್ಯೆಗಳನ್ನು ಧರಿಸಿರುವುದರಿಂದಲೂ ಪ್ರಭುವಾದ ಶ್ರೀಹರಿಯಿಂದ ಕೂಡಿರುವುದರಿಂದಲೂ ಈ ವಾಯುಪುತ್ರನು ಭೀಮಸೇನನು ಎನ್ನಿಸಿಕೊಳ್ಳುತ್ತಾನೆ. ॥ ೫೪ ॥

ಮೂ ॥ ತಜ್ಜನ್ಮ ಮಾತ್ರೇಣ ಧರಾ ವಿದಾರಿತಾ
ಶಾರ್ದೂಲಭೀತಾಜ್ಜನನೀಕರಾದ್ಯದಾ ।
ಪಪಾತ ಸಂಚೂರ್ಣಿತ ಏವ ಪರ್ವತ-
ಸ್ತೇನಾಖಿಲೋಽಸೌ ಶತಶೃಂಗನಾಮಾ ॥ ೫೫ ॥

ಅ ॥ ಆ ಭೀಮಸೇನನ ಉತ್ಪತ್ತಿ ಮಾತ್ರದಿಂದ (ಅಂದರೆ ಉತ್ಪತ್ತಿ ಕ್ಷಣದಲ್ಲಿಯೇ) ಭೂಮಿಯು ಶೀಳಿ ಹೋಯಿತು. ವ್ಯಾಘ್ರದಿಂದ ಕಂಪಿತವಾದ ತಾಯಿಯ ಕೈಯಿಂದ ಯಾವಾಗ (ಪರ್ವತದ ಮೇಲೆ) ಬಿದ್ದನೋ (ಅಂದರೆ ಶಾರ್ದೂಲವನ್ನು ನೋಡಿ ಆದರ ಭಯದಿಂದ ಕಂಪಿತ

ವಾದ ಕುಂತೀದೇವಿಯು ಹಸ್ತದಿಂದ ಬಿದ್ದನೋ) ಆಗ ಆ ಭೀಮನ ಪತನದಿಂದ ಎಲ್ಲಾ ಈ ಶತ ಶೃಂಗವೆಂದು ಹೆಸರುಳ್ಳ ಪರ್ವತವು ಶಿಥಿಲಗಳಾದ ಅವಯವಗಳುಳ್ಳದ್ದು ಆಯಿತು.

ವಿಶೇಷಾಂಶ—ಈ ಪರ್ವತಕ್ಕೆ ಅನಾದಿ ಲಾಗ್ಯಾತ್ತು ಶತಶೃಂಗವೆಂದು ಹೆಸರು ಇತ್ತು. ಭೀಮನು ಚೂರ್ಣೀಕರಿಸಿದ್ದರಿಂದ ಶತಶೃಂಗವೆಂದು ಹೆಸರು ಬಂದಿದ್ದಲ್ಲ. ಅದಕ್ಕಿಂತ ಮೊದಲೂ 'ತಾಭ್ಯಾಂ ಸಮೇತಃ ಶತಶೃಂಗಪರ್ವತೇ' ಇತ್ಯಾದಿಗಳಲ್ಲಿ ಶತಶೃಂಗವೆಂದೇ ವ್ಯವಹಾರವಿತ್ತು. ಆದುದರಿಂದಲೇ ಸಂಚೂರ್ಣಿತಃ ಎಂಬರೆ ಪರ್ವತದ ಅವಯವಗಳು ಶಿಥಿಲಗಳಾದವು ಎಂದರ್ಥವು ॥ ೫೫ ॥

ಮೂ ॥ ತಸ್ಮಿನ್ ಪ್ರಜಾತೇ ರುಧಿರಂ ಪ್ರಸಸ್ರುವು-
ರ್ಮಹಾಸುರಾ ವಾಹನಸೈನ್ಯಸಂಯುತಾಃ ।
ನೃಪಾಶ್ಚ ತತ್ಪಕ್ಷಭವಾಃ ಸಮುಸ್ಥಾ-
ಸ್ತದಾ ಭೀತಾ ಆಸುರಾ ರಾಕ್ಷಸಾಶ್ಚ ॥ ೫೬ ॥

ಅ ॥ ಆ ಭೀಮಸೇನನು ಹುಟ್ಟುತ್ತಿರಲು ವಾಹನಗಳಿಂದಲೂ ಸೈನ್ಯಗಳಿಂದಲೂ ಕೂಡಿರುವ ಪಾತಾಳಾದಿಗಳಲ್ಲಿರತಕ್ಕ ಮೂಲರೂಪದಲ್ಲಿರತಕ್ಕ ಮಹಾಸುರರೂ ಮಹಾಸುರರೆ ಪಕ್ಷೀಯರಾಗಿ ಹುಟ್ಟಿರುವ ಅಸುರ ಸ್ವರೂಪರೂ ರಾಕ್ಷಸ ಸ್ವರೂಪರೂ ಆದ ಯಾವ ರಾಜರೋ ಅ ಎಲ್ಲಾ ರಾಜರೂ ಭಯಗ್ರಸ್ತರಾಗಿ ರಕ್ತವನ್ನು ಕಾರಿದರು. (ಅಂದರೆ ಮೂಲರೂಪದಲ್ಲಿಯೂ, ಭೂಮಿಯಲ್ಲಿ ಹುಟ್ಟಿರತಕ್ಕ ರೂಪದಲ್ಲಿಯೂ ಮೂತ್ರ ದ್ವಾರದಿಂದಲೂ ಗುದದ್ವಾರದಿಂದಲೂ ಮುಖದಿಂದಲೂ ರಕ್ತಸ್ರವವು ಆಯಿತು.) ॥ ೫೬ ॥

ಮೂ ॥ ಅವರ್ಧತಾತ್ರೈವ ವೃಕೋದರೋ ವನೇ
ಮುದಂ ಸುರಾಣಾಮಧಿಕಂ ಪ್ರವರ್ಧಯನ್ ॥ ೫೭ ॥

ಅ ॥ ಭೀಮಸೇನನು ಇದೇ ಬದರಿಕಾಶ್ರಮದಲ್ಲಿಯೇ ದೇವತೆಗಳಿಗೆ ಸರ್ವದಾ ಸಂತೋಷವನ್ನು ಅಭಿವೃದ್ಧಿಸುವವನಾಗಿ ಚೆನ್ನಾಗಿ ವೃದ್ಧಿಯನ್ನು ಹೊಂದಿಕೊಂಡು ಇದ್ದನು.

ವಿಶೇಷಾಂಶ—ವೃಕೋ ನಾಮ ಮಹಾವಹ್ನಿಃ ಎನ್ನುವ ವಚನದಿಂದ ವೃಕನಾಮಕವಾದ ವಹ್ನಿಯು ಯಾರ ಉದರದಲ್ಲಿದೆಯೋ ಅತನು ವೃಕೋದರನು. ಆದುದರಿಂದಲೇ ಬಹ್ವನ್ನ ಬಸ್ಮೀಕರಣ ಶಕ್ತಿಯು ಭೀಮಸೇನನಿಗೇನೇ ಬೇರೆಯವರಿಗೆ ಅಂತಹ ಶಕ್ತಿಯು ಇರುವುದಿಲ್ಲ. ॥ ೫೭ ॥

ಶೇಷಾವತಾರ ಪ್ರಕಾರವನ್ನು ತೋರಿಸುತ್ತಾರೆ—

ಮೂ ॥ ತದೈವ ಶೇಷೋ ಹರಿಣೋದಿತೋಽವಿಶತ್
ಗರ್ಭಂ ಸುತಾಯಾ ಅಪಿ ದೇವಕಸ್ಯ ।
ಸ ತತ್ರ ಮಾಸತ್ರಯಮುಷ್ಯ ದುರ್ಗಯಾ
ಪ್ರವಾಹಿತೋ ರೋಹಿಣೀಗರ್ಭಮಾಶು ।
ನಿಯುಕ್ತ ಯಾ ಕೇಶವೇನಾಥ ತತ್ರ
ಸ್ಥಿತ್ವಾ ಮಾಸಾನ್ ಸಪ್ತ ಜಾತಃ ಪೃಥಿವ್ಯಾಂ ॥ ೫೮ ॥

ಅ ॥ ಅವತಾರಕ್ಕಾಗಿ ಬ್ರಹ್ಮಾದಿಗಳಂ ಶ್ರೀಹರಿಯನ್ನು ಪ್ರಾರ್ಥಿಸಂವ ಕಾಲದಲ್ಲಿಯೇ; (ನೀನೂ ಕೂಡ ಅವತಾರ ವಹಾಡಂ ಎಂದಂ) ಶ್ರೀಹರಿಯಿಂದ ಆಜ್ಞಾಪಿಸಿಕೊಳ್ಳಲ್ಪಟ್ಟ, ಶೇಷನೂ ಕೂಡ ದೇವಕರಾಜನ ವಂಗಳಾದ ದೇವಕಿಯಂ ಗರ್ಭವನ್ನು ಪ್ರವೇಶ ವಹಾಡಿದನಂ. (ತಥಾ ಚ ಬೀವಂನಂ ಹಂಟ್ಟುವುದಕ್ಕಿಂತ ಮೊದಲಂ (೮) ಎಂಟನೇ ತಿಂಗಳಲ್ಲಿ ಶೇಷನಂ ದೇವಕೀ ಗರ್ಭವನ್ನು ಪ್ರವೇಶ ವಹಾಡಿದನಂ.) ಆ ಶೇಷನಂ ಆ ದೇವಕೀ ಗರ್ಭದಲ್ಲಿ ವಂಂರಂ ತಿಂಗಳಂ ಪರಿಮಿತವಾದ ಕಾಲದಲ್ಲಿ ಆವಾಸ ಮಾಡಿ ವಂಂರಂ ತಿಂಗಳಂ ಆದ ಮೇಲೆ ಶ್ರೀಹರಿಯಿಂದ ಆಜ್ಞಾಪಿಸಿಕೊಳ್ಳಲ್ಪಟ್ಟ ದುರ್ಗಾದೇವಿಯಿಂದ ರೋಹಿಣೀ ದೇವಿಯಂ ಗರ್ಭವನ್ನು ಕಂರಿತಂ (ದೇವಕೀ ಗರ್ಭದಿಂದ) ಹೊರಡಿಸಿ ಹೊಂದಿಸಿಕೊಳ್ಳಲ್ಪಟ್ಟವನಾಗಿ ಆ ರೋಹಿಣೀ ಗರ್ಭದಲ್ಲಿ ಏಳಂ ತಿಂಗಳಂಗಳಲ್ಲಿ ಇದ್ದಂ ಪೃಥಿವಿಯಂಲ್ಲಿ ಹಂಟ್ಟಿದನಂ. ॥ ೫೮ ॥

ಮೂ ॥ ಸ ನಾಮತೋ ಬಲದೇವೋ ಬಲಾಢ್ಯೋ
ಬಭೂವ ತಸ್ಯಾನು ಜನಾರ್ದನಃ ಪ್ರಭುಃ ।
ಆವಿರ್ಬಭೂವಾಖಿಲಸದ್ಗುಣೈಕ–
ಪೂರ್ಣಃ ಸುತಾಯಾಮುಪಿ ದೇವಕಸ್ಯ ॥ ೫೯ ॥

ಅ ॥ ಆ ರೋಹಿಣೀ ಪುತ್ರನಂ ಬಲದಿಂದ ಕೂಡಿದವನಾಗಿ ನಾಮದಿಂದ ಬಲದೇವನಂ ಆದಸಂ. ಬಲರಾಮನ ಅನಂತರದಲ್ಲಿ (ಅಂದರೆ ಬಲರಾಮನಂ ಹಟ್ಟಿ ವಂಂರಂ ತಿಂಗಳಂ ಆದ ಮೇಲೆ) ಸರ್ವಸಮರ್ಥನಾದ, ಎಲ್ಲಾ ಸದ್ಗುಣಗಳಿಂದ ವಂಂಖ್ಯವಾಗಿ ಪೂರ್ಣನಾದ ಶ್ರೀಹರಿಯಂ ದೇವಕರಾಜನ ವಂಗಳಾದ ದೇವಕೀದೇವಿಯಂಲ್ಲಿಯೂ ಆವಿರ್ಭವಿಸಿದನಂ. ॥ ೫೯ ॥

ಮೂ ॥ ಯಃ ಸತ್ಸುಖಜ್ಞಾನಬಲೈಕದೇಹಃ
ಸಮಸ್ತದೋಷಸ್ಪರ್ಶೋಜ್ಝಿತಃ ಸದಾ ।
ಅವ್ಯಕೃತತಕಾರ್ಯಮಯೋ ನ ಯಸ್ಯ
ದೇಹಃ ಕುತಶ್ಚಿತ್ ಕ್ವ ಚ ಸ ಹ್ಯಜೋ ಹರಿಃ ॥ ೬೦ ॥

ಅ ॥ ಯಾವ ಶ್ರೀಹರಿಯಂ ನಿರ್ದಷ್ಟಗಳಾದ ಸಂಖ, ಜ್ಞಾನ, ಬಲಗಳೇ ಕೇವಲ ದೇಹವಾಗಿ ಉಳ್ಳವನೋ ಯಾವಾಗಲೂ ಪಾರತಂತ್ರ್ಯ ಮೊದಲಾದ ಸರ್ವದೋಷಗಳ ಸಂಬಂಧದಿಂದ ವಿರಹಿತನೋ, ಯಾವ ಕಾರಣದಿಂದ ಯಾವ ದೇಶದಲ್ಲಿಯೂ ಯಾವ ಕಾಲದಲ್ಲಿಯೂ ಮೂಲ ಪ್ರಕೃತಿಯಂೂ ಮೂಲಪ್ರಕೃತಿಯ ಕಾರ್ಯವಾದ ಪಂಚಭೂತಗಳೂ ಇವುಗಳ ವಿಕಾರವು (ಅಂದರೆ ಶುದ್ಧವೂ, ಪ್ರಾಕೃತವೂ, ಪಾಂಚಭೌತಿಕವೂ ಆದ) ಯಾವ ಶ್ರೀ ಹರಿಯ ಶರೀರವು ಇಲ್ಲವೋ, ಆದಕಾರಣ ಆ ಶ್ರೀಹರಿಯೇ ಉತ್ಪತ್ತಿಯಿಲ್ಲದಿರುವವನಂ. ॥ ೬೦ ॥

ಮೂ ॥ ನ ಶುಕ್ಲರಕ್ತಪ್ರಭವೋsಸ್ಯ ಕಾಯ–
ಸ್ತಥಾಪಿ ತತ್ಪುತ್ರತಯೋಚ್ಯತೇ ಮೃಷಾ ।
ಜನಸ್ಯ ಮೋಹಾಯ ಶರೀರತೋsಸ್ಯಾ
ಯದಾವಿರಾಸೀದಮಲಸ್ವರೂಪಃ ॥ ೬೧ ॥

ಅ ॥ ಶ್ರೀಹರಿಯ ಶರೀರವು ಶುಕ್ರ ರೇತಸ್ಸಿನಿಂದಲೂ ರಕ್ತದಿಂದಲೂ ಹುಟ್ಟಿದ್ದಲ್ಲ. ಆದಾಗ್ಯೂ ಆ ಮಹಾತಾಪಿತೃಗಳ ಪುತ್ರರೆಂದು (ಅಪಂಡಿತರಿಂದ) (ವ್ಯಾಪಾ =), ಬುದ್ಧಿ ಮೋಹದಿಂದ ಹೇಳಿಸಿಕೊಳ್ಳಲ್ಪಡುತ್ತಾರೆ. (ಆ ಮಹಾತಾಪಿತೃಗಳ ಪುತ್ರತ್ವವು ಇಲ್ಲದಿದ್ದರೂ ಬುದ್ಧಿ ಮೋಹವು ಹೇಗೆಂದರೆ) ನಿರ್ದುಷ್ಟವಾದ ಸ್ವರೂಪವುಳ್ಳ ಶ್ರೀಹರಿಯು ಅಸುರಜನರನ್ನು ಮೋಹಿಸುವುದಕ್ಕಾಗಿ (ಅಂದರೆ ಅಸುರ ಜನರಿಗೆ ಮಿಥ್ಯಾಜ್ಞಾನವನ್ನುಂಟು ಮಾಡುವುದಕ್ಕಾಗಿ) ಈ ದೇವಕೀ ದೇವಿಯ ಶರೀರದ್ದೆಸೆಯಿಂದ ಯಾವ ಕಾರಣದಿಂದ ಆವಿರ್ಭವಿಸಿರುವನೋ, (ಆದುದರಿಂದ) ಬುದ್ಧಿ ಮೋಹದಿಂದಲೇ ಹೇಳಿಸಿಕೊಳ್ಳಲ್ಪಡುತ್ತಾನೆ. ॥ ೬೧ ॥

ಮೂ ॥ ಆವಿಶ್ಯ ಪೂರ್ವಂ ವಸುದೇವಮೇವ
ವಿವೇಶ ತಸ್ಮಾದೃತುಕಾಲ ಏವ ।
ದೇವೀಮುವಾಸಾತ್ರ ಚ ಸಪ್ತ ಮಾಸಾನ್
ಸಾರ್ಧಾಂಸ್ತ ತಶ್ಚಾವಿರಭೂದಜೋಽಪಿ ॥ ೬೨ ॥

ಅ ॥ ಮೊದಲು ವಸುದೇವನನ್ನು ಪ್ರವೇಶಮಾಡಿ ವಸುದೇವನಿಂದಲೇ ಗರ್ಭಾಧಾನಕ್ಕೆ ಯೋಗ್ಯವಾದ ಸಮಯದಲ್ಲಿಯೇ ದೇವಕೀ ಗರ್ಭವನ್ನು ಪ್ರವೇಶ ಮಾಡಿದನು. ಈ ದೇವಕೀ ಗರ್ಭದಲ್ಲಿ (೧೫) ಹದಿನೈದು ದಿವಸಗಳಿಂದ ಸಹಿತಗಳಾದ ಏಳು ತಿಂಗಳುಗಳಲ್ಲಿ ಆವಾಸ ಮಾಡಿದನು. ಆ ದೇವಕೀದೇವಿಯ ಸಕಾಶದಿಂದ ಜನನ ರಹಿತನಾದಾಗ್ಯೂ (ಎಂಟನೇ ತಿಂಗಳಲ್ಲಿ) ಪ್ರಕಟನಾದನು.

ವಿಶೇಷಾಂಶ—(1) ವಸುದೇವಮಾವಿಶ್ಯ ದೇವೀಂ ವಿವೇಶ ಎನ್ನುವ ವಚನದ್ದೆಸೆಯಿಂದ ಭೂತಾವೇಶದಂತೆ ವಸುದೇವನಲ್ಲಿಯೂ ಆವೇಶಮಾತ್ರವೇ. ದೇವಕೀದೇವಿಯ ಉದರದಲ್ಲಿಯೂ ಆವೇಶಮಾತ್ರವೇ ಹೊರತು ಪುರುಷನಲ್ಲಿರತಕ್ಕ ಶುಕ್ಲವೆನ್ನುವ ರೇತೋದ್ವಾರದಿಂದ ಸ್ತ್ರೀಯೋನಿಯಲ್ಲಿರತಕ್ಕ ಶೋಣಿತದಲ್ಲಿ ಸಂಕಲೀಕರಣವಲ್ಲ. ॥ ೬೨ ॥

ಹಿಂದೆ ಹೇಳಿದ ಅರ್ಥವನ್ನು ದೃಷ್ಟಾಂತಪೂರ್ವಕವಾಗಿ ಹೇಳುತ್ತಾರೆ—

ಮೂ ॥ ಯಥಾ ಪುರಾ ಸ್ತಂಭತ ಆವಿರಾಸೀ-
ದಶುಕ್ಲರಕ್ತೋಽಪಿ ನೃಸಿಂಹರೂಪಃ ।
ತಥೈವ ಕೃಷ್ಣೋಽಪಿ ತಥಾಪಿ ಮಾತಾ
ಪಿತೃಕ್ರಮಾದೇವ ವಿಮೋಹಯತ್ಯಜಃ ॥ ೬೩ ॥

ಅ ॥ ನೃಸಿಂಹ ರೂಪಿಯಾದ ಶ್ರೀಹರಿಯು ಶುಕ್ಲರಕ್ತಗಳಿನ್ನುವ ರೇತಸ್ಸುಗಳ ಸಂಬಂಧ ರಹಿತನೇ ಆದವನಾಗಿ ಹೇಗೆ ಮೊದಲು ಸ್ತಂಭದಿಂದ ಆವಿರ್ಭವಿಸಿರುವನೋ ಹಾಗೆಯೇ ಶ್ರೀಕೃಷ್ಣನೂ ಕೂಡ ನೃಸಿಂಹಾವತಾರದಂತೆ ಶುಕ್ಲರಕ್ತಗಳ ಸಂಬಂಧ ವಿರಹಿತನು. ಆದಾಗ್ಯೂ ಜನನ ರಹಿತನಾದ ಶ್ರೀಕೃಷ್ಣನು ಮಹಾತಾಪಿತೃಗಳ ಕ್ರಮಾನುಸರಣ ಮಹತ್ತ್ವದಿಂದಲೇ (ಅಸುರರನ್ನು) ಮೋಹಿಸುತ್ತಾನೆ. ॥ ೬೩ ॥

ಮೂ ॥ ಪಿತೃಕ್ರಮಂ ಮೋಹನಾರ್ಥಂ ಸಮೇತಿ
ನ ತಾವತಾ ಶುಕ್ಲತೋ ರಕ್ತತಶ್ಚ ।

ಜಾತೋಽಸ್ಯ ದೇಹಸ್ತ್ವಿತಿ ದರ್ಶನಾಯ
ಸಶಂಖಚಕ್ರಾಬ್ಜಗದಃ ಸ ದೃಷ್ಟಃ ॥ ೬೪ ॥

ಅ॥ ಆ ಶ್ರೀಹರಿಯಂ (ಅಸುರದನ್ನು) ಮೋಹಿಸುವುದಕ್ಕಾಗಿ ಪಿತೃಕ್ರಮವನ್ನು ಹೊಂದಂ ತ್ತಾನೆ. ಪಿತೃಕ್ರಮಾನುಸರಣ ನಿಮಿತ್ತದಿಂದ ಶ್ರೀಹರಿಯ ದೇಹವು ಶುಕ್ಲರೇತಸ್ಸಿನಿಂದಲೂ ರಕ್ತ ದಿಂದಲೂ ಹುಟ್ಟಿದ್ದಲ್ಲ. ಹೀಗೆ ಪಿತ್ರಾದಿಗಳಿಗೆ ವಿಶೇಷ ಜ್ಞಾನವು ಬರುವುದಕ್ಕಾಗಿ ಶಂಖ, ಚಕ್ರ, ಕಮಲ, ಗದೆಗಳಿಂದ ಕೂಡಿದವನಾಗಿಯೇ (ಮಾತಾಪಿತೃಗಳಿಂದ) ಕಾಣಿಸಿಕೊಳ್ಳಲ್ಪಟ್ಟನು. ॥ ೬೪ ॥

ಹಾಗಾದರೆ ಕೇವಲವಾಗಿ ಶಂಖ ಮೊದಲಾದ ಆಯುಧವುಳ್ಳವನಾಗಿ ಕಾಣಲ್ಪಟ್ಟಿದ್ದಾನೋ ಏನು? ಎಂದರೆ—

ಮೂ ॥ ಅನೇಕಸೂರ್ಯಾಭಕಿರೀಟಯುಕ್ತೋ
ವಿದ್ಯುತ್ಪ್ರಭೇ ಕುಂಡಲೇ ಧಾರಯಂಶ್ಚ ।
ಪೀತಾಂಬರೋ ವನಮಾಲೀ ಸ್ವನಂತ–
ಸೂರ್ಯೋರುದೀಪ್ತಿರ್ದದೃಶೇ ಗುಣಾರ್ಣವಃ ॥ ೬೫ ॥

ಅ॥ ಅಪರಿಮಿತವಾದ ಸೂರ್ಯರ ಕಾಂತಿಯಂತೆ ಕಾಂತಿಯುಳ್ಳ ಕಿರೀಟದಿಂದ ಕೂಡಿರುವ ವನು, ಮಿಂಚಿನಂತೆ ಕಾಂತಿಯುಳ್ಳ ಕುಂಡಲಗಳನ್ನು ಧರಿಸಿಕೊಂಡಿರುವವನು, ಪೀತವರ್ಣವಾದ ವಸ್ತ್ರವುಳ್ಳವನು, ವೈಜಯಂತೀ ಮಾಲೆಯುಳ್ಳವನು, ಶೋಭನಗಳಾದ (ಅಂದರೆ ಅಭ್ರ, ತಿಮಿರ ರಾಹು ಮೊದಲಾದ ಸಂಬಂಧಗಳಿಂದ ವಿರಹಿತರಾದ) ಅಪರಿಮಿತ ಸೂರ್ಯರದೆಸೆಯಿಂದ ಉತ್ಕೃ ಷ್ಟವಾದ ಕಾಂತಿಯುಳ್ಳವನು, ಗುಣಗಳಿಂದ ಸಮುದ್ರದಂತಿರುವವನು, ಇಂತಹ ಶ್ರೀಹರಿಯು ಕಾಣಿಸಿಕೊಳ್ಳಲ್ಪಟ್ಟನು. ॥ ೬೫ ॥

ಮೂ ॥ ಸ ಕಂಜಯೋನಿಪ್ರಮುಖೈಃ ಸುರೈಃ ಸ್ತುತಃ
ಪಿತ್ರಾ ಚ ಮಾತ್ರಾ ಚ ಜಗಾದ ಶೂರಜಂ ।
ನಯಸ್ವ ಮಾಂ ನಂದಗೃಹಾನಿತಿ ಸ್ಮ
ತತೋ ಬಭೂವ ದ್ವಿಭುಜೋ ಜನಾರ್ದನಃ ॥ ೬೬ ॥

ಅ॥ ಕಮಲವೇ ಕಾರಣವಾಗಿ ಉಳ್ಳ ಚತುರ್ಮುಖ ಬ್ರಹ್ಮನೇ ಮೊದಲಾಗಿ ಉಳ್ಳ, ದೇವ ತೆಗಳಿಂದ ಸ್ತೋತ್ರಮಾಡಿಸಿಕೊಳ್ಳಲ್ಪಟ್ಟವನು, ತಂದೆಯಿಂದಲೂ ತಾಯಿಯಿಂದಲೂ ಸ್ತೋತ್ರಮಾ ಡಿಸಿಕೊಳ್ಳಲ್ಪಟ್ಟವನೂ, ಇಂತಹ ಶ್ರೀಕೃಷ್ಣನು ಶೂರಪುತ್ರನಾದ ವಸುದೇವನನ್ನು ಕುರಿತು. ನನ್ನನ್ನು ನಂದಗೋಪನ ಮನೆಯನ್ನು ಕುರಿತು ತೆಗೆದುಕೊಂಡು ಹೋಗು, ಎಂದು ಹೇಳಿದನು, ಆಮೇಲೆ ಜನಾರ್ದನನು (ಪ್ರಾದುರ್ಭಾವ ಸಮಯದಲ್ಲಿ ನಾಲ್ಕು ಭುಜಗಳು ಇದ್ದವನು ಈಗ) ಎರಡು ಭುಜಗಳುಳ್ಳವನು ಆದನು. ॥ ೬೬ ॥

ಮೂ ॥ ತದೈವ ಜಾತಾ ಚ ಹರೇರನುಜ್ಞಯಾ
ದುರ್ಗಾಭಿಧಾ ಶ್ರೀರನು ನಂದಪತ್ನ್ಯಾಂ ।

ತತಸ್ತ್ವಮಾದಾಯ ಹರಿಂ ಯಯೌ ಸ
ಶೂರಾತ್ಮಜೋ ನಂದಗೃಹಾನ್ನಿಶೀಥೇ ॥ ೬೭ ॥

ಅ ॥ ಶ್ರೀಕೃಷ್ಣನು ಪ್ರಾದುರ್ಭವಿಸಿದ ಕಾಲದಲ್ಲಿಯೇ ಶ್ರೀಕೃಷ್ಣನ ಅಪ್ಪಣೆಯಿಂದ ದುರ್ಗಾದೇವಿಯೆಂದು ಹೆಸರುಳ್ಳ ಲಕ್ಷ್ಮೀದೇವಿಯು ನಂದಗೋಪನ ಹೆಂಡತಿಯಲ್ಲಿ, (ಅನು =)ಶ್ರೀಕೃಷ್ಣನು ಪ್ರಾದುರ್ಭವಿಸಿ ಸ್ವಲ್ಪ ಮೇಲೆ ಶ್ರೀಕೃಷ್ಣನಿಗೆ ಅನುಕೂಲಳಾಗಿಯೇ ಹುಟ್ಟಿದಳು. ದ್ವಿಭುಜ ಸ್ವರೂಪವನ್ನು ಪ್ರಕಟೀಕರಿಸಿದ ಮೇಲೆ ಶೂರರಾಜನ ಪುತ್ರನಾದ ಆ ವಸುದೇವನು ಆ ಶ್ರೀಕೃಷ್ಣನನ್ನು ಹಿಡಿದುಕೊಂಡು ಅರ್ಧರಾತ್ರಿಕಾಲದಲ್ಲಿಯೇ ನಂದಗೋಪನ ಮನೆಯನ್ನು ಕುರಿತು ಹೋದನು; ॥ ೬೭ ॥

ಮೂ ॥ ಸಂಸ್ಥಾಪ್ಯ ತಂ ತತ್ರ ತಥೈವ ಕನ್ಯಕಾ-
ಮಾದಾಯ ತಸ್ಮಾತ್ ಸ್ವಗೃಹಂ ಪುನರ್ಯಯೌ ।
ಹತ್ವಾ ಸ್ವಸುರ್ಗರ್ಭಷಟ್ಕಂ ಕ್ರಮೇಣ
ಮತ್ವಾಷ್ಟಮಂ ತತ್ರ ಜಗಾಮ ಕಂಸಃ ॥ ೬೮ ॥

ಅ ॥ (ವಸುದೇವನು) ನಂದಗೋಪನ ಮನೆಯಲ್ಲಿ ಆ ಕೃಷ್ಣನನ್ನು ಸ್ಥಾಪಿಸಿ ಶ್ರೀಕೃಷ್ಣ ಸಂತೆಯೇ ಕನ್ನಿಕೆಯನ್ನು (ಅಂದರೆ ಯಶೋದಾ ದೇವಿಯಲ್ಲಿ ಪ್ರಾದುರ್ಭವಿಸಿದ ದುರ್ಗಾದೇವಿಯನ್ನು) ಹಿಡಿದುಕೊಂಡು ನಂದಗೋಪನ ಮನೆಯ ದೆಸೆಯಿಂದ ಪುನಃ ತನ್ನ ಮನೆಯನ್ನು ಕುರಿತು ಹೋದನು. ಕಂಸನು (ತನ್ನ) ತಂಗಿಯಾದ ದೇವಕೀದೇವಿಯ ಆರು ಗರ್ಭಗಳನ್ನು ಹುಟ್ಟಿದ ಕ್ರಮದಿಂದಲೇ ಸಂಹರಿಸಿ (ಹುಟ್ಟಿದ ಮಗುವನ್ನು) ಎಂಟನೇದನ್ನಾಗಿ ತಿಳಿದು ಸೂತಿಕಾ (ಮಗುವನ್ನು ಹಡೆದ) ಗೃಹವನ್ನು ಕುರಿತು ಹೋದನು. ॥ ೬೮ ॥

ಹಾಗಾದರೆ ಆರು ಗರ್ಭಗಳನ್ನು ಕೊಂದು ಇದರಲ್ಲಿ ಏಳನೇ ಗರ್ಭವೆನ್ನುವ ಬುದ್ಧಿಯನ್ನು ಮಾಡದೆ ಎಂಟನೇದನ್ನಾಗಿ ಹೇಗೆ ತಿಳಿದನು ಎಂದರೆ—

ಮೂ ॥ ಗರ್ಭಂ ದೇವಕ್ಯಾಃ ಸಪ್ತಮಂ ಮೋನಿರೇ ಹಿ
ಲೋಕಾಃ ಸ್ಮೃತಂ ಕ್ವಷ್ಟಮಂ ತಾಂ ತತಃ ಸಃ ।
ಮತ್ವಾ ಹಂತುಂ ಪಾದಯೋಃ ಸಂಪ್ರಗೃಹ್ಯ
ಸಂಪೋಥಯಾಮಾಸ ತಿಲಾತಲೇ ಚ ॥ ೬೯ ॥

ಅ॥ ಜನರು ದೇವಕಿಯ ಏಳನೇ ಗರ್ಭವನ್ನು ಸ್ಮೃತವನ್ನಾಗಿ ತಿಳಿದಿರುವರು. (ಅಂದರೆ ದೇವಕೀ ಗರ್ಭದ್ದೆಸೆಯಿಂದ ಶೇಷನು ದುರ್ಗಾದೇವಿಯಿಂದ ರೋಹಿಣೀ ಗರ್ಭದಲ್ಲಿ ಸ್ಥಾಪಿಸಲ್ಪಟ್ಟನು; ಆದ ಕಾರಣ ದೇವಕೀದೇವಿಯ ಗರ್ಭಸ್ರಾವವು ಆಯಿತು, ಎಂದು ಲೋಕದಲ್ಲಿ ಪ್ರಸಿದ್ಧಿಯಾಯಿತು.) ಏಳನೇಗರ್ಭಸ್ರಾವವಾಯಿತು ಎಂದು ಶ್ರುತವಾದ ಪ್ರಯುಕ್ತ ಆ ಕಂಸನು ಆ ದುರ್ಗಾದೇವಿಯನ್ನು ಎಂಟನೇ ಮಗುವನ್ನಾಗಿ ತಿಳಿದು ಕೊಲ್ಲುವುದಕ್ಕಾಗಿ ಪಾದಗಳಲ್ಲಿ ಹಿಡಿದು ಶಿಲಾತಲದಲ್ಲಿ ಹೊಡೆದನು. ॥ ೬೯ ॥

ಮೂ ॥ ಸಾ ತದ್ಧಸ್ತಾತ್ ಕ್ಷಿಪ್ರಮುತ್ಪತ್ಯ ದೇವೀ
ಖೇಽದೃಶ್ಯತೈವಾಷ್ಟಭುಜಾ ಸಮಗ್ರಾ ।

ಬ್ರಹ್ಮಾದಿಭಿಃ ಪೂಜ್ಯಮಾನಾ ಸಮಗ್ರೈ-
ರತ್ಯದ್ಭುತಾಕಾರವತೀ ಹರಿಪ್ರಿಯಾ ॥ ೭೦ ॥

ಅ ॥ ಆ ದುರ್ಗಾದೇವಿಯು ಆ ಕಂಸನ ಹಸ್ತದಿಂದಲೇ (ಅಂದರೆ ಶಿಲಾತಲ ಸ್ಪರ್ಶವನ್ನು ಹೊಂದದೇನೇ) ಶೀಘ್ರದಲ್ಲಿ ಮೇಲೆ ಹಾರಿ ಎಂಟು ಭುಜಗಳುಳ್ಳವಳಾಗಿಯೂ (ಸ್ತನ ಮೊದಲಾದ ಅವಯವಗಳಿಂದ) ಸಂಪೂರ್ಣಳಾಗಿಯೇ (ಅಂದರೆ ತಾರುಣ್ಯ ಸ್ವರೂಪವುಳ್ಳವಳಾಗಿಯೇ) ಬ್ರಹ್ಮನೇ ಮೊದಲಾದ ಎಲ್ಲಾ ದೇವತೆಗಳಿಂದಲೂ ಪೂಜಿಸಿಕೊಳ್ಳಲ್ಪಡತಕ್ಕವಳೂ, ಅತ್ಯಾಶ್ಚರ್ಯಕರವಾದ (ಅಂದರೆ ಲೋಕವಿಲಕ್ಷಣವಾದ) ಸ್ವರೂಪವುಳ್ಳವಳೂ ಶ್ರೀಹರಿಯ ಪ್ರಿಯಳೂ ಆದವಳು ಆಕಾಶದಲ್ಲಿಯೇ (ಭೂಮಿಯಲ್ಲಿರತಕ್ಕವರಿಂದ) ಕಾಣಿಸಿಕೊಳ್ಳಲ್ಪಟ್ಟಳು. ॥ ೭೦ ॥

ಮೂ ॥ ಉವಾಚ ಚಾರ್ಯಾ ತವ ಮೃತ್ಯುರತ್ರ
ಕ್ವಚಿತ್ ಪ್ರಜಾತೋ ಹಿ ವೃಥೈವ ಪಾಪ ।
ಅನಾಗಸೀಂ ಮಾಂ ವಿನಿಹಂತುಮಿಚ್ಛ-
ಸ್ಯಶಕ್ಯಕಾರ್ಯೋ ತವ ಚೋದ್ಯಮೋಽಯಂ ॥ ೭೧ ॥

ಅ ॥ ಸರ್ವೋತ್ತಮಳಾದ ದುರ್ಗಾದೇವಿಯು ಎಲೋ ಪಾಪರೂಪನಾದ ಕಂಸನೇ ನಿನಗೆ ಮಾರಕನು ಈ ಭೂಮಿಯಲ್ಲಿ ಯಾವುದೋ ಒಂದು ಸ್ಥಳದಲ್ಲಿ ಹುಟ್ಟಿರುತ್ತಾನಷ್ಟೆ. ಅಪರಾಧವಿಲ್ಲದಿರುವ ನನ್ನನ್ನು ವ್ಯರ್ಥವಾಗಿಯೇ (ಅಂದರೆ ಪ್ರಯೋಜನವಿಲ್ಲದೇನೇ) ಕೊಲ್ಲಲಿಕ್ಕೆ ಇಚ್ಛಿಸುತ್ತಿ. ಮಾಡಲಿಕ್ಕೆ ಅಶಕ್ಯವಾದ ನನ್ನ ಸಂಹಾರರೂಪ ಕಾರ್ಯದಲ್ಲಿ ನಿನ್ನ ಈ ಉದ್ಯೋಗವು ವ್ಯರ್ಥವಾದುದು ಎಂದು ಹೇಳಿದಳು. ॥ ೭೧ ॥

ಮೂ ॥ ಉಕ್ತ್ವೇತಿ ಕಂಸಂ ಪುನರೇವ ದೇವಕೀ-
ತಲ್ಪೇಽಶಯದ್ಬಾಲರೂಪ್ಯೇವ ದುರ್ಗಾ ।
ನಾಜ್ಞಾಸಿಷುಸ್ತಾವಥ ಕೇಚನಾತ್ರ
ಭುವೇ ಹಿ ಮಾತಾಪಿತರೌ ಗುಣಾಢ್ಯಾಂ ॥ ೭೨ ॥

ಅ ॥ ದುರ್ಗಾದೇವಿಯು ಕಂಸನನ್ನು ಕುರಿತು ಹೀಗೆ ಹೇಳಿ ಪುನಃ ಬಾಲಕರೂಪಳಾಗಿ ಸುಪ್ತಳಾದವಳಂತೆಯೇ ದೇವಕೀದೇವಿಯು ಶಯನದಲ್ಲಿ ಮಲಗಿಕೊಂಡಳು. ದೇವಕೀದೇವಿಯು ಹಾಸಿಗೆಯನ್ನು ಹೊಂದಿದ ಮೇಲೆ ಈ ಭೂಲೋಕದಲ್ಲಿ ತಂದೆತಾಯಿಗಳು ಹೊರತು ಯಾವ ಪುರುಷರೂ ಗುಣಗಳಿಂದ ಭರಿತಳಾದ ಆ ದುರ್ಗಾದೇವಿಯನ್ನು ತಿಳಿಯಲಿಲ್ಲ. ॥ ೭೨ ॥

ಮೂ ॥ ಶ್ರುತ್ವಾ ತಯೋಕ್ತಂ ತು ತದೈವ ಕಂಸಃ
ಪಶ್ಚಾತ್ತಾಪಾದ್ವಸುದೇವಂ ಸಭಾರ್ಯಂ ।
ಪ್ರಸಾದಯಾಮಾಸ ಪುನಃಪುನಶ್ಚ
ವಿಹಾಯ ಕೋಪಂ ಚ ತಮೂಚತುಸ್ತೌ ।
ಸುಖಸ್ಯ ದುಃಖಸ್ಯ ಚ ರಾಜಸಿಂಹ
ನಾನ್ಯಃ ಕರ್ತಾ ವಾಸುದೇವಾದಿತಿ ಸ್ಮ ॥ ೭೩ ॥

ಅ॥ ಕಂಸನು ಆ ದೂಗಾದೇವಿಯಿಂದ ಹೇಳಲ್ಪಟ್ಟ ಮಾತನ್ನಾದರೂ ಕೇಳಿ ಆವಾಗಲೇ (ತಂಗಿಗೂ ಭಾವನಿಗೂ ನಾನು ವ್ಯರ್ಥವಾಗಿ ದುಃಖವನ್ನು ಕೊಟ್ಟೆನು ಎನ್ನುವ) ಪಶ್ಚಾತ್ತಾಪದಿಂದ ಹೆಂಡತಿಯಿಂದ ಕೂಡಿದ ವಸುದೇವನನ್ನು ಮತ್ತು ಮತ್ತು ಸಂತೋಷೀಕರಿಸಿದನು. ಆ ದೇವಕೀ ವಸುದೇವರಾದರೂ ಕೋಪವನ್ನು ಬಿಟ್ಟು ಆ ಕಂಸನನ್ನು ಕುರಿತು 'ಎಲೋ ರಾಜಶ್ರೇಷ್ಠನೇ ಸುಖವನ್ನು, ಮತ್ತು ದುಃಖವನ್ನು ಮಾಡುವವನು ವಾಸುದೇವನಿಂದ ಮತ್ತೊಬ್ಬನು ಇಲ್ಲವೇ ಇಲ್ಲ, ಎಂದು ಹೇಳಿದರು. ॥ ೭೩ ॥

ಮೂ॥ ಆನೀಯ ಕಂಸೋಽಥ ಗೃಹೇ ಸ್ವಮಂತ್ರಿಣಃ
ಪ್ರೋವಾಚ ಕನ್ಯಾವಚನಂ ಸಮಸ್ತಂ ।
ಶ್ರುತ್ವಾ ಚ ತೇ ಪ್ರೋಚುರತ್ಯಂತಪಾಪಾಃ
ಕಾರ್ಯಂ ಬಾಲಾನಾಂ ನಿಧನಂ ಸರ್ವಶೋಽಪಿ ॥ ೭೪ ॥

ಅ॥ ಆವೇಲೆ ಕಂಸನು (ತನ್ನ) ಅರಮನೆಯಲ್ಲಿ ತನ್ನ ಮಂತ್ರಿಗಳನ್ನು ಕರೆಸಿ ಎಲ್ಲಾ ಕನ್ನಿಕೆಯು ಹೇಳಿದ ಮಾತನ್ನೂ ಹೇಳಿದನು. ಅತ್ಯಂತ ಪಾಪಿಷ್ಠರಾದ ಆ ಮಂತ್ರಿಗಳು ಅದನ್ನು ಕೇಳಿ ಎಲ್ಲಾ ಬಾಲಕರ ಸಂಹಾರವನ್ನೂ ಮಾಡತಕ್ಕದ್ದು, ಎಂದು ಹೇಳಿದರು. ॥ ೭೪ ॥

ಮೂ ॥ ತಥೇತಿ ತಾಂಸ್ತತ್ರ ನಿಯುಜ್ಯ ಕಂಸೋ
ಗೃಹಂ ಸ್ವಕೀಯಂ ಪ್ರವಿವೇಶ ಪಾಪಃ ।
ಚೇರುಶ್ಚ ತೇ ಬಾಲವಧೇ ಸದೋದ್ಯತಾ
ಹಿಂಸಾವಿಹಾರಾಃ ಸತತಂ ಸ್ವಭಾವತಃ ॥ ೭೫ ॥

ಅ॥ ಪಾಪಿಷ್ಠನಾದ ಕಂಸನು ಹಾಗೆಯೇ ಆಗಲಿ ಎಂದು ಹೇಳಿ ಆ ಮಂತ್ರಿಗಳನ್ನು ಬಾಲಕರ ಸಂಹಾರರೂಪವಾದ ಕರ್ಮದಲ್ಲಿ ನಿಯೋಜಿಸಿ ತನ್ನ ಮನೆಯನ್ನು ಕುರಿತು ಪ್ರವೇಶಮಾಡಿದನು. ನಿರಂತರದಲ್ಲಿಯೂ ಸ್ವಾಭಾವಿಕವಾಗಿಯೇ (ಅಂದರೆ ನಿಮಿತ್ತವಿಲ್ಲದೇನೇ) ಹಿಂಸೆಯೇ ಕ್ರೀಡೆಯಾಗಿ ಉಳ್ಳ. (ಅಂದರೆ ನರಭಕ್ಷಕರಾದ) ಆ ಮಂತ್ರಿಗಳು ಬಾಲಕರನ್ನು ಕೊಲ್ಲುವುದರಲ್ಲಿ ಯಾವಾಗಲೂ ಪ್ರಯತ್ನವುಳ್ಳವರಾಗಿ ಅತ್ತಿತ್ತ ಸಂಚರಿಸುತ್ತಿದ್ದರು. ॥ ೭೫ ॥

ಮೂ ॥ ಅಥ ಪ್ರಭಾತೇ ಶಯನೇ ಶಯಾನ-
ಮುಪಶ್ಯತಾಮುಜ್ಜ್ವಲದಲಾಯತಾಕ್ಷಂ ।
ಕೃಷ್ಣಂ ಯಶೋದಾ ಚ ತಥೈವ ನಂದ
ಆನಂದಸಾಂದ್ರಾಕೃತಿಮುಪ್ರವೀಕ್ಷ್ಯಂ ॥ ೭೬ ॥

ಅ॥ ಅವತಾರಾನಂತರದಲ್ಲಿ ಪ್ರಾತಃಕಾಲದಲ್ಲಿ ಹಾಸಿಗೆಯಲ್ಲಿ ಮಲಗಿಕೊಂಡಿರುವ ಕಮಲದಳದಂತೆ ವಿಶಾಲಗಳಾದ ಕಣ್ಣುಗಳುಳ್ಳ, ಆನಂದದಿಂದ ನಿಬಿಡವಾದ ಆಕಾರವುಳ್ಳ, ತಿಳಿಯಲು ಶಕ್ಯನಾದ ಶ್ರೀಕೃಷ್ಣನನ್ನು ಯಶೋದಾದೇವಿಯು ಹಾಗೆಯೇ ನಂದಗೋಪನೂ ಕೂಡ ನೋಡಿದರು. ॥ ೭೬ ॥

ಮೂ ॥ ಮೇನಾತ ಏತೌ ನಿಜಪುತ್ರಮೇನಂ
ಸ್ರಷ್ಟಾರಮಬ್ಜಪ್ರಭವಸ್ಯ ಚೇಶಂ ।
ಮಹೋತ್ಸವಾತ್ ಪೂರ್ಣಮನಾಶ್ಚ ನಂದೋ
ವಿಪ್ರೇಭ್ಯೋಽದಾಲ್ಲಕ್ಷವಿತಾಸ್ತದಾ ಗಾಃ ॥ ೭೭ ॥

ಅ॥ ಈ ಯಶೋದಾ ನಂದಗೋಪರು ಕಮಲದಿಂದ ಉತ್ಪತ್ತಿಯುಳ್ಳ ಬ್ರಹ್ಮನನ್ನೂ ಸೃಷ್ಟಿಸತಕ್ಕ ಸರ್ವಸ್ವಾಮಿಯಾದ ಶ್ರೀಕೃಷ್ಣನನ್ನೂ ತಮ್ಮಿಬ್ಬರ ಪುತ್ರನನ್ನಾಗಿ ತಿಳಿದರು. ಪುತ್ರೋತ್ಸವ ನಿಮಿತ್ತದಿಂದ ಅಭೀಪ್ಸಿತಕಾಮದಿಂದ ಪೂರ್ಣವಾದ ಮನಸ್ಸುಳ್ಳ ನಂದಗೋಪನು ಆಗ ಲಕ್ಷಸಂಖ್ಯಾಕಗಳಾದ ಗೋವುಗಳನ್ನು(ಅಂದರೆ ಧೇನೂನಾಂ ನಿಯುತೇ ಪ್ರಾದಾದ್ವಿಪ್ರೇಭ್ಯಃ ಸಮುಲಂ ಕೃತಃ (ಸ್ಕಂದ ೧೦, ಅಧ್ಯಾ. ೬. ಶ್ಲೊ. ೩) ಎಂದು ಭಾಗವತದಲ್ಲಿ ಹೇಳಿದ ಪ್ರಕಾರ ನಿಯುತ ಗೋವುಗಳನ್ನು ಕೊಟ್ಟನು. ॥ ೭೭ ॥

ಮೂ ॥ *ಸುವರ್ಣರತ್ನಾಂಬರಭೂಷಣಾನಿ (ನಾಂ)
ಬಹೂನಿ ಗೋಜೀವಿಗಣಾಧಿನಾಥಃ ।
ಪ್ರಾದಾದಥೋಪಾಯನಪಾಣಯಸ್ತಂ
ಗೋಪಾ ಯಶೋದಾಂ ಚ ಮುದಾ ಸ್ಮಿಯೋಽಗಮನ್ ॥ ೭೮ ॥

ಅ॥ ಗೋರಸಾದಿಗಳಿಂದ ಜೀವನೋಪಾಯವುಳ್ಳ ಗೊಲ್ಲರ ಸಮೂಹಗಳಿಗೆ ಸ್ವಾಮಿಯಾದ ನಂದಗೋಪನು ಸುವರ್ಣ ರತ್ನ ಅಂಬರಗಳಿಂದ ಅಲಂಕಾರವುಳ್ಳ ಗೋವುಗಳ ಬಹು ವೃಂದಗಳನ್ನೂ ಕೊಟ್ಟನು. ಆಮೇಲೆ ಉತ್ಸವ ಕಾಲದಲ್ಲಿ ಕೊಡಲಿಕ್ಕೆ ಯೋಗ್ಯವಾದ ವಸ್ತ್ರ ಮೊದಲಾದ ಉಪಾಯನವೇ ಕೈಯಲ್ಲಿ ಉಳ್ಳ ಗೊಲ್ಲರು ನಂದಗೋಪನನ್ನು ಹೊಂದಿದರು. ಗೋಪಸ್ತ್ರೀಯರು ಕೈಕಾಣಿಕೆಯುಳ್ಳವರಾಗಿ ಯಶೋದಾದೇವಿಯನ್ನೂ ಹೊಂದಿದರು.

ವಿಶೇಷಾಂಶ—(1) ಸುವರ್ಣಾದಿಗಳಿಂದ ಅಲಂಕೃತಗಳಾಗದೆ ಇರುವ ಲಕ್ಷ ಗೋವುಗಳನ್ನು ಕೊಟ್ಟನು. ಸುವರ್ಣಾದಿಗಳಿಂದ ಅಲಂಕೃತಗಳಾದ ಅನೇಕ ಗೋವುಗಳನ್ನೂ ಕೊಟ್ಟನು. ॥ ೭೮ ॥

ಮೂ ॥ ಗತೇಷು ತತ್ರೈವ ದಿನೇಷು ಕೇಷುಚಿತ್
ಜಗಾಮ ಕಂಸಸ್ಯ ಗೃಹಂ ಸ ನಂದಃ ।
ಪೂರ್ವಂ ಹಿ ನಂದಃ ಸ ಕರಂ ಹಿ ದಾತುಂ
ಬೃಹದ್ವನಾನ್ನಿಃಸೃತಃ ಪ್ರಾಪ ಕೃಷ್ಣಂ ॥ ೭೯ ॥

ಅ॥ ಆ ನಂದಗೋಪನು ಯಮುನಾ ತೀರದಲ್ಲಿಯೇ ಕೆಲವು ದಿನಗಳು (ಅಂದರೆ ಮೂವತ್ತು ದಿವಸಗಳು) ಹೋಗುತ್ತಿರಲು ಕಂಸನ ಮನಸ್ಸಿನಲ್ಲಿ ಕುರಿತು ಹೋದನು. (ಹಾಗಾದರೆ ನಂದಗೋಪನು ತನಗೆ ಆವಾಸಭೂತವಾದ ಮಹಾವನವನ್ನು ಬಿಟ್ಟು ಯಮುನಾ ತೀರದಲ್ಲಿ ಏಕೆ ಆವಾಸವನ್ನುಮಾಡಿದನು ಎಂದರೆ)ನಂದಗೋಪನು ಯಶೋದಾದೇವಿಯು ಹಡೆಯುವುದಕ್ಕಿಂತ

* ಸುವರ್ಣರತ್ನಾಂಬರಭೂಷಣಾನಾಂ ಬಹೂನಿ = ಎಂದು ವಾದಿರಾಜೀಯ ಪಾಠವು.

ಮೊದಲು (ಕಂಸನಿಗೋಸ್ಕರ) ಕಪ್ಪವನ್ನು ಕೊಡುವುದಕ್ಕೋಸ್ಕರ- ಮಹಾವನದ್ವೆಸೆಯಿಂದ ಹೊರಟು ಹೋದವನಾಗಿ ಕಾಲಿಂದೀ ನದಿಯನ್ನು ಹೊಂದಿದನು.

ವಿಶೇಷಾಂಶ—ಬೃಹದ್ವನದಿಂದ ಹೊರಟುಹೋದ ನಂದಗೋಪನು ಬೃಹದ್ವನದ ಪಶ್ಚಿಮ ದಿಕ್ಕಿನಲ್ಲಿರತಕ್ಕ ಎರಡು ಕೋಶಗಳಿಂದ ವ್ಯವಹಿತವಾದ ಮಧುರಾ ಪಟ್ಟಣವನ್ನು ಹೊಂದುವುದ ಕ್ಕಾಗಿ ಮಹಾವನದ ಮಧ್ಯದಲ್ಲಿರುವ ಯಮುನಾ ನದಿಯನ್ನು ಹೊಂದಿದನು. ॥ ೭೯ ॥

ಮೂ ॥ ಸಹಾಗತಾ ತೇನ ತದಾ ಯಶೋದಾ
ಸುಷಾವ ದುರ್ಗಾಮಥ ತತ್ರ ಶೌರಿಃ ।
ನಿಧಾಯ ಕೃಷ್ಣಂ ಪ್ರತಿಗೃಹ್ಯ ಕನ್ಯಕಾಂ
ಗೃಹಂ ಯಯೌ ನಂದ ಉವಾಸ ತತ್ರ ॥ ೮೦ ॥

ಅ॥ ಆ ನಂದಗೋಪನಿಂದ ಕೂಡಿಕೊಂಡು ಯಶೋದಾ ದೇವಿಯು ಬಂದಳು. ಆ ದಿವಸ ದಲ್ಲಿ ಯಮುನಾ ತೀರದಲ್ಲಿ ದುರ್ಗಾದೇವಿಯನ್ನು ಹಡೆದಳು. ಆಮೇಲೆ ವಸುದೇವನು ಆ ಯಶೋದೆಯ ಮಂಚದಲ್ಲಿ ಕೃಷ್ಣನನ್ನು ಇಟ್ಟು ಯಶೋದಾದೇವಿಯಲ್ಲಿ ಹುಟ್ಟಿದ ಕನ್ನಿಕೆಯನ್ನು ಹಿಡಿದುಕೊಂಡು ಮಧುರಾಪಟ್ಟಣದಲ್ಲಿರತಕ್ಕ ತನ್ನ ಮನೆಯನ್ನು ಕುರಿತು ಹೋದನು ನಂದ ಗೋಪನು ಯಮುನಾತೀರದಲ್ಲಿಯೇ ಆವಾಸವಾಡಿದನು. ॥ ೮೦ ॥

ಮೂ ॥ ನಿರುಷ್ಯ ತಸ್ಮಿನ್ ಯಮುನಾತಟೇ ಸ
ಮಾಸಂ ಯಯೌ ಪ್ರಷ್ಟುಕಾಮೋ ನರೇಂದ್ರಂ ।
ರಾಜ್ಞೋಽಥ ತಂ ದತ್ತಕರಂ ದದರ್ಶ
ಶೂರಾತ್ಮಜೋ ವಾಕ್ಯಮುವಾಚ ಚೈನಂ ॥ ೮೧ ॥

ಅ॥ ಆ ನಂದಗೋಪನು ಆ ಯಮುನಾ ತಟದಲ್ಲಿ (ಹಡೆದ ಸ್ಥಳದಲ್ಲಿಯೇ) ಒಂದು ತಿಂಗಳು ಪರ್ಯಂತ ಆವಾಸವಾಡಿ ರಾಜಾಧಿರಾಜನಾದ ಕಂಸನನ್ನು ನೋಡಲಿಕ್ಕೆ ಇಚ್ಛಿಸಿದವ ನಾಗಿ (ಮಧುರಾಪಟ್ಟಣವನ್ನು ಕುರಿತು) ಹೋದನು. ಮಧುರಾಪಟ್ಟಣವನ್ನು ಪ್ರವೇಶವಾಡಿದ ಮೇಲೆ ರಾಜನಾದ ಕಂಸನಿಗೋಸ್ಕರ ಕೊಡಲ್ಪಟ್ಟ ಕಪ್ಪವುಳ್ಳ ಆ ನಂದಗೋಪನನ್ನು ನೋಡಿದನು. ಶೂರಪುತ್ರನಾದ ವಸುದೇವನು ನಂದಗೋಪನನ್ನು ಕುರಿತು ಮಾತನ್ನು ಹೇಳಿದನು. ॥ ೮೧ ॥

ಮೂ ॥ ಯಾಹ್ಯುತ್ಪಾತಾಃ ಸಂತಿ ತತ್ರೇತ್ಯುದೀರಿತೇ
ಜಗಾಮ ಶೀಘ್ರಂ ಯಮುನಾಂ ಸ ನಂದಃ ।
ರಾತ್ರ್ಯಾನೇವಾಗಚ್ಛಮಾನೇ ತು ನಂದೇ
ಕಂಸಸ್ಯ ಧಾತ್ರೀ ತು ಜಗಾಮ ಗೋಷ್ಠಂ ॥ ೮೨ ॥

ಅ॥ ಯಶೋದಾದೇವಿಯು ಆವಾಸವಾಡತಕ್ಕ ಸ್ಥಳದಲ್ಲಿ ಉತ್ಪಾತಗಳು ಎದ್ದಿವೆ. ಆದ ಕಾರಣ ಹೋಗು, ಈ ಪ್ರಕಾರ ಹೇಳುತ್ತಿರಲು ಆ ನಂದಗೋಪನು ಶೀಘ್ರದಲ್ಲಿ ಯಮುನಾನಾನದಿ ಯನ್ನು ಕುರಿತು ಹೋದನು. ನಂದಗೋಪನು ರಾತ್ರಿಯಲ್ಲಿಯೇ ಬರುತ್ತಿರಲು ಕಂಸನ ಉಪ ಮಾತೆಯಾದ (ಮೊಲೆ ಹಾಲನ್ನು ಕೊಟ್ಟು ಸಾಕಿದ) ಪೂತನೆಯು (ನಂದಗೋಪನು ಬರುವುದ ಕ್ಕಿಂತ ಮೊದಲೇ) ನಂದಗೋಕುಲವನ್ನು ಕುರಿತುಹೋದಳು. ॥ ೮೨ ॥

ಮೂ ॥ ಸಾ ಪೂತನಾ ನಾಮ ನಿಜಸ್ವರೂಪ-
ಮಾಚ್ಛಾದ್ಯ ರಾತ್ರೌ ಶುಭರೂಪವಚ್ಚ ।
ವಿವೇಶ ನಂದಸ್ಯ ಗೃಹಂ ಬೃಹದ್ವನ-
ಪ್ರಾಂತೇ ಹಿ ಮಾರ್ಗೇ ರಚಿತಂ ಪ್ರಯಾಣೇ ॥ ೪೫ ॥

ಅ॥ ಪೂತನೆಯೆಂದಂ ಪ್ರಸಿದ್ಧಳಾದ ಕಂಸನ ಉಪವಾತೆಯಂ ತನ್ನ ರಾಕ್ಷಸೀ ಸ್ವರೂಪವನ್ನು(ಮಾಯೆಯಿಂದ)ಆಚ್ಛಾದನವಾಡಿ ಪ್ರಶಸ್ತರೂಪದಂತೆ ರೂಪವನ್ನು ಹೊಂದಿ ಬೃಹದ್ವನದ ಪ್ರದೇಶದಲ್ಲಿ ಮಧುರಾಪಟ್ಟಣ ಪ್ರಯಾಣವಾದ ಪ್ರಸಿದ್ಧವಾದ ರಾಜವಾರ್ಗದಲ್ಲಿ ನಿರ್ಮಿತವಾದ ನಂದಗೋಪನ ವಸ್ತ್ರದ ಮನೆಯನ್ನು (ಡೇರೆಯನ್ನು) ಕಂಡು ಪ್ರವೇಶಿಸಿದಳಂ. ॥ ೪೫ ॥

ಮಾರ್ಗದಲ್ಲಿಯೂ ವಾಸ ಯೋಗ್ಯ ಸ್ಥಲವನ್ನು ತೋರಿಸುತ್ತಾರೆ—

ಮೂ ॥ ತೀರೇ ಭಗಿನ್ಯಾಸ್ತು ಯಮುನ್ಯ ವಸ್ತ್ರ-
ಗೃಹೇ ಶಯಾನಂ ಪುರುಷೋತ್ತಮಂ ತಂ ।
ಜಗ್ರಾಹ ಮಾತ್ರಾ ತು ಯಶೋದಯಾ ತಯಾ
ನಿದ್ರಾಯುಜಾ ಪ್ರೇಕ್ಷ್ಯಮಾಣಾ ಶುಭೇವ ॥ ೪೬ ॥

ಅ॥ ಯಮುನ ತಂಗಿಯಾದ ಯಮುನಾ ನದಿಯ ತೀರದಲ್ಲಿ ವಸ್ತ್ರಗೃಹದಲ್ಲಿ ಮಲಗಿಕೊಂಡಿರುವ ಪುರುಷೋತ್ತಮನಾದ ಆ ಶ್ರೀಕೃಷ್ಣನನ್ನು ನಿದ್ರೆಯಿಂದ ಯುಕ್ತಳಾದ ತಾಯಿಯಾದ ಆ ಯಶೋದಾದೇವಿಯಿಂದ ಯೋಗ್ಯಳಂತೆ ಕಾಣಲ್ಪಡತಕ್ಕ ಪೂತನೆಯಂ ಹಿಡಿದುಕೊಂಡಳಂ.

॥ ೪೬ ॥

ಮೂ ॥ ತಸ್ಮಾ ಯಯಾ ಭರ್ಷಿತಾ ನಿದ್ರಯಾ ಚ
ನ್ಯವಾರಯನ್ನೈವ ಹಿ ನಂದಜಾಯಾ ।
ತಯಾ ಪ್ರದತ್ತಂ ಸ್ತನವಿಷಾಶಿತಾಸುಭಿಃ
ಪಪೌ ಸಹೈವಾಶು ಜನಾರ್ದನಃ ಪ್ರಭುಃ ॥ ೪೭ ॥

ಅ॥ ಪೂತನೆಯ ಮೋಹನಶಕ್ತಿಯಿಂದಲೂ ನಿದ್ರೆಯಿಂದಲೂ ವಶೀಕೃತಳಾದ ನಂದಗೋಪನ ಹೆಂಡತಿಯಾದ ಯಶೋದಾದೇವಿಯಂ ತಡೆಯಲೇ ಇಲ್ಲ (ಅಂದರೆ ಮಗುವನ್ನು ಹಿಡಿಯಂಬೇಡವೆಂದಂ ಪೂತನೆಯನ್ನು ತಡೆಯಲಿಲ್ಲ) ಸರ್ವಸಮರ್ಥನಾದ ಸರ್ವೋತ್ಕೃಷ್ಟನಾದ ಶ್ರೀಕೃಷ್ಣನಂ ಪೂತನೆಯಿಂದ ಕೊಡಲ್ಪಟ್ಟ ಸ್ತನವನ್ನು ಪ್ರಾಣಗಳಿಂದ ಕೂಡಿಕೊಂಡೇ ಶೀಘ್ರದಲ್ಲಿ ಪಾನಮಾಡಿದನಂ. ॥ ೪೭ ॥

ಮೂ ॥ ಮೃತಾ ಸ್ವರೂಪೇಣ ಸುಭೀಷಣೇನ
ಪಪಾತ ಸಾ ವ್ಯಾಪ್ಯ ವನಂ ಸಮಸ್ತಂ ।
ತದಾಗಮನ್ನಂದಗೋಪೋಽಪಿ ತತ್ರ
ದೃಷ್ಟ್ವಾಚ ಸರ್ವೇಽಪ್ಯಭವನ್ ಸುವಿಸ್ಮಿತಾಃ ॥ ೪೮ ॥

ಅ॥ ಆ ಪೂತನೆಯಂ ಮೃತಳಾಗಿ ಅತಿಭಯಂಕರವಾದ ರಾಕ್ಷಸೀ ಸ್ವರೂಪದಿಂದ ಸಮಸ್ತವಾದ ಮಹಾವನ್ನು ವ್ಯಾಪಿಸಿ ಬಿದ್ದಳಂ. (ಯಾವಾಗ ಪೂತನೆಯಂ ಬಿದ್ದಳೋ) ಆಗ ನಂದ ಗೋಪನೂ ಕೂಡ ಆ ಗೋಕುಲವನ್ನು ಕುರಿತು ಬಂದನು. ಗೋಕುಲದಲ್ಲಿ ಅವಾಸಮಾಡುವ ನಂದಗೋಪನೇ ಮೊದಲಾದವರೆಲ್ಲರೂ (ಪೂತನೆಯ ಶರೀರವನ್ನು) ನೋಡಿ ಅತ್ಯಾಶ್ಚರ್ಯಯುಕ್ತರಂ ಆದರಂ. ॥ ೮೬ ॥

ಅವಳಂ ಮೊದಲಂ ಯಾರೆಂದರೆ—

ಮೂ ॥ ಸಾ ತಾಟಕಾ ಚೋರ್ವಶೀಸಂಪ್ರವಿಷ್ಟಾ
ಕೃಷ್ಣಾವಧ್ಯಾನಾನ್ನಿರಯಂ ಸಂಜಗಾಮ ।
ಸಾ ತೂರ್ವಶೀ ಕೃಷ್ಣಭುಕ್ತಸ್ತನೇನ
ಪೂತಾ ಸ್ವರ್ಗಂ ಪ್ರಯಯೌ ತತ್ಕ್ಷಣೇನ ॥ ೮೭ ॥

ಅ॥ ಉರ್ವಶಿಯಿಂದ ಪ್ರವಿಷ್ಟಳಾದ ಆ ಪೂತನೆಯಂ (ಮೊದಲಂ) ತಾಟಕಾ ನಾಮಕ ರಾಕ್ಷಸಿಯಂ (ಪೂತನಾ ದೇಹದಲ್ಲಿ ಉರ್ವಶೀಪ್ರವೇಶವು. ಉರ್ವಶಿಯಲ್ಲಿ ಪೂತನಾಪ್ರವೇಶವಲ್ಲ) ಆ ಪೂತನೆಯಂ ಶ್ರೀಕೃಷ್ಣನ ತಿರಸ್ಕಾರದಿಂದ (ಅಂದರೆ ಸ್ತನದಲ್ಲಿರತಕ್ಕ ಕಾಲಕೂಟ ವಿಷದಿಂದ ಸಂಹಾರೇಚ್ಛಾ ರೂಪವಾದ ಅಪರಾಧದದೆಸೆಯಿಂದ) ತಮಂಸ್ಸನ್ನು ಹೊಂದಿದಳಂ. ಆ ಪೂತನಾ ದೇಹದಲ್ಲಿರತಕ್ಕ ಉರ್ವಶಿಯಂ ಶ್ರೀಕೃಷ್ಣನಿಂದ ಪೀತವಾದ ಸ್ತನ್ಯದಿಂದ (ತುಂಬುರು ರಮಣ ದೋಷ ದೆಸೆಯಿಂದ) ಪವಿತ್ರೀಕೃತಳಾಗಿ ತತ್ಕ್ಷಣದಲ್ಲಿಯೇ ಸ್ವರ್ಗವನ್ನು ಕುರಿತು ಹೋದಳಂ. ॥ ೮೭ ॥

ಉರ್ವಶಿಗೆ ರಾಕ್ಷಸಿಯ ಶರೀರ ಪ್ರವೇಶದಲ್ಲಿ ಕಾರಣವನ್ನು ಹೇಳುತ್ತಾರೆ—

ಮೂ ॥ ಸಾ ತುಂಬರೋಃ ಸಂಗತ ಆವಿವೇಶ
ರಕ್ಷಸ್ತನುಂ ಶಾಪತೋ ವಿತ್ತಪಸ್ಯ ।
ಕೃಷ್ಣಸ್ಪರ್ಶಾಚ್ಛುದ್ಧಭಾವಾ ಪುನರ್ದಿವಂ
ಯಯೌ ತುಷ್ಟೇ ಕಮಲಭ್ಯಂ ರಮೇಶೇ ॥ ೮೮ ॥

ಅ॥ ಆ ಉರ್ವಶಿಯಂ ತುಂಬುರುನಾಮಕ ಗಂಧರ್ವನ ರಮಣದ್ದೆಸೆಯಿಂದ ಕುಬೇರನ ಶಾಪದ್ದೆಸೆಯಿಂದ ರಾಕ್ಷಸಿಯ ಶರೀರವನ್ನು ಪ್ರವೇಶ ಮಾಡಿದಳಂ. ಶ್ರೀಕೃಷ್ಣನ ಸ್ಪರ್ಶದಿಂದ ಶುದ್ಧ ಸ್ವಭಾವವುಳ್ಳವಳಾಗಿ ಪುನಃ ಸ್ವರ್ಗವನ್ನು ಕುರಿತು ಹೋದಳಂ. ಶ್ರೀಲಕ್ಷ್ಮೀಪತಿಯಂ ಸಂತುಷ್ಟನಾಗುತ್ತಿರಲು ಅಪ್ರಾಪ್ಯವಾದುದು ಯಾವುದಿದೆ? (ಯಾವುದೂ ಇಲ್ಲವೇ ಇಲ್ಲ) ॥೮೮॥

ಮೂ ॥ ಯದಾಪ ದೇವಶ್ಚತುರೋಽಥ ಮಾಸಾನ್
ತದೋಪನಿಷ್ಕ್ರಮಣಮಸ್ಯ ಚಾಸೀತ್ ।
ಜನ್ಮರ್ಕ್ಷಮಸ್ಮಿನ್ ದಿನ ಏವ ಚಾಸೀತ್
ಪ್ರಾತಃ ಕಿಂಚಿತ್ತತ್ರ ಮಹೋತ್ಸವೋಽಭೂತ್ ॥ ೮೯ ॥

ಅ॥ ಆ ಮೇಲೆ ಯಾವಾಗ ಶ್ರೀಕೃಷ್ಣನಂ ನಾಲ್ಕಾ ತಿಂಗಳುಂಗಳನ್ನು ಹೊಂದಿದನೋ ಆಗ (ನಾಲ್ಕನೇ ತಿಂಗಳಲ್ಲಿ ಮಾರ್ಗಶೀರ್ಷ ಮಾಸದಲ್ಲಿ) ಈ ಕೃಷ್ಣನಿಗೆ ಉಪನಿಷ್ಕ್ರಮಣವು (ಅಂದರೆ

(1) ಅಸುರನ ಶವದ ಬಗ್ಗೆ - ಏನಾಯಿತು? ಪ್ರತಿನಿಯ ಶವದ ವಿಚಾರ ಬಂದಂತೆ ಇಲ್ಲ ಹೇಳಿಲ್ಲ. ವಿಚಾರಿಸಬೇಕು.

ಪ್ರಥಮದಲ್ಲಿ ತಮ್ಮ ಮನೆಯಿಂದ ಮಾತುಲಾದಿಗಳ ಮನೆಯನ್ನು ಕುರಿತು ಕರಕೊಂಡು ಹೋಗುವಿಕೆಯು) ಆಯಿತು. ಈ ಉಪನಿಷ್ಕ್ರಮಣ ದಿನದಲ್ಲಿಯೇ ಪ್ರಾತಃಕಾಲದಲ್ಲಿಯೇ ಜನ್ಮಕಾಲದಲ್ಲಿರತಕ್ಕ ರೋಹಿಣೀ ನಕ್ಷತ್ರವು ಅಲ್ಪಕಾಲದಲ್ಲಿರತಕ್ಕದು ಆಯಿತು. ಆ ನಿಷ್ಕ್ರಾಮಣ ಕರ್ಮದಲ್ಲಿ ಮಹೋತ್ಸವವು ಆಯಿತು. ॥ ೮೯ ॥

ಮೂ ॥ ತದಾ ಶಯಾನಃ ಶಕಟಸ್ಯ ಸೋಽಧಃ
ಪದಾಕ್ಷಿಪತ್ತಂ ದಿತಿಜಂ ನಿಹಂತುಂ ।
ಅನಃ ಸಮಾವಿಶ್ಯ ದಿತೇಃ ಸುತೋಽಸೌ
ಸ್ಥಿತಃ ಪ್ರತೀಪಾಯ ಹರೇಃ ಸುಪಾಪಃ ॥ ೯೦ ॥

ಅ॥ ಅದೇ ದಿವಸದಲ್ಲಿ ಬಂಡಿಯ ಕೆಳಗೆ ಮಲಗಿಕೊಂಡಿರುವ ಶ್ರೀಕೃಷ್ಣನು ಆ ಬಂಡಿಯಲ್ಲಿರತಕ್ಕ ದೈತ್ಯನನ್ನು ಕೊಲ್ಲುವುದಕ್ಕಾಗಿ ಪಾದದಿಂದ ತಿರುಗಿಸಿದನೋ, ಆಗ ಅತಿ ಪಾಪಿಷ್ಠನಾದ ಈ ದಿತಿಪುತ್ರನು ಶ್ರೀಹರಿಗೆ ಪ್ರತಿಕೂಲವನ್ನು ಮಾಡುವುದಕ್ಕಾಗಿ ಬಂಡಿಯನ್ನು ಪ್ರವೇಶಮಾಡಿ ಇರುತ್ತಿದ್ದನು.

ವಿಶೇಷಾಂಶ—ಸ ತತ್ರೈಕೇನ ಪಾದೇನ ಶಕಟಂ ಪರ್ಯವರ್ತಯತ್ ಶ್ರೀಕೃಷ್ಣನು ಒಂದೇ ಪಾದದಿಂದ ಬಂಡಿಯನ್ನು ತಿರುಗಿಸಿದನು ಎಂದು ಹರಿವಂಶದಲ್ಲಿ. ॥ ೯೦ ॥

ಮೂ ॥ ಕ್ಷಿಪ್ತೋಽನಸಿಸ್ಥಃ ಶಕಟಾಕ್ಷನಾಮಾ
ಸ ವಿಷ್ಣುನೇತ್ವಾ ಸಹಿತಃ ಪಪಾತ ।
ಮಮಾರ ಚಾಶು ಪ್ರತಿಭಗ್ನಗಾತ್ರೋ
ವ್ಯತ್ಯಸ್ತ ಚಕ್ರಾಕ್ಷಮಭೂದನಶ್ಚ ॥ ೯೧ ॥

ಅ॥ ಶ್ರೀಕೃಷ್ಣನಿಂದ ತಾಡಿತನಾದ (ವಾದಿರಾಜೀಯ) (ಇತ್ವಾ ಸಹಿತಃ =) ಬಂಡಿಯಿಂದ ಚೆನ್ನಾಗಿ ಕೂಡಿರುವ, ಬಂಡಿಯಲ್ಲಿರತಕ್ಕ ಶಕಟಾಕ್ಷನೆಂದು ಹೆಸರುಳ್ಳ ಅಸುರನು ಬಿದ್ದನು. (ಜನಾರ್ದನ ಭಟ್ಟೀಯ) ಶ್ರೀಕೃಷ್ಣನಿಂದ ತಾಡಿತನಾದ ಬಂಡಿಯಲ್ಲಿರತಕ್ಕ ಶಕಟಾಕ್ಷ ನಾಮಕ ಅಸುರನು ಬಿದ್ದನು. ಮತ್ತು ವಿಷ್ಣುವಿನಿಂದ ಬಿಸಾಡಲ್ಪಟ್ಟ (ಸಹಿತಃ =) ರಸಕುಪ್ಯಾದಿ ಸಂಭಾರಗಳಿಂದ ಕೂಡಿರುವ (ಇತ್ವಾ ಚ =) ಬಂಡಿಯೂ ಕೂಡ ಬಿದ್ದಿತು. ಭಂಗವನ್ನು ಹೊಂದಿದ ಹಸ್ತಪಾದಾದ್ಯಂಗಗಳುಳ್ಳ ಶಕಟಾಕ್ಷ ನಾಮಕ ಅಸುರನು ತತ್ಕಾಲದಲ್ಲಿಯೇ ಸತ್ತು ಹೋದನು, ಬಂಡಿಯೂ ಕೂಡ ವಿಪರೀತಗಳಾದ ಚಕ್ರಗಳೂ ಅಕ್ಷವೂ (ಚಕ್ರಗಳ ರಂಧ್ರದಲ್ಲಿ ಪ್ರವಿಷ್ಟವಾದ ಕಾಷ್ಟ ವಿಶೇಷವೂ) ಇವುಗಳುಳ್ಳದ್ದು ಆಯಿತು. ॥ ೯೧ ॥ (1)

ಮೂ ॥ ಸಾ ಸಂಭ್ರಮಾತ್ತಂ ಪ್ರತಿಗೃಹ್ಯ ಶಂಕಯಾ
ಕೃಷ್ಣಂ ಯಶೋದಾ ದ್ವಿಜವರ್ಯಸೂಕ್ತಿಭಿಃ ।
ಸಂಸ್ನಾಪಯಾಮಾಸ ನದೀತಟಾತ್ತದಾ
ಸಮಾಗತಾ ನಂದವಚೋಭಿತರ್ಜಿತಾ ॥ ೯೨ ॥

ಅ॥ ಆಗ ನಂದಗೋಪನ ವಚನಗಳಿಂದ (ಅಂದರೆ ಮಗುವನ್ನು ಬಿಟ್ಟು ಅತ್ತಿತ್ತ ಸಂಚರಿಸುತ್ತಾ ಈ ಪ್ರಕಾರಗಳಾದ ವಾಕ್ಯಗಳಿಂದ ಬೈಯಿಸಿಕೊಳ್ಳಲ್ಪಟ್ಟ ನದಿಯ ತೀರದ್ದೆಸೆಯಿಂದ (ಶಕಟ ಸವಿಶಾಪಕ್ಕೆ) ಬಂದಿರುವ ಆ ಯಶೋದಾ ದೇವಿಯು ಭಯದ್ದೆಸೆಯಿಂದ ಆ ಶ್ರೀಕೃಷ್ಣನನ್ನು ಹಿಡಿದುಕೊಂಡು (ಪಿಶಾಚಾದಿಗಳ ಬಾಧ) ಶಂಕೆಯಿಂದ ಬ್ರಾಹ್ಮಣ ಶ್ರೇಷ್ಠರ ಭಯಂಪರಿಹಾರಕ ರೂಪಗಳಾದ ವಚನಗಳಿಂದ ಸ್ನಾನ ಮಾಡಿಸಿದಳು. ॥ ೯೨ ॥

ಮೂ ॥ ಹತ್ವಾ ತು ತಂ ಕಂಸಭೃತ್ಯಂ ಸ ಕೃಷ್ಣಃ
ಶಿಶ್ಯೇ ಪುನಃ ಶಿಶುವತ್ಸರ್ವಶಾಸ್ತಾ ।
ಏವಂ ಗೋಪಾನ್ ಪ್ರೀಣಯನ್ ಬಾಲಕೇಲೀ-
ವಿನೋದತೋ ನ್ಯವಸತ್ತತ್ರ ದೇವಃ ॥ ೯೩ ॥

ಅ॥ ಸರ್ವರನ್ನು ಶಿಕ್ಷಿಸತಕ್ಕ ಆ ಶ್ರೀಕೃಷ್ಣನು ಕಂಸನ ಭೃತ್ಯನಾದ ಆ ಶಕಟಾಕ್ಷನನ್ನಾದರೂ ಸಂಹರಿಸಿ ಪುನಃ ಮಕ್ಕಳಂತೆ ಮಲಗಿಕೊಂಡನು. ಕ್ರೀಡಾದಿಗುಣವಿಶಿಷ್ಟನಾದ ಶ್ರೀಹರಿಯು ಬಾಲಕರ ಕ್ರೀಡೆಗಳ ವಿನೋದದ್ದೆಸೆಯಿಂದ ಹಿಂದೆ ಹೇಳಿದ ಪ್ರಕಾರ ಗೊಲ್ಲರನ್ನು ಸಂತೋಷಪಡಿಸುತ್ತಾ ಆ ಗೋಷ್ಠದಲ್ಲಿಯೇ ಆವಾಸಮಾಡಿಕೊಂಡು ಇದ್ದನು. ॥ ೯೩ ॥

ಮೂ ॥ ವಿವರ್ಧಮಾನೇ ಲೋಕದೃಷ್ಟ್ಯೈವ ಕೃಷ್ಣೇ
ಪಾಂಡುಃ ಪುನಃ ಪ್ರಾಹ ಪೃಥಾವಿದಂ ವಚಃ ।
ಧರ್ಮಿಷ್ಠೋ ನೌ ಸೂನುರಗ್ರೇ ಬಭೂವ
ಬಲದ್ವಯಜ್ಯೇಷ್ಠ ಉತಾಪರಶ್ಚ ॥ ೯೪ ॥

ಅ॥ ಶ್ರೀಕೃಷ್ಣನು ಅಜ್ಞ ಜನರ ದೃಷ್ಟಿಯನ್ನು ಅಪೇಕ್ಷಿಸಿಯೇ ಅಭಿವೃದ್ಧನಾಗುತ್ತಿರಲು ಪಾಂಡುರಾಜನು ಪುನಃ ಕುಂತಿಯನ್ನು ಕುರಿತು ಈ ಮಾತನ್ನು ಹೇಳಿದನು. ನಮ್ಮಿಬ್ಬರಿಗೆ ಪ್ರಥಮದಲ್ಲಿ ಧರ್ಮಿಷ್ಠನಾದ ಮಗನು ಆದನು. ಇವನಲ್ಲಿ ಎರಡನೆಯವನು ಬಾಹುಬಲ ಜ್ಞಾನ ಬಲ ಈ ಎರಡರಿಂದಲೂ ಜ್ಯೇಷ್ಠನಾದ ಮಗನು ಆದನು ॥ ೯೪ ॥

ಮೂ ॥ ಯದ್ಯೈಕ ಏವಾತಿಬಲೋಪಪನ್ನೋ
ಭವೇತ್ತದಾ ತೇನ ಪರಾವಮರ್ದೇ ।
ಪ್ರವರ್ತಮಾನೇ ಸ್ವಪುರಂ ಹರೇಯುಃ-
ಶ್ಚೌರ್ಯಾತ್ಪರೇ ತದ್ದ್ವಯಮತ್ರ ಯೋಗ್ಯಂ ॥ ೯೫ ॥

ಅ॥ ಯಾವಾಗ ಅತಿಶಯವಾದ ಬಲದಿಂದ ಕೂಡಿರುವ ಒಬ್ಬನೇ ಪುತ್ರನು ಆದಾನೋ, ಆಗ ಆ ಬಲಿಷ್ಠ ಪುತ್ರನಿಂದ ಶತ್ರುಗಳಿಂದ ಕೂಡಿಕೊಂದು ಯುದ್ಧವು ಪ್ರವೃತ್ತವಾಗುತ್ತಿರಲು ಶತ್ರುಗಳು ಚೌರ್ಯದಿಂದ ತನ್ನ ರಾಜಧಾನಿಯನ್ನು ಅಪಹಾರ ಮಾಡಿಯಾರು ಆದಕಾರಣ ರಾಜ್ಯವನ್ನು ಪರಿಪಾಲಿಸುವ ವಿಷಯದಲ್ಲಿ ಜ್ಞಾನಬಲ ಬಾಹುಬಲಗಳಿಂದ ಕೂಡಿರುವ ಎರಡು ಮಕ್ಕಳು ಯೋಗ್ಯರು. ॥ ೯೫ ॥

ಮೂ ॥ ಶಸ್ತ್ರಾಸ್ತ್ರವಿದ್ವೀರ್ಯವಾನ್ಸೌ ಸುತೋಽನ್ಯೋ
ಭವೇದ್ದೇವಂ ತಾದೃಶವಾಹ್ವಯಾತಃ ।
ಶೇಷಸ್ತವ ಭ್ರಾತೃಸುತೋಽಭಿಜಾತ-
ಸ್ತಸ್ಮಾನ್ನಾಸೌ ಸುತದಾನಾಯ ಯೋಗ್ಯಃ ॥ ೯೬ ॥

ಅ॥ ಶಸ್ತ್ರಗಳನ್ನೂ ಅಸ್ತ್ರಗಳನ್ನೂ ತಿಳಿದಿರುವ, ವೀರ್ಯವುಳ್ಳ, ಭೀಮನಿಂದ ಇತರನಾದ ಬಲಾಢ್ಯನು ನವ್ಮಿಬ್ಬರಿಗೆ ಮಗನು ಆಗಬೇಕು. ಆದಕಾರಣ ಹೀಗೆ ಬಲಿಷ್ಠನಾದ ಪುತ್ರನನ್ನು ಹುಟ್ಟಿಸಲಿಕ್ಕೆ ಯೋಗ್ಯನಾದವನನ್ನು ಕರೆಯಬೇಕು. (ಅಂತಹನು ಯಾವನು ಎಂದರೆ ಪರಿಶೇಷ ಪ್ರಮಾಣದಿಂದ ಇಂದ್ರನೇ ಆಗಬೇಕೆನ್ನುತ್ತಾರೆ. ಏಕೆಂದರೆ) ಶೇಷನು ನಿನ್ನ ಸಹೋದರನಾದ ವಸುದೇವನ ಬಲಭದ್ರಾಖ್ಯ ಮಗನಾಗಿ ಹುಟ್ಟಿರುತ್ತಾನೆ. ಆದಕಾರಣ ಈ ಶೇಷನು ಮಗನನ್ನು ಕೊಡಲಿಕ್ಕೆ (ಅಂದಶೆ ಹುಟ್ಟಿಸಲಿಕ್ಕೆ) ಯೋಗ್ಯನಲ್ಲ. ॥ ೯೬ ॥

ಮೂ ॥ ನ ವೈ ಸುಪರ್ಣಃ ಸುತದೋ ನರೇಷು
ಪ್ರಜಾಯತೇ ಚಾಸ್ಯ ಯತಸ್ತಥಾಜ್ಞಾ ।
ಕೃತಾ ಪುರಾ ಹರಿಣಾ ಶಂಕರಸ್ತು
ಕ್ರೋಧಾತ್ಮಕಃ ಪಾಲನೇ ನೈವ ಯೋಗ್ಯಃ ॥ ೯೭ ॥

ಅ॥ ಮೊದಲು ಶ್ರೀಕೃಷ್ಣನಿಂದ ಈ ಗರುಡನಿಗೇನೇ ಯಾವ ಕಾರಣದಿಂದ ಹಾಗೆಯೇ (ಅಂದರೆ ಮನುಷ್ಯರಲ್ಲಿ ಅವತಾರವನ್ನು ಮಾಡಬೇಡ ಎಂದು) ಆಜ್ಞೆಯು ಮಾಡಲ್ಪಟ್ಟಿದೋ, ಆದಕಾರಣ ಗರುಡನು ಮಗನನ್ನು ಹುಟ್ಟಿಸುವವನಾಗಿ ಮನುಷ್ಯರಲ್ಲಿ ನಿಶ್ಚಯವಾಗಿಯೂ ಹುಟ್ಟುವುದಿಲ್ಲ. ಕ್ರೋಧವನ್ನು ಹುಟ್ಟಿಸತಕ್ಕ ತಮೋಗುಣಕ್ಕೆ ಅಭಿಮಾನಿಯಾದ ಶಂಕರನಾದರೂ ರಾಜ್ಯವನ್ನು ರಕ್ಷಿಸಲಿಕ್ಕೆ ಯೋಗ್ಯನೇ ಅಲ್ಲ. ॥ ೯೭ ॥

ಮೂ ॥ ಅತೋ ಮಹೇಂದ್ರೋ ಬಲವಾನನಂತ-
ಸ್ತೇಷಾಂ ಸಮಾಹ್ವಾನಮಿಹಾರ್ಹತಿ ಸ್ವರಾಟ್ ।
ಇತೀರಿತಾ ಸಾಹ್ವಯದಾಶು ವಾಸವಂ
ತತಃ ಪ್ರಜಜ್ಞೇ ಸ್ವಯಮೇವ ಶಕ್ರಃ ॥ ೯೮ ॥

ಅ॥ ಆದಕಾರಣ ಆ ಶೇಷ ಗರುಡ ರುದ್ರ ಮೂವರ ವ್ಯವಧಾನವಿಲ್ಲದಿರುವ ಪುರುಂದರನು ಬಲಿಷ್ಠನಾಗಿರುತ್ತಾನೆ. (ಅಂದರೆ ಜ್ಞಾನಭಕ್ತಿಗಳುಳ್ಳವನು ಶೇಷಾದಿಗಳ ಅನಂತರದಲ್ಲಿ ತಾರತಮ್ಯಸ್ಥನು ಇಂದ್ರನೇ.) ಆದಕಾರಣ ದೇವೇಂದ್ರನು ಚೆನ್ನಾಗಿ ಕರೆಯುವಿಕೆಯನ್ನು ಹೊಂದಲು ಯೋಗ್ಯನಾಗಿರುತ್ತಾನೆ. (ಅಂದರೆ ದೇವೇಂದ್ರನನ್ನೇ ಕರೆಯಬೇಕು.) ಈ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟ ಆ ಕುಂತೀದೇವಿಯು ದೇವೇಂದ್ರನನ್ನು ಶೀಘ್ರದಲ್ಲಿ ಕರೆದಳು. (ಅಂದರೆ ಪುತ್ರೋತ್ಪತ್ತಿಯನ್ನು ಮಾಡುವುದಕ್ಕಾಗಿ ಪ್ರಾರ್ಥಿಸಿದಳು. ರಮಣಾನಂತರದಲ್ಲಿ ದೇವೇಂದ್ರನು (ತನ್ನಿದ್ದೆಸೆಯಿಂದ) ತಾನೇ ಹುಟ್ಟಿದನು. ॥ ೯೮ ॥

① ಉಚ್ಛ್ವಾಸ ನಿಶ್ವಾಸಗಳು — ಅ ॥ ಶ್ಲೋ 22 ಕ್ಕೆ ವಿಶೇಷ ಬರಲಿಲ್ಲವೇ ?

ಮೂ ॥ ಸ ಚಾರ್ಜುನೋ ನಾಮ ನರಾಂಶಯುಕ್ತೋ
ವಿಷ್ಣ್ವವೇತೀ ಬಲವಾನಸ್ತ್ರವೇತ್ತಾ ।
ರೂಪ್ಯನ್ಯಃ ಸ್ಯಾತ್ಸೂನುರಿತ್ಯುಚ್ಯಮಾನಾ
ಭರ್ತಾರ್ಜು ಕುಂತೀ ನೇತಿ ತಂ ಪ್ರಾಹ ಧರ್ಮಾತ್ ॥ ೯೯ ॥

ಆ ಕುಂತೀಪುತ್ರನು ಶ್ರೀಹರಿ ವಾಯು ಶೇಷ ಇವರ ಅಂಶದಿಂದ ಕೂಡಿದವನು, ಶ್ರೀ ವಿಷ್ಣುವಿನ ವಿಶೇಷಾವೇಶವುಳ್ಳವನು, ಬಲಿಷ್ಠನು, ಅಸ್ತ್ರಜ್ಞನು, ಇಂತಹನು ಅರ್ಜುನನೆಂದು ಪ್ರಸಿದ್ಧನಾದನು. (ಭೀಮಾರ್ಜುನರು ಅತಿ ಮನೋಹರರಾದಾಗ್ಯೂ ವಜ್ರದಂತೆ ಅತಿ ಕಠಿನವಾದ ಶರೀರವುಳ್ಳವರಾದುದರಿಂದ ಅತಿ ಮೃದುವಾದ ಶರೀರವುಳ್ಳ) ಇನ್ನೊಬ್ಬರು ಪ್ರಶಸ್ತ ರೂಪವುಳ್ಳವನು ಮಗನು ಆಗಬೇಕು, ಈ ಪ್ರಕಾರ ಗಂಡನಾದ ಪಾಂಡುರಾಜನಿಂದ ಹೇಳಿಸಿ ಕೊಳ್ಳಲ್ಪಟ್ಟ ಕುಂತೀದೇವಿಯು ಮಹತ್ಕಾರ್ಯವಿಲ್ಲದೆ ಪುತ್ರೋತ್ಪತ್ತಿಗಾಗಿಯೇ ಪರಪುರುಷ ಸಂಬಂಧವನ್ನು ಮಾಡಿದರೆ ಮಹಾನರ್ಥವಿದೆ ಎಂದು ಧರ್ಮಶಾಸ್ತ್ರದಲ್ಲಿ ಹೇಳಿರುವುದರಿಂದ ಆ ಪಾಂಡುರಾಜನನ್ನು ಕುರಿತು ಇದು ಯೋಗ್ಯವಲ್ಲ ಎಂದು ಹೇಳಿದಳು, ॥ ೯೯ ॥

ಬೃಹಸ್ಪತಿಗೆ ಪುನಃ ಅವತಾರ ಪ್ರಕಾರವನ್ನು ಹೇಳುತ್ತಾರೆ—

ಮೂ ॥ ಬೃಹಸ್ಪತಿಃ ಪೂರ್ವಮಭೂದ್ಧರೇಃ ಪದಂ
ಸಂಸೇವಿತುಂ ಪವನಾವೇಶಯುಕ್ತಃ ।
ಸ ಉದ್ಧವೋ ನಾಮ ಯದುಪ್ರವೀರಾತ್
ಜಾತೋ ವಿದ್ವಾನುಪಗವನಾಮಧೇಯಾತ್ ॥ ೧೦೦ ॥

ಅ॥ ಯಂಧಿಷ್ಠಿರ ಭೀಮಾದಿಗಳಿಂದಲೂ ರಾಮಕೃಷ್ಣಾದಿಗಳಿಂದಲೂ ಮೊದಲು ಬೃಹಸ್ಪತ್ಯಾಚಾರ್ಯರು ಶ್ರೀಹರಿಯ ಪಾದವನ್ನು ಸೇವಿಸುವುದಕ್ಕಾಗಿ ದ್ರೋಣ ನಾಮಕನಾಗಿ ಆಗಿದ್ದನು, ಆ ಬೃಹಸ್ಪತ್ಯಾಚಾರ್ಯರು ವಾಯುದೇವರ ಆವೇಶದಿಂದ ಕೂಡಿದವರಾಗಿ ಜ್ಞಾನಿಗಳಾಗಿ ಉದ್ಧವನೆಂದು ಪ್ರಸಿದ್ಧನಾದವನಾಗಿ ಉಪಗವನೆಂದು ಹೆಸರುಳ್ಳ ಯದುಶ್ರೇಷ್ಠನಿಂದ ಹುಟ್ಟಿದನು, ॥ ೧೦೦ ॥

ಹಾಗಾದರೆ ದ್ರೋಣ ಸ್ವರೂಪದಿಂದ ಹುಟ್ಟಿರುವ ಬೃಹಸ್ಪತ್ಯಾಚಾರ್ಯರು ಪುನಃ ಉದ್ಧವ ಸ್ವರೂಪದಿಂದ ಏಕೆ ಅವತಾರ ಮಾಡಿರುವರು, ಎಂದರೆ—

ಮೂ ॥ ದ್ರೋಣಾತ್ಮಕಂ ನಾತಿತರಾಂ ಸ್ವಸೇವಕಂ
ಕುರ್ಯಾದ್ಧರಿರ್ನಾವಿತಿ ಭೂಯ ಏವ।
ಸ ಉದ್ಧವತ್ವೇನ ವತತಾರ ಯಾದವೇ-
ಷ್ವಾಸೇವನಾರ್ಥಂ ಪುರುಷೋತ್ತಮಸ್ಯ ॥ ೧೦೧ ॥

ಅ॥ ಶ್ರೀಕೃಷ್ಣನು ದ್ರೋಣ ಸ್ವರೂಪಿಯಾದ ನನ್ನನ್ನು ಅತ್ಯಂತವಾಗಿ ತನ್ನ ಸೇವಕನನ್ನಾಗಿ ಮಾಡಿಸಲಾರನು. ಆದಕಾರಣ ಮತ್ತು ಆ ಬೃಹಸ್ಪತ್ಯಾಚಾರ್ಯರು ಶ್ರೀ ಪುರುಷೋತ್ತಮನಾದ ಶ್ರೀಕೃಷ್ಣನ ಜೆನ್ನಾಗಿ ಸೇವೆಗೋಸ್ಕರ (ಅಂದರೆ ಸ್ವಯೋಗ್ಯತಾಪೂರ್ತಿರೂಪವಾದ ಸೇವೆಯನ್ನು ಮಾಡುವುದಕ್ಕಾಗಿ) ಉದ್ಧವಸ್ವರೂಪನಾಗಿ ಯಾದವರಲ್ಲಿ ಅವತಾರ ಮಾಡಿದನು.

ವಿಶೇಷಾಂಶ—ಅತಿತರಾಂ ಎನ್ನುವುದರಿಂದ ಭೂಭಾರ ಹರಣಾಖ್ಯ ಸೇವೆಯನ್ನು ಚೆನ್ನಾಗಿ ಮಾಡಿಸಬೇಕು. ಬ್ರಾಹ್ಮಣನಾದ ಪ್ರಯುಂಕ್ತ 'ತ್ವಯೋಪಭುಕ್ತಸ್ರಗ್ಗಂಧವಾಸೋ-ಲಂಕಾರ ಚರ್ಚಿತಾಃ । ಉಚ್ಛಿಷ್ಟಭೋಜಿನೋ ದಾಸಾಸ್ತವ ಮಾಯಾಂ ಜಯೇಮಹಿ' ಇತ್ಯಾದಿಗಳಿಂದ ಉದ್ಧವೋಕ್ತವಾದ ಸ್ವನಿರ್ಮಾಲ್ಯಧಾರಣ ಸ್ವೋಚ್ಛಿಷ್ಟ ಭೋಜನ ಮೊದಲಾದ ಅಂತರಂಗ ಸೇವೆಗಳಲ್ಲಿಯೂ ಪ್ರೇರಿಸಲಾರನು. ಅದಕ್ಕಾಗಿ ಉದ್ಧವಸ್ವರೂಪನಾಗಿ ಅವತಾರ ಮಾಡಿದನು. ॥ ೧೦೧ ॥

ಮೂ ॥ ಬೃಹಸ್ಪತೇರೇವ ಸ ಸರ್ವವಿದ್ಯಾ
ಅವಾಪ ಮಂತ್ರೀ ನಿಪುಣಃ ಸರ್ವವೇತ್ತಾ ।
ವರ್ಷತ್ರಯೇ ತತ್ಪರತಃ ಸ ಸಾತ್ಯಕಿ-
ರ್ಜಜ್ಞೇ ದಿನೇ ಚೇಕಿತಾನಶ್ಚ ತಸ್ಮಿನ್ ॥ ೧೦೨ ॥

ಅ ॥ ಆ ಉದ್ಧವನು ಬೃಹಸ್ಪತಿಯ ಸಕಾಶದಿಂದಲೇ ಸರ್ವ ವಿದ್ಯೆಯನ್ನೂ ಹೊಂದಿದನು; ಸಂಧಿವಿಗ್ರಹಾದಿಕರಣಗಳನ್ನು ತಿಳಿದವನೂ, ಚತುರನೂ, ಸರ್ವಜ್ಞನೂ ಆದನು, (ಅವತಾರ ಮಾಡಿದ ದೇವತೆಗಳ ವಯಂಸ್ಸಿನ ತಾರತಮ್ಯವನ್ನು ಹೇಳುತ್ತಾರೆ.) ಉದ್ಧವನು ಹುಟ್ಟಿದ ಮೇಲೆ ಮೂರು ವರ್ಷಗಳು (ದಾಟಿದ ಮೇಲೆ) ಪೂರ್ವೋಕ್ತನಾದ ಸಾತ್ಯಕಿಯು ಹುಟ್ಟಿದನು. ಅದೇ ದಿವಸದಲ್ಲಿ ಚೇಕಿತಾನಾಖ್ಯ ಯಾದವನೂ ಕೂಡ ಹುಟ್ಟಿದನು. ॥ ೧೦೨ ॥

ಮೂ ॥ ಮರುತ್ಸು ನಾಮ್ನು ಪ್ರವಹೋ ಯದುಷ್ವಭೂತ್
ಸ ಚೇಕಿತಾನೋ ಹರಿಸೇವನಾರ್ಥಂ ।
ತದೈವ ಜಾತೋ ಹೃದಿಕಾತ್ಮಜೋಽಪಿ
ವರ್ಷತ್ರಯೇ ತತ್ಪರತೋ ಯುಧಿಷ್ಠಿರಃ ॥ ೧೦೩ ॥

ಅ॥ ವಾಯುಂಗಳ ಮಂಧ್ಯದಲ್ಲಿ ಪ್ರವಹನೆಂದು ಪ್ರಸಿದ್ಧನಾದವನು ಯಾವ ವಾಯುವೋ, ಆ ಪ್ರವಹನು ಶ್ರೀಹರಿಯ ಸೇವೆಗೋಸ್ಕರ ಯಾದವರಲ್ಲಿ ಚೇಕಿತಾನ ನಾಮಕನಾಗಿ ಹುಟ್ಟಿದನು. ಅದೇ ದಿನದಲ್ಲಿಯೇ ಹೃದಿಕನ ಮಂಗನಾದ ಕೃತವರ್ಮನೂ ಕೂಡ ಹುಟ್ಟಿದನು. ಆ ಕೃತವರ್ಮನು ಹುಟ್ಟಿದ ಮೇಲೆ ಮೂರು ವರ್ಷಗಳು (ದಾಟಿದ ಮೇಲೆ) ಯುಧಿಷ್ಠಿರನು ಹುಟ್ಟಿದನು. ॥೧೦೩॥

ಮೂ ॥ ತತೋಽಬ್ದತೋ ಭೂಭರಸಂಹೃತೌ ಹರೇ-
ರಂಗತ್ವಮಾಪ್ತುಂ ಗಿರಿಶೋಽಜನಿಷ್ಟ ।
ಅಶ್ವತ್ಥಾಮಾ ನಾಮತೋಽಶ್ವಧ್ವನಿಂ ಸ
ಯಸ್ಮಾಚ್ಚಕ್ರೇ ಜಾಯಮಾನೋ ಮಹಾತ್ಮಾ ॥ ೧೦೪ ॥

ಅ॥ ಯುಧಿಷ್ಠಿರನು ಹುಟ್ಟಿದ ಮೇಲೆ ಒಂದು ಸಂವತ್ಸರದ ಮೇಲೆ (ಎರಡನೇ ವರ್ಷವು ಪ್ರಾಪ್ತವಾಗುತ್ತಿರಲು) ರುದ್ರನು ಭೂಮಿಗೆ ಭಾರಭೂತರಾದ ದೈತ್ಯಾದಿಗಳ ವಿನಾಶರೂಪ ಕರ್ಮದಲ್ಲಿ ಶ್ರೀಕೃಷ್ಣನಿಗೆ ಸಾಹಾಯ್ಯವನ್ನು ಹೊಂದುವುದಕ್ಕಾಗಿ ಹುಟ್ಟಿದನು. ಯಾವ ಕಾರಣದಿಂದ ಹುಟ್ಟುತಕ್ಕ ಉತ್ತಮ ಸ್ವರೂಪನಾದ ರುದ್ರನು ಉಚ್ಚೈಃಶ್ರವಸ್ ಎನ್ನುವ ಕುದುರೆಯ ಧ್ವನಿ

ಯಂತೆ ಧ್ವನಿಯಂನ್ನು ವಹಾಡಿದನೋ ಆದಕಾರಣ ನಾವಂದಿಂದ ಅಶ್ವತ್ಥಾವಹಾ ಎಂದಂ ಪ್ರಸಿದ್ಧನಾದನಂ.

ವಿಶೇಷಾಂಶ–ಅಶ್ವೇ ಸ್ಥಿತಃ ಅಶ್ವತ್ಥಃ=ಅಶ್ವತ್ಥೇನ ಆವಹಾ=ಅಶ್ವದಲ್ಲಿರತಕ್ಕ ಧ್ವನಿಯಿಂದ ಕೂಡಿಕೊಂಡಂ ಹುಟ್ಟಿರಂವುದರಿಂದ ಅಶ್ವತ್ಥಾವಹಾ ಎಂದಂ ವ್ಯುತ್ಪತ್ತಿಯಂ. ॥ ೧೦೪ ॥

ಮೂ ॥ ಸ ಸರ್ವವಿದ್ಬಲವಾನಸ್ತ್ವೇತ್ಥಾ
ಕೃಪಸ್ವಸಾ ಯಾಂ ದ್ರೋಣವೀರ್ಯೋದ್ಭವೋಽಭೂತ್ ।
ಸುಯೋಧನಸ್ತಚ್ಚತುರ್ಥೇಽಹ್ನಿ ಜಾತ–
ಸ್ತಸ್ಯಾಸರೇದ್ಯುರ್ಭೀಮಸೇನಃ ಸುಧೀರಃ ॥ ೧೦೫ ॥

ಅ॥ ಆ ಅಶ್ವತ್ಥಾವಂನಂ ಸರ್ವಜ್ಞನಂ, ಬಲಿಷ್ಠನಂ, ವಿಶೇಷವಾಗಿ ಅಸ್ತ್ರಜ್ಞನಂ ಯಾವ ಕೃಪಿಯಂನ್ನು ಕೃಪಾಚಾರ್ಯರ ತಂಗಿಯಿಂದಂ (ಜನರಂ ಹೇಳುತ್ತಾರೋ ಅವಳಲ್ಲಿ) ದ್ರೋಣಾಚಾರ್ಯರ ರೇತಸ್ಸಿನಿಂದ ಉತ್ಪತ್ತಿಯಾಗಳ್ಳವನಾದನಂ. ಆ ಅಶ್ವತ್ಥಾವಂನಂ ಹುಟ್ಟಿ ನಾಲ್ಕನೇ ದಿನದಲ್ಲಿ ಸುಯೋಧನನಂ ಹುಟ್ಟಿದನು. ಆ ದುರ್ಯೋಧನನಂ ಹುಟ್ಟಿ ಎರಡನೇ ದಿವಸದಲ್ಲಿ ಅತಿ ಧೀರನಾದ ಭೀವಂಸೇನನಂ ಹುಟ್ಟಿದನಂ.

ವಿಶೇಷಾಂಶ—ಹೀಗಾದರೆ 'ಶತಂ ಸುಯೋಧನಾದಯಃ ಬಭೂವುರನ್ವಹಂ' ಎನ್ನುವುದರಿಂದ ವಿರೋಧವೆಂದಂ ಶಂಕಿಸಕೂಡದಂ ದುರ್ಯೋಧನನಂ ಹುಟ್ಟಿ ವಂರಂದಿವಸದಲ್ಲಿ ಕುಂತಿಯಲ್ಲಿ ಯಾವಾಗ ಭೀವಂಸೇನನಂ ಹುಟ್ಟಿದನೋ ಅದೇ ದಿವಸದಲ್ಲಿ ಎರಡನೇ ಘಟದ್ದೆಸೆಯಿಂದ ದುಶ್ಶಾಸನನಿಗೆ ಉತ್ಪತ್ತಿಯಂ ಕೂಡಬಹುದಂ. ॥ ೧೦೫ ॥

ಮೂ ॥ ಯದಾ ಸ ಮಾಸದ್ವಿತಯೇನ ಬಭೂವ
ತದಾ ರೋಹಿಣ್ಯಾಂ ಬಲದೇವೋಽಭಿಜಾತಃ ।
ಬಲೀ ಗುಣಾಢ್ಯಃ ಸರ್ವವೇದೀ ಯ ಏವ
ಸೇವಾಖಿನ್ನೋ ಲಕ್ಷ್ಮಣೋಽಗ್ರೇ ಹರೇರ್ಭೂತ್ ॥ ೧೦೬ ॥

ಅ॥ ಆ ಭೀವಂಸೇನನು ಯಾವಾಗ ಎರಡು ತಿಂಗಳುಗಳುಳ್ಳವನು ಆದನೋ ಆಗ ಅದೇ ದಿನದಲ್ಲಿ ಮೊದಲು ತ್ರೇತಾಯುಗದಲ್ಲಿ ರಾಮಾವತಾರದಲ್ಲಿ ವಹಾಡಿದ ರಾವಂಚಂದ್ರ ದೇವರ ಬಹು ಸೇವೆಯಿಂದ ಶ್ರಾಂತನಾದ ಯಾವ ಲಕ್ಷ್ಮಣನು ಇರುತ್ತಿದ್ದನೋ ಆತನೇ ಶಾರೀರ ಬಲವುಳ್ಳವನಂ, ಹರಿಭಕ್ತ್ಯಾದಿ ಗುಣಗಳಿಂದ ಶ್ರೇಷ್ಠನು, ಸರ್ವಜ್ಞನಂ, (ಅಂದರೆ ಜ್ಞಾನಬಲವುಳ್ಳವನು) ಆತನೇ ಬಲದೇವ ನಾವುಕನಾಗಿ ರೋಹಿಣಿಯಲ್ಲಿ ಹುಟ್ಟಿದನಂ.

ವಿಶೇಷಾಂಶ—ರಾಮಾವತಾರದಲ್ಲಿ ವಾಡಿದ ಬಹುಸೇವೆಯಿಂದ ಖಿನ್ನನಾದ ಶ್ರವಂವುಳ್ಳನಾನು, ಇನ್ನು ವಂದೆಯೂ ಹಾಗೆ ವಾಡಲಿಕ್ಕೆ ಸವರ್ಥನಾಗಲಾರೆನು, ಹೀಗೆ ವನಃಖೇದವುಳ್ಳವನು, ತವ್ಮನಾದರೆ ಇಲ್ಲಿಯೂ ಹಾಗೆಯೇ ಸೇವೆಯನ್ನು ವಾಡಬೇಕು. ಇಲ್ಲವಾದರೆ ವಿಧಿಯನ್ನುಲ್ಲಂಘಿಸಿದ ದೋಷವು ಬರಬೇಕಾಗುವುದು. ಆದಕಾರಣ ಅಗ್ರಜನು ಆಗುವೆನು ಎನ್ನುವ ಬುದ್ಧಿಯಿಂದ ಶ್ರೀಕೃಷ್ಣನಿಗಿಂತ ಪೃಥವಂದಲ್ಲಿಯೇ ಹುಟ್ಟಿದನು. ಆದುದರಿಂದಲೇ ಲಕ್ಷ್ಮಣನ ಜನ್ಮದಲ್ಲಿ ಖೇದವನ್ನು ಸೂಚಿಸುವುದಕ್ಕಾಗಿ ಲಕ್ಷ್ಮಣ ಪದವು. ವಿಧವಾನದ್ವಿಟ್ ಎಂದು ಶ್ರೀ

ಹರಿಯಂ ಮಂಹಿಮೆಯಂ. ಅಧಿಕ ಸೇವೆಯಿಂದಮಂಟಾದ ಪುಣ್ಯನಾಶಕ್ಕಾಗಿ ಶ್ರೀಹರಿಯೇ ಅಂತಹ ಬುದ್ಧಿಯನ್ನು ಕೊಟ್ಟಿರಂವನಂ. ಇಲ್ಲದಿದ್ದರೆ ಭಗವದ್ಭಕ್ತನಾದ ಶಕ್ರನಂ ಗೋವರ್ಧನಗಿರ್ಯುದ್ಧರಣ ಸಮಯದಲ್ಲಿ ಶ್ರೀಕೃಷ್ಣನ ತಿರಸ್ಕಾರವನ್ನು ಏಕೆ ಮಾಡಿರಂವನಂ? ಅಸಂರಾವೇಶದ್ದೆಸೆಯಿಂದ ಇಂದ್ರನಂ ಮಾಡಿದನಂ ಎಂದರೆ ಇದೂ ಕೂಡ ಹಾಗೆಯೇ. ॥ ೧೦೬ ॥

ರೋಹಿಣೀ ಪ್ರಸವವು ಗೋಕುಲದಲ್ಲಿ ಏಕೆ ಎಂದರೆ—

ಮೂ ॥ ಯದಾ ಹಿ ಪುತ್ರಾನ್ ವಿನಿಹಂತುಮೇತೌ
ಸಹೈವ ಬದ್ಧೌ ಗತಿಶೃಂಖಲಾಯಾಂ ।
ಕಂಸಸೇನಾಪಾಪೌ ದೇವಕೀಶೂರಪುತ್ರೌ
ವಿಯೋಜಿತಾಃ ಶೌರಿಭಾರ್ಯಾಃ ಪರಾಶ್ಚ ॥ ೧೦೭ ॥

ಅ॥ ಯಾವಾಗ ಕಂಸನಿಂದ ದೇವಕೀ ಪುತ್ರರನ್ನು ಕೊಲ್ಲುವುದಕ್ಕಾಗಿ ಪಾಪಿಷ್ಠರಾಗದಿರಂವ (ಅಂದರೆ ರಾಜದ್ರೋಹ ರಹಿತರಾದ) ಈ ದೇವಕೀ ವಸುದೇವರಂ ಒಟ್ಟಿಗೇನೇ ಗಮನಾನಂಕೂಲವಾದ ಶೃಂಖಲೆಯಲ್ಲಿ ಕಟ್ಟಲ್ಪಟ್ಟರೋ, ಆಗ ದೇವಕೀ ಸಕಾಶದ್ದೆಸೆಯಿಂದ ಇತರರಾದ ರೋಹಿಣೀ ಮೊದಲಾದ ವಸುದೇವನ ಹೆಂಡಂದಿರಂ ಸ್ಥಾನಾಂತರದಲ್ಲಿ ಮಾಡಲ್ಪಟ್ಟಿರಂವರಂ, ॥ ೧೦೭ ॥

ರೋಹಿಣ್ಯಾದಿಗಳನ್ನ ಸ್ಥಾನಾಂತರದಲ್ಲಿ ಮಾಡಿದ್ದಾದರೆ ರೋಹಿಣ್ಯಾದಿಗಳಿಗೆ ವಸುದೇವನಿಂದ ಪುತ್ರೋತ್ಪತ್ತಿಯಂ ಹೇಗೆ ಎಂದಾಶಂಕಿಸಿದರೆ—

ಮೂ ॥ ~~ವಿನಿಶ್ಚಯಾರ್ಥಂ ದೇವಕೀಗರ್ಭಜಾನಾ~~—
ಮನ್ಯಾ ಭಾರ್ಯಾ ಧೃತಗರ್ಭಾಃ ಸ ಕಂಸಃ ।
ಸ್ಥಾನಾಂತರೇ ಪ್ರಸವೋ ಯಾವದಾಸಾಂ
ಸಂಸ್ಥಾಪಯಾಮಾಸ ಸುಪಾಪಬುದ್ಧಿಃ ॥ ೧೦೮ ॥

ಅ॥ ಅತ್ಯಂತ ಪಾಪಿಷ್ಠವಾದ ಬುದ್ಧಿಯಂಳ್ಳ ಆ ಕಂಸನಂ ದೇವಕೀದೇವಿಯಂ ಗರ್ಭದಿಂದ ಹುಟ್ಟಿದ ಮಂಕ್ಕಳ ವಿಶೇಷ ನಿಶ್ಚಯಂಕ್ಕಾಗಿ ವಸುದೇವನಿಂದ ಧರಿಸಲ್ಪಟ್ಟ ಗರ್ಭವುಳ್ಳ, ದೇವಕಿಯಿಂದ ಇತರರಾದ ರೋಹಿಣೀ ಮೊದಲಾದ ವಸುದೇವನ ಹೆಂಡಂದಿರನ್ನು ವಸುದೇವನ ಹೆಂಡಂದಿರಿಗೆ ಯಾವ ಕಾಲ ಪರ್ಯಂತವಾಗಿ ಪ್ರಸವವಾಗುತ್ತದೋ (ಅಂದರೆ ದೇವಕೀ ವ್ಯತಿರಿಕ್ತರಾದ ವಸುದೇವನ ಹೆಂಡಂದಿರಂ ಹಡೆಯಂವ ತನಕ) ಬೇರೆ ಪ್ರದೇಶದಲ್ಲಿ ಇರಿಸಿದನಂ.

ವಿಶೇಷಾಂಶ—(1) ಕಂಸನಂ ವಸುದೇವನ ಹೆಂಡಂದಿರನ್ನು ಎಲ್ಲರನ್ನೂ ಏಕ ಕಾಲದಲ್ಲಿಯೇ ಸ್ಥಳಾಂತರದಲ್ಲಿ ಮಾಡಿಸಲಿಲ್ಲ. (2) ದೇವಕೀ ವ್ಯತಿರಿಕ್ತರಾದ ವಸುದೇವನ ಹೆಂಡಂದಿರಂ ವಸುದೇವನೊಟ್ಟಿಗೂ ಇರುತ್ತಾರೆ. ಭ್ರಾತನಾದುದರಿಂದ ನಂದಗೋಪನ ಮನೆಯಂಲ್ಲಿಯೂ ಇರುತ್ತಾರೆ. ಆದುದರಿಂದ ರೋಹಿಣಿಯೂ ಕೂಡ 'ರೋಹಿಣೀ ವಸುದೇವಸ್ಯ ಭಾರ್ಯಾಸ್ತೇ ನಂದಗೋಕುಲೇ । ತತ್ಸನ್ನಿಕೃಷ್ಣರೋಹಿಣ್ಯಾ ಜಠರೇ ಸನ್ನಿವೇಶಯ' ॥ ಎಂದಂ ಭಾಗವತದಲ್ಲಿ ಹೇಳಿರಂವುದರಿಂದ ನಂದಗೋಕುಲದಲ್ಲಿ ತನಗೆ ಉಂಟಾದ ದೈವಿಕ ಗರ್ಭ

ವನ್ನು ತಿಳಿಯಂದಿರಂವ ರೋಹಿಣಿಯಂ ದೇವಕಿಯಂ ಗರ್ಭಸ್ರಾವಾನಂತರದಲ್ಲಿ ದೇವಕಿಯಂನ್ನು ವಿಚಾರವಶಾಡಂವುದಕ್ಕಾಗಿ ಬಂದಿರಂತ್ತಾಳಿ. ಆಗ ರೋಹಿಣಿಯಂ ಗರ್ಭಿಣಿಯಾಗಿರಂತ್ತಾಳೆನ್ನುವುದಂ ಕಂಸನಿಗೆ ತಿಳಿಯಬಂತ್ತಿರಲಂ ಪುನಃ ನಂದಗೋಪನ ವಂನೆಯಂನ್ನು ಕಂರಿತು ಕಂಸನಂ ರೋಹಿಣಿಯಂನ್ನು ಕಳಂಹಿಸಿರಂತ್ತಾನೆ. ಅಲ್ಲಿಯೇ ರೋಹಿಣಿಯಂ ಬಲರಾವಂನನ್ನು ಹಡೆದಿರಂವಳಂ. ಗರ್ಭಿಣಿಯಂರಂ ಒಟ್ಟಿಗೆ ಆವಾಸವಶಾಡಿದರೆ ಪ್ರತಿ ವರ್ಷದಲ್ಲಿಯಂ ದೇವಕಿಗೂ ಗರ್ಭವುಂಟಾಗಂವುದರಿಂದ ತನ್ನ ಮೇಲೆ ದ್ವೇಷವಿದ್ದುದರಿಂದ ಹುಟ್ಟಿದ ಸಮಂಯದಲ್ಲಿಯೇ ಪಂಗುವನ್ನು ವ್ಯತ್ಯಾಸಪಡಿಸಿದರೆ ನನಗೆ ಮಂರಣವು ಬಂದೇಬರುವುದಂ ಎನ್ನುವ ಹೆದರಿಕೆಯಿಂದ ಗರ್ಭವು ಉಂಟಾದೊಡನೆಯೇ ದೇವಕೀ ವ್ಯತಿರಿಕ್ತರಾದವರೆಲ್ಲರನ್ನು ಕಂಸನಂ ಬೇರೆ ದಿಕ್ಕಿಗೆ ಕಳುಹಿಸುತ್ತಾನೆ. ಅಲ್ಲದೆ ಬೇರೆ ಕಾಲದಲ್ಲಿ ವಸುದೇವನ ಬೇರೆ ಹೆಂಡಂದಿರಂ ವಸುದೇವನ ಒಟ್ಟಿಗೂ ಇರಂತ್ತಾರೆ. ॥೧೦೮॥

ಮೂ ॥ ಹೇತೋರೇತಸ್ಮಾದ್ರೋಹಿಣೀ ನಂದಗೇಹೇ
ಪ್ರಸೂತ್ಯರ್ಥಂ ಸ್ಥಾಪಿತಾ ತೇನ ದೇವೀ।
ಲೇಭೇ ಪುತ್ರಂ ಗೋಕುಲೇ ಪೂರ್ಣಚಂದ್ರ-
ಕಾಂತಾನನಂ ಬಲಭದ್ರಂ ಸುಶುಭ್ರಂ ॥ ೧೦೯ ॥

ಅ॥ ಈ ಕಾರಣದಿಂದ ಆ ಕಂಸನಿಂದ ನಂದಗೋಪನ ವಂನೆಯಂಲ್ಲಿ ಹಡೆಯುಂವುದಕ್ಕಾಗಿ ಇರಿಸಲ್ಪಟ್ಟ ರೋಹಿಣೀ ದೇವಿಯಂ ಷೋಡಶಕಲಾಪೂರ್ಣನಾದ ಚಂದ್ರನಂತೆ, ವಂನೋಹರವಾದ ವಂಂಖಿವುಳ್ಳ ಶುಂಕ್ಲವರ್ಣನಾದ ಬಲಭದ್ರ ನಾವಂಕ ವಂಗನನ್ನು ಗೋಕುಲದಲ್ಲಿ ಹೊಂದಿದಳಂ. (ಅಂದರೆ ಹಡೆದಳಂ) ॥ ೧೦೯ ॥

ಮೂ ॥ ಯದಾ ತ್ರಿವಾಸಃ ಸ ಬಭೂವ ದೇವ-
ಸ್ತದಾವಿರಾಸೀತ್ ಪುರುಷೋತ್ತಮೋ೭ಜಃ ।
ತೌ ಕೃಷ್ಣಶೇಷಾವಾಪ್ತು ಕಾಮ್ಯೌ ಸುತೌ ಹಿ
ತಪಶ್ಚಕ್ರಾತೇ ದೇವಕೀಶೂರಪುತ್ರ್ಯೌ ॥ ೧೧೦ ॥

ಅ॥ ಯಾವಾಗ ಆ ಬಲರಾವಂನು ಮೂರು ತಿಂಗಳಂ ಪರಿವಂತವಾದ ವಯಸ್ಸುಳ್ಳವನು ಆದನೋ, ಆಗ ಉತ್ಪತ್ತಿ ರಹಿತನಾದ ಪುರುಷೋತ್ತಮನು ಆವಿರ್ಭೂತನಾದನಂ. (ಶೇಷಾಖ್ಯವಾದ ಗರ್ಭವು ಮೂರಂ ತಿಂಗಳಂ ತನಕ ದೇವಕಿಯಂ ಉದರದಲ್ಲಿದ್ದು ಆಮೇಲೆ ರೋಹಿಣಿಯಂ ಉದರವನ್ನು ಪ್ರವೇಶಿಸಲಿಕ್ಕೆ ಕಾರಣವೇನು? ಎಂದರೆ) ದೇವಕೀ ವಸುದೇವರಂ ಆಕೃಷ್ಣಶೇಷರನ್ನು ಮಕ್ಕಳನ್ನಾಗಿ ಹೊಂದಲಿಕ್ಕೆ ಇಚ್ಛಿಸಿದವರಾಗಿಯೇ ತಪಸ್ಸನ್ನು ಮಾಡಿರುವರಂ. ॥೧೧೦

ಮೂ ॥ ವಿಷ್ಣ್ವಾವೇಶೀ ಬಲವಾನ್ಯೋ ಗುಣಾಧಿಕಃ
ಸ ಮೇ ಸುತಃ ಸ್ಯಾದಿತಿ ರೋಹಿಣೀ ಚ ।
ತೇಪೇ ತಪೋ೭ತೋ ಹರಿಶುಕ್ಲ ಕೇಶ-
ಯುತಃ ಶೇಷೋ ದೇವಕೀರೋಹಿಣೀಜಃ ॥ ೧೧೧ ॥

ಅ॥ ವಿಷ್ಣುವಿನ ಆವೇಶವುಳ್ಳವನಂ, ಬಲಿಷ್ಠನಂ, ಜ್ಞಾನಾದಿಗುಣಗಳಿಂದ ಉತ್ತಮಂನು ಯಾರೋ ಆ ದೇವನಂ ನನಗೆ ಮಗನಾಗಬೇಕು ಎಂದು ರೋಹಿಣಿಯಂಾ ಕೂಡ ತಪಸ್ಸನ್ನು

ವಹಾಡಿರುವಳು. ಆದಕಾರಣ ಶೇಷನು ಶ್ರೀಹರಿಯು ಶುಕ್ಲಕೇಶದಿಂದ ಕೂಡಿದವನಾಗಿ ದೇವಕೀ ರೋಹಿಣಿಯರಿಬ್ಬರಿಂದ ಹುಟ್ಟಿದನು.

ವಿಶೇಷಾಂಶ—(1) ಸ್ಪಷ್ಟವಾಗಿ ಶೇಷನು ಮಗನಾಗಿ ಹುಟ್ಟಬೇಕೆಂದು ದೇವಕಿಯಲ್ಲಿ ತಪಸ್ಸನ್ನು ವಹಾಡಿರುವಳು. ವಿಷ್ಣುವಿನ ಆವೇಶವುಳ್ಳವನು, ಬಲಿಷ್ಠನು ಮಗನಾಬೇಕೆಂದು ರೋಹಿಣಿಯೂ ತಪಸ್ಸನ್ನು ವಹಾಡಿರುವಳು. ಆದುದರಿಂದ ಶ್ರೀಹರಿಯು ಶುಕ್ಲಕೇಶದಿಂದ ಯುಕ್ತನಾದ ಶೇಷನು ಮೂರು ತಿಂಗಳಲ್ಲಿ ದೇವಕಿಯಲ್ಲಿಯೂ. ಏಳು ತಿಂಗಳಲ್ಲಿ ರೋಹಿಣಿಯಲ್ಲಿಯೂ ಇರುತ್ತಿದ್ದನು. ಆದಕಾರಣ ದಶಮೇ ಮಾಸಿ ಜಾಯತೇ ಎನ್ನುವ ಶ್ರುತ್ಯನುಸಾರವಾಗಿ ಬಲರಾಮನೂ ಹತ್ತು (೧೦)ನೇ ತಿಂಗಳಲ್ಲಿ ಹುಟ್ಟಿದನು. ಶ್ರೀಕೃಷ್ಣನೂ ಕೂಡ ಶ್ರುತ್ಯುಕ್ತವಾದ ಮರ್ಯಾದೆ ರಕ್ಷಣೆಗಾಗಿ ಶೇಷನು ಹೋದ ಮೇಲೆ ಅವಶಿಷ್ಟವಾದ ಏಳು (೭) ತಿಂಗಳು ಮತ್ತು (೩) ಮೂರು ತಿಂಗಳ ತನಕ ಕೂಡ ಗರ್ಭವಾಸದಲ್ಲಿದ್ದು ಅಂತೂ (೧೦) ಹತ್ತನೇ ತಿಂಗಳಲ್ಲಿ ಜನನಕ್ಕೆ ಬಂದನು. (ಅಂದರೆ ಬಲರಾಮನು ಹುಟ್ಟಿ ಮೂರು ತಿಂಗಳ ಮೇಲೆ ಹುಟ್ಟಿದನು.)

ಮೂ ॥ ಅವರ್ಧತಾಸೌ ಹರಿಶುಕ್ಲ ಕೇಶ–
ಸಮಾವೇಶೀ ಗೋಕುಲೇ ರೌಹಿಣೇಯಃ ।
ಕೃಷ್ಣೋಽಪಿ ಲೀಲಾ ಲಲಿತಾಃ ಪ್ರದರ್ಶಯನ್
ಬಲದ್ವಿತೀಯೋ ರಮಯಾಮಾಸ ಗೋಷ್ಠಂ ॥ ೧೧೨ ॥

ಅ॥ ಶ್ರೀಹರಿಯು ಶುಕ್ಲಕೇಶದ ಸವಿಾಚೀನವಾದ ಆವೇಶವುಳ್ಳ ಈ ರೋಹಿಣೀಪುತ್ರನಾದ ಬಲರಾಮನು ನಂದಗೋಕುಲದಲ್ಲಿ ಬೆಳಿಯುತ್ತಿದ್ದನು. ಬಲರಾಮನಿಂದ ಕೂಡಿದ ಶ್ರೀಕೃಷ್ಣನೂ ಕೂಡ ಮನೋಹರಗಳಾದ ಕ್ರೀಡೆಗಳನ್ನು ತೋರಿಸುತ್ತಾ ಗೋಕುಲದಲ್ಲಿರತಕ್ಕ ಜನರನ್ನು ಸಂತೋಷೀಕರಿಸಿಕೊಂಡಿದ್ದನು. ॥ ೧೧೨ ॥

ಮೂ ॥ ಸ ಪ್ರಾಕೃತಂ ಶಿಶುಮಾತ್ಮಾನಮುಚ್ಚೈ–
ರ್ವಿಜ್ಞಾನಂತ್ಯೈ ಮಾತುರಾದರ್ಶನಾಯ ।
ವಿಜೃಂಭಮಾಣೋಽಖಿಲಮಾತ್ಮ ಸಂಸ್ಥಂ
ಪ್ರದರ್ಶಯಾಮಾಸ ಕದಾಚಿದೀಶಃ ॥ ೧೧೩ ॥

ಅ॥ ಸರ್ವಸ್ವಾಮಿಯಾದ ಆ ಶ್ರೀಕೃಷ್ಣನು ತನ್ನನ್ನು ಪ್ರಾಕೃತವಾದ (ಅಂದರೆ ಲೌಕಿಕವೇ ಆದ) ಶಿಶುವೆಂದು ತಿಳಿದಿರುವ ಯಶೋದಾದೇವಿಗೆ ಅಪ್ರಾಕೃತತ್ವವನ್ನು ತೋರಿಸುವುದಕ್ಕಾಗಿ ಬಾಯಿ ತೆರೆಯುವವನಾಗಿ ತನ್ನಲ್ಲಿರತಕ್ಕ ಸ್ಥಾವರಜಂಗಮಾತ್ಮಕವಾದ ನಿಖಿಲ ವಸ್ತುಗಳನ್ನೂ ಒಂದಾನೊಂದು ದಿವಸದಲ್ಲಿ ತೋರಿಸಿದನು. ॥ ೧೧೩ ॥

ಮೂ ॥ ಸಾಂಡಂ ಮಹಾಭೂತಮನೋಽಭಿಮಾನ–
ಮಹತ್ಪ್ರಕೃತ್ಯಾವೃತಮಬ್ಜಜಾದಿಭಿಃ ।
ಸುರೈಃ ಶಿವೇತೈರ್ನರದೈತ್ಯಸಂಘೈ–
ರ್ಯುತಂ ದದರ್ಶಾಸ್ಯ ತನೌ ಯಶೋದಾ ॥ ೧೧೪ ॥

ಅ ॥ ೮ ಯಂಶೋದಾದೇವಿಯಂ ಶ್ರೀಕೃಷ್ಣನ ಶರೀರದಲ್ಲಿ (ಅಂದರೆ ಮಂಖದೊಳಗೆ) ಮಂಹಾಭೂತ ಮಂನೋಽಭಿಮಾನ ಮಂಹತ್ತತ್ಕೃತ್ಸ್ನಾವೃತಂ, ಮಂಹಾಭೂತ = ಪೃಥಿವೀ, ಜಲ, ತೇಜಸ್ಸು, ವಾಯಂ ಆಕಾಶಾಖ್ಯ ಪಂಚಮಂಹಾಭೂತಗಳೂ, ಗಂಧ, ರಸ, ರೂಪ, ಸ್ಪರ್ಶ, ಶಬ್ದಾಖ್ಯ ಪಂಚ ತನ್ಮಾತ್ರಗಳೂ ಮಂನಃ = ಮಂನಸ್ತತ್ವವೂ, •ದಶೇಂದ್ರಿಯಂಗಳೂ ಬುಂದ್ಧಿತತ್ವವೂ ಕೂಡ, ಅಭಿಮಾನ = ಅಹಂಕಾರ ತತ್ವವೂ, ಮಂಹತ್ = ಮಂಹತ್ತತ್ವವೂ, (ಹೀಗೆ ಇಪ್ಪತ್ತನಾಲ್ಕು ೨೪ ತತ್ವಗಳೂ) ಪ್ರಕೃತಿ=ಅವ್ಯಕ್ತಾಖ್ಯ ಮಂೂಲತತ್ವವೂ, ತಥಾಚ ಚತುರ್ವಿಂಶತಿ ತತ್ವ ಮಂೂಲತತ್ವರೂಪ ಗಳಿಂದ, ಆವೃತಂ=ಯಂಥಾಯೋಗ್ಯವಾಗಿ ಉತ್ತರೋತ್ತರಾಧಿಕ್ಯದಿಂದ ಯಂಕ್ತವಾದ, ಚತುರ್ಮಂಖನೇ ಮೊದಲಾಗಿ ಉಳ್ಳ, ರುಂದ್ರನಿಂದ ಕೂಡಿದ ದೇವತೆಗಳಿಂದಲೂ, ಮಂನುಷ್ಯರೂ ದೈತ್ಯರೂ ಇವರ ಸಮೂಹಗಳಿಂದಲೂ ಯಂಕ್ತವಾದ ಬ್ರಹ್ಮಾಂಡವನ್ನು ನೋಡಿದಳಂ. (ಇದಂ ಅಂಡದೆಸೆಯಿಂದ ಬಾಹ್ಯಗಳಾದ ತತ್ವಗಳ ಗಣನೆಯಂ.)

ವಿಶೇಷಾಂಶ—(1) ಸಕಲ ತತ್ವಗಳನ್ನು ಸಂಗ್ರಹಿಸುವುದಕ್ಕಾಗಿ ಶ್ರೀಮದಾಚಾರ್ಯರಂ ಹೀಗೆ ಹೇಳಿರುವರಂ. ವ್ಯಾಸರಾದರೂ ಭಾಗವತದಲ್ಲಿ ಕ್ರಮದಿಂದ ದಶೋತ್ತರತ್ವರೂಪವಾದ ತಾನಂ ಹೇಳಿದ ಸಂಖ್ಯೆಯನ್ನು ಇಟ್ಟುಕೊಂಡಂ 'ಅಬಗ್ನೀರನಭೋಽಹಂಕೃತ್ ಮಹತ್ತತ್ವ ಗುಣತ್ರಯೈಃ । ಕ್ರಮಾದ್ದಶೋತ್ತರೈಃ' ಎಂದಂ ಒಂಭತ್ತನ್ನೇ ಗ್ರಹಣಮಾಡಿರುವರಂ. ವಸ್ತು ತಸ್ತು ವಿಂಶಿತಗಳಾದ ಇಪ್ಪತ್ತನಾಲ್ಕು ತತ್ವಗಳಂ ಅಂಡಕಟಾಹದೊಳಗೆ ಸರ್ವದಾ ಇರುತ್ತವೆ. ಇಲ್ಲವಾದರೆ ಇಪ್ಪತ್ತನಾಲ್ಕು(೨೪)ತತ್ವರೂಪವಾದ ಎಂಭತ್ತನಾಲ್ಕು ಲಕ್ಷ(೮೪೦೦೦೦)ಯೋನಿ ಭೇದದಿಂದ ನಾನಾ ವಿಧಾನಾಂತರ್ಯಗಳಾದ ದೇಹಗಳಿಗೆ ಕಾಲದಲ್ಲಿ ಹೇಗೆ ಉತ್ಪತ್ತಿಯಾಗುವುದು? ಆದುದರಿಂದ ಆವರಣವೆಂದರೆ—೧. ಇತರಾವಿಂಶಿತವಾದ ಪೃಥಿವೀ ತತ್ವಕ್ಕೇನೇ ಸಂವರ್ಣವಯಂವಾದ ಶತಕೋಟಿ ಪ್ರಮಾಣ ಬ್ರಹ್ಮಾಂಡ ರೂಪದಿಂದ ಯಾವುದಂ ಅವಸ್ಥಿತಿಯೋ ಅದಂ ಪೃಥಿವ್ಯಾಖ್ಯವಾದ ಪ್ರಥಮಾವರಣವು. ೨. ಪೃಥಿವೀ ಭಾಗದಿಂದಲೂ ಅವಿಂಶ್ರವಾದ ಕೇವಲವಾಗಿ ಧವಳಗಳಾದ ಜಲಸಮೂಹಗಳಿಗೆ ಶತಕೋಟಿ(೧೦೦,೦೦೦೦೦೦)ಗಿಂತ ಹತ್ತು ಪಾಲು ಜಾಸ್ತಿಯಾದ ಸಹಸ್ರಕೋಟಿ(೧೦೦೦೦೦೦೦೦೦)ಪ್ರಮಾಣ ಪ್ರದೇಶದಲ್ಲಿ ವಿಸ್ತೃತಗಳಾದಂವುಗಳಿಗೆ ಬ್ರಹ್ಮಾಂಡ ಕಟಾಹವನ್ನು ಆವರಿಸಿ ಯಾವುದಂ ಸ್ಥಿತಿಯೋ ಅದು ದ್ವಿತೀಯಾವರಣವು. ೩. ಹೀಗೆಯೇ ಜಲ ಭಾಗಾವಿಂಶ್ರವಾದ ಕೇವಲ ತೇಜೋ ರಾಶಿಗಳಿಗೆ ಶತಕೋಟಿ (೧೦೦,೦೦೦೦೦೦) ಸಹಿತವಾದ ಸಹಸ್ರಕೋಟಿ(೧೦೦೦೦೦೦೦೦೦)ಗಿಂತ ಹತ್ತು ಪಾಲು ಜಾಸ್ತಿಯಾದ ಹತ್ತು ಸಹಸ್ರಕೋಟಿ (೧೦,೦೦೦,೦೦೦೦೦೦) ಯೋಜನ ಪ್ರಮಾಣ ಪ್ರದೇಶದಲ್ಲಿ ಯಾವುದಂ ಸ್ಥಿತಿಯೋ ಅದಂ ತೃತೀಯಾವರಣವು. ಆದುದರಿಂದಲೇ ಸಂತ್ತುಮಂತ್ತಲೂ ಅತ್ಯಂತ ಜ್ವಲಿಸತಕ್ಕ ಅಗ್ನಿಯಂ ಜ್ವಾಲೆಯಿಂದ ಯಾವಾಗಲೂ ಅಭಿಘಾತದ್ದೆಸೆಯಿಂದ ನಿರಾಧಾರವಾದಾಗ್ಯೂ 'ಜಲವು ಕೆಳಗೆ ಬೀಳಂವುದಿಲ್ಲ, ಸಂತ್ತುಮಂತ್ತಲೂ ಹರಿಯಂವುದಿಲ್ಲ, ಕುದಿಸಿದರೆ ಮೇಲಕ್ಕೆ ಹೋಗುವುದಿಲ್ಲ. ಜಲದಲ್ಲಿರತಕ್ಕ ಶ್ರೀನಾರಾಯಣನ ಸನ್ನಿಧಾನದಿಂದ ಇದಂ ಒಣಗಿ ಹೋಗುವುದಿಲ್ಲ. ಎಲ್ಲಾ ಕಡೆಗಳಲ್ಲಿಯಂ ಉಷ್ಣವೂ ಆಗುವುದಿಲ್ಲ. ಇಲ್ಲವಾದರೆ ತ್ರಿವಿಕ್ರಮನ ಎಡಪಾದದ ಅಂಗುಷ್ಠದ ನಖದಿಂದ ನಿರ್ಭಿನ್ನವಾದ ಬ್ರಹ್ಮಾಂಡ ಕಟಾಹ ವಿವರದ್ದೆಸೆಯಿಂದ ಶೀತಲವಾದ ಶುಂಕ್ಲರೂಪವಾದ ಗಂಗಾ ಪ್ರವಾಹವು ಹೇಗೆ ಕೆಳಗೆ ಹರಿಯಂವುದು? ಆದುದರಿಂದಲೇ ಅಂಡ ಕಟಾಹಾಖ್ಯವಾದ ಪೃಥಿವ್ಯಾವರಣದ್ದೆಸೆಯಿಂದ ಭಿನ್ನ ಪೃಥಿವ್ಯಾವರಣ ಕಲ್ಪನವೂ ಕೂಡ ನಿರ್ಮೂಲವಾಗಿರುವುದರಿಂದ ಸ್ವಕ

• ಬುಂದ್ಧೀಂದ್ರಿಯಾಣಿ, ಚಕ್ಷುಃ, ಶ್ರೋತ್ರ, ಘ್ರಾಣ, ರಸನ, ತ್ವಗಾ, ಖ್ಯಾನಿ । ವಾಕ್ಪಾಣಿ, ಪಾದ, ಪಾಯೂ, ಪಸ್ಥಾ, ಖ್ಯಕರ್ಮೇಂದ್ರಿಯಾಣ್ಯಾಹುಃ ॥

ಪೋಲಕಲ್ಪನವೇ. ಇದೇ ರೀತಿಯಾಗಿ ತೇಜೋ ಭಾಗದಿಂದ ಅವಿಂಶ್ರಿತವಾದ ವಾಯಂಗಳ ಶತ ಕೋಟಿ (೧೦೦,೦೦೦೦೦೦) ಯಿಂದಲೂ ಸಹಸ್ರ ಕೋಟಿ (೧೦೦೦,೦೦೦೦೦೦) ಯಿಂದಲೂ ಹತ್ತು ಸಹಸ್ರಕೋಟಿ(೧೦,೦೦೦,೦೦೦೦೦೦)ಯಿಂದಲೂ ಹತ್ತು ಜಾಸ್ತಿಯಾದ ಇಪ್ಪತ್ತು ಸಹಸ್ರ ಕೋಟಿ (೨೦೦೦೦೦೦೦೦೦೦ ರೂಪವಾದ ಯೋಜನ ಪ್ರಮಾಣ ಪ್ರದೇಶದಲ್ಲಿ ಯಾವುದೂ ಗಾಳಿಯಂ ಹಾರುವಿಕೆಯೋ ಅದು ಚತುರ್ಥಾವರಣವು, ೫. ಹೀಗೆಯೇ ಸ್ವಲ್ಪವೂ ಕೂಡ ವಾಯು ಭಾಗದಿಂದ ಅವಿಂಶ್ರಿತವಾದ ಭೂತಾಕಾಶಾವಯವಗಳ ಹಿಂದೆ ಹೇಳಿದ ಪ್ರಕಾರ ಇಪ್ಪತ್ತು ಸಹಸ್ರ ಕೋಟಿ (೨೦,೦೦೦,೦೦೦೦೦೦) ಯಿಂದಲೂ ಹತ್ತು ಜಾಸ್ತಿಯಾದ ಮೂವತ್ತು ಸಹಸ್ರಕೋಟಿ (೩೦,೦೦೦,೦೦೦೦೦೦) ಯೋಜನ ಪ್ರಮಾಣ ಪ್ರದೇಶದಲ್ಲಿ ಯಾವುದು ಅವಸ್ಥಿತಿಯೋ ಅದು ಪಂಚವಾವರಣವು. ೬. ಹೀಗೆಯೇ ಆಕಾಶಭಾಗದಿಂದ ಅವಿಂಶ್ರಿತವಾದ ಅಹಂಕಾರಾವಯವ ಗಳ ಮೂವತ್ತು ಸಹಸ್ರ ಕೋಟಿ (೩೦,೦೦೦,೦೦೦೦೦೦) ಗಳಿಂದಲೂ ಹತ್ತು ಜಾಸ್ತಿಯಾದ ನಲ್ವತ್ತು ಸಹಸ್ರ ಕೋಟಿ (೪೦,೦೦೦,೦೦೦೦೦೦) ಯೋಜನ ಪ್ರಮಾಣ ಪ್ರದೇಶದಲ್ಲಿ ಯಾವುದು ಸ್ಥಿತಿಯೋ ಅದು ಷಷ್ಠಾವರಣವು. ಇತ್ಯಾದಿ ಪ್ರಕಾರ ಮೇಲೆಯೂ ಊಹಿಸಿಕೊಳ್ಳಬೇಕು. ಅಂದರೆ ಗಂಧ, ರಸ, ರೂಪ, ಸ್ಪರ್ಶ, ಶಬ್ದ ಎಂಬ ಪಂಚ ತನ್ಮಾತ್ರ ಜ್ಞಾನೇಂದ್ರಿಯ (೫) ಐದು ಕರ್ಮೇಂದ್ರಿಯ (೫)ಐದು ಅಂತಃಕರಣಾಖ್ಯ, ಮನೋರೂಪ ಇಂದ್ರಿಯ ಹೀಗೆ ಹದಿನಾರು ತತ್ವ ಗಳಿಗೆ (೧೬೦೦೦೦೦೦೦೦೦) ಎಂಭತ್ತೈದು ಸಹಸ್ರ ಕೋಟಿ ಪ್ರಮಾಣ ಪ್ರದೇಶದಲ್ಲಿ ವ್ಯಾಪ್ತಿ ಯೆಂದೂ, ಬುದ್ಧಿ ತತ್ವಕ್ಕೆ (೨೫೦೦೦೦೦೦೦೦೦ ಇಪ್ಪತ್ತೈದು ಸಹಸ್ರಕೋಟಿ ಪ್ರಮಾಣ ಪ್ರದೇಶದಲ್ಲಿ ವ್ಯಾಪ್ತಿಯೆಂದೂ ಅಂತೂ (೧೭) ಹದಿನೇಳು ತತ್ವಗಳಿಗೆ (೧೧೦,೦೦೦,೦೦೦೦೦೦) ನೂರಹತ್ತು ಸಹಸ್ರಕೋಟಿ ಪ್ರಮಾಣ ಪ್ರದೇಶದಲ್ಲಿ ವ್ಯಾಪ್ತಿ. ಅಹಂಕಾರತತ್ವಕ್ಕೆ (೯೦,೦೦೦,೦೦೦೦೦೦) ತೊಂಭತ್ತು ಸಹಸ್ರಕೋಟಿ ಪ್ರಮಾಣ ಪ್ರದೇಶದಲ್ಲಿ ವ್ಯಾಪ್ತಿ, ಆದ ಕಾರಣ ಪುಂಜೀಕರಿಸಿ ಗಣನೆ ಮಾಡಿದರೆ (೨೦೦೦೦೦೦೦೦೦೦೦ ಇನ್ನೂರು ಸಹಸ್ರಕೋಟಿ ಪ್ರಮಾಣವುಂಟಾಗುತ್ತದೆ. ಆದುದರಿಂದ ಇವುಗಳಿಗೆ ಮಾಖ್ಯಾವರಣಭೂತವಾದ ಅಹಂಕಾರ

ತತ್ವದಲ್ಲಿಯೇ ಅಂತರ್ಭಾವ ಇರುವುದರಿಂದಲೂ ದಶೋತ್ತರತ್ವ ನಿಯಮವಿಲ್ಲದಿರುವುದ ರಿಂದಲೂ ಪ್ರತ್ಯೇಕ ಗಣನಮಾಡಲಿಲ್ಲ. ಇಲ್ಲವಾದರೆ ಬ್ರಹ್ಮಾಂಡದ್ದೆಸೆಯಿಂದ ಬಹಿರಾಕಾಶತತ್ವದ್ದೆ ಸೆಯಿಂದ ಮೂದಲು ಸೃಷ್ಟಿಗಳಾದ ತಾವಸ ತೈಜಸ ವೈಕಾರಿಕಾಖ್ಯ ಅಹಂಕಾರ ತತ್ವದ ಪರಿಣಾಮ ರೂಪಗಳಾದ ಇವುಗಳಿಗೆ ಅವಸ್ಥಿತಿಯೇ ಇಲ್ಲದೆ ಹೋಗಬೇಕಾಗುವುದು. ಆಚಾರ್ಯರಾದರೂ ಸಂಖ್ಯಾ ನಿಯಮವನ್ನು ಬಿಟ್ಟು ಹಿಂದೆ ಹೇಳಿದ ಪ್ರಕಾರ ಇಪ್ಪತ್ತನಾಲ್ಕು (೨೪) ತತ್ವವಾದರೂ ಭಾಗವತಾಚಾರ್ಯರಿಗೂ ಅಭಿಮತವಾಗಿರುವುದರಿಂದ ರೂಪ ಮಾತ್ರವನ್ನು ಗಣನ ಮಾಡಿರು ವುದರಿಂದ ಯಾವ ವಿಷಯದಲ್ಲಿಯೂ ವೇದವ್ಯಾಸರಿಗೂ ಆಚಾರ್ಯರಿಗೂ ವಿರೋಧವಿಲ್ಲವೆಂದು ತಿಳಿಯತಕ್ಕದ್ದು. ॥ ೧೧೪ ॥

ಮೂ ॥ ನೈನಿಾಲಯಚ್ಚಾಕ್ಷ್ಣೋ ಭೀತಭೀತಾ
ಜುಗೂಹ ಚಾತ್ಮಾನಮಥೋ ರಮೇಶಃ ।
ವಪುಃ ಸ್ವಕೀಯಂ ಸುಖಚಿತ್ಸ್ವರೂಪಂ
ಪೂರ್ಣಂ ಸತ್ಸ್ವಜ್ಞಾಪಯಂಸ್ತದ್ಧ್ಯದರ್ಶಯತ್ ॥ ೧೧೫ ॥

ಅ॥ ಅತ್ಯಂತ ಭೀತಳಾದ ಯಂಶೋದಾದೇವಿಯಂ ಕಣ್ಣಿಗಳನ್ನು ಮಂಚ್ಚಿಕೊಂಡಳಂ; ಆಮೇಲೆ ಲಕ್ಷ್ಮೀಪತಿಯಂ ತನ್ನ ಸ್ವರೂಪವನ್ನು ಆಚ್ಛಾದಿಸಿಕೊಂಡನು (ಹಾಗಾದರೆ ಅಲೌಕಿಕ

ವಾದ ಸ್ವರೂಪವನ್ನು ಏಕೆ ತೋರಿಸಿದನಂ ಎಂದರೆ—) ತನ್ನ ಸಂಬಂಧಿಯಹಾದ ಶರೀರವು ಆನಂದ ಜ್ಞಾನಾತ್ಮಕವಾದಂದಂ, ಪೂರ್ಣವಾದಂದಂ ಎಂದಂ ಸಜ್ಜನರಲ್ಲಿ ತಿಳಿಸಿಕೊಡಂವವನಾಗಿ ವ್ಯಾಪ್ತವಾದ ಆ ಶರೀರವನ್ನು ತೋರಿಸಿದನಂ. ॥ ೧೧೫ ॥

ಮೂ ॥ ಕದಾಚಿತ್ತಂ ಲಾಲಯಂತೀ ಯಶೋದಾ
ವೋಢುಂ ನಾಶಕ್ನೋದ್ಭೂರಿಭಾರಾಧಿಕಾರ್ತಾ ।
ನಿಧಾಯ ತಂ ಭೂವಿತಲೇ ಸ್ವಕರ್ಮ
ಯದಾ ಚಕ್ರೇ ದೈತ್ಯ ಆಗಾತ್ಸುಘೋರಃ ॥ ೧೧೬ ॥

ಅ॥ ಒಂದಾನೊಂದಂ ದಿನ ಆ ಶ್ರೀಕೃಷ್ಣನನ್ನು ಕೊಂಡಾಡಿಸಿಕೊಂಡಂ ಇದ್ದ ಯಂಶೋದಾದೇವಿಯಂ ಅತಿಭಾರದಿಂದ ಅತ್ಯಂತ ಪೀಡಿತಳಾದವಳಾಗಿ ಎತ್ತಲಿಕ್ಕೆ ಸಮರ್ಥಳಾಗಲಿಲ್ಲ. ಯಂಶೋದಾದೇವಿಯಂ ಆ ಶ್ರೀಕೃಷ್ಣನನ್ನು ಭೂಪ್ರದೇಶದಲ್ಲಿಟ್ಟು ತನ್ನ ಕರ್ಮವನ್ನು ಯಾವಾಗ ಮಾಡುತ್ತಿದ್ದಳೋ, ಆಗ ಅತ್ಯಂತ ಕ್ರೂರನಾದ ದೈತ್ಯನಂ ಬಂದನಂ. ॥ ೧೧೬ ॥

ಯಾವ ದೈತ್ಯನಂ ಬಂದಂ ಏನಂ ಮಾಡಿದನಂ? ಎಂದರೆ—

ಮೂ ॥ ತೃಣಾವರ್ತೋ ನಾಮತಃ ಕಂಸಭೃತ್ಯಃ
ಸೃಷ್ಟ್ವಾತ್ಯುಗ್ರಂ ಚಕ್ರವಾತಂ ಶಿಶುಂ ತಂ ।
ಆದಾಯಾಗಾದಂತರಿಕ್ಷಂ ಸ ತೇನ
ಶಸ್ತಃ ಕಂಠಗ್ರಾಹಸಂರುದ್ಧವಾಯುಃ ॥ ೧೧೭ ॥)

ಅ॥ ಹೆಸರಿನಿಂದ ತೃಣಾವರ್ತನೆನ್ನುವ ಕಂಸನ ಭೃತ್ಯನು ಅತ್ಯುಗ್ರವಾದ ಚಕ್ರಾಕಾರ ವಾಯುವನ್ನು ಸೃಷ್ಟಿಸಿ ಆ ಶಿಶುವನ್ನು ಹಿಡಿದುಕೊಂಡು (ಅಂದರೆ ಅಪಹರಿಸಿ) ಅಂತರಿಕ್ಷವನ್ನು ಕುರಿತು ಹೋದನು. ಆ ಕೃಷ್ಣನಿಂದ ಕುತ್ತಿಗೆಯಲ್ಲಿ ಬಾಹುಗಳಿಂದ ಹಿಡಿಯೋಣದರಿಂದ ತಡೆಯಲ್ಪಟ್ಟ ಶ್ವಾಸ ನಾಮಕ ವಾಯುವುಳ್ಳವನಾಗಿ ತೃಣಾವರ್ತನು (ಶಸ್ತಃ—) ಶಿಕ್ಷೆಯನ್ನು ಹೊಂದಿಸಲ್ಪಟ್ಟನು (ಅಂದರೆ ಸಂಹೃತನಾದನು.) ॥ ೧೧೭ ॥

ಮೂ ॥ ಪಪಾತ ಕೃಷ್ಣೇನ ಹತಃ ಶಿಲಾತಲೇ
ತೃಣಾವರ್ತಃ ಪರ್ವತೋದಗ್ರದೇಹಃ ।
ಸುವಿಸ್ಮಯಂ ಚಾಪುರಥೋ ಜನಾಸ್ತೇ
ತೃಣಾವರ್ತಂ ವೀಕ್ಷ್ಯ ಸಂಚೂರ್ಣಿತಾಂಗಂ ॥ ೧೧೮ ॥

ಅ॥ ಪರ್ವತದಂತೆ ಅತಿ ದೀರ್ಘವಾದ ಶರೀರವುಳ್ಳ ತೃಣಾವರ್ತನು ಶ್ರೀಕೃಷ್ಣನಿಂದ ಸಂಹರಿಸಲ್ಪಟ್ಟವನಾಗಿ ಶಿಲಾತಲದಲ್ಲಿ ಬಿದ್ದನು. ಆ ಮೇಲೆ ಆ ಎಲ್ಲಾ ಜನರೂ ಚೆನ್ನಾಗಿ ಪುಡಿಮಾಡಲ್ಪಟ್ಟ ಅಂಗಗಳುಳ್ಳ ತೃಣಾವರ್ತನನ್ನು ನೋಡಿ ಆತ್ಯಾಶ್ಚರ್ಯವನ್ನು ಹೊಂದಿದರು. ॥ ೧೧೮ ॥

ಮೂ ॥ ಅಕ್ರುಧ್ಯತಾಂ ಕೇಶವೋಽನುಗ್ರಹಾಯ
ಶುಭಂ ಸ್ವಯೋಗ್ಯಾದಧಿಕಂ ನಿಹಂತುಂ ।

① ಕುಂತಿಯ ವಿಷಯದಲ್ಲಿ ಪಾಂಡುರಾಜನೇ ಮಕ್ಕಳಿಗಾಗಿ ಅಪ್ಪಿ ಮಾಡಿದ್ದನೆ. ಆದರೆ ಮಾದ್ರಿ ತಾನಾಗಿಯೇ ಕೇಳಿದ್ದಾಳೆ. ಇದು ದೋಷವಲ್ಲವೆ?

ಸ ಕ್ರುಧ್ಯತಾಂ ನವನೀತಾದಿ ಮುಷ್ಣಂ-
ಶ್ಚಚಾರ ದೇವೋ ನಿಜಸತ್ಸುಖಾಂಬುಧಿಃ ॥ ೧೧೯ ॥

ಅ॥ ಸ್ವರೂಪಭೂತವಾದ ನಿರ್ದುಷ್ಟವಾದ ಸುಖದಿಂದ ಸಮುದ್ರದಂತಿರುವ ಕ್ರೀಡಾದಿ ಗುಣವಿಶಿಷ್ಟನಾದ ಶ್ರೀಕೃಷ್ಣನು ಕೋಪ ಮಾಡದಿದ್ದವರಿಗೆ ಸ್ವಯೋಗ್ಯವಾದ ಪುಣ್ಯವನ್ನು ಅಭಿವೃದ್ಧೀಕರಿಸುವುದಕ್ಕಾಗಿಯೂ ಕೋಪಿಸುವವರಿಗೆ ತಮಗೆ ಯೋಗ್ಯವಾದ ಪುಣ್ಯದ್ದೆಸೆಯಿಂದ ಅಧಿಕವಾದ ಪುಣ್ಯವನ್ನು ಕಳೆಯುವುದಕ್ಕಾಗಿಯೂ ನವನೀತವೇ ಮೊದಲಾದ ಕ್ಷೀರದಧ್ಯಾದಿಗಳನ್ನು ಕದ್ದುಕೊಳ್ಳುವವನಾಗಿ ಸಂಚರಿಸುತ್ತಿದ್ದನು. ॥ ೧೧೯ ॥

ಮೂ ॥ ಯಸ್ಮಿನ್ನಬ್ದೇ ಭಾದ್ರಪದೇ ಸ * (ಽಥ) ಮಾಸೇ
ಸಿಂಹಸ್ಥಯೋರ್ಗುರುರವ್ಯೋಃ ಪರೇಶಃ ।
ಉದೈತ್ತತಃ ಫಾಲ್ಗುನೇ ಫಲ್ಗುನೋಽಭೂತ್
ಗತೇ ತತೋ ಮಾದ್ರವತೀ ಬಭಾಷೇ ॥ ೧೨೦ ॥

ಅ॥ ಯಾವ ಸಂವತ್ಸರದಲ್ಲಿ ಭಾದ್ರಪದ ಮಾಸದಲ್ಲಿ ಬ್ರಹಸ್ಪತ್ಯಾಚಾರ್ಯರೂ ಆದಿತ್ಯನೂ ಇವರಿಬ್ಬರೂ ಸಿಂಹರಾಶಿಯಲ್ಲಿರುತ್ತಿರಲು ಸರ್ವೇಶನಾದ ಶ್ರೀಕೃಷ್ಣನು ಪ್ರಕಟನಾದನೋ ಆ ಭಾದ್ರಪದ ಮಾಸಾನಂತರದಲ್ಲಿ (ಆಶ್ವೀಜಾದಿ ಮಾಸ ಕ್ರಮದಿಂದ ಆರನೇ ಮಾಸವು ಪ್ರಾಪ್ತವಾಗುತ್ತಿರಲು) ಫಾಲ್ಗುನ ಮಾಸದಲ್ಲಿ ಅರ್ಜುನನು ಹುಟ್ಟಿದನು. ಆಮೇಲೆ ಆ ಸಂವತ್ಸರವು ದಾಟಿದ ಮೇಲೆ (ಚೈತ್ರ ಮಾಸದಲ್ಲಿ) ಮಾದ್ರವತಿಯು (ಪಾಂಡುವನ್ನು ಕುರಿತು) ಹೇಳಿದಳು.

ವಿಶೇಷಾಂಶ—(1) ಯಾವ ಸಂವತ್ಸರದಲ್ಲಿ ಅಧಿಮಾಸವು ಪ್ರಾಪ್ತವಾಗುತ್ತಿರಲು ಭಾದ್ರಪದಮಾಸದಲ್ಲಿ ರವಿಯು ಸಿಂಹರಾಶಿಯನ್ನು ಹೊಂದುತ್ತಾನೋ ಶ್ರೀಕೃಷ್ಣಾವತಾರ ಸಮಯದಲ್ಲಿ ಗುರುವೂ ಕೂಡ ಸಿಂಹರಾಶಿಯಲ್ಲಿರುತ್ತಿದ್ದನು. ಆಗ ದರ್ಶಮಾಸ ರೀತಿಯಿಂದ ಭಾದ್ರಪದ ಮಾಸವೂ ಆಗುತ್ತದೆ. ಸೌರಮಾಸ ರೀತಿಯಿಂದ ಶ್ರಾವಣಮಾಸವೂ ಆಗುತ್ತದೆ. ಆ ಸಂವತ್ಸರದಲ್ಲಿ ಶ್ರೀಕೃಷ್ಣಾವತಾರವು ಎನ್ನುವ ಅಭಿಪ್ರಾಯದಿಂದ 'ಯಸ್ಮಿನ್ನಬ್ದೇ' ಎಂದು. ಹೀಗೆ ಎರಡು ವಿಧ ಮಾಸದ ಸಂಪ್ರಯೋಗವು ಅಧಿಕಮಾಸವು ಬಂದರೇನೇ ಬರುತ್ತದೆ. ಯಾವಾಗಲೂ ಬರುವುದಿಲ್ಲ. ಈ ಅಭಿಪ್ರಾಯದಿಂದಲೇ ಯಸ್ಮಿನ್ನಬ್ದೇ ಎಂದು ಹೇಳಿದ್ದು. ಇಲ್ಲವಾದರೆ 'ಅಬ್ದೇ ಶುಭೇ ಭಾದ್ರಪದೇಽಥಮಾಸೇ' ಎಂದು ಹೇಳುತ್ತಿದ್ದರು, ಈ ಯೋಗವು ಸಿಗದಿದ್ದರೆ ಸಾಂವತ್ಸರಿಕ ತಿಥಿಯನ್ನು ಮಾಡಬೇಕಾದುದರಿಂದ 'ಶ್ರಾವಣ್ಯಾಂ ಚಾಸಿತೇ ಪಕ್ಷೇ' ಇದು ಮೊದಲಾದ ಪ್ರಮಾಣಾನುಸಾರವಾಗಿ 'ಸೋಮಾಭಾವೇ ಪೂತಿಕಾಗ್ರಹಣಂ' ಎನ್ನುವುದರಂತೆ ಕೇವಲ ಸಿಂಹಮಾಸದಲ್ಲಿಯೂ ಸಾಂವತ್ಸರಿಕ ತಿಥಿಯನ್ನು ಮಾಡುವರು. ॥ ೧೨೦ ॥

ಮೂ ॥ ಜಾತಾಃ ಸುತಾಸ್ತೇ ಪ್ರವರಾಃ ಪೃಥಾಯಾ-
ಮೇಕಾನಪತ್ಯಾಹಮತಃ ಪ್ರಸಾದಾತ್ ।
ತವೈವ ಭೂಯಾಸಮಹಂ ಸುತೇತಾ
ವಿಧತ್ಸ್ವ ಕುಂತೀಂ ಮಮ ಮಂತ್ರದಾತ್ರೀಂ ॥ ೧೨೧ ॥

* ಭಾದ್ರಪದೇಽಥ ಮಾಸೇ—ಎಂದು ಭಾವಪ್ರಕಾಶಿಕೆಯು

ಅ॥ ಶ್ರೇಷ್ಠರಾದ ಮಕ್ಕಳಂ ನಿನ್ನ ಕುಂತಿಯಲ್ಲಿ ಹುಟ್ಟಿರುವರು. (ಅಂದರೆ ನೀವು ಇಬ್ಬರೂ ಪುತ್ರವಂತರು.) ನಾನು ಒಬ್ಬಳು ಮಕ್ಕಳು ಇಲ್ಲದಿದ್ದವಳು. ಆದಕಾರಣ ನಿನ್ನ ಅನು ಗ್ರಹದ್ದೆಸೆಯಿಂದ ನಾನೂ ಕೂಡ ಮಕ್ಕಳಿಂದ ಕೂಡಿದವಳು ಆಗುವೆನು ಕುಂತೀದೇವಿಯನ್ನು ನಿನಗೆ ಮಂತ್ರೋಪದೇಶ ಕೊಡತಕ್ಕವಳನ್ನಾಗಿ ಮಾಡು ॥ ೧೨೧ ॥

ಮೂ ॥ ಇತೀರಿತಃ ಪ್ರಾಹ ಪೃಥಾಂ ಸ ಮಾದ್ರ್ಯೈ
ದಿಶಸ್ವ ಮಂತ್ರಂ ಸುತದಂ ವರಿಷ್ಠಂ ।
ಇತ್ಯೂಚಿವಾಂಸಂ ಪತಿಮಾಹ ಯಾದವೀ
ದದ್ಯಾಂ ತ್ವದರ್ಥೇ ತು ಸಕೃತ್ಫಲಾಯ ॥ ೧೨೨ ॥

ಅ॥ ಈ ಪ್ರಕಾರ ಮಾದ್ರಿಯಿಂದ ಹೇಳಿಸಿಕೊಳ್ಳಲ್ಪಟ್ಟ ಆ ಪಾಂಡುರಾಜನು ಕುಂತಿಯನ್ನು ಕುರಿತು ಮಾದ್ರೀಗೋಸ್ಕರ ಮಗನನ್ನು ಕೊಡತಕ್ಕ ಶ್ರೇಷ್ಠವಾದ ಮಂತ್ರವನ್ನುಪದೇಶಕೊಡು. ಎಂದು ಹೇಳಿದನು. ಈ ಪ್ರಕಾರ ಹೇಳತಕ್ಕ ಪತಿಯನ್ನು ಕುರಿತು ಯದುಪುತ್ರಿಯಾದ ಕುಂತಿಯು ನಿನ್ನ ಪ್ರೀತಿಗಾಗಿ ಒಂದಾವರ್ತಿಯೇ ಫಲಪ್ರಾಪ್ತಿಯಾಗುವುದಕ್ಕಾಗಿ ಮಂತ್ರವನ್ನುಪದೇಶ ಕೊಡುವೆನು ಎಂದು ಹೇಳಿದಳು. ॥ ೧೨೨ ॥

ಮೂ ॥ ಉವಾಚ ಮಾದ್ರ್ಯೈ ಸುತದಂ ಮನುಂ ಚ
ಪುನಃ ಫಲಂ ತೇ ನ ಭವಿಷ್ಯತೀತಿ ।
ಮಂತ್ರಂ ಸಮಾದಾಯ ಚ ಮದ್ರಪುತ್ರೀ
ವ್ಯಚಿಂತಯತ್ ಸ್ಯಾನ್ನು ಕಥಂ ದ್ವಿಪುತ್ರೀ ॥ ೧೨೩ ॥

ಅ॥ (ಕುಂತೀದೇವಿಯು) ಮಕ್ಕಳನ್ನು ಕೊಡತಕ್ಕ ಮಂತ್ರವನ್ನು ಮಾದ್ರೀಗೋಸ್ಕರ ಉಪದೇಶಕೊಟ್ಟಳು. ನಿನಗೆ ಒಂದಾವರ್ತಿ ಹಡದ ಮೇಲೆ ಪುನಃ ಪುತ್ರಪ್ರಾಪ್ತಿರೂಪವಾದ ಫಲವು ಆಗಲಾರದು ಎಂದೂ ಹೇಳಿದಳು. ಮದ್ರರಾಜನ ಮಗಳಾದ ಮಾದ್ರಿಯು ಮಂತ್ರವನ್ನು ಹೊಂದಿ ಎರಡು ಮಕ್ಕಳುಳ್ಳವಳು ಯಾವ ಉಪಾಯದಿಂದ ಆಗುವೆನು, ಹೀಗೆ ಆಲೋಚಿಸಿದಳು. ॥ ೧೨೩ ॥

ಮೂ ॥ ಸದಾವಿಯೋಗೌ ದಿವಿಜೇಷು ದಸ್ರೌ
ನ ಚೈತಯೋರ್ನಾರ್ಯಭಿಭೇದಃ ಕ್ವಚಿದ್ಧಿ ।
ಏಕಾ ಭಾರ್ಯಾ ಸೈತಯೋರಪ್ಯುಷಾ ಹಿ
ತದಾಯಾತಃ ಸಕೃದಾವರ್ತನಾದ್ಧ್ವ ॥ ೧೨೪ ॥

ಅ॥ ದೇವತೆಗಳಲ್ಲಿ ಯಾವಾಗಲೂ ಅಶ್ವಿನೀ ದೇವತೆಗಳು ವಿಯೋಗವಿಲ್ಲದಿರುವವರು. ಈ ಅಶ್ವಿನೀ ದೇವತೆಗಳಿಗೆ ಎಲ್ಲಿಯೂ ನಾಮಭೇದವು ಇಲ್ಲವಷ್ಟೆ. (ಅಂದರೆ ಇಬ್ಬರಿಗೂ ಒಂದೇ ನಾಮವು,) ಆ ಅಶ್ವಿನೀ ದೇವತೆಗಳ ಹೆಂಡತಿಯೂ ಕೂಡ ಸಕಾರಾಂತ ಶಬ್ದವಾಚ್ಯಳೆಂದು ಪ್ರಸಿದ್ಧಳಾದ ಉಷಾ ಎಂದು ನಾಮವುಳ್ಳವಳು ಒಬ್ಬಳೇ (ಅಬಂತ ಶಬ್ದವಾಚ್ಯಳಾದ ಉಷೆಯು ಅನಿರುದ್ಧನ ಹೆಂಡತಿಯು.) ಆ ಮೂರು ಹೇತುಗಳದ್ದೆಸೆಯಿಂದ ಇಬ್ಬರು ಅಶ್ವಿನೀ ದೇವತೆಗಳು ಒಂದಾವರ್ತಿ ಮಂತ್ರಾವೃತ್ತಿಯಿಂದ (ಮಂತ್ರವನ್ನು ಹೇಳೋಣದರಿಂದಲೇ) ಬರುವರು. ॥೧೨೪॥

ಮೂ ॥ ಇತೀಕ್ಷ್ವಂತ್ಯಾಕಾರಿತಾವಶ್ವಿನೌ ತೌ
ಶೀಘ್ರಂ ಪ್ರಾಪ್ತೌ ಪುತ್ರಕೌ ತತ್ಪ್ರಸೂತೌ ।
ತಾವೇವ ದೇವೌ ನಕುಲಃ ಪೂರ್ವಜಾತಃ
ಸಹದೇವೋಽಭೂತ್ ಪಶ್ಚಿಮಸ್ತೌ ಯಯೌ ಹಿ ॥ ೧೨೫ ॥

ಅ॥ ಈ ಪ್ರಕಾರ ವಿಚಾರಮಾಡತಕ್ಕ ಮಂತ್ರಿಯಿಂದ ಒಂದಾವರ್ತಿಯೇ ಕರೆಸಲ್ಪಟ್ಟ ಆ ಅಶ್ವಿನೀದೇವತೆಗಳು ಶ್ರೀಘ್ರದಲ್ಲಿ ಬಂದರು. (ಯಾರು ಪ್ರಾಪ್ತರಾಗಿರುವರೋ) ಆ ಅಶ್ವಿನೀ ದೇವತೆಗಳೇ ಪುತ್ರೋತ್ಪತ್ತಿಯನ್ನು ಮಾಡತಕ್ಕವರಾಗಿ ಆ ಮಾದ್ರಿಯಲ್ಲಿಯೇ ಹುಟ್ಟಿದರು: (ಅವರ ಮಧ್ಯದಲ್ಲಿ) (ಬ್ರಹ್ಮನ ಸಕಾಶದಿಂದ) ಪ್ರಥಮದಲ್ಲಿ ಹುಟ್ಟಿದ ನಾಸತ್ಯನು ನಕುಲನು: ನಾಸತ್ಯನು ಹುಟ್ಟಿದ ಮೇಲೆ ಹುಟ್ಟಿದ ದಸ್ರನು ಸಹದೇವನಾದನು. ಆ ನಕುಲಸಹದೇವರು ಒಂದೇ ಸಮಯದಲ್ಲಿ ಗರ್ಭವನ್ನು ಹೊಂದಿದವರು. ॥ ೧೨೫ ॥

ಮೂ ॥ ಪುನರ್ಮನೋಃ ಫಲವತ್ಪ್ರಾಪ್ತಯೇ ಮಾದ್ರೀ
ಸಂಪ್ರಾರ್ಥಯಾಮಾಸ ಪತಿಂ ತದುಕ್ತಾ ।
ಪೃಥಾವಾದೀತ್ ಕುಟಿಲೈಷಾ ಮದಾಜ್ಞಾ-
ಮೃತೇ ದೇವಾವಾಹ್ವಯಾಮಾಸ ದಸ್ರೌ ॥ ೧೨೬ ॥

ಅ॥ ಮಾದ್ರಿಯು ಮತ್ತು ಮಂತ್ರದ್ದೆಸೆಯಿಂದ ಪುತ್ರರೂಪ ಫಲಪ್ರಾಪ್ತಿಗಾಗಿ ಗಂಡನಾದ ಪಾಂಡುವನ್ನು ಕುರಿತು ಚೆನ್ನಾಗಿ ಪ್ರಾರ್ಥಿಸಿಕೊಂಡಳು. ಪಾಂಡುವಿನಿಂದ ಹೇಳಿಸಿಕೊಳ್ಳಲ್ಪಟ್ಟ ಕುಂತಿಯು (ಅಂದರೆ ಮಾದ್ರಿಗೆ ಪುತ್ರಪ್ರಾಪ್ತಿರೂಪವಾದ ವೀರ್ಯವತ್ತಾದ ಮಂತ್ರವಾಗಬೇಕು ಎಂದು ಹೇಳಿಸಿಕೊಳ್ಳಲ್ಪಟ್ಟ ಕುಂತಿಯು) ಹೇಳಿದಳು. ಕಪಟವುಳ್ಳ ಈ ಮಾದ್ರಿಯು ನನ್ನ ಅಪ್ಪಣೆಯನ್ನು ಹೊರತು ಅಶ್ವಿನೀದೇವತೆಗಳಿಬ್ಬರನ್ನು ಕರೆಸಿಕೊಂಡಳು ॥ ೧೨೬ ॥

ಮೂ ॥ ಅತೋ ವಿರೋಧಂ ಚ ಮದಾತ್ಮಜಾನಾಂ
ಕುರ್ಯಾದೇಷೇತ್ಯೇವ ಭೀತಾಂ ನ ಮಾಂ ತ್ವಂ ।
ನಿಯೋಕ್ತು ಮರ್ಹಃ ಪುನರೇವ ರಾಜ-
ನ್ನಿತೀರಿತೋಽಸೌ ನಿರರಾಮ ಕ್ಷಿತೀಶಃ ॥ ೧೨೭ ॥

ಅ॥ ಆದಕಾರಣ ಈ ಮಾದ್ರಿಯು ನನ್ನ ಮಕ್ಕಳಿಗೆ ನಿಶ್ಚಯವಾಗಿಯೂ ವಿರೋಧವನ್ನು ಮಾಡ ವಳೇ, ಹೀಗೆ ಭಯಗ್ರಸ್ತಳಾದ ನನ್ನನ್ನು ಎಲೋ ರಾಜನೇ ನೀನು ಪುನಃ ಮಂತ್ರವು ಸಫಲವಾಗುವಂತೆ ಆಜ್ಞೆ ಕೊಡುವುದಕ್ಕಾಗಿ ಯೋಗ್ಯನಾಗುವುದೇ ಇಲ್ಲ. ಈ ಪ್ರಕಾರ ಹೇಳಿಸಿ ಕೊಳ್ಳಲ್ಪಟ್ಟ ಭೂಪತಿಯಾದ ಈ ಪಾಂಡುರಾಜನು ಸಂಪ್ರೀತಿ ಕುಳಿತನು. ॥ ೧೨೭ ॥

ಹಾಗಾದರೆ ಇಬ್ಬರು ಮಕ್ಕಳು ಹುಟ್ಟಿದ ಮೇಲೆ ಪುನಃ ಮಂತ್ರಾಹ್ವಾನದಿಂದ ಪುತ್ರೋತ್ಪತ್ತಿಯಾಗಬೇಕೆಂದು ಇಚ್ಛಿಸತಕ್ಕ ಮಾದ್ರಿಯು ಮೊದಲೇ ಒಂದು ನಾಮದಿಂದ ಪ್ರಸಿದ್ಧರಾದ ಮರುತ್ ರುದ್ರ ಮೊದಲಾದವರನ್ನು ಕರೆಯೋಣದರಿಂದ ಬಹುಮಕ್ಕಳ ಪ್ರಾಪ್ತಿಯಾಗಲು ಅವರನ್ನು ಏಕೆ ಕರೆಯಲಿಲ್ಲವೆಂದರೆ—

ಮೂ ॥ ವಿಶೇಷನಾಮ್ನೈವ ಸಮಾಹುತಾಃ ಸುರಾ
ದದ್ಯುಃ ಸುತಾನಿತ್ಯವಿಶೇಷಿತಂ ಕಯೋಃ ।
ವಿಶೇಷನಾಮಾಪಿ ಸಮಾಹ್ವಯತ್ತೌ
ಮಂತ್ರಾವೃತಿರ್ನಾಮಭೇದೇಽಸ್ಯ ಚೋಕ್ತಾ ॥ ೧೨೪ ॥

ಅ ॥ ವಿಶೇಷ ನಾಮಂದಿಂದ ಕರೆಸಲ್ಪಟ್ಟವರೇ ದೇವತೆಗಳಂ ಮಂಕ್ಕಳನ್ನು ಕೊಡಂವರಂ. ಆ ಕಾರಣದಿಂದ ಆ ಅಶ್ವಿನೀ ದೇವತೆಗಳ ವಿಶೇಷ ನಾಮಂವೂ ಕೂಡ ಅವಿಶೇಷಿತವೇ ಆಗಿದೆ. ಆದಂದರಿಂದ ಅಶ್ವಿನೀ ದೇವತೆಗಳನ್ನು ಕರೆದಳಂ. ಈ ಕರೆಯಂಲ್ಪಡತಕ್ಕ ದೇವ ಸಮೂಹಕ್ಕೆ ನಾಮಂ ಭೇದವಿದ್ದರೇನೇ ಮಂತ್ರಕ್ಕೆ ಪುನರಂಚ್ಚಾರಣವು ಹೇಳಲ್ಪಟ್ಟಿದೆ.

ವಿಶೇಷಾಂಶ—(1) ದೇವ ಆಯಾಹಿ ಎಂದಂ ಸಾವಕಾಶ್ಯದಿಂದ ಕರೆದರೆ ಆ ದೇವತೆಗಳಂ ಯಾರನ್ನು ಕರದ್ದೋ ಏನಂ ಎನ್ನುವ ಸಂಶಯಂದಿಂದ ಬರಂವುದೇ ಇಲ್ಲ. ಮಂತ್ತೆ ಇಂದ್ರ ಯಂವಂ ವಾಯಂ ಮೊದಲಾದ ವಿಶೇಷ ನಾಮಂದಿಂದ ಕರೆದರೇನೇ ದೇವತೆಗಳಂ ಮಂಕ್ಕಳನ್ನು ಹುಟ್ಟಿಸಿ ಯಾರಂ. ಆದಕಾರಣ ವಿಶೇಷ ನಾಮಂವುಳ್ಳವರಿಗೆ ಆವಾವ ನಾಮಂದಿಂದ ಒಂದಾವರ್ತಿ ಕರೆದರೆ ಒಬ್ಬನೇ ಮಂಗನಂ ಹುಟ್ಟುತ್ತಾನೆ. ಇಬ್ಬರಂ ಹುಟ್ಟಲಾರರಂ. ಆ ಕಾರಣದಿಂದ ಆ ಅಶ್ವಿನೀದೇವತೆಗಳ ವಿಶೇಷ ನಾಮಂವೂ ಕೂಡ ಅವಿಶೇಷಿತವೇ. ಅಶ್ವಿನೌ ದಸ್ರೌ ಇತ್ಯಾದಿ ರೂಪದಿಂದ ಇಂದ್ರಾದಿಗಳಿಂದ ಯಾವುದೊಂದಂ ವಿಶೇಷ ನಾಮಂವದೆಯೋ ಅದೂ ಕೂಡ ಅಶ್ವಿನೀ ದೇವತೆಗಳಿಗೆ ಪರಸ್ಪರಾಪೇಕ್ಷೆಯಿಂದ ವಿಶೇಷ ರಹಿತವಾದಂದೇ. ಅನ್ಯಾಸಾಧಾರಣವಾದಃದಂ ಇಬ್ಬರಲ್ಲಿ ಸಾಧಾರಣವಾದದಂ ನಾಮಂ ಹೊರತಂ ಇಂದ್ರಚಂದ್ರರಂತೆ ಒಬ್ಬೊಬ್ಬನಿಗೆ ಪ್ರತ್ಯೇಕವಾಗಿ ಅಸಾಧಾರಣ ನಾಮಂವಿರಂವುದಿಲ್ಲ. (2) ಏಕಯೋಕ್ತ್ಯೈ ಪುಷ್ಟದಂತೌ ದಿವಾಕರನಿಶಾಕರೌ ಎನ್ನುವ ಉಕ್ತಿಯಿಂದ ಪುಷ್ಟದಂತ ಎನ್ನುವ ನಾಮಂವೂ ಕೂಡ ಪುಷ್ಟಪದದಿಂದ ಸೂರ್ಯನನ್ನು ದಂತಪದದಿಂದ ಚಂದ್ರನನ್ನು ಹೇಳಂತ್ತದೆ. ಒಂದೇ ಪದದಿಂದ ದಸ್ರೌ ಎನ್ನುವುದರಂತೆ ಇಬ್ಬರನ್ನು ಹೇಳಂವುದಿಲ್ಲ, ಪಿತರೌ ಎನ್ನುವುದೂ ಕೂಡ ಅಕ್ಷಣಾವೃತ್ತಿಯಿಂದ ತಾಯಿಯನ್ನೂ ಶಕ್ತಿ ವೃತ್ತಿಯಿಂದ ತಂದೆಯನ್ನೂ ಹೇಳಂತ್ತದೆ. ಒಂದೇ ಪ್ರಕಾರ ಅಶ್ವಿನೌ ಎನ್ನುವುದರಂತೆ ಇಬ್ಬರನ್ನು ಹೇಳಂವುದಿಲ್ಲ, ಆದಕಾರಣ ಉಭಯಂ ನಿಯಂವಂವುಳ್ಳವರಂ ಅಶ್ವಿನೀದೇವತೆಗಳೇ ಎನ್ನುವ ಹೇತುವಿನಿಂದ ಅವರನ್ನು ಒಂದಾವರ್ತಿ ಕರೆದರೂ ಇಬ್ಬರೂ ಒಟ್ಟಿಗೇನೇ ಬರಂತ್ತಾರೆ. ಆಗ ಮಂತ್ರಕ್ಕೂ ಕೂಡ ಒಂದಾವರ್ತಿಯೇ ಹೇಳಿದರೆ ಸಾಕಂ. ಆದಂದರಿಂದಲೇ ಮಾದ್ರಿಯಂ ಕಂತಿಯಂ ವಚನವನ್ನು ಉಲ್ಲಂಘಿಸಲಿಲ್ಲ. ಇಬ್ಬರಂ ಮಕ್ಕಳನ್ನೂ ಸಂಪಾದಿಸಿರುವಳು. ಕರೆಯಂಲ್ಪಡತಕ್ಕ ದೇವಸಮೂಹಕ್ಕೆ ಇಂದ್ರ ಚಂದ್ರ ಮೊದಲಾದವರಂತೆ ಪ್ರತ್ಯೇಕವಾಗಿ ನಾಮಂಭೇದವಿದ್ದರೆ ವಿಶೇಷ ನಾಮಂದಿಂದಲೇ ಕರೆಯಂಬೇಕಂ. ಒಬ್ಬನನ್ನು ಮೊದಲಂ ಕರೆದರೆ ಮಂತ್ರಾವೃತ್ತಿಯಂನ್ನು ಹೇಳಿದಂತೆ ಆಯಿತಂ. ವಿಶೇಷ ನಾಮಂವೂ ಕೂಡ ಯಾರಿಗೆ ಅವಿಶೇಷಿತವಾಗಿದೆಯೋ ಅವರನ್ನು ವಿಶೇಷ ನಾಮಂದಿಂದಲೇ ಒಂದಾವರ್ತಿ ಕರೆದರೂ ಇಬ್ಬರೂ ಬರಂತ್ತಾರೆ. ಮಂತ್ರಾವೃತ್ತಿಯಿಲ್ಲ. ॥ ೧೨೪ ॥

ಹಾಗಾದರೆ ಗ್ರಂಥಾಂತರದಲ್ಲಿ ಯಂಧಿಷ್ಠಿರಾದಿಗಳಂ ಐವರೂ ವಾಯಂಗಳಂ ಎನ್ನುವ ವಚನದ ಅಭಿಪ್ರಾಯಂವನ್ನು ಹೇಳಂತ್ತಾರೆ—

ಮೂ ॥ ಯುಧಿಷ್ಠಿರಾದ್ಯೇಷು ಚತುರ್ಷು ವಾಯುಃ
ಸಮಾವಿಷ್ಟಃ ಫಲ್ಗುನೇಽತೋ ವಿಶೇಷಾತ್ ।

ಯುಧಿಷ್ಠಿರೇ ಸೌಮ್ಯರೂಪೇಣ ವಿಷ್ಣೋ
ವೀರೇಣ ರೂಪೇಣ ಧನಂಜಯೇ೬ಸೌ ॥ ೧೨೯ ॥

ಅ॥ ವಾಯುಂದೇವರು (ಭೀಮಸೇನನ್ನು ಹೊರತು) ಯುಧಿಷ್ಠಿರ ಮೊದಲಾದ ನಾಲ್ವರಲ್ಲಿ ಸವಶಾವಿಷ್ಟರಾಗಿರುವರು. ಯುಧಿಷ್ಠಿರ ನಕುಲ ಸಹದೇವರದೆಸೆಯಿಂದ ಅರ್ಜುನನಲ್ಲಿ ವಿಶೇಷಾವೇಶದಿಂದ ಪ್ರವಿಷ್ಟರಾಗಿರುತ್ತಾರೆ, (ಯಾರಲ್ಲಿ ಯಾವ ರೂಪದಿಂದ ಪ್ರವಿಷ್ಟರಾಗಿರುತ್ತಾರೆಂದರೆ) ಶಾಂತರೂಪದಿಂದ ವಾಯುಂದೇವರು ಧರ್ಮರಾಜನಲ್ಲಿ ಪ್ರವಿಷ್ಟರಾಗಿರುತ್ತಾರೆ, ವೀರರೂಪದಿಂದ ಅರ್ಜುನನಲ್ಲಿ ಪ್ರವಿಷ್ಟರಾಗಿರುತ್ತಾರೆ. ॥ ೧೨೯ ॥

ಮೂ ॥ ಶೃಂಗಾರರೂಪಂ ಕೇವಲಂ ದರ್ಶಯಾನೋ
ವಿವೇಶ ವಾಯುರ್ಯಮಜೌ ಪ್ರಧಾನಃ ।
ಶೃಂಗಾರಕೈವಲ್ಯಮುಭೀಪ್ಸಮಾನಃ
ಪಾಂಡುರ್ಹಿ ಪುತ್ರಂ ಚಕಮೇ ಚತುರ್ಥಂ ॥ ೧೩೦ ॥

ಅ॥ ಶ್ರೀವುಂಖ್ಯಪ್ರಾಣದೇವರು ಕೇವಲ ಶೃಂಗಾರ ರೂಪವನ್ನು ತೋರಿಸುವವರಾಗಿ ನಕುಲ ಸಹದೇವರನ್ನು ಪ್ರವೇಶಮಾಡಿದರು. ಪಾಂಡುಚಕ್ರವರ್ತಿಯಾದರೂ ಕೇವಲ ಶೃಂಗಾರವನ್ನು ಇಚ್ಛಿಸುವವನಾಗಿ ನಾಲ್ಕನೇ ಮಗನನ್ನು ಇಚ್ಛಿಸಿದನು. ॥ ೧೩೦ ॥

ಮೂ ॥ ಶೃಂಗಾರರೂಪೋ ನಕುಲೇ ವಿಶೇಷಾತ್
ಸುನೀತಿರೂಪಃ ಸಹದೇವಂ ವಿವೇಶ ।
~~ಗುಣೈಃ ಸಮಸ್ತೈಃ ಸ್ವಯಮೇವ ವಾಯು-~~
ರ್ಬಭೂವ ಭೀಮೋ ಜಗದಂತರಾತ್ಮಾ ॥ ೧೩೧ ॥

ಅ॥ ಸಹದೇವನಲ್ಲಿರತಕ್ಕ ಸೌಂದರ್ಯ ರೂಪಕ್ಕಿಂತ ವಿಶೇಷಾಕಾರವಾಗಿ ಶೃಂಗಾರರೂಪನಾದ ವಾಯುವು ನಕುಲನನ್ನು ಪ್ರವೇಶ ಮಾಡಿದನು. ಸುನೀತಿ ರೂಪನಾದ ವಾಯುವು ಸಹದೇವನನ್ನು ಪ್ರವೇಶಮಾಡಿದನು, (ಸ್ವಲ್ಪ ಶೃಂಗಾರ ರೂಪನಾದ ವಾಯುವೂ ಸಹದೇವನನ್ನು ಪ್ರವೇಶಮಾಡಿದನು.) ಸರ್ವಜಗತ್ತಿಗೂ ಅಂತರ್ನಿಯಾಮಕನಾದ ವುಂಖ್ಯಪ್ರಾಣನು ತಾನೇ ಭಕ್ತಿಜ್ಞಾನ ಮೊದಲಾದ ಎಲ್ಲಾ ಗುಣಗಳಿಂದಲೂ (ಸಹಿತನಾಗಿ) ಭೀಮನಾಮಕನಾದನು. ॥ ೧೩೧ ॥

ಹಾಗಾದರೆ ಸದ್ಗುಣಗಳುಳ್ಳ ಭೀಮ ಅರ್ಜುನರಿಗೆ ಪ್ರಶಸ್ತಗಳಾದ ರೂಪಗಳು ಇರುತ್ತಿರಲು ಪಾಂಡುರಾಜನು, ರೂಪವುಳ್ಳವನು ಮತ್ತೊಬ್ಬನು ಮಗನಾಗಬೇಕೆಂದು ಏಕೆ ನಾಲ್ಕನೇ ಮಗನನ್ನು ಇಚ್ಛಿಸಿದನು ಎಂದರೆ—

ಮೂ ॥ ಸುಪಲ್ಲವಾಕಾರತನುರ್ಹಿ ಕೋಮಲಃ
ಪ್ರಾಯೋ ಜನೈಃ ಪ್ರೋಚ್ಯತೇ ರೂಪಶಾಲೀ ।
ತತಃ ಸುಜಾತೌ ವರವಜ್ರಕಾಯೌ
ಭೀಮಾರ್ಜುನಾವಪ್ಯತೇ ಪಾಂಡುರೈಚ್ಛತ್ ॥ ೧೩೨ ॥

ಅ॥ ಕೋಮಲವಾದ ಚಿಗುರು ಎಲೆಯು ಆಕಾರದಂತೆ ಆಕಾರವುಳ್ಳ ಶರೀರವುಳ್ಳ, ಮೃದುವಾದ ಪುರುಷನು ಹೆಚ್ಚಾಗಿ ಸ್ಥೂಲಜ್ಞಾನಿ ಜನರಿಂದ ಶೋಭನ ರೂಪವುಳ್ಳವನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ. (ತತಃ=) ಭೀಮ ಅರ್ಜುನರಿಗೆ ಅತ್ಯಂತ ಸೌಂದರ್ಯವಿದ್ದರೂ ಕಠಿಣವಾದ ಅಂಗವಿದ್ದುದರಿಂದ ಪ್ರಾಯಶಃ ಪ್ರಾಕೃತ ಜನರು ಸುರೂಪಿಗಳೆಂದು ಹೇಳದೆ ಇರುವ ಪ್ರಯುಂಕ್ತ ವಜ್ರದಿಂದಲೂ ಅತಿ ದೃಢವಾದ ಶರೀರಗಳುಳ್ಳ ಭೀಮ ಅರ್ಜುನರನ್ನು ಹೊರತೂ ಕೂಡ ಪಲ್ಲವದಂತೆಯೇ ಅತಿ ಕೋಮಲವಾದ ಅಂಗವುಳ್ಳವರಾಗಿ ಹುಟ್ಟುತಕ್ಕ ಪುತ್ರರನ್ನು ಪಾಂಡು ರಾಜನು ಇಚ್ಛಿಸಿದನು. ॥ ೧೩೨ ॥

ಭೀಮ ಅರ್ಜುನರ ಸ್ವರೂಪವು ಉತ್ತಮರಿಂದಲೇ ನೋಡಲಿಕ್ಕೆ ಯೋಗ್ಯವು. ಸರ್ವರಿಗೆ ನೋಡಲಿಕ್ಕೆ ಯೋಗ್ಯವಲ್ಲ ಎನ್ನುತ್ತಾರೆ—

ಮೂ ॥ ಅಪ್ರಾಕೃತಾನಾಂ ತು ಮನೋಹರಂ ಯ-
ದ್ರೂಪಂ ದ್ವಾತ್ರಿಂಶಲ್ಲಕ್ಷಣೋಪೇತಮಗ್ರ್ಯಂ ।
ತನ್ಮಾರುತೋ ನಕುಲೇ ಕೋಮಲಾಭ
ಏವಂ ವಾಯುಃ ಪಂಚರೂಪೋಽತ್ರ ಚಾಸೀತ್ ॥ ೧೩೩ ॥

ಅ॥ ಅಲೌಕಿಕರಿಗೇನೇ ವಿಶೇಷಾಕಾರವಾಗಿ ಮನೋಹರವಾದ ದ್ವಾತ್ರಿಂಶತ್ ಲಕ್ಷಣಗಳಿಂದ ಯುಕ್ತವಾದ ವಜ್ರದಂತೆ ಕಠಿಣವಾದ ಅಂಗವುಳ್ಳದ್ದು ಯಾವುದು ನಿಜರೂಪವೋ ಆ ರೂಪವನ್ನು ಮುಖ್ಯಪ್ರಾಣದೇವರು ನಕುಲನಲ್ಲಿ ಪಲ್ಲವ ಸದೃಶನಾಗಿ (ಮಾರ್ದವವನ್ನೇ ತೋರಿಸಿದನು.) ಹಿಂದೆ ಹೇಳಿದ ಪ್ರಕಾರ ವಾಯುದೇವರು ಶ್ರೀಕೃಷ್ಣಾವತಾರದಲ್ಲಿ (ಭೀಮನಲ್ಲಿ ಸಾಕ್ಷಾತ್ ಸ್ವರೂಪವುಳ್ಳವನು ಯುಧಿಷ್ಠಿರಾದಿಗಳಲ್ಲಿ ಆವಿಷ್ಟವಾದ ಚತುಃಸ್ವರೂಪವುಳ್ಳವನು, ಹೀಗೆ) ಪಂಚರೂಪವುಳ್ಳವನಾದನು.

ವಿಶೇಷಾಂಶ—ಹಿರಣ್ಯಕಶಿಪ್ರುವಿನ ಉದರವನ್ನು ಶೀಳಿಸುವ ಸಮಯದಲ್ಲಿ ತೋರಿಸಿದ ಕಾಠಿಣ್ಯವನ್ನು ವ್ಯಕ್ತೀಕರಿಸದೆ ಲಕ್ಷ್ಮೀದೇವಿಯು ಕುಚಕುಂಭವನ್ನು ಆಲಿಂಗನ ಮಾಡುವ ಕಾಲದಲ್ಲಿ ಮಾರ್ದವವನ್ನು ತೋರಿಸಿದ ನರಸಿಂಹನಂತೆಯೇ ಜರಾಸಂಧನ ಕಠೋರವಾದ ಅಂಗದ ಸಂಧಿಯನ್ನು ಶೀಳಿಸುವ ಕಾಲದಲ್ಲಿರತಕ್ಕ ಕಾಠಿಣ್ಯವನ್ನು ವ್ಯಕ್ತೀಕರಿಸದೆ ದ್ರೌಪದಿಯು ಆಲಿಂಗನದ ಸಂಭ್ರಮ ಸಮಯದಲ್ಲಿ ಉಂಟಾದ ಮಾರ್ದವವನ್ನೆಂಬಂತೆ ನಕುಲನ ದೇಹದಲ್ಲಿಯೂ ಅತಿ ಕೋಮಲನಾಗಿ ಮಾರ್ದವವನ್ನೇ ತೋರಿಸಿದನು. ॥ ೧೩೩ ॥

ಶ್ರೀಕೃಷ್ಣ ಪಾಂಡವರು ಪೂರ್ವೇಂದ್ರರು ಎನ್ನುವ ಪುರಾಣ ವಚನದ ಅಭಿಪ್ರಾಯವನ್ನು ವಿವರಿಸುತ್ತಾರೆ—

ಮೂ ॥ ಅತೀತೇಂದ್ರಾ ಏವ ತೇ ವಿಷ್ಣುಷಷ್ಠಾಃ
ಪೂರ್ವೇಂದ್ರೋಽಸೌ ಯಜ್ಞನಾಮಾ ರಮೇಶಃ ।
ಸ ವೈ ಕೃಷ್ಣೋ ವಾಯುರಥ ದ್ವಿತೀಯಃ
ಸ ಭೀಮಸೇನೋ ಧರ್ಮ ಆಸೀತ್ತೃತೀಯಃ ॥ ೧೩೪ ॥

ಅ॥ (ವ್ಯುತ್ಕ್ರಮ ಸಂಖ್ಯೆಯಿಂದ) ಶ್ರೀವಿಷ್ಣುವೇ ಪರನೆಯಂವನಾಗಿ ಉಳ್ಳ ಆ ಪಂಚ ಪಾಂಡವರು ಅತೀತವಾದ ಮನ್ವಂತರದಲ್ಲಿರತಕ್ಕ ಇಂದ್ರರೇ. ಈದಾವ ಯಜ್ಞನಾಮಕನಾದ

ಲಕ್ಷ್ಮೀಪತಿಯಂ ಪ್ರಥಮ ಮನ್ವಂತರದ ಇಂದ್ರನಂ. ಆ ಯಜ್ಞನಾಮಕನಾದ ಶ್ರೀಪರಮಾತ್ಮನೇ ಶ್ರೀಕೃಷ್ಣನಾದನಂ. ಆ ಯಜ್ಞನಾಮಕ ಶ್ರೀಪರಮಾತ್ಮನಂ ಇಂದ್ರನಾದ ಮೇಲೆ ಮಂಖ್ಯಿಪ್ರಾಣನಂ ರೋಚನಾಖ್ಯನಾದ ಎರಡನೇ ಇಂದ್ರನಂ ಆದನಂ. ಆವನೇ ಭಿಮಂಸೇನನಂ ಆದನಂ; ಯಂಮನಂ ಸತ್ಯಜಿತ್ ನಾಮಕನಾದ ಮೂರನೇ ಇಂದ್ರನೂ ಆದನಂ. ॥ ೧೩೪ ॥

ಮೂ ॥ ಯುಧಿಷ್ಠಿರೋ೭ಸಾವಥ ನಾಸತ್ಯದಸ್ರೌ
ಕ್ರಮಾತ್ತಾವೇತೌ ಮಾದ್ರವತೀಸುತೌ ಚ ।
ಪುರಂದರಃ ಷಷ್ಠ ಉತಾತ್ರ ಸಪ್ತಮಃ
ಸ ಏವೈಕಃ ಫಲ್ಗುನೋ ಹ್ಯೇತ ಇಂದ್ರಾಃ ॥ ೧೩೫ ॥

ಅ॥ ಈ ಧರ್ಮನೇ ಯುಧಿಷ್ಠಿರನಂ. ಧರ್ಮನಂ ಇಂದ್ರನಾದ ಮೇಲೆ ಅಶ್ವಿನೀದೇವತೆಗಳಂ ಇಬ್ಬರಂ (ಒಬ್ಬನಂ ನಾಲ್ಕನೇ ಇಂದ್ರನು ಮಂತೊ್ಮಬ್ಬನು ಐದನೇ ಇಂದ್ರನೂ ಆದನಂ.) ಆ ಈ ಅಶ್ವಿನೀ ದೇವತೆಗಳಂ ಮಾನುಷಾವತಾರ ಯೋಗ್ಯ ಕ್ರಮದಿಂದ (ನಕುಲಸಹದೇವರೆಂದಂ) ಮಾದ್ರಿಯಂ ಪುತ್ರರಂ ಆದರಂ ಈ ಇಂದ್ರರಲ್ಲಿ ಪುರಂದರನಂ (ಅನುಕ್ರಮ ಸಂಖ್ಯೆಯಿಂದ) ಆರನೇಯಂವನಂ (ಅಂದರೆ ಆರನೇ ಮನ್ವಂತರದಲ್ಲಿದ್ದ ಮಂದ್ರದಂ್ಮವಾಖ್ಯ ಇಂದ್ರನಂ) ಮಂತ್ತಾ ಏಳನೇಯಂವನಂ. (ಅಂದರೆ ಎರಡಂ ಮನ್ವಂತರ ಕಾಲದಲ್ಲಿಯೂ ಯಾರಂ ಪುರಂದರನೋ ಅವನೊಬ್ಬನೇ ಇಂದ್ರನಂ ಆದನಂ, ಆ ಪುರಂದರನೇ ಅರ್ಜುನನಂ ಆದನಂ, ವಿಷ್ಣ್ವಾದಿಗಳಂ ಆರಂ ಮಂದಿಯೂ ಇಂದ್ರರೇ.)

ವಿಶೇಷಾಂಶ—(1) ನಾಸತ್ಯದಸ್ರರಿಗೆ ಇಬ್ಬರಿಗೂ ಪ್ರತ್ಯೇಕ ನಾಮವಿಲ್ಲ. ವಿಯೋಗವೂ ಇಲ್ಲ. ನಾಸತ್ಯರೂ ಅಶ್ವಿನೀ ದೇವತೆಗಳೇ, ದಸ್ರರೂ ಅಶ್ವಿನೀ ದೇವತೆಗಳೇ, ಆದಾಗ್ಯೂ ಒಂದೇ ಕಾಲದಲ್ಲಿ ಇಂದ್ರಪದವಿಯಲ್ಲಿ ಇಬ್ಬರೂ ಇದ್ದರೂ ಒಬ್ಬನಿಗೇನೇ ಪ್ರಾಧಾನ್ಯವು. ಎರಡನೇ ಇಂದ್ರಪದವಿಯಂಲ್ಲಿ ಮಂತೊ್ಮಬ್ಬನಿಗೆ ಪ್ರಾಧಾನ್ಯವು (2)ಕ್ರಮಾತ್ ಎಂದಂ ಇಷ್ಟು ಹೇಳಿದಂದರಿಂದ ಮಾನುಷ ದೇಹದಲ್ಲಿ ಒಬ್ಬನನ್ನು ಬಿಟ್ಟು ಒಬ್ಬನಂ ಇರುಂತ್ತಾನೆ ಒಬ್ಬನನ್ನು ಬಿಟ್ಟು ಮಂತೊ್ಮಬ್ಬನಂ ಇರುತ್ತಾನೆ. ಒಬ್ಬನನ್ನು ಬಿಟ್ಟು ಮಂತೊ್ಮಬ್ಬನೇ ಭೋಜನ ಮಾಡುತ್ತಾನೆ. ಕ್ರೀಡಿಸುತ್ತಾನೆ, ಮಗುವನ್ನು ಹುಟ್ಟಿಸುತ್ತಾನೆ, ಇದಂ ಮೊದಲಾದ ಮೂಲರೂಪದ್ದೆಸೆಯಿಂದ ವಿಲಕ್ಷಣವಾದ ಪ್ರಮೇಯ ಭೇದವೂ ಕೂಡ ಸೂಚಿತವಾಯಿತಂ (3) ವಿಶೇಷನಾವಾಪ್ಯವಿಶೇಷಿತಂ ಯಂಯೋಃ ಎನ್ನುವ ನಿಯಂಮಂವಾದರೂ ಮೂಲರೂಪದಲ್ಲಿಯೇ. (4) ಪುರಂದರನೇ ಆರನೇಯಂವನಂ, ಮಂತ್ತಾ ಏಳನೇಯಂವನಂ, ಆ ಪುರಂದರನೇ ಅರ್ಜುನನಾದನಂ ಆದಂದರಿಂಡಲೇ ಆರಂ ಇಂದ್ರರೂ ಕೂಡ ಐದಂ ಇಂದ್ರರಂ ಆದರಂ. ಆ ಐದಂ ಇಂದ್ರರೇ ಪಂಚಪಾಂಡವರಾಗಿ ಹುಟ್ಟಿದರಂ. ಪೂರ್ವೇಂದ್ರನಾದ ಯಂಜ್ಞನಾದರೂ ಶ್ರೀಕೃಷ್ಣನಾದನಂ. ॥ ೧೩೫ ॥

ಮೂ ॥ ಕ್ರಮಾತ್ಸಂಸ್ಕಾರಾನ್ ಕ್ಷತ್ರಿಯಾಣಾಮವಾಪ್ಯ
ತೇ೭ವರ್ಧಂತ ಸ್ವತವಸೋ ಮಹಿತ್ವನಾ ।
ಸರ್ವೇ ಸರ್ವಜ್ಞಾಃ ಸರ್ವಧರ್ಮೋಪಪನ್ನಾಃ
ಸರ್ವೇ ಭಕ್ತಾಃ ಕೇಶವೇ೭ತ್ಯಂತಯುಕ್ತಾಃ ॥ ೧೩೬ ॥

ಅ॥ ಸ್ವರೂಪಭೂತವಾದ ಸಾಮರ್ಥ್ಯವುಳ್ಳ ಆ ಪಾಂಡವರು ಅಥವಾ ಸ್ವಭಾವದಿಂದಲೇ ವಿಸ್ತಾರವುಳ್ಳ, ಭೂಮಿಯಲ್ಲಿ ಕುಂತೀ ಮಾದ್ರೀ ಇವರ ಸಕಾಶದಿಂದ ಹುಟ್ಟಿರುವ ಆ ಐದು ಮಂದಿ ಇಂದ್ರರೂ ಸಂಸ್ಕಾರಕ್ಕೆ ಯೋಗ್ಯವಾದ ಕಾಲಕ್ರಮದಿಂದಲಾಗಲೀ ಜ್ಯೇಷ್ಠ ಕ್ರಮದಿಂದ ಲಾಗಲೀ ಕ್ಷತ್ರಿಯರಿಗೆ ಯೋಗ್ಯಗಳಾದ ಸಂಸ್ಕಾರಗಳನ್ನು ಹೊಂದಿ ವಹಿವಾಯಿಂದ ದಿನೇದಿನೇ ಅಭಿ ವೃದ್ಧಿಯನ್ನು ಹೊಂದಿದರು. ಎಲ್ಲಾ ಪಾಂಡವರೂ ಸರ್ವಜ್ಞರೂ ಸ್ವವಿಹಿತಗಳಾದ ವಿಷ್ಣುಪ್ರೀತಿ ಕರಗಳಾದ ಧರ್ಮಗಳಿಂದ ಯುಕ್ತರೂ ಸರ್ವರೂ ಕೇಶವನಲ್ಲಿ ಮನೋಯೋಗವುಳ್ಳವರೂ ಕೇಶ ವನಲ್ಲಿ ಅತ್ಯಂತ ಮನೋಯೋಗಯುಕ್ತರೂ ಆಗಿ ಬೆಳೆಯುತ್ತಿದ್ದರು.

ವಿಶೇಷಾಂಶ....(1) ತೇsವರ್ಧಂತಸ್ವತವಸೋಮಹಿತ್ವನಾ ಎನ್ನುವ ಶ್ರುತಿಯನ್ನು ಶ್ಲೋಕದ ಒಂದು ಪಾದವಾಗಿ ಹೇಳಿದ್ರಿಂದ ತನ್ನ ಗ್ರಂಥವನ್ನು ಛಂದಸ್ಸಿಗೆ ಸಮಾನವೆಂದು ಆಚಾ ರ್ಯರು ಸೂಚಿಸಿರುವರು. ಶ್ಲೋಕದ ಒಂದು ಪಾದವು ಶ್ರೌತವಾದರೆ ಎಲ್ಲಾ ಶ್ಲೋಕವೂ ಶ್ರುತಿ ಸಮಾನವೇ ಎಂದು ಸೂಚಿತವಾಯಿತು. (2) ಪಂಚಪಾಂಡವರೂ ಪೂರ್ವೇಂದ್ರರೂ ಎನ್ನು ವುದು ಶ್ರೌತವೆಂದೂ ಸೂಚಿತವಾಯಿತು. (3) ಅವರ್ಧಂತ=ದಿನೇದಿನೇ ಅಭಿವೃದ್ಧಿಯನ್ನು ಹೊಂದಿಕೊಂಡು ಇದ್ದರು ಎನ್ನುವ ಅರ್ಥ ಪರ್ಯಾಲೋಚನೆಯಿಂದ ಪಂಚಪಾಂಡವರೂ ಪಂಚೇಂದ್ರರು ಎನ್ನುವುದು ಸ್ಪಷ್ಟವಾಯಿತೆಂದು ಗ್ರಂಥಕಾರರ ಅಭಿಪ್ರಾಯವು ॥ ೧೩೬ ॥

ಮೂ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಶ್ರೀಕೃಷ್ಣಾವತಾರೇ
ಪಾಂಡವೋತ್ಪತ್ತಿರ್ನಾಮ ದ್ವಾದಶೋsಧ್ಯಾಯಃ ॥ ೧೨ ॥

ಹೀಗೆ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ನಿರ್ಮಿತವಾದ ಶ್ರೀಮನ್ಮಹಾ ಭಾರತತಾತ್ಪರ್ಯನಿರ್ಣಯದಲ್ಲಿ ಶ್ರೀಕೃಷ್ಣಾವತಾರದಲ್ಲಿ ಪಾಂಡವೋತ್ಪತ್ತಿಯೆನ್ನುವ ಹನ್ನೆರಡನೇ ಅಧ್ಯಾಯವು ಸಮಾಪ್ತವಾಯಿತು. ॥ ೧೨ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಹದಿಮೂರನೇ ಅಧ್ಯಾಯವು

ಮೂ ॥ ಓಂ ॥ ಗರ್ಗಃ ಶೂರಸುತೋಕ್ಷ್ಯಾ
ವ್ರಜನಾಯಾತ್ ಸಾತ್ವತಾಂ ಪುರೋಧಾಃ ಸಃ ।
ಚಕ್ರೇ ಕ್ಷತ್ರಿಯಯೋಗ್ಯಾನ್
ಸಂಸ್ಕಾರಾನ್ ಕೃಷ್ಣರೋಹಿಣೇಸೂನ್ವೋಃ ॥ ೧ ॥

ಅ॥ ಯಾದವ ವಿಶೇಷರಿಗೆ ಪುರೋಹಿತರಾದ ಗರ್ಗಾಚಾರ್ಯರು (ರಾಮಕೃಷ್ಣರಿಗೆ ಜಾತ ಕರ್ಮಾದಿ ಸಂಸ್ಕಾರಗಳನ್ನು ಮಾಡು ಎನ್ನುವ) ಶೂರಪುತ್ರನಾದ ವಸುದೇವನ ಮಾತಿನಿಂದ (ಹೇಳಿಸಿಕೊಳ್ಳಲ್ಪಟ್ಟವರಾಗಿ) ನಂದಗೋಕುಲವನ್ನು ಕುರಿತು ಬಂದರು. ಆ ಗರ್ಗಾಚಾರ್ಯರು ಶ್ರೀಕೃಷ್ಣನಿಗೂ ರೋಹಿಣೀ ಪುತ್ರನಾದ ಬಲರಾಮನಿಗೂ ಇವರಿಬ್ಬರಿಗೂ ಕ್ಷತ್ರಿಯರಿಗೆ ಯೋಗ್ಯ ಗಳಾದ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿದರು.

ವಿಶೇಷಾಂಶ—(1) ಅಕ್ಷತ್ರಸಂಸ್ಕಾರಯುತೋ ಜಾತೋಽಪಿ ಕ್ಷತ್ರಿಯೇ ಕುಲೇ । ನ ಕ್ಷತ್ರಿಯೋ ಹಿ ಭವತಿ ಯಥಾ ವ್ರಾತ್ಯೋ ದ್ವಿಜೋತ್ತಮಃ ॥ ಎನ್ನುವ ಸ್ಮೃತಿಯಿಂದ ನಂದಗೋಪನು ತನ್ನ ಔರಸ ಪುತ್ರನು ಎನ್ನುವ ಬುದ್ಧಿಯಿಂದ ಈತನು ವಸುದೇವಪುತ್ರನೆಂದು ತಿಳಿಯಲಿಲ್ಲ. ಆದಕಾರಣ ನಂದಗೋಪನದೆಸೆಯಿಂದ ವೈಶ್ಯರಿಗೆ ಯೋಗ್ಯವಾದ ಸಂಸ್ಕಾರವನ್ನು ಹೊಂದಿದ ಶ್ರೀಕೃಷ್ಣನಿಗೆ ಕ್ಷತ್ರಿಯತ್ವವು ಬಾರದೆ ಹೋಗಬೇಕಾಗುವುದು, ಎನ್ನುವ ಆ ಶಂಕೆ ಯನ್ನು ತೆಗೆಯುವುದಕ್ಕಾಗಿ ಶ್ರೀಕೃಷ್ಣ ಬಲರಾಮರಿಗೆ ಗರ್ಗಾಚಾರ್ಯರು ಏಕಾಂತ ಸ್ಥಳದಲ್ಲಿ ಕ್ಷತ್ರಿಯರಿಗೆ ಯೋಗ್ಯಗಳಾದ ಸಂಸ್ಕಾರಗಳನ್ನು ಮಾಡಿದರು. (2) ಯಶೋದೆಯು ಪುತ್ರನಾಗಿ ದ್ದರೆ ವೈಶ್ಯರ ಸಂಸ್ಕಾರಕ್ಕೆ ಯೋಗ್ಯನು. ಆದುದರಿಂದಲೇ "ಯಶೋದಾರೋಹಿಣೀಸೂನ್ವೋಃ ಎಂದು ಹೇಳದೆ ಕೃಷ್ಣರೋಹಿಣೀಸೂನ್ವೋಃ ಎಂದು ಪ್ರಯೋಗಿಸಿರುವರು. ॥ ೧ ॥

ಮೂ ॥ ಊಚೇ ನಂದ ಸುತೋಽಯಂ
ತವ ವಿಷ್ಣೋರ್ನಾವಮೋ ಗುಣೈಃ ಸರ್ವೈಃ ।
ಸರ್ವೇ ಚೈತತ್ಪ್ರಾತಾಃ
ಸುಖಮಾಪ್ನ್ಯಂತ್ಯುನ್ನತಂ ಭವತ್ಪೂರ್ವಾಃ ॥ ೨ ॥

ಅ॥ ಗರ್ಗಾಚಾರ್ಯರು ನಂದಗೋಪನನ್ನು ಕುರಿತು ಹೇಳಿದರು: ಎಲೋ ನಂದ ಗೋಪನೇ ಎದುರಿನಲ್ಲಿರತಕ್ಕ ನಿನ್ನ ಪುತ್ರನಾದ ಶ್ರೀಕೃಷ್ಣನು ಎಲ್ಲಾ ಗುಣಗಳಿಂದ ವಿಷ್ಣುವಿನ ಸಕಾಶದಿಂದ ಕಡಿಮೆಯಾದವನಲ್ಲ. (ವಿಷ್ಣು ತುಲ್ಯನು, ಶ್ರೀ ವಿಷ್ಣುವಿಗೆ ಸಮಾಧಿಕರಿಲ್ಲದಿರುವುದ ರಿಂದ ಶ್ರೀವಿಷ್ಣುವಿಗೆ ಸಮಾನಿಕನು ಶ್ರೀವಿಷ್ಣುವೇ.) ಈ ಶ್ರೀಕೃಷ್ಣನಿಂದ ರಕ್ಷಿತರಾದ ನೀವೇ ಮೊದಲಾದವರೆಲ್ಲರೂ ಅತ್ಯುಚ್ಚವಾದ ಸುಖವನ್ನು ಹೊಂದುವರು. ॥ ೨ ॥

ಮೂ ॥ ಇತ್ಯುಕ್ತಃ ಸ ಮುನೋದ
ಪ್ರಯಯೌ ಗರ್ಗೋಽಪಿ ಕೇಶವೋಽಥಾದ್ಯಃ ।
ಸ್ವಪದೈರಗ್ರಜಯುಕ್ತ-
ಶ್ಚಕ್ರೇ ಪುಣ್ಯಂ ವ್ರಜನ್ ವ್ರಜೋದ್ದೇಶಂ ॥ ೩ ॥

ಅ॥ ಈ ಪ್ರಕಾರ (ಗರ್ಗಾಚಾರ್ಯರಿಂದ) ಹೇಳಿಸಿಕೊಳ್ಳಲ್ಪಟ್ಟ ಆ ನಂದಗೋಪನಂ ಸಂತೋಷಪಟ್ಟು ಹೊಂದಿದನಂ. ಗರ್ಗಾಚಾರ್ಯರೂ ಕೂಡಾ ಹೋದರಂ. ಆವೇಲೆ ಬಲರಾಮನಿಂದ ಕೂಡಿದ ಆದಿಪುರುಷನಾದ, ಶ್ರೀಕೃಷ್ಣನಂ ಅತ್ತಿತ್ತ ಸಂಚರಿಸುತ್ತಾ ತನ್ನ ಪಾದವಿನ್ಯಾಸಗಳಿಂದ ನಂದಗೋಕುಲದ ಉತ್ತಮ ಪ್ರಾಂತವನ್ನು ಕೂಡ ಅತಿ ಪುಣ್ಯ ಸ್ಥಳವನ್ನಾಗಿ ಮಾಡಿದನಂ, ॥ ೩ ॥

ಮೂ ॥ ಸ ಕದಾಚಿಚ್ಛುಭಾವಂ
ಕುರ್ವಂತ್ಯಾ ಮಾತುರಾತ್ಮನೋ ಭೂಯಃ ।
ಅಪನೇತುಂ ಪರಮೇಶೋ
ಮೃದಂ ಜಘಾಸೇಕ್ಷತಾಂ ವಯಸ್ಯಾನಾಂ ॥ ೪ ॥

ಅ॥ ಪರಮ ಸಮರ್ಥನಾದ ಶ್ರೀಕೃಷ್ಣನಂ ಮಂಗಳವು ಎನ್ನುವ ಬುದ್ಧಿಯನ್ನು (ಭ್ರಾಂತಿಯನ್ನು) ಮಾಡತಕ್ಕ ತನ್ನ ತಾಯಿಯಂ ಮತ್ತು ಮತ್ತು ಶಿಶುವೆನ್ನುವ ಭ್ರಾಂತಿಯಟನ್ನು ತೆಗೆಯಂವುದಕ್ಕಾಗಿ ಒಂದಾನೊಂದಂ ದಿವಸದಲ್ಲಿ ಸಮಾನವಾದ ವಯಸ್ಸುಳ್ಳ ಹುಡುಗರಂ ನೋಡುತ್ತಿರಂವಾಗಲೇ ಪ್ರಶಸ್ತವಾದ ಮೃತ್ತಿಕೆಯನ್ನು ತಿಂದಂ ಬಿಟ್ಟನಂ. ॥ ೪ ॥

ಮೂ ॥ ಮಾತ್ರೋಪಾಲಬ್ಧ ಈಶೋ ಮುಖವಿಕೃತಿಮಕ-
ರ್ನಾಂಬ ಮೃದ್ಭಕ್ಷಿತಾಹಂ
ಪಶ್ಯೇತ್ಯಾಸ್ಯಾಂತರೇ ತು ಪ್ರಕೃತಿವಿಕೃತಿಯುಕ್
ಸಾ ಜಗತ್ ಪರ್ಯಪಶ್ಯತ್ ।
ಇತ್ಥಂ ದೇವೋಽಪ್ಯಚಿಂತ್ಯಾಮುಪರದುರಧಿಗಾಂ
ಶಕ್ತಿಮುಚ್ಚಾಂ ಪ್ರದರ್ಶ್ಯ
ಪ್ರಾಯೋ ಜ್ಞಾತಾತ್ಮತತ್ತ್ವಂ ಪುನರಪಿ ಭಗವಾ-
ನಾಸೃಣೋದಾತ್ಮಶಕ್ತ್ಯಾ ॥ ೫ ॥

ಅ॥ ತಾಯಿಯಾದ ಯಂಶೋದಾದೇವಿಯಿಂದ ಬಯಂಸಿಕೊಳ್ಳಲ್ಪಟ್ಟ ಶ್ರೀಕೃಷ್ಣನಂ ಎಲೋ ತಾಯಿಯೇ, ನಾನಂ ಮಂಣ್ಣನ್ನು ಭಕ್ಷಿಸಿದವನಂ ಅಲ್ಲ. ಅಸ್ಯದ ಮಂಧ್ಯದಲ್ಲಿ ಆದರೂ ನೋಡಂ, ಹೀಗೆ(ಹೇಳುತ್ತಾ) ಬಾಯಿಯ ವಿವರಣವನ್ನು (ತೆರಂವಿಕೆಯಂನ್ನು) ಮಾಡಿಡನಂ, ಆ ಯಂಶೋದಾದೇವಿಯಂ ಮಂಲ ಪ್ರಕೃತಿಯಂ, ತತ್ಕಾರ್ಯಗಳಾದ ಮಂಹದಾದಿ ತತ್ವಗಳೂ ಇವುಗಳಿಂದ ಯಂಕ್ತವಾದ ಜಗತ್ತನ್ನು ನೋಡಿದಳಂ. ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಕೃಷ್ಣನಂ ಈ ಪ್ರಕಾರವಾಗಿ ಇತರರಿಂದ ಸ್ಮರಿಸಲಿಕ್ಕೂ ಅಶಕ್ಯವಾದ, ತನ್ನಿಂದ ಇತರರಾದ ರವಾದಿಗಳಿಂದ

ತಿಳಿಯಲಿಕ್ಕೆ ಅಶಕ್ಯವಾದ, ಉತ್ಕೃಷ್ಟವಾದ, ಸ್ವರೂಪಶಕ್ತಿಯನ್ನೂ ತೋರಿಸಿ, ಹೆಚ್ಚಾಗಿ ಪರಮಾತ್ಮನ ಸ್ವರೂಪವನ್ನು ತಿಳಿದ ಆ ಯಶೋದಾದೇವಿಯನ್ನೂ, ಕೂಡ ತನ್ನ ವೈಷ್ಣವಮಾಯೆಯಿಂದ ಮತ್ತು ಕೂಡ ಮೊದಲಿನಂತೆ ಪುತ್ರಸ್ನೇಹದಿಂದ ಯುಕ್ತಳನ್ನಾಗಿ ಮಾಡಿದನು. ॥ ೫ ॥

ಮೂ ॥ ಇತಿ ಪ್ರಭುಃ ಸ ಲೀಲಯಾ ಹರಿರ್ಜಗದ್ವಿಡಂಬಯನ್ ।
ಚಚಾರ ಗೋಷ್ಠಮಂಡಲೇಽಪ್ಯನಂತಸೌಖ್ಯಚಿದ್ಘನಃ ॥ ೬ ॥

ಅ॥ ಆಪರಿಮಿತವಾದ ಜ್ಞಾನಪೂರ್ಣನಾದ, ಸರ್ವಸಮರ್ಥನಾದ, ಶತ್ರುಸಂಹಾರಕನಾದ ಆ ಶ್ರೀಕೃಷ್ಣನು ಅನೇಕ ಕ್ರೀಡೆಯಿಂದ ಜಗತ್ತನ್ನು ಅನುಕರಿಸುವವನಾಗಿ ನಂದಗೋಕುಲ ಪ್ರವೇಶದಲ್ಲಿಯೂ ಕೂಡ ಸಂಚರಿಸುತ್ತಿದ್ದನು. ॥ ೬ ॥

ಮೂ ॥ ಕದಾಚಿದೀಶ್ವರಃ ಸ್ತನಂ ಪಿಬನ್ಯಶೋದಯಾ ಪಯಃ ।
ಸೃತಂ ನಿಧಾತುಮುಷ್ಣತೋ ಬಭಂಜ ದಧ್ಯಮುತ್ರಕಂ ॥ ೭ ॥

ಅ॥ ಒಂದಾನೊಂದು ದಿವಸದಲ್ಲಿ ಶ್ರೀಕೃಷ್ಣನು ಸ್ತನವನ್ನು ಕುಡಿಯುತ್ತಾ ಪಾತ್ರದ್ವೆಷದಿಂದ ಮೇಲಕ್ಕೆ ಬಂದ ಹಾಲನ್ನು (ನೋಡಿ ಒಲೆಯಿಂದ ಕೆಳಗೆ) ಇಡುವುದಕ್ಕಾಗಿ ಅಥವಾ ಪಾತ್ರಬಂಧ್ಯದಲ್ಲಿಡುವುದಕ್ಕಾಗಿ ಯಶೋದಾದೇವಿಯಿಂದ ಬಿಡಲ್ಪಟ್ಟವನಾಗಿ (ಅಂದರೆ ಕೆಳಗೆ ಸ್ಥಾಪಿಸಲ್ಪಟ್ಟವನಾಗಿ) ಮಂಥನಮಾಡಲ್ಪಡತಕ್ಕ ದಧಿಸಂಬಂಧಿಯಾದ ಪಾತ್ರವನ್ನು (ಅಂದರೆ ಮಡಿಕೆಯನ್ನು) ಪುಡಿಮಾಡಿದನು. ॥ ೭ ॥

ಮೂ ॥ ಪ್ರಮಥ್ಯಮಾನದಧ್ಯುರುಪ್ರಜಾತಮಿಂದುಸನ್ನಿಭಂ ।
ನವಂ ಹಿ ನೀತಮಾದದೇ ರಹೋ ಜಘಾಸ ಚೇಶಿತಾ ॥ ೮ ॥

ಅ॥ ಸರ್ವಸಮರ್ಥನಾದ ಶ್ರೀಕೃಷ್ಣನು ಚೆನ್ನಾಗಿ ಮಂಥಿಸಲ್ಪಡತಕ್ಕ ದಧಿಯಿಂದೆಸೆಯಿಂದ ಉತ್ಕೃಷ್ಟ ಹೇಗೆ ಆದೀತೋ ಹಾಗೆ ಹುಟ್ಟಿದ, ಚಂದ್ರನಿಗೆ ಸದೃಶವಾದ ಶ್ವೇತ ವರ್ಣವಾದ ಬೆಣ್ಣೆಯನ್ನು ತೆಗೆದುಕೊಂಡನು. ಏಕಾಂತದಲ್ಲಿ ಭಕ್ಷಿಸಿದನು. ॥ ೮ ॥

ಹಾಗಾದರೆ ಸರ್ವಸಮರ್ಥನಾದ ಶ್ರೀಕೃಷ್ಣನಿಗೆ ನವನೀತಭಕ್ಷಣ ಮೊದಲಾದ ಕರ್ಮವು ಯಾವುದರಿಂದ ಎಂದರೆ, ಪ್ರಜಾಯಂತೇ ಇತ್ಯಾದಿ ಎರಡು ಶ್ಲೋಕಗಳಿಂದ ಪರಿಹರಿಸುತ್ತಾರೆ—

ಮೂ ॥ ಪ್ರಜಾಯತೇ ಹಿ ಯತ್ಕುಲೇ ಯಥಾಯುಗಂ ಯಥಾವಯಃ ।
ತಥಾ ಪ್ರವರ್ತನಂ ಭವೇದ್ದಿವೌಕಸಾಂ ಸಮುದ್ಭವೇ ॥ ೯ ॥
ಇತಿ ಸ್ವಧರ್ಮಮುತ್ತಮಂ ದಿವೌಕಸಾಂ ಪ್ರದರ್ಶಯನ್ ।
ಅಧರ್ಮಪಾವಕೋಽಪಿ ಸನ್ ವಿಡಂಬತೇ ಜನಾರ್ದನಃ ॥ ೧೦ ॥

ಅ॥ ಶ್ರೀಕೃಷ್ಣನು ದೇವತೆಗಳಿಗೆ ಪ್ರಾದುರ್ಭಾವವು (ಭೂಲೋಕದಲ್ಲಿ ಪ್ರಾಪ್ತವಾಗುತ್ತಿರಲು) ಯಾದೃಶವಾದ ಯುಗವೋ ಯಾದೃಶವಾದ ವಯಸ್ಸೋ (ಯಾದೃಶವಾದ ಕುಲವೋ) ಅಂತಹ ಕುಲ, ಯುಗ, ವಯಸ್ಸನ್ನು ಅನುಸರಿಸಿ ಆಚರಣವು ಆಗುವುದು, ಎನ್ನುವ ಅಭಿಪ್ರಾಯದಿಂದ ದೇವತೆಗಳಿಗೆ ಉತ್ತಮವಾದ ತನಗೆ ಪ್ರೀತಿಕರವಾದ ಧರ್ಮವನ್ನು ತಿಳಿಸುವವನಾಗಿ ಅವಿಹಿ

ತವಾದ ಕರ್ಮವನ್ನು ಮಾಡುವುದರಲ್ಲಿ ಅಗ್ನಿಯಂತೆ ಇರತಕ್ಕವನಾದಾಗ್ಯೂ, ಯಾವ ಕಾಲದಲ್ಲಿ (ಯಾವ ಯುಗದಲ್ಲಿ ಎಂತಹ ವಯಸ್ಸಿನಿಂದ ವಿಶಿಷ್ಟನಾಗಿ) ಹುಟ್ಟುತ್ತಾನೋ ಹಾಗೆಯೇ ಕಾಲಾದಿಗಳನ್ನು ಅನುಸರಿಸಿಯೇ ಲೋಕವನ್ನು ಅನುಕರಿಸುತ್ತಾ ಇರುತ್ತಾನೆ. ॥ ೯ ॥ ೧೦ ॥

ಹಿಂದೆ ಹೇಳಿದ ಅರ್ಥವನ್ನೇ ವಿವರಿಸುತ್ತಾರೆ—

ಮೂ ॥ ನೃತಿರ್ಯಗಾದಿರೂಪಕಃ ಸ ಬಾಲ್ಯಯೌವನಾದಿಯುಕ್ ।
ಕ್ರಿಯಾಶ್ಚ ತತ್ತ ದುದ್ಭವಾಃ ಕರೋತಿ ಶಾಶ್ವತೋಽಪಿ ಸನ್ ॥ ೧೧ ॥

ಅ॥ ರಾಮಕೃಷ್ಣ ಮೊದಲಾದ ಮನುಷ್ಯ ರೂಪಗಳೂ, ಮತ್ಸ್ಯ ಮೊದಲಾದ ತಿರ್ಯಗ್ರೂಪಗಳೂ ಇವುಗಳೇ ಮೊದಲಾಗಿ ಉಳ್ಳ ಹಯಗ್ರೀವ ನರಸಿಂಹ ಮೊದಲಾದ ರೂಪಗಳುಳ್ಳ ಶ್ರೀಹರಿಯು ಶಶ್ವದೇಕಪ್ರಕಾರನಾದಾಗ್ಯೂ ಬಾಲ್ಯ ಯೌವನ ಮೊದಲಾದುದು ಯಾವುದು ವಯೋಽವಸ್ಥಾನವೋ ಆವಾವ ವಯೋವಸ್ಥಾ ವಿಶೇಷಗಳಿಂದ ಹುಟ್ಟಿರುವ ಕ್ರಿಯೆಗಳನ್ನು ಮಾಡುತ್ತಾನೆ. ॥ ೧೧ ॥

ಮೂ ॥ ಸ ವಿಪ್ರರಾಜಗೋಪಕಸ್ವರೂಪಕಸ್ತದುದ್ಭವಾಃ ।
ತದಾತದಾ ವಿಚೇಷ್ಟತೇ ಕ್ರಿಯಾಃ ಸುರಾನ್ವಿಶಿಕ್ಷಯನ್ ॥ ೧೨ ॥

ಅ॥ (ಯಾವಾಗ ಯಾವಾಗ) ಶ್ರೀಹರಿಯು ವ್ಯಾಸ ಭಾರ್ಗವ ಮೊದಲಾದ ವಿಪ್ರಸ್ವರೂಪಗಳೂ, ರಾಮ ಮೊದಲಾದ ರಾಜಸ್ವರೂಪರೂ ಕೃಷ್ಣನೆಂದು ಗೊಲ್ಲರ ಸ್ವರೂಪವೂ ಇವುಗಳುಳ್ಳವನು ಆಗುತ್ತಾನೋ, ಆಗ ಆಗ ಆವಾವ ಜಾತಿಗಳಿಂದ ಹುಟ್ಟಿರುವ ಕ್ರಿಯೆಗಳನ್ನು ದೇವತೆಗಳನ್ನು ಶಿಕ್ಷಿಸುತ್ತಾ ಮಾಡುತ್ತಾನೆ.

ವಿಶೇಷಾಂಶ—ಹಾಗಾದರೆ 'ನೃತಿರ್ಯಗಾದಿರೂಪಕಃ' ಎನ್ನುವಲ್ಲಿ ಆದಿ ಪದದಿಂದಲಾಗಲೀ ನೃಪದದಿಂದಲಾಗಲೀ ವಿಪ್ರರೂಪಗಳಿಗೂ ರಾಜರೂಪಗಳಿಗೂ ಹೀಗೆ ಎಲ್ಲಾದಕ್ಕೂ ಸಂಗ್ರಹವು ಬರುವುದರಿಂದ 'ಸ ವಿಪ್ರರಾಜಗೋಪಕ ಸ್ವರೂಪಕಃ' ಎಂದು ಪುನರ್ವಚನವು ಏತಕ್ಕೆಂದರೆ–ವಯೋಽವಸ್ಥಾ ವಿಶೇಷಕ್ಕೆ ಉಚಿತಗಳಾದ ಕರ್ಮವನ್ನೇ ಅಲ್ಲಿ ಗ್ರಹಣ ಮಾಡಿದ್ದು; ಜಾತಿವಿಶೇಷಗಳಿಗೆ ಉಚಿತಗಳಾದ ಕರ್ಮಗಳನ್ನು ಸಂಗ್ರಹಿಸುವುದಕ್ಕಾಗಿ ಪುನರ್ವಚನವು ॥ ೧೨ ॥

ಮೂ ॥ ತಥಾಪ್ಯನನ್ಯದೇವತಾಸಮಂ ನಿಜಂ ಬಲಂ ಪ್ರಭುಃ ।
ಪ್ರಕಾಶಯನ್ ಪುನಃಪುನಃ ಪ್ರಕಾಶ (*ಪ್ರದರ್ಶ) ಯತ್ಯಜೋ
ಗುಣಾನ್ ॥ ೧೩ ॥

ಅ॥ ವಿಶೇಷಾಕಾರವಾಗಿ ಶಿಕ್ಷಿಸತಕ್ಕವನಾದಾಗ್ಯೂ ಉತ್ಪತ್ತಿ ರಹಿತನಾದ ಸರ್ವಸಮರ್ಥನಾದ ಶ್ರೀಹರಿಯು ಇತರ ದೇವತೆಗಳಿಗೆ ಸಮವಾಗದಿರುವ ತನ್ನ ಬಲವನ್ನು ಪ್ರಕಟೀಕರಿಸುವವನಾಗಿ ಮತ್ತು ಮತ್ತು ಸರ್ವೋತ್ತಮತ್ವ ಸರ್ವಜ್ಞತ್ವ ಸರ್ವಶಕ್ತಿತ್ವ ಮೊದಲಾದ ಗುಣಗಳನ್ನು ತೋರಿಸುತ್ತಾನೆ, ಅಥವಾ ಪ್ರಕಾಶಪಡಿಸುತ್ತಾನೆ. ॥ ೧೩ ॥

* ಪ್ರದರ್ಶಯತ್ಯಜೋ ಗುಣಾನ್'—ಎಂದು ವಾದಿರಾಜೀಯ ಪಾಠವು.

ಮೂ ॥ ಅಥಾತ್ತಯಷ್ಟಿಮೀಕ್ಷ್ಯ ತಾಂ ಸ್ವಮಾತರಂ ಜಗದ್ಗುರುಃ ।
ಸ ಪುಪ್ಲುವೇ ತಮನ್ವಗಾನ್ಮನೋವಿದೂರಮಂಗನಾ ॥ ೧೪ ॥

ಅ ॥ ಮೊಸರಿನ ಪಾತ್ರವನ್ನು ಒಡೆದ ಮೇಲೆ ಜಗದುಪದೇಶಕರ್ತನಾದ ಶ್ರೀಕೃಷ್ಣನು ಸರ್ವರೂ ನೋಡುತ್ತಿರುವಾಗ ಸ್ವೀಕರಿಸಲ್ಪಟ್ಟ ದಂಡವುಳ್ಳ ತಾಯಿಯನ್ನು (ನೋಡಿ) ಓಡಿ ಹೋದನು. ಯಶೋದಾದೇವಿಯು ಯೋಗಿಗಳಿಂದ ಮನಸ್ಸಿನಿಂದಲೂ ಹೊಂದಲಶಕ್ಯನಾದ ಆ ಶ್ರೀಕೃಷ್ಣನನ್ನು ಅನುಸರಿಸಿ ಹೋದನು. ॥ ೧೪ ॥

ಮೂ ॥ ಪುನಃ ಸಮೀಕ್ಷ್ಯ ತಚ್ಛ್ರಮಂ ಜಗಾಮ ತತ್ಕರಗ್ರಹಂ ।
ಪ್ರಭುಃ ಸ್ವಭಕ್ತವಶ್ಯತಾಂ ಪ್ರಕಾಶಯನ್ನುರುಕ್ರಮಃ ॥ ೧೫ ॥

ಅ ॥ ಮತ್ತು ಉತ್ಕೃಷ್ಟ ಪರಾಕ್ರಮವುಳ್ಳ ಅಥವಾ ಅತಿ ದೂರ ಪಾದವಿನ್ಯಾಸವುಳ್ಳ, ಶ್ರೀಕೃಷ್ಣನು ಯಶೋದಾದೇವಿಯ ಶ್ರಾಂತಿಯನ್ನು ನೋಡಿ (ಅಂದರೆ ಯಶೋದಾದೇವಿಯು ಅತಿ ಬಳಲಿದ್ದಾಳೆಂದು ತಿಳಿದು) ತನ್ನ ಭಕ್ತರ ಅಧೀನತ್ವವನ್ನು ಪ್ರಕಾಶಪಡಿಸುವವನಾಗಿ ಯಶೋದಾದೇವಿಯ ಕೈಯಿಂದ ಗ್ರಹಣವನ್ನು ಹೊಂದಿದನು. (ಅಂದರೆ ಯಶೋದಾದೇವಿಯಿಂದ ಹೊಂದಲ್ಪಟ್ಟನು.) ॥ ೧೫ ॥

ಮೂ ॥ ಸದಾ ವಿಮುಕ್ತಮೀಶ್ವರಂ ನಿಬದ್ಧುಮಂಜಸಾದದೇ ।
ಯದೈವ ದಾಮ ಗೋಪಿಕಾ ನ ತತ್ಪುಪೂರ ತಂ ಪ್ರತಿ ॥ ೧೬ ॥

ಅ ॥ ಯಶೋದಾದೇವಿಯು ಯಾವಾಗಲೂ ಬಂಧನರಹಿತನಾದ ಶ್ರೀಕೃಷ್ಣನನ್ನು ಚೆನ್ನಾಗಿ ಕಟ್ಟುವುದಕ್ಕಾಗಿ ಗೋವುಗಳನ್ನು ಕಟ್ಟತಕ್ಕ ಹಗ್ಗವನ್ನು ಯಾವಾಗಲೇ ಸ್ವೀಕರಿಸಿದಳೋ ಆಗ ಆ ಹಗ್ಗವು ಆ ಶ್ರೀಕೃಷ್ಣನನ್ನು ಕುರಿತು ಪೂರ್ತಿಯಾಗಲಿಲ್ಲ. ॥ ೧೬ ॥

ಮೂ ॥ ಸಮಸ್ತ ದಾಮಸಂಚಯಃ ಸುಸಂಧಿತೋಽಪ್ಯಪೂರ್ಣತಾಂ ।
ಯಯಾವನಂತವಿಗ್ರಹೇ ಶಿಶುತ್ವಸಂಪ್ರದರ್ಶಕೇ ॥ ೧೭ ॥

ಆ ॥ ಎಲ್ಲಾ ಹಗ್ಗಗಳ ಸಮೂಹವು ಮೇಲುಮೇಲಿನ ಗಂಟುಗಳಿಂದ ಕೂಡಿಸಲ್ಪಟ್ಟವನಾದಾಗ್ಯೂ ಶಿಶುತ್ವವನ್ನು ತೋರಿಸತಕ್ಕ ಪರಿಮಾಣವಿಲ್ಲದಿರುವ ಶ್ರೀಕೃಷ್ಣನ ಶರೀರದಲ್ಲಿ ಪರಿಪೂರ್ಣತ್ವಾಭಾವವನ್ನು ಹೊಂದಿತು. ॥ ೧೭ ॥

ಮೂ ॥ ಅಬಂಧಯೋಗ್ಯತಾಂ ಪ್ರಭುಃ ಪ್ರದರ್ಶ್ಯ ಲೀಲಯಾ ಪುನಃ ।
ಸ ಏಕವತ್ಸಪಾಶಕಾಂತರಂ ಗತೋಽಖಿಲಂಭರಃ ॥ ೧೮ ॥
ಸುತಸ್ಯ ಮಾತೃವಶ್ಯತಾಂ ಪ್ರದರ್ಶ್ಯ ಧರ್ಮಮೀಶ್ವರಃ ।
ಬಭಂಜ ತೌ ದಿವಿಸ್ಪೃಶೌ ಯಮಾರ್ಜುನೌ ಸುರಾತ್ಮಜೌ ॥ ೧೯ ॥

ಅ॥ ವಿಶ್ವಂಭರನಾದ (ಹೊಟ್ಟೆಯಲ್ಲಿ ನಿಖಿಲ ಜಗತ್ತನ್ನು ಧರಿಸಿರುವ) ಸರ್ವಸಮರ್ಥನಾದ ಶ್ರೀಕೃಷ್ಣನು ತನಗೆ ಬಂಧನ ಯೋಗ್ಯತ್ವಾಭಾವವನ್ನು ತೋರಿಸಿ ಅನಂತರದಲ್ಲಿ ಮಗನಿಗೆ ತಾಯಿಯ ಅಧೀನತ್ವ ರೂಪವಾದ ಧರ್ಮವನ್ನು ತೋರಿಸಿ ಕ್ರೀಡೆಯಿಂದ ಒಂದೇ ಕರುವಿನ

ಹಗ್ಗದ ಮಧ್ಯವನ್ನು ಹೊಂದಿದವನಾದನು; (ಅಂದರೆ ಕರುವಿನ ಕುತ್ತಿಗೆಗೆ ಆವರಣಭೂತವಾದ ಹಗ್ಗದಿಂದ ಬಂಧನವನ್ನು ಹೊಂದಿದನು.) ಸರ್ವೇಶ್ವರನಾದ ಶ್ರೀಕೃಷ್ಣನು ಸಹಸ್ರಧನುಃ ಪರಿವಹಣದ ಊರ್ಧ್ವದೇಶವನ್ನು ಮುಟ್ಟುತ್ತಿರುವ (ಅಂದರೆ ಅತಿ ದೀರ್ಘಗಳಾದ) (ಮೊದಲು) ಕುಬೇರನ ಪುತ್ರರೆಂದು ಪ್ರಸಿದ್ಧರಾದ, ಒಂದು ಗರ್ಭದಲ್ಲಿ ಒಟ್ಟಿಗೆ ಹುಟ್ಟಿರುವ ಸರಳ ವೃಕ್ಷವಾಗಿ ಹುಟ್ಟಿದವುಗಳನ್ನು ಕಿತ್ತನು. ॥ ೧೮ ॥ ೧೯ ॥

ವೃಕ್ಷಗಳಿಗೆ ಅಸುರ ಪ್ರವೇಶಕ್ಕೂ ಕುಬೇರ ಪುತ್ರರಿಗೆ ತರುತ್ವ ಪ್ರಾಪ್ತಿಗೂ ಕಾರಣವನ್ನು ಹೇಳುತ್ತಾರೆ—

ಮೂ ॥ ಪುರಾ ಧುನಿಶ್ಚವುಸ್ತಥಾಪಿ ಪೂತನಾಸಮನ್ವಿತೌ ।
ಅನೋಕ್ಷ ಸಂಯುತೌ ತಪಃ ಪ್ರಚಕ್ರತುಃ ಶಿವಾಂ ಪ್ರತಿ ।
ತಯಾ ವರೋಽಪ್ಯವಧ್ಯತಾ ಚತುರ್ಷು ಚ ಪ್ರಯೋಜಿತಃ ॥ ೨೦ ॥

ಅ ॥ ಪೂತನೆಯಿಂದ ಯುಕ್ತರಾದ ಶಕಟಾಕ್ಷನಿಂದ ಕೂಡಿರುವ ಧುನಿನಾಮಕನಾದ ಅಸುರನೂ ಹಾಗೆಯೇ ಚವುಂಡಿನಾಮಕನಾದ ಅಸುರನೂ ಕೂಡ ಮೊದಲು ಪಾರ್ವತಿಯನ್ನು ಕುರಿತು ತಪಸ್ಸನ್ನು ಮಾಡಿದರು. (ಅಂದರೆ ನಾಲ್ವರೂ ಒಟ್ಟಿಗೇನೇ ತಪಸ್ಸನ್ನು ಮಾಡಿದರು.) ಪಾರ್ವತಿಯಿಂದ ಅವಧ್ಯತ್ವ ರೂಪವಾದ ವರವು ನಾಲ್ವರಲ್ಲಿಯೂ (ಸ್ಥಿತಿನಿಮಿತ್ತವಾಗಿ) ಕೊಡಲ್ಪಟ್ಟಿತು. ॥ ೨೦ ॥

ಮೂ ॥ ಅನಂತರಂ ತೃಣೋದ್ಧ್ರವಿಸ್ತಪೋಽಚರದ್ವರಂ ಚ ತಂ ।
ಅವಾಪ ತೇ ತ್ರಯೋ ಹತಾಃ ಶಿಶುಸ್ವರೂಪವಿಷ್ಣುನಾ ॥ ೨೧ ॥

ಅ ॥ ಆಮೇಲೆ ಧುನ್ಯಾದಿಗಳು ವರವನ್ನು ಹೊಂದಿದ ಮೇಲೆ, (ತೃಣೋದ್ಧ್ರವಿಃ, ತೃಣಂ ಊರ್ಧ್ವಂ ಭ್ರಾಮಯತಿ, ಹುಲ್ಲನ್ನು ಮೇಲಕ್ಕೆ ತಿರುಗಿಸುತ್ತಾನೆ ಎನ್ನುವ ವ್ಯುತ್ಪತ್ತಿಯಿಂದ) ತೃಣಾವರ್ತ ನಾಮಕ ಅಸುರನು ತಪಸ್ಸನ್ನು (ಪಾರ್ವತಿಯನ್ನು ಕುರಿತು) ಮಾಡಿದನು. ಅವಧ್ಯತ್ವರೂಪವಾದ ವರವನ್ನೂ ಕೂಡ ಹೊಂದಿದನು. ಶಿಶುವಿನ ಸ್ವರೂಪದಂತೆ ಸ್ವರೂಪವುಳ್ಳ ಶ್ರೀಕೃಷ್ಣನಿಂದ ಆ ಮೂವರೂ (ಅಂದರೆ ಪೂತನೆಯು ಶಕಟಾಕ್ಷನು, ತೃಣಾವರ್ತನು ಎನ್ನುವ ಮೂವರೂ) ಸಂಹರಿಸಿಕೊಳ್ಳಲ್ಪಟ್ಟರು. ॥ ೨೧ ॥

ಮೂ ॥ ಧುನಿಶ್ಚವುಶ್ಚ ತೌ ತರೂ ಸವಾಶ್ರಿತೌ ನಿಷೂದಿತೌ ।
ತರುಪ್ರಭಂಗತೋಽಮುನಾ ತರೂ ಚ ಶಾಪಸಂಭವೌ ॥ ೨೨ ॥

ಅ ॥ ನಾರದನ ಶಾಪದಿಂದ ಹುಟ್ಟಿರುವ ನಲಕೂಬರ ಮಣಿಗ್ರೀವಾತ್ಮಕ ವೃಕ್ಷಗಳು ಕೀಳಲ್ಪಟ್ಟವು. ಈ ಶ್ರೀಕೃಷ್ಣನಿಂದ ವೃಕ್ಷಗಳ ಕೀಳುವಿಕೆಯ ನಿಮಿತ್ತದಿಂದ ಸರಳ ವೃಕ್ಷಗಳನ್ನು ಆಶ್ರಯಿಸಿರುವ ಧುನಿನಾಮಕ ದಾನವನು ಚವುಂ ನಾಮಕ ದಾನವನೂ ಕೂಡ ಇಬ್ಬರೂ ಸಂಹೃತರಾದರು. ॥ ೨೨ ॥

ಯಾವುದಕ್ಕಾಗಿ ಯಾರಿಗೆ ಶಾಪವು ಎಂದರೆ—

ಮೂ ॥ ಪುರಾ ಹಿ ನಾರದಾಂತಿಕೇ ದಿಗಂಬರೌ ಶಶಾಪ ಸಃ ।
ಧನೇಶಪುತ್ರಕೌ ದ್ರುತಂ ತರುತ್ವಮಾಪ್ನುತಂ ಕ್ಷಿತಿ ॥ ೨೩ ॥

ಅ॥ ಮೊದಲು ಆ ನಾರದನು ನಾರದನ (ತನ್ನ) ಸವಿಶಾಪದಲ್ಲಿ ದಿಗಂಬರರಾದ (ಅಂದರೆ ,ವನ್ನು ಬಿಚ್ಚಿ ಹಾಕಿದ) ಕುಬೇರನ ಪುತ್ರರಾದ ನಲಕೂಬರಮಣಿಗ್ರೀವರನ್ನು ಶೀಘ್ರದಲ್ಲಿ ೀಕಾಲ ಪರ್ಯಂತ ವೃಕ್ಷಭಾವವನ್ನು ನೀವು ಇಬ್ಬರು ಹೊಂದುವಿರಿ, ಎಂದು ಶಾಪಕೊಟ್ಟನು. ೩ ॥

೨ ॥ ತತೋ ಹಿ ತೌ ನಿಜಾಂ ತನುಂ ಹರೇಃ ಪ್ರಸಾದತ ಃ ಶುಭೌ ।
ಅವಾಪತುಃ ಸ್ತುತಿಂ ವಿಭೋರ್ವಿಧಾಯ ಜಗ್ಮತುರ್ಗೃಹಂ ॥ ೨೪ ॥

ಅ॥ ಆಮೇಲೆ, ಆ ನಲಕೂಬರ ಮಣಿಗ್ರೀವರು ಶ್ರೀಕೃಷ್ಣನ ಅನುಗ್ರಹದಿಂದ ಶುಭರಾಗಿ ಂದರೆ ಶಾಪ ದೇಹದಿಂದ ಬಿಡಲ್ಪಟ್ಟವರಾಗಿ) ತಮ್ಮ ಮೂಲರೂಪವನ್ನು ಹೊಂದಿದರು. ಶ್ರೀ ಷ್ಣಸ್ತೋತ್ರವನ್ನು ಮಾಡಿ ಮನೆಯನ್ನು ಕುರಿತು ಹೋದರು. (ಅಂದರೆ ದೇವತಾ ಪದವನ್ನು ಾಂದಿದರು.) ॥ ೨೪ ॥

೨೫ ॥ ನಲಕೂಬರಮಣಿಗ್ರೀವೌ ಮೋಚಯಿತ್ವಾ ಚ ಶಾಪತಃ ।
ಸುದೇವೋಽಥ ಗೋಪಾಲೈರ್ವಿಸ್ಮಿತೈರಭಿವೀಕ್ಷಿತಃ ॥ ೨೫ ॥

ಅ॥ ಶ್ರೀಕೃಷ್ಣನು ನಾರದನ ಶಾಪದಿಂದ ನಲಕೂಬರ ಮಣಿಗ್ರೀವರನ್ನು ಬಿಡಿಸಿ ಅವರು ಬ್ಬರು ಹೋದಮೇಲೆ ಅತ್ಯಂತ ಆಶ್ಚರ್ಯಯುಕ್ತರಾದ ಗೊಲ್ಲರಿಂದ ಕಾಣಿಸಿಕೊಳ್ಳಲ್ಪಟ್ಟನು; ೨೫ ॥

೨೬ ॥ ವೃಂದಾವನಂ ಯಿಯಾಸುಃ ಸನ್ನಂದಸೂನುರ್ಬೃಹದ್ವನೇ ।
ಸಸರ್ಜ ರೋಮಕೂಪೇಭ್ಯೋ ವೃಕಾನ್ ವ್ಯಾಘ್ರಸಮಾನ್ ಬಲೀ ॥೨೬॥

ಅ॥ (ಬೃಹದ್ವನದ್ದೆಸೆಯಿಂದ) ವೃಂದಾವನಾಖ್ಯ ಸ್ಥಾನವಿಶೇಷವನ್ನು ಹೊಂದಲಿಕ್ಕೆ ಇಚ್ಛಿಸಿದ ನಂದನ ಪುತ್ರನಾದ ಆ ಶ್ರೀಕೃಷ್ಣನು ಬೃಹದ್ವನದಲ್ಲಿ(ತನ್ನ) ರೋಮಕೂಪಗಳಿಂದ ಶಕ್ತಿ ವಿಷ ುದಲ್ಲಿ ಹುಲಿಗಳಿಗೆ ಸಮಗಳಾದ ಚಿನ್ನೆ ನಾಯಿಂಗಳನ್ನು ಸೃಷ್ಟಿಸಿದನು. ॥ ೨೬ ॥

೨೭ ॥ ಅನೇಕಕೋಟಿಸಂಘೈಸ್ತೈಃ ಪೀಡ್ಯಮಾನಾ ವ್ರಜಾಲಯಾಃ ।
ಯಯುರ್ವೃಂದಾವನಂ ನಿತ್ಯಾನಂದಮಾದಾಯ ನಂದಜಂ ॥ ೨೭ ॥

ಅ॥ ಬಹು ಕೋಟಿಗಳ ಸಮೂಹವುಳ್ಳ ಆ ಚಿನ್ನೆ ನಾಯಿಂಗಳಿಂದ ಪೀಡಿಸಿಕೊಳ್ಳಲ್ಪಡತಕ್ಕ ನಂದಗೋಕುಲದಲ್ಲಿ ಮನೆಯುಳ್ಳ ಗೋಪರು ಅವಿಚ್ಛಿನ್ನವಾದ ಆನಂದವುಳ್ಳ, ನಂದಗೋಪನ ಪುತ್ರನಾದ ಶ್ರೀಕೃಷ್ಣನನ್ನು ಕರಕೊಂಡು ವೃಂದಾವನವನ್ನು ಕುರಿತು ಹೋದರು. ॥ ೨೭ ॥

೨೮ ॥ ಇಂದಿರಾಪತಿರಾನಂದಪೂರ್ಣೋ ಬೃಂದಾವನೇ ಪ್ರಭುಃ ।
ನಂದಯಾಮಾಸ ನಂದಾದೀನುದ್ದಾಮತರಚೇಷ್ಟಿತೈಃ ॥ ೨೮ ॥

ಅ ॥ ಆನಂದಭರಿತನಾದ ಸರ್ವಸಮರ್ಥನಾದ ಲಕ್ಷ್ಮೀಪತಿಯಾದ ಶ್ರೀಕೃಷ್ಣನು ವೃಂದಾ ವನದಲ್ಲಿ ಅತಿ ಪ್ರೌಢಗಳಾದ ತನ್ನ ಕರ್ಮಗಳಿಂದ ನಂದಗೋಪನೇ ಮೊದಲಾದವರನ್ನು ಸಂತೋಷಪಡಿಸಿದನು. ॥ ೨೮ ॥

ಮೂ ॥ ಸ ಚಂದ್ರತೋ ಹಸತ್ಕಾಂತವದನೇನೇಂದುವರ್ಚಸಾ ।
ಸಹಿತೋ ರೌಹಿಣೇಯೇನ ವತ್ಸಪಾಲೋ ಬಭೂವ ಹ ॥೨೯॥

ಅ॥ ಚಂದ್ರನನ್ನು ತಿರಸ್ಕರಿಸತಕ್ಕ ಮನೋಹರವಾದ ಮುಖವುಳ್ಳ, ಚಂದ್ರನ ಕಾಂತಿಯಂತೆ ಕಾಂತಿಯುಳ್ಳ ರೋಹಿಣೀಪುತ್ರನಾದ ಬಲರಾಮನಿಂದ ಕೂಡಿರತಕ್ಕ ಆ ಶ್ರೀಕೃಷ್ಣನು ಕರುಗಳನ್ನು ಮೇಯಿಸತಕ್ಕವನು ಆದನು. ॥೨೯॥

ಮೂ ॥ ದೈತ್ಯಂ ಸ ವತ್ಸತನುಮಪ್ರಮುಯಃ ಪ್ರಗೃಹ್ಯ
ಕಂಸಾನುಗಂ ಹರವರಾದಪರೈರವಧ್ಯಂ ।
ಪ್ರಕ್ಷಿಪ್ಯ ವೃಕ್ಷಶಿರಸಿ ನ್ಯಹನದ್ಬಕೋಽಪಿ
ಕಂಸಾನುಗೋಽಥ ವಿಭುಮಚ್ಯುತವಾಸಸಾದ ॥ ೩೦ ॥

ಅ॥ (* ಅಪ್ರಮುಯಃ=) ಇತರರಲ್ಲಿ ಅಧಿಕ ಜ್ಞಾನವಿಲ್ಲದವನು ತಾನು ಜ್ಞಾನರೂಪನು ಇಂತಹ ಶ್ರೀಕೃಷ್ಣನು ಕಂಸನ ಭೃತ್ಯನೂ, ರುದ್ರನ ವರದಿಂದ ಇತರರಿಂದ ಸಂಹರಿಸಿಕೊಳ್ಳಲ್ಪಡದಿರುವವನೂ, ಕರುಗಳ ಶರೀರದಂತೆ ಶರೀರವುಳ್ಳವನೂ ಇಂತಹ ವತ್ಸನಾಮಕ ದೈತ್ಯನನ್ನು (ಪೃಷ್ಠಪಾದಗಳನ್ನು) ಹಿಡಿದು ಮರದ ಊರ್ಧ್ವಭಾಗದಲ್ಲಿ ಬಿಸಾಡಿ ಸಂಹರಿಸಿದನು. ಆಮೇಲೆ ಕಂಸನ ಭೃತ್ಯನಾದ ಬಕಾಸುರನೂ ಕೂಡ ನಾಶರಹಿತನಾದ ಶ್ರೀಕೃಷ್ಣನನ್ನು ಹೊಂದಿದನು. ॥೩೦॥

ಮೂ ॥ ಸ್ಕಂದಪ್ರಸಾದಕವಚಃ ಸ ಮುಖೇ ಚಕಾರ
ಗೋವಿಂದಮುಗ್ನವದನುಂ ಪ್ರದಹಂತಮುಚ್ಚೈಃ ।
ಚಚ್ಛರ್ದ ತುಂಡಶಿರಸೈವ ನಿಹಂತುಮೇನ-
ಮಾಯಾಂತವಿಕ್ಷ್ಯ ಜಗೃಹೇಽಸ್ಯ ಸ ತುಂಡವಿನಾಶಃ ॥ ೩೧ ॥

ಅ॥ ಷಣ್ಮುಖನ ವರರೂಪಪ್ರಸಾದವೇ ಕವಚವಾಗಿ ಉಳ್ಳ, ಆ ಬಕಪಕ್ಷಿರೂಪನಾದ ದೈತ್ಯನು ಶ್ರೀಕೃಷ್ಣನನ್ನು ಮುಖದಲ್ಲಿ ಮಾಡಿದನು. (ಅಂದರೆ ನುಂಗಿಬಿಟ್ಟನು.) ಆ ಬಕಾಸುರನು ಅತಿಶಯವಾಗಿ ಅಗ್ನಿಯಂತೆ ಸುಡತಕ್ಕ ಈ ಕೃಷ್ಣನನ್ನು ವಾಂತಿಮಾಡಿದನು. ಅಂದರೆ ಹೊರಗೆ ತಳ್ಳಿ ಬಿಟ್ಟನು ಸರ್ವಸಮರ್ಥನಾದ ಆ ಶ್ರೀಕೃಷ್ಣನು ಚುಂಚು (ಕೊಕ್ಕು) ವಿನ ತುದಿಯಿಂದ (ತನ್ನನ್ನು) ಕೊಲ್ಲಲಿಕ್ಕೇನೇ ಬಂದ ಈ ಬಕಾಸುರನನ್ನು ನೋಡಿ ಈ ಬಕಾಸುರನ ಕೊಕ್ಕನ್ನು ಹಿಡಿದನು. ॥೩೧॥

ಮೂ ॥ ತುಂಡದ್ವಯಂ ಯದುಪತಿಃ ಕರಪಲ್ಲವಾಭ್ಯಾಂ
ಸಂಗೃಹ್ಯ ಚಾಶು ವಿದದಾರ ಹ ಪಕ್ಷಿದೈತ್ಯಂ ।
ಬ್ರಹ್ಮಾದಿಭಿಃ ಕುಸುಮವರ್ಷಿಭಿರೀಡ್ಯಮಾನಃ
ಸಾಯಂ ಯಯೌ ವ್ರಜಭುವಂ ಸಹಿತೋಽಗ್ರಜೇನ ॥ ೩೨ ॥

*ಅನ್ಯಪ್ರಕರ್ಷೇಣ, ಮಾ= ಜ್ಞಾನಂ ನ ಯಸ್ಮಿನ್ ಸಃ ಅಪ್ರಮುಃ ಯಾರಲ್ಲಿ ಇತರಾಧಿಕ್ಯದಿಂದ ಜ್ಞಾನವು ಇಲ್ಲವೋ ಅತನು ಅಪ್ರಮುನು. ಯೂ ಪ್ರಾಪಣೇ ಎನ್ನುವ ಧಾತುವಿನಿಂದ ತಾನು ಜ್ಞಾನರೂಪನೂ ಆಗಿರುತ್ತಾನೆ. ಅಪ್ರಮುಶ್ಚಾಸೌ ಯುಶ್ಚ ಎಂದು ವಿಗ್ರಹವು. ಅಥವಾ ಮೂಙ್ ಮೂನೇ ಎನ್ನುವ ಧಾತುವಿನಿಂದ ಕರ್ಮಾರ್ಥದಲ್ಲಿ ಔಣಾದಿಕವಾದ ಡ ಪ್ರತ್ಯಯ ಮಾಡಿದರೆ ಅಪ್ರಮೇಯ ಏವ ಅಪ್ರಮುಯಃ ಎಂದು ವ್ಯುತ್ಪತ್ತಿಯು.

ಅ॥ ಯಶಾದವರಿಗೆ ಅಧಿಪತಿಯಾದ ಶ್ರೀಕೃಷ್ಣನು ಚಿಗುರು ಎಲೆಯಂತೆ ಕೋಮಲಗಳಾದ ಕೈಗಳಿಂದ ಮೇಲಿನ ಮಂತ್ತು ಕೆಳಗಿನ ಎರಡು ಕೊಕ್ಕುಗಳನ್ನು ಹಿಡಿದುಕೊಂಡು ಶೀಘ್ರದಲ್ಲಿ ಬಕ ಪಕ್ಷಿಯು ಆಕಾರನಾದ ದೈತ್ಯನನ್ನು ಶೀಳಿದನು. ಪುಷ್ಪವೃಷ್ಟಿಯನ್ನು ಮಾಡತಕ್ಕ ಬ್ರಹ್ಮಾದಿ ದೇವತೆಗಳಿಂದ ಸ್ತುತಿಸಿಕೊಳ್ಳಲ್ಪಟ್ಟವನಾಗಿ ಸಾಯಂಕಾಲದಲ್ಲಿ ನಂದಗೋಕುಲವನ್ನು ಕುರಿತು ಹೋದನು.

ಮೂ ॥ ಏವಂ ಸ ದೇವವರವಂದಿತಪಾದಪದ್ಮೋ
ಗೋಪಾಲಕೇಷು ವಿಹರನ್ ಭುವಿ ಷಷ್ಠಮಬ್ದಂ ।
ಪ್ರಾಪ್ತೋ ಗವಾಮಖಿಲಪೋಽಪಿ ಸ ಪಾಲಕೋಽಭೂತ್
ವೃಂದಾವನಾಂತರಗಸಾಂದ್ರಲತಾವಿತಾನೇ ॥ ೩೩ ॥

ಅ॥ ಹಿಂದೆ ಹೇಳಿದ ಪ್ರಕಾರ ಯಾವಾಗಲೂ ಉತ್ತಮರಾದ ಬ್ರಹ್ಮಾದಿಗಳಿಂದ ನಮಸ್ಕರಿಸಿ ಕೊಳ್ಳಲ್ಪಡತಕ್ಕ ಮತ್ತು ಸ್ತುತಿಸಿಕೊಳ್ಳಲ್ಪಡತಕ್ಕ ಕಮಲದಂತೆ ಇರತಕ್ಕ ಪಾದಗಳುಳ್ಳ ಆ ಶ್ರೀ ಕೃಷ್ಣನು ಗೋವುಗಳನ್ನು ರಕ್ಷಿಸತಕ್ಕ ಗೊಲ್ಲರಲ್ಲಿ ಕ್ರೀಡಿಸುತ್ತಾ ಭೂಮಿಯಲ್ಲಿ ಆರನೇ ಸಂವತ್ಸರ ವನ್ನು ಹೊಂದಿದವನಾಗಿ ಬ್ರಹ್ಮಾದಿ ನಿಖಿಲ ಜಗತ್ತನ್ನು ರಕ್ಷಿಸತಕ್ಕವನಾದಾಗ್ಯೂ ವೃಂದಾವನದ ಮಧ್ಯದಲ್ಲಿರತಕ್ಕ ನಿಬಿಡಗಳಾದ ಲತಾರೂಪಗಳಾದ ಮೇಲಿನ ವಸ್ತ್ರವಿಶೇಷವುಳ್ಳ ಅಥವಾ ಲತೆ ಗಳಿಂದ ವಿಸ್ತೀರ್ಣವಾದ ಸ್ಥಲದಲ್ಲಿ ಗೋವುಗಳಿಗೆ ರಕ್ಷಕನಾದನು. ॥ ೩೩ ॥

ಮೂ ॥ ಜ್ಯೇಷ್ಠಂ ವಿಹಾಯ ಸ ಕದಾಚಿದಚಿಂತ್ಯಶಕ್ತಿ-
ರ್ಗೋಗೋಪಗೋಗಣಯುತೋ ಯಮುನಾತಟೇಷು ।
ರೇವೇ ಭವಿಷ್ಯದನುವೀಕ್ಷ್ಯ ಹಿ ಗೋಪದುಃಖಂ
ತದ್ಬೋಧನಾಯ ನಿಜಮಗ್ರಜಮೇಷು ಸೋಽಧಾತ್ ॥ ೩೪ ॥

ಅ॥ ಶ್ರೀಕೃಷ್ಣನು ಜ್ಯೇಷ್ಠನಾದ ಬಲಭದ್ರನನ್ನು ಬಿಟ್ಟು (ಗಾಃ=ಗೋಪಾಯಂತೀತಿ ಗೋಗೋಪಾಃ ಎನ್ನುವ ವ್ಯುತ್ಪತ್ತಿಯಿಂದ) ಗೋವುಗಳನ್ನು ರಕ್ಷಿಸತಕ್ಕ ಗೊಲ್ಲರೂ ಗೋವುಗಳ ಸಮೂಹಗಳೂ ಇವುಗಳಿಂದ ಕೂಡಿದವನಾಗಿ ಯಮುನಾನದಿಯ ತೀರಗಳಲ್ಲಿ ಕ್ರೀಡಿಸುತ್ತಿದ್ದನು. (ಜ್ಯೇಷ್ಠನನ್ನು ಬಿಟ್ಟು ಹೋಗಲಿಕ್ಕೆ ಕಾರಣವನ್ನು ಹೇಳುತ್ತಾರೆ.) ಆ ಶ್ರೀಕೃಷ್ಣನು ವಂದೆಬರತಕ್ಕ ಗೊಲ್ಲರ ದುಃಖವನ್ನು ವಿಚಾರವಶಾಡಿ ಆ ಗೊಲ್ಲರಿಗೆ ಶ್ರೀಕೃಷ್ಣನ ಸಾಮರ್ಥ್ಯ ವನ್ನು ತಿಳಿಸುವುದಕ್ಕಾಗಿ ಈ ಗೊಲ್ಲರಲ್ಲಿ ಅಗ್ರಜನಾದ ಬಲರಾಮನನ್ನು ಇರಿಸಿದನು. ॥ ೩೪ ॥

ಮೂ ॥ ತಂ ಬ್ರಹ್ಮಣೋ ವರಬಲಾದುರಗಂ ತ್ವವಧ್ಯಂ
ಸರ್ವೈರವಾರ್ಯವಿಷವೀರ್ಯಮೃತೇ ಸುಪರ್ಣಾತ್ ।
ವಿಜ್ಞಾಯ ತದ್ವಿಷವಿದೂಷಿತವಾರಿಪಾನ-
ಸನ್ನಾನ್ಪಶೂನಪಿ ವಯಸ್ಯಜನಾನ್ ಸ ಆವೀತ್ ॥ ೩೫ ॥

ಅ॥ ಆ ಶ್ರೀಕೃಷ್ಣನು ಬ್ರಹ್ಮನ ವರದ ಸಾಮರ್ಥ್ಯದ್ದೆಸೆಯಿಂದ ಗರುಡನನ್ನು ಹೊರತು ಇತರ ಎಲ್ಲರಿಂದಲೂ ಅವಧ್ಯನಾದ, ತಡೆಯಲಶಕ್ಯವಾದ ವಿಷದ ಪರಾಕ್ರಮವುಳ್ಳ ಆ ಕಾಲಿಂಗಾಖ್ಯ

ಸರ್ಪವನ್ನು (ಜಲದಲ್ಲಿರತಕ್ಕಾದವನ್ನಾಗಿ) ತಿಳಿದು ಆ ಸರ್ಪನ ವಿಷದಿಂದ ದುಷ್ಟವಾದ ಜಲದ ಪಾನದಿಂದ ಮೂರ್ಛಿತಗಳಾದ ಪಶುಗಳನ್ನೂ ಸವಡಾನ ವಯಸ್ಕರಾದ ಎಲ್ಲಾ ಜನರನ್ನೂ ರಕ್ಷಿಸಿದನು. ॥ ೩೫ ॥

ಮೂ ॥ ತದ್ದೃಷ್ಟಿದಿವ್ಯಸುಧಯಾ ಸಹಸಾಭಿವೃಷ್ಟಾಃ
ಸರ್ವೇಽಪಿ ಜೀವಿತಮುವಾಪುರಥೋಚ್ಚಶಾಖಂ ।
ಕೃಷ್ಣಃ ಕದಂಬಮಧಿರುಹ್ಯ ತತೋಽತಿತುಂಗಾ-
ದಾಸ್ಫೋಟ್ಯ ಗಾಢರಶನೋ ನ್ಯಪತದ್ವಿಷೋದೇ ॥ ೩೬ ॥

ಅ॥ ಆ ಶ್ರೀಕೃಷ್ಣನ ದರ್ಶನರೂಪವಾದ ದಿವ್ಯವಾದ ಅಮೃತದಿಂದ ಅಭಿಷಿಕ್ತರಾದ ಎಲ್ಲಾ ಪಶುಗಳೂ ಗೊಲ್ಲರೂ ಕೂಡ ಅಕಸ್ಮಾತ್ತಾಗಿ ಜೀವನವನ್ನು ಹೊಂದಿದರು. ಆಮೇಲೆ ಶ್ರೀಕೃಷ್ಣನು ಅತ್ಯುನ್ನತಗಳಾದ ಗೆಲ್ಲುಗಳುಳ್ಳ ಕದಂಬನಾಮಕ ವೃಕ್ಷವನ್ನು ಏರಿ ದೃಢವಾದ ಕಟಿಬಂಧನ ವುಳ್ಳವನಾಗಿ ಹಸ್ತತಲಗಳಿಂದ ಭುಜಗಳನ್ನು ತಟ್ಟಿ ಅತ್ಯಂತ ಎತ್ತರವಾದಕದಂಬ ವೃಕ್ಷದ್ದೆಸೆಯಿಂದ ವಿಷೋಪೇತವಾದ ಅಗಾಧ ಜಲದಲ್ಲಿ ಕೆಳಗೆ ಹಾರಿದನು. ॥ ೩೬ ॥

ಮೂ ॥ ಸಾರ್ಪಹ್ರದಃ ಪುರುಷಸಾರನಿಪಾತವೇಗ-
ಸಂಕ್ಷೋಭಿತೋರಗವಿಷೋಚ್ಛ್ವಸಿತಾಂಬುರಾಶಿಃ ।
ಪರ್ಯಕ್ ಪ್ಲುತೋ ವಿಷಕಷಾಯವಿಭೀಷಣೋರ್ಮಿ-
ಭೀಮೋ ಧನುಶ್ಶತಮನಂತಬಲಸ್ಯ ಕಿಂ ತತ್ ॥ ೩೭ ॥

ಅ॥ ಪುರುಷಶ್ರೇಷ್ಠನಾದ ಶ್ರೀಹರಿಯು ಕೆಳಗೆ ಹಾರೋಣದರ ವೇಗದಿಂದ ತನ್ನ ಸ್ಥಾನದಿಂದ ತಪ್ಪಿದ ಸರ್ಪನ ವಿಷದಿಂದ ಮೇಲಕ್ಕೆ ಬಂದ ಜಲಪ್ರವಾಹವುಳ್ಳ, ವಿಷಕ್ವಾಥದಿಂದ ಭಯಂಕರಗಳಾದ ಅಲೆಗಳಿಂದ ಭಯವನ್ನು ಹುಟ್ಟಿಸತಕ್ಕ, ಸರ್ಪನಿಂದ ಆಧಿಷ್ಠಿತವಾದ ಅಗಾಧ ಜಲವು *ನೂರು (೧೦೦) ಧನುಃಪರ್ಯಂತವಾಗಿ ಸುತ್ತಮುತ್ತಲೂ ಮೇಲಕ್ಕೆ ಹೋಯಿತು. ಅಪರಿಮಿತ ಬಲವುಳ್ಳ ಶ್ರೀಕೃಷ್ಣನಿಗೆ ಅದು (ಅಂದರೆ ನೂರು ಧನುಃಪರ್ಯಂತವಾಗಿ ನೀರು ಮೇಲೆ ಹಾರಿತು ಎನ್ನುವುದು.) ಏನು ಆಶ್ಚರ್ಯವು? ॥ ೩೭ ॥

ಮೂ ॥ ತಂ ಯಾಮುನಹ್ರದವಿಲೋಲಕಮಾಪ್ಯ ನಾಗಃ
ಕಾಲ್ಯೋ ನಿಜೈಃ ಸಮುದಶತ್ ಸಹ ವಾಸುದೇವಂ ।
ಭೋಗೈರ್ಬಬಂಧ ಚ ನಿಜೇತ್ವರಮೇನಮುಜ್ಚೈಃ
ಸೇಹೇ ತವೌಜ ಉತ ಭಕ್ತಿಮತೋಽಪರಾಧಂ ॥ ೩೮ ॥

ಅ॥ ಕಾಳಿಂಗ ಸರ್ಪವು ಯಮುನಾ ಸಂಬಂಧಿಯಾದ ಹ್ರದವನ್ನು (ಕೈಚಪ್ಪಾಳೆಯಿಂದ) ಕದಡಿದ್ದನ್ನಾಗಿ ಮಾಡತಕ್ಕ ಆ ವಸುದೇವ ಪುತ್ರನಾದ ಶ್ರೀಕೃಷ್ಣನನ್ನು ಸ್ವಕೀಯಂಗಳಾದ ದೊಡ್ಡ ದೊಡ್ಡ ಹಾವುಗಳಿಂದ ಕೂಡಿಕೊಂಡು ಹೊಂದಿ ಕಚ್ಚಿತು. ವಿವೇಕವಿಲ್ಲದಿರುವ ಕಾಳಿಂಗ ಸರ್ಪವು

* ಚತುರ್ಹಸ್ತೈಸ್ತು ದಂಡಕಃ । ಧನುರ್ದ್ವಾದಶದಂಡೈಸ್ತು ನಾಲ್ಕು (೪) ಮೊಳಕ್ಕೆ ದಂಡವೆಂದು ಹೆಸರು. ಹನ್ನೆರಡು ೧೨ ದಂಡಗಳಿಗೆ ಧನುಃ ಎಂದು ಹೆಸರು.

ತನ್ನ ಸ್ವಾಮಿಯಾದ ವಾಸುದೇವನನ್ನು ಪುಚ್ಛ ಮೊದಲಾದ ದೇಹಾವಯವಗಳಿಂದ ಬಂಧಿಸಿತು; ಸರ್ವಸಮರ್ಥನಾದಾಗ್ಯೂ ಶ್ರೀಕೃಷ್ಣನು ಭಕ್ತಿಯಿಂಳ್ಳ ಕಾಳಿಂಗನ ಅಪರಾಧವನ್ನು ಸಹಿಸಿ ಕೊಂಡನು. ॥ ೩೮ ॥

ಮೂ ॥ ಉತ್ಪಾತಮಿತ್ಥಾಳ್ಸ್ಮ ತು ತದಾಖಿಲಗೋಪಸಂಘ–
ಸ್ತತ್ರಾಜಗಾಮ ಹಲಿನಾ ಪ್ರತಿಬೋಧಿತೋಽಪಿ ।
ದೃಷ್ಟ್ವಾ ನಿಜಾಶ್ರಯಜನಸ್ಯ ಬಹೋಃ ಸುದುಃಖಿಂ
ಕೃಷ್ಣಃ ಸ್ವಭಕ್ತಮಪಿ ನಾಗಮಮುಂ ಮಮರ್ದ ॥ ೩೯ ॥

ಅ॥ ಬಲರಾಮನಿಂದ ಹರಿಯು ಸಾಮರ್ಥ್ಯವನ್ನು ಹೇಳಿ ಶಿಕ್ಷಿತವಾದಾಗ್ಯೂ ಎಲ್ಲಾ ಗೊಲ್ಲರ ಸಮೂಹವು ಆಗ ಉತ್ಪಾತವನ್ನು ನೋಡಿ ಸರ್ಪಾಧಿಷ್ಠಿತ ಸ್ಥಲವನ್ನು ಕುರಿತು ಬಂದಿತು, ಕೃಷ್ಣನು ಬಹುಸಂಖ್ಯೆಯುಳ್ಳ, ತಾನೇ ಆಶ್ರಯವಾಗಿ ಉಳ್ಳ ತನ್ನ ಭಕ್ತರಾದ ಗೊಲ್ಲರ ಸಮೂಹದಿಂದ ಅತಿ ದುಃಖಿವನ್ನು ನೋಡಿ ತನ್ನ ಭಕ್ತನಾದಾಗ್ಯೂ ಈ ಕಾಳಿಂಗ ಸರ್ಪನನ್ನು ಮರ್ದಿಸಿದನು. (ತಥಾ ಚ ಕಡಿವು ಭಕ್ತ ಜನರಿಗಿಂತ ಬಹು ಭಕ್ತರ ದುಃಖಿವನ್ನು ವಿನಾಶಪಡಿಸು ವುದು ಯುಕ್ತವೇ. ॥ ೩೯ ॥

ಮೂ ॥ ತಸ್ಯೋನ್ನತೇಷು ಸ ಫಣೇಷು ನನರ್ತ ಕೃಷ್ಣೋ
ಬ್ರಹ್ಮಾದಿಭಿಃ ಕುಸುಮವರ್ಷಿಭಿರೀಡ್ಯಮಾನಃ ।
ಆತ್ತೋ ಮುಖೈರುರು ವಮನ್ರುಧಿರಂ ಸ ನಾಗೋ
ನಾರಾಯಣಂ ತಮರಣಂ ಮನಸಾ ಜಗಾಮ ॥ ೪೦ ॥

ಅ॥ ಪುಷ್ಪವೃಷ್ಟಿಯುನ್ನು ಮಾಡತಕ್ಕ ಬ್ರಹ್ಮಾದಿ ದೇವತೆಗಳಿಂದ ಸ್ತುತಿಸಿಕೊಳ್ಳಲ್ಪಡತಕ್ಕ ಆ ಶ್ರೀಕೃಷ್ಣನು ಆ ಕಾಳಿಂಗ ಸರ್ಪನ ಅತ್ಯುನ್ನತಗಳಾದ ಫಣಗಳಲ್ಲಿ ನರ್ತನಮಾಡಿದನು; ಆ ಕಾಳಿಂಗನು ಪೀಡಿಸಿಕೊಳ್ಳಲ್ಪಟ್ಟವನಾಗಿ ಮುಂಖಿಗಳಿಂದ ಬಹಳವಾದ ರಕ್ತವನ್ನು ಕಾರಿದವನಾಗಿ ಆ ನಾರಾಯಣನನ್ನು ಮನಸ್ಸಿನಿಂದ ರಕ್ಷಕನನ್ನಾಗಿ ಹೊಂದಿದನು; ॥ ೪೦ ॥

ಮೂ ॥ ತಚ್ಚಿತ್ರತಾಂಡವವಿರುಗ್ಣಫಣಾತಪತ್ರಂ
ರಕ್ತಂ ವಮಂತಮುರುಸನ್ನಧಿಯಂ ನಿತಾಂತಂ ।
ದೃಷ್ಟ್ವಾಹಿರಾಜಮುಪಸೇದುರಮುಷ್ಯ ಪತ್ನ್ಯೋ
ನೇಮುಶ್ಚ ಸರ್ವಜಗದಾದಿಗುರುಂ ಭುವೀಶಂ ॥ ೪೧ ॥

ಅ॥ ಈ ಕಾಳಿಂಗನ ಹೆಂಡಂದಿರು ಆ ಶ್ರೀಕೃಷ್ಣನ ಅತ್ಯಾಶ್ಚರ್ಯವಾದ ನರ್ತನದಿಂದ ಭಗ್ನವಾದ ಫಣರೂಪವಾದ ಛತ್ರವುಳ್ಳ, ಬಹಳವಾದ ರಕ್ತವನ್ನು ಕಾರುತ್ತಿರುವ, ಅತ್ಯಂತವಾದಿ ಮೂರ್ಛಿತವಾದ ಬುದ್ಧಿಯುಳ್ಳ ಆ ಸರ್ಪರಾಜನನ್ನು ನೋಡಿ ಶ್ರೀಕೃಷ್ಣನ ಸವಿಶಾಪವನ್ನು ಹೊಂದಿದರು. ಈ ಕಾಳಿಂಗನ ಹೆಂಡಂದಿರು ರುದ್ರ ಮೊದಲಾದ ಎಲ್ಲಾ ಜಗತ್ತಿಗೆ ಸೃಷ್ಟಿಕರ್ತನಾದ ಬ್ರಹ್ಮನಿಗೆ ಗುರುವಾದ ಸರ್ವಸಮರ್ಥನಾದ ಶ್ರೀಕೃಷ್ಣನನ್ನು ಭೂವಿಯಲ್ಲಿ ಸಾಷ್ಟಾಂಗ ಪ್ರಣಾಮವನ್ನು ಮಾಡಿದರು; ॥ ೪೧ ॥

ಮೂ ॥ ತಾಭಿಃ ಸ್ತುತಃ ಸ ಭಗವಾನಮುನಾ ಚ ತಸ್ಮೈ
ದತ್ವಾಭಯಂ ಯಮುನಸಹೋದರವಾರಿತೋಽಮುಂ ।
ಉತ್ಸೃಜ್ಯ ನಿರ್ವಿಷಜಲಾಂ ಯಮುನಾಂ ಚಕಾರ
ಸಂಸ್ತೂಯಮಾನಚರಿತಃ ಸುರಸಿದ್ಧಸಾಧ್ಯೈಃ ॥ ೪೨ ॥

ಅ॥ ಆ ನಾಗಪತ್ನಿಯರಿಂದಲೂ ಈ ಕಾಲಿಂಗನಿಂದಲೂ ಸ್ತುತಿಸಿಕೊಳ್ಳಲ್ಪಟ್ಟ ಆ ಶ್ರೀಕೃಷ್ಣನು ಆ ಕಾಲಿಂಗನಿಗೋಸ್ಕರ ಅಭಯಂವನ್ನು ಕೊಟ್ಟ (ಅಂದರೆ ಗರುಡನಿಂದ ನಿನಗೆ ಭಯವು ಬರುವುದಿಲ್ಲ, ಎಂದು ಅಭಯಂವನ್ನು ಕೊಟ್ಟ) ದೇವತೆಗಳಿಂದಲೂ ಸಿದ್ಧರಿಂದಲೂ ಸಾಧ್ಯರಿಂದಲೂ ಚೆನ್ನಾಗಿ ಸ್ತುತಿಸಿಕೊಳ್ಳಲ್ಪಡತಕ್ಕ ಕರ್ಮಗಳುಳ್ಳವನಾಗಿ ಯಮುನ ತಂಗಿಯಾದ ಯಮುನಾ ನದಿಯ ಜಲದ್ವೆಸೆಯಿಂದ ಈ ಕಾಳಿಂಗನನ್ನು ಬಿಡಿಸಿ ಯಮುನಾನದಿಯನ್ನು ವಿಷರಹಿತವಾದ ನೀರುಳ್ಳದ್ದನ್ನಾಗಿ ಮಾಡಿದನು. ॥ ೪೨ ॥

ಮೂ ॥ ಗೋಪೈರ್ಬಲಾದಿಭಿರುದೀರ್ಣತರಪ್ರಮೋದೈಃ
ಸಾರ್ಧಂ ಸಮೇತ್ಯ ಭಗವಾನರವಿಂದನೇತ್ರಃ ।
ತಾಂ ರಾತ್ರಿಮತ್ರ ನಿವಸನ್ಯಮುನಾತಟೇ ಸ
ದಾವಾಗ್ನಿಮುದತಬ್ಹಲಂ ಚ ಪಪೌ ವ್ರಜಾರ್ಥೇ ॥ ೪೩ ॥

ಅ॥ ಕಮಲದಳದಂತೆ ನಯನಗಳುಳ್ಳ ಶ್ರೀಕೃಷ್ಣನು ಅತ್ಯುತ್ಕೃಷ್ಟವಾದ ಸಂತೋಷವುಳ್ಳ ಬಲರಾಮನೇ ಮೊದಲಾದ ಗೊಲ್ಲರಿಂದ ಕೂಡಿಕೊಂಡು(ನೀರಿನ ಸಮೀಪದಿಂದ ತೀರಕ್ಕೆ) ಬಂದು ಈ ಯಮುನಾತೀರದಲ್ಲಿಯೇ ಆ ರಾತ್ರಿಯಲ್ಲಿ ನಿವಾಸಮಾಡಿದನು. ಆ ಶ್ರೀಕೃಷ್ಣನು ಯಮುನಾ ತಟದಲ್ಲಿ ಅತಿಶಯಿತಬಲವುಳ್ಳ (ಅಂದರೆ ವ್ಯಾಪ್ತವಾದ) ಕಾಡಾಗ್ನಿಯನ್ನು ನಂದಗೋಕುಲದ ರಕ್ಷಣೆಗೋಸ್ಕರ ಪಾನಮಾಡಿದನು ॥ ೪೩ ॥

ಮೂ ॥ ಇತ್ಥಂ ಸುರಾಸುರಗಣೈರವಿಚಿಂತ್ಯದಿವ್ಯ-
ಕರ್ಮಾಣಿ ಗೋಕುಲಗತೋಽಗಣಿತೋರುಶಕ್ತೌ ।
ಕುರ್ವತ್ಯಜೇ ವ್ರಜಭುವಾಮಭವದ್ವಿನಾಶ
ಉಗ್ರಾಭಿಧಾದಸುರತಸ್ತರುರೂಪತೋಽಲಂ ॥ ೪೪ ॥
ಕದ್ಗಂಧತೋ ನೃಪಶುಮುಖ್ಯಸಮಸ್ತಭೂತಾ-
ನ್ಯಾಪುರ್ಮೃತಿಂ *ಬಹಲಿರೋಗನಿಪೀಡಿತಾನಿ ।
ಧಾತುರ್ವರಾಜ್ಜಗದಭಾವಕೃತೈಕಬುದ್ಧಿ-
ರ್ವಧ್ಯೋ ನುಕೇನಚಿದಸೌ ತರುರೂಪದೈತ್ಯಃ ॥ ೪೫ ॥

ಅ॥ ಪೂರ್ವೋಕ್ತ ಪ್ರಕಾರ, ಗೋಕುಲದಲ್ಲಿರತಕ್ಕ ಅಪರಿಮಿತವಾದ ಉತ್ಕೃಷ್ಟವಾದ ಶಕ್ತಿಯುಳ್ಳ, ಜನ್ಮರಹಿತನಾದ ಶ್ರೀಕೃಷ್ಣನು ದೇವತೆಗಳೂ ಅಸುರರೂ ಇವರ ಸಮೂಹದಾಯಗಳಿಂದಲೂ ಚಿಂತಿಸಲಿಕ್ಕೂ ಅಶಕ್ಯಗಳಾದ ಅಲೌಕಿಕಗಳಾದ ಕರ್ಮಗಳನ್ನು ಮಾಡುತ್ತಾ ಇರಲು ವೃಕ್ಷರೂಪನಾದ ಉಗ್ರನೆಂದು ಹೆಸರುಳ್ಳ ದೈತ್ಯನದೆಸೆಯಿಂದ ನಂದಗೋಕುಲದಲ್ಲಿ ಹುಟ್ಟಿರುವ ಪ್ರಾಣಿಗಳಿಗೆಲ್ಲಾ ಅತ್ಯಂತವಾಗಿ ವಿನಾಶವು ಬರುವುದು (ನಾಶಪ್ರಕಾರವನ್ನು ಹೇಳುತ್ತಾರೆ.)

* ಜನಾರ್ದನ ಭಟ್ಟೀಯ ವ್ಯಾಖ್ಯಾನದಲ್ಲಿ ಬಹುಲ ಎಂತ ಪಾಠಾಂತರವಿದೆ.

ಬಹುವಿಧಗಳಾದ ರೋಗಗಳಿಂದ ಪೀಡಿಸಿಕೊಳ್ಳಲ್ಪಟ್ಟ ಮನುಷ್ಯರೂ ಪಶುಗಳೂ ಇವರೇ ಪ್ರಧಾನವಾಗಿ ಉಳ್ಳ ಎಲ್ಲಾ ಪ್ರಾಣಿಗಳೂ ಆ ವೃಕ್ಷದ ಪರಿಮಳದ್ದೆಸೆಯಿಂದ ಮರಣವನ್ನು ಹೊಂದಿದವು. ಬ್ರಹ್ಮನ ವರದ್ದೆಸೆಯಿಂದ ಜಗತ್ತಿನ ವಿನಾಶದಲ್ಲಿ ಮಾಡಲ್ಪಟ್ಟ ನಿಶ್ಚಿತವಾದ ಬುದ್ಧಿಯುಳ್ಳ ಈ ತರಹರೂಪನಾದ ದೈತ್ಯನು ಯಾರಿಂದಲೂ ಸಂಹರಿಸಿಕೊಳ್ಳಲ್ಪಡಲಾರನು. ॥೪೪॥೪೫॥

ಮೂ ॥ ಸಂಕರ್ಷಣೇಽಪಿ ತದುದಾರವಿಷಾಸುವಿಷ್ಟೇ
ಕೃಷ್ಣೇ ನಿಜಸ್ಪರ್ಶತ (ಸ್ಪರ್ಶತ) ಸ್ತಮಪೇತರೋಗಂ ।
ಕೃತ್ವಾ ಬಭಂಜ ವಿಷವೃಕ್ಷಮಮುಂ ಬಲೇನ
ತಸ್ಯಾನುಗೈಃ ಸಹ ತದಾಕೃತಿಭಿಃ ಸಮಸ್ತೈಃ ॥ ೪೬ ॥

ಅ॥ ಬಲರಾಮನೂ ಕೂಡ ವಿಷವೃಕ್ಷದ ಉತ್ಕೃಷ್ಟವಾದ ವಿಷದಿಂದ ಆವಿಷ್ಟನಾಗುತ್ತಿರಲು ಶ್ರೀಕೃಷ್ಣನು ತನ್ನ ಆಲಿಂಗನದಿಂದ ಆ ಬಲರಾಮನನ್ನು ಹೋಗಲ್ಪಟ್ಟ ವಿಷದಿಂದಾಂಟಾದ ರೋಗವುಳ್ಳವನನ್ನಾಗಿ ಮಾಡಿ ಬಲದಿಂದ ವೃಕ್ಷಾಕಾರವುಳ್ಳ ಎಲ್ಲಾ, ಆ ಉಗ್ರಾಸುರನ ಭೃತ್ಯರಿಂದ ಕೂಡಿಕೊಂಡು ವಿಷವೃಕ್ಷಸ್ವರೂಪನಾದ ಈ ಉಗ್ರಾಸುರನನ್ನು ಕಿತ್ತನು.(ಅಂದರೆ ಸಂಹರಿಸಿದನು,) ॥ ೪೬ ॥

ಮೂ ॥ ದೈತ್ಯಾಂಶ್ಚ ಗೋವಪುಷ ಆತ್ತವರಾನ್ವಿರಿಂಚಾತ್
ಮೃತ್ಯೂಜ್ಝಿತಾನಪಿ ನಿಪಾತ್ಯ ದದಾಹ ವೃಕ್ಷಾನ್ ।
ವಿಕ್ರೀಡ್ಯ ರಾಮಸಹಿತೋ ಯಮುನಾಜಲೇ ಸ
ನೀರೋಗಮಾಶು ಕೃತವಾನ್ ವ್ರಜಮುಜ್ಜನಾಭಃ ॥ ೪೭ ॥

ಅ॥ ಬ್ರಹ್ಮನಿಂದ ಸ್ವೀಕರಿಸಲ್ಪಟ್ಟ ವರವುಳ್ಳ, ಮರಣರಹಿತರಾದಾಗ್ಯೂ ಗೋವಿನ ಸ್ವರೂಪವುಳ್ಳ ದೈತ್ಯರನ್ನೂ ವೃಕ್ಷಗಳನ್ನೂ ಕೂಡ ಕೆಡಹಾಕಿ ಸುಟ್ಟನು, (ಅಂದರೆ ಉಗ್ರನೆಂದು ಹೆಸರುಳ್ಳ ದೈತ್ಯನ ಗೋರೂಪರಾದ ಹೆಂಡಂದಿರು ವತ್ಸ (ಕರು) ರೂಪರಾದ ಮಕ್ಕಳೂ ಎಲ್ಲರನ್ನೂ ಕೆಡಹಾಕಿ ವೃಕ್ಷಗಳೊಟ್ಟಿಗೆ ಸುಟ್ಟನು.) ಕಮಲವು ನಾಭಿಯಲ್ಲಿ ಉಳ್ಳ ಆ ಶ್ರೀಕೃಷ್ಣನು ಯಮುನಾನದಿಯ ಜಲದಲ್ಲಿ ಬಲರಾಮನಿಂದ ಕೂಡಿದವನಾಗಿ ಕ್ರೀಡಿಸಿ (ಸ್ನಾನವಾಡಿ) ನಂದಗೋಕುಲವನ್ನು ಹೋಗಲ್ಪಟ್ಟ ರೋಗವುಳ್ಳದ್ದನ್ನಾಗಿ ಮಾಡಿದನು. ॥ ೪೭ ॥

ಮೂ ॥ ಸಪ್ತೋತ್ಕ್ಷಣೋಽತಿಬಲವೀರ್ಯಯುತಾನದಮ್ಯಾನ್
ಸರ್ವೈರ್ಗಿರೀಶವರತೋ ದಿತಿಜಪ್ರಧಾನಾನ್ ।
ಹತ್ವಾ ಸುತಾಮಲಭದಾಶು ವಿಭುರ್ಯಶೋದಾ-
ಭ್ರಾತುಃ ಸ ಕುಂಭಕಸಮಾಹ್ವಯಿನೋಽಪಿ ನೀಲಾಂ ॥ ೪೮ ॥

ಅ॥ ಸರ್ವಸಮರ್ಥನಾದ ಆ ಶ್ರೀಕೃಷ್ಣನು ರುದ್ರದೇವರ ವರದ್ದೆಸೆಯಿಂದ ಎಲ್ಲರಿಂದಲೂ ನಿಗ್ರಹ ಮಾಡಲಿಕ್ಕೆ ಅಶಕ್ಯಗಳಾದ, ಅತ್ಯಂತ ಬಲವೀರ್ಯಗಳಿಂದ ಯುಕ್ತರಾದ ದೈತ್ಯಶ್ರೇಷ್ಠರ ಸ್ವರೂಪಗಳಾದ ಏಳು ಎತ್ತುಗಳನ್ನು ಸಂಹರಿಸಿ ಯಶೋದಾದೇವಿಯ ಸಹೋದರನಾದ ಕುಂಭಕನೆಂದು ಹೆಸರುಳ್ಳ ಗೊಲ್ಲನ ಮಗಳಾದ ನೀಲಾದೇವಿಯನ್ನು ಶೀಘ್ರದಲ್ಲಿ ಹೊಂದಿದನು. ॥ ೪೮ ॥

ಮೂ ॥ ಯಾ ಪೂರ್ವಜನ್ಮನಿ ತಪಃ ಪ್ರಥಮೈವ ಭಾರ್ಯಾ
ಭೂಯಾಸಮಿತ್ಯಚರದಸ್ಯ ಹಿ ಸಂಗಮೋ ಮೇ ।
ಸ್ಯಾತ್ ಕೃಷ್ಣಜನ್ಮನಿ ಸಮಸ್ತವರಾಂಗನಾಭ್ಯಃ
ಪೂರ್ವಂ ತ್ವಿತಿ ಸ್ಮ ತದಿಯಾಂ ಪ್ರಥಮಂ ಸ ಆಪ ॥ ೪೯ ॥

ಅ॥ ಯಾವ ನೀಲಾದೇವಿಯಂ ಪೂರ್ವಜನ್ಮದಲ್ಲಿ ಈ ಕೃಷ್ಣನಿಗೆ ಜ್ಯೇಷ್ಠಭಾರ್ಯೆಯಂ ನಿಶ್ಚಯಂವಾಗಿಯೂ ಆಗುವೆನು ಎಂದು ತಪಸ್ಸನ್ನು ಮಾಡಿರುವಳೋ, (ತಪಶ್ಚರಣಾಂತರವನ್ನು ಹೇಳುತ್ತಾರೆ.) ಶ್ರೀಕೃಷ್ಣಾವತಾರದಲ್ಲಿ ರುಗ್ಮಿಣೀ ಮೊದಲಾದ ಎಲ್ಲಾ ಉತ್ತಮ ಸ್ತ್ರೀಯರಿಂದಲೂ ಮೊದಲೇ ನನಗೆ ಶ್ರೀಕೃಷ್ಣನ ಸಂಗವು (ಅಂದರೆ ಶ್ರೀಕೃಷ್ಣನ ರಮಣವು) ಆಗಬೇಕು, ಎಂದು ವಿಶೇಷಾಕಾರವಾಗಿ ಯಾವ ಕಾರಣದಿಂದ ತಪಸ್ಸನ್ನು ಮಾಡಿರುವಳೋ ಆದಕಾರಣ ಆ ಶ್ರೀಕೃಷ್ಣನು ಎಲ್ಲಾ ಉತ್ತಮ ಸ್ತ್ರೀಯರಿಂದಲೂ ಮೊದಲೇ ಈ ನೀಲಾದೇವಿಯನ್ನು ಹೊಂದಿರುವನು.

ವಿಶೇಷಾಂಶ—(1) ನೀಲಾದೇವಿಯಂ, ಗೋಪಾಂಗನೆಯಾದ ಪ್ರಯುಕ್ತ ಮತ್ತೊಬ್ಬನ ಹೆಂಡತಿಯಾಗಿದ್ದರೆ ಅಂಗಸಂಗವಾಗುವುದಿಲ್ಲ ಎನ್ನುವ ಅಭಿಪ್ರಾಯದಿಂದ ಒಂದನೇ ಹೆಂಡತಿಯೇ ಆಗುವೆನು ಎಂದು ಹೇಳಿದ್ದು. (2) ಪ್ರಥಮದಲ್ಲಿಯೂ ಕೂಡ ಸ್ವಾಭಾವಿಕವಾಗಿ ಹೆಂಡತಿಯಾದ ನಂದಕುಮಾರಿಗೆ ಅಂಗಸಂಗವಿಲ್ಲದಿರುವುದರಿಂದ ಎರಡನ್ನು ಪ್ರಾರ್ಥಿಸಿರುವಳು. ॥ ೪೯ ॥

ಮೂ ॥ ಅಗ್ರೇ ದ್ವಿಜತ್ವತ ಉಪಾವಹದೇಷ ನೀಲಾಂ
ಗೋಪಾಂಗನಾ ಅಪಿ ಪುರಾ ವರಮಾಪಿರೇ ಯತ್ ।
ಸಂಸ್ಕಾರತಃ ಪ್ರಥಮಮೇವ ಸುಸಂಗಮೋ ನೋ
ಭೂಯಾತ್ಪತೇತಿ ಪರಮಾಪ್ಸರಸಃ ಪುರಾ ಯಾಃ ॥ ೫೦ ॥

ಅ॥ ಯಾವ ಕಾರಣದಿಂದ (ಗ್ರಂಥದಲ್ಲಿ ಹೇಳಿದ ಪ್ರಕಾರ) ಗೋಪಾಂಗನೆಯರೂ ಕೂಡ (ಅಂದರೆ ಗೊಲ್ಲರ ಕನ್ನಿಕೆಯರೂ ಗೊಲ್ಲರ ಹೆಂಡಂದಿರೂ ಕೂಡ) ವರವನ್ನು ಹೊಂದಿರುವರೋ, ಆದಕಾರಣ ಉಪನಯನದ್ದೆಸೆಯಿಂದ ಮೊದಲೇ ಶ್ರೇಷ್ಠನಾದ ಶ್ರೀಕೃಷ್ಣನನ್ನು ಹೊಂದಿದರು. ಅಥವಾ ಈ ಶ್ರೀಕೃಷ್ಣನು ಉಪನಯನದ್ದೆಸೆಯಿಂದ ಮೊದಲೇ ನೀಲಾದೇವಿಯನ್ನು ಮಂದುವೆಮಾಡಿಕೊಂಡಿರುವನು. (ಹಾಗಾದರೆ ತಪಸ್ಸನ್ನು ಮಾಡಿದ್ರಿಂದ ನೀಲಾದೇವಿಯಂ ಒಂದನೇ ಹೆಂಡತಿಯಾಗಲಿ, ಅವಳಿಗೆ ಪ್ರಥಮತಃ ಸಂಗವೂ ಆಗಲಿ, ಗೋಪಾಂಗನೆಯರನ್ನು ಸಂಸ್ಕಾರದ್ದೆಸೆಯಿಂದ ಮೊದಲು ಏಕೆ ಸ್ವೀಕರಿಸಿದನು ಎಂದರೆ) ಯಾವ ಗೋಪಾಂಗನೆಯರು ಮೊದಲು ಉತ್ತಮರಾದ ಅಪ್ಸರಃಸ್ತ್ರೀಯರೋ ಅಂತಹ, ಗೋಪಾಂಗನೆಯರೂ ಕೂಡ ಯಾವ ಕಾರಣದ್ದೆಸೆಯಿಂದ ಸಂಸ್ಕಾರದ್ದೆಸೆಯಿಂದ ಮೊದಲೇ ನಮಗೆ ನಿನ್ನ ಶೋಭನ ಸಂಬಂಧವು ಆಗಬೇಕು ಎಂದು ಮೊದಲಿನ ಜನ್ಮದಲ್ಲಿಯೇ ವರವನ್ನು ಹೊಂದಿರುವರು. ॥ ೫೦ ॥

ಮೂ ॥ ತತ್ಪ್ರಥ ಕೃಷ್ಣಮುವಪನ್ ಸಬಲಂ ವಯಸ್ಯಾಃ
ಪಕ್ವಾನಿ ತಾಲಸುಫಲಾನ್ಯನುಭೋಜಯೇತಿ ।
ಇತ್ಯರ್ಥಿತಃ ಸಬಲ ಆಪ ಸ ತಾಲವ್ಯಂದಂ
ಗೋಪೈರ್ದುರಾಸದಮತೀವ ಹಿ ಧೇನುಕೇನ ॥ ೫೧ ॥

ಅ॥ ಆಮೇಲೆ ಆ ಗೋಕುಲದಲ್ಲಿ ಸಖಿ ಜನರು ಅತಿಪಕ್ವಗಳಾದ ತಾಲವೃಕ್ಷದ ಒಳ್ಳೇ ಫಲಗಳನ್ನು ತಿನ್ನಿಸುಂ. ಎಂದುಂ ಬಲರಾಮನಿಂದ ಕೂಡಿದ ಶ್ರೀಕೃಷ್ಣನನ್ನು ಹೇಳಿದರುಂ. ಈ ಪ್ರಕಾರಗೊಲ್ಲರಿಂದ ಪ್ರಾರ್ಥಿಸಿಕೊಳ್ಳಲ್ಪಟ್ಟ ಬಲರಾಮನಿಂದ ಕೂಡಿದ ೪ ಶ್ರೀಕೃಷ್ಣನುಂ ಧೇನುಕಾಸುರನಿಮಿತ್ತದಿಂದ ಗೊಲ್ಲರಿಂದ ಅತ್ಯಂತವಾಗಿ ಹೊಂದಲಸಾಧ್ಯವಾದ, ತಾಳವೃಕ್ಷಗಳ ಸವಹೂಹವುಳ್ಳ ತಾಲವನವನ್ನು ಹೊಂದಿದನುಂ. ॥೫೧॥

ಮೂ ॥ ವಿಘ್ನೇಶತೋ ವರಮವಾಪ್ಯ ಸುದುಷ್ಟದೈತ್ಯೋ
ದೀರ್ಘಾಯುರುತ್ತಮಬಲಃ ಕದನಪ್ರಿಯೋಽಭೂತ್ ।
ನಿತ್ಯೋದ್ಧತಃ ಸಲುತ ರಾಮಮವೇಕ್ಷ್ಯ ತಾಲ-
ಬೃಂದಾತ್ಫಲಾನಿ ಗಲಯಂತಮಥಾಭ್ಯಧಾವತ್ ॥ ೫೨ ॥

ಅ॥ ಅತಿ ದುಂಷ್ಟನಾದ ಧೇನುಂಕಾಸುರನುಂ ವಿನಾಯಂಕನದೆಸೆಯಿಂದ ವರವನ್ನು ಹೊಂದಿದೀರ್ಘವಾವ ಆಯುಂಷ್ಯವುಳ್ಳವನೂ ಅತ್ಯುತ್ತಮುಂವಾದ ಸಾವುಂರ್ಥ್ಯವುಳ್ಳವನೂ ಮುತ್ತು ಯುಂದ್ಧದಲ್ಲಿ ಪ್ರೀತಿಯುಳ್ಳವನೂ ಆದನುಂ. ವನವನ್ನು ಪ್ರವೇಶಮಾಡಿದ ಮೇಲೆ ನಿರಂತರದಲ್ಲಿಯೂ ಅತಿ ದೃಪ್ತನಾದ ಆ ಧೇನುಂಕಾಸುರನುಂ ತಾಲವೃಕ್ಷಗಳ ಸವುಂದಾಯುಂದ್ದೆಸೆಯಿಂದ ಫಲಗಳನ್ನು ಬೀಳಿಸತಕ್ಕ ಬಲರಾಮನನ್ನು ನೋಡಿ ಓಡಿಹೋದನುಂ. ॥ ೫೨ ॥

ಮೂ ॥ ತಸ್ಯ ಪ್ರಹಾರಮುಭಿಕಾಂಕ್ಷತ ಆಶು ಪೃಷ್ಠ-
ಪಾದೌ ಪ್ರಗೃಹ್ಯ ತೃಣರಾಜಶಿರೋಽಹರತ್ಸಃ ।
ತಸ್ಮಿನ್ ಹತೇ ಖರತರೇ ಖರರೂಪದೈತ್ಯೇ
ಸರ್ವೇ ಖರಾಶ್ಚ ಖರತಾಲವನಾಂತರಸ್ಥಾಃ ।
ಪ್ರಾಪುಃ ಖರಸ್ವರತರಾಃ ಖರರಾಕ್ಷಸಾರಿಂ
ಕೃಷ್ಣಂ ಬಲೇತ ಸಹಿತಂ ನಿಹತಾಶ್ಚ ತೇನ ॥ ೫೩ ॥

ಅ॥ ಆ ಬಲರಾಮನು (ಪಾದಗಳಿಂದ) ಹೊಡಿಯುಂವಿಕೆಯುಂನ್ನು ಇಚ್ಛಿಸಿಕೊಂಡುಂ ಇರತಕ್ಕ ಆ ಧೇನುಂಕಾಸುರನ ಹಿಂದಿನ ಪಾದಗಳನ್ನು ಶೀಘ್ರದಲ್ಲಿ ಹಿಡಿದುಂಕೊಂಡುಂ ತಾಲವೃಕ್ಷದ ಊರ್ಧ್ವಭಾಗವನ್ನು ಛೇದಿಸಿದನುಂ. ಅತಿಕ್ರೂರನಾದ ರಾಸಭಸ್ವರೂಪನಾದ ದೈತ್ಯನಾದ ಆ ಧೇನುಂಕಾಸುರನು ಸಂಹೃತನಾಗುಂತ್ತಿರಲುಂ ಖರ ತಾಲವನದ ಮುಧ್ಯದಲ್ಲಿರತಕ್ಕ, ಅತ್ಯಂತವಾಗಿ ಕ್ರೂರವಾದ ಸ್ವರವುಳ್ಳ ಎಲ್ಲಾ ಧೇನುಂಕಾಸುರನ ಸಂಬಂಧಿಗಳಾದ ಕತ್ತೆಗಳುಂ ರಾಸಭ ರೂಪರಾದ ರಾಕ್ಷಸರಿಗೆ ಶತ್ರುವಾದ ಬಲರಾಮನಿಂದ ಕೂಡಿರುಂವ ಶ್ರೀಕೃಷ್ಣನನ್ನು ಹೊಂದಿದವು, ಶ್ರೀಕೃಷ್ಣನಿಂದ ಸಂಹೃತಗಳೂ ಆದವು. ॥ ೫೩ ॥

ಮೂ ॥ ಸರ್ವಾನ್ನಿಹತ್ಯ ಖರರೂಪಧರಾನ್ ಸ ದೈತ್ಯಾನ್
ವಿಘ್ನೇಶ್ವರಸ್ಯ ವರತೋಽನ್ಯಜನೈರವಧ್ಯಾನ್ ।
ಪಕ್ವಾನಿ ತಾಲಸುಫಲಾನಿ ನಿಜೇಷು ಚಾದಾ-
ದ್ಬಾಂಧವಪೌರುಷಗುಣೋದ್ಭರಿತೋ ರಮೇಶಃ ॥ ೫೪ ॥

ಅ॥ ತಡೆಯಲಂ ಅಶಕ್ಯವಾದ ಪರಾಕ್ರಮವುಳ್ಳ ಗುಣಪರಿಪೂರ್ಣನಾದ ಲಕ್ಷ್ಮೀಪತಿಯಾದ ಆ ಶ್ರೀಕೃಷ್ಣನು ವಿಘ್ನೇಶ್ವರನ ವರದ್ದೆಸೆಯಿಂದ ಇತರ ಜನರಿಂದ ಸಂಹರಿಸಿಕೊಳ್ಳಲ್ಪಡಲಿಕ್ಕೆ ಅಶಕ್ಯರಾದ ಕತ್ತೆಗಳ ಸ್ವರೂಪವನ್ನು ಧರಿಸಿರತಕ್ಕ ಎಲ್ಲಾ ದೈತ್ಯರನ್ನೂ ಸಂಹರಿಸಿ ಪಕ್ವಗಳಾದ ಕಾಲ ವೃಕ್ಷದ ಒಳ್ಳೇ ಫಲಗಳನ್ನು ತನ್ನವರಿಗೋಸ್ಕರ ಕೊಟ್ಟನು. ॥ ೫೪ ॥

ಮೂ ॥ ಪಕ್ಷದ್ವಯೇನ ವಿಹರತ್ಸ್ವಥ ಗೋಪಕೇಷು
ದೈತ್ಯಃ ಪ್ರಲಂಬ ಇತಿ ಕಂಸವಿಸೃಷ್ಟ ಆಗಾತ್ ।
ಕೃಷ್ಣಸ್ಯ ಪಕ್ಷಿಷು ಜಯತ್ಸು ಸ ರಾಮಮೇತ್ಯ
ಪಾಪಃ ಪರಾಜಿತ ಉವಾಹ ತಮುಗ್ರರೂಪಃ ॥ ೫೫ ॥

ಅ॥ ಎರಡು ಪಕ್ಷಗಳಿಂದ ಗೊಲ್ಲರು ಕ್ರೀಡಿಸುತ್ತಿರಲು ಆಮೇಲೆ ಕಂಸನಿಂದ ಕಳುಹಿಸಿಕೊಳ್ಳಲ್ಪಟ್ಟ ಪ್ರಲಂಬಾಖ್ಯ ದೈತ್ಯನು ಬಂದನು, (ಆತನು ಶ್ರೀಕೃಷ್ಣನ ಪಕ್ಷಕ್ಕೆ ಸೇರಿದನು.) ಶ್ರೀಕೃಷ್ಣನ ಪಕ್ಷದಲ್ಲಿರತಕ್ಕವರು ಜಯಿಸುತ್ತಿರಲು ಪರಾಜಿತನಾದ ಪಾಪಿಷ್ಠನಾದ ಕ್ರೂರಸ್ವರೂಪನಾದ ಆ ಪ್ರಲಂಬಾಸುರನು ಪರಾಜಯವನ್ನು ಹೊಂದಿದ ಮೇಲೆ ಆ ಬಲರಾಮನನ್ನು (ಬೆನ್ನಿನಿಂದ) ಹೊತ್ತುಕೊಂಡನು.

ವಿಶೇಷಾಂಶ—(1) ಶ್ರೀಕೃಷ್ಣನನ್ನು ಬಲರಾಮನನ್ನೂ ನಾಯಕರನ್ನಾಗಿ ಮಾಡಿಕೊಂಡು ಕೆಲವು ಗೋಪರು ಶ್ರೀಕೃಷ್ಣನ ಪಕ್ಷಕ್ಕೆ ಸೇರಿದರು; ಶ್ರೀದಾಮ ಮೊದಲಾದ ಕೆಲವು ಗೊಲ್ಲರು ಬಲರಾಮನ ಪಕ್ಷಕ್ಕೆ ಸೇರಿದರು. ಹೀಗೆ ಎರಡು ಪಕ್ಷಗಳನ್ನಾಗಿ ಮಾಡಿಕೊಂಡು ಸೋತವರು ಸೋಲದಿದ್ದವರನ್ನು ಹೆಗಲಿನಲ್ಲಿ ಹೊತ್ತುಕೊಳ್ಳಬೇಕು. ಹೀಗೆ ವಾಹ್ಯವಾಹಕ ರೂಪವಾದ ಕ್ರೀಡೆಯಿಂದ ಗೊಲ್ಲರೆಲ್ಲರೂ ಆಡುತ್ತಿದ್ದರು. ಆಗ ಕಂಸನು ಕಳುಹಿಸಿಕೊಟ್ಟ ಪ್ರಲಂಬಾಸುರನು ಬಂದು ಶ್ರೀಕೃಷ್ಣನ ಪಕ್ಷಕ್ಕೆ ಸೇರಿಕೊಂಡನು. ಶ್ರೀಕೃಷ್ಣನ ಪಕ್ಷದಲ್ಲಿದ್ದವರಿಗೆ ಎಲ್ಲರಿಗೂ ಜಯವೇ ಬಂದಿದೆ. ಆದರೆ ಆತನ ಪಕ್ಷದಲ್ಲಿದ್ದ ಪ್ರಲಂಬ ಭದ್ರಸೇನ ಮೊದಲಾದ ಇಬ್ಬರು ಮೂವರಿಗೇನೇ ಅತ್ರ ಪರಾಜಯ ಬಂದಿದೆ. ಬಲರಾಮನ ಪಕ್ಷದಲ್ಲಿದ್ದ ಶ್ರೀದಾಮಾದಿಗಳೆಲ್ಲರಿಗೂ ಪರಾಜಯ ಬಂದಿದೆ. ರಾಮ ವೃಷಭ ಮೊದಲಾದ ಇಬ್ಬರು ಮೂವರಿಗೇನೇ ಜಯವು ಬಂದದ್ದು ಹೀಗೆ ಇಟ್ಟುಕೊಳ್ಳಬೇಕು. ॥ ೫೫ ॥

ಮೂ ॥ ಭೀತೇನ ರೋಹಿಣಿಸುತೇನ ಹರಿಃ ಸ್ತುತೋಽಸೌ
ಸ್ವಾವಿಷ್ಕೃತಾವುಪದಿದೇಶ ಬಲಾಭಿಪೂರ್ತ್ಯೈ ।
ತೇನೈವ ಪೂರಿತಬಲೋಽಂಬರಚಾರಿಣಂ ತಂ
ಪಾಪಂ ಪ್ರಲಂಬಮುರುಮುಷ್ಟಿಹತಂ ಚಕಾರ ॥ ೫೬ ॥

ಅ॥ ಭಯಪಟ್ಟ ರೋಹಿಣೀಪುತ್ರನಾದ ಬಲರಾಮನಿಂದ ಸ್ತೋತ್ರವಾಡಿಸಿಕೊಳ್ಳಲ್ಪಟ್ಟ ಈ ಶ್ರೀಕೃಷ್ಣನು ಬಲರಾಮನಿಗೆ ಶಕ್ತಿಯು ಪೂರ್ತಿಯಾಗುವುದಕ್ಕಾಗಿ ತನ್ನಿಂದ ಆವಿಷ್ಕೃತತ್ವವನ್ನು ಉಪದೇಶಿಸಿದನು. (ಅಂದರೆ ನಾನು ಶಂಕ್ಲಕೇಶ ರೂಪದಿಂದ ನಿನ್ನಲ್ಲಿ ಪ್ರವಿಷ್ಟನಾಗಿರುತ್ತೇನೆ. ಆದುದರಿಂದ ನೀನು ಹೆದರಬೇಡ, ಎಂದು ಬಲರಾಮನನ್ನು ಕುರಿತು ಹೇಳಿದನು. ಅಥವಾ ಶಂಕ್ಲಕೇಶದ ಆವೇಶವನ್ನು ವಿಶೇಷವಾಗಿ ಪ್ರಕಟೀಕರಿಸಿದನು.) ಆ ಆವಿಷ್ಕರಣ ವಿಶಿಷ್ಟದಿಂದಲೇ ಪೂರ್ಣವಾದ ಬಲವುಳ್ಳ ಬಲರಾಮನು ಆಕಾಶದಲ್ಲಿ ಸಂಚರಿಸುವ ಪಾಪಿಷ್ಠನಾದ ಆ ಪ್ರಲಂಬಾಸುರನನ್ನು ದೃಢವಾದ ಮುಷ್ಟಿಯಿಂದ ಸಂಹೃತನನ್ನಾಗಿ ಮಾಡಿದನು. ॥ ೫೬ ॥

ಮೂ ॥ ತಸ್ಮಿನ್ ಹತೇ ಸುರಗಣಾ ಬಲದೇವನಾಮ
ರಾಮಸ್ಯ ಚಕ್ರುರತಿತೃಪ್ತಿಯುತಾ ಹರಿಶ್ಚ ।
ವಹ್ನಿಂ ಪಪೌ ಪುನರಪಿ ಪ್ರದಹಂತಮುಚ್ಚೈಃ ।
ಗೋಪಾಂಶ್ಚ ಗೋಗಣಮಗಣ್ಯಗುಣಾರ್ಣವೋಽಪಾತ್ ॥ ೫೭ ॥

ಅ॥ ಆ ಪ್ರಲಂಬಾಸುರನು ಸಂಹರಿಸಿಕೊಳ್ಳಲ್ಪಡುತ್ತಿರಲು ದೇವತೆಗಳ ಸಮೂಹದಾಯಂಗಳು ಅತ್ಯಂತವಾಗಿ ತೃಪ್ತಿಯಿಂದ ಕೂಡಿದವರಾಗಿ ರಾಮನಿಗೆ ಬಲದೇವ ಎನ್ನುವ ಹೆಸರನ್ನು ಮಾಡಿದರು. (ಇಟ್ಟರು.) ಶ್ರೀಕೃಷ್ಣನಾದರೂ ಮತ್ತೊಂದಾವರ್ತಿಯೂ ಕೂಡ ಚೆನ್ನಾಗಿ ಸುಡುತ್ತಿರುವ ಕಾಡಾಗ್ನಿಯನ್ನು ಪಾನಮಾಡಿದನು. ಅಪರಿಮಿತಗಳಾದ ಗುಣಗಳಿಂದ ಸಮೃದ್ಧನಾಗಿರುವ ಶ್ರೀಕೃಷ್ಣನು ಗೊಲ್ಲರನ್ನೂ ಗೋವ್ರಗಳ ಸಮೂಹವನ್ನೂ ಕೂಡ ರಕ್ಷಿಸಿದನು. ॥ ೫೭ ॥

ಮೂ ॥ ಕೃಷ್ಣಂ ಕದಾಚಿದತಿದೂರಗತಂ ವಯಸ್ಯಾ
ಊಚುಃ ಕ್ಷುಧಾರ್ದಿತತರಾ ವಯಮಿತ್ಯುದಾರಂ ।
ಸೋಽಪ್ಯಾಹ ಸತ್ರಮಿಹ ವಿಪ್ರಗಣಾಶ್ಚರಂತಿ
ತಾನ್ಯಾಚತೇತಿ ಪರಿಪೂರ್ಣಸಮಸ್ತ ಕಾಮಃ ॥ ೫೮ ॥

ಅ॥ ಒಂದಾನೊಂದು ದಿವಸ ಸಮಾನ ವಯಸ್ಕರು (ಎಲೋ ಶ್ರೀಕೃಷ್ಣನೇ) ನಾವು ಹಸಿವೆಯಿಂದ ಅತ್ಯಂತವಾಗಿ ಪೀಡಿತರಾಗಿರುತ್ತೇವೆ, ಎಂದರು. ಭಕ್ತರಿಗೆ ಅಭೀಷ್ಟವನ್ನು ಕೊಡತಕ್ಕ ಅತ್ಯಂತ ದೂರದಲ್ಲಿರತಕ್ಕ ಶ್ರೀಕೃಷ್ಣನನ್ನು ಕುರಿತು ಹೇಳಿದರು. ಪರಿಪೂರ್ಣಗಳಾದ ಸಮಸ್ತ ಅಭೀಷ್ಟಗಳುಳ್ಳವನಾದಾಗ್ಯೂ ಆ ಶ್ರೀಕೃಷ್ಣನು ಈ ವನದಲ್ಲಿ ಬ್ರಾಹ್ಮಣರ ಸಮೂಹದಾಯಂಗಳು ~~ಸತ್ರ ನಾಮಕವಾದ ಬಹುಕರ್ತೃಕ ಯಾಗವನ್ನು ಮಾಡುತ್ತಾನೆ. ಆ ಬ್ರಾಹ್ಮಣರನ್ನು ಕುರಿತು~~ (ಅನ್ನವನ್ನು) ಬೇಡಿರಿ, ಎಂದು ಹೇಳಿದನು. ॥ ೫೮ ॥

ಮೂ ॥ ತಾನ್ಪ್ರಾಪ್ಯ ಕಾಮಮನವಾಪ್ಯ ಪುನಶ್ಚ ಗೋಪಾಃ
ಕೃಷ್ಣಂ ಸಮಿಯುರಥ ತಾನವದತ್ಸ ದೇವಃ ।
ಪತ್ನೀಃ ಸಮರ್ಥಯತ ಮದ್ವಚನಾದಿತಿ ಸ್ಮ
ಚಕ್ರುಶ್ಚ ತೇ ತದಪಿ ತಾ ಭಗವಂತಮಾಪುಃ ॥ ೫೯ ॥

ಅ॥ ಗೊಲ್ಲರು ಆ ಬ್ರಾಹ್ಮಣರನ್ನು ಪೊಂದಿ ಅಭೀಷ್ಟವನ್ನು ಹೊಂದದೆ ಕೃಷ್ಣನನ್ನೇ ಹೊಂದಿದರು. ಆಮೇಲೆ ಕ್ರೀಡಾದಿಗುಣ ವಿಶಿಷ್ಟನಾದ ಆ ಶ್ರೀಕೃಷ್ಣನು ಮತ್ತೊಂದಾವರ್ತಿ ಆ, ಗೊಲ್ಲರನ್ನು ಕುರಿತು ಹೇಳಿದನು. ನಾನು ಬಂದಿದ್ದೇನೆ ಎನ್ನುವ ಮಾತಿನಿಂದ ಬ್ರಾಹ್ಮಣರ ಹೆಂಡಂದಿರನ್ನು ಪ್ರಾರ್ಥಿಸಿರಿ ಎಂದು ಹೇಳಿದನು. ಆ ಗೊಲ್ಲರು ಅದನ್ನು ಮಾಡಿದರು, (ಅಂದರೆ ಬ್ರಾಹ್ಮಣರ ಹೆಂಡಂದಿರ ಹತ್ತಿರ ಅನ್ನವನ್ನು ಬೇಡಿದರು.) ಆ ಸ್ತ್ರೀಯರಾದರೂ ಶ್ರೀಕೃಷ್ಣನನ್ನು ಹೊಂದಿದರು. ॥ ೫೯ ॥

ಮೂ ॥ ತಾಃ ಷಡ್ವಿಧಾನ್ನಪರಿಪೂರ್ಣಕರಾಃ ಸಮೇತಾಃ
ಪ್ರಾಪ್ತಾ ವಿಸೃಜ್ಯ ಪತಿಪುತ್ರಸಮಸ್ತಬಂಧೂನ್ ।

ಆತ್ಮಾರ್ಚನೈಕಪರಮಾ ವಿಸಸರ್ಜ ಕೃಷ್ಣ
ಏಕಾ ಪತಿಪ್ರವಿಧೃತಾ ಪದಮಾಪ ವಿಷ್ಣೋಃ ॥ ೬೦ ॥

ಅ॥ ಷಡ್ರಸೋಪೇತವಾದ ಅನ್ನದಿಂದ ಪರಿಪೂರ್ಣಗಳಾದ ಕೈಗಳುಳ್ಳ ಆ ಬ್ರಾಹ್ಮಣ ಸ್ತ್ರೀಯರು ಎಲ್ಲರೂ ವಿುಳಿತರಾಗಿ (ತಮ್ಮ ತಮ್ಮ) ಗಂಡಂದಿರು ಮಕ್ಕಳು (ಮೊದಲಾದ) ಎಲ್ಲಾ ಬಂಧುಗಳನ್ನೂ ಬಿಟ್ಟು (ಶ್ರೀಕೃಷ್ಣನ ಸವಿುಪಕ್ಕೆ) ಬಂದರು, ತನ್ನನ್ನು ಪೂಜಿಸುವುದರಲ್ಲಿಯೇ ವುಂಖ್ಯ ತಾತ್ಪರ್ಯವುಳ್ಳ ಆ ವಿಪ್ರಪತ್ನಿಯರನ್ನು ಶ್ರೀಕೃಷ್ಣನು, ಬಿಟ್ಟನು. (ಅಂದರೆ ಸತ್ರ ಯಾಗಕ್ಕೆ ಕಳುಹಿಸಿ ಕೊಟ್ಟನು,) (ತನ್ನ) ಗಂಡನಿಂದ ಹೋಗಬೇಡವೆಂದು ನಿವಾರಿಸಿಕೊಳ್ಳಲ್ಪಟ್ಟ ಒಬ್ಬಾಕೆಯು (ಅಂದರೆ ಒಬ್ಬ ಬ್ರಾಹ್ಮಣನ ಹೆಂಡತಿಯು) (ಯೋಗದಿಂದ ಶರೀರವನ್ನು ಬಿಟ್ಟು) ಶ್ರೀಕೃಷ್ಣನ ಸ್ಥಾನವನ್ನು ಹೊಂದಿದಳು. ॥ ೬೦ ॥

ಮೂ ॥ ಭುಕ್ತ್ವಾಥ ಗೋಪಸಹಿತೋ ಭಗವಾಂಸ್ತದನ್ನಂ
ರೇಮೇ ಚ ಗೋಕುಲಮುವಾಪ್ಯ ಸಮಸ್ತನಾಥಃ ।
ಆಜ್ಞಾತಿಲಂಘನಕೃತೇಃ ಸ್ವಕೃತಾಪರಾಧಾತ್
ಪಶ್ಚಾತ್ತಪ್ತಮನಸೋಽಭ್ಯಭವಂಶ್ಚ ವಿಪ್ರಾಃ ॥ ೬೧ ॥

ಅ॥ ಆಮೇಲೆ ಎಲ್ಲರಿಗೂ ಸ್ವಾವಿುಯಾದ ಪೂಜ್ಯನಾದ ಶ್ರೀಕೃಷ್ಣನು ಗೊಲ್ಲರಿಂದ ಕೂಡಿದವನಾಗಿ ಆ ಷಡ್ರಸೋಪೇತವಾದ ಅನ್ನವನ್ನು ಭೋಜನವಾಡಿ ನಂದಗೋಕುಲವನ್ನು ಹೊಂದಿ ಕ್ರೀಡಿಸುತ್ತಿದ್ದನು. ಸತ್ರವನ್ನು ವಾಡುತ್ತಿದ್ದ ಬ್ರಾಹ್ಮಣರು ಶ್ರೀಕೃಷ್ಣನ ಆಜ್ಞೆಯು ಅತಿಕ್ರವುಣ ರೂಪವಾದ ಕರ್ವುವುಳ್ಳ, ತವ್ವಿುಂದ ವಾಡಲ್ಪಟ್ಟ ಅಪರಾಧದ್ದೆಸೆಯಿಂದ ಆಮೇಲೆ ಅತ್ಯಂತ ತಪ್ತ (ಖೇದಯುಂಕ್ತ)ವಾದ ವುನಸ್ಸುಳ್ಳವರೂ ಆದರು. ॥ ೬೧ ॥

ಮೂ ॥ ಕೃಷ್ಣೋಽಥ ವೀಕ್ಷ್ಯ ಪುರುಹೂತಮಹಪ್ರಯತ್ನಂ
ಗೋಪಾನ್ನ್ಯವಾರಯದವಿಸ್ಮರಣಾಯ ತಸ್ಯ ।
ಮಾ ಮಾನುಷೋಽಯವಿತಿ ಮಾವಮವಗಚ್ಛತಾತ್ಸ
ಇತ್ಯವ್ಯಯೋಽಸ್ಯ ವಿದಧೇ ಮಹಭಂಗವಿಾಶಃ ॥ ೬೨ ॥

ಅ॥ ಆಮೇಲೆ ಶ್ರೀಕೃಷ್ಣನು ದೇವೇಂದ್ರನ ಪೂಜೆಯು ಉದ್ಯೋಗವನ್ನು ನೋಡಿ ಆ ಇಂದ್ರನಿಗೆ ವಿಸ್ಮರಣ ಬರಬಾರದು ಎನ್ನುವುದಕ್ಕಾಗಿ (ಅಂದರೆ ನಾನು ಶ್ರೀಹರಿಯು ಅವತಾರ ಭೂತನು ಎನ್ನುವುದನ್ನು ವುರೆಯಬಾರದು ಎನ್ನುವುದಕ್ಕಾಗಿ) ಗೊಲ್ಲರನ್ನು ತಡೆದನು. (ಅಂದರೆ ಇಂದ್ರನಿಗೆ ಪೂಜೆ ವಾಡಬೇಡಿರಿ ಎಂದು ತಡೆದನು.) (ಹಿಂದೆ ಹೇಳಿದ ಅರ್ಥವನ್ನೇ ವಿಶದೀಕರಿಸುತ್ತಾರೆ.) ಈ 'ಕೃಷ್ಣನು' ವಾನುಷ್ಯನೆಂದು ತನ್ನನ್ನು ಆ ಇಂದ್ರನು ತಿಳಿಯಬಾರದು, ಈ ಅಭಿಪ್ರಾಯದಿಂದ ನಾಶರಹಿತನಾದ ಸರ್ವಸವರ್ಥನಾದ ಶ್ರೀಕೃಷ್ಣನು ಈ ಇಂದ್ರನ ಪೂಜಾಪಹಾರವನ್ನು ವಾಡಿದನು. ॥ ೬೨ ॥

ಯಾಗದ ಭಂಗಪ್ರಕಾರವನ್ನು ಹೇಳುತ್ತಾರೆ—

ಮೂ ॥ ಗೋಪಾಂಶ್ಚ ತಾನ್ ಗಿರಿವುಹೋಽಸ್ಮದುರುಸ್ವಧರ್ವ
ಇತ್ಯುಕ್ತಿಸಚ್ಛಲತ ಆತ್ಮವುಹೇಽವತಾರ್ಯ ।

ಭೂತಾತಿವಿಸ್ತೃತತನುರ್ಬುಭುಜೇ ಬಲಿಂ ಸ
ನಾನಾವಿಧಾನ್ನರಸಪಾನಗುಣೈಃ ಸಹೈವ ॥ ೬೫ ॥

ಅ॥ ಆ ಶ್ರೀಕೃಷ್ಣನಂ ಪರ್ವತದ ಪೂಜೆಯಂ ನವಂಗೆ (ಅಂದರೆ ಗಿರಿಯಂನ್ನು ಆಶ್ರಯಿಸಿ ಕೊಂಡಂ ಜೀವಿಸಿಕೊಂಡಂ ಇರುವ ನವಂಗೆ) ಶ್ರೇಷ್ಠವಾದ ತವಂಗೆ ಉಚಿತವಾದ ಧರ್ಮವು, ಈ ಪ್ರಕಾರವಾದ ಗಿರಿಪೂಜೆಯಂನ್ನು ಮಾಡಬೇಕೆನ್ನುವ ಕಪಟದಿಂದ ಸಹಿತವಾದ ಮಾತಿನಿಂದ ಅಥವಾ ಉಕ್ತಿಯಂಲ್ಲಿ ಸವಿಾಚೀನವಾದ ಛಲ(ದ್ವ್ಯರ್ಥಕವಾದ ಪದಪ್ರಯೋಗ)ದ್ದಿಸೆಯಿಂದ ಇಂದ್ರಯಾಗ ದಲ್ಲಿ ಉದ್ಯುಕ್ತರಾದ ಗೊಲ್ಲರನ್ನು ತನ್ನ ಪೂಜೆಯಂಲ್ಲಿ ಪ್ರವರ್ತಿಸಿ ಅತ್ಯಂತ ವಿಸ್ತೃತವಾದ ಶರೀರ ವುಳ್ಳವನಾಗಿ ಬಹು ಪ್ರಕಾರಗಳಾದ ಅನ್ನರಸಪಾನಗಳೆಂಬ ಅಂಗಗಳಿಂದ ಕೂಡಿಕೊಂಡೇ ಬಲಿ ಯಂನ್ನು ಭೋಜಿಸಿದನಂ.

ವಿಶೇಷಾಂಶ—(1)ಉಕ್ತಿಯಂಲ್ಲಿ ದ್ವ್ಯರ್ಥಕವಾದ ಪದಪ್ರಯೋಗವು ಹೇಗೆಂದರೆ–ಗಿರತಿ ನದ್ಯಾದಿಕಂ ಎನ್ನುವ ವ್ಯುತ್ಪತ್ತಿಯಿಂದ ಗಿರಿಶಬ್ದವು ಪರ್ವತವನ್ನೂ ಹೇಳುತ್ತದೆ. ಅನಭಿಪ್ರೇತ ವಾದ ಅರ್ಥವನ್ನು ಇಟ್ಟುಕೊಂಡರೆ ಸವಿಾಚೀನವಾದ ಛಲವು ಆಗುತ್ತದೆ. ಮಂತ್ರ 'ನಾವಮಾನಿ ಸರ್ವಾಣಿ ಯನಮಾನಿಶಂತಿ,' ಇತ್ಯಾದಿ ಶ್ರುತಿಯಿಂದಲೂ "ಅರ್ಚಂತು ಪುತ್ರಕಾ ಉತಪುರನ್ನ ದೃಷ್ಣ್ವರ್ಚತ" ಎನ್ನುವ ಶ್ರುತಿಯಿಂದಲೂ ಸರ್ವಶಬ್ದವಾಚ್ಯನಾಗಿರುವುದರಿಂದಲೂ ಪೂಜ್ಯನಾ ಗಿರುವುದರಿಂದಲೂ ಗಿರಿಶಬ್ದದಿಂದ ತನ್ನನ್ನೇ(ಶ್ರೀಕೃಷ್ಣನನ್ನೇ) ತೆಗೆದುಕೊಳ್ಳುವುದು ಯೋಗ್ಯವು' ಆದ ಕಾರಣ ಲೀಲೆಯಿಂದ ಹೇಳಿದರೂ ಶ್ರೀಹರಿಯು ಮಾತು ಅನೃತವಲ್ಲ. ಈ ಅಭಿಪ್ರಾಯ ದಿಂದಲೇ 'ಆತ್ಮಮಹೇಽವತಾರ್ಯ' ಎಂದು ಹೇಳಿದ್ದು. ॥ ೬೩ ॥

ಮೂ ॥ ಇಂದ್ರೋಽಥ ವಿಸ್ಮೃತರಥಾಂಗಧರಾವತಾರೋ
ಮೇಘಾನ್ ಸಮಾದಿಶದನಂರೂಢಕಪೂಗವೃಷ್ಟೈಶ್ಚ ।
ತೇ ಪ್ರೇರಿತಾಃ ಸಕಲಗೋಕುಲನಾಶನಾಯ
ಧಾರಾ ವಿತೇರುರುರುನಾಗಕರಪ್ರಕಾರಾಃ ॥ ೬೪ ॥

ಅ॥ ಪೂಜೆಯಃಂ ಮುಂಗಿದ ಮೇಲೆ ವಿಸ್ಮರಣವನ್ನು ಹೊಂದಿದ ಚಕ್ರಧಾರಿಯಾದ ಶ್ರೀ ಕೃಷ್ಣನ ಅವತಾರವುಳ್ಳ(ಅಂದರೆ ಶ್ರೀಕೃಷ್ಣನು ಶ್ರೀನಾರಾಯಂಣನ ಅವತಾರ ಭೂತನೆನ್ನುವುದನ್ನು ಮಂರೆತಂ ಬಿಟ್ಟರುವ) ದೇವೇಂದ್ರನು ಉತ್ಕೃಷ್ಟವಾದ ಜಲಸಮೂಹಾಯದ ವರ್ಷಣಕ್ಕಾಗಿ ಮೇಘ ಗಳನ್ನು ಆಜ್ಞಾಪಿಸಿದನಂ. ಆ ಮೇಘಗಳು ನಿಖಿಲ ಗೋಕುಲವನ್ನು ವಿನಾಶಪಡಿಸುವುದಕ್ಕಾಗಿ ಪ್ರೇರಿಸಿಕೊಳ್ಳಲ್ಪಟ್ಟವುಗಳಾಗಿ ಶ್ರೇಷ್ಠ ಆನೆಗಳ ಶುಂಡಾದಂಡದಂತೆ ಇರತಕ್ಕ ಜಲಧಾರೆಗಳನ್ನು ವಿಸ್ತಾರವಾಡಿದರಂ, ಯಂಥೇಷ್ಟವಾಗಿ ಸುರಿಸಿದವು.

ವಿಶೇಷಾಂಶ—ವಿಸ್ಮೃತವಿಷ್ಣ್ವವತಾರಃ ಎಂದು ಹೇಳದೆ ವಿಸ್ಮೃತರಥಾಂಗಧರಾವತಾರಃ ಎಂದು ಹೇಳಿದ್ರಿಂದ ಬಾಲರೂಪನಾದ ಶ್ರೀಕೃಷ್ಣನ ಕೈಯಂಲ್ಲಿ ಆಗ ಚಕ್ರವು ತೋರದೆ ಇದ್ದುದೂ ಕೂಡ ವಿಸ್ಮರಣಕ್ಕೆ ಬೀಜವೆಂದು ಸೂಚಿತವಾಯಿತಂ. ॥ ೬೪ ॥

ಮೂ ॥ ತಾಭಿರ್ನಿಪೀಡಿತಮುದೀಕ್ಷ್ಯ ಸ ಕಂಜನಾಭಃ
ಸರ್ವಂ ವ್ರಜಂ ಗಿರಿವರಂ ಪ್ರಸಭಂ ದಧಾರ ।

ವಾಮೇನ ಕಂಜದಲಕೋಮಲಪಾಣಿನೈವ
ತತ್ರಾಖಿಲಾಃ ಪ್ರವಿವಿಶುಃ ಪಶುಪಾಃ ಸ್ವಗೋಭಿಃ ॥ ೬೫ ॥

ಅ॥ ಕಮಲವು ನಾಭಿಯಲ್ಲುಂಳ್ಳ ಆ ಶ್ರೀಕೃಷ್ಣನು ಆ ಜಲಧಾರೆಗಳಿಂದ ಚೆನ್ನಾಗಿ ಪೀಡಿಸಿ ಕೊಳ್ಳಲ್ಪಟ್ಟ ಎಲ್ಲಾ ನಂದಗೋಕುಲವನ್ನು ನೋಡಿ ದೃಢ ಹೇಗೆ ಆದೀತೋ ಹಾಗೆ ಗೋವರ್ಧನ ಪರ್ವತ ಶ್ರೇಷ್ಠವನ್ನು ಎಡದ್ದಾದ, ಕಮಲದಳದಂತೆ ಕೋಮಲವಾದ ಕೈಯಿಂದಲೇ (ಅಂದರೆ ಎಡಗೈಯಿಂದಲೇ) ಧರಿಸಿದನು. ಎತ್ತಿದ ಪರ್ವತದ ಕೆಳಗೆ ಗೊಲ್ಲರೆಲ್ಲರೂ ತಮ್ಮ ಗೋವುಗಳಿಂದ (ಕೂಡಿಕೊಂಡು) ಪ್ರವೇಶ ಮಾಡಿದನು. ॥ ೬೫ ॥

ಮೂ ॥ ವೃಷ್ಟ್ಯೋರು ವಾರ್ಯಥ ನಿರಂತರಸಪ್ತರಾತ್ರಂ
ತ್ರಾತಂ ನಿರೀಕ್ಷ್ಯ ಹರಿಣಾ ವ್ರಜಮುಶ್ರವೇಣ ।
ಶಕ್ರೋಽನುಸಂಸ್ಮೃತಸುರಪ್ರವರಾವತಾರಃ
ಪಾದಾಂಬುಜಂ ಯದುಪತೇಃ ಶರಣಂ ಜಗಾಮ ॥ ೬೬ ॥

ಅ॥ ದೇವೇಂದ್ರನು ವ್ಯವಧಾನವಿಲ್ಲದೆ ಏಳು ದಿನ ಪರ್ಯಂತ ಹೇಗೆ ಆದೀತೋ ಹಾಗೆ ಬಹಳವಾದ ಜಲವನ್ನು ಸುರಿಸಿ ಶ್ರವಃಲೇಶವೂ ಇಲ್ಲದಿರುವ ಶ್ರೀಹರಿಯಿಂದ ನಂದಗೋಕುಲವನ್ನು ರಕ್ಷಿಸಿಕೊಳ್ಳಲ್ಪಟ್ಟದ್ದನ್ನಾಗಿ ನೋಡಿ ಆಮೇಲೆ ಸ್ಮರಿಸಿಕೊಳ್ಳಲ್ಪಟ್ಟ ದೇವಶ್ರೇಷ್ಠನಾದ ಶ್ರೀಕೃಷ್ಣನ ಅವತಾರವುಳ್ಳವನಾಗಿ (ಅಂದರೆ ಶ್ರೀಕೃಷ್ಣನು ಶ್ರೀಹರಿಯು ಅವತಾರಭೂತನೆಂದು ಸ್ಮರಿಸಿದವನಾಗಿ) ಯಾದವರಿಗೆ ಅಧಿಪತಿಯಾದ ಶ್ರೀಕೃಷ್ಣನ ಪಾದಕಮಲವನ್ನು ರಕ್ಷಕವನ್ನಾಗಿ ಹೊಂದಿದನು. ॥ ೬೬ ॥

ಮೂ ॥ ತುಷ್ಟಾವ ಚೈನಮುರುವೇದಶಿರೋಗತಾಭಿಃ
ಗೀರ್ಭಿಃ ಸದಾಗಣಿತಪೂರ್ಣಗುಣಾರ್ಣವಂ ತಂ ।
ಗೋಭೈದ್ಧರುಂ ಹರಗುರೋರಪಿ ಗೋಗಣೇನ
ಯುಕ್ತಃ ಸಹಸ್ರಗುತುಗಾಧಗುಮಗ್ರ್ಯಮಗ್ರ್ಯಾತ್ ॥ ೬೭ ॥

ಅ॥ ವಜ್ರಧಾರಿಯಾದ, ಸುರಭಿಮೊದಲಾದ ಗೋವ್ರಗಳ ಸಮುಂದಾಯದಿಂದ ಕೂಡಿರುವ ಸಹಸ್ರ ಅಕ್ಷಿಗಳುಳ್ಳ ಇಂದ್ರನು ಯಾವಾಗಲೂ ಗಣನಮಾಡಲಿಕ್ಕೆ ಅಶಕ್ಯವಾಗಿರುವ್ರುದರಿಂದ ಪರಿಪೂರ್ಣಗಳಾದ ಗುಣಗಳಿಂದ ಸಮುಂದ್ರದಂತಿರುವ, ರುದ್ರನಿಗೆ ಗುರುವಾದ ಬ್ರಹ್ಮನಿಗೂ ಗುರುವಾದ ಇತರರಿಂದ ಸಹಿಸಲಶಕ್ಯವಾದ ಕಾಂತಿಯುಂಳ್ಳ, ಅಥವಾ ಅಪಾರವಾದ ಶರೀರದ ಕಾಂತಿಯುಂಳ್ಳ, ಅಥವಾ ಅಪಾರವಾದ ವಾಗ್ವಿಲಾಸವುಳ್ಳ, ಉತ್ತಮರಿಂದಲೂ ಉತ್ತಮನಾದ ಈ ಶ್ರೀಕೃಷ್ಣನನ್ನು, ಉತ್ಕೃಷ್ಟಗಳಾದ ಅನಂತ ವೇದಗಳಿಗೆ ಶಿರಃಸ್ಥಾನೀಯಂಗಳಾದ ಉಪನಿಷತ್ತುಗಳಲ್ಲಿರ ತಕ್ಕ ವಚನಗಳಿಂದ ಸ್ತೋತ್ರಮಾಡಿದನು ॥ ೬೭ ॥

ಇಂದ್ರನು ಮಾಡಿದ ಸ್ತೋತ್ರವನ್ನು ಸಂಕ್ಷೇಪದಿಂದ ಹೇಳುತ್ತಾರೆ—

ಮೂ ॥ ತ್ವತ್ತೋ ಜಗತ್ಸಕಲಮಾವಿರಭೂದಗಣ್ಯ-
ಧಾಮ್ನಸ್ತ್ವಮೇವ ಪರಿಪಾಸಿ ಸಮಸ್ತಮಂತೇ ।

ಅತಿಸ್ತ್ವಯೈವ ಜಗತೋಽಸ್ಯ ಹಿ ಬಂಧವೋಕ್ಷೌ
ನ ತ್ವತ್ಸಮೋಽಸ್ತಿ ಕುಹಚಿತ್ಪರಿಪೂರ್ಣಶಕ್ತೇ ॥ ೬೮ ॥

ಅ॥ ಅಪರಿಮಿತಗಳಾದ ಜ್ಞಾನಾನಂದಾದಿ ಗುಣಗಳಿಗೆ ಆಶ್ರಯಭೂತನಾದ ಅಥವಾ ಅಪರಿಮಿತಗಳಾದ ತೇಜಸ್ಸುಗಳಿಂಳ್ಳ, ಅಥವಾ ಅವಧಿರಹಿತಗಳಾದ ವೈಕುಂಠ ಮೊದಲಾದ ಮಹೂರು ಸ್ಥಾನಗಳಿಂಳ್ಳ ನಿನ್ನಿಂದಲೇ ಸಮಂಸ್ತ ಜಗತ್ತು ಹುಟ್ಟಿತು. ನೀನೇ ರಕ್ಷಿಸುತ್ತಿ, ಸಮಂಸ್ತ ಜಗತ್ತನ್ನು ಅಂತ್ಯದಲ್ಲಿ ಸಂಹರಿಸುತ್ತಿ. ನಿನ್ನಿಂದಲೇ ಈ ಜಗತ್ತಿಗೆ ಸಂಸಾರ ಬಂಧವೂ ಸಂಸಾರ ಮೋಕ್ಷವೂ ಇವುಗಳೂ ಆಗುತ್ತವೆ. ಪರಿಪೂರ್ಣವಾದ ಶಕ್ತಿಯಂಳ್ಳವನೇ ಎಲ್ಲಿಯೂ ಯಾವ ದೇಶದಲ್ಲಿಯೂ ಯಾವ ಕಾಲದಲ್ಲಿಯೂ ನಿನಗೆ ಸಮಾನಿಕನಂ ಇಲ್ಲವೇ ಇಲ್ಲ. ॥ ೬೮ ॥

ಮೂ ॥ ಕ್ಷಂತವ್ಯಮೇವ ಭವತಾ ಮಮ ಬಾಲ್ಯವಿಷ್ಣ
ತ್ವತ್ಸಂಶ್ರಯೋಽಸ್ಮಿ ಹಿ ಸದೇತ್ಯಭಿವಂದಿತೋಽಜಃ ।
ಕ್ಷಾಂತಂ ಸದೈವ ಭವತಸ್ತವ ಶಿಕ್ಷಣಾಯ
ಪೂಜಾಪರಿಹಾರವಿಧಿರಿತ್ಯವದದ್ರಮೇಶಃ ॥ ೬೯ ॥

ಅ॥ ಈಶನೇ, ತವಿಂದಲೇ ನನ್ನ ಮೂಢತನವು ಕ್ಷಮಿಸಲಿಕ್ಕೇನೇ ಯೋಗ್ಯವಾದುದು. ಏಕೆಂದರೆ ಯಾವಾಗಲೂ ನೀನೇ ಆಶ್ರಯನಾಗಿ ಉಳ್ಳವನಂ ಆಗಿರುತ್ತೇನೆ, ಹೀಗೆ(ಹೇಳಿ)ಸಮಂಸ್ತರಿಸಿಕೊಳ್ಳಲ್ಪಟ್ಟ ಉತ್ಪತ್ತಿ ರಹಿತನಾದ ಲಕ್ಷ್ಮೀಪತಿಯಾದ ಶ್ರೀಕೃಷ್ಣನು ಯಾವಾಗಲೂ (ಭಕ್ತನಾದ) ನಿನ್ನ ಮೂಢತನವು ಕ್ಷಮಿಸಲ್ಪಟ್ಟಿತು. ನಿನ್ನ ಶಿಕ್ಷೆಗಾಗಿ (ಅಂದರೆ ನಿನಗೆ ಸನ್ಮಾರ್ಗವನ್ನು) ಪ್ರವರ್ತಿಸಿಕೊಡುವುದಕ್ಕಾಗಿ ಪೂಜೆಯ ಅಪಹಾರರೂಪವಾದ ವಿಧಿಯಂ(ಮಾಡಲ್ಪಟ್ಟಿತು)ಎಂದಂ ಹೇಳಿದನಂ. ॥ ೬೯ ॥

ಮೂ ॥ ಗೋವಿಂದಮೇನಮಭಿಷಿಚ್ಯ ಸ ಗೋಗಣೇಶೋ
ಗೋಭಿರ್ಜಗಾಮ ಗುಣಪೂರ್ಣಮಮುಂ ಪ್ರಣಮ್ಯ ।
ಗೋಪೈರ್ಗಿರಾಂ ಪತಿರಪಿ ಪ್ರಣತೋಽಭಿಗಮ್ಯ
ಗೋವರ್ಧನೋದ್ಧರಣಸಂಗತಸಂಶಯೈಸ್ತಃ ॥ ೭೦ ॥

ಅ॥ ಸುರಭಿಮೊದಲಾದ ಗೋಪುಗಳ ಸಮುದಾಯಕ್ಕೆ ಅಧಿಪತಿಯಾದ ಆ ಇಂದ್ರನಂ ಆಕಾಶಗಂಗಾಜಲಗಳಿಂದ ಈ ಗೋವಿಂದನನ್ನು ಪಟ್ಟಾಭಿಷೇಕಮಾಡಿ ಜ್ಞಾನಾನಂದಾದಿ ಗುಣಗಳಿಂದ ಪರಿಪೂರ್ಣನಾದ ಶ್ರೀಕೃಷ್ಣನನ್ನು ನಮಸ್ಕರಿಸಿ ಹೋದನಂ. ಗೋವರ್ಧನಪರ್ವತವನ್ನು ಎತ್ತೋಣದರಿಂದ ಚೆನ್ನಾಗಿ ಹೋಗಲ್ಪಟ್ಟ ಸಂಶಯವುಳ್ಳ ಗೊಲ್ಲರಿಂದಲೂ ವೇದವಾಕ್ಯಗಳಿಗೆ ಅಧಿಪತಿಯಾದ ಆ ಶ್ರೀಕೃಷ್ಣನು ಅಭಿಮುಖವನ್ನು ಹೊಂದಿ ನಮಸ್ಕರಿಸಿಕೊಳ್ಳಲ್ಪಟ್ಟವನಾಗಿ (ನಂದ ಗೋಕಂಲವನ್ನು ಕಂರಿತು) ಹೋದನಂ. ॥ ೭೦ ॥

ಮೂ ॥ ಕೃಷ್ಣಂ ತತಃಪ್ರಭೃತಿ ಗೋಪಗಣಾ ವ್ಯಜಾನನ್
ನಾರಾಯಣೋಽಯಮಿತಿ ಗರ್ಗವಚಶ್ಚ ನಂದಾತ್ ।
ನಾರಾಯಣಸ್ಯ ಸಮ ಇತ್ಯುದಿತಂ ನಿಶಮ್ಯ
ಪೂಜಾಂ ಚ ಚಕ್ರುರಧಿಕಾಮುರವಿಂದನೇತ್ರೇ ॥ ೭೧ ॥

ಅ॥ ಗೋವರ್ಧನ ಪರ್ವತವನ್ನು ಎತ್ತಿದ ದಿನವನ್ನಾರಂಭಿಸಿ ಗೊಲ್ಲರ ಸಮೂಹವು, ಈ ಕೃಷ್ಣನು ನಾರಾಯಣನೆಂದು ಶ್ರೀಕೃಷ್ಣನನ್ನು ತಿಳಿದರು. ಈತನು ನಾರಾಯಣನಿಗೆ ಸವಶಾನಿಕನು ಈ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟ ಗರ್ಗಾಚಾರ್ಯರ ವಚನವನ್ನು ನಂದಗೋಪನದಿಸೆಯಿಂದ ಕೇಳಿ ಗೊಲ್ಲರು ತಿಳಿದುಕೊಂಡರು. ಕಮಲದಳದಂತೆ ಕಣ್ಣುಗಳುಳ್ಳ ಶ್ರೀಕೃಷ್ಣನಲ್ಲಿ ಅಧಿಕವಾದ (ಅಂದರೆ ಸರ್ವೋತ್ತಮನೆನ್ನುವ ಅಭಿಪ್ರಾಯದಿಂದ) ಪೂಜೆಯನ್ನೂ ಮಾಡಿದರು. ॥ ೭೧ ॥

ಮೂ ॥ ಸ್ಕಂದಾದುಪಾತ್ತವರತೋ ಮರಣಾದಪೇತಂ
ದೃಷ್ಟ್ವಾ ಚ ರಾಮನಿಹತಂ ಬಲಿನಂ ಪ್ರಲಂಬಂ ।
ಚಕ್ರುರ್ವಿನಿಶ್ಚಯಮಮುಷ್ಯ ಸುರಾಧಿಕತ್ವೇ
ಗೋಪಾ ಅಥಾಸ್ಯ ವಿದಧುಃ ಪರಮಾಂ ಚ ಪೂಜಾಂ ॥ ೭೨ ॥

ಅ॥ ಗೊಲ್ಲರು ಷಡಾನನದ್ವೆಸೆಯಿಂದ ಸ್ವೀಕರಿಸಲ್ಪಟ್ಟ ವರದೆಸೆಯಿಂದ ಮರಣರಹಿತನಾದ ಬಲಿಷ್ಠನಾದ ಪ್ರಲಂಬಾಸುರನನ್ನು ಬಲರಾಮನಿಂದ ಸಂಹರಿಸಿಕೊಳ್ಳಲ್ಪಟ್ಟವನನ್ನಾಗಿ ನೋಡಿ ಈ ಬಲರಾಮನಿಗೆ ದೇವಶ್ರೇಷ್ಠತ್ವ ವಿಷಯದಲ್ಲಿ ವಿನಿಶ್ಚಯವನ್ನು ಮಾಡಿದರು. (ಹಾಗಾದರೆ ಶ್ರೀಕೃಷ್ಣನಿಗೆ ಅಧಿಕವಾದ ಪೂಜೆಯನ್ನು ಹೇಗೆ ಮಾಡಿರುವರೋ ಹಾಗೆಯೇ ಬಲರಾಮನಿಗೂ ಮಾಡಿರುವರೋ ಏನು ಎಂದರೆ=)ಈ ಶ್ರೀಕೃಷ್ಣನ ಮೇಲೆ ಅಸಮಾನವಾದ ಉತ್ತಮವಾದ ಪೂಜೆಯನ್ನೂ ಈ ಬಲರಾಮನಿಗೆ ಮಾಡಿರುವರು, (ಅಂದರೆ ಶ್ರೀಕೃಷ್ಣನಿಗೆ ಮಾಡತಕ್ಕ ಪೂಜೆಗಿಂತ ಸ್ವಲ್ಪ ನಿಕೃಷ್ಟವಾದ ಪೂಜೆಯನ್ನು ಮಾಡುತ್ತಾ ಇದ್ದರು)

ಮೂ ॥ ಕಾತ್ಯಾಯನೀವ್ರತಧರಾಃ ಸ್ವಪತಿತ್ವಹೇತೋಃ
ಕನ್ಯಾ ಉವಾಹ ಭಗವಾನಪರಾಶ್ಚ ಗೋಪೀಃ ।
ಅನ್ಯೈರ್ಹೃತಾ ಅಯುಗಬಾಣಭರಾಭಿಮನ್ನಾಃ
ಪ್ರಾಪಾನಿಶಾಸ್ವರಮಯುಚ್ಛಶಿರಾಜಿತಾಸು ॥ ೭೩ ॥

ಅ॥ ಶ್ರೀಕೃಷ್ಣನು ತನ್ನ ಪತಿತ್ವಪ್ರಾಪ್ತಿಗಾಗಿ ಗೌರಿಯಂವ್ರತವನ್ನು ಧರಿಸಿರುವ (ಪೂರ್ವಜನ್ಮದಲ್ಲಿ ಉತ್ತಮಅಪ್ಸರಸ್ತ್ರೀಯರಾದ) ಕನ್ನಿಕೆಯರನ್ನು ವಿವಾಹವಾಡಿಕೊಂಡನು. (ಅವರನ್ನೂ) ಬೇರೆ ಗೊಲ್ಲರಿಂದ ವಿವಾಹಿತರಾದ ಮನ್ಮಥನ ಬಾಣದಿಂದ ಪ್ರೇರಿತರಾದ, ಚಂದ್ರನಿಂದ ಶೋಭಿಸಿಕೊಂಡು ಇರುವ ರಾತ್ರಿಗಳಲ್ಲಿ (ತನ್ನ ಸಮೀಪಕ್ಕೆ) ಬಂದಿರುವ ವಿವಾಹಿತರಾದ ಕನ್ನಿಕೆಯರಿಂದ ಇತರರಾದ ಗೋಪಸ್ತ್ರೀಯರನ್ನೂ ಕೂಡ ಕ್ರೀಡಿಸುತ್ತಾ ಇದ್ದನು.

ವಿಶೇಷಾಂಶ—ವಿವಾಹಿತರಾಗದಿರುವ ಕನ್ನಿಕೆಯರು ಸಂಸ್ಕೃತರಾಗದಿರುವುದರಿಂದ ಸ್ವೀಕರಿಸುವುದು ಕೂಡದಿರುವುದರಿಂದ ವಿವಾಹವಿಧಿಯಿಂದಲೇ ಸ್ವೀಕರಿಸಿದನು. ಈ ಅಭಿಪ್ರಾಯದಿಂದ ಕನ್ನಿಕೆಯರನ್ನು ವಿವಾಹವಾಡಿಕೊಂಡು ಇರುವನು. ॥ ೭೩ ॥

ಮೂ ॥ ತಾಸ್ವತ್ರ ತೇನ ಜನಿತಾ ದಶಲಕ್ಷಪುತ್ರಾ
ನಾರಾಯಣಾಹ್ವಯಯುತಾ ಬಲನಶ್ಚ ಗೋಪಾಃ ।
ಸರ್ವೇಽಪಿ ದೈವತಗಣಾ ಭಗವತ್ಪ್ರತತ್ವ-
ಮಾಪ್ತುಂ ಧರಾತಲಗತಾ ಹರಿಭಕ್ತಿಹೇತೋಃ ॥ ೭೪ ॥

ಅ॥ ಈ ನಂದಗೋಕುಲದಲ್ಲಿ ಆ ಶ್ರೀಕೃಷ್ಣನಿಂದ ವಿವಾಹಿತರಾದ ಗೊಪಕನ್ನಿಕೆಯರಲ್ಲಿ ನಾರಾಯಣನೆನ್ನುವ ನಾವಂದಿಂದ ಯುಕ್ತರಾದ ಬಲಿಷ್ಠರಾದ ಹತ್ತುಲಕ್ಷ (೧೦೦೦೦೦) ಮಕ್ಕಳು ಹುಟ್ಟಿಸಲ್ಪಟ್ಟರು. ಆ ಎಲ್ಲಾ ಗೊಲ್ಲರೂ (ಗೋಪಕನ್ನಿಕೆಯಲ್ಲಿ ಹುಟ್ಟಿರುವುದರಿಂದ) ಗೊಲ್ಲರಾಗಿ (ಮಾತೃಜಾತಿಯನ್ನೇ ಹೊಂದಿದರು.) (ಅವರು ಮೊದಲು ಯಾರೆಂದರೆ) ದೇವತೆಗಳ ಸಮೂಹಗಳು ಪಿತೃರೂಪನಾದ ಶ್ರೀಹರಿಯಲ್ಲಿ ಭಕ್ತಿವಿಶೇಷಕ್ಕಾಗಿ ಶ್ರೀಹರಿಯ ಶೋಭನತತ್ವವನ್ನು ಹೊಂದುವುದಕ್ಕಾಗಿ ಭೂತಲವನ್ನು ಹೊಂದಿದರು. (ಅಂದರೆ ಭೂಮಿಯಲ್ಲಿ ಹುಟ್ಟಿದರು.) ॥೭೪॥

ಹಾಗಾದರೆ ಶ್ರೀಕೃಷ್ಣನು ಸಂಸ್ಕಾರದ್ದೆಸೆಯಿಂದ ಮೊದಲು ಕನ್ನಿಕೆಯರನ್ನು ಹೇಗೆ ವಂದುವೆ ಮಾಡಿಕೊಂಡನು ಎಂದು ಶಂಕಿಸಿದರೆ ಆ ವಿಷಯದಲ್ಲಿ ಹೇತುವನ್ನು ಹೇಳುತ್ತಾರೆ—

ಮೂ ॥ ತಾಸ್ತತ್ರ ಪೂರ್ವವರದಾನಕೃತೇ ರಮೇಶೋ
ರಾಮಾದ್ವಿಜತ್ವಗಮನಾದಪಿ ಪೂರ್ವಮೇವ ।
ಸರ್ವಾ ನಿಶಾಸ್ವರಮಯತ್ಸಮಭೀಷ್ಟಸಿದ್ಧಿ-
ಚಿಂತಾಮಣಿರ್ಹಿ ಭಗವಾನಶುಭೈರಲಿಪ್ತಃ ॥ ೭೫ ॥

ಅ॥ ಲಕ್ಷ್ಮೀಪತಿಯಾದ ಶ್ರೀಕೃಷ್ಣನು ಆ ವೃಂದಾವನದಲ್ಲಿ (ಸಂಸ್ಕಾರದ್ದೆಸೆಯಿಂದ) ಮೊದಲೇ ನನ್ನ ಸಂಗವು ಆಗುವುದು ಎನ್ನುವ ವರವನ್ನು ಕೊಟ್ಟಿರುವುದರಿಂದಲೂ ಬಲರಾಮನ ದೆಸೆಯಿಂದ ಮೊದಲೇ (ಅಂದರೆ ಬಲರಾಮನಿಗೆ ಮದುವೆಯಾಗುವುದಕ್ಕಿಂತ ಮೊದಲೇ ಮತ್ತು ಬಲರಾಮನ ಸಂಭೋಗಕ್ಕಿಂತ ಮೊದಲೇ,) ತನಗೆ ಬ್ರಾಹ್ಮಣ್ಯವು ಬರುವುದಕ್ಕಿಂತ ಮೊದಲೇ (ಅಂದರೆ ತನಗೆ ಉಪನಯನವಾಗುವುದಕ್ಕಿಂತಲೂ ಮೊದಲೇ,) ಆ ಎಲ್ಲಾ ವಿವಾಹಿತರಾದ ಕನ್ನಿಕೆಯರನ್ನೂ ಗೋಪಸ್ತ್ರೀಯರನ್ನೂ ಕೂಡ ರಾತ್ರಿಕಾಲಗಳಲ್ಲಿ ಕ್ರೀಡಿಸುತ್ತಿದ್ದನು. (ಹಾಗಾದರೆ ಒಬ್ಬನೇ ಅನೇಕ ಸ್ತ್ರೀಯರನ್ನು ಹೇಗೆ ಕ್ರೀಡಿಸುತ್ತಾ ಇದ್ದನು ಎಂದರೆ) ನಿರ್ದೋಷವಾದ ಅಭೀಷ್ಟದ ಪ್ರಾಪ್ತಿಯಲ್ಲಿ ಚಿಂತಾಮಣಿಯಂತೆ ಇರತಕ್ಕವನು. (ಹಾಗಾದರೆ ಜ್ಯೇಷ್ಠನಿಗೆ ವಂದುವೆಯಾಗುವುದಕ್ಕಿಂತ ಮೊದಲು ಸ್ತ್ರೀಯರನ್ನು ಸ್ವೀಕರಿಸಿ ಕ್ರೀಡಿಸಿದ್ರಿಂದಲೂ ಇತರರಿಂದ ವಿವಾಹಿತರಾದ ಗೋಪಸ್ತ್ರೀಯರನ್ನು ಕ್ರೀಡಿಸಿದ್ರಿಂದಲೂ ಶ್ರೀಕೃಷ್ಣನಿಗೆ ದೋಷವು ಬರಬೇಕಾಗುವುದು ಎಂದರೆ-) ಪೂಜ್ಯನಾದ ಶ್ರೀಕೃಷ್ಣನು ವಿಕರ್ಮಗಳಿಂದುಂಟಾದ ದೋಷಗಳಿಂದ ಲೇಪಿಸಲ್ಪಡದಿರುವನು. ॥ ೭೫ ॥

ಮೂ ॥ ಸಂಪೂರ್ಣಚಂದ್ರಕರರಾಜಿತಸದ್ರಜನ್ಯಾಂ
ಬೃಂದಾವನೇ ಕುಮುದಕುಂದಸುಗಂಧವಾತೇ ।
ಶ್ರುತ್ವಾ ಮುಕುಂದವದನಿಃಸೃತಗೀತಸಾರಂ
ಗೋಪಾಂಗನಾ ಮುಮುಹುರತ್ರ ಸಸಾರ ಯಕ್ಷಃ ॥ ೭೬ ॥

ಅ॥ ಗೊಲ್ಲರಸ್ತ್ರೀಯರಿಂದ ಷೋಡಶಕಲೆಗಳಿಂದ ಪೂರ್ಣನಾದ ಚಂದ್ರನ ಕಿರಣಗಳಿಂದ ಪ್ರಕಾಶವಾನವಾದ ಮನೋಹರವಾದ ರಾತ್ರಿಯಲ್ಲಿ ಕುಮುದಪುಷ್ಪಗಳ ಸವಿಾಚೀನವಾದ ಪರಿಮಳವುಳ್ಳ ಗಾಳಿಯುಳ್ಳ ಆ ವೃಂದಾವನದಲ್ಲಿ ಶ್ರೀಕೃಷ್ಣನ ಮುಖದಿಂದ ಹೊರಟ ಗಾಯನಶ್ರೇಷ್ಠವನ್ನು ಕೇಳಿ ಮೂರ್ಛೆಯನ್ನು ಹೊಂದಿದರು. (ಮತ್ತು) ಕೃಷ್ಣನ ಕ್ರೀಡಾಸ್ಥಾನದಲ್ಲಿ ಯಕ್ಷನು (ಶ್ರೀಕೃಷ್ಣನನ್ನು) ಹೊಂದಿದನು.

ವಿಶೇಷಾಂಶ—ಮುಖನಿಃಸೃತಗೀತಸಾರಂ ಎಂದು ಹೇಳಿದ್ರಿಂದ ವೇಣುವಿಲ್ಲದೇನೇ ತನ್ನ ಮುಖದಿಂದಲೇ ಉಂಟಾದ ಗಾನಶ್ರೇಷ್ಠವು ತೋರಿಸಲ್ಪಟ್ಟಿತು ಎಂದು ಸೂಚಿತವಾಯಿತು.॥೭೬॥

ಮೂ ॥ ರುದ್ರಪ್ರಸಾದಕೃತರಕ್ಷ ಉತಾಸ್ಯ ಸಖ್ಯು-
ರ್ಭೃತ್ಯೋ ಬಲೀ ಖರತರೋऽಪಿ ಚ ಶಂಖಚೂಡಃ ।
ತಾಃ ಕಾಲಯನ್ ಭಗವತಸ್ತಲತಾಡನೇನ
ಮೃತ್ಯುಂ ಜಗಾಮ ಮಣಿಮುಸ್ಯ ಜಹಾರ ಕೃಷ್ಣಃ ॥ ೭೭ ॥

ಅ॥ ರುದ್ರದೇವರ ಪ್ರಸಾದದಿಂದ ಮಾಡಲ್ಪಟ್ಟ ರಕ್ಷಣೆಯುಳ್ಳ, ಮತ್ತು ಈ ರುದ್ರನಿಗೆ ಸಖಿಯಾದ (ಭೃತ್ಯನಾದ) ಕುಬೇರನ ಭೃತ್ಯನಾದ ಬಲವುಳ್ಳ, ಶಂಖಚೂಡನಾಮಕ ಯಕ್ಷನು ಆ ಗೋಪಿಯಂರನ್ನು ಓಡಿಸುವವನಾಗಿ (ಬಂದನು.) ಶಂಖಚೂಡನು ಅತಿ ಕ್ರೂರನಾದಾಗ್ಯೂ ಶ್ರೀಕೃಷ್ಣನ ಹಸ್ತತಲ ಪ್ರಹಾರದಿಂದ ಮರಣವನ್ನು ಹೊಂದಿದನು. ಶ್ರೀಕೃಷ್ಣನು ಈ ಶಂಖಚೂಡಾಸುರನ ಶಿರಸ್ಸಿನಲ್ಲಿರತಕ್ಕ ಮಣಿಯನ್ನು ಅಪಹರಿಸಿದನು. ॥ ೭೭ ॥

ಮೂ ॥ ನಾವಮ್ನಾಪ್ಯರಿಷ್ಟ ಉರುಗಾಯವಿಲೋಮಚೇಷ್ಟೋ
ಗೋಷ್ಠಂ ಜಗಾಮ ವೃಷಭಾಕೃತಿರಸ್ಯವಧ್ಯಃ ।
ಶಂಭೋರ್ವರಾದನುಗತಶ್ಚ ಸದೈವ ಕಂಸಂ
ಗಾ ಭೀಷಯಂತಮಮುಮಾಹ್ವಯದಾಶು ಕೃಷ್ಣಃ ॥ ೭೮ ॥

ಅ॥ ಶ್ರೇಷ್ಠರಾದ ಬ್ರಹ್ಮಾದಿಗಳಿಂದ ಗಾನಮಾಡಲ್ಪಡತಕ್ಕವನು, ಅಥವಾ ಬಹುಪ್ರಕಾರವಾಗಿ ನಾಮಾದಿಗಳಿಂದ ಗಾನಮಾಡತಕ್ಕವನು, ಅಥವಾ ಉತ್ತಮವಾದ ಕೀರ್ತಿಯುಳ್ಳವನು ಇಂತಹ ಶ್ರೀಕೃಷ್ಣನಿಗೆ ವಿಪರೀತವಾದ ಕರ್ಮವುಳ್ಳವನು ಗೋ ವೃಷಭಸ್ವರೂಪನು, ರುದ್ರದೇವರ ವರದ್ವೇಷಿಯಿಂದ (ಸರ್ವರಿಂದಲೂ) ಅವಧ್ಯನು, ಯಾವಾಗಲೂ ಕಂಸನನ್ನೇ ಅನುಸರಿಸಿಕೊಂಡು ಇರುವವನು, (ಅಂದರೆ ಕಂಸನ ಮನಸ್ಸನ್ನೇ ಅನುಸರಿಸಿಕೊಂಡಿರುವವನು.) ನಾಮದಿಂದ ಅರಿಷ್ಟಾಸುರನು ನಂದಗೋಕುಲವನ್ನು ಹೊಂದಿದನು. ಶ್ರೀಕೃಷ್ಣನು ಗೋವುಗಳನ್ನು ಹೆದರಿಸಿಕೊಂಡಿರುವ ಅರಿಷ್ಟಾಸುರನನ್ನು ಶೀಘ್ರದಲ್ಲಿ ಕರೆದನು. ॥ ೭೮ ॥

ಮೂ ॥ ಸೋऽಪ್ಯಾಸಾದ ಹರಿಮುಗ್ರವಿಷಾಣಕೋಟಿ-
ಮುಗ್ರೇ ನಿಧಾಯ ಜಗೃಹೇऽಸ್ಯ ವಿಷಾಣಮಾಶಃ
ಭೂಮೌ ನಿಪಾತ್ಯ ಚ ವೃಷಾಸುರಮುಗ್ರವೀರ್ಯಂ
ಯಜ್ಞೇ ಯಥಾ ಪಶುಮುನಾರಯದಗ್ರ್ಯಶಕ್ತಿಃ ॥ ೭೯ ॥

ಅ॥ ಆ ಅರಿಷ್ಟಾಸುರನಾದರೂ ಕ್ರೂರಗಳಾದ ಕೋಡಂಗಳ ಅಗ್ರಭಾಗವನ್ನು ಮುಂದೆ ಮಾಡಿಕೊಂಡು ಶ್ರೀಹರಿಯನ್ನು ಹೊಂದಿದನು. ಶ್ರೀಕೃಷ್ಣನು ವೃಷಭಾಕಾರವುಳ್ಳ ಅಸುರನ ಶೃಂಗವನ್ನು ಹಿಡಿದುಕೊಂಡನು. ಅಪರಿಮಿತ ಶಕ್ತಿಯುಳ್ಳ ಶ್ರೀಕೃಷ್ಣನು ಕ್ರೂರವಾದ ಪರಾಕ್ರಮವುಳ್ಳ ವೃಷಭಾಸುರನನ್ನು ಭೂಮಿಯಲ್ಲಿ ಕೆಡಹಾಕಿ ಯಾಗದಲ್ಲಿ ಪಶುವನ್ನೆಂಬಂತೆ ಸಂಹರಿಸಿದನು. ॥ ೭೯ ॥

ಮೂ॥ ಕೇಶೀ ತು ಕಂಸವಿಹಿತಸ್ತು ರಗಸ್ವರೂಪೋ
ಗಿರ್ಯಾತ್ಮ ಜಾವರಮವಾಪ್ಯ ಸದಾ ವಿಮೃತ್ಯುಃ।
ಪಾಪಃ ಸ ಕೇಶವಮವಾಪ ಮುಖೇಽಸ್ಯ ಬಾಹುಂ
ಪ್ರಾವೇಶಯತ್ಸ ಭಗವಾನ್ವವೃಧೇಽಸ್ಯ ದೇಹೇ ॥ ೮೦ ॥

ಅ॥ ಕಂಸನಿಂದ ಕಳುಹಿಸಿಕೊಳ್ಳಲ್ಪಟ್ಟ ಕುದುರೆಯಂ ಸ್ವರೂಪವುಳ್ಳ ಪಾರ್ವತಿಯಂ ವರವನ್ನು ಹೊಂದಿ ಯಾವಾಗಲೂ ಮರಣ ರಹಿತನಾದ ಕೇಶಿ ನಾಮಕನಾದ (ಯಾವ) ಪಾಪಿಷ್ಠನೋ, ಆತನು ಕೇಶವನನ್ನು ಹೊಂದಿದನು. ಆ ಶ್ರೀಕೃಷ್ಣನು ಕೇಶಿನಾಮಕ ಅಸುರನ ಬಾಯಿಯೊಳಗೆ (ತನ್ನ) ಭುಜವನ್ನು ಹೊಕ್ಕಿಸಿದನು. ಆ ಪೂಜ್ಯನಾದ ಶ್ರೀಕೃಷ್ಣನು ಈ ಕೇಶಿನಾಮಕನಾದ ಅಸುರನ ಶರೀರದಲ್ಲಿ ಬೆಳೆದನು. (ವೃದ್ಧಿಯನ್ನು ಹೊಂದಿದನು.)

ವಿಶೇಷಾಂಶ—ಬಾಹುನಾ ಭೋಗಿನಂ ಕೃತ್ವಾ ಮುಖೇ ತ್ವಸ್ಯ ಜನಾರ್ದನಃ। ಪ್ರವೇಶಯಾವಾಸ ತದಾ ಕೇಶಿನೋ ದುಷ್ಟವಾಜಿನಃ। ತಥಾ ಕೃಷ್ಣಸ್ಯ ವವೃಧೇ ಬಾಹುಃ ಎಂದು ವಿಷ್ಣುಪುರಾಣದಲ್ಲಿದೆ. ॥ ೮೦ ॥

ಮೂ ॥ ತತ್ಪ್ರಾದನಾಯ ಕುಮತಿಃ ಸ ಕೃತಪ್ರಯಾಸಃ
ಶೀರ್ಣಾಸ್ಯದಂತದಶನಚ್ಛದರುದ್ಧವಾಯುಃ।
ದೀರ್ಣಃ ಪಪಾತ ಚ ಮೃತೋ ಹರಿರಪ್ಯಶೇಷೈಃ
ಬ್ರಹ್ಮೇಶಶಕ್ರದಿನಕೃತ್ಪ್ರಮುಖೈಃ ಸ್ತುತೋಽಭೂತ್ ॥ ೮೧ ॥

ಅ॥ ಆ ಶ್ರೀಕೃಷ್ಣನ ಬಾಹುಗಳನ್ನು ಭಕ್ಷಿಸುವುದಕ್ಕಾಗಿ ಮಾಡಲ್ಪಟ್ಟ ಪ್ರಯತ್ನವುಳ್ಳ ಕುತ್ಸಿತವಾದ ಬುದ್ಧಿಯುಳ್ಳ ಆ ಕೇಶಿನಾಮಕ ಅಸುರನು ಶೀಳಿಸಲ್ಪಟ್ಟ ಮುಖವೂ ದಂತಗಳೂ ದಂತಗಳನ್ನು ಆಚ್ಛಾದನ ಮಾಡತಕ್ಕ ತುಟಿಗಳಿರಡೂ ಇವುಗಳುಳ್ಳವನಾಗಿಯೂ ಕುತ್ತಿಗೆಯಲ್ಲಿ ಹಸ್ತದ ವೃದ್ಧಿಯಿಂದ ತಡೆಯಲ್ಪಟ್ಟ ಶ್ವಾಸವಾಯುವುಳ್ಳವನಾಗಿಯೂ ಶೀಳಲ್ಪಟ್ಟ ದೇಹವುಳ್ಳವನಾಗಿಯೂ ಬಿದ್ದನು, ಮೃತನೂ ಆದನು, ಶ್ರೀಹರಿಯಾದರೂ ಬ್ರಹ್ಮ, ರುದ್ರ, ಇಂದ್ರ ಸೂರ್ಯನೇ ಮೊದಲಾಗಿ ಉಳ್ಳ ಎಲ್ಲಾ ದೇವತೆಗಳಿಂದಲೂ ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟವನು ಆದನು.

ವಿಶೇಷಾಂಶ—ದ್ವಿಷಾದಪುಚ್ಛಪ್ಲಷ್ಟಾರ್ಧಶ್ರವಣೈಕಾಕ್ಷಿನಾಸಿಕೇ। ಕೇಶಿನಸ್ತೇ ದ್ವಿಧಾ ಭೂತೇ ದ್ವೇತ್ವರ್ಧೇ ರೇಜತುಃ ಕ್ಷಿತೌ ॥ ಎಂದು ವಿಷ್ಣುಪುರಾಣದಲ್ಲಿ ಹೇಳಿದೆ. ॥ ೮೧ ॥

ಮೂ ॥ ವ್ಯೋಮಶ್ಚ ನಾಮ ಮಯಸೂನುರಜಪ್ರಸಾದಾತ್
ಲಬ್ಧಾಮಿತಾಯುರಖಿಲಾನ್ ವಿದಧೇ ಬಿಲೇ ಸಃ।
ತಂ ಶ್ರೀಪತಿಃ ಸುರಪತಿಃ ಪಶುಪದ್ವಿಶಸ್ಯ
ನಿಸ್ಸಾರಿತಾನ್ ಬಿಲಮುಖಾದಖಿಲಾಂಶ್ಚಕಾರ ॥ ೮೨ ॥

ಅ॥ ಮಯನಾವಕ ದೈತ್ಯನ ಪುತ್ರನಾದ ಬ್ರಹ್ಮನ ವರಪ್ರಸಾದದಿಂದ ಹೊಂದಲ್ಪಟ್ಟ ದೀರ್ಘಾಯುಷ್ಯವುಳ್ಳ ವ್ಯೋಮನೆಂದು ಪ್ರಸಿದ್ಧನಾದ ಯಾವ ಅಸುರನೋ ಆತನು ಎಲ್ಲಾ ಗೊಲ್ಲರನ್ನೂ ಗುಹೆಯಲ್ಲಿ ಇಟ್ಟನು. ದೇವತೆಗಳ ಅವತಾರಭೂತರಾದ ಎಲ್ಲಾ ಗೊಲ್ಲರಿಗೂ ಅಧಿಪತಿ

ಯಾದ ಲಕ್ಷ್ಮೀಪತಿಯೂ ಆದ ಶ್ರೀಕೃಷ್ಣನು ಆ ವ್ಯೋಮಾಸುರನನ್ನು ಪಶುವಿನಂತೆ ಸಂಹರಿಸಿ ಬಿಲದ ಮುಖದ್ದೆಸೆಯಿಂದ ಎಲ್ಲಾ ಗೊಲ್ಲರನ್ನೂ ಹೊರಪಡಿಸಿದವರನ್ನಾಗಿ ಮಾಡಿದನು. ॥ ೮೨ ॥

ಮೂ ॥ ಕುರ್ವತ್ಯನನ್ಯವಿಷಯಾಣಿ ದುರಂತಶಕ್ತೌ
ಕರ್ಮಾಣಿ ಗೋಕುಲಗತೇಽಖಿಲಲೋಕನಾಥೇ ।
ಕಂಸಾಯ ಸರ್ವಮವದತ್ಸುರಕಾರ್ಯಹೇತೋಃ
ಬ್ರಹ್ಮಾಂಕಜೋ ಮುನಿರಕಾರಿ ಯದೀಶಪಿತ್ರಾ ॥ ೮೩ ॥

ಅ॥ ಗೋಕುಲದಲ್ಲಿರತಕ್ಕ, ಅಪರಿಮಿತವಾದ ಶಕ್ತಿಯುಳ್ಳ, ಎಲ್ಲಾ ಲೋಕಗಳಿಗೂ ಸ್ವಾಮಿಯಾದ ಶ್ರೀಕೃಷ್ಣನು ಇತರರಿಂದ ಮಾಡಲಿಕ್ಕೆ ಅಶಕ್ಯಗಳಾದ ಕರ್ಮಗಳನ್ನು ಮಾಡುತ್ತಿರಲು ಬ್ರಹ್ಮನ ತೊಡೆಯಿಂದ ಹುಟ್ಟಿದ ನಾರದ ಮುನಿಯು ಜಗದೀಶ್ವರನಾದ ಶ್ರೀಕೃಷ್ಣನ ತಂದೆಯಾದ ವಸುದೇವನಿಂದ ಯಾವುದು ಮಾಡಲ್ಪಟ್ಟದೋ ಅವೆಲ್ಲವನ್ನೂ (ಅಂದರೆ ತನ್ನ ಮಗನಾದ ಶ್ರೀಕೃಷ್ಣನನ್ನು ಅರ್ಧರಾತ್ರಿ ಕಾಲದಲ್ಲಿ ನಂದಗೋಕುಲಕ್ಕೆ ತೆಗೆದುಕೊಂಡು ಹೋಗಿರುತ್ತಾನೆ ಇತ್ಯಾದಿಗಳೆಲ್ಲವನ್ನೂ) ಕಂಸನಿಗೋಸ್ಕರ ದೇವತೆಗಳ ಕಾರ್ಯನಿಮಿತ್ತವಾಗಿ ಹೇಳಿದನು.

ವಿಶೇಷಾಂಶ–ನಿರುಪಾಧಿಕವಾಗಿ ಕಂಸನನ್ನು ಸಂಹರಿಸುವುದು ಅಯುಕ್ತವಾಗಿರುವುದರಿಂದ ತನ್ನ ತಂದೆತಾಯಿಗಳನ್ನು ಶೃಂಖಲೆಯಲ್ಲಿ ಬಂಧಿಸಿದ್ದರಿಂದ ಆತನು ಅಪರಾಧಿಯಾಗಿರುತ್ತಾನೆ. ಆದಕಾರಣ ಕಂಸನನ್ನು ಶ್ರೀಕೃಷ್ಣನು ಸಂಹರಿಸುವುದು ಉಚಿತವೇ ಆಗುತ್ತದೆ ಎನ್ನುವ ದೇವತೆಗಳ ಕಾರ್ಯನಿಮಿತ್ತದಿಂದ ದುರ್ಗಾನಯನಾದಿ ರೂಪವಾದ ಎಲ್ಲಾ ಕರ್ಮಗಳನ್ನು ನಾರದ ಮುನಿಗಳು ಹೇಳಿರುವರು. ॥ ೮೩ ॥

ಮೂ ॥ ಶ್ರುತ್ವಾತಿಕೋಪರಭಸೋಚ್ಚಲಿತಸ್ಸ ಕಂಸೋ
ಬಧ್ವಾ ಸಭಾರ್ಯಮಥ ಶೂರಜಮುಗ್ರಕರ್ಮಾ ।
ಆಕ್ರೂರಮಾಶ್ವದಿಶದಾನಯನಾಯ ವಿಷ್ಣೋ
ರಾಮಾನ್ವಿತಸ್ಯ ಸಹ ಗೋಪಗಣೈ ರಥೇನ ॥ ೮೪ ॥

ಅ॥ ಅತ್ಯಂತ ಕೋಪದ ವೇಗದಿಂದ ಚಂಚಲವಾದ ಶರೀರವುಳ್ಳ ಕ್ರೂರವಾದ ಕರ್ಮವುಳ್ಳ ಆ ಕಂಸನು ಕೇಳಿ ಆಮೇಲೆ ದೇವಕಿಯಿಂದ ಕೂಡಿದ ವಸುದೇವನನ್ನು ಕಟ್ಟಿಹಾಕಿ, ಗೊಲ್ಲರ ಸಮುದಾಯಗಳಿಂದ ಕೂಡಿಕೊಂಡು ಬಲರಾಮನಿಂದ ಕೂಡಿದ ವಿಷ್ಣುವನ್ನ ರಥದಿಂದ ತರಿಸುವುದಕ್ಕಾಗಿ ಶೀಘ್ರದಲ್ಲಿ ಅಕ್ರೂರನನ್ನು ಆಜ್ಞಾಪಿಸಿದನು. ॥ ೮೪ ॥

ಅಕ್ರೂರನ ಮೂಲರೂಪವನ್ನು ಹೇಳುತ್ತಾರೆ—

ಮೂ. ॥ ಸಂಸೇವನಾಯ ಸ ಹರೇರಭವತ್ಪುರೈವ
ನಾಮ್ನಾ ಕಿಶೋರ ಇತಿ ಯಃ ಸುರಗಾಯಕೋಽಭೂತ್ ।
ಸ್ವಾಯಂಭುವಸ್ಯ ಚ ಮನೋಃ ಪರಮಾಂಶಯುಕ್ತ
ಆವೇಶಯುಕ್ಕಮಲಜಸ್ಯ ಬಭೂವ ವಿದ್ವಾನ್ ॥ ೮೫ ॥

ಅ॥ ಮೊದಲಂ ನಾಮಂದಿಂದ ಕಿಶೋರನೆಂದಂ ಪ್ರಸಿದ್ಧನಾದ ಯಾವ ದೇವಗಂಧರ್ವನಂ ಇರುತ್ತಿದ್ದನೋ, ಆ ಕಿಶೋರನಂ ಶ್ರೀಹರಿಯಂ ಸೇವೆಗೋಸ್ಕರವೇ ಆದನಂ. ಆತನಂ ಸ್ವಾಯಂಭುವ ಮಂಸಂವಿನ ಉತ್ತಮಂ ಅಂಶದಿಂದ ಕೂಡಿರುವನಂ, ಬ್ರಹ್ಮನ ಆವೇಶದಿಂದ ಕೂಡಿರುವವನಂ, ಜ್ಞಾನಿಯಾದವನೂ ಆದನಂ. ॥ ೪೫ ॥

ಮೂ ॥ ಸೋऽಕ್ರೂರ ಇತ್ಯಭವದುತ್ತಮಪೂಜ್ಯಕರ್ಮಾ
ವೃಷ್ಣಿಷ್ವಥಾಸ ಸ ಹಿ ಭೋಜಪತೇಶ್ಚ ಮಂತ್ರೀ ।
ಆದಿಷ್ಟ ಏವ ಜಗದೀಶ್ವರದೃಷ್ಟಿಹೇತೋ-
ರಾನಂದಪೂರ್ಣಸುಮನಾ ಅಭವತ್ ಕೃತಾರ್ಥಃ ॥ ೪೬ ॥

ಅ॥ ಉತ್ತಮನಾದ ಶ್ರೀಹರಿಯ ಪೂಜಾವಿಷಯಂಕವಾದ ಕರ್ಮವುಳ್ಳವನಂ, ಅಥವಾ ಸಜ್ಜನರಿಂದ ಮಾನ್ಯವಾದ ಕರ್ಮವುಳ್ಳವನಂ, ಅಥವಾ ಉತ್ತಮರಾದ ಬ್ರಹ್ಮಾದಿಗಳಿಂದ ಪೂಜ್ಯನಾದ ಶ್ರೀಹರಿಗೆ ಪ್ರೀತಿಕರವಾದ ಕರ್ಮವುಳ್ಳವನು ಅಂತಹ ಪುರುಷನಂ ಯಾದವ ವಿಶೇಷರಲ್ಲಿ ಅಕ್ರೂರನೆಂದು ಪ್ರಸಿದ್ಧನಾದನಂ. ಆಮೇಲೆ ಆ ಅಕ್ರೂರನೇ ಕಂಸನಿಗೆ ಮಂತ್ರಿಯೂ ಆದನು. ಕಂಸನಿಂದ ಆಜ್ಞಾಪಿಸಿಕೊಳ್ಳಲ್ಪಟ್ಟ ಆ ಅಕ್ರೂರನೇ ಜಗದೀಶ್ವರನಾದ ಶ್ರೀಕೃಷ್ಣನ ದರ್ಶನನಿಮಿತ್ತವಾಗಿ ಆನಂದದಿಂದ ಪೂರ್ಣವಾದ ಶೋಭನ ಮನಸ್ಸುಳ್ಳವನಾಗಿ ಮಾಡಲ್ಪಟ್ಟ ಪ್ರಯೋಜನವುಳ್ಳವನಾಗಿ (ಅಂದರೆ ಕೃತಕೃತ್ಯನಾಗಿ) ಆದನಂ. ॥ ೪೬ ॥

ಮೂ ॥ ಆರುಹ್ಯ ತದ್ರಥವರಂ ಭಗವತ್ಪದಾಬ್ಜ-
ಮುಚ್ಚೈರ್ಭವಪ್ರಣತಮಂತರಮಂತರೇಣ ।
ಸಂಚಿಂತಯನ್ ಪಥಿ ಜಗಾಮ ಸ ಗೋಷ್ಠಮಾರಾತ್
ದೃಷ್ಟ್ವಾ ಪದಾಂಕಿತಭುವಂ ಮನಸಾನಂದೇ ಪರಸ್ಯ ॥ ೪೭ ॥

ಅ॥ ಆ ಅಕ್ರೂರನು ಆ ರಥಶ್ರೇಷ್ಠವನ್ನು ಅಥವಾ ಕೃಷ್ಣನಿಗೋಸ್ಕರ ಕಳುಹಿಸಿಕೊಳ್ಳಲ್ಪಟ್ಟ ರಥಶ್ರೇಷ್ಠವನ್ನು ಏರಿ ಬ್ರಹ್ಮನಿಂದ ನಮಸ್ಕರಿಸಿಕೊಳ್ಳಲ್ಪಟ್ಟ ಶ್ರೀಹರಿಯಂ ಪಾದಕಮಲವನ್ನು ವ್ಯವಧಾನವನ್ನುಹೊರತಂ ನಿರಂತರದಲ್ಲಿಯೂ ಮಾರ್ಗದಲ್ಲಿ ಧ್ಯಾನಿಸುವವನಾಗಿ ಅಥವಾ ಹೃದಯಂ ದೊಳಗೆ ಇರತಕ್ಕ ಶ್ರೀಹರಿಯನ್ನು ಮಾರ್ಗದಲ್ಲಿ ಚಿತ್ತದಿಂದ ಧ್ಯಾನಿಸುವವನಾಗಿ ನಂದಗೋಕುಲವನ್ನು ಕುರಿತಂ ಹೋದನು. ನಂದಗೋಕುಲದ ಸಮೀಪದಲ್ಲಿ ಶ್ರೀಕೃಷ್ಣನ ಪಾದದಿಂದ ಚಿಹ್ನಿತವಾದ ಭೂಮಿಯಂನ್ನು ದೂರದಿಂದ ನೋಡಿ ಸಂತೋಷಪಟ್ಟನು. ॥ ೪೭ ॥

ಮೂ ॥ ಸೋऽಚೇಷ್ಟತಾತ್ರ ಜಗದೀಶಿತುರಂಗಸಂಗಾತ್
ಲಬ್ಧೋಚ್ಚತೈವ ನಿಖಿಲಾಘವಿದಾರಣೇಷು ।
ಪಾಂಸುಷ್ವಜೇಶಪುರುಹೂತಮುಖೋಚ್ಚವಿದ್ಯುದ್-
ಭ್ರಾಜತ್ಕಿರೀಟಮಣಿಲೋಚನಗೋಚರೇಷು ॥ ೪೮ ॥

ಅ॥ ಆ ಅಕ್ರೂರನು ಈ ಭೂಲೋಕದಲ್ಲಿ ಸರ್ವಜಗತ್ತಿಗೆ ಸ್ವಾಮಿಯಾದ ಶ್ರೀಕೃಷ್ಣನ ಪಾದಾಂಗದ ಸಂಬಂಧದೆಸೆಯಿಂದ ಹೊಂದಲ್ಪಟ್ಟ ಉತ್ತಮತ್ವದಿಂದ (ಅಂದರೆ ಉತ್ತಮಂತ್ವವನ್ನು ಹೊಂದಿರುವುದರಿಂದ)ಸರ್ವಪಾಪಗಳನ್ನು ವಿನಾಶಪಡಿಸತಕ್ಕ ಬ್ರಹ್ಮನು,ರುದ್ರನು, ದೇವೇಂದ್ರನು

ಇವರೇ ಮುಂತ್ತಾಗಿ ಉಳ್ಳವರೂ ಶ್ರೇಷ್ಠಗಳಾದ ಕಾವಲಾದಿಗಳೂ ಇವುಗಳ ವಿಂಚಿನಂತೆ ಪ್ರಕಾಶವಾನಗಳಾದ ಕಿರೀಟದಲ್ಲಿರತಕ್ಕ ಮಣಿಗಳೂ ನಯನಗಳೂ ಇವುಗಳಿಗೆ ವಿಷಯಂಗಳಾದ (ಅಂದರೆ ಶಿರಸ್ಸಿನಿಂದ ನಮಸ್ಕರಿಸಿಕೊಳ್ಳಲ್ಪಡತಕ್ಕವುಗಳೂ ಕಣ್ಣಿಗಳಿಂದ ಆದರಪೂರ್ವಕವಾಗಿ ಕಾಣಲ್ಪಡತಕ್ಕವುಗಳೂ) ಇಂತಹ ಧೂಳಿಗಳಲ್ಲಿ ಹೊರಳಾಡಿದನು. ॥ ೮೮ ॥

ಮೂ ॥ ಸೋಽಪಶ್ಯತಾಥ ಜಗದೇಕಗುರುಂ ಸಮೇತ-
ಮಗ್ರೋದ್ಭವೇನ ಭುವಿ ಗಾ ಅಪಿ ದೋಹಯಂತಂ ।
ಆನಂದಸಾಂದ್ರತನುಮಕ್ಷಯಮೇನವಿಗ್ರಹ್ಯ
ಹೃಷ್ಟಃ ಪಪಾತ ಪದಯೋಃ ಪುರುಷೋತ್ತಮಸ್ಯ ॥ ೮೯ ॥

ಅ॥ ಆಮೇಲೆ ಅಕ್ರೂರನು ಜಗತ್ತಿಗೆ ಮುಂಚ್ಯೆ ಗುರುವಾದ ಮೊದಲು ಹುಟ್ಟಿದ ಬಲರಾಮನಿಂದ ಕೂಡಿದ ಭೂಲೋಕದಲ್ಲಿಯೂ ಕೂಡ ತಾನೂ ಕೂಡ ಗೋವುಗಳನ್ನು ಕರೆಯಂತಕ್ಕ ಅಥವಾ ಪಾತ್ರದಲ್ಲಿ ಪೂರ್ಣೀಕರಿಸತಕ್ಕ ಸಂತೋಷದಿಂದ ನಿಬಿಡವಾದ ಶರೀರವುಳ್ಳ ನಾಶರಹಿತನಾದ ಈ ಶ್ರೀಕೃಷ್ಣನನ್ನು ನೋಡಿ ಸಂತುಷ್ಟನಾದವನಾಗಿ ಕ್ಷರ ಅಕ್ಷರ ಪುರುಷರಿಂದುತ್ತಮನಾದ ಶ್ರೀಕೃಷ್ಣನ ಪಾದಗಳಲ್ಲಿ ಬಿದ್ದನು. ॥ ೮೯ ॥

ಮೂ ॥ ಉತ್ಥಾಪ್ಯ ತಂ ಯದುಪತಿಃ ಸಬಲೋ ಗೃಹಂ ಸ್ವಂ
ನೀತ್ವೋಪಚಾರಮಖಿಲಂ ಪ್ರವಿಧಾಯ ತಸ್ಮಿನ್ ।
ನಿತ್ಯೋದಿತಾಕ್ಷಯಚಿದಪ್ಯಖಿಲಂ ಸ ತಸ್ಮಾತ್
ಶುಶ್ರಾವ ಲೋಕಚರಿತಾನುವಿಡಂಬನೇನ ॥ ೯೦ ॥

ಅ॥ ಬಲರಾಮನಿಂದ ಕೂಡಿದ ಶ್ರೀಕೃಷ್ಣನು ಆ ಅಕ್ರೂರನನ್ನು ಎಬ್ಬಿಸಿ ತನ್ನ ಮನೆಯನ್ನು ಕುರಿತು ಕರಕೊಂಡು ಹೋಗಿ ಎಲ್ಲಾ ಷೋಡಶೋಪಚಾರವನ್ನು ಆ ಅಕ್ರೂರನಲ್ಲಿ ಮಾಡಿ ನಿತ್ಯವಾದ ಪ್ರಕಟೀಭೂತವಾದ ಹ್ರಾಸರಹಿತವಾದ ಜ್ಞಾನವುಳ್ಳವನಾದಾಗ್ಯೂ ಆ ಶ್ರೀಕೃಷ್ಣನು ಲೋಕಚರಿತ್ರೆಯ ಅನುಕರಣದಿಂದ ಆ ಅಕ್ರೂರನಿಂದೆಸೆಯಿಂದ ಎಲ್ಲಾ ಆಗಮನಾದಿ ಕಾರಣವನ್ನು ಕೇಳಿದನು. ॥ ೯೦ ॥

ಮೂ ॥ ಶ್ರುತ್ವಾ ಸ ಕಂಸಹೃದಿ ಸಂಸ್ಥಿತಮುಜ್ಜನಾಭಃ
ಪ್ರಾತಸ್ತು ಗೋಪಸಹಿತೋ ರಥಮಾರುರೋಹ ।
ರಾಮಃ ಶ್ವಫಲ್ಕತನಯಾಭಿಯುತೋ ಜಗಾಮ
ಯಾನೇನ ತೇನ ಯಮುನಾತಟಮವ್ಯಯಾತ್ಮಾ ॥ ೯೧ ॥

ಅ॥ ಕಮಲವು ನಾಭಿಯಲ್ಲುಳ್ಳ ಆ ಶ್ರೀಕೃಷ್ಣನು ಕಂಸನ ಹೃದಯದಲ್ಲಿ ಇದ್ದುದನ್ನು ಕೇಳಿ ಪ್ರಾತಃಕಾಲದಲ್ಲಿ ಆದರೂ ಗೊಲ್ಲರಿಂದ ಕೂಡಿದವನಾಗಿ ರಥವನ್ನು ಏರಿದನು. ನಾಶರಹಿತನಾದ ಶ್ರೀಕೃಷ್ಣನು, ಬಲರಾಮನೂ ಶ್ವಫಲ್ಕನ ಮಗನಾದ ಅಕ್ರೂರನೂ ಇವ್ವರಿಬ್ಬರಿಂದ ಕೂಡಿದವನಾಗಿ ಕಂಸನು ಕಳುಹಿಸಿದ ರಥದಿಂದ ಯಮುನಾನದಿಯ ತಟವನ್ನು ಕುರಿತು ಹೋದನು. ॥ ೯೧ ॥

ಮೂ ॥ ಸಂಸ್ಥಾಪ್ಯ ತೌ ರಥವರೇ ಜಗತಾಭಿವಂದ್ಯೌ
ಶ್ವಾಫಲ್ಕರಾಶ್ವತತಾರ ಯಮುನ್ಸ್ವಸಾರಂ।
ಸ್ನಾತ್ವಾ ಸ ತತ್ರ ವಿಧಿನೈವ ಕೃತಾಘಮರ್ಷಃ
ಶೇಷಾಸನಂ ಪರಮಪೂರುಷಮತ್ರ ಚೈಕ್ಷತ್ ॥ ೯೨ ॥

ಅ॥ ಅಕ್ರೂರನು ಜಗತ್ತಿನಿಂದ ನಮಸ್ಕರಿಸಿಕೊಳ್ಳಲ್ಪಡತಕ್ಕ ಮತ್ತು ಸ್ತುತಿಸಿಕೊಳ್ಳಲ್ಪಡತಕ್ಕ ಆ ರಾಮಕೃಷ್ಣರನ್ನು ರಥಶ್ರೇಷ್ಠದಲ್ಲಿಯೇ ಇರಿಸಿ ತತ್‌ಕ್ಷಣದಲ್ಲಿಯೇ (ತಾನು ರಥದ್ದಿಸೆಯಿಂದ) ಕೆಳಗೆ ಇಳಿದನು, ಆ ಅಕ್ರೂರನು ಯಮುನಾನದಿಯನ್ನು (ಹೊಂದಿ) ಆ ಯಮುನಾನದಿಯಲ್ಲಿ ವಿಧಿಪೂರ್ವಕವಾಗಿಯೇ ಸ್ನಾನವಾಡಿ ಮಾಡಲ್ಪಟ್ಟ ಅಘಮರ್ಷಣ ವಿಧಿಯುಳ್ಳವನಾಗಿ ಶೇಷನ ಮೇಲೆ ಕುಳಿತಿರತಕ್ಕ ಸರ್ವೋತ್ತಮನಾದ ಶ್ರೀಕೃಷ್ಣನನ್ನು ಈ ಜಲದಲ್ಲಿ ಕಂಡನು, ॥ ೯೨ ॥

ಮೂ ॥ ನಿತ್ಯಂ ಹಿ ಶೇಷಮಭಿಪಶ್ಯತಿ ಸಿದ್ಧಮಂತ್ರೋ
ದಾನೇಶ್ವರಃ ಸ ತು ತದಾ ದದೃಶೇ ಹರಿಂ ಚ।
ಅಗ್ರೇ ಹಿ ಬಾಲತನುಮತ್ರ ಸಮೀಕ್ಷ್ಯ ಕೃಷ್ಣಃ
ಕಿಂ ನಾಸ್ತಿ ಯಾನ ಇತಿ ಯಾನಮುಖೋ ಬಭೂವ ॥ ೯೩ ॥

ಅ॥ ಸಿದ್ಧವಾದ ಅಘಮರ್ಷಣ ಮಂತ್ರವುಳ್ಳ ದಾನಿಗಳಿಗೆ ಅಧಿಪತಿಯಾದ ಅಕ್ರೂರನು ನಿರಂತರದಲ್ಲಿಯೂ ಶೇಷನನ್ನು ನೋಡುತ್ತಾನೆ. ಆ ದಿನದಲ್ಲಿಯೇ ಶೇಷನಲ್ಲಿರತಕ್ಕ ಶ್ರೀಹರಿಯನ್ನೂ ಕೂಡ ಕಂಡನು.(ಅಂತೂ ಇಬ್ಬರನ್ನೂ ನೋಡಿದನು.)ಆ ಅಕ್ರೂರನು ಈ ಯಮುನಾನದಿಯಲ್ಲಿ ಶೇಷನ ಮುಂಭಾಗದಲ್ಲಿ ಬಾಲಕನ ಶರೀರದಂತೆ ಶರೀರವುಳ್ಳ ಶ್ರೀಕೃಷ್ಣನನ್ನೂ ನೋಡಿ, ಶ್ರೀಕೃಷ್ಣನು ರಥದಲ್ಲಿ ಇಲ್ಲವೋ ಏನು ಎಂದು ಚೆನ್ನಾಗಿ (ವಿಚಾರಮಾಡಿ) ರಥಕ್ಕೆ ಅಭಿಮುಖನಾದನು, ॥ ೯೩ ॥

ಮೂ ॥ ತತ್ರಾಪಿ ಕೃಷ್ಣಮಭಿನೀಕ್ಷ್ಯ ಪುನರ್ನಿಮಜ್ಯ
ಶೇಷೋರುಭೋಗಶಯನಂ ಪರಮಂ ದದರ್ಶ।
ಬ್ರಹ್ಮೇಶಶಕ್ರಮುಖದೇವಮುನೀಂದ್ರಬೃಂದ-
ಸಂವಂದಿತಾಂಘ್ರಿಯುಗಮಿಂದಿರಯಾ ಸಮೇತಂ ॥ ೯೪ ॥

ಅ॥ ಆ ರಥದಲ್ಲಿಯೂ ಶ್ರೀಕೃಷ್ಣನನ್ನು ನೋಡಿ ಪುನಃ ಮುಳುಗಿ ಸ್ನಾನವಾಡಿ ಯಾನದಲ್ಲಿಯೂ ಕೂಡ ಶೇಷನ ಉತ್ತಮ ಶರೀರವೇ ಹಾಸಿಗೆಯಾಗಿ ಉಳ್ಳ(ಅಂದರೆ ಶೇಷಶಾಯಿಯಾದ) ಬ್ರಹ್ಮ, ರುದ್ರ, ದೇವೇಂದ್ರ ಇವರೇ ಮೊದಲಾಗಿ ಉಳ್ಳ ದೇವತೆಗಳೂ ಮುನಿಶ್ರೇಷ್ಠರೂ ಇವರ ಸಮೂಹದಿಂದ ಚೆನ್ನಾಗಿ ನಮಸ್ಕರಿಸಿಕೊಳ್ಳಲ್ಪಡತಕ್ಕ ಎರಡು ಪಾದಗಳುಳ್ಳ ಲಕ್ಷ್ಮಿಯಿಂದ ಸಮೇತನಾದ ಸರ್ವೋತ್ತಮನಾದ ಶ್ರೀಕೃಷ್ಣನನ್ನು ಕಂಡನು. ॥ ೯೪ ॥

ಮೂ ॥ ಸ್ತುತ್ವಾ ವರಸ್ತುತಿಭಿರವ್ಯಯಮುಬ್ಜನಾಭಂ
ಸೋऽಂತರ್ಹಿತೇ ಭಗವತಿ ಸ್ವಕಮಾರುರೋಹ।

ಯಾನಂ ಚ ತೇನ ಸಹಿತೋ ಭಗವಾಞ್ಜಗಾಮ
ಸಾಯಂ ಪುರೀಂ ಸಹಬಲೋ ಮಧುರಾಮನಂತಃ ॥೯೫॥

ಅ॥ ಆ ಅಕ್ರೂರನಂ ಉತ್ಕೃಷ್ಟಗಳಾದ ಸ್ತೋತ್ರಗಳಿಂದ ನಾಶರಹಿತನಾದ ಪದ್ಮನಾಭನನ್ನು ಸ್ತೋತ್ರಮಾಡಿ ಶ್ರೀಹರಿಯಂ ಅಂತರ್ಹಿತ (ಅದೃಶ್ಯ) ನಾಗುತ್ತಿರಲುಂ ತನ್ನ ರಥವನ್ನು ಏರಿದನಂ. ಬಲರಾಮನಿಂದ ಕೂಡಿದ ನಾಶರಹಿತನಾದ ಪೂಜ್ಯನಾದ ಶ್ರೀಕೃಷ್ಣನು ಆ ಅಕ್ರೂರನಿಂದ ಕೂಡಿದವನಾಗಿ ಸಾಯಂಕಾಲದಲ್ಲಿ ಮಧುರಾಪಟ್ಟಣವನ್ನು ಕುರಿತು ಹೋದನು. ॥೯೫॥

ಮೂ ॥ ಅಗ್ರೇಽಥ ದಾನಪತಿಮುಕ್ಷ್ಣಯಪೌರುಷೋಽಸಾ-
ವೀಶೋ ವಿಸೃಜ್ಯ ಸಬಲಃ ಸಹಿತೋ ಮಯಸ್ಯೈಃ ।
ದ್ರಷ್ಟುಂ ಪುರೀಮುಭಿಜಗಾಮ ನರೇಂದ್ರಮಾರ್ಗೇ
ಪೌರೈಃ ಕುತೂಹಲಯುತೈರಭಿಪೂಜ್ಯಮಾನಃ ॥ ೯೬ ॥

ಅ॥ ಪಟ್ಟಣವನ್ನು ಹೊಂದಿದಮೇಲೆ ಅವಿನಾಶಿಯಾದ ಸಾಮರ್ಥ್ಯವುಳ್ಳ, ಬಲರಾಮನಿಂದ ಕೂಡಿದ, ಸಮಾನವಯಸ್ಕರಿಂದ ಕೂಡಿದ ಸರ್ವಸಮರ್ಥನಾದ ಈ ಶ್ರೀಕೃಷ್ಣನು ಅಕ್ರೂರನನ್ನು ಮೊದಲು ಕಳುಹಿಸಿಕೊಟ್ಟು, ರಾಜಮಾರ್ಗದಲ್ಲಿ ಕೌತುಕದಿಂದ ಯುಕ್ತರಾದ ಪಟ್ಟಣದಲ್ಲಿ ಅವಾಸ ಮಾಡುವವರಿಂದ ಚೆನ್ನಾಗಿ ಪೂಜಿಸಿಕೊಳ್ಳಲ್ಪಡುವವನಾಗಿ ಪಟ್ಟಣವನ್ನು ನೋಡಲಿಕ್ಕೆ ಹೋದನು. ॥ ೯೬ ॥

ಮೂ ॥ ಆಸಾದ್ಯ ಕುಂಜರಗತಂ ರಜಕಂ ಯಯಾಚೇ
ವಸ್ತ್ರಾಣಿ ಕಂಸದಯಿತಂ ಗಿರಿಜಾವರೇಣ ।
ಮೃತ್ಯ್ವಾಜ್ಞಿತಂ ಸಪದಿ ತೇನ ದುರುಕ್ತಿ ವಿದ್ಧಂ
ಪಾಪಂ ಕರಾಗ್ರಮೃದಿತಂ ವ್ಯನಯದ್ಯಮಾಯ ॥ ೯೭ ॥

ಅ॥ (ಶ್ರೀಕೃಷ್ಣನಂ) ಕಂಸನಿಗೆ ಪ್ರಿಯಂನಾದ ಪಾರ್ವತೀ ವರದಿಂದ ಮರಣ ರಹಿತನಾದ ಆನೆಯಮೇಲೆ ಕುಳಿತಿರತಕ್ಕ ಮಂಡಿವಾಳನನ್ನು ಹೊಂದಿ ವಸ್ತ್ರಗಳನ್ನು ಬೇಡಿದನಂ. ಅದೇ ಕ್ಷಣದಲ್ಲಿಯೇ ಆ ಮಂಡಿವಾಳನಿಂದ ಕ್ರೂರ ವಚನಗಳಿಂದ ನಿಂದಿಸಿಕೊಳ್ಳಲ್ಪಟ್ಟವನಾಗಿ ಹಸ್ತತಲದಿಂದ ಮರ್ದಿತನಾದ ಪಾಪಿಷ್ಠನಾದ ರಜಕನನ್ನು ಯಮಲೋಕಕ್ಕೋಸ್ಕರ (ಶ್ರೀಕೃಷ್ಣನು) ಕಳುಹಿಸಿ ಕೊಟ್ಟನಂ. ॥ ೯೭ ॥

ಮೂ ॥ ಹತ್ವಾ ತಮುಕ್ಷತಬಲೋ ಭಗವಾನ್ ಪ್ರಗೃಹ್ಯ
ವಸ್ತ್ರಾಣಿ ಚಾತ್ಮ ಸಮಿತಾನಿ ಬಲಸ್ಯ ಚಾದಾತ್ ।
ದತ್ವಾಪರಾಣಿ ಸಖಿಗೋಪಜನಸ್ಯ ಶಿಷ್ಟ್ವಾ-
ನ್ಯಾಸ್ತೀರ್ಯ ತತ್ರ ಚ ಪದಂ ಪ್ರಣಿಧಾಯ ಚಾಗಾತ್ ॥ ೯೮ ॥

ಅ॥ ಅಪರಿಮಿತ ಸಾಮರ್ಥ್ಯವುಳ್ಳ ಪೂಜ್ಯನಾದ ಶ್ರೀಕೃಷ್ಣನು ಆ ರಜಕನನ್ನು ಸಂಹರಿಸಿ ತನಗೆ ಯೋಗ್ಯಗಳಾದ ವಸ್ತ್ರಗಳನ್ನು ಸ್ವೀಕರಿಸಿ ಬಲರಾಮನಿಗೂ ಯೋಗ್ಯಗಳಾದ ವಸ್ತ್ರಗಳನ್ನೂ ಕೊಟ್ಟನಂ. ಸಖಿಭೂತರಾದ ಗೊಲ್ಲರ ಸಮುದಾಯಕ್ಕೂ ಇತರಗಳಾದ ವಸ್ತ್ರಗಳನ್ನು ಕೊಟ್ಟು

ಉಳಿದ ವಸ್ತ್ರಗಳನ್ನು ವಸ್ತ್ರಾರ್ಗದಲ್ಲಿ ಬಿಡಿಸಿ ವಸ್ತ್ರಾರ್ಗದಲ್ಲಿ ಬಿಡಿಸಿದ ವಸ್ತ್ರಗಳಲ್ಲಿ ಪಾದವಿನ್ಯಾಸವನ್ನು ವಹಿಸಿ ಹೋದನು. ॥ ೯೮ ॥

ಮೂ ॥ ಗ್ರಾಹ್ಯಾಪಹೇಯುರಹಿತೈಕಚಿದಾತ್ಮಸಾಂದ್ರ-
ಸ್ವಾನಂದಪೂರ್ಣವಪುರಪ್ಯಯಶೋಷಹೀನಃ ।
ಲೋಕಾನ್ವಿಡಂಬ್ಯ ನರವತ್ಸ್ವಮಲಕ್ತಕಾದ್ಯೈ-
ರ್ವಪ್ತ್ರಾ ವಿಭೂಷಿತ ಇವಾಭವದಪ್ರಮೇಯಃ ॥ ೯೯ ॥

ಅ॥ ಗ್ರಾಹ್ಯತಃ= (ಸ್ವೀಕರಿಸಲಿಕ್ಕೆ ಯೋಗ್ಯವಾಗುವಿಕೆ) ಅಪಹೇಯತ್ವ= (ಬಿಡಲಿಕ್ಕೆ ಯೋಗ್ಯವಾಗುವಿಕೆ.) ಇವುಗಳಿಂದ ವಿರಹಿತವಾದ (ಅಂದರೆ ಕೇವಲ ಗ್ರಾಹ್ಯವೇ ಆದ) ಮುಖ್ಯ ಜ್ಞಾನಾತ್ಮಕವಾದ ನಿಬಿಡವಾದ ಸ್ವರೂಪಭೂತವಾದ ಆನಂದಿಂದ ಪೂರ್ಣವಾದ ಶರೀರವುಳ್ಳವನೂ ವೃದ್ಧಿಹ್ರಾಸಗಳಿಂದ ರಹಿತನಾದಾಗ್ಯೂ (ಅಂದರೆ ನಖಿಲೋಪಾದ್ಯವಯವಗಳ ವೃದ್ಧಿಹ್ರಾಸಗಳಿಂದ ರಹಿತನಾದ ತಿಳಿಯಲಶಕ್ಯನಾದ ಶ್ರೀಕೃಷ್ಣನು ಲೋಕಗಳನ್ನು ಅನುಕರಿಸಿ ಮನುಷ್ಯನಂತೆ ಸಮೀಚೀನವಾದ ಲಾಕ್ಷಾ ವಿಕಾರ ಮೊದಲಾದ ಧಾತುಗಳಿಂದಲೂ ವಪನವನ್ನು ಮಾಡತಕ್ಕ ನಾಪಿತನಿಂದ ಅಲಂಕರಿಸಿಕೊಳ್ಳಲ್ಪಟ್ಟವನಂತೆ ಆದನು. ॥ ೯೯ ॥

ಮೂ ॥ ಮೌಲಾವಮುವಾಪ್ಯ ಚ ಸುದಾಮತ ಆತ್ಮತಂತ್ರ-
ಸ್ತಾವಚ್ಛಯೋಽನುಜಗೃಹೇ ನಿಜಪಾರ್ಷದಾಂ ಹಿ ।
ಪೂರ್ವಂ ವಿಕುಂಠಸದನಾದ್ಧರಿಸೇವನಾಯ
ಪ್ರಾಪ್ತೌ ಭುವಂ ಮೃಜನಪುಷ್ಪಕರೌ ಪುರಾಪಿ ॥ ೧೦೦ ॥

ಅ॥ ನಾಶರಹಿತನಾದ ಶ್ರೀಕೃಷ್ಣನು ಸರ್ವಸ್ವತಂತ್ರನಾದಾಗ್ಯೂ ಸುದಾಮನೆನ್ನುವ ಮಾಲಾಕಾರನ ದೆಸೆಯಿಂದ ಮಾಲಿಕೆಯನ್ನು ಹೊಂದಿ ಅನುಗ್ರಹಿಸಿರುವನು. ಯಾವ ಕಾರಣದಿಂದ ಪೂರ್ವಜನ್ಮದಲ್ಲಿ ಆ ನಾಪಿತ ಮಾಲಾಕಾರರು ತನ್ನ (ಶ್ರೀಹರಿಯು) (ಸೇವಕರು) ಶ್ರೀನಾರಾಯಣನ ವೈಕುಂಠಸ್ಥಾನದ್ದೆಸೆಯಿಂದ ಶ್ರೀಕೃಷ್ಣನನ್ನು ಸೇವಿಸುವುದಕ್ಕಾಗಿ ಭೂಲೋಕವನ್ನು ಹೊಂದಿರುವರೋ, (ಆದುದರಿಂದಲೇ) ಅನುಗ್ರಹಿಸಿರುವನು, ಪೂರ್ವಜನ್ಮದಲ್ಲಿಯೂ ಕೂಡ (ಇವರು) ನಖಿಶ್ಮಶ್ರ್ವಾದಿ ಮುಂಡನ ಪುಷ್ಪಮಾಲಿಕೆ ಇವುಗಳನ್ನು ಮಾಡತಕ್ಕ ಪಾರ್ಷದರೇ.

ವಿಶೇಷಾಂಶ—(1) ನಾಪಿತನು ಅಲಂಕಾರಕ್ಕಾಗಿ ಯಥಾಯೋಗ್ಯವಾಗಿ ನಖಿಶ್ಮಶ್ರ್ವಾದಿಗಳನ್ನು ಸ್ವಲ್ಪಸ್ವಲ್ಪ ಛೇದಿಸುತ್ತಾನೆ. ಆದರೆ ಆಗ ಶ್ರೀಕೃಷ್ಣನು ಆನಂದಮಯವಾದ ಶೋಭನ ನಖಾದಿಗಳನ್ನು ತನ್ನ ಶಕ್ತಿಯಿಂದಲೇ ಹೇಗೆ ಅಲಂಕಾರವಾಗುವುದೋ ಹಾಗೆ ಸಂಕೋಚಮಾಡಿ ಪ್ರಾಕೃತ ನಖಿಕೇಶಾಗ್ರಾದಿಗಳನ್ನು ನಿರ್ಮಾಣಮಾಡಿ ಕೆಳಗೆ ಬೀಳಿಸುತ್ತಾನೆಂದು ಜ್ಞಾನಿಗಳು ತಿಳಿದುಕೊಳ್ಳುತ್ತಾರೆ. ಅಜ್ಞಾನಿಗಳಾದರೂ ಶ್ರೀಕೃಷ್ಣನಿಗೂ ನಮ್ಮಂತೆಯೇ ಪ್ರಾಕೃತ ನಖಿಕೇಶಾದಿಗಳೇ ಅವುಗಳನ್ನು ನಾಪಿತನು ಮಾಡಿಸುತ್ತಾನೆಂದು ತಿಳಿದುಕೊಳ್ಳುತ್ತಾರೆ. ತಥಾಚ ಜ್ಞಾನಿಗಳಿಗಾದರೂ ನಾವು ಹಿಂದೆಹೇಳಿದ ಪ್ರಕಾರ ತತ್ವವನ್ನೇ ತಿಳಿಸುತ್ತಾನೆ, ಇಲ್ಲವಾದರೆ ಘನೀಭೂತವಾದ ಶತಕೋಟಿ ಯೋಜನ ಪ್ರಮಾಣವಾದ ಸುವರ್ಣಾತ್ಮಕವಾದ ಬ್ರಹ್ಮಾಂಡವನ್ನು ಭೇದಿಸಿದರೂ ಭಿನ್ನವಾಗದಿರುವ ನಖಾಗ್ರವನ್ನು ಯಾವನು ಭೇದಿಸಿಯಾನು? ॥ ೧೦೦ ॥

ಮೂ ॥ ಸರ್ವೇಷ್ಟಪುಷ್ಟಿವಿಹ ತತ್ರ ಸ್ವರೂಪತಾಂ ಚ
ಕೃಷ್ಣಸ್ತಯೋರ್ವರಮದಾದಥ ರಾಜವರ್ಗೇ ॥
ಗಚ್ಛನ್ ದದರ್ಶ ವನಿತಾಂ ನರದೇವಯೋಗ್ಯ–
ಮಾದಾಯ ಗಂಧಮಧಿಕಂ ಕುಟಿಲಾಂ ವ್ರಜಂತೀಂ ॥ ೧೦೧ ॥

ಅ॥ ಶ್ರೀಕೃಷ್ಣನು ಆ ನಾಪಿತ, ಮಾಲಾಕಾರ ಇಬ್ಬರು ಪಾರ್ಷದರಿಗೂ ಈ ಭೂಲೋಕದಲ್ಲಿ ಎಲ್ಲಾ ಅಭೀಷ್ಟಗಳ ಪೂರ್ತಿಯನ್ನೂ, ಆ ವೈಕುಂಠ ಲೋಕದಲ್ಲಿ ಸಾಮಾನ್ಯರೂಪವಾದ ವರವನ್ನೂ ಕೂಡ ಕೊಟ್ಟನು. ಆಮೇಲೆ ರಾಜಮಾರ್ಗದಲ್ಲಿ ಹೋಗುವವನಾಗಿ ರಾಜನಿಗೆ ಯೋಗ್ಯವಾದ ಗಂಧವನ್ನು ಹಿಡಿದುಕೊಂಡು (ರಾಜನ ಮನೆಗೆ) ಹೋಗತಕ್ಕ, ಹೆಚ್ಚು ವಕ್ರಳಾದ ಸ್ತ್ರೀಯನ್ನು ಕಂಡನು. ॥ ೧೦೧ ॥

ಮೂ ॥ ತೇನಾರ್ಥಿತಾ ಸಪದಿ ಗಂಧಮದಾತ್ತ್ರಿವಕ್ರಾ
ತೇನಾಗ್ರಜೇನ ಸಹಿತೋ ಭಗವಾಂಲ್ಲಿಲಿಂಪೇ ।
ತಾಂ ಚಾಶ್ವಜುತ್ವಮನಯತ್ಸ ತಯಾರ್ಥಿತೋಽಲ–
ಮಾಯಾನಿ ಕಾಲತ ಇತಿ ಪ್ರಹಸನ್ನಮುಂಚತ್ ॥ ೧೦೨ ॥

ಅ॥ ಆ ಶ್ರೀಕೃಷ್ಣನಿಂದ ಪ್ರಾರ್ಥಿಸಿಕೊಳ್ಳಲ್ಪಟ್ಟ ತ್ರಿವಕ್ರೆಯು ತತ್‌ಕ್ಷಣದಲ್ಲಿ (ಅಂದರೆ ಶೀಘ್ರದಲ್ಲಿ ವಿಚಾರಮಾಡದೆ) ಗಂಧವನ್ನು ಕೊಟ್ಟಳು. ಅಣ್ಣನಾದ ಬಲರಾಮನಿಂದ ಕೂಡಿದ ಶ್ರೀಕೃಷ್ಣನು ಆ ಗಂಧದಿಂದ ಲೇಪಿಸಿಕೊಂಡನು. ಆ ಶ್ರೀಕೃಷ್ಣನು ಆ ತ್ರಿವಕ್ರೆಯನ್ನಾದರೂ ವಕ್ರಾಭಾವವನ್ನು ಹೊಂದಿಸಿಕೊಟ್ಟನು. ಆ ಸೈರಂಧ್ರಿಕೆಯಿಂದ (ನಿನ್ನ ಸಂಗವಾಗಬೇಕೆಂದು) ಅತ್ಯಂತವಾಗಿ ಪ್ರಾರ್ಥಿಸಿಕೊಳ್ಳಲ್ಪಟ್ಟಶ್ರೀಕೃಷ್ಣನು ಕಾಲಾಂತರದಲ್ಲಿ ಬರುತ್ತೇನೆಂದು ನಗಾಡುತ್ತಾ ಅವಳನ್ನು ಬಿಟ್ಟು ಹೋದನು. ॥ ೧೦೨ ॥

ಮೂ ॥ ಪೂರ್ಣೇಂದುಬೃಂದನಿವಹಾಧಿಕಕಾಂತಿಕಾಂತ–
ಸೂರ್ಯಾವಿತೋರುಪರಮದ್ಯುತಿಸೌಖ್ಯದೇಹಃ ।
ಪೀತಾಂಬರಃ ಕನಕಭಾಸುರಗಂಧವರ್ಣಾಲ್ಯಃ
ಶೃಂಗಾರವಾರಿಧಿರಗಣ್ಯಗುಣಾರ್ಣವೋಽಗಾತ್ ॥ ೧೦೩ ॥

ಅ ॥ ಷೋಡಶಕಲಾ ಪರಿಪೂರ್ಣರಾದ ಚಂದ್ರರ ಸಮೂಹವನ್ನೇ ಅತ್ಯಂತವಾಗಿ ಹೊತ್ತುಕೊಂಡು ಇರುವ (ಅಂದರೆ ಚಂದ್ರರ ಸಮೂಹವೇ ಅತ್ಯಂತವಾಗಿ ಆಧಾರಭೂತವಾಗಿ ಉಳ್ಳ) (ಚಂದ್ರರ ಸಮೂಹದ ಕಾಂತಿಯಿಂದಲೂ) ಅಧಿಕವಾದ ಕಾಂತಿಯಿಂದ ಮನೋಹರನಾದವನು, ಸೂರ್ಯನಲ್ಲಿ ಮಿತವಾಗದಿರುವ ಬಹಳವಾದ ಉತ್ಕೃಷ್ಟವಾದ ಕಾಂತಿಯುಳ್ಳವನು, ಇಂತಹ ಸುಖಮಯವಾದ ಶರೀರವುಳ್ಳವನು,(ಅಂದರೆ ಭಕ್ತರಿಗೆ ಚಂದ್ರರಾಶಿಯಂತೆ ಅತಿ ಶಾಂತವಾಗಿ ಕಾಣಲ್ಪಡತಕ್ಕವನು, ದ್ವೇಷಿಗಳಿಗೆ ಮಧ್ಯಾಹ್ನ ಕಾಲದ ಸೂರ್ಯನಂತೆ ಅತಿ ಕ್ರೂರನಾಗಿ ಕಾಣಲ್ಪಡತಕ್ಕವನು,) ಪೀತವಾದ ವಸ್ತ್ರವುಳ್ಳವನು, ಸುವರ್ಣದಂತೆ ಮನೋಹರಗಳಾದ ಚಂದನಾದಿ ದ್ರವ್ಯಗಳೂ ಮಾಲಿಕೆಗಳೂ ಇವುಗಳುಳ್ಳವನು, ಶೃಂಗಾರದಿಂದ ಸಮುದ್ರದಂತಿರುವವನು. ಅಪರಿಮಿತಗಳಾದ ಗುಣಗಳಿಂದ ಸಮುದ್ರದಂತಿರುವವನು ಇಂತಹ ಶ್ರೀಕೃಷ್ಣನು ಹೋದನು. ॥ ೧೦೩ ॥

ಮೂ ॥ ಪ್ರಾಪ್ಯಾಥ ಚಾಯುಧಗೃಹಂ ಧನುರೀಶದತ್ತಂ
ಕೃಷ್ಣಃ ಪ್ರಸಹ್ಯ ಜಗೃಹೇ ಸಕಲೈರಭೇದ್ಯಂ ।
ಕಾಂಸಂ ಸ ನಿತ್ಯಪರಿಪೂರ್ಣಸಮಸ್ತ ಶಕ್ತಿ-
ರಾರೋಪ್ಯ *ಚೈತದನುಕೃಷ್ಯ ಬಭಂಜ ಮಧ್ಯೇ ॥ ೧೦೪ ॥

ಅ॥ ಆಮೇಲೆ ನಿತ್ಯವಾದ ಪರಿಪೂರ್ಣವಾದ ಸರ್ವವಿಷಯಂಕವಾದ ಸಾಮರ್ಥ್ಯವುಳ್ಳ ಆ ಶ್ರೀಕೃಷ್ಣನು ಆಯುಧಗೃಹವನ್ನು ಹೊಂದಿ ಸರ್ವರಿಂದಲೂ ಅಭೇದ್ಯವಾದ ರುದ್ರನಿಂದ ಕೊಡಲ್ಪಟ್ಟ ಕಂಸನಿಗೆ ಇರತಕ್ಕ ಧನುಸ್ಸನ್ನು ಬಲಾತ್ಕಾರದಿಂದ ಹಿಡಿದನು. ಶ್ರೀಕೃಷ್ಣನು ಈ ಧನುಸ್ಸನ್ನು (ಈ ಚಾಪವನ್ನು)ಆರೋಪಿಸಿ (ಅಂದರೆ ಜ್ಯಾಸಹಿತವಾದುದನ್ನಾಗಿ ಮಾಡಿ)ಸೆಳೆದು ಮಧ್ಯದಲ್ಲಿ ಮುರಿದನು. ॥ ೧೦೪ ॥

ಮೂ ॥ ತಸ್ಮಿನ್ ಸುರಾಸುರಗಣೈರಖಿಲೈರಭೇದ್ಯೇ
ಭಗ್ನೇ ಬಭೂವ ಜಗದಂಡವಿಭೇದ ಭೀಮಃ ।
ಶಬ್ದಃ ಸ ಯೇನ ನಿಪಪಾತ ಭುವಿ ಪ್ರಭಗ್ನ-
ಸಾರೋऽಸುರೋ ಧೃತಿಯುತೋऽಪಿ ತದೈವ ಕಂಸಃ ॥ ೧೦೫ ॥

ಅ॥ ಎಲ್ಲಾ ದೇವತೆಗಳೂ ದೈತ್ಯರೂ ಇವರ ಸಮೂಹಗಳಿಂದ ಭೇದಿಸಲಿಕ್ಕೆ ಅಶಕ್ಯವಾದ ಆ ಧನುಸ್ಸನ್ನು ಮುರಿಯಲ್ಪಡುತ್ತಿರಲು ಹದಿನಾಲ್ಕು(೧೪)ಲೋಕಗಳಿಂದ ಸಹಿತವಾದ ಬ್ರಹ್ಮಾಂಡದ ಆಸ್ಫೋಟದಿಂದುಂಟಾದ ಶಬ್ದದಂತೆಯೇ ಭಯಂವನ್ನು ಹುಟ್ಟಿಸತಕ್ಕ ಶಬ್ದವು ಉಂಟಾಯಿತು. ಯಾವ ಧನುಸ್ಸನ್ನು ಮುರಿಯೋಣದರಿಂದುಂಟಾದ ಶಬ್ದದಿಂದ ಧೈರ್ಯಯುಕ್ತನಾದಾಗ್ಯೂ ಅಸುರನಾದ ಕಂಸನು ಮುರಿಯಲ್ಪಟ್ಟ ಬಲವುಳ್ಳವನಾಗಿ ಆ ಕ್ಷಣದಲ್ಲಿಯೇ (ಸಿಂಹಾಸನದ್ದೆಸೆಯಿಂದ) ಕೆಳಗೆ ಭೂಮಿಯಲ್ಲಿ ಬಿದ್ದನು. ॥ ೧೦೫ ॥

ಮೂ ॥ ಆದಿಷ್ಟಮುಪ್ಯುರುಬಲಂ ಭಗವಾನ್ ಸ ತೇನ
ಸರ್ವಂ ನಿಹತ್ಯ ಸಬಲಃ ಪ್ರಯಯೌ ಪುನಶ್ಚ ।
ನಂದಾದಿಗೋಷಸಮಿತಿಂ ಹರಿರತ್ರ ರಾತ್ರೌ
ಭುಕ್ತ್ವಾ ಪಯೋನ್ವಿತಶುಭಾನ್ನಮುವಾಸ ಕಾಮಂ ॥ ೧೦೬ ॥

ಅ॥ ಬಲರಾಮನಿಂದ ಕೂಡಿದ ಪೂಜ್ಯನಾದ ಶ್ರೀಕೃಷ್ಣನು ಕಂಸನಿಂದ ಆಜ್ಞಾಪಿಸಿಕೊಳ್ಳಲ್ಪಟ್ಟ ಎಲ್ಲಾ ಉತ್ಕೃಷ್ಟವಾದ ಸೈನ್ಯವನ್ನೂ ಕೂಡ ಆ ಧನುಸ್ಸಿನ ತುಂಡಿನಿಂದಲೇ ಸಂಹರಿಸಿ ಪುನಃ ನಂದಗೋಪನೇ ಮೊದಲಾದ ಗೊಲ್ಲರ ಸಮೂಹವನ್ನು ಕುರಿತು ಹೋದನು. (ಬಲರಾಮನೂ ಕೂಡ ಧನುಸ್ಸಿನ ಮತ್ತೊಂದು ತುಂಡಿನಿಂದ ಸೈನ್ಯವನ್ನು ಸಂಹರಿಸಿದನು.) ಶ್ರೀಹರಿಯು ನಂದಾದಿಗಳು ಇರುತ್ತಿದ್ದ ಉದ್ಯಾನದಲ್ಲಿ ರಾತ್ರಿ ಕಾಲದಲ್ಲಿ ಕ್ಷೀರದಿಂದ ಯುಕ್ತವಾದ ಪಡ್ರಸಾನ್ನವನ್ನು ಭೋಜನಮಾಡಿ ತನ್ನ ಇಚ್ಛಾನುಸಾರವಾಗಿ (ನಿರ್ಭಯವಾಗಿ) ಆವಾಸ ಮಾಡಿದನು. ॥ ೧೦೬ ॥

---

* ಆರೋಪ್ಯ ಚೈನಂ ಎಂದು ವಾದಿರಾಜೀಯ ಪಾಠವು.

ಮೂ ॥ ಕಂಸೋಽಪ್ಯತೀವ ಭಯಕಂಪಿತಹೃತ್ಸರೋಜಃ
ಪ್ರಾತರ್ನರೇಂದ್ರಗಣಮಧ್ಯಗತೋಽಧಿಕೋಚ್ಚಂ ।
ಮಂಚಂ ವಿವೇಶ ಸಹ ಜಾನಪದೈಶ್ಚ ಪೌರೈ-
ರ್ನಾನಾನುಮಂಚಕಗತೈರ್ಯುವತೀಸವೇತ್ರೈಃ ॥ ೧೦೭ ॥

ಅ॥ ಕಂಸನೂ ಕೂಡ ಅತಿಶಯವಾಗಿ ಭಯದಿಂದ ಕಂಪಿತವಾದ ಹೃದಯಕಮಲವುಳ್ಳವನಾಗಿ ಪ್ರಾತಃಕಾಲದಲ್ಲಿ ಸುಂದರಿಯರಿಂದ ಯುಕ್ತರಾದ,ನಾನಾ ವಿಧಗಳಾದ ಉಪಮಂಚಕಗಳಲ್ಲಿರತಕ್ಕ, ಪಟ್ಟಣದಲ್ಲಿ ಆವಾಸವಾಡುವ ದೇಶಸ್ಥರಿಂದ ಕೂಡಿಕೊಂಡು ರಾಜಶ್ರೇಷ್ಠರ ಸಮೂಹದ ಮಧ್ಯದಲ್ಲಿದ್ದವನಾಗಿ ಅತ್ಯುಚ್ಚವಾದ ಮಂಚವನ್ನು ಪ್ರವೇಶವಾಡಿದನು (ಅಂದರೆ ರಾಜಶ್ರೇಷ್ಠರ ಮಂಚಗಳ ಮಧ್ಯದಲ್ಲಿರತಕ್ಕ ಮಂಚದಲ್ಲಿ ಕುಳಿತನು.) ॥ ೧೦೭ ॥

ಮೂ ॥ ಸಂಸ್ಥಾಪ್ಯ ನಾಗಮುರುರಂಗಮುಖೇ ಕುವಲ್ಯಾ-
ಪೀಡಂ ಗಿರೀಂದ್ರಸದೃಶಂ ಕರಿಸಾದಿಯುಕ್ತಂ ।
ಚಾಣೂರಮುಷ್ಟಿಕಮುಖಾನಪಿ ಮಲ್ಲವೀರಾನ್
ರಂಗೇ ನಿಧಾಯ ಹರಿಸಂಯಮನಂ ಕಿಲೈಚ್ಛತ್ ॥ ೧೦೮ ॥

ಅ॥ (ಕಂಸನು) ಉತ್ಕೃಷ್ಟವಾದ ರಂಗಸ್ಥಳದ ದ್ವಾರದಲ್ಲಿ ಪರ್ವತಕ್ಕೆ ಸದೃಶವಾದ, ಹಸ್ತಿಪನಿಂದ ಯುಕ್ತವಾದ (ಕುವಲ್ಯಾ ಪೀಡಂ=) ಪೃಥಿವಿಯೆಂಬುವ ಲತೆಯನ್ನು ಚೆನ್ನಾಗಿ ಪೀಡಿಸುವ (ಅಂದರೆ ಭೂಭಾರಭೂತವಾದ) ಕುವಲಯಾ ಪೀಡವೆನ್ನುವ ಆನೆಯನ್ನು ಸ್ಥಾಪಿಸಿ ಚಾಣೂರನು ಮುಷ್ಟಿಕನು ಇವರೇ ಪ್ರಧಾನರಾಗಿ ಉಳ್ಳ ಮಲ್ಲಶ್ರೇಷ್ಠರನ್ನೂ ಕೂಡ ರಂಗಸ್ಥಳದಲ್ಲಿ ಇರಿಸಿ ಶ್ರೀಕೃಷ್ಣನ ನಿಗ್ರಹವನ್ನು ಇಚ್ಛಿಸಿದನು. (ಕಿಲ =) ತನಗೆ ಸರ್ವಥಾ ಅಶಕ್ಯವಾದ ಕಾರ್ಯವನ್ನು ಇಚ್ಛಿಸಿದನು ಎನ್ನುವುದು ಅತ್ಯಾಶ್ಚರ್ಯವು. ॥ ೧೦೮ ॥

ಮೂ ॥ ಅಕ್ಷೌಹಿಣೀಗಣಿತಮಸ್ಯ ಬಲಂ ಚ ವಿಂಶ-
ದಾಸೀದಸಹ್ಯಮುರುವೀರ್ಯಮನನ್ಯವಧ್ಯಂ ।
ಶಂಭೋರ್ವರಾದಪಿ ಚ ತಸ್ಯ ಸುನೀಥನಾಮಾ
ಯಃ ಪೂರ್ವಮಾಸ ವೃಕ ಇತ್ಯಸುರೋಽನುಜೋಽಭೂತ್ ॥ ೧೦೯ ॥

ಅ॥ ಆ ಕಂಸನಿಗೆ, ಸಹಿಸಲಶಕ್ಯವಾದ, ಬಹು ಪರಾಕ್ರಮವುಳ್ಳ ರುದ್ರದೇವರ ವರದಿಂದಲೂ ಬೇರೆ ಯಾರಿಂದಲೂ ಸಂಹರಿಸಿಕೊಳ್ಳಲ್ಪಡಲಶಕ್ಯವಾದ ಸೈನ್ಯವಾದರೂ ಇಪ್ಪತ್ತು ಅಕ್ಷೌಹಿಣಿಗಳಿಂದ ಗಣಿತವಾದುದು ಇತ್ತು. ಆ ಕಂಸನಿಗೆ ಸುನೀಥನೆಂದು ಹೆಸರುಳ್ಳ ಯಾವನು ತಮ್ಮನು ಇರುತ್ತಿದ್ದನೋ, ಅವನು ಮೊದಲಿನ ಜನ್ಮದಲ್ಲಿ ವೃಕ ನಾಮಕನಾದ ಅಸುರನು ಆಗಿದ್ದನು॥ ೧೦೯ ॥

ಮೂ ॥ ಸಪ್ತಾನುಜಾ ಅಪಿ ಹಿ ತಸ್ಯ ಪುರಾತನಾ ಯೇ
ಸರ್ವೇಽಪಿ ಕಂಸಸೃತನಾಸಹಿತಾಃ ಸ್ಮ ರಂಗೇ ।
ತಸ್ಥುಃ ಸರಾಮಮಭಿಯಾಂತಮುದೀಕ್ಷ್ಯ ಕೃಷ್ಣ-
ಮಾತ್ತಾಯುಧಾ ಯುಧಿ ವಿಜೇತುಮಜಂ ಸುಪಾಪಾಃ ॥ ೧೧೦ ॥

ಅ॥ ಆ ಸುನೀಥನಿಗೆ ಪೂರ್ವಜನ್ಮದಲ್ಲಿಯೂ ಕೂಡ ತಮ್ಮಂದಿರಾಗಿಯೇ ಇರತಕ್ಕವರು ಯಾರೋ, ಅತ್ಯಂತ ಪಾಪಿಷ್ಠರಾದ ಅವರೇ ಈ ಜನ್ಮದಲ್ಲಿಯೂ ಕೂಡ ಏಳು (೭) ಮಂದಿ ತಮ್ಮಂದಿರು, ಅವರೆಲ್ಲರೂ ಕೂಡ ಕಂಸನ ಸೈನ್ಯದಿಂದ ಕೂಡಿದವರಾಗಿ, ಬಲರಾಮನಿಂದ ಕೂಡಿಕೊಂಡು ಎದುರಾಗಿ ಬರತಕ್ಕ ಶ್ರೀಕೃಷ್ಣನನ್ನು ನೋಡಿ ಉತ್ಪತ್ತಿರಹಿತನಾದ ಆ ಶ್ರೀಕೃಷ್ಣನನ್ನು ಯುದ್ಧದಲ್ಲಿ ಗೆಲ್ಲುವುದಕ್ಕಾಗಿ ಸ್ವೀಕರಿಸಲ್ಪಟ್ಟ ಆಯುಧವುಳ್ಳವರಾಗಿ ರಣರಂಗಕ್ಕೆ ಯೋಗ್ಯವಾದ ಪ್ರದೇಶದಲ್ಲಿ ನಿಂತರು. ॥ ೧೧೦ ॥

ಮೂ ॥ ಕೃಷ್ಣೋ೭ಪಿ *ಸೂರ್ಯ ಉದಿತೇ ಸಬಲೋ ವಯಸ್ಯೈಃ
ಸಾರ್ಧಂ ಜಗಾಮ ವರರಂಗಮುಖಂ ಸುರೇಶೈಃ ।
ಸಂಸ್ತೂಯಮಾನ ಉರುವಿಕ್ರಮ ಆಸುರಾಣಾಂ
ನಿರ್ಮೂಲನಾಯ ಸಕಲಾಚರಿತೋರುಶಕ್ತಿಃ ॥ ೧೧೧ ॥

ಅ॥ ಉತ್ಕೃಷ್ಟವಾದ ಪರಾಕ್ರಮವುಳ್ಳ, ಎಲ್ಲಾ ಸೃಷ್ಟ್ಯಾದಿಕರ್ಮಗಳನ್ನು ಆಚರಿಸುವ ವಿಷಯದಲ್ಲಿ ಉತ್ಕೃಷ್ಟವಾದ ಶಕ್ತಿಯುಳ್ಳ, ಬಲರಾಮನಿಂದ ಕೂಡಿದ ಶ್ರೀಕೃಷ್ಣನಾದರೂ ಸೂರ್ಯನು ಉದಯಿಸುತ್ತಿರಲು ಅಸುರರನ್ನು ವಿನಾಶಪಡಿಸುವುದಕ್ಕಾಗಿ ದೇವಶ್ರೇಷ್ಠರಿಂದ ಚೆನ್ನಾಗಿ ಸ್ತುತಿಸಿಕೊಳ್ಳಲ್ಪಟ್ಟವನಾಗಿ ವಯಸ್ಯರಿಂದ ಕೂಡಿಕೊಂಡು ಉತ್ಕೃಷ್ಟವಾದ ರಣರಂಗಕ್ಕೆ ಯೋಗ್ಯವಾದ ಪ್ರದೇಶದ ಅಭಿಮುಖವಾಗಿ ಹೋದನು. ॥ ೧೧೧ ॥

ಮೂ ॥ ಅಯುನ್ಜಗದ್ಗುರುತಮೋ ಬಲಿನಂ ಗಜೇಂದ್ರಂ
ರುದ್ರಪ್ರಸಾದಪರಿರಕ್ಷಿತಮಾಶ್ವಪಶ್ಯತ್ ।
§ದುಷ್ಪ್ರೇರುರಂಗಮುಖಸಂಸ್ಥಿತಮಿಭ್ಯಮಲ್ಯ ಚೈಭ್ಯಂ
ಪಾಪಾಪಯೇತಿ ನ ಚಿರಾದಿತಿ ವಾಚಮೂಚೇ ॥ ೧೧೨ ॥

ಅ॥ ಬರುತ್ತಿರುವ, ಜಗತ್ತಿಗೆ ಮುಖ್ಯಗುರುವಾದ ಶ್ರೀಕೃಷ್ಣನು ಬಲಿಷ್ಠವಾದ ರುದ್ರನ ಪ್ರಸಾದದಿಂದ ರಕ್ಷಿಸಿಕೊಳ್ಳಲ್ಪಟ್ಟ ಗಜಶ್ರೇಷ್ಠವನ್ನು ಶೀಘ್ರದಲ್ಲಿ ಕಂಡನು. ಉತ್ಕೃಷ್ಟವಾದ ರಣರಂಗಕ್ಕೆ ಯೋಗ್ಯವಾದ ಪ್ರದೇಶದ ಅಭಿಮುಖದಲ್ಲಿರತಕ್ಕ ಗಜೇಂದ್ರವನ್ನು (ದೃಷ್ಟ್ವಾ=) ನೋಡಿ, ಅನೆಯ ಸಂಬಂಧಿಯಾದ ಮಾವತನನ್ನು ಕೂಡ ನೋಡಿ, ಎಲೋ ಪಾಪಿಷ್ಠದೇ ದೂರ ಹೋಗು (ಅಂದರೆ ಮಾರ್ಗವನ್ನು ಬಿಟ್ಟು ಬಿಡು) ಸಾವಕಾಶ ಮಾಡಬೇಡ, ಹೀಗೆ ಮಾತನ್ನು ಹೇಳಿದನು. ॥ ೧೧೨ ॥

ಮೂ ॥ ಕ್ಷಿಪ್ತಃ ಸ ಈಶ್ವರತಮೇನ ಗಿರೀಶಲಬ್ಧ್ಯಾ
ದ್ವೃಪ್ತೋ ವರಾಜ್ಜಗತಿ ಸರ್ವಜನೈರವಧ್ಯಃ ।
ನಾಗಂ ತ್ವವಧ್ಯಮಭಿಯಾಪಯತೇ ತತೋ೭ಗ್ರೇ
ಪಾಪೋ ದುರಂತಮಹಿಮಂ ಪ್ರತಿ ವಾಸುದೇವಂ ॥ ೧೧೩ ॥

---

* ಕೃಷ್ಣೋ೭ಪಿ ಸೂರ ಉದಿತೇ ಎಂದು ವಾದಿರಾಜೀಯ ಪಾಠವು.

§ ದೃಷ್ಟ್ವೋರುರಂಗ ಎಂದು ವಾದಿರಾಜೀಯ ಪಾಠವು.

ದುಷ್ಪ್ರೇರು, ಎನ್ನುವ ಪಾಠದಲ್ಲಿ ದುಷ್ಟನಾದ ಕಂಸನ ಅಥವಾ ದುಷ್ಟರಿಂದ ಪೂರ್ಣವಾದ ರಣರಂಗದ ದ್ವಾರದಲ್ಲಿರತಕ್ಕ ಗಜೇಂದ್ರವನ್ನು ಕಂಡನು, ಎಂದರ್ಥವು.

ಅ॥ ರುದ್ರನ ಪ್ರಸಾದದಿಂದುಂಟಾದ ವರದ್ದೆಸೆಯಿಂದ ಮದೋನ್ಮತ್ತನಾದ, ಜಗತ್ತಿನಲ್ಲಿರ ತಕ್ಕ ಎಲ್ಲಾ ಜನರಿಂದಲೂ ಸಂಹರಿಸಿಕೊಳ್ಳಲ್ಪಡಲಿಕ್ಕೆ ಅಶಕ್ಯನಾದ ಸರ್ವೇಶ್ವರನಾದ ಶ್ರೀಕೃಷ್ಣನಿಂದ ನಿಂದಿಸಿಕೊಳ್ಳಲ್ಪಟ್ಟಪಾಪಿಷ್ಠನಾದ ಆನೆಯು ಮೂವತನು ರಂಗದ್ವಾರದ್ದೆಸೆಯಿಂದ ಎದುರಿವಲ್ಲಿ ಅವಧಿರಹಿತವಾದ ಮಹಿಮೆಯುಳ್ಳ ಶ್ರೀಕೃಷ್ಣನನ್ನುದ್ದೇಶಿಸಿ ಯಾರಿಂದಲೂ ಸಂಹರಿಸಿಕೊಳ್ಳಲ್ಪಡಲಿಕ್ಕೆ ಅಶಕ್ಯವಾದ ಕುವಲಯಾಪೀಡಾಖ್ಯ ಆನೆಯನ್ನು ಹೊಂದಿಸಿಕೊಟ್ಟನು. ॥ ೧೧೩ ॥

ಮೂ ॥ ವಿಕ್ರೀಡ್ಯ ತೇನ ಕರಿಣಾ ಭಗವಾನ್ ಸ ಕಿಂಚಿ-
ದ್ಧಸ್ತೇ ಪ್ರಗೃಹ್ಯ ವಿನಿಕೃಷ್ಯ ನಿಪಾತ್ಯ ಭೂವೌ ।
ಕುಂಭೇ ಪದಂ ಪ್ರತಿನಿಧಾಯ ವಿಷಾಣಯುಗ್ಮ-
ಮುತ್ಕೃಷ್ಯ ಹಸ್ತಿಪಮಹನ್ನಿಪಪಾತ ಸೋಽಪಿ ॥ ೧೧೪ ॥

ಅ॥ ಪೂಜ್ಯನಾದ ಶ್ರೀಕೃಷ್ಣನು ಆ ಆನೆಯಿಂದ ಸ್ವಲ್ಪ ಕ್ರೀಡೆಮಾಡಿ ಶುಂಡಾದಂಡದಲ್ಲಿ ಹಿಡಿದು ಸೆಳೆದು ಭೂಮಿಯಲ್ಲಿ ಕೆಡಹಾಕಿ ಕುಂಭ ಸ್ಥಳದಲ್ಲಿ ಪಾದವನ್ನು ಇಟ್ಟು ದಂತಗಳ ಎರಡನ್ನು ಕಿತ್ತು, ಆ ದಂತದಿಂದಲೇ ಆನೆಯು ಮಾವತನನ್ನು ಕೊಂದನು. ಆ ಆನೆಯು ಮಾವತನಾದರೂ ಕೆಳಗೆ ಬಿದ್ದನು. ॥ ೧೧೪ ॥

ಮೂ ॥ ನಾಗಂ ಸಸಾದಿನಮವಧ್ಯಮಸೌ ನಿಹತ್ಯ
ಸ್ಕಂದೇ ವಿಷಾಣಮವಸೃಜ್ಯ ಸಹಾಗ್ರಜೇನ ।
ನಾಗೇಂದ್ರಸಾಂದ್ರಮದಬಿಂದುಭಿರಂಚಿತಾಂಗಃ
ಪೂರ್ಣಾತ್ಮಶಕ್ತಿ ರಮುಲಃ ಪ್ರವಿವೇಶ ರಂಗಂ ॥ ೧೧೫ ॥

ಅ॥ ಗಜಶ್ರೇಷ್ಠದ ನಿಬಿಡಗಳಾದ ಮದಬಿಂದುಂಗಳಿಂದ ಶೋಭಿತವಾದ ಅಂಗವುಳ್ಳ, ಪೂರ್ಣವಾದ ಸ್ವರೂಪಶಕ್ತಿಯುಳ್ಳ, ನಿರ್ದೋಷನಾದ (ಅಂದರೆ ಆನೆಯು ಮದದ ಬಿಂದುವಿನ ಸಂಬಂಧದಿಂದುಂಟಾದ ದೋಷ ರಹಿತನಾದ) ಈ ಶ್ರೀಕೃಷ್ಣನು ಯಾರಿಂದಲೂ ಸಂಹರಿಸಿಕೊಳ್ಳಲ್ಪಡಲಿಕ್ಕೆ ಅಶಕ್ಯನಾದ ಆನೆಯು ಮಾವತನಿಂದ ಕೂಡಿದ ಆನೆಯನ್ನು ಸಂಹರಿಸಿ ಅಣ್ಣನಾದ ಬಲರಾಮನಿಂದ ಕೂಡಿಕೊಂಡು ದಾಡೆಯನ್ನು ಭುಜ ಶಿರಸ್ಸಿನಲ್ಲಿ ಸ್ಥಾಪಿಸಿ ರಣರಂಗಕ್ಕೆ ಯೋಗ್ಯವಾದ ಪ್ರದೇಶವನ್ನು ಪ್ರವೇಶಮಾಡಿದನು. ॥ ೧೧೫ ॥

ಮೂ ॥ ವಿಷ್ವೇ ಜಗದ್ಭರುತಮೇ ಬಲವೀರ್ಯಮೂರ್ತೌ
ರಂಗಂ ಮುಮೋದ ಚ ಶುಶೋಷ ಜನೋಽಖಿಲೋಽತ್ರ ।
ಕಂಜಂ ತಥಾಪಿ ಕುವಲಂ ಚ ಯಥೈವ ಸೂರ್ಯ
ಉದ್ಯನ್ನುಭವಿನೋ ವಿಪರೀತಕಾಶ್ಚ ॥ ೧೧೬ ॥

ಅ॥ ಜಗತ್ತುಗಳಿಗೆ ಮಂಗಳ್ಕರವಾದ ಬಲಪರಾಕ್ರಮಂಗಳು ಸ್ವರೂಪವಾಗಿ ಉಳ್ಳ, ಶ್ರೀಕೃಷ್ಣನು ರಣರಂಗಕ್ಕೆ ಯೋಗ್ಯವಾದ ಪ್ರದೇಶವನ್ನು ಪ್ರವೇಶಮಾಡುತ್ತಿರಲು ಈ ರಂಗದಲ್ಲಿರತಕ್ಕ ಎಲ್ಲಾ ಭಕ್ತಜನರು ಸಂತುಷ್ಟರಾದರು, ದ್ವೇಷಿ ಜನರು ಒಣಗಿದರು. (ಅಂದರೆ ಶೋಕವನ್ನು ಹೊಂದಿದರು.) ಕಮಲವು ಹಾಗೆಯೇ ಕುವಲಯದವು ಕೂಡ ಸೂರ್ಯನು ಉದಯಿಸಲು

ತ್ತಿರಲಂ ಹೇಗೋ ಹಾಗೆಯೇ ಶ್ರೀಹರಿಗೆ ಅನುಕೂಲವಾಗಿ ಹುಟ್ಟಿದವರಂ ಸಂತೋಷವನ್ನು ಹೊಂದಿದರಂ. ಶ್ರೀಹರಿಗೆ ವಿರುದ್ಧವಾದ ಕುತ್ಸಿತಜನರಂ ದುಃಖವನ್ನು ಹೊಂದಿದರಂ;

ವಿಶೇಷಾಂಶ—ಸೂರ್ಯೋದಯವಾದಾಗ ಕಮಲವು ಹೇಗೆ ವಿಕಾಸವನ್ನು ಹೊಂದುತ್ತದೋ ಹಾಗೆಯೇ ಶ್ರೀಕೃಷ್ಣನು ಪ್ರಾದುರ್ಭವಿಸುತ್ತಿರಲು ಅಪರೋಕ್ಷ ಜ್ಞಾನಿಗಳು ಸಂತುಷ್ಟರಾದರಂ; ಸೂರ್ಯೋದಯವಾದಾಗ ಕುವಲಯವು ಹೇಗೆ ಒಣಗುತ್ತದೋ (ಅಂದರೆ ಮುಕುಲೀಭಾವವನ್ನು ಹೊಂದುತ್ತದೋ) ಹಾಗೆಯೇ ಶ್ರೀಕೃಷ್ಣನು ಪ್ರಾದುರ್ಭವಿಸಿದ ಮೇಲೆ ದ್ವೇಷಿಗಳು ದುಃಖವನ್ನು ಹೊಂದಿದರಂ. ॥ ೧೧೬ ॥

ಮೂ ॥ ರಂಗಂ ಪ್ರವಿಷ್ಟಮಭಿವೀಕ್ಷ್ಯ ಜಗಾದ ಮಲ್ಲಃ
ಕಂಸಪ್ರಿಯಾರ್ಥಮಭಿಭಾಷ್ಯಃ ಜಗನ್ನಿವಾಸಂ ।
ಚಾಣೂರ ಇತ್ಯಭಿಹಿತೋ ಜಗತಾಮವದ್ಯಃ
ಶಂಭುಪ್ರಸಾದತ ಇದಂ ಶೃಣು ಮಾಧವೇತಿ ॥ ೧೧೭ ॥

ಅ ॥ ಚಾಣೂರ ಎನ್ನುವ ನಾಮಂದಿಂದ ಹೇಳಿಸಿಕೊಳ್ಳಲ್ಪಟ್ಟ, ರುದ್ರದೇವರ ವರಪ್ರಸಾದದಿಂದ ಜಗತ್ಪೂಗಳ ಸಕಾಶದಿಂದ ಸಂಹರಿಸಿಕೊಳ್ಳಲ್ಪಡದಿರುವ ಮಲ್ಲನು ರಣರಂಗಸ್ಥಳವನ್ನು ಪ್ರವೇಶಮಾಡಿದ ಶ್ರೀಕೃಷ್ಣನನ್ನು ನೋಡಿ ಸರ್ವ ಜಗತ್ತಿಗೆ ಆಶ್ರಯಂಭೂತನಾದ ಶ್ರೀಕೃಷ್ಣನನ್ನು ಎಲೋ ಕೃಷ್ಣನೇ ಎನ್ನುವ ಸಂಬೋಧನದಿಂದ ಅಭಿಮುಖೀಕರಿಸಿ ಮೇಲೆ ಹೇಳತಕ್ಕದನ್ನು ಕೇಳು ಎಂದು ಕಂಸನ ಪ್ರೀತಿಗಾಗಿ ಹೇಳಿದನಂ. ॥ ೧೧೭ ॥

ಶೃಣು = ಕೇಳು ಎಂದುಂ ಹೇಳಿದ್ದನ್ನು ತೋರಿಸುತ್ತಾರೆ—

ಮೂ ॥ ರಾಜ್ಞೈವ ದೈವತಮಿತಿ ಪ್ರವದಂತಿ ವಿಪ್ರಾ
ರಾಜ್ಞಃ ಪ್ರಿಯಂ ಕೃತವತಃ ಪರಮಾ ಹಿ ಸಿದ್ಧಿಃ ।
ಯೋತ್ಸ್ಯೇವ ತೇನ ನೃಪತಿಪ್ರಿಯಕಾಮ್ಯಯಾ ವಾಂ
ರಾಮೋಽಭಿಯುಧ್ಯತು ಬಲೀ ಸಹ ಮುಷ್ಟಿಕೇನ ॥ ೧೧೮ ॥

ಅ॥ ಯಾವ ಕಾರಣದಿಂದ ಬ್ರಾಹ್ಮಣರಂ ರಾಜನೇ ದೇವತೆಯೆಂದುಂ ಹೇಳುತ್ತಾರೋ (ಆದುದರಿಂದ) ರಾಜನಿಗೆ ಪ್ರಿಯವನ್ನು ಮಾಡತಕ್ಕವನಿಗೆ, ಉತ್ಕೃಷ್ಟವಾದ ಸಿದ್ಧಿಯುಂ (ಅಂದರೆ) ಮೋಕ್ಷವು ಆಗುತ್ತದೆಂದುಂ ಹೇಳುತ್ತಾರೆ. ಆ ಕಾರಣದಿಂದ ಕಂಸನಿಗೆ ಪ್ರೀತಿಯನ್ನು ಮಾಡಬೇಕೆನ್ನುವ ಇಚ್ಛೆಯಿಂದ ನಾವು ಇಬ್ಬರುಂ ಯುದ್ಧವನ್ನು ಮಾಡುವ. ಬಲಿಷ್ಠನಾದ ಬಲರಾಮನುಂ ಮುಷ್ಟಿಕನಿಂದ ಕೂಡಿಕೊಂಡುಂ ಯುದ್ಧ ಮಾಡಲಿ. ॥ ೧೧೮ ॥

ಮೂ ॥ ಇತ್ಯುಕ್ತ ಆಹ ಭಗವಾನ್ ಪರಿಹಾಸಪೂರ್ವ-
ಮೇವಂ ಭವತ್ವಿತಿ ಸ ತೇನ ತದಾಭಿಯಾತಃ ।
ಸಂದರ್ಶ್ಯ ದೈವತಪತಿರ್ಯುಧಿ ಮಲ್ಲಲೀಲಾಂ
ಮೌಹೂರ್ತಿಕೀಮಥ ಪದೋರ್ಜಗೃಹೇ ಸ್ವಶತ್ರುಂ ॥ ೧೧೯ ॥

ಅ॥ ಈ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟ ಶ್ರೀಹರಿಯು ಪರಿಹಾಸಪೂರ್ವಕವಾಗಿ ಹಿಂದೆ ಹೇಳಿದ ಪ್ರಕಾರ (ನಿಮಗೆ ರಾಜನೇ ದೇವತೆಯು) ಆಗಲಿ, ಹೀಗೆ ಹೇಳಿದನು; ಆಗ ಆ ಮಲ್ಲನಿಂದ ಹೊಂದಿಸಿಕೊಳ್ಳಲ್ಪಟ್ಟ, ದೇವತೆಗಳಿಗೂ ಅಧಿಪತಿಯಾದ ಆ ಶ್ರೀಕೃಷ್ಣನು ಮಲ್ಲಯುದ್ಧದಲ್ಲಿ ಒಂದು ಮುಹೂರ್ತ ಸಂಬಂಧಿಯಾದ(ಅಂದರೆ ಮುಹೂರ್ತ ಪರ್ಯಂತವಾಗಿ)ಮಲ್ಲ ಶಿಕ್ಷೆಯನ್ನು ತೋರಿಸಿ ಮುಹೂರ್ತಾನಂತರದಲ್ಲಿ ತನಗೆ ಶತ್ರುವಾದ ಮಲ್ಲನನ್ನು ಪಾದಗಳಲ್ಲಿ ಹಿಡಿದನು. ॥೧೧೯॥

ಮೂ ॥ ಉತ್ಕ್ಷಿಪ್ಯ ತಂ ಗಗನಗಂ ಗಿರಿಸನ್ನಿಕಾಶ–
ಮುದ್ಭ್ರಾಮ್ಯ ಚಾಥ ಶತಶಃ ಕುಲಿಶಾಕ್ಷತಾಂಗಂ ।
ಆವಿಧ್ಯ ದುರ್ಧರಬಲೋ ಭುವಿ ನಿಷ್ಪಿಪೇಷ
ಚೂರ್ಣೀಕೃತಃ ಸ ನಿಪಪಾತ ಯಥಾ ಗಿರೀಂದ್ರಃ ॥ ೧೨೦ ॥

ಅ ॥ ಸಹಿಸಲಿಕ್ಕೆ ಅಶಕ್ಯವಾದ ಬಲವುಳ್ಳ ಶ್ರೀಕೃಷ್ಣನು ಆ ಚಾಣೂರನನ್ನು ಮೇಲಕ್ಕೆ ಹಾರಿಸಿ ಆಕಾಶದಲ್ಲಿರತಕ್ಕ ಪರ್ವತಕ್ಕೆ ಸದೃಶವಾದ, ವಜ್ರಾಯುಧದಿಂದಲೂ ಶೀಳಿಸಲಿಕ್ಕೆ ಅಶಕ್ಯವಾದ ಅಂಗವುಳ್ಳ, ಆ ಚಾಣೂರನನ್ನು ಅನೇಕಾವರ್ತಿ ತಿರುಗಿಸಿ ಆಮೇಲೆ ಭೂಮಿಯಲ್ಲಿ ಕೆಡಹಾಕಿ ಪಾದದಿಂದ ಮರ್ದಿಸಿದನು. ಹೀಗೆ ಚೂರ್ಣೀಕೃತನಾದ ಆ ಚಾಣೂರನು ಪರ್ವತ ಶ್ರೇಷ್ಠದಂತೆ ಕೆಳಗೆ ಬಿದ್ದನು. ॥ ೧೨೦ ॥

ಮೂ ॥ ಕೃಷ್ಣಂ ಚ ತುಷ್ಟುವುರಥೋ ದಿವಿ ದೇವಸಂಘಾ
ಮರ್ತ್ಯಾ ಭುವಿ ಪ್ರವರಮುತ್ತಮಪೂರುಷಾಣಾಂ ।
ತದ್ವದ್ಬಲಸ್ಯ ದೃಢಮುಷ್ಟಿನಿಪಿಷ್ಟಮೂರ್ಧಾ
ಭ್ರಷ್ಟಸ್ತದೈವ ನಿಪಪಾತ ಸ ಮುಷ್ಟಿಕೋಽಪಿ ॥ ೧೨೧ ॥

ಅ॥ ಆಮೇಲೆ ದೇವತೆಗಳ ಸಮೂಹಗಳು ಉತ್ತಮ ಪುರುಷರ ಮಧ್ಯದಲ್ಲಿ ಶ್ರೇಷ್ಠನಾದ ಶ್ರೀಕೃಷ್ಣನನ್ನು ಸ್ವರ್ಗದಲ್ಲಿ ಸ್ತೋತ್ರಮಾಡಿದರು. ಭೂಲೋಕದಲ್ಲಿ ಮನುಷ್ಯರು ಸ್ತೋತ್ರ ಮಾಡಿದರು; ಚಾಣೂರನಂತೆ ಬಲರಾಮನ ದೃಢಗಳಾದ ಮುಷ್ಟಿಗಳ ಪಾತ್ರಗಳಿಂದ ಚೂರ್ಣೀಕೃತವಾದ ಶಿರಸ್ಸುಳ್ಳ ಆ ಮುಷ್ಟಿಕನೂ ಕೂಡ ಚಾಣೂರನ ಮರಣದ ಸಮಯದಲ್ಲಿಯೇ ಮೃತನಾಗಿ ಬಿದ್ದನು. ॥ ೧೨೧ ॥

ಮೂ ॥ ಕೂಟಶ್ಚ ಕೋಸಲ ಉತ ಚ್ಛಲನಾಮಧೇಯೌ
ದೌ ತತ್ರ ಕೃಷ್ಣನಿಹತಾವಪರೋ ಬಲೇನ ।
ಕಂಸಸ್ಯ ಯೇ ತ್ವವರಜಾಶ್ಚ ಸುನೀಥಮುಖ್ಯಾಃ
ಸರ್ವೇ ಬಲೇನ ನಿಹತಾಃ ಪರಿಘೇಣ ವೀರಾಃ ॥ ೧೨೨ ॥

ಅ॥ ಆ ಯುದ್ಧದಲ್ಲಿ, ಕೂಟನು ಕೋಸಲನೂ ಕೂಡ ಇಬ್ಬರೂ ಶ್ರೀಕೃಷ್ಣನಿಂದ ಸಂಹರಿಸಿಕೊಳ್ಳಲ್ಪಟ್ಟರು, ಆಮೇಲೆ ಇತರನಾದ ಛಲನೆಂದು ಹೆಸರುಳ್ಳವನು ಬಲರಾಮನಿಂದ ಸಂಹರಿಸಿಕೊಳ್ಳಲ್ಪಟ್ಟನು, ಕಂಸನಿಗೆ ಯಾರು ತಮ್ಮಂದಿರೋ, ಆ ಪರಾಕ್ರಮಶಾಲಿಗಳಾದ ಸುನೀಥನೇ ಮೊದಲಾಗಿ ಉಳ್ಳವರು ಎಲ್ಲರೂ ಬಲರಾಮನಿಂದ ಪರಿಘಾಯುಧದಿಂದ ಸಂಹರಿಸಿಕೊಳ್ಳಲ್ಪಟ್ಟರು. ॥ ೧೨೨ ॥

ಮೂ ॥ ತಾಭ್ಯಾಂ ಹತಾನಭಿಸಮೀಕ್ಷ್ಯ ನಿಜಾನ್ ಸಮಸ್ತಾನ್
ಕಂಸೋ ದಿದೇಶ ಬಲಮಕ್ಷಯಮುಗ್ರವೀರ್ಯಂ ।
ರುದ್ರಪ್ರಸಾದಕೃತರಕ್ಷಮವಧ್ಯಮೇತೌ
ನಿಸ್ಸಾರ್ಯ ದಂಡಮಧಿಕಂ ಕುರುತೇಽಶಿಷಾಪಃ ॥ ೧೨೩ ॥

ಅ॥ ಪಾಪಿಷ್ಠನಾದ ಕಂಸನು ತನ್ನವರನ್ನು ಎಲ್ಲರನ್ನೂ ಕೃಷ್ಣ ಬಲರಾಮರಿಂದ ಸಂಹರಿಸಿ ಕೊಳ್ಳಲ್ಪಟ್ಟವರನ್ನಾಗಿ ಕಂಡು ಈ ರಾಮಕೃಷ್ಣರನ್ನು ದೂರೀಕರಿಸಿ ಅಧಿಕ ಹೇಗೆ ಆದೀತೋ ಹಾಗೆ ಶಿಕ್ಷೆಯನ್ನು ಮಾಡಿರಿ. ಹೀಗೆ(ಹೇಳಿ) ಶಸ್ತ್ರಾಸ್ತ್ರ ಬಲ ಶಿಕ್ಷಾದಿಗಳಿಂದ ಹ್ರಾಸವಿಲ್ಲದಿರುವ, ಕ್ರೂರವಾದ ಪರಾಕ್ರಮವುಳ್ಳ, ರುದ್ರದೇವರ ಪ್ರಸಾದದಿಂದ ಮಾಡಲ್ಪಟ್ಟ ರಕ್ಷೆಯುಳ್ಳ, ಯಾರಿಂದಲೂ ಸಂಹರಿಸಿಕೊಳ್ಳಲ್ಪಡದಿರುವ ಸೈನ್ಯವನ್ನು ಅರ್ಪಣೆ ಕೊಟ್ಟನು. ॥ ೧೨೩ ॥

ಮೂ ॥ ಶ್ರುತ್ವೈವ ರಾಜವಚನಂ ಬಲಮಕ್ಷಯಂ ತ-
ದಕ್ಷೌಹಿಣೀದಶಕಯುಗ್ಮಮನಂತವೀರ್ಯಂ ।
ಕೃಷ್ಣಂ ಚಕಾರ ವಿವಿಧಾಸ್ತ್ರಧರಂ ಸ್ವಕೋಷ್ಠೇ
ಸಿಂಹಂ ಯಥಾಖಿಲಸೃಗಾಲಬಲಂ ಸಮೇತಂ ॥ ೧೨೪ ॥

ಅ॥ ಅಕ್ಷೌಹಿಣಿಗಳ ಹತ್ತಿರ ಎರಡು, (ಅಂದರೆ ಇಪ್ಪತ್ತು ಅಕ್ಷೌಹಿಣೀ ಸಂಖ್ಯಾಕವಾದ) ಅನೇಕ ಅಸ್ತ್ರಗಳನ್ನು ಧರಿಸಿಕೊಂಡು ಇರುವ, ನಾಶರಹಿತವಾದ ಆ ಸೈನ್ಯವು, ಅಪರಿಮಿತ ಸಾಮರ್ಥ್ಯವುಳ್ಳ ಶ್ರೀಕೃಷ್ಣನನ್ನು ವಿಂಲಿತವಾದಎಲ್ಲಾ ನರಿಗಳ ಸೈನ್ಯವು ಸಿಂಹವನ್ನೆಂಬಂತೆ ತಮ್ಮ ಮಂಧ್ಯದಲ್ಲಿ ಮಾಡತು. ॥ ೧೨೪ ॥

~~ಮೂ ॥ ಜಾನನ್ನಪೀಶ್ವರಮನಂತಬಲಂ ಮಹೇಂದ್ರಃ~~
ಕೃಷ್ಣಂ ನಿಜಂ ರಥಮಯಾತಯದಾಯುಧಾಢ್ಯಂ ।
ಶುಶ್ರೂಷಣಾಯ ಪರಮಸ್ಯ ಯಥಾ ಸಮುದ್ರ-
ಮರ್ಘ್ಯೇಣ ಪೂರಯತಿ ಪೂರ್ಣಜಲಂ ಜನೋಽಯಂ ॥ ೧೨೫ ॥

ಅ॥ ದೇವೇಂದ್ರನು (ಸರ್ವಸಂಪತ್ತುಗಳಿಗೂ ಲೋಕಗಳಿಗೂ) ನಿಯಾಮಕನಾದ, ಅಪರಿಮಿತ ಸಾಮರ್ಥ್ಯವುಳ್ಳ(ಅಂದರೆ ಅಪರಿಮಿತ ಸಾಮರ್ಥ್ಯವಿದ್ದುದರಿಂದ ರಥ ಆಯುಧ ಮೊದಲಾದವುಗಳ ಅಪೇಕ್ಷೆಯಿಲ್ಲದಿರುವ) ಶ್ರೀಕೃಷ್ಣನನ್ನು ತಿಳಿದವನಾದಾಗ್ಯೂ ಶ್ರೀಕೃಷ್ಣನ ಸೇವೆಗೋಸ್ಕರ ಆಯುಧಗಳಿಂದ ಪೂರ್ಣವಾದ ಶ್ರೀಕೃಷ್ಣ ಸಂಬಂಧಿಯಾದ ಅಥವಾ ಶ್ರೀಹರಿಯು ಇಂದ್ರನಿಗೆ ಕೊಟ್ಟದ್ದರಿಂದ ತನ್ನ (ಇಂದ್ರನ) ಸಂಬಂಧಿಯಾದ ರಥವನ್ನು ಕಳುಹಿಸಿಕೊಟ್ಟನು. (ದೇವೇಂದ್ರನಿಗೆ ಶ್ರೀಹರಿಯ ಸೇವೆಯು ನಿತ್ಯ ವಿಧಿರೂಪವಾದುದು ಎಂದು ಸೂಚಿಸುವುದಕ್ಕಾಗಿ ಆ ವಿಷಯದಲ್ಲಿ ದೃಷ್ಟಾಂತವನ್ನು ಹೇಳುತ್ತಾರೆ.) ಈ ವಿದ್ಧಿಬದ್ಧರಾದ ಜನರು ಪೂರ್ಣವಾದ ಜಲವುಳ್ಳ (ಅಂದರೆ ಜಲಭರಿತವಾದ) ಸಮುದ್ರವನ್ನು ಅರ್ಘ್ಯದಿಂದ ಹೇಗೆ ಪೂರ್ಣೀಕರಿಸುತ್ತಾರೋ ಹಾಗೆಯೇ. (ಅಂದರೆ ಸಮುದ್ರದ ಜಲವನ್ನೇ ಕರಸಂಪುಟದಿಂದ ತೆಗೆದು 'ಸಮುದ್ರಃ ತೃಪ್ಯತು' ಎಂದು ಅರ್ಘ್ಯದಿಂದ ಹೇಗೆ ಪೂರ್ಣವನ್ನಾಗಿ ಮಾಡುತ್ತಾರೋ ಹಾಗೆಯೇ. ತಥಾ ಚ ಇಂದ್ರನು ತನ್ನ ವಿಧಿಯನ್ನು ಪರಿಪಾಲಿಸಿರುತ್ತಾನೆ.) ॥ ೧೨೫ ॥

ಮೂ ॥ ಸ್ವಂ ಸ್ಯಂದನಂ ತು ಭಗವಾನ್ ಸ ಮಹೇಂದ್ರದತ್ತ-
ಮಾರುಹ್ಯ ಸೂತವರವಾತಲಿಸಂಗೃಹೀತಂ ।
ನಾನಾಯುಧೋಗ್ರಕಿರಣಸ್ತರಣಿರ್ಯಥೈವ
ಧ್ವಾಂತಂ ವಿನಾಶಯದಶೇಷತ ಆಶು ಸೈನ್ಯಂ ॥ ೧೨೬ ॥

ಅ॥ ಪೂಜ್ಯನಾದ ಶ್ರೀಕೃಷ್ಣನು ಇಂದ್ರನ ಸೂತಶ್ರೇಷ್ಠನಾದ ವಾತಲಿಯಿಂದ ತರಲ್ಪಟ್ಟ, ದೇವೇಂದ್ರನಿಂದ ಕೊಡಲ್ಪಟ್ಟ ತನ್ನ ರಥವನ್ನು ಏರಿ ನಾನಾ ವಿಧಗಳಾದ ಆಯುಧಗಳೆನ್ನುವ ಕ್ರೂರಗಳಾದ ಕಿರಣಗಳುಳ್ಳ ಸೂರ್ಯನು ಅಂಧಕಾರವನ್ನು ಹೇಗೆ ವಿನಾಶಪಡಿಸುತ್ತಾನೋ (ಹಾಗೆಯೇ) ಎಲ್ಲಾ ಸೈನ್ಯವನ್ನೂ ಶೀಘ್ರದಲ್ಲಿ ನಾಶಪಡಿಸಿದನು. ॥ ೧೨೬ ॥

ಮೂ ॥ ನಿಶ್ಶೇಷತೋ ವಿನಿಹತೇ ಸ್ವಬಲೇ ಸ ಕಂಸ-
ಶ್ಚರ್ಮಾಸಿಪಾಣಿರಭಿಯಾತುಮಿಯೇಷ ಕೃಷ್ಣಂ ।
ತಾವತ್ತಮೇವ ಭಗವಂತಮುಪಪ್ರಯಾಂತ-
ಮುತ್ತುಂಗಮಂಚಶಿರಸಿ ಪ್ರದದರ್ಶ ವೀರಂ ॥ ೧೨೭ ॥

ಅ॥ ಚರ್ಮವೂ ಖಡ್ಗವೂ ಕೈಯಲ್ಲಿ ಉಳ್ಳ ಆ ಕಂಸನು ತನ್ನ ಬಲವು ಸಂಪೂರ್ಣವಾಗಿ ಸಂಹರಿಸಿಕೊಳ್ಳಲ್ಪಡುತ್ತಿರಲು ಕೃಷ್ಣನನ್ನು ಹೊಂದಲಿಕ್ಕೆಯಾವಾಗ ಇಚ್ಛಿಸಿದನೋ ಆಗ ರಣರಂಗದಲ್ಲಿರತಕ್ಕ ಆರಬ್ಧಾಂತ ಗಾಮಿಯಾದ ತನ್ನ ಎದುರಿಗೆ ಬರತಕ್ಕ ಶ್ರೀಕೃಷ್ಣನನ್ನು ಎತ್ತರವಾದ ಮಂಚದ ಮೇಲೆ ಕಂಡನು. ॥ ೧೨೭ ॥

ಮೂ ॥ ತಂ ಶ್ಯೇನವೇಗಮಭಿತಃ ಪ್ರತಿಸಂಚರಂತಂ
ನಿಶ್ಛಿದ್ರಮಾಶು ಜಗೃಹೇ ಭಗವಾನ್ ಪ್ರಗೃಹ್ಯ ।
ಕೇಶೇಷು ಚೈನಮುಭಿಮೃಶ್ಯ ಕರೇಣ ವಾಮೇ-
ನೋದ್ಧೃತ್ಯ ದಕ್ಷಿಣಕರೇಣ ಜಘಾನ ಕೇಽಸ್ಯ ॥ ೧೨೮ ॥

ಅ॥ ಶ್ರೀಕೃಷ್ಣನು ಪಕ್ಷಿವಿಶೇಷದ ವೇಗದಂತೆ ವೇಗವುಳ್ಳ, ಸುತ್ತಲೂ ಅವಿಚ್ಛಿನ್ನ ಹೇಗೆ ಆದೀತೋ ಹಾಗೆ ತನ್ನ ಎದುರಿಗೆ ಹಾರಿಬರುವ ಕಂಸನನ್ನು ಬಲಾತ್ಕಾರದಿಂದ ಹಿಡಿದು ಶೀಘ್ರದಲ್ಲಿ ಕೇಶಗಳಲ್ಲಿ ಮುಟ್ಟಿ (ಅಂದರೆ ಕೇಶಗಳನ್ನು ಸೆಳೆದು) ಹಿಡಿದನು. ಈ ಕಂಸನನ್ನು ಎಡ ಕೈಯಿಂದ ಎತ್ತಿ ಬಲ ಕೈಯಿಂದ ಕಂಸನ ಶಿರಸ್ಸಿನಲ್ಲಿ ಕೊಂದನು. (ಅಂದರೆ ಶಿರಸ್ಸಿಗೆ ಹೊಡೆದನು.) ॥ ೧೨೮ ॥

ಮೂ ॥ ಸಂಚಾಲಿತೇನ ಮುಕುಟೇನ ವಿಕುಂಡಲೇನ
ಕರ್ಣದ್ವಯೇನ ವಿಗತಾಭರಣೋರಸಾ ಚ ।
ಸ್ರಸ್ತಾಂಬರೇಣ ಜಘನೇನ ಸುಶೋಚ್ಯರೂಪಃ
ಕಂಸೋ ಬಭೂವ ನರಸಿಂಹಕರಾಗ್ರಸಂಸ್ಥಃ ॥ ೧೨೯ ॥

ಅ॥ ಪುರುಷಶ್ರೇಷ್ಠನಾದ ಶ್ರೀಕೃಷ್ಣನ ಹಸ್ತತಲದಲ್ಲಿರತಕ್ಕ ಕಂಸನು ಬಿದ್ದಿರತಕ್ಕ ಕಿರೀಟದಿಂದ (ಅಂದರೆ ಬಿದ್ದ ಕಿರೀಟವುಳ್ಳ ಶಿರಸ್ಸಿನಿಂದ) ಹೋಗಲ್ಪಟ್ಟ ಕುಂಡಲಗಳುಳ್ಳ ಎರಡು ಕಿವಿ

ಗಳಿಂದಲೂ ಹೋಗಲ್ಪಟ್ಟ ಆಭರಣವುಳ್ಳ ವಕ್ಷಃಸ್ಥಳದಿಂದಲೂ ಜಾರಿಹೋದ ವಸ್ತ್ರವುಳ್ಳ ಕಟಿ ಊರುಗಳ ಮಧ್ಯ ಪ್ರದೇಶದಿಂದಲೂ ಅತಿದುಃಖಿತವಾದ ರೂಪವುಳ್ಳವನು ಆದನು.

ವಿಶೇಷಾಂಶ—ನರಸಿಂಹನ ಕರಾಗ್ರದಲ್ಲಿರತಕ್ಕ ಹಿರಣ್ಯಕಶಿಪುವು ಹೇಗೆ ಅತಿ ಶೋಚ್ಯವಾದ ಸ್ವರೂಪವುಳ್ಳವನಾದನೋ ಹಾಗೆಯೇ ಕಂಸನು ಆದನು, ಎನ್ನುವ ಅರ್ಥವು ಸೂಚಿತವಾಯಿತು. ॥ ೧೨೯ ॥

ಮೂ ॥ ಉತ್ಕೃಷ್ಯ ತಂ ಸುರಪತಿಃ ಪರವೋಚ್ಚಮಂಚಾ-
ದನ್ಯೈರಜೇಯಮತಿವೀರ್ಯಬಲೋಪಪನ್ನಂ ।
ಅಬ್ಜೋದ್ಭವೇಶವರಗುಪ್ತ ಮನಂತಶಕ್ತಿಃ
ಭೂಮೌ ನಿಪಾತ್ಯ ಸ ದದೌ ಪದಯೋಃ ಪ್ರಹಾರಂ ॥ ೧೩೦ ॥

ಅ॥ ದೇವತೆಗಳಿಗೆ ಅಧಿಪತಿಯಾದ, ಅಪರಿಮಿತ ಶಕ್ತಿಯುಳ್ಳ ಆ ಶ್ರೀಕೃಷ್ಣನು ಇತರರಿಂದ ಗೆಲ್ಲಲಿಕ್ಕೆ ಅಶಕ್ಯನಾದವನು, ಅತ್ಯಂತ ವೀರ್ಯವೂ ಸಾಮರ್ಥ್ಯವೂ ಇವುಗಳಿಂದ ಕೂಡಿದವನು; ಬ್ರಹ್ಮನು ರುದ್ರನು ಇವರ ವರಗಳಿಂದ ರಕ್ಷಿಸಿಕೊಳ್ಳಲ್ಪಟ್ಟವನು, ಇಂತಹ ಕಂಸನನ್ನು ಅತ್ಯಂತ ಎತ್ತರವಾದ ಮಂಚದದೆಸೆಯಿಂದ ಸೆಳೆದು ಭೂಮಿಯಲ್ಲಿ ಕೆಡಹಾಕಿ ಪಾದಗಳ ಸಕಾಶದಿಂದ (ಕಂಸನಿಗೋಸ್ಕರ) ತಾಡನವನ್ನು ಕೊಟ್ಟನು, (ಅಂದರೆ ಕಾಲುಗಳಿಂದ ಚೆನ್ನಾಗಿ ಒದ್ದನು.) ॥ ೧೩೦ ॥

ಕಂಸನು ಸಾಯುಜ್ಯವನ್ನು ಹೊಂದಿದನು ಎನ್ನುವ ಪುರಾಣೋಕ್ತಿಗೆ ಗತಿಯನ್ನು ಹೇಳುತ್ತಾರೆ—

ಮೂ ॥ ದೇಹೇ ತು ಯೋಽಭವದಮುಷ್ಯ ರವೇಶಬಂಧು-
ರ್ವಾಯುಃ ಸ ಕೃಷ್ಣತನುಮಾಶ್ರಯದನ್ಯಪಾಪಂ ।
ದೈತ್ಯಂ ಚಕರ್ಷ ಹರಿರತ್ರ ಶರೀರಸಂಸ್ಥಂ
ಪಶ್ಯತ್ಸು ಕಂಜಜಮುಖೇಷು ಸುರೇಷ್ವನಂತಃ ॥ ೧೩೧ ॥

ಅ॥ ಈ ಕಂಸನ ಶರೀರದಲ್ಲಿ ಶ್ರೀಹರಿಗೆ ಮಿತ್ರನಾದ ಅಥವಾ ರವಿರೂಪಳಾದ ಜಯಾದೇವಿಗೆ ಪತಿಯಾದ ಸಂಕರ್ಷಣನ ಪುತ್ರನಾದ ಯಾವ ವಾಯುದೇವರು ಇರುತ್ತಿದ್ದರೋ, ಆ ವಾಯುದೇವರು ಶ್ರೀಕೃಷ್ಣನ ಶರೀರವನ್ನು ಪ್ರವೇಶಮಾಡಿದರು. ನಾಶರಹಿತನಾದ ಶ್ರೀಹರಿಯು ಬ್ರಹ್ಮನೇ ಮೊದಲಾಗಿ ಉಳ್ಳ ದೇವತೆಗಳು ನೋಡುತ್ತಿರಲು ಈ ಕಂಸನ ಶರೀರದಲ್ಲಿರತಕ್ಕ, (ವಾಯುವಿನಿಂದ) ಇತರನಾದ ಪಾಪಿಷ್ಠನಾದ, ದೈತ್ಯನಾದ ಕಾಲನೇಮಿಯನ್ನು (ಅಂಧಂತಮಸ್ಸಿಗೆ) ಸೆಳೆದನು. ॥ ೧೩೧ ॥

ಮೂ ॥ ದ್ವೇಷಾತ್ಸ ಸರ್ವಜಗದೇಕಗುರೋಃ ಸ್ವಕೀಯೈಃ
ಪೂರ್ವಂ ಪ್ರವರ್ತಿತಜನೈಃ ಸಹಿತಃ ಸಮಸ್ತೈಃ ।
ಧಾತ್ರ್ಯಾದಿಭಿಃ ಪ್ರತಿಯಯೌ ಕುಮತಿಸ್ತಮೋಽಂಧ-
ಮನ್ಯೇಽಪಿ ಚೈವಮುಪಯಾಂತಿ ಹರಾವಭಕ್ತಾಃ ॥ ೧೩೨ ॥

ಅ॥ ದಂಭರ್ದ್ಧಿಯಿಂಳ್ಳ ಆ ಕಂಸನು ಎಲ್ಲಾ ಜಗತ್ತಿಗೆ ಮುಂಖ್ಯ ಗುರುವಾದ ಶ್ರೀಕೃಷ್ಣನ ದ್ವೇಷದದೆಸೆಯಿಂದ ಮೊದಲು ನಾಶಹೊಂದಿದ ಜನರಿಂದ ಉಪವಾತೆಯೇ ಮೊದಲಾಗಿ ಉಳ್ಳ ಎಲ್ಲಾ ಸ್ವಕೀಯರಿಂದ ಕೂಡಿದವನಾಗಿ ಅಂಧಂತಮಂಸ್ಸನ್ನು ಹೊಂದಿದನು. ಇತರರಾದ ಶ್ರೀಹರಿಯಲ್ಲಿ ದ್ವೇಷಿಗಳಾದವರು ಹೀಗೆಯೇ ಅಂಧಂತಮಂಸ್ಸನ್ನು ಹೊಂದುತ್ತಾರೆ. ॥ ೧೩೨ ॥

ಮೂ ॥ ನಿತ್ಯಾತಿದುಃಖಮನಿವೃತ್ತಿ ಸುಖವ್ಯಪೇತ–
ಮಂಧಂತಮೋ ನಿಯತಮೇತಿ ಹರಾವಭಕ್ತಃ ।
ಭಕ್ತೋಽಪಿ ಕಂಜಜಗಿರೀಶಮುಖೇಷು ಸರ್ವ–
ಧರ್ಮಾರ್ಣವೋಽಪಿ ನಿಖಿಲಾಗಮನಿರ್ಣಯೇನ ॥ ೧೩೩ ॥

ಅ॥ ಬ್ರಹ್ಮನು ರುದ್ರನು ಇವರೇವೇ ಮೊದಲಾಗಿ ಉಳ್ಳವರಲ್ಲಿ ಭಕ್ತನಾದಾಗ್ಯೂ ಸರ್ವ ಧರ್ಮಗಳಿಂದ ಸಮುದ್ರದಂತಿರುವವನಾದಾಗ್ಯೂ (ಅಂದರೆ ತಮಗೆ ವಿಹಿತಗಳಾದ ಸರ್ವ ಧರ್ಮಗಳನ್ನು ಅನುಷ್ಠಾನ ಮಾಡತಕ್ಕ ಸ್ವಭಾವವಿರುವವನಾದಾಗ್ಯೂ) ಶ್ರೀಹರಿಯಲ್ಲಿ ಅಭಕ್ತನಾದರೆ ನಿರಂತರದಲ್ಲಿಯೂ ಅತಿ ದುಃಖವುಳ್ಳ, ಪುನರಾವೃತ್ತಿ ರಹಿತವಾದ ಸುಖ ಲೇಶದಿಂದಲೂ ವಿರಹಿತವಾದ ಇಂತಹ ಅಂಧಂತಮಂಸ್ಸನ್ನು ಎಲ್ಲಾ ಆಗಮಂಗಳ ನಿರ್ಣಯದಿಂದ ನಿಶ್ಚಯವಾಗಿಯೂ ಹೊಂದುತ್ತಾನೆ. ॥ ೧೩೩ ॥

ಮಹಾಹಾತ್ಮ್ಯಜ್ಞಾನಪೂರ್ವಕವಾಗಿ ಶ್ರೀಹರಿಯ ಭಕ್ತಿಯಿಂದಲೇ ಮುಂಕ್ತಿಯು ಸಿಗುತ್ತದೆ ಎನ್ನುತ್ತಾರೆ—

ಮೂ ॥ ಯೋ ವೇತ್ತಿ ನಿಶ್ಚಿತಮತಿರ್ಹರಿಮುಜ್ಜಹೇಶ–
~~ಪೂರ್ವಾಖಿಲಸ್ಯ ಜಗತಃ ಸಕಲೇಽಪಿ ಕಾಲೇ ।~~
ಸೃಷ್ಟಿಸ್ಥಿತಿಪ್ರಲಯಮೋಕ್ಷದಮಾತ್ಮತಂತ್ರಂ
ಲಕ್ಷ್ಮ್ಯಾಃ ಅಪೀಶಮತಿಭಕ್ತಿಯುತಃ ಸ ಮುಚ್ಯೇತ್ ॥ ೧೩೪ ॥

ಅ॥ ಯಾವ ಪುರುಷನು ಬ್ರಹ್ಮನು ರುದ್ರನು ಇವರೇ ಮೊದಲಾಗಿ ಉಳ್ಳ ಎಲ್ಲಾ ಜಗತ್ತಿಗೆ ಸಕಲ ಕಾಲದಲ್ಲಿಯೂ ಸೃಷ್ಟಿ, ಸ್ಥಿತಿ, ನಾಶ, ಮುಂಕ್ತಿ ಇವುಗಳನ್ನು ಕೊಡತಕ್ಕ, ಸರ್ವಸ್ವತಂತ್ರನಾದ ಲಕ್ಷ್ಮೀದೇವಿಗೂ ನಿಯಾಮಂಕನಾದ ಶ್ರೀಹರಿಯನ್ನು (ಹಿಂದೆ ಹೇಳಿದ ಅರ್ಥದಲ್ಲಿ) ನಿಶ್ಚಿತವಾದ ಜ್ಞಾನವುಳ್ಳವನಾಗಿ ತಿಳಿಯುತ್ತಾನೋ, ಆ ಪುರುಷನು(ಶ್ರೀಹರಿಯಲ್ಲಿ) ಅತ್ಯಂತ ಭಕ್ತಿಯುಂಕ್ತನಾಗಿ ಮುಂಕ್ತನಾಗುತ್ತಾನೆ. ॥ ೧೩೪ ॥

ಮೂ ॥ ತಸ್ಮಾದನಂತಗುಣಪೂರ್ಣಮಮುಂ ರಮೇಶಂ
ನಿಶ್ಚಿತ್ಯ ದೋಷರಹಿತಂ ಪರಯೈವ ಭಕ್ತ್ಯಾ ।
ವಿಜ್ಞಾಯ ದೈವತಗಣಾಂಶ್ಚ ಯಥಾಕ್ರಮೇಣ
ಭಕ್ತ್ಯಾ ಹರೇರಿತಿ ಸದೈವ ಭಜೇತ ಧೀರಃ ॥ ೧೩೫ ॥

ಅ॥ ಮುಂಕ್ತನಾಗುತ್ತಾನೆನ್ನುವ ನಿಯಮವಿದ್ದುದರಿಂದ ದೃಢ ಭಕ್ತಿಯುಳ್ಳ ಪುರುಷನು ಈ ಶ್ರೀಹರಿಯನ್ನು ಅನಂತ ಗುಣಗಳಿಂದ ಪರಿಪೂರ್ಣನನ್ನಾಗಿಯೂ ದೋಷಲೇಶ ರಹಿತನನ್ನಾ

ಗಿಯಂ ಲಕ್ಷ್ಮೀಪತಿಯಂನ್ನಾಗಿಯಂ ನಿಶ್ಚಯಿಸಿ ಸರ್ವೋತ್ಕೃಷ್ಟವಾದ ಭಕ್ತಿಯಿಂದಲೇ ಯಾವಾಗಲೂ ಮಂಕ್ಯವಸ್ಥೆಯಂಲ್ಲಿಯಂ ಭಜಿಸಬೇಕಂ. ಬ್ರಹ್ಮಾದಿದೇವತೆಗಳ ಸಮೂಹಗಳನ್ನು ಹಿಂದೆ ಹೇಳಿದ ತಾರತಮ್ಯ ಕ್ರಮದಿಂದ ತಿಳಿದುಕೊಂಡಂ ಶ್ರೀಹರಿಯಂ ಭಕ್ತರಂ ಎನ್ನುವ (ಬುದ್ಧಿಯಿಂದ ಭಜಿಸಬೇಕಂ. ॥೧೩೫॥

ಮೂ ॥ ನಿಹತ್ಯ ಕಂಸಮೋಜಸಾ ವಿಧಾತೃಶಂಭುಪೂರ್ವಕೈಃ ।
ಸ್ತುತಃ ಸ್ರಸೂನವರ್ಷಿಭಿರ್ಮುದೋದ ಕೇಶವೋಽಧಿಕಂ ॥ ೧೪೬ ॥

ಅ॥ ಶ್ರೀಕೃಷ್ಣನಂ ನಿರಾಯಾಸವಾಗಿ ಕಂಸನನ್ನು ಸಂಹರಿಸಿ ಪುಷ್ಪವೃಷ್ಟಿಯಂನ್ನು ಮಾಡುತಕ್ಕ ಬ್ರಹ್ಮ ರುದ್ರ ಮೊದಲಾದ ದೇವತೆಗಳಿಂದ ಅತ್ಯಂತವಾಗಿ ಸ್ತೋತ್ರ ಮಾಡಿಕೊಳ್ಳಲ್ಪಟ್ಟವನಾಗಿ ಅತ್ಯಂತವಾಗಿ ಸಂತೋಷವನ್ನು ಹೊಂದಿದನಂ. ॥ ೧೩೬ ॥

ಅಧಿಕಂ ಮುಂದೋದ ಎನ್ನುವ ಉಕ್ತಿಗೆ ತಾತ್ಪರ್ಯವನ್ನು ಹೇಳುತ್ತಾರೆ—

ಮೂ ॥ ಸದೈವ ಮೋದರೂಪಿಣೋಽಮುದೋಕ್ತಿರಸ್ಯ ಲೌಕಿಕೀ ।
ಯಥೋದಯೋ ರವೇರ್ಭವೇತ್ಸದೋದಿತಸ್ಯ ಲೋಕತಃ ॥೧೩೭॥

ಅ॥ ಹೀಗೆ ಯಾವಾಗಲೂ ಉದಯಿಸಿಕೊಂಡೇ ಇದ್ದ ಸೂರ್ಯನಿಗೆ ಲೋಕದಿಂದಲೇ ಉದಯವು ಆಗುತ್ತದೋ (ಹಾಗೆಯೇ) ಯಾವಾಗಲೂ ಆನಂದ ರೂಪಿಯೇ ಆದ ಶ್ರೀಕೃಷ್ಣನಿಗೆ ಮೋದವು (ಸಂತೋಷವು) ಎಂದಂ ಹೇಳಿದ್ದು ಅಲ್ಪಜ್ಞರ ಬುದ್ಧಿಯನ್ನು ಅನುಸರಿಸಿಕೊಂಡಂ (ಎಂದು ತಿಳಿಯುತಕ್ಕದ್ದು) ॥ ೧೩೭ ॥

ಶ್ರೀಕೃಷ್ಣನು ಯಾವಾಗಲೂ ಆನಂದರೂಪಿಯೇ ಆಗಿರುತ್ತಾನೆ, ಎಂದಂ ಸಾಧಿಸುವದಕ್ಕಾಗಿಯೇ ಶ್ರೀಕೃಷ್ಣನ ಸ್ವರೂಪವನ್ನು ನಿರೂಪಿಸುತ್ತಾರೆ—

ಮೂ ॥ ಅನಂತಚಿತ್ಸುಖಾರ್ಣವಃ ಸದೋದಿತೈಕರೂಪಕಃ ।
ಸಮಸ್ತದೋಷವರ್ಜಿತೋ ಹರಿರ್ಗುಣಾತ್ಮಕಃ ಸದಾ ॥ ೧೩೮ ॥

ಅ॥ ಶ್ರೀಹರಿಯಂ ಸರ್ವದಾ ಅಪರಿಮಿತಗಳಾದ ಜ್ಞಾನ ಆನಂದಗಳಿಂದ ಸಮುದ್ರದಂತಿರುವವನಂ, ಯಾವಾಗಲೂ ಅಭಿವ್ಯಕ್ತವಾದ ಮುಖ್ಯವಾದ ಸ್ವರೂಪವುಳ್ಳವನಂ, ಸರ್ವ ದೋಷಗಳಿಂದ ವಿರಹಿತನಂ, ಆನಂದಾದಿಗಳೇ ಶರೀರವಾಗಿ ಉಳ್ಳವನಂ. ॥ ೧೩೮ ॥

ಮೂ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಕಂಸವಧೋ
ನಾಮ ತ್ರಯೋದಶೋಽಧ್ಯಾಯಃ ॥ ೧೩ ॥

ಅ॥ ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ನಿರ್ಮಿತವಾದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಕಂಸ ವಧವೆನ್ನುವ ಹದಿಮೂರನೇ (೧೩ನೇ) ಅಧ್ಯಾಯಂವು ಸಮಾಪ್ತವಾಯಿತಂ. ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಹದಿನಾಲ್ಕನೇ ಅಧ್ಯಾಯವು

ಮೂ ॥ ಓಂ ॥ ಕೃಷ್ಣೋ ವಿಮೋಚ್ಯ ಪಿತರಾವಭಿವಂದ್ಯ ಸರ್ವ-
ವಂದ್ಯೋಽಪಿ ರಾಮಸಹಿತಃ ಪ್ರತಿಪಾಲನಾಯ ।
ಧರ್ಮಸ್ಯ ರಾಜ್ಯಪದವೀಂ ಪ್ರಣಿಧಾಯ ಚೋಗ್ರ-
ಸೇನೇ ದ್ವಿಜತ್ವಮುಪಗಮ್ಯ ಮುಮೋಚ ನಂದಂ ॥ ೧ ॥

ಅ॥ ಶ್ರೀಕೃಷ್ಣನು ದೇವಕೀ ವಸುದೇವರನ್ನು (ಶೃಂಖಲೆಯಿಂದ) ಬಿಡಿಸಿ ಧರ್ಮವನ್ನು ರಕ್ಷಿಸುವುದಕ್ಕಾಗಿ ಬಲರಾಮನಿಂದ ಕೂಡಿದವನಾಗಿ ತಾನು ಎಲ್ಲವರಿಂದಲೂ ನಮಸ್ಕರಿಸಿಕೊಳ್ಳ ಲ್ಪಡುವವನಾದಾಗ್ಯೂ ತಂದೆತಾಯಿಗಳನ್ನು ನಮಸ್ಕರಿಸಿ ಧರ್ಮಸಂರಕ್ಷಣೆಗಾಗಿ ಉಗ್ರಸೇನನಲ್ಲಿ ಮಧುರಾಪಟ್ಟಣದ ಆಧಿಪತ್ಯವನ್ನು ಸ್ಥಾಪಿಸಿ ಧರ್ಮಸಂರಕ್ಷಣೆಗಾಗಿ (ವಸುದೇವನದೆಸೆಯಿಂದ) ದ್ವಿಜತ್ವವನ್ನು ಹೊಂದಿ (ಅಂದರೆ ಉಪನಯನದಲ್ಲಿ ಗಾಯಂತ್ರ್ಯುಪದೇಶವನ್ನು ಹೊಂದಿ) ನಂದ ಗೋಪನನ್ನು ಬಿಡಿಸಿದನು. (ಅಂದರೆ ನಂದಗೋಪನನ್ನು ಸಮಾಧಾನ ಪಡಿಸಿ ವೃಂದಾವನಕ್ಕೆ ಕಳುಹಿಸಿಕೊಟ್ಟನು.)

ವಿಶೇಷಾಂಶ—ಶ್ರೀಮದಾಚಾರ್ಯರು ಕಂಸನನ್ನು ಸಂಹರಿಸಿದ ಮೇಲೆ ಸಜ್ಜನರಿಗೆ ಧರ್ಮ ಶಿಕ್ಷಣ ರೂಪವಾದ ದೈತ್ಯ ತಿರಸ್ಕಾರ ರೂಪವಾದ ಶ್ರೀಕೃಷ್ಣನ ಲೀಲೆಯನ್ನು ಈ ಅಧ್ಯಾಯದಲ್ಲಿ ನಿರೂಪಿಸುವರು. ॥ ೧ ॥

ಮೂ ॥ ನಂದೋಽಪಿ ಶಾಂತ್ವವಚನೈರನುನೀಯ ಮುಕ್ತಿಂ
ಕೃಷ್ಣೇನ ತಚ್ಚರಣಪಂಕಜಮಾತ್ಮ ಸಂಸ್ಥಂ ।
ಕೃತ್ವಾ ಜಗಾಮ ಸಹ ಗೋಪಗಣೇನ ಕೃಚ್ಛ್ರಾ-
ದ್ಧ್ಯಾಯನ್ ಜನಾರ್ದನಮುವಾಸ ವನೇ ಸಭಾರ್ಯಃ ॥ ೨ ॥

ಅ॥ ಶ್ರೀಕೃಷ್ಣನಿಂದ ನಂದಗೋಪನೂ ಕೂಡ ಸಮಾಧಾನ (ದುಃಖ ಪರಿಹಾರರೂಪ) ವಚನಗಳಿಂದ ಸಮಾಧಾನ ಪಡಿಸಿ ಕಳುಹಿಸಿಕೊಳ್ಳಲ್ಪಟ್ಟನು. ಆ ಶ್ರೀಕೃಷ್ಣನ ಪಾದಪದ್ಮವನ್ನು ಅಂತಃಕರಣದಲ್ಲಿ ನಿಶ್ಚಲವನ್ನಾಗಿ ಮಾಡಿ ಗೋಪರ ಸಮೂಹದಿಂದ ಕೂಡಿಕೊಂಡು ಕಷ್ಟದಿಂದ ನಂದಗೋಪನು ಹೋದನು. ಹೆಂಡತಿಯಿಂದ ಕೂಡಿದ ನಂದಗೋಪನು ಶ್ರೀಹರಿಯನ್ನು ಧ್ಯಾನಿ ಸುತ್ತಾ ವೃಂದಾವನದಲ್ಲಿಯೇ ಆವಾಸವಮಾಡಿದನು. ॥ ೩ ॥

ಮೂ ॥ ಕೃಷ್ಣೋಽಪ್ಯವಂತಿಪುರವಾಸಿನಮೋತ್ಯ ವಿಪ್ರಂ
ಸಾಂದೀಪಿನಂ ಸಹ ಬಲೇನ ತತೋಽಧ್ಯಗೀಷ್ಟ ।
ವೇದಾನ್ ಸಕೃನ್ನಿಗದಿತಾನ್ನಿಖಿಲಾಶ್ಚ ವಿದ್ಯಾಃ
ಸಂಪೂರ್ಣಸಂವಿದಪಿ ದ್ಯೈವತಶಿಕ್ಷಣಾಯ ॥ ೪ ॥

ಅ॥ ಸಂಪೂರ್ಣ ಜ್ಞಾನವುಳ್ಳವನಾದಾಗ್ಯೂ ಶ್ರೀಕೃಷ್ಣನು ಬಲರಾಮನಿಂದ ಕೂಡಿಕೊಂಡು ಅವಂತಿಪಟ್ಟಣದಲ್ಲಿ ಆವಾಸ ಮಾಡಿಕೊಂಡು ಇರತಕ್ಕ ಸಾಂದೀಪಿನಾಮಕ ಬ್ರಾಹ್ಮಣನನ್ನು ಹೊಂದಿ ಆ ಸಾಂದೀಪಿ ಬ್ರಾಹ್ಮಣನದೆಸೆಯಿಂದ ಒಂದಾವರ್ತಿಯೇ ಹೇಳಲ್ಪಟ್ಟ ವೇದಗಳನ್ನೂ ನಿಖಿಲ ವಿದ್ಯೆಗಳನ್ನೂ ದೇವತೆಗಳ ಶಿಕ್ಷೆಗೋಸ್ಕರ ಅಧ್ಯಯನ ಮಾಡಿದನು. ॥ ೩ ॥

ದೈವತ ಶಿಕ್ಷಣವೆಂದು ಹೇಳಿದ್ದನ್ನು ವಿಶದೀಕರಿಸುತ್ತಾರೆ—

ಮೂ ॥ ಧರ್ಮೋ ಹಿ ಸರ್ವವಿದುಷಾಮಪಿ ದೈವತಾನಾಂ
ಪ್ರಾಪ್ತೇ ನರೇಷು ಜನನೇ ನರವತ್ ಪ್ರವೃತ್ತಿಃ ।
ಜ್ಞಾನಾದಿಗೂಹನಮುತಾಧ್ಯಯನಾದಿರತ್ರ
ತಚ್ಛಾಸನಾರ್ಥಮವಸದ್ಭಗವಾನ್ ಗುರೌ ಚ ॥ ೪ ॥

ಅ॥ ಸರ್ವಜ್ಞಾನಿಗಳಾದಾಗ್ಯೂ ದೇವತೆಗಳಿಗೆ ಮನುಷ್ಯರಲ್ಲಿ ಅವತಾರವು ಪ್ರಾಪ್ತವಾಗುತ್ತಿರಲು ಮನುಷ್ಯನಂತೆ ಪ್ರವೃತ್ತಿಯು, ಜ್ಞಾನ ಬಲಾದಿಗಳನ್ನ ಅಡಗಿಸಿಕೊಳ್ಳುವಿಕೆಯು ಹಾಗೆಯೇ ವೇದಪಠನ ಮೊದಲಾದುದು (ಅಂದರೆ ವರ್ಣೋಚಿತ ವಿದ್ಯಾಭ್ಯಾಸವು,) ಯಾವ ಕಾರಣದಿಂದ ಧರ್ಮವೋ, ಆದಕಾರಣ ಶ್ರೀಹರಿಯು ಅವತಾರ ಮಾಡಿದವರಿಗೆ ಧರ್ಮವನ್ನು ತಿಳಿಸುವುದಕ್ಕಾಗಿ ಗುರುಗಳ ಅಧೀನದಲ್ಲಿಯೂ ಆವಾಸಮಾಡಿದನು, ॥ ೪ ॥

ಮೂ ॥ ಗುರ್ವರ್ಥಮೇಷ ಮೃತಪುತ್ರಮುದಾತ್ ಪುನಶ್ಚ
ರಾಮೇಣ ಸಾರ್ಧಮಗಮನ್ಮಧುರಾಂ ರಮೇಶಃ ।
ಪೌರೈಃ ಸಜಾನಪದಬಂಧುಜನೈರಜಸ್ರ-
ಮಭ್ಯರ್ಚಿತೋ ನ್ಯವಸದಿಷ್ಟಕೃದಾತ್ಮಿತೋ ಯಃ ॥ ೫ ॥

ಅ॥ ಈ ಶ್ರೀಕೃಷ್ಣನು ಸಾಂದೀಪಿ ನಾಮಕ ಗುರುಗಳಿಗೋಸ್ಕರ ಮರಣವನ್ನು ಹೊಂದಿದ ಮಗನನ್ನು (ದಕ್ಷಿಣಾರೂಪದಿಂದ) ಕೊಟ್ಟನು. ಮತ್ತು ರಮಾಪತಿಯಾದ ಶ್ರೀಕೃಷ್ಣನು ಬಲರಾಮನಿಂದ ಕೂಡಿಕೊಂಡು ಮಧುರಾಪಟ್ಟಣಕ್ಕೆ ಹೋದನು. ಶ್ರೀಹರಿಯು ದೇಶಸ್ಥರೂ ಬಂಧು ಜನರೂ ಇವರಿಂದ ಸಹಿತರಾದ ನಗರ ವಾಸಿಗಳಿಂದ ನಿರಂತರದಲ್ಲಿಯೂ ಪೂಜಿಸಿಕೊಳ್ಳಲ್ಪಟ್ಟವನಾಗಿ ತನ್ನ ತಂದೆ ತಾಯಿಗಳಿಗೋಸ್ಕರ ಇಷ್ಟವನ್ನು ಮಾಡುತ್ತಾ ಆವಾಸಮಾಡಿದನು. ॥ ೫ ॥

ಮೂ ॥ ಸರ್ವೇಽಪಿ ತೇ ಪತಿಮವಾಪ್ಯ ಹರಿಂ ಪುರಾ ಹಿ
ತಪ್ತಾ ಹಿ ಭೋಜಪತಿನಾ ಮುಮುದುರ್ನಿತಾಂತಂ ।
ಕಿಂ ವಾಚ್ಯಮತ್ರ ಸುತವಾಪ್ಯ ಹರಿಂ ಸ್ವಪಿತ್ರೋ-
ರ್ಯತ್ಪ್ರಾಖಿಲಸ್ಯ ಸುಜನಸ್ಯ ಬಭೂವ ಮೋದಃ ॥ ೬ ॥

ಅ॥ ಮಧುರಾಪಟ್ಟಣದಲ್ಲಿರತಕ್ಕವರೆಲ್ಲರೂ ಮೊದಲು ಕಂಸನಿಂದ ಯಾವ ಕಾರಣದಿಂದ ಸಂತಪ್ತರಾಗಿರುವರೋ, ಆದಕಾರಣ ಶ್ರೀಹರಿಯನ್ನು ಹೊಂದಿ ಅತ್ಯಂತವಾಗಿ ಸಂತುಷ್ಟರಾದರು, ಯಾವಾಗ ಎಲ್ಲಾ ಜನರಿಗೂ ಸಂತೋಷವಾಯಿತೋ, ಆಗ ಶ್ರೀಹರಿಯನ್ನು ಮಗನನ್ನು ಹೊಂದಿ ಶ್ರೀಕೃಷ್ಣನ ಮಾತಾಪಿತೃಗಳಿಗೆ ಸಂತೋಷವಾಯಿತು ಎನ್ನುವ ವಿಷಯದಲ್ಲಿ ಏನು ಹೇಳಬೇಕು. ॥ ೬ ॥

ಮೂ ॥ ಕೃಷ್ಣಾಶ್ರಯೋ ವಸತಿ ಯತ್ರ ಜನೋಽಪಿ ತತ್ರ
ವೃದ್ಧಿರ್ಭವೇತ್ ಕಿಮು ರಮಾಧಿಪತೇರ್ನಿವಾಸೇ ।
ವೃಂದಾವನಂ ಯದಧಿವಾಸತ ಆಸ ಸದ್ಮ್ಯಙ್
ಮಾಹೇಂದ್ರಸದ್ಮ ಸದೃಶಂ ಕಿಮು ತತ್ರ ಪುರ್ಯಾಂ ॥ ೭ ॥

ಅ॥ ಯಾವ ದೇಶದಲ್ಲಿ ಕೃಷ್ಣನೇ ಆಶ್ರಯನಾಗಿ ಉಳ್ಳ ಜನರು ವಾಸಮಾಡುತ್ತಾರೋ ಆ ದೇಶದಲ್ಲಿ ಸರ್ವಸಂಪತ್ತುಗಳ ಸಮೃದ್ಧಿಯು ಆಗುವುದು. ಸರ್ವಸಂಪತ್ತಿಗೆ ಅಭಿಮಾನಿನಿಯಾದ ಲಕ್ಷ್ಮೀದೇವಿಗೂ ಮುಖ್ಯ ಸ್ವಾಮಿಯಾದ ಶ್ರೀಕೃಷ್ಣನ ವಾಸಸ್ಥಾನದಲ್ಲಿ ವೃದ್ಧಿಯು ಆಗುತ್ತದೆಂದು ಏನು ಹೇಳತಕ್ಕದ್ದು. ವೃಂದಾವನವು ಯಾವ ಶ್ರೀಕೃಷ್ಣನ ಅಧಿಷ್ಠಾನದ್ದೆಸೆಯಿಂದ ಚೆನ್ನಾಗಿ ಮಹೇಂದ್ರ ಸಂಬಂಧಿಯಾದ ಮನೆಗೆ (ಅಂದರೆ ಸ್ವರ್ಗಲೋಕಕ್ಕೆ) ಸದೃಶವಾದುದು ಆಯಿತೋ ಅಂತಹ ಮಧುರಾ ಪಟ್ಟಣದಲ್ಲಿ ಸಂಪದ್ವೃದ್ಧಿಯು ಆಯಿತೆಂದು ಏನು ಹೇಳಬೇಕು. ॥ ೭ ॥

ಮೂ ॥ ಯೋನಾಧಿವಾಸಮೃಷಭೋ ಜಗತಾಂ ವಿಧತ್ತೇ
ವಿಷ್ಣುಸ್ತತೋ ಹಿ ವರತಾ ಸದನೇ ವಿಧಾತುಃ ।
ತಸ್ಮಾತ್ಪ್ರಭೋರ್ನಿವಸನಾನ್ಮಧುರಾ ಪುರೀ ಸಾ
ಶಶ್ವತ್ಸಮೃದ್ಧಜನಸಂಕುಲಿತಾ ಬಭೂವ ॥ ೮ ॥

ಅ॥ ಯಾವಕಾರಣದಿಂದ ಬ್ರಹ್ಮಾದಿ ಜಗತ್ತುಗಳಿಗೆ ಸ್ವಾಮಿಯಾದ ಶ್ರೀಹರಿಯು ಬ್ರಹ್ಮನ ಸ್ಥಾನವಾದ ಸತ್ಯಲೋಕದಲ್ಲಿ ಮುಖ್ಯವಾಗಿ ಆವಾಸವನ್ನು ಮಾಡುತ್ತಾನೋ ಆದಕಾರಣ ಸತ್ಯ ಲೋಕಕ್ಕೆ ಉತ್ತಮತ್ವವು. ಪ್ರಸಿದ್ಧವು. ಆದಕಾರಣ ಶ್ರೀಹರಿಯು ಆವಾಸದ್ದೆಸೆಯಿಂದ ಆ ಮಧುರಾ ಪಟ್ಟಣವು ಯಾವಾಗಲೂ(ಸಂಪತ್ತಿನಿಂದ)ಸಮೃದ್ಧರಾದ ಜನರಿಂದ ನಿಬಿಡವಾದುದು ಆಯಿತು. ॥ ೮ ॥

ಮೂ ॥ ರಕ್ಷತ್ಯಜೇ ತ್ರಿಜಗತಾಂ ಪರಿರಕ್ಷಕೇಽಸ್ಮಿನ್
ಸರ್ವಾನ್ ಯದೂನ್ ಮಗಧರಾಜಸುತೇ ಸ್ವಭರ್ತೃಃ ।
ಕೃಷ್ಣಾನ್ಮೃಶಂ ಪಿತುರವಾಪ್ಯ ಸವಿಪ್ಲವಮಸ್ತಿ-
ಪ್ರಾಸ್ತೀ ಶಶಂಸತುರತೀವ ಚ ದುಃಖಿತೇಽಸ್ಮೈ ॥ ೯ ॥

ಅ॥ ಈ ಭೂಲೋಕದಲ್ಲಿ, ಮೂರು ಲೋಕಗಳಿಗೆ ಮುಖ್ಯವಾಗಿ ರಕ್ಷಕನಾದ ಉತ್ಪತ್ತಿರಹಿತನಾದ ಶ್ರೀಕೃಷ್ಣನು ಎಲ್ಲಾ ಯಾದವರನ್ನು ರಕ್ಷಿಸುತ್ತಿರಲು ಜರಾಸಂಧನ ಪುತ್ರಿಯರಾದ ಅತ್ಯಂತ ದುಃಖಿಯರಾದ(ಅಂದರೆ ವೈಧವ್ಯದಿಂದುಂಟಾದ ಮಹಾ ದುಃಖಿವುಳ್ಳ)ಅಸ್ತಿ ಪ್ರಾಸ್ತಿ ಎನ್ನುವರಿಬ್ಬರು ತಮ್ಮ ತಂದೆಯಾದ ಜರಾಸಂಧನ ಸಮೀಪವನ್ನು ಹೊಂದಿ ತಮ್ಮ ಗಂಡನಾದ ಕಂಸನಿಗೆ ಕೃಷ್ಣನಿಂದ ಉಂಟಾದ ಮರಣವನ್ನು ತಂದೆಗೋಸ್ಕರ ಹೇಳಿದರು, ॥ ೯ ॥

ಮೂ ॥ ಶ್ರುತ್ವೈವ ತನ್ಮಗಧರಾಜ ಉರುಪ್ರರೂಢ-
ಬಾಹ್ವೋರ್ಬಲೇನ ನ ಜಿತೋ ಯುಧಿ ಸರ್ವಲೋಕ್ಯೈಃ ।

ಬ್ರಹ್ಮೇಶಚಂಡಮುನಿದತ್ತವರೈರಜೇಯೋ
ಮೃತ್ಯ್ವಜ್ಞಿತಶ್ಚ ವಿಜಯೀ ಜಗತಶ್ಚುಕೋಪ ॥ ೧೦ ॥

ಅ॥ ಅತ್ಯಂತ ಪ್ರರೂಢಗಳಾದ ಭುಜಗಳ ಬಲದಿಂದ ಎಲ್ಲಾ ಜನರಿಂದ ಯುಂದ್ಧದಲ್ಲಿ ಪರಾಭವವಿಲ್ಲದಿರುವ ಮಂಗಧರಾಜನು ಹೆಣ್ಣು ಮಕ್ಕಳ ದುಃಖಿವನ್ನು ಕೇಳಿ ಕುಪಿತನಾದನು. (ಪರಾಭವವಿಲ್ಲದಿರುವುದರಲ್ಲಿ ಕಾರಣಾಂತರವನ್ನು ಹೇಳುತ್ತಾರೆ) ಬ್ರಹ್ಮನು ರುದ್ರನು ದುರ್ವಾಸ ಋಷಿಯು ಇವರಿಂದ ಕೊಡಲ್ಪಟ್ಟ ವರಗಳಿಂದ ಜಗತ್ತುಗಳಿಗೆ ಜಯಿಸಲಿಕ್ಕೆ ಅಶಕ್ಯನಾದ, ಮರಣರಹಿತನೂ ಆದ ವಿಶೇಷಾಕಾರವಾಗಿ ಜಯಶೀಲನಾದ ಜರಾಸಂಧನು ಕೋಪಿಸಿದನು.

ವಿಶೇಷಾಂಶ—ಅಥ ಕಕ್ಷೀವತಃ ಪುತ್ರಂ ಗೌತಮಸ್ಯ ಮಹಾತ್ಮನಃ । ಶುಶ್ರಾವ ತಪಸಿ ಶ್ರೇಷ್ಠಂ ಉದಾರಂ ಚಂಡಕೌಶಿಕಂ ॥ ಎಂದು ಸಭಾ ಪರ್ವತದಲ್ಲಿ ॥ ೧೦ ॥

ಮೂ ॥ ಕ್ಷುಬ್ಧೋಽತಿಕೋಪವಶತಃ ಸ್ವಗದಾಮಮೋಘಾಂ
ದತ್ತಾಂ ಶಿವೇನ ಜಗೃಹೇ ಶಿವಭಕ್ತವಂದ್ಯಃ ।
ಶೈವಾಗವೋಽಖಿಲವಿದತ್ರ ಚ ಸುಸ್ಥಿರೋಽಸೌ
ಚಿಕ್ಷೇಪ ಯೋಜನಶತಂ ಸ ತು ತಾಂ ಪರಸ್ಮೈ ॥ ೧೧ ॥

ಅ॥ ಅತ್ಯಂತವಾದ ಕೋಪದ ಅಧೀನನಾದುದರಿಂದ ಕ್ಷೋಭವನ್ನು ಹೊಂದಿದವನು, ಎಲ್ಲಾ ಶೈವಾಗಮಂಗಳನ್ನು ತಿಳಿದಿರುವವನು, ಅಥವಾ ಶೈವಾಗಮಂಗಳಿಂದಲೇ ಎಲ್ಲಾ ತತ್ವ ಮೊದಲಾದ ಜಗತ್ತನ್ನು ತಿಳಿದವನು, ಅಥವಾ ಶೈವಾಗಮಂಗಳ ಅಖಿಲ ಅರ್ಥಸಾರವನ್ನು ತಿಳಿದವನು, ಶಿವಭಕ್ತರಿಂದ ನಮಸ್ಕರಿಸಿಕೊಳ್ಳಲ್ಪಟ್ಟವನು, ಇಂತಹ ಆ ಜರಾಸಂಧನು ಶಿವನಿಂದ ಕೊಡಲ್ಪಟ್ಟ ಅಮೋಘವಾದ ಗದೆಯನ್ನು ಹಿಡಿದುಕೊಂಡನು. ಆ ಈ ಜರಾಸಂಧನಾದರೂ ತನ್ನ ಪಟ್ಟಣದಲ್ಲಿಯೇ ಇದ್ದವನಾಗಿ ನೂರು (೧೦೦) ಯೋಜನದಲ್ಲಿ ಆ ಗದೆಯನ್ನು ಶ್ರೀಕೃಷ್ಣನಿಗೋಸ್ಕರ ಬಿಸಾಡಿದನು ॥ ೧೧ ॥

ಮೂ ॥ ಅವಾಕ್ಪಪಾತ ಚ ಗದಾ ಮಧುರಾಪ್ರದೇಶಾತ್
ಸಾ ಯೋಜನೇನ ಯದಿಮುಂ ಪ್ರಜಗಾದ ಪೃಷ್ಟಃ ।
ಏಕೋತ್ರ ರಾಮುಪಿ ಶತಾಚ್ಛತಯೋಜನೇತಿ
ದೇವರ್ಷಿರತ್ರ ಮಧುರಾಂ ಭಗವತ್ಪ್ರಿಯಾರ್ಥೇ ॥ ೧೨ ॥

ಅ॥ ಆ ಗದೆಯು ಮಧುರಾ ಪ್ರದೇಶದ್ದಿಸೆಯಿಂದ ಒಂದು ಯೋಜನದಿಂದ ಹಿಂದುಕಡೆಯುಲ್ಲಿಯೇ ಬಿತ್ತು. (ಅಂದರೆ ಮಧುರಾ ಪಟ್ಟಣದ ಒಂದು ಯೋಜನದಿಂದ ವ್ಯವಹಿತವಾದ ಪೂರ್ವದಿಕ್ಕಿನಲ್ಲಿ ಬಿತ್ತು.) (ಅದರಲ್ಲಿ ಕಾರಣವನ್ನು ಹೇಳುತ್ತಾರೆ.) ಯಾವ ಕಾರಣದಿಂದ ಮಧುರಾ ಪಟ್ಟಣವು (ಇಲ್ಲಿಂದ ಎಷ್ಟು) ಯೋಜನ ವ್ಯವಧಾನದಿಂದ (ಇರುತ್ತದೆಂದು) ಪ್ರಶ್ನಿಸಿಕೊಳ್ಳಲ್ಪಟ್ಟ ನಾರದ ಋಷಿಯು, ಶತ (೧೦೦) ಯೋಜನ ಸಂಖ್ಯಾ ವಿಶೇಷದ್ದಿಸೆಯಿಂದ ಒಂದು ಯೋಜನದಿಂದ ಅಧಿಕವಾದಾಗ್ಯೂ (ಅಂದರೆ ೧೦೧ ಯೋಜನದಿಂದ ವ್ಯವಹಿತವಾದಾಗ್ಯೂ) ಮಧುರಾ ಪಟ್ಟಣವನ್ನು ಶ್ರೀಕೃಷ್ಣನ ಪ್ರೀತಿಗಾಗಿ ಈ ನಿನ್ನ ಪಟ್ಟಣ (ಮಂಗಧದೇಶ) ದ್ದಿಸೆಯಿಂದ ಮಧುರಾ ಪಟ್ಟಣವು ನೂರು (೧೦೦) ಯೋಜನ ವ್ಯವಹಿತವಾದುದು ಹೀಗೆ ಈ ಜರಾಸಂಧನನ್ನು

ಕುರಿತು ಹೇಳಿದರು. (ಆದುದರಿಂದಲೇ ಒಂದು ಯೋಜನದಿಂದ ಹಿಂದುಗಡೆಯಲ್ಲಿಯೇ ಗದೆಯು ಬಿತ್ತು.) ॥ ೧೨ ॥

ಶ್ರೀಕೃಷ್ಣನಿಗೆ ಗದೆಯನ್ನು ತಿರಸ್ಕರಿಸುವ ವಿಷಯದಲ್ಲಿ ಸಾಮರ್ಥ್ಯವಿಲ್ಲದಿರುವುದರಿಂದ ಶ್ರೀಕೃಷ್ಣನ ಪ್ರೀತಿಗಾಗಿ ಒಂದು ಯೋಜನದಿಂದ ಕಡಿಮೆಯಾದ ಮಾರ್ಗವನ್ನು ಹೇಳಿರುವನೋ ಏನು ಎಂದರೆ—

ಮೂ ॥ ಶಕ್ತಸ್ಯ ಚಾಪಿ ಹಿ ಗದಾಪ್ರತಿಘಾತನೇ ತು
ಶುಶ್ರೂಷಣಂ ಮದಚಿತಂ ತ್ವಿತಿ ಚಿಂತಯಾನಃ ।
ವಿಷ್ಣೋರ್ಮುನಿಃ ಸ ನಿಜಗಾದ ಹಿ ಯೋಜನೋನಂ
ಮಾರ್ಗಂ ಪುರೋ ಭಗವತೋ ಮಗಧೇಶಪೃಷ್ಟಃ ॥ ೧೩ ॥

ಅ॥ ಜರಾಸಂದನಿಂದ ಪ್ರಶ್ನಿಸಿಕೊಳ್ಳಲ್ಪಟ್ಟ ಆ ನಾರದ ಮುನಿಗಳು ಗದೆಯನ್ನು ತಿರಸ್ಕರಿಸುವ ವಿಷಯದಲ್ಲಿ ಶಕ್ತನಾದಾಗ್ಯೂ ಶ್ರೀವಿಷ್ಣುವಿನ ಗದಾಘಾತ ಪರಿಹಾರರೂಪ ಸೇವೆಯು ನನಗೆ ಯೋಗ್ಯವು ಹೀಗೆ ಆಲೋಚಿಸುವವರಾಗಿ ಶ್ರೀಹರಿಯು ಪಟ್ಟಣವಾದ ಮಧುರೆಗೆ ಯೋಜನದಿಂದ ಕಡಿಮೆಯಾದ ಮಾರ್ಗವನ್ನು ಹೇಳಿರುವರು. (ಆದುದರಿಂದಲೇ ಹಿಂದುಗಡೆ ಬಿದ್ದಿತು.) ॥ ೧೩ ॥

ಮೂ ॥ ಕ್ಷಿಪ್ತಾ ತು ಸಾ ಭಗವತೋಽಥ ಗದಾ ಜರಾಖ್ಯಾಂ
ತತ್ಸಂಧಿನೀಮಸುಭಿರಾಶು ವಿಯೋಜ್ಯ ಪಾಪಾಂ ।
ಮತ್ವಾಶನೀಂ ಭಗವತಃ ಪುನರಾಜ್ಞಯೈವ
ಯಾತಾ ಗಿರೀಶಸದನಂ ಮಗಧಂ ವಿಸೃಜ್ಯ ॥ ೧೪ ॥

ಅ॥ ನಾರದನು ಹೇಳಿದ ಮೇಲೆ ಶ್ರೀಪರಮಾತ್ಮನಿಗೋಸ್ಕರ ಬಿಸಾಡಲ್ಪಟ್ಟ ಆ ಗದೆಯು ಜರಾಸಂಧನ ಎರಡು ತುಂಡನ್ನು ಕೂಡಿಸಿದ ಮನುಷ್ಯರೇ ಭೋಜನವಾಗಿ ಉಳ್ಳ ಪಾಪಿಷ್ಠಳಾದ ಜರಾ ಎನ್ನುವ ರಾಕ್ಷಸಿಯನ್ನು ಪ್ರಾಣಗಳಿಂದ ಬಿಡಿಸಿ (ಅಂದರೆ ಸಂಹರಿಸಿ) ಜರಾಸಂಧನನ್ನು ಬಿಟ್ಟು ಪುನಃ ಶ್ರೀಹರಿಯ ಆಜ್ಞೆಯಿಂದಲೇ ಶ್ರೀ ಉಮಾಪತಿಯಾದ ರುದ್ರನ ಮಂದಿರವನ್ನು ಕುರಿತು ಹೋಯಿತು. ॥ ೧೪ ॥

ಮೂ ॥ ರಾಜಾ ಸ್ವಮಾತೃತ ಉತೋ ಗದಯಾ ಚ ಹೀನಃ
ಕ್ರೋಧಾತ್ ಸಮುಸ್ತನೃಪತೀನಭಿಸನ್ನಿಪತ್ಯ ।
ಅಕ್ಷೌಹಿಣೀತ್ರ್ಯಧಿಕವಿಂಶಯುತೋಽತಿವೇಲಂ
ದರ್ಪೋದ್ಧತಃ ಸಪದಿ ಕೃಷ್ಣಪುರೀಂ ಜಗಾಮ ॥ ೧೫ ॥

ಅ॥ ಜರಾಸಂಧನು ತನ್ನ ತಾಯಿಯಾದ ಜರೆಯಿಂದಲೂ ಮತ್ತು ಗದೆಯಿಂದಲೂ ವಿರಹಿತನಾಗಿ ಸಿಟ್ಟಿನಿಂದ ಎಲ್ಲಾ ಜನರನ್ನು ಒಟ್ಟು ಕೂಡಿಸಿ ಅಕ್ಷೌಹಿಣಿಗಳ ಮೂರರಿಂದ ಹೆಚ್ಚಾದ ಇಪ್ಪತ್ತರಿಂದ (ಅಂದರೆ ೨೩ ಅಕ್ಷೌಹಿಣಿಯಿಂದ) ಕೂಡಿದವನಾಗಿ ಅತ್ಯಂತವಾಗಿ ಗರ್ವದಿಂದ ಮದೋನ್ಮತ್ತನಾಗಿ ತತ್ಕ್ಷಣದಲ್ಲಿ ಮಧುರಾ ಪಟ್ಟಣವನ್ನು ಕುರಿತು ಹೋದನು. ॥ ೧೫ ॥

ಮೂ ॥ ಸರ್ವಾಂ ಪುರೀಂ ಪ್ರತಿನಿರುಧ್ಯ ದಿದೇಶ ವಿಂದ–
ವಿಂದಾನುಜೌ ಭಗವತಃ ಕುಮತಿಃ ಸ ದೂತೌ ।
ತಾ ಊಚತುರ್ಭಗವತೇಽಸ್ಯ ವಚೋಽತಿದರ್ಪ–
ಪೂರ್ಣಂ ತಥಾ ಭಗವತೋಽಪ್ಯಪಹಾಸಯುಕ್ತಂ ॥ ೧೬ ॥

ಅ॥ ಕೆಟ್ಟಬುದ್ಧಿಯುಳ್ಳ ಆ ಜರಾಸಂಧನು ಎಲ್ಲಾ ಪಟ್ಟಣವನ್ನೂ ತಡೆದು ವಿಂದ, ವಿಂದನ ತಮ್ಮನಾದ ಅನುವಿಂದ, ಎನ್ನುವ ದೂತರನ್ನು ಶ್ರೀಕೃಷ್ಣನ ಸಮೀಪಕ್ಕೆ ಕಳುಹಿಸಿಕೊಟ್ಟನು. ಆ ವಿಂದ ಅನುವಿಂದರು ಮಹಾಗರ್ವದಿಂದ ಪೂರ್ಣವಾದ, ಹಾಗೆಯೇ ಶ್ರೀಕೃಷ್ಣನಿಗೂ ಪರಿಹಾಸದಿಂದ ಯುಕ್ತವಾದ ಈ ಜರಾಸಂಧನ ಮಾತನ್ನು ಶ್ರೀಕೃಷ್ಣನಿಗೋಸ್ಕರ ಹೇಳಿದರು. ॥ ೧೬ ॥

ಅಪಹಾಸಯುಕ್ತವಾದ ವಚನವನ್ನು ವಿಶದೀಕರಿಸುತ್ತಾರೆ—

ಮೂ ॥ ಲೋಕೇ ಪ್ರತೀತಬಲಪೌರುಷಸಾರರೂಪ–
ಸ್ತ್ವಂ ಹ್ಯೇಕ ಏಷ್ಯಭವತೋ ಬಲವೀರ್ಯಸಾರಂ ।
ಜ್ಞಾತ್ವಾ ಸುತೇ ನ ತು ಮಯಾ ಪ್ರತಿಪಾದಿತೇ ಹಿ
ಕಂಸಸ್ಯ ವೀರ್ಯರಹಿತೇನ ಹತಸ್ತ್ವಯಾ ಸಃ ॥ ೧೭ ॥

ಅ॥ ಜಗತ್ತಿನಲ್ಲಿ ಪ್ರಸಿದ್ಧಗಳಾದ ಬಲ ಪೌರುಷಗಳಿಂದ ಶ್ರೇಷ್ಠರೂಪನು ನೀನು ಒಬ್ಬನೆಂದು ಪ್ರಸಿದ್ಧಿಯು. ವೀರ್ಯವಿಲ್ಲದಿರುವ ನನ್ನಿಂದ ಮುಂದೆ ಹುಟ್ಟತಕ್ಕ ನಿನ್ನ ಬಲವೀರ್ಯಗಳ ಅಧಿಕ್ಯವನ್ನು ತಿಳಿಯದೆ ಕಂಸನಿಗೆ ಎರಡು ಹೆಣ್ಣುಮಕ್ಕಳು ಕೊಡಲ್ಪಟ್ಟವು. ಆ ಕಂಸನು ನಿನ್ನಿಂದ ಸಂಪರಿಸಿಕೊಳ್ಳಲ್ಪಟ್ಟನು.

ವಿಶೇಷಾಂಶ (1) ವಿವಾಹಸಮಯದಲ್ಲಿ ಅತಿ ಸಮರ್ಥನಾದ ನೀನು ಇರುತ್ತಿದ್ದರೆ ನಾನು ಹೆಣ್ಣು ಮಕ್ಕಳನ್ನು ಕಂಸನಿಗೆ ಕೊಡುತ್ತಿರಲಿಲ್ಲ ಮುಂದೆ ಹುಟ್ಟತಕ್ಕ ನಿನ್ನ ಸಾಮರ್ಥ್ಯವನ್ನು ತಿಳಿಯದೆ ಹೆಣ್ಣು ಮಕ್ಕಳನ್ನು ಕೊಟ್ಟಿರುವೆನು ಎಂದು ಪರಿಹಾರವು. (2) ಅಥವಾ ಮುಂದೆ ಹುಟ್ಟತಕ್ಕವನ ಬಲವೀರ್ಯ ಸಾರವನ್ನು ತಿಳಿದೇ ನಾನು ಕಂಸನಿಗೆ ಹೆಣ್ಣು ಮಕ್ಕಳನ್ನು ಕೊಡಲಿಲ್ಲ. ಮತ್ತೆ ಅವನೇ ಬಲಾತ್ಕಾರದಿಂದ ತೆಗೆದುಕೊಂಡು ಹೋಗಿರುವನು. ಎಂದು ಪರಿಹಾಸವು. ॥ ೧೭ ॥

ಮೂ ॥ ಸೋಽಹಂ ಹಿ ದುರ್ಬಲತಯೋ ಬಲಿನಾಂ ವರಿಷ್ಠಂ
ಕೃತ್ವೈವ ದೃಷ್ಟಿವಿಷಯಂ ವಿಗತಪ್ರತಾಪಃ ।
ಯಾಸ್ಯೇ ತಪೋವನಮುಥೋ ಸಹಿತಃ ಸುತಾಭ್ಯಾಂ
ಕ್ಷಿಪ್ರಂ ಮಮಾದ್ಯ ವಿಷಯೋ ಭವ ಚಕ್ಷುಷೋಽತಃ ॥ ೧೮ ॥

ಅ॥ ಅತ್ಯಂತ ನಿರ್ಬಲನಾದ ಆ ಈದಾವ ನಾನು (ನಿನ್ನನ್ನು) ಬಲಿಷ್ಠರ ಮಧ್ಯದಲ್ಲಿ ಶ್ರೇಷ್ಠನನ್ನಾಗಿ (ತಿಳಿದೇ) ದೃಗ್ಗೋಚರನನ್ನಾಗಿ ಮಾಡಿಯೇ, ಹೋಗಲ್ಪಟ್ಟ ಪರಾಕ್ರಮವುಳ್ಳವನಾಗಿ ಆಮೇಲೆ ಅಸ್ತಿ, ಪ್ರಾಸ್ತಿ, ಎನ್ನುವ ಹೆಣ್ಣು ಮಕ್ಕಳಿಂದ ಕೂಡಿದವನಾಗಿ ತಪೋವನವೆಂದು ಪ್ರಸಿದ್ಧವಾದ ವನವನ್ನು ಹೋಗುವೆನು. ಆದಕಾರಣ ಈಗ ನನ್ನ ದೃಷ್ಟಿಗೆ ಗೋಚರನು ಶ್ರೇಷ್ಠದಲ್ಲಿ ಆಗು. ॥ ೧೮ ॥

ಮೂ ॥ ಸಾಕ್ಷೇಪವಿಸ್ಮಿತವಿದಂ ಬಲದರ್ಪಪೂರ್ಣ-
ಮೂತಾ್ಮಪಹಾಸಸಹಿತಂ ಭಗವಾನ್ನಿಶಮ್ಯ ।
ಸತ್ಯಂ ತದಿತ್ಯುರುವಚೋಽರ್ಥವದಭ್ಯುದೀರ್ಯ
ಮುಂದಂ ಪ್ರಹಸ್ಯ ನಿರಗಾತ್ ಸಹಿತೋ ಬಲೇನ ॥ ೧೯ ॥

ಅ॥ ಶ್ರೀಕೃಷ್ಣನು ಸಾಮರ್ಥ್ಯವೂ ಅಹಂಕಾರವೂ ಇವುಗಳಿಂದ ಪೂರ್ಣವಾದ, ಶ್ರೀಕೃಷ್ಣ ನಿಗೆ ಅಪಹಾಸದಿಂದ ಕೂಡಿರುವ ಜರಾಸಂಧನಿಂದ ಹೇಳಲ್ಪಟ್ಟ ಈ ಮಾತನ್ನು ತಿರಸ್ಕಾರದಿಂದ ಸಹಿತ ಹೇಗೆ ಆದೀತೋ ಹಾಗೆ ಕೇಳಿ ಆ ಮಾತು ಸತ್ಯವೇ, ಸಾರ್ಥಕವು, ಶ್ರೇಷ್ಠವಾದ ವಚನವು ಎಂದು ಹೇಳಿ ಮೆಲ್ಲಗೆ ನಗಾಡಿ ಬಲರಾಮನಿಂದ ಕೂಡಿದವನಾಗಿ ಹೊರಟುಹೋದನು.

ವಿಶೇಷಾಂಶ—(1) ತತ್ ಸತ್ಯಂ ಅರ್ಥವತ್ = ಆ ಮಾತು ಸತ್ಯವು ಸಾರ್ಥಕವಾದುದು ಎಂದು ಹೇಳತಕ್ಕ ವೇದವ್ಯಾಸರು ಕೇವಲ ಕಡೆಗಣ್ಣಿನ ನೋಟದಿಂದ ಬ್ರಹ್ಮಾಂಡವನ್ನು ಚೂರ್ಣೀ ಕರಿಸಲಿಕ್ಕೆ ಸಮರ್ಥನಾದ ನಾನು ತೃಣವನ್ನು ಎತ್ತಲಿಕ್ಕೆ ತನ್ನ ಎಲ್ಲಾ ಬಲವನ್ನು ಪ್ರಯೋಗಿಸದೆ ಇರುವ ಆನೆಯಂತೆ ಅತಿ ತುಚ್ಛನಾದ ಕಂಸನನ್ನು ಕೊಲ್ಲಲಿಕ್ಕೆ ತನ್ನ ಸಾಮರ್ಥ್ಯೈಕದೇಶವನ್ನು ತೆಗೆದುಕೊಳ್ಳಲೇ ಇಲ್ಲ. ಆದುದರಿಂದ ಸ್ವಾಭಾವಿಕವಾದ ವೀರ್ಯವನ್ನು ಸ್ವೀಕರಿಸದೇನೇ ನಾನು ಕಂಸನನ್ನು ಕೊಂದೆನು ಎನ್ನುವ ವಚನವೂ ಸಾರ್ಥಕವೇ, ಎಂದು ಸೂಚಿಸಿದರು. (2) ಉತ್ಕೃಷ್ಟವಾದ ಮಾತು, ಅಂಥದರೆ ಅಲ್ಪಾಕ್ಷರತ್ವವಿದ್ದಾಗ್ಯೂ ಬಹ್ವರ್ಥಗಳಿಂದ ಭರಿತವಾದುದು, ಬಹು ಭಾಷಿಯಾದ ಜರಾಸಂಧನ ವ್ಯರ್ಥವಾದ ಬಹುತರವಾದ ವಾಕ್ಯಕ್ಕೆ ವಿಂತಭಾಷಿಗಳಲ್ಲಿ ಅಗ್ರಗಣ್ಯ ನಾದ ಶ್ರೀಕೃಷ್ಣನು ಸ್ವಲ್ಪವಾದ ಬಹ್ವರ್ಥಭರಿತವಾದ ಸತ್ಯಂ ತತ್ ಇತ್ಯಾದಿ ವಾಕ್ಯವನ್ನು ಪ್ರಯೋಗಿಸಿರುವನು, ಆದುದರಿಂದ ಶ್ರೀಹರಿಯೇ ಗಂಭೀರಪುರುಷನು. ॥ ೧೯ ॥

ಮೂ ॥ ದ್ವಾರೇಷು ಸಾತ್ಯಕಿಪುರಸ್ಸರಮಾತ್ಮ ಸೈನ್ಯಂ
ತ್ರಿಷ್ವಭ್ಯುದೀರ್ಯ ಭಗವಾನ್ ಸ್ವಯಮುತ್ತರೇಣ ।
ರಾಮದ್ವಿತೀಯ ಉದಗಾನ್ಮಗಧಾಧಿರಾಜಂ
ಯೋದ್ಧುಂ ನೃಪೇಂದ್ರಕಟಕೇನ ಯುತಂ ಪರೇಶಃ ॥ ೨೦ ॥

ಅ ॥ ಬ್ರಹ್ಮಾದಿಗಳಿಗೂ ಸ್ವಾಮಿಯಾದ ಪೂಜ್ಯನಾದ ಶ್ರೀಕೃಷ್ಣನು ಸಾತ್ಯಕಿಯೇ ಮೊದಲಾಗಿ ಉಳ್ಳ ತನ್ನ ಸೈನ್ಯವನ್ನು ಮೂರು ದ್ವಾರಗಳಲ್ಲಿ ಆಜ್ಞಾಪಿಸಿ ರಾಜಶ್ರೇಷ್ಠರ ಸಮೂಹದಿಂದ ಕೂಡಿರುವ ಮಂಗಧದೇಶಕ್ಕೆ ಅಧಿಪತಿಯಾದ ಜರಾಸಂಧನನ್ನು ಯುದ್ಧ ಮಾಡುವುದಕ್ಕಾಗಿ ಬಲರಾಮನಿಂದ ಕೂಡಿದವನಾಗಿ ತಾನು ಉತ್ತರ ದ್ವಾರದಿಂದ ಹೊರಟುಹೋದನು. ॥ ೨೦ ॥

ಮೂ ॥ ತಸ್ಯೇಚ್ಛಯೈವ ಪೃಥಿವೀ ಮುಮತೇರುರಾಶು
ತಸ್ಯಾಯುಧಾನಿ ಸಬಲಸ್ಯ ಸುಭಾಸ್ವರಾಣಿ ।
ಶಾರ್ಙ್ಗಾಸಿಚಕ್ರಗದರತೂಣಗದಾಃ ಸ್ವಕೀಯಾ
ಜಗ್ರಾಹ ದಾರುಕಗೃಹೀತರಥೇ ಸ್ಥಿತಃ ಸಃ ॥ ೨೧ ॥

ಅ ॥ ಆ ಶ್ರೀಕೃಷ್ಣನ ಇಚ್ಛೆಯಿಂದಲೇ ಬಲರಾಮನಿಂದ ಕೂಡಿರುವ ಆ ಶ್ರೀಕೃಷ್ಣನ ಅತ್ಯಂತ ಪ್ರಕಾಶವಾನಗಳಾದ ಆಯುಧಗಳು ಶೀಘ್ರವಾಗಿ ಪೃಥಿವಿಯನ್ನು ಇಳಿದವು (ರಥವೂ

ಕೂಡ ಇಳಿಯಿತು.) ಶ್ರೀಕೃಷ್ಣನ ಸಾರಥಿಯಾದ ದಾರುಕನಿಂದ ಸ್ವೀಕರಿಸಲ್ಪಟ್ಟ ರಥದಲ್ಲಿರತರ್ಕ ಆ ಶ್ರೀಕೃಷ್ಣನು ಸ್ವಕೀಯಂಗಳಾದ ಧನುಸ್ಸು, ಖಡ್ಗವು, ಚಕ್ರವು, ಶಂಖವು, ಬತ್ತಳಿಕೆಯು, ಗದೆಯೂ ಇವುಗಳನ್ನು ಸ್ವೀಕರಿಸಿದನು. ॥ ೨೧ ॥

ಹಿಂದೆ ಹೇಳಿದ ಅರ್ಥವನ್ನೇ ವಿಶದೀಕರಿಸುತ್ತಾರೆ—

ಮೂ ॥ ಆರುಹ್ಯ ಭೂಮುಯರಥಂ ಪ್ರತಿಯುಕ್ತಮುಶ್ವೈ-
ರ್ವೇದಾತ್ಮ ಕೈರ್ಧನುರಧಿಜ್ಯಮಥ ಪ್ರಗೃಹ್ಯ ।
ಶಾರ್ಙ್ಗಂ ಶರಾಂಶ್ಚ ನಿಶಿತಾನ್ ಮಗಧಾಧಿರಾಜ-
ಮುಗ್ರಂ ನೃಪೇಂದ್ರಸಹಿತಂ ಪ್ರಯಯೌ ಜವೇನ ॥ ೨೨ ॥

ಅ॥ (ಶ್ರೀಕೃಷ್ಣನು) ಋಗಾದಿ ವೇದಗಳಿಗೆ ಅಭಿಮಾನ್ಯವಾನಗಳಾದ ದೇವತಾಸ್ವರೂಪಗಳಾದ ಕುದುರೆಗಳಿಂದ ನಿಯೋಜಿಸಿಕೊಳ್ಳಲ್ಪಟ್ಟ ಭೂಮಿಯಿಂದ ಅಭಿಮಾನ್ಯಮಾನವಾದ ರಥವನ್ನು ಏರಿ ಆರೋಪಿಸಿಕೊಳ್ಳಲ್ಪಟ್ಟ ಜ್ಯಾವುಳ್ಳ ಧನುಸ್ಸನ್ನು ತೀಕ್ಷ್ಣಗಳಾದ ಬಾಣಗಳನ್ನು ಹಿಡಿದು ರಾಜಶ್ರೇಷ್ಠರಿಂದ ಕೂಡಿದ ಕ್ರೂರನಾದ ಜರಾಸಂಧನನ್ನು ಶೀಘ್ರದಲ್ಲಿ ಹೋದನು, ॥ ೨೨ ॥

ಮೂ ॥ ರಾಮಃ ಪ್ರಗೃಹ್ಯ ಮುಸಲಂ ಸಹಲಂ ಚ ಯಾನ-
ಮಾಸ್ಥಾಯ ಸಾಯುಕಶರಾಸನತೂಣಯುಕ್ತಃ ।
ಸೈನ್ಯಂ ಜರಾಸುತಸುರಕ್ಷಿತಮಭ್ಯಧಾವ-
ದ್ಧರ್ಷಾನ್ನದನ್ನುರುಬಲೋಽರಿಬಲೈರಧೃಷ್ಯಃ ॥ ೨೩ ॥

ಅ॥ ಶತ್ರುಗಳ ಸೈನ್ಯಗಳಿಂದ ಸಹಿಸಲಿಕ್ಕೆ ಅಶಕ್ಯನಾದ ಉತ್ಕೃಷ್ಟವಾದ ಸಾಮರ್ಥ್ಯವುಳ್ಳ ಬಲರಾಮನು ಬಾಣಗಳ ಸಹಿತವಾದ ಮುಸಲವನ್ನು ಹಿಡಿದುಕೊಂಡು ರಥವನ್ನು ಏರಿಕೊಂಡು ಬಾಣಗಳಿಂದಲೂ ಧನುಸ್ಸಿನಿಂದಲೂ ಇಷುಧಿಗಳಿಂದಲೂ ಕೂಡಿದವನಾಗಿ ಜರಾಸಂಧನಿಂದ ಚೆನ್ನಾಗಿ ರಕ್ಷಿಸಿಕೊಳ್ಳಲ್ಪಟ್ಟ ಸೈನ್ಯವನ್ನು ಸಂತೋಷದಿಂದ ಧ್ವನಿಗೈಸುವವನಾಗಿ ಓಡಿಹೋದನು.
॥ ೨೩ ॥

ಮೂ ॥ ಉದ್ವೀಕ್ಷ್ಯ ಕೃಷ್ಣಮಭಿಯಾಂತಮನಂತಶಕ್ತಿಂ
ರಾಜೇಂದ್ರಬೃಂದಸಹಿತೋ ಮಗಧಾಧಿರಾಜಃ ।
ಉದ್ವೇಲಸಾಗರವದಾಶ್ವಭಿಯಾಯ ಕೋಪಾ-
ನ್ನಾನಾವಿಧಾಯುಧವರೈರಭಿವರ್ಷಮಾಣಃ ॥ ೨೪ ॥

ಅ॥ ರಾಜಶ್ರೇಷ್ಠರ ಸಮೂಹದಿಂದ ಕೂಡಿರುವ ಜರಾಸಂಧನು ಎದುರು ಬರತಕ್ಕ ಅಪರಿಮಿತ ಶಕ್ತಿಯುಳ್ಳ ಶ್ರೀಕೃಷ್ಣನನ್ನು ನೋಡಿ ಉಕ್ಕಿಬಂದ ಸಮುದ್ರದಂತೆ ಶೀಘ್ರದಲ್ಲಿ (ಅಭಿಯಾಯ=)ಸುತ್ತುಮುತ್ತಲೂ ಹೊಂದಿ ಸಿಟ್ಟಿನಿಂದ ಅನೇಕ ವಿಧಗಳಾದ ಆಯುಧ ಶ್ರೇಷ್ಠಗಳಿಂದ ಸುತ್ತುವರಿತ್ತಲೂ ಸುರಿಸುವವನು ಆದನು. ॥ ೨೪ ॥

ಮೂ ॥ ತಂ ವೈ ಚುಕೋಪಯಿಷುರಗ್ರತ ಉಗ್ರಸೇನಂ
ಕೃಷ್ಣೋ ನಿಧಾಯ ಸಮುಗಾತ್ ಸ್ವಯಮುಸ್ಯ ಪಶ್ಚಾತ್ ।

ದೃಷ್ಟ್ವಾಗ್ರತೋ ಮಗಧರಾಟ್ ಸ್ಥಿತಮುಗ್ರಸೇನಂ
ಕೋಪಾಚ್ಚಲತ್ತನುರಿದಂ ವಚನಂ ಬಭಾಷೇ ॥ ೨೫ ॥

ಅ ॥ ಶ್ರೀಕೃಷ್ಣನು ಆ ಜರಾಸಂಧನನ್ನು ಕೋಪವನ್ನು ಹುಟ್ಟಿಸಲಿಕ್ಕೆ ಇಚ್ಛಿಸುವವನಾಗಿ ಮಂಚಭಾಗದಲ್ಲಿ ಉಗ್ರಸೇನನನ್ನು ಮಾಡಿಕೊಂಡು ತಾನು ಈ ಉಗ್ರಸೇನನ ಹಿಂದುಗಡೆಯಲ್ಲಿ ಹೋದನು. ಜರಾಸಂಧನು ಮಂಚಭಾಗದಲ್ಲಿರತಕ್ಕ ಉಗ್ರಸೇನನನ್ನು ನೋಡಿ ಕೋಪದಿಂದ ಚಲಿಸತಕ್ಕ ಶರೀರವುಳ್ಳವನಾಗಿ ಈ ಮಾತನ್ನು ಹೇಳಿದನು. ॥ ೨೫ ॥

ಹೇಳಿದ ಮಾತನ್ನೇ ಸ್ಪಷ್ಟೀಕರಿಸುತ್ತಾರೆ—

ಮೂ ॥ ಪಾಪಾಪಯಾಹಿ ಪುರತೋ ಮಮ ರಾಜ್ಯಕಾಮ
ನಿರ್ಲಜ್ಜ ಪುತ್ರವಧಕಾರಣ ಶತ್ರುಪಕ್ಷ ।
ತ್ವಂ ಜೀರ್ಣಬಸ್ತ ಸದೃಶೋ ನ ಮಯೇಹ ವಧ್ಯ
ಸಿಂಹೋ ಹಿ ಸಿಂಹಮಭಿಯಾತಿ ನ ವೈ ಸೃಗಾಲಂ ॥ ೨೬ ॥

ಅ॥ಎಲೋ ಪಾಪಿಷ್ಠನಾದ ಉಗ್ರಸೇನನೇ, ನನ್ನ ಎದುರಿನಲ್ಲಿ ರಾಜ್ಯವನ್ನು ಇಚ್ಛಿಸುವವನೇ ಲಜ್ಜೆಯಿಲ್ಲದಿರುವವನೇ, ಮಗನ ಸಂಹಾರಕ್ಕೆ ಕಾರಣನಾದವನೇ, ಶತ್ರುವಿನ ಪಕ್ಷದಲ್ಲಿರುವವನೇ ದೂರ ಹೋಗು, ನೀನು ವೃದ್ಧವಾದ ಆಡಿಗೆ ಸದೃಶನು, ಈ ಯುದ್ಧದಲ್ಲಿ ನನ್ನಿಂದ ವಧಾರ್ಹನಲ್ಲ. ಸಿಂಹವು ಸಿಂಹವನ್ನೇ ಹೊಂದುತ್ತದೆ, ನರಿಯನ್ನು ಹೊಂದುವುದಿಲ್ಲವಷ್ಟೆ. ॥ ೨೬ ॥

ಮೂ ॥ ಆಕೃಷ್ಯ ಇತ್ಥಮಮುನಾಥ ಸ ಭೋಜರಾಜ
ಸ್ತೂಣಾತ್ ಪ್ರಗೃಹ್ಯ ನಿಶಿತಂ ಶರಮಾಶು ತೇನ ।
ಛಿತ್ವಾ ಜರಾಸುತಧನುರ್ಬಲವಾನ್ನನಾದ
ವಿವ್ಯಾಧ ಸಾಯಕಗಣೈಶ್ಚ ಪುನಸ್ತಮುಗ್ರೈಃ ॥ ೨೭ ॥

ಅ ॥ ಹಿಂದೆ ಹೇಳಿದ ಪ್ರಕಾರ ಈ ಜರಾಸಂಧನಿಂದ ನಿರಾಕರಿಸಿಕೊಳ್ಳಲ್ಪಟ್ಟ ಆ ಉಗ್ರಸೇನನು ಬತ್ತಳಿಕೆಯಿಂದ ತೀಕ್ಷ್ಣವಾದ ಬಾಣವನ್ನು ಹಿಡಿದುಕೊಂಡು ಶೀಘ್ರದಲ್ಲಿ ಆ ಬಾಣದಿಂದ ಜರಾಸಂಧನ ಧನುಸ್ಸನ್ನು ತುಂಡುಮಾಡಿ ಮಹಾಬಲಿಷ್ಠನಾಗಿ ಧ್ವನಿಮಾಡಿದನು. ಮತ್ತು ಕ್ರೂರಗಳಾದ ಬಾಣಗಳ ಸಮೂಹಗಳಿಂದಲೂ ಹೊಡೆದನು. ॥ ೨೭ ॥

ಮೂ ॥ ಅನ್ಯಚ್ಛರಾಸನವರಂ ಪ್ರತಿಗೃಹ್ಯ ಕೋಪ-
ಸಂರಕ್ತನೇತ್ರಮಭಿಯಾತಮುದೀಕ್ಷ್ಯ ಕೃಷ್ಣಃ ।
ಭೋಜಾಧಿರಾಜವಧಕಾಂಕ್ಷಿಣಮುಗ್ರವೇಗಂ
ಬಾರ್ಹದ್ರಥಂ ಪ್ರತಿಯಯೌ ಪರವೋ ರಥೇನ ॥ ೨೮ ॥

ಅ ॥ ಸರ್ವೋತ್ತಮನಾದ ಶ್ರೀಕೃಷ್ಣನು ಕೋಪದಿಂದ ಮತ್ತೊಂದು ಶ್ರೇಷ್ಠ ಬಾಣವನ್ನು ಹಿಡಿದುಕೊಂಡು ಉಗ್ರಸೇನನ ಸಮೀಪಕ್ಕೆ ಬರುತ್ತಿರುವ ಕೋಪದಿಂದ ಚೆನ್ನಾಗಿ ಕೆಂಪಾದ ಕಣ್ಣು

ಗಳಂಳ್ಳ, ಭೋಜಾಧಿರಾಜನಾದ ಉಗ್ರಸೇನನ ಸಂಹಾರವನ್ನು ಇಚ್ಛಿಸುವ ಕ್ರೂರವಾದ ವೇಗವುಳ್ಳ ಜರಾಸಂಧನನ್ನು ನೋಡಿ ರಥದಿಂದ ಎದುರಾಗಿ ಹೋದನು; ॥ ೨೮ ॥

ಮೂ ॥ ಆಯಾಂತವಿಜ್ಞಾಕ್ಷ್ಯ ಭಗವಂತಮನಂತವೀರ್ಯಂ
ಚೇದೀಶಪೌಂಡ್ರವಂಖರಾಜಗಣೈಃ ಸಮೇತಃ ।
ನಾನಾವಿಧಾಸ್ತ್ರವರಶಸ್ತ್ರ ಗಣೈರ್ಮವರ್ಷ
ಮೇರುಂ ಯಥಾ ಘನ ಉದೀರ್ಣರವೋ ಜಲೌಘೈಃ ॥ ೨೯ ॥

ಅ॥ ಚೇದಿದೇಶಕ್ಕೆ ಅಧಿಪತಿಯಾದ ಶಿಶುಪಾಲನು, ಪೌಂಡ್ರಕನು ಇವರೇ ಮೊದಲಾದಿ ಉಳ್ಳ ರಾಜರ ಸಮೂಹಗಳಿಂದ ಯುಕ್ತನಾದ ಜರಾಸಂಧನು ಅಪರಿಮಿತ ಪರಾಕ್ರಮವುಳ್ಳ, ಬರತಕ್ಕ ಪೂಜ್ಯನಾದ ಶ್ರೀಕೃಷ್ಣನನ್ನು ನೋಡಿ ನಾನಾವಿಧಗಳಾದ ಅಸ್ತ್ರಗಳೂ ಉತ್ಕೃಷ್ಟಗಳಾದ ಶಸ್ತ್ರಗಳೂ ಇವುಗಳ ಸಮೂಹಗಳಿಂದ, ಉಚ್ಚೈಧ್ವನಿಯುಂಳ್ಳ ಮೇಘವು ಜಲಗಳ ಸಮೂಹಗಳಿಂದ ಮೇರು ಪರ್ವತವನ್ನೆಂಬಂತೆ ವರ್ಷಿಸಿದನು; ॥ ೨೯ ॥

ಮೂ ॥ ಶಸ್ತ್ರಾಸ್ತ್ರವೃಷ್ಟಿಮಭಿತೋ ಭಗವಾನ್ ವಿವೃಶ್ಚ್ಯ
ಶಾರ್ಂಗೋತ್ತಸಾಯಕಗಣೈರ್ವಿರಥಾಶ್ವಸೂತಂ ।
ಚಕ್ರೇ ನಿರಾಯುಧಮಸೌ ಮಗಧೇಂದ್ರಮಾಶು
ಛಿನ್ನಾತಪತ್ರವರಕೇತುಮಚಿಂತ್ಯಶಕ್ತಿಃ ॥ ೩೦ ॥

ಅ॥ (ಇತರರಿಂದ) ಆಲೋಚಿಸಲಿಕ್ಕೂ ಅಶಕ್ಯವಾದ ಶಕ್ತಿಯುಂಳ್ಳ ಈ ಪೂಜ್ಯನಾದ ಶ್ರೀಕೃಷ್ಣನು ಧನುಸ್ಸಿನಿಂದ ನಿಃಸೃತಗಳಾದ ಬಾಣಗಳ ಸಮೂಹಗಳಿಂದ ಎಲ್ಲಾ ಕಡೆಗಳಲ್ಲಿಯೂ ಶಸ್ತ್ರಗಳೂ ಅಸ್ತ್ರಗಳೂ ಇವುಗಳ ವರ್ಷಣವನ್ನು ಛೇದನವಾಡಿ ತತ್‌ಕ್ಷಣದಲ್ಲಿ ಜರಾಸಂಧನನ್ನು ಹೋಗಲ್ಪಟ್ಟ ರಥಗಳೂ ಕುದುರೆಗಳೂ ಸೂತನೂ ಉಳ್ಳವನನ್ನಾಗಿಯೂ ಹೋಗಲ್ಪಟ್ಟ ಆಯುಂಧವುಳ್ಳವನನ್ನಾಗಿಯೂ ತುಂಡು ಮಾಡಲ್ಪಟ್ಟ ಛತ್ರ ಧ್ವಜಗಳುಂಳ್ಳವನನ್ನಾಗಿಯೂ ಮಾಡಿದನು; ॥ ೩೦ ॥

ಮೂ ॥ ನೈನಂ ಜಘಾನ ಭಗವಾನ್ ಸುಶಕಂ ಚ ಭೀಮೋ
ಭಕ್ತಿಂ ನಿಜಾಂ ಪ್ರಥಯಿತುಂ ಯಶ ಉಚ್ಚಧರ್ಮಂ ।
ಚೇದೀಶಪೌಂಡ್ರಕಸಕೇಚಕವಮದ್ರರಾಜ-
ಸಾಲ್ವೈಕಲವ್ಯಕಮುಖಾನ್ ವಿರಥಾಂಶ್ಚಕಾರ ॥ ೩೧ ॥

ಅ॥ ಶ್ರೀಕೃಷ್ಣನು ಭೀಮಸೇನನಲ್ಲಿರತಕ್ಕ ಸಹಜವಾದ ಅಥವಾ ಸ್ವವಿಷಯಂಕವಾದ ಭಕ್ತಿಯನ್ನೂ ಯಂಶಸ್ಸನ್ನೂ ಉಚ್ಚ ಧರ್ಮವನ್ನೂ ಪ್ರಖ್ಯಾತಿಪಡಿಸುವುದಕ್ಕಾಗಿ (ಸಂಹರಿಸಲಿಕ್ಕೆ) ಸುಲಭದಿಂದಲೇ ಶಕ್ತನಾದಾಗ್ಯೂ ಈ ಜರಾಸಂಧನನ್ನು ಸಂಹರಿಸಲಿಲ್ಲ. ಮತ್ತು ಚೈದ್ಯ, ಪೌಂಡ್ರಕ, ಕೀಚಕನಿಂದ ಸಹಿತನಾದ ವಂದ್ರರಾಜನು, ಸಾಲ್ವ, ಏಕಲವ್ಯ ಮೊದಲಾದವರನ್ನು ರಥರಹಿತನನ್ನಾಗಿಯೂ ಮಾಡಿದನು. ॥ ೩೧ ॥

ಮೂ ॥ ಯೇ ಚಾಪಿ ಹಂಸಡಿಭಿಕದ್ರುಮರುಕ್ಮಮುಖ್ಯಾ
ಬಾಹ್ಲೀಕಭೌಮಸುತವೈಂದಪುರಸ್ಸರಾಶ್ಚ ।
ಸರ್ವೇ ಪ್ರದುದ್ರುವುರಜಸ್ಯ ಶರೈರ್ವಿಭಿನ್ನಾ
ಅನ್ಯೇ ಚ ಭೂಮಿಪತಯೋ ಯ ಇಹಾಸುರುರ್ವ್ಯಾಂ ॥ ೩೨ ॥

ಅ॥ ಹಂಸ. ಡಿಭಿಕ, ದ್ರುಮ, ರುಗ್ಮಿ ಮೊದಲಾದವರೂ ಬಾಹ್ಲೀಕ, ನರಕಾಸುರ, ನರಕಾಸುರನ ಪುತ್ರನಾದ ಭಗದತ್ತ, ವೈಂದ, ವಿವಿದ ಮೊದಲಾದವರೂ ಯಾರು ಇರುತ್ತಿದ್ದರೋ: ಅವರೆಲ್ಲರೂ ಶ್ರೀಕೃಷ್ಣನ ಬಾಣಗಳಿಂದ ಶೀಳಲ್ಪಟ್ಟವರಾಗಿ ಓಡಿಹೋದರು. ಹಿಂದೆ ಹೇಳಿದವರಿಂದ ಇತರರಾದ ಯಾರು ರಾಜರು ಭೂಮಿಯಲ್ಲಿರುತ್ತಿದ್ದರೋ ಅವರೂ ಕೂಡ ಈ ಯುದ್ಧದಲ್ಲಿ ತುಂಡುಮಾಡಲ್ಪಟ್ಟ ಶಸ್ತ್ರಾದಿಗಳುಳ್ಳವರಾಗಿ ಓಡಿಹೋದರು. ॥ ೩೨ ॥

ಮೂ ॥ ಛಿನ್ನಾಯುಧಧ್ವಜಪತಾಕರಥಾಶ್ವಸೂತ-
ವರ್ಮಾಣ ಉಗ್ರಶರತಾಡಿತಭಿನ್ನಗಾತ್ರಾಃ ।
ಸ್ರಸ್ತಾಂಬರಾಭರಣಮೂರ್ಧಜಮೌಲ್ಯಹೀನಾ
ರಕ್ತಂ ವಮಂತ ಉರು ದುದ್ರುವುರಾಶು ಭೀತಾಃ ॥ ೩೩ ॥

ಅ॥ (ಹಂಸ ಡಿಭಿಕಾದಿರಾಜರು) ತುಂಡುಮಾಡಲ್ಪಟ್ಟ ಆಯುಧಗಳು ಧ್ವಜವು, (ರಥದ ಮಧ್ಯದಲ್ಲಿರತಕ್ಕ ದೀರ್ಘವಾದ ಸ್ತಂಭದಲ್ಲಿ ವಸ್ತ್ರ ನಿರ್ಮಿತವಾದುದು ಜೋತಾಡಿಕೊಂಡು ಇರುವುದು.) ಪತಾಕೆಗಳು, (ರಥದ ಸುತ್ತಲೂ ಇರತಕ್ಕ ದಂಡವನ್ನು ಆಶ್ರಯಿಸುತ್ತಿರುವ ವಸ್ತ್ರದಿಂದ ನಿರ್ಮಿತಗಳಾದುವು ಸೂಕ್ಷ್ಮಗಳಾದವುಗಳು.) ರಥಗಳು, ಕುದುರೆಗಳು, ಸೂತರು, ಕವಚಗಳೂ ಇವುಗಳುಳ್ಳವರಾಗಿ, ಕ್ರೂರಗಳಾದ ಶರಗಳಿಂದ ಹೊಡೆಯಲ್ಪಟ್ಟವರೂ ವಿದೀರ್ಣವಾದ ಶರೀರವುಳ್ಳವರೂ ಆಗಿ, ಶ್ಲಥಿತಗಳಾದ ವಸ್ತ್ರಗಳೂ ಆಭರಣಗಳೂ ಕೇಶಗಳೂ ಇವುಗಳುಳ್ಳವರೂ, ಮಾಲಿಕೆಗಳ ಸಮೂಹಗಳಿಂದ ವಿರಹಿತರೂ ಆಗಿ ಬಹಳವಾದ ರಕ್ತವನ್ನು ಕಾರುವವರಾಗಿ ಶೀಘ್ರದಲ್ಲಿ ಭಯಂಗ್ರಸ್ತರಾಗಿ ಓಡಿಹೋದರು. ॥ ೩೩ ॥

ಮೂ ॥ ಶೋಚ್ಯಾಂ ದಶಾಮುಪಗತೇಷು ನ ಪೇಷು ಸರ್ವೇ-
ಷ್ವಾತತ್ಪಯುಧೇಷು ಹರಿಣಾ ಯುಧಿ ವಿದ್ರವತ್ಸು ।
ನಾನಾಯುಧಾಢ್ಯಮುಪರಂ ರಥಮುಗ್ರವೀರ್ಯ-
ಮಾಸ್ಥಾಯ ಮಾಗಧಪತಿಃ ಪ್ರಸಸಾರ ರಾಮಂ ॥ ೩೪ ॥

ಅ॥ ಶೋಕಾರ್ಹವಾದ ಅವಸ್ಥೆಯನ್ನು ಹೊಂದಿರುವ, ಯುದ್ಧದಲ್ಲಿ ಶ್ರೀಕೃಷ್ಣನಿಂದ ಅಪಹರಿಸಲ್ಪಟ್ಟ ಆಯುಧವುಳ್ಳ ಆ ಎಲ್ಲಾ ರಾಜರು ಓಡಿಹೋಗುತ್ತಿರಲು ಜರಾಸಂಧನು ನಾನಾಯುಧಗಳಿಂದ ಕೂಡಿದ, ಅತಿ ವೀರ್ಯವತ್ತಾದ ಮತ್ತೊಂದು ರಥವನ್ನು ಏರಿಕೊಂಡು ಕ್ರೂರವಾದ ಪರಾಕ್ರಮವುಳ್ಳ ಬಲರಾಮನನ್ನು ಹೊಂದಿದನು. ॥ ೩೪ ॥

ಮೂ ॥ ಆಧಾವತೋಽಸ್ಯ ಮುಸಲೇನ ರಥಂ ಬಭಂಜ
ರಾಮೋ ಗದಾಮುರುತರೋರಸಿ ಸೋಽಪಿ ತಸ್ಯ ।

ಚಿಕ್ಷೇಪ ತಂ ಚ ಮುಸಲೇನ ತತಾಡ ರಾಮ-
ಸ್ತಾವುತ್ತಮೌ ಬಲವತಾಂ ಯುಯುಧಾತ ಉಗ್ರಂ ॥ ೩೫ ॥

ಅ॥ ಬಲರಾಮನು ಮಂಸಲಾಯಂಧದಿಂದ ಓಡಿ ಬರುತ್ತಿರುವ ಈ ಜರಾಸಂಧನ ರಥವನ್ನು ಮುರಿದನು. ಆ ಜರಾಸಂಧನೂ ಕೂಡ ಆ ರಾಮನ ಅತಿ ವಿಸ್ತೀರ್ಣವಾದ ವಕ್ಷಃಸ್ಥಳದಲ್ಲಿ ಗದೆಯನ್ನು ಬಿಸಾಡಿದನು. ಬಲರಾಮನು ಆ ಜರಾಸಂಧನನ್ನು ಮಂಸಲಾಯಂಧದಿಂದ ಹೊಡೆದನು: ಬಲಿಷ್ಠರಲ್ಲಿ ಉತ್ತಮರಾದ ಆ ರಾಮ ಜರಾಸಂಧರು ವೀರರಿಗೂ ಭಯಂಕರವು ಹೇಗೆ ಆದೀತೋ ಹಾಗೆ ಯುದ್ಧವನ್ನು ಮಾಡಿಕೊಂಡರು. ॥ ೩೫ ॥

ಮೂ ॥ ತೌ ಚಕ್ರತುಃ ಪುರುನಿಯುದ್ಧಮುಪಿ ಸ್ಮ ತತ್ರ
ಸಂಚೂರ್ಣ್ಯ ಸರ್ವಗಿರಿವೃಕ್ಷಶಿಲಾಸಮೂಹಾನ್ ।
ದೀರ್ಘಂ ನಿಯುದ್ಧಮಭವತ್ ಸಮಮೇತಯೋಸ್ತು
ವಜ್ರಾದ್ದೃಢಾಂಗತಮಯೋರ್ಬಲಿನೋರ್ನಿತಾಂತಂ ॥ ೩೬ ॥

ಅ॥ ಆ ಬಲರಾಮ ಜರಾಸಂಧರಿಬ್ಬರೂ ಯುದ್ಧಮಾಡತಕ್ಕ ಪ್ರದೇಶದಲ್ಲಿ (ಸಮೀಪದಲ್ಲಿರತಕ್ಕ) ಎಲ್ಲಾ ಪರ್ವತಗಳೂ ವೃಕ್ಷಗಳೂ ಕಲ್ಲುಗಳೂ ಇಲ್ಲಗಳ ಸಮೂಹಗಳನ್ನು ಪುಡಿ ಮಾಡಿಕೊಂಡು ಮಹತ್ತಾದ ಮುಷ್ಟಿಯುದ್ಧವನ್ನೂ ಕೂಡ ಮಾಡಿಕೊಂಡರು. ವಜ್ರಾಯುಧದ ದೆಸೆಯಿಂದಲೂ ಅತಿಶಯವಾಗಿ ದೃಢವಾದ ಅಂಗಗಳುಳ್ಳ,ಅತ್ಯಂತವಾಗಿ ಬಲಿಷ್ಠರಾದ ಬಲರಾಮ ಜರಾಸಂಧ ಇವರಿಬ್ಬರಿಗಾದರೂ ಬಹುಕಾಲದಲ್ಲಿರತಕ್ಕ ಮುಷ್ಟಿಯುದ್ಧವು ಸಮಾನವೇ ಆಯಿತು: ॥ ೩೬ ॥

ಮೂ ॥ ಶ್ರುತ್ವಾಥ ಶಂಖರವಮಂಬುಜಲೋಚನಸ್ಯ
ವಿದ್ರಾವಿತಾನಪಿ ನೃಪಾನಭಿವೀಕ್ಷ್ಯ ರಾಮಃ ।
ಯುದ್ಧಂತಮೊಕ್ಷ್ಯ ಚ ರಿಪುಂ ವವೃಧೇ ಬಲೇನ
ತ್ಯಕ್ತ್ವಾ ರಿಪುಂ ಮುಸಲಮಾದದ ಆಶ್ವವೋಘಂ ॥ ೩೭ ॥

ಅ॥ ಆಮೇಲೆ ಬಲರಾಮನು ಕಮಲದಳದಂತೆ ಕಣ್ಣುಗಳುಳ್ಳ ಶ್ರೀಕೃಷ್ಣನ ಶಂಖಧ್ವನಿಯನ್ನಾದರೂ ಕೇಳಿ ರಾಜರನ್ನು ಓಡುವವರನ್ನು ನೋಡಿಯೂ ಮತ್ತು ಯುದ್ಧಮಾಡುತ್ತಿರುವ ಶತ್ರುಭೂತನಾದ ಜರಾಸಂಧನನ್ನು ನೋಡಿ ಶಕ್ತಿಯಿಂದ ಅಭಿವೃದ್ಧನಾದನು. ಶತ್ರುವಾದ ಜರಾಸಂಧನನ್ನು ಬಿಟ್ಟು ತತ್‌ಕ್ಷಣದಲ್ಲಿ ನಿರರ್ಥಕವಾಗದಿರುವ ಮಂಸಲಾಯಂಧವನ್ನು ಸ್ವೀಕರಿಸಿದನು: ॥ ೩೭ ॥

ಮೂ ॥ ತೇನಾಹತಃ ಶಿರಸಿ ಸಮ್ಮೃ ಮುಹೋಽತಿವೇಲಂ
ಬಾರ್ಹದ್ರಥೋ ಜಗೃಹ ಏನಮಥೋ ಹಲೀ ಸಃ ।
ತತ್ಕ್ಲೈಕಲವ್ಯ ಉತ ಕೃಷ್ಣಶರೈಃ ಪಲಾಯು-
ನ್ನಸ್ತ್ರಾಣಿ ರಾಮಶಿರಸಿ ಪ್ರಮುಮೋಚ ಶೀಘ್ರಂ ॥ ೩೮ ॥

ಅ॥ ಆ ವಂಸಲಾಯಂಧದಿಂದ ಶರಸ್ಸಿನಲ್ಲಿ ಚೆನ್ನಾಗಿ ಹೊಡೆಯಂಲ್ಪಟ್ಟ ಜರಾಸಂಧನಂ ಅತ್ಯಂತವಾಗಿ ವಂಮೂರ್ಛೆಯಂನ್ನು ಹೊಂದಿದನಂ. ಆ ಬಲರಾವಂನಂ ಆಮೇಲೆ ಈ ಜರಾಸಂಧನನ್ನು ಹಿಡಿದನಂ. ಆಗ ಏಕಲವ್ಯನು ಶ್ರೀಕೃಷ್ಣನ ಬಾಣಗಳಿಂದ (ಹೊಡೆಯಂಲ್ಪಟ್ಟವನಾಗಿ) ಓಡಂವವನಾಗಿ ಬಲರಾವಂನ ಶರಸ್ಸಿನಲ್ಲಿ ಶೀಘ್ರದಲ್ಲಿ ಅಸ್ತ್ರಗಳನ್ನು ಬಿಟ್ಟನಂ, ॥ ೩೮ ॥

ಮೂ ॥ ಭೀತೇನ ತೇನ ಸಮರಂ ಭಗವಾನನಿಚ್ಛನ್
ಪ್ರದ್ಯುಮ್ನಮಾಶ್ವಸ್ಯಜದಾತ್ಮಸುತಂ ಮನೋಜಂ ।
ಪ್ರದ್ಯುಮ್ನ ಏನಮಭಿಯಾಯ ಮಹಾಸ್ತ್ರಜಾಲೈ
ರಾಮಸ್ತು ಮಾಗಧಮಥಾತ್ಮ ರಥಂ ನಿನಾಯ ॥ ೩೯ ॥

ಅ॥ ಶ್ರೀಕೃಷ್ಣನು ಭಯಂಗ್ರಸ್ತನಾದ ಆ ಏಕಲವ್ಯನಿಂದ ಯಂದ್ಧವನ್ನು ಇಚ್ಛಿಸದೆ ಇರುವವನಾಗಿ (ಆತ್ಮಸಂತಂ = ಆದಿ ಸೃಷ್ಟಿಯಂಲ್ಲಿ) ತನ್ನ ಪುತ್ರನಾದ, (ಮನೋಜಂ =)ಹಂಟ್ಟಿದ ಮೇಲೆ ಬ್ರಹ್ಮನ ವಂನಸ್ಸಿನಿಂದ ಹಂಟ್ಟಿದ ಕಾವಂನನ್ನು ಪ್ರದ್ಯುಮ್ನನ್ನು ನಾವಂಕನನ್ನಾಗಿ ಶೀಘ್ರದಲ್ಲಿ(ವಂನಸ್ಸಿನ ದೆಸೆಯಿಂದ) ಸೃಷ್ಟಿಮಾಡಿದನಂ, ಪ್ರದ್ಯುಮ್ನನು ಈ ಏಕಲವ್ಯನನ್ನು (ಅಭಿಯಾಯಂ=)ಅಭಿವಂ ಖವಾಗಿ ಹೋಗಿ ವಂಹತ್ತಾದ ಅಸ್ತ್ರಗಳ ಸಮೂಹಗಳಿಂದ (ಹೊಡೆದನು.) ಆಮೇಲೆ ಬಲರಾವಂನಾದರೂ ತನ್ನ ರಥವನ್ನು ಜರಾಸಂಧನ ಸವಿೂಪಕ್ಕೆ ತೆಗೆದಂಕೊಂಡು ಹೋದನು, ॥ ೩೯ ॥

ಮೂ ॥ ಯುಧ್ವಾ ಚಿರಂ ರಣಮುಖೇ ಭಗವತ್ಸುತೋಽಸೌ
ಚಕ್ರೇ ನಿರಾಯುಧಮಮುಂ ಸ್ಥಿರಮೇಕಲವ್ಯಂ ।
ಅಂಶೇನ ಯೋ ಭುವಮುಗಾನ್ಮಣಿಮಾನಿತಿ ಸ್ಮ
ಸ ಕ್ರೋಧಶಂತ್ರಕಣೇಷ್ವಧಿಪೋ ನಿಷಾದಃ ॥ ೪೦ ॥

ಅ॥ ಶ್ರೀಕೃಷ್ಣನ ಪುತ್ರನಾದ ಈ ಪ್ರದ್ಯುಮ್ನನಂ ಬಹುಕಾಲ ಯುದ್ಧವಾಡಿ ರಣಾಂಗಣದಲ್ಲಿ ಹಂದಾಡದೆ ಇರುವ ಈದಾವ ಏಕಲವ್ಯನನ್ನು ಆಯಂಧ ರಹಿತನನ್ನಾಗಿ ವಾಡಿದನಂ, (ಏಕಲವ್ಯನ ಪೂರ್ವಸ್ವರೂಪವನ್ನು ಹೇಳುತ್ತಾರೆ.) (ಮೊದಲಂ) ಕ್ರೋಧವಶಾಖ್ಯ ರಾಕ್ಷಸರ ಸವಂೂಹಗಳಲ್ಲಿ, ವಂಣವಂಂತನೆಂದಂ ಪ್ರಸಿದ್ಧನಾದವನು ಶ್ರೇಷ್ಠನಂ ಯಾವನಂ ಇದ್ದನೋ, ಆ ವಂಣವಂಂತನಂ ಅಂಶದಿಂದ ನಿಷಾದಜಾತಿಯವಾಗಿ ಭೂವಿಯನ್ನು ಹೊಂದಿದನು. (ಅಂದರೆ ನಿಷಾದ ಕುಲದಲ್ಲಿ ಹಂಟ್ಟಿದನಂ.)॥ ೪೦ ॥

ಮೂ ॥ ಪ್ರದ್ಯುಮ್ನಮಾತ್ಮನಿ ನಿಧಾಯ ಪುನಃ ಸ ಕೃಷ್ಣಃ
ಸಂಹೃತ್ಯ ಮಾಗಧಬಲಂ ನಿಖಿಲಂ ಶರೌಘೈಃ ।
ಭೂಯಶ್ಚ ಭೂಮಭಿವಿನೇತುಮುದಾರಕರ್ಮಾ
ಬಾರ್ಹದ್ರಥಂ ತ್ವಮುಚದಕ್ಷಯಪೌರುಷೋಽಜಃ ॥ ೪೧ ॥

ಅ॥ ಆ ಶ್ರೀಕೃಷ್ಣನಂ ಪ್ರದ್ಯುಮ್ನನನ್ನು ತನ್ನ ಉದರದಲ್ಲಿ ಸ್ಥಾಪಿಸಿ ವಂತ್ತು ಎಲ್ಲಾ ಮಾಗಧ (ಜರಾಸಂಧನ) ಸೈನ್ಯವನ್ನು ಬಾಣಗಳ ಸವಂೂಹಗಳಿಂದ ಸಂಹರಿಸಿ ಅವಿನಾಶಿಯಾದ ಪರಾಕ್ರವಂವುಳ್ಳವನಾದಾಗ್ಯೂ ಉತ್ಕೃಷ್ಟವಾದ ಕರ್ವವುಳ್ಳ ಉತ್ಪತ್ತಿರಹಿತನಾದ ಶ್ರೀಕೃಷ್ಣನಂ ವಂತ್ತು ಕೂಡ ಸೇನೆಯಂನ್ನು ತರಂವುದಕ್ಕಾಗಿ ಜರಾಸಂಧನನ್ನು ಬಿಡಿಸಿದನಂ. ॥ ೪೧ ॥

ಮೂ ॥ ವ್ರೀಡಾನತಾಚ್ಛವಿಮುಖಃ ಸಹಿತೋ ನೃಪೈಸ್ತೈ-
ರ್ಬಾರ್ಹದ್ರಥಃ ಪ್ರತಿಯಯೌ ಸ್ವಪುರೀಂ ಸ ಪಾಪಃ ।
ಆತ್ಮಾಭಿಷಿಕ್ತಮಪಿ ಭೋಜವರಾಧಿಪತ್ಯೇ
ದೌಹಿತ್ರಮಗ್ರತ ಉತ ಪ್ರಣಿಧಾಯ ಮಂದಃ ॥ ೪೨ ॥

ಅ॥ ನಾಚಿಕೆಯಿಂದ ಬಗ್ಗಿದ ಕಾಂತಿರಹಿತವಾದ ಮುಖವುಳ್ಳ, ಆ ಪರಾಜಿತರಾದ ರಾಜರಿಂದ ಸಹಿತನಾದ, ಕರ್ತವ್ಯಾಕರ್ತವ್ಯ ಜ್ಞಾನವಿಲ್ಲದಿರುವ ಪಾಪಿಷ್ಠನಾದ ಆ ಜರಾಸಂಧನು ಭೋಜಶ್ರೇಷ್ಠರ ಸಾವರ್ಭೌಮ್ಯದಲ್ಲಿ ತನ್ನಿಂದ ಅಭಿಷಿಕ್ತನಾದ ಮಂಗಳ ಮಂಗನನ್ನು ಓಡುವ ಸಮಯದಲ್ಲಿಯೂ ಮುಂದೆ ಮಾಡಿಕೊಂಡೇ ತನ್ನ ಪಟ್ಟಣವನ್ನು ಕುರಿತು ಹೋದನು.

ವಿಶೇಷಾಂಶ—ಉತಾಪಿ ಎನ್ನುವುದರಿಂದ ಬರುವ ಸಮಯದಲ್ಲಿಯೂ ದೌಹಿತ್ರನನ್ನು ಮುಂದೆ ಮಾಡಿಕೊಂಡೇ ಬಂದಿದ್ದನೆಂದು ತಿಳಿಯಬೇಕಾಗುತ್ತದೆ. ॥ ೪೨ ॥

ಮೂ ॥ ಜಿತ್ವಾ ತಮೂರ್ಜಿತಬಲಂ ಭಗವಾನಜೇಶ-
ಶಕ್ರಾದಿಭಿಃ ಕುಸುಮವರ್ಷಿಭಿರೀಡ್ಯಮಾನಃ ।
ರಾಮಾದಿಭಿಃ ಸಹಿತ ಆಶು ಪುರೀಂ ಪ್ರವಿಶ್ಯ
ರೇಮೇಽಭಿವಂದಿತಪದೋ ಮಹತಾಂ ಸಮೂಹೈಃ ॥ ೪೩ ॥

ಅ॥ ಶ್ರೀಕೃಷ್ಣನು ಉತ್ಕೃಷ್ಟವಾದ ಬಲವುಳ್ಳ ಆ ಜರಾಸಂಧನನ್ನು ಗೆದ್ದು, ಪುಷ್ಪವೃಷ್ಟಿಯನ್ನು ಮಾಡತಕ್ಕ ಬ್ರಹ್ಮ, ರುದ್ರ, ದೇವೇಂದ್ರ ಮೊದಲಾದ ದೇವತೆಗಳಿಂದ ಸ್ತೋತ್ರಮಾಡಿಸಿಕೊಳ್ಳಲ್ಪಟ್ಟವನಾಗಿ ಬಲರಾಮನೇ ಮೊದಲಾದವರಿಂದ ಕೂಡಿದವನಾಗಿ ಬೇಗನೇ ಮಥುರಾಪಟ್ಟಣವನ್ನು ಪ್ರವೇಶಮಾಡಿ ಉತ್ತಮರ ಸಮೂಹಗಳಿಂದ ನಮಸ್ಕರಿಸಿಕೊಳ್ಳಲ್ಪಟ್ಟ ಪಾದವುಳ್ಳವನಾಗಿ ಕ್ರೀಡಿಸುತ್ತಿದ್ದನು. ॥ ೪೩ ॥

ಈ ಕಾಲದಲ್ಲಿ ಉಂಟಾದ ಪಾಂಡವರ ಕಥೆಯನ್ನು ಹೇಳುತ್ತಾರೆ—

ಮೂ ॥ ವರ್ಧತ್ಸು ಪಾಂಡುತನಯೇಷು ಚತುರ್ದಶಂ ತು
ಜನ್ಮರ್ಕ್ಷಮಾಸ ತನಯಸ್ಯ ಸಹಸ್ರದೃಷ್ಟೇಃ ।
ಪ್ರತ್ಯಾಬ್ದಿಕಂ ಮುನಿಗಣಾನ್ ಪರಿವೇಷಯಂತೀ
ಕುಂತೀ ತದಾಸ ಬಹುಕಾರ್ಯಪರಾ ನಯಜ್ಞಾ ॥ ೪೪ ॥

ಅ॥ ಪಾಂಡವರು ಬೆಳೆಯುತ್ತಾ ಇರಲು ಸಹಸ್ರ ನಯನಗಳುಳ್ಳ ಇಂದ್ರನ ಪುತ್ರನಾದ ಅರ್ಜುನನಿಗೆ (ಯಾವಾಗ) ಪ್ರತಿ ಸಂವತ್ಸರದಲ್ಲಿಯೂ ಉಂಟಾಗತಕ್ಕ ಹದಿನಾಲ್ಕನೇ ಸಂವತ್ಸರದಲ್ಲಿರತಕ್ಕ ಹುಟ್ಟಿದ ನಕ್ಷತ್ರವು ಯಾವ ದಿವಸದಲ್ಲಿದೆಯೋ ಅಂತಹ ಜನ್ಮದಿನವು, ಆಯಿತೋ (ಅಂದರೆ ಜನ್ಮನಕ್ಷತ್ರದಿಂದ ಕೂಡಿದ ಜನ್ಮದಿನವು ಆಯಿತೋ) ಆ ದಿನದಲ್ಲಿ ನೀತಿಯನ್ನು ತಿಳಿದಿರತಕ್ಕ ಬಹುಕಾರ್ಯಗಳಲ್ಲಿ ಆಸಕ್ತಳಾದ ಕುಂತಿದೇವಿಯು ಋಷಿಗಳ ಸಮೂಹಗಳನ್ನು ಪರಿವೇಷಣೆ ಮಾಡುವವಳಾಗಿ ಇರುತ್ತಿದ್ದಳು (ಅಂದರೆ ಅನ್ನಾದಿಗಳನ್ನು ಬಡಿಸಿಕೊಂಡು ಇದ್ದಳು. ॥ ೪೪ ॥

ಮೂ ॥ ತತ್ಕಾಲ ಏವ ನೃಪತಿಃ ಸಹ ಮಾದ್ರವತ್ಯಾ
ಪುಂಸ್ಕೋಕಿಲಾಕುಲಿತಪುಲ್ಲವನಂ ದದರ್ಶ ।
ತಸ್ಮಿನ್ ವಸಂತಪವನಸ್ಪರ್ಶೇಧಿತಃ ಸ
ಕಂದರ್ಪಮಾರ್ಗಣವಶಂ ಸಹಸಾ ಜಗಾಮ ॥ ೪೫ ॥

ಅ॥ ಆ ಕಾಲದಲ್ಲಿಯೇ ಪಾಂಡುರಾಜನು ಗಂಡುಂಕೋಗಿಲೆ ಹಕ್ಕಿಲೆ ಹಕ್ಕಿಗಳಿಂದ ತುಂಬಿದ ಅರಳಿದ ಪುಷ್ಪಗಳುಳ್ಳ ವನವನ್ನು ಮಾದ್ರವತೀ ದೇವಿಯಿಂದ ಕೂಡಿಕೊಂಡು ನೋಡಿದನು. ಆ ವನದಲ್ಲಿ ವಸಂತಕಾಲದ ಗಾಳಿಯ ಸ್ಪರ್ಶದಿಂದ ಉದ್ರಿಕ್ತನಾದ ಆ ಪಾಂಡುರಾಜನು ಆಕಸ್ಮಾತ್ತಾಗಿ (ಆಂದರೆ ಶಾಪವನ್ನು ವಿಚಾರ ಮಾಡದೇನೇ)ಮನ್ಮಥನ ಬಾಣದ ಅಧೀನತ್ವವನ್ನು ಹೊಂದಿದನು॥ ೪೫ ॥

ಮೊ ॥ ಜಗ್ರಾಹ ತಾಮಥ ತಯಾ ರಮಮಾಣ ಏವ
ಯಾತೋ ಯಮಸ್ಯ ಸದನಂ ಹರಿಪಾದಸಂಗೀ ।
ಪೂರ್ವಂ ಶಚೀರಮಣನಿಚ್ಛತ ಏಷ ವಿಘ್ನಂ
ಶಕ್ರಸ್ಯ ತದ್ದರ್ಶನೋಪಗತೋ ಹಿ ಚಕ್ರೇ ॥ ೪೬ ॥
ತೇನೈವ ಮಾನುಷಮುಪಾಸ್ಯ ರತಿಸ್ಥ ಏವ
ಪಂಚತ್ವಮಾಪ ರತಿವಿಘ್ನಮಪುತ್ರತಾಂ ಚ ।
ಸ್ವಾತ್ಮೋತ್ಥಮೇಷ್ವಥ ಸುರೇಷು ವಿಶೇಷತಶ್ಚ
ಸ್ನೇಹೋsಪಿ ದೋಷ ಉರುತಾಮಭಿಯಾತಿ ಯಸ್ಮಾತ್ ॥ ೪೭ ॥
ಮಾದ್ರೀ ಪತಿಂ ಮೃತಮುವೇಕ್ಷ್ಯ ರುರಾವ ದೂರಾತ್
ತಚ್ಛ್ರುತ್ವಾ ಪೃಥಯಾ ಸಹ ಪಾಂಡುಪುತ್ರಾಃ ।
ತೇಷ್ವಾಗತೇಷು ವಚನಾದಹಿ ಮಾದ್ರವತ್ಯಾಃ
ಪುತ್ರಾನ್ನಿವಾರ್ಯ ತು ಪೃಥಾ ಸ್ವಯಮೇವ ಚಾಗಾತ್ ॥ ೪೮ ॥

ಅ॥ ಆಮೇಲೆ ಶ್ರೀಕೃಷ್ಣನ ಪಾದದಲ್ಲಿ ಸಂಬಂಧವುಳ್ಳ ಹರಿಭಕ್ತನಾದ ಪಾಂಡುಚಕ್ರವರ್ತಿಯು ಆ ಮಾದ್ರಿ ದೇವಿಯನ್ನು ಕ್ರೀಡೆಗೋಸ್ಕರ ಸ್ವೀಕರಿಸಿದನು. ಅವಳಿಂದ ಕ್ರೀಡಿಸುವವನಾಗಿಯೇ ಯಮನ ಸ್ಥಾನವನ್ನು ಹೊಂದಿದನು.

(ಪಾಂಡುರಾಜನಿಗೆ ಕ್ರೀಡಾಕಾಲದಲ್ಲಿ ಮೃತಿಗೆ ಕಾರಣವಾದ ಹಿಂದಿನ ಮುನಿಶಾಪದಿಂದಲೂ ಹೆಚ್ಚು ಪ್ರಬಲವಾದ ಕಾರಣವನ್ನು ಹೇಳುತ್ತಾರೆ)—

ಈ ಪಾಂಡುರಾಜನು ಮೊದಲು ಪರಾವಹನಾಮಕ ಮರುತ್ಸ್ವರೂಪದಿಂದ ಆ ಇಂದ್ರನನ್ನು ನೋಡಲಿಕ್ಕೆ ಸಮೀಪಿಸಿದವನಾಗಿ ಶಚೀದೇವಿಯಲ್ಲಿ ಕ್ರೀಡೆಯಲ್ಲಿ ಇಚ್ಛಿಸಿಕೊಂಡು ಇರತಕ್ಕ ದೇವೇಂದ್ರನಿಗೆ ರತಿಪ್ರತಿಬಂಧನವನ್ನು ಯಾವ ಕಾರಣದಿಂದ ಮಾಡಿದನೋ, ಕ್ರೀಡೆಗೆ ಪ್ರತಿಬಂಧಕವನ್ನು ಮಾಡಿದ್ದರಿಂದಲೇ ಮನುಷ್ಯಜನ್ಮವನ್ನು ಹೊಂದಿ ಕ್ರೀಡಾಸಕ್ತನಾಗಿರುವಾಗಲೇ ಮರಣವನ್ನು ಹೊಂದಿದನು. ರತಿಗೆ ವಿಘ್ನವನ್ನೂ ಹೊಂದಿದನು, ಔರಸ ಪುತ್ರರಾಹಿತ್ಯವನ್ನೂ ಹೊಂದಿದನು,

(ಹಾಗಾದರೆ ಅಲ್ಪವಾದ ಅಪರಾಧದಿಂದ ಮಹತ್ತಾದ ಅನರ್ಥಫಲಪ್ರಾಪ್ತಿಯುಂಹೇಗೆಂದರೆ)— ಸ್ವತಃ ಗುಣೋತ್ಕರ್ಷದಲ್ಲಿ ಅತ್ಯಲ್ಪವಾದಾಗ್ಯೂ ದೋಷವು ಫಲದಿಂದ ಮಹತ್ವವನ್ನು ಯಾವ ಕಾರಣದಿಂದ ಹೊಂದುತ್ತದೋ. ಅದಕ್ಕಿಂತಲೂ (ಅಂದರೆ ಸ್ವಾಪೇಕ್ಷೆಯಾ ಉತ್ಕರ್ಷದ ಅಪರಾಧ ದ್ದೆಸೆಯಿಂದಲೂ) ದೇವತೆಗಳ ವಿಷಯದಲ್ಲಿ (ಮಾಡಲ್ಪಟ್ಟ) ಸ್ವಲ್ಪ ದೋಷವೂ ಕೂಡ ಮಹತ್ವ ವನ್ನು ಹೊಂದುತ್ತದೋ (ಆದುದರಿಂದ ಮನುಷ್ಯತ್ವವನ್ನು ಹೊಂದಿ ಕ್ರೀಡಾಕಾಲದಲ್ಲಿಯೇ ಮರಣವನ್ನು ಹೊಂದಿದನು.) ಮಾದ್ರೀದೇವಿಯು ಗಂಡನಾದ ಪಾಂಡುರಾಜನನ್ನು ನೋಡಿ ರೋದನಮಾಡಿದಳು. ಪಾಂಡುಪುತ್ರರು ಕುಂತಿದೇವಿಯಿಂದ ಕೂಡಿಕೊಂಡು ದೂರ ದಿಂದಲೇ ಆ ರೋದನವನ್ನು ಕೇಳಿದರು. ಕುಂತಿದೇವಿಯು ಆ ಪಾಂಡವರು ಬರುತ್ತಿರಲು ಮಾದ್ರಿಯ ವಚನದಿಂದಲೂ (ಅಂದರೆ ಪುತ್ರರನ್ನು ಕರಕೊಂಡು ಬರಬೇಡ, ನೀನೇ ಬಾ, ಎಂದು ರೋದನ ಮಾಡುತ್ತಲೇ ಇರುವ ಮಾದ್ರಿಯ ಮಾತಿನಿಂದಲೂ)ಮಕ್ಕಳನ್ನಾದರೂ ತಡೆದು ತಾನೇ (ಶವ ಸವಿೂಪಕ್ಕೆ) ಹೋದಳು.

ವಿಶೇಷಾಂಶ—(1) ಋಷಿಯು ಶಾಪವನ್ನು ಕೊಟ್ಟ ಮೇಲೆ ಇಷ್ಟರ ವರೆಗೆ ಕ್ರೀಡೆಯೇ ಇಲ್ಲದಿರುವುದರಿಂದ ರತಿವಿಘ್ನಂ ಎಂದು ಹೇಳಿರುವರು. (2)ಯದ್ಯಪಿ ಋಷಿಶಾಪವೂ ನಿಮಿತ್ತವೇ ಆದಾಗ್ಯೂ ಋಷಿಯು ಪಾಂಡುವಿನಿಂದ (ಅಂದರೆ ಪರಾವಹನಾವಂಕ ಪಾಯುಂವಿವಿಂದ) ಅವರೆ ನಾದ ಪ್ರಯುಕ್ತ ಆತನ ಶಾಪವು ಪ್ರಬಲನಿಮಿತ್ತವಲ್ಲ. ಮತ್ತೆ ದೇವೇಂದ್ರನ ಕ್ರೋಧವೇ ಮರಣ ದಲ್ಲಿ ಮುಖ್ಯ ನಿಮಿತ್ತವು, ಎನ್ನುವ ತಾತ್ಪರ್ಯದಿಂದ "ಪೂರ್ವಂ ಶಚೀರಮಣಂ" ಇತ್ಯಾದಿಗಳನ್ನು ಹೇಳಿರುವರು, ॥ ೪೬ ॥ ॥ ೪೭ ॥ ೪೮ ॥

ಮೂ ॥ ಪತ್ಯುಃ ಕಲೇವರಮುವೇಕ್ಷ್ಯ ನಿಶಮ್ಯ ಮಾದ್ರ್ಯಃ
ಕುಂತೀ ಭೃಶಂ ವ್ಯಥಿತಹೃತ್ಕಮುಲೈವ ಮಾದ್ರೀಂ ।
ಧಿಕ್ಕೃತ್ಯ ಚಾನುಮರಣಾಯ ಮತಿಂ ಚಕಾರ
ತಸ್ಯಾಃ ಸ್ವನೋ ರುದಿತಜಃ ಶ್ರುತ ಆಶು ಪಾರ್ಥೈಃ ॥ ೪೯ ॥

ಅ॥ ಕುಂತೀದೇವಿಯು ಗಂಡನ ಮೃತಶರೀರವನ್ನು ನೋಡಿ ಮಾದ್ರಿಯಿಂದ ಕೇಳಿ (ಅಂದರೆ ಮರಣ ಪ್ರಕಾರವನ್ನು ಕೇಳಿ) ಅತ್ಯಂತವಾಗಿ ವ್ಯಥೆಯಿಂದ ಯುಕ್ತವಾದ ಹೃದಯಕಮಲವುಳ್ಳ ವಳಾಗಿಯೇ ಮಾದ್ರೀದೇವಿಯನ್ನು ಧಿಕ್ಕಾರಮಾಡಿಯೇ ಗಂಡನನ್ನು ಅನುಸರಿಸಿ ಮರಣವನ್ನು ಹೊಂದುವುದಕ್ಕಾಗಿಯೇ ಬುದ್ಧಿಯನ್ನುಮಾಡಿದಳು. ಕುಂತೀದೇವಿಯ ರೋಧನದಿಂದ ಉಂಟಾದ ಧ್ವನಿಯು ಶೀಘ್ರವಾಗಿ (ಕುಂತಿದೇವಿಯಿಂದ ಮಧ್ಯದಲ್ಲಿ ಸ್ಥಾಪಿತರಾದ) ಪಾಂಡವರಿಂದ ಕೇಳಲ್ಪ ಟ್ಟಿತು, ॥ ೪೯ ॥

ಮೂ ॥ ತೇಷ್ವಾಗತೇಷ್ವಧಿಕ ಆಸ ವಿರಾವ ಏತಂ
ಸರ್ವೇsಪಿ ಶುಶ್ರುವು ಋಷಿಪ್ರವರಾ ಅಥಾತ್ರ ।
ಆಜಗ್ಮುರುತ್ತಮಕೃಪಾ ಋಷಿಲೋಕಮಧ್ಯೇ
ಪತ್ನೀನೃಪಾನುಗಮನಾಯ ಚ ಪಸ್ಪೃಧಾತೇ ॥ ೫೦ ॥

ಅ॥ ಆ ಪಾಂಡವರು ಬರುತ್ತಿರಲು ರೋದನ ಶಬ್ದವು ಅಧಿಕವಾಯಿತು, ಈ ರೋದನ ಶಬ್ದವನ್ನು ಎಲ್ಲರೂ ಕೇಳಿದರು. ಆಮೇಲೆ ಈ ಋಷಿಜನರ ಮಧ್ಯವಲ್ಲಿ ಉತ್ತಮವಾದ ದಯಾ

ವುಳ್ಳವರಂ ಯಾರೋ ಆ ಋಂಷಿಶ್ರೇಷ್ಠರೂ ಕೂಡ ಇಲ್ಲಿಗೆ ಬಂದರಂ, ಒಬ್ಬಳಂ ಹೆಂಡತಿಗೆ ಗಂಡನನ್ನು ಅನುಸರಿಸಿಹೋಗುವುದಕ್ಕಾಗಿ ಇಬ್ಬರೂ ಸ್ಪರ್ಧೆಯಂನ್ನು ವಹಾಡಿದರಂ.

ವಿಶೇಷಾಂಶ—ಸಣ್ಣ ಮಕ್ಕಳಂ ಇರುವಾಗ ಇಬ್ಬರಂ ಹೆಂಡಂದಿರಂ ಗಂಡನನ್ನು ಅನುಸರಿಸಿ ಹೋಗುವುದಂ ಅಯೋಗ್ಯವು, ಇಬ್ಬರಲ್ಲಿ ಒಬ್ಬಳಿಗೆ ರಾಜನನ್ನು ಅನುಸರಿಸಿ ಹೋಗುವುದಕ್ಕಾಗಿ ನಾನಂ ಹೋಗುತ್ತೇನೆ ನಾನಂ ಹೋಗುತ್ತೇನೆ ಎಂದಂ ಇಬ್ಬರೂ ಸ್ಪರ್ಧೆಯಂನ್ನು ವಹಾಡಿಕೊಂಡರು. ॥ ೫೦ ॥

ಮೂ ॥ ತೇ ಸನ್ನಿವಾರ್ಯ ತು ಪೃಥಾಮುಥ ಮಾದ್ರವತ್ಯಾ
ಭರ್ತುಃ ಸಹಾನುಗಮನಂ ಬಹುಶೋಽರ್ಥಯಂತ್ಯಾಃ ॥
ಸಂವಾದಮೇವ ನಿಜದೋಷಮುವೇಕ್ಷ್ಯ ತಸ್ಯಾ-
ಶ್ಚಕ್ರುಃ ಸದಾವಗತಭಾಗವತೋಚ್ಚಧರ್ಮಾಃ ॥ ೫೧ ॥

ಅ ॥ ಯಾವಾಗಲೂ ತಿಳಿಯಂಲ್ಪಟ್ಟ ಭಗವತ್ಸಂಬಂಧಿಗಳಾದ ಶ್ರೇಷ್ಠಧರ್ಮಗಳಂಳ್ಳ ಆ ಋಂಷಿಶ್ರೇಷ್ಠರಂ ಕಂತಿಯಂನ್ನಾದರೂ ತಡೆದಂ ಆಮೇಲೆ ವಾದ್ರಿವಾಡಿದ ಭರ್ತೃ ಮರಣನಿಮಿತ್ತವಾದ ದೋಷವನ್ನು ವಿಚಾರವಾಡಿ ಗಂಡನ ಸಹಾನುಗಮನವನ್ನು ಅನೇಕಾವೃತ್ತಿ ಪ್ರಾರ್ಥಿಸುತಕ್ಕ ಆ ವಾದ್ರವತೀದೇವಿಯಂ ಅನುಗಮನ ಸಮ್ಮತಿಯನ್ನೇ ವಾಡಿದರಂ. ॥ ೫೧ ॥

ನಿಜದೋಷಂ ಎಂದಂ ಹೇಳಿದ ದೋಷವನ್ನು ನಿರೂಪಿಸುತ್ತಾರೆ—

ಮೂ ॥ ಭರ್ತುರ್ಗುಣೈರನಧಿಕೌ ತನಯಾರ್ಥಮೇವ
ವಾದ್ರ್ಯಾ ಕೃತೌ ಸುರವರಾವಧಿಕೌ ಸ್ವತೋಽಪಿ ।
ತೇನೈವ ಭರ್ತೃಮೃತಿಹೇರುರಭೂತ್ ಸಮಸ್ತ-
ಲೋಕೈಶ್ಚ ನಾತಿಮಹಿತಾ ಸುಗುಣಾಪಿ ವಾದ್ರೀ ॥ ೫೨ ॥

ಅ ॥ವಾದ್ರೀದೇವಿಯಂ ಗಂಡನ ಗುಣಗಳಿಂದ ಅಧಿಕವಿಲ್ಲದಿರುವವರು, ತನ್ನಕ್ಕಿಂತಲೂ ಗುಣೋತ್ತಮರಂ, ದೇವಶ್ರೇಷ್ಠರಾದ ಅಶ್ವಿನೀದೇವತೆಗಳು ಪುತ್ರೋತ್ಪತ್ತಿಗಾಗಿಯೇ ವಾದ್ರೀದೇವಿಯಿಂದ ಕರೆಯಂಲ್ಪಟ್ಟರಂ. ತನ್ನ ಗಂಡನಿಗಿಂತ ಉತ್ತಮರಾಗದೆ ಇದ್ದ ಅಶ್ವಿನೀದೇವತೆಗಳನ್ನು ಸ್ವೀಕರಿಸಿದ ದೋಷದಿಂದಲೇ ವಾದ್ರೀದೇವಿಯಂ ಗಂಡನ ಮರಣಕ್ಕೆ ಕಾರಣಳಂ ಆದಳಂ. ವಾದ್ರೀದೇವಿಯಂ ಸವಿಾಚೀನ ಗುಣಗಳುಳ್ಳವಳಾದಾಗ್ಯೂ ಎಲ್ಲಾ ಜನರಿಂದಲೂ ಅತಿಶಯವಾಗಿ ಪೂಜ್ಯಳಂ ಆಗಲಿಲ್ಲ.

ವಿಶೇಷಾಂಶ—ವಿಷ್ವಕ್ಸೇನೋಽಶ್ವಿನೌ ತೌ ಗಣಪತಿಧನಪಾ ಉಕ್ತಶೇಷಾಃ ಶತಸ್ಥಾ ದೇವಾಶ್ಚೋಕ್ತೇತರಾ ಯೇ ಎನ್ನುವ ಚ ಶಬ್ದದಿಂದ ಮೊದಲೇ ಸಂಗೃಹೀತರಾದ ಅಶ್ವಿನೀದೇವತೆಗಳಿಗೆ ಶತಸ್ಥ ದೇವತೆಗಳಲ್ಲಿ ಪಠಿತನಾದ ಪಾಂಡುಮೂಲರೂಪ ಪರಾವಹಾಖ್ಯ ವಾಯುವಿಗೆ ಸಾಮ್ಯವಿದ್ದುದರಿಂದ ಪಾಂಡುರಾಜನಿಗಿಂತ ಅಶ್ವಿನೀದೇವತೆಗಳಿಗೆ ಆಧಿಕ್ಯವಿಲ್ಲದಿರುವುದರಿಂದ 'ಭರ್ತುರ್ಗುಣೈರನಧಿಕೌ' ಎಂದಂ ಹೇಳಿರುವದು. ॥ ೫೨ ॥

ಮೂ ॥ ಪಾಂಡೋಃ ಸುತಾ ಮುನಿಗಣೈಃ ಪಿತೃಮೇಧಮತ್ರ
ಚಕ್ರುರ್ಯಥಾವದಥ ತೇನ ಸಹೈವ ಮಾದ್ರೀ ।
ಹುತ್ವಾತ್ಮದೇಹಮುರುಪಾಪಮುದಃ ಕೃತಂ ಚ
ಸಮ್ಯಾಜ್ಯ ಲೋಕಮಗಮನ್ನಿಜಭರ್ತುರೇವ ॥ ೫೫ ॥

ಅ॥ ಆಮೇಲೆ ಪಾಂಡುರಾಜನ ಮಂಕ್ಕಳಂ ವ್ಯಾಸಾಶ್ರಮಂದಲ್ಲಿ ಋಂಷಿಗಳ ಸಮೂಹಗಳಿಂದ ಕೂಡಿಕೊಂಡು ದೇಹದಾಹಾದಿ ಪಿತೃಯಜ್ಞವನ್ನು ಶಾಸ್ತ್ರದಲ್ಲಿ ಹೇಳಿದ ಪ್ರಕಾರ ಮಾಡಿದರಂ. ಮಾದ್ರೀದೇವಿಯಂ ದಹ್ಯಮಾನವಾದ ಶರೀರದಿಂದ ಕೂಡಿಕೊಂಡೇ ತನ್ನ ಶರೀರವನ್ನು ಹೋಮಿಸಿಕೊಂಡಂ ಈ ಜನ್ಮದಲ್ಲಿ ಮಾಡಲ್ಪಟ್ಟ ಅಲ್ಪ ಪ್ರಾಯಶ್ಚಿತ್ತದಿಂದ ಪರಿಹರಿಸಲಿಕ್ಕೆ ಅಶಕ್ಯವಾದ, ಅಶ್ವಿನೀದೇವತೆಗಳ ಸಂಬಂಧದಿಂದಂಂಟಾದ ಪಾಪದಿಂದ ಉಂಟಾದ ಗಂಡನ ಮರಣಕ್ಕೆ ಕಾರಣರೂಪವಾದ ಪಾಪವನ್ನು ನಿರಾಕರಿಸಿ ತನ್ನ ಗಂಡನ ಲೋಕವನ್ನೇ ಹೊಂದಿದಳಂ. ॥ ೫೫ ॥

ಇಂದ್ರನಿಗೆ ಅಪರಾಧವನ್ನು ಮಾಡಿದ್ದರಿಂದ ಅಶಂಚಿತ್ವಾವಸ್ಥೆಯಂಲ್ಲಿ ಮರಣವನ್ನು ಹೊಂದಿದ ಪಾಂಡುರಾಜನಿಗೆ ಉತ್ತಮಲೋಕಪ್ರಾಪ್ತಿಯಂ ಹೇಗೆಂದರೆ—

ಮೂ ॥ ಪಾಂಡೋಶ್ಚ ಪುತ್ರಕಗುಣೈಃ ಸ್ವಗುಣೈಶ್ಚ ಸಾಕ್ಷಾತ್
ಕೃಷ್ಣಾತ್ಮಜಃ ಸತತಮಸ್ಯ ಪದೈಕಭಕ್ತಃ ।
ಲೋಕಾನವಾಪ ವಿಮಲಾನ್ಮಹಿತಾನ್ಮಹದ್ಭಿಃ
ಕಿಂ ಚಿತ್ರಮತ್ರ ಹರಿಪಾದವಿನಮ್ರಚಿತ್ತೇ ॥ ೫೪ ॥

ಅ॥ ವೇದವ್ಯಾಸದೇವರ ಸಾಕ್ಷಾತ್ ಔರಸಪುತ್ರನಾದವನುಂ, ನಿರಂತರದಲ್ಲಿಯಂ ಶ್ರೀಕೃಷ್ಣನ ಕೇವಲ ಪಾದಗಳಲ್ಲಿ ಭಕ್ತನಾದವನುಂ ಇಂತಹ ಪಾಂಡುರಾಜನುಂ ಮಂಕ್ಕಳ ಗುಣಗಳಿಂದಲೂ ತನ್ನ ಗುಣಗಳಿಂದಲೂ ಶ್ರೇಷ್ಠಪುರುಷರಿಂದ ಪೂಜ್ಯಗಳಾದ ನಿರ್ಮಲಗಳಾದ ಲೋಕಗಳನುಂ ಹೊಂದಿದನುಂ, ಶ್ರೀಹರಿಯಂ ಪಾದಗಳಲ್ಲಿ ಬಗ್ಗಿದ ಮನಸ್ಸುಳ್ಳ ಪಾಂಡುರಾಜನ ವಿಷಯದಲ್ಲಿ ಉತ್ತಮಂ ಧಿಕ್ಕಾರಪ್ರಾಪ್ತಿಯಾದರೂ ಏನುಂ ಆಶ್ಚರ್ಯವು, ॥ ೫೪ ॥

ಮೂ ॥ ಪಾಂಡೋಃ ಸುತಾಶ್ಚ ಪೃಥಯಾ ಸಹಿತಾ ಮುನೀಂದ್ರೈ-
ರ್ನಾರಾಯಣಾಶ್ರಮತ ಆಶು ಪುರಂ ಸ್ವಕೀಯಂ ।
ಜಗ್ಮುಸ್ತಥೈವ ಧೃತರಾಷ್ಟ್ರಪುರೋ ಮುನೀಂದ್ರಾ
ವೃತ್ತಂ ಸಮಸ್ತಮವದನ್ನನುಜಂ ಮೃತಂ ಚ ॥ ೫೫ ॥

ಅ॥ ಪಾಂಡುರಾಜನ ಮಂಕ್ಕಳಂ ಕುಂತಿಯಿಂದ ಕೂಡಿದವರಾಗಿ ಋಂಷಿಶ್ರೇಷ್ಠರಿಂದಲೂ ಕೂಡಿದವರಾಗಿ ನಾರಾಯಣಾಶ್ರಮದ್ದೆಸೆಯಿಂದ ಶೀಘ್ರವಾಗಿ ತಮ್ಮಿದ್ದಾದ ಹಸ್ತಿನಾವತೀ ಪಟ್ಟಣವನ್ನು ಕುರಿತಂ ಹೋದರಂ. ಹಾಗೆಯೇ ಧೃತರಾಷ್ಟ್ರನ ಮಂತ್ರಾಗದಲ್ಲಿ ಋಂಷಿಶ್ರೇಷ್ಠರಂ ಎಲ್ಲಾ ವೃತ್ತಾಂತವನ್ನು ಹೇಳಿದರಂ. ತಮ್ಮನಾದ ಪಾಂಡುರಾಜನನ್ನು ಮೃತನನ್ನಾಗಿಯಂ ಹೇಳಿದರಂ. ॥ ೫೫ ॥

ಮೂ ॥ ತೂಷ್ಣೀಂ ಸ್ಥಿತೇ ಚ ನೃಪತೌ ತನುಜೇ ಚ ನದ್ಯಾಃ
ಕ್ಷತ್ತರ್ಯುತಾತ್ತ ಉರುವೋದಮತೀವ ಪಾಪಾಃ ।
ಊಚುಃ ಸುಯೋಧನಮುಖಾಃ ಸಹ ಸೌಬಲೇನ
ಪಾಂಡೋರ್ಮೃತಿಃ ಕಿಲ ಪುರಾ ತನಯಾಃ ಕ್ವ ತಸ್ಯ ॥ ೫೬ ॥

ಅ॥ ಧೃತರಾಷ್ಟ್ರರಾಜನು ಸುಮ್ಮನೆ ಕೂತುಕೊಳ್ಳುತ್ತಿರಲು ಭೀಷ್ಮಾಚಾರ್ಯರೂ ಕೂಡ ಸುಮ್ಮನೆ ಕೂತುಕೊಳ್ಳುತ್ತಿರಲು ವಿದುರನು ಅತ್ಯಂತವಾಗಿ ಉತ್ಕೃಷ್ಟವಾದ ಸಂತೋಷವನ್ನು ಹೊಂದುತ್ತಿರಲು ಮತ್ತು ಪಾಪಿಷ್ಠರಾದ ದುರ್ಯೋಧನನೇ ಮೊದಲಾಗಿ ಉಳ್ಳವರು ಶಕುನಿಯಿಂದ ಕೂಡಿಕೊಂಡು ಹೇಳಿದರು. (ಏನೆಂದರೆ) ಪಾಂಡುರಾಜನಿಗೆ ಮಕ್ಕಳು ಹುಟ್ಟುವುದಕ್ಕಿಂತ ಮೊದಲೇ ಮರಣವಾಗಿದೆ. ಆ ಪಾಂಡುವಿಗೆ ಮಕ್ಕಳು ಎಲ್ಲಿ? ॥ ೫೬ ॥

ಔರಸ ಪುತ್ರರು ಇಲ್ಲವಾದರೆ ಕ್ಷೇತ್ರಜರು ಪುತ್ರರು ಏಕೆ ಆಗಲಾರರು ಎಂದರೆ—

ಮೂ ॥ ನ ಕ್ಷೇತ್ರಜಾ ಅಪಿ ಮೃತೇ ಪಿತರಿ ಸ್ವಕೀಯೈಃ
ಸಮ್ಯಙ್ನಿ ಯೋಗಮನವಾಪ್ಯ ಭವಾಯ ಯೋಗ್ಯಾಃ ।
ತೇಷಾಮಿತೀರಿತವಚೋಽನು ಜಗಾದ ವಾಯು-
ರಾಭಾಷ್ಯ ಕೌರವಗಣಾನ್ ಗಗನಸ್ಥ ಏವ ॥ ೫೭ ॥

ಅ॥ ತಂದೆಯು ವ್ಯಾಧನಾದ ಮೇಲೆ ಬಾಂಧವರಿಂದ ಪ್ರೀತಿಪೂರ್ವಕವಾಗಿ ಆಜ್ಞೆಯನ್ನು ಹೊಂದದೆ ಮತ್ತೊಬ್ಬನದೆಸೆಯಿಂದ ಹೆಂಡತಿಯಲ್ಲಿಯೇ ಹುಟ್ಟಿದವರಾದಾಗ್ಯೂ ಕೂಡ (ಭವಾಯ =)ಯಾರ ಕ್ಷೇತ್ರವೋ ಅವನ ಸಂತಾನಕ್ಕೋಸ್ಕರ ಯೋಗ್ಯರಾಗುವುದಿಲ್ಲ. (ಆದಕಾರಣ ಇವರು ಪಾಂಡುವಿನ ಕ್ಷೇತ್ರಜರೂ ಆಗುವುದಿಲ್ಲ ಎಂದು ಹೇಳಿದರು.) ಆಕಾಶದಲ್ಲಿರತಕ್ಕ ವಾಯುದೇವರು ಕೌರವರ ಸಪರಿವಾರಗಳನ್ನು ಸಂಬೋಧನದಿಂದ ಅಭಿಮುಖೀಕರಿಸಿ ಆ ದುರ್ಯೋಧನಾದಿಗಳ ಹಿಂದೆ ಹೇಳಿದ ಪ್ರಕಾರ ಸಂತತಿಗೋಸ್ಕರ ಯೋಗ್ಯರಾಗುವುದಿಲ್ಲ ಇದು ಮೊದಲಾಗಿ ಹೇಳಿದ ವಾತನ್ನು ಒಟ್ಟಿಗೇನೇ ಹೇಳಿದನು. ॥ ೫೭ ॥

ಮೂ ॥ ಏತೇ ಹಿ ಧರ್ಮಮರುದಿಂದ್ರಭಿಷಗ್ವರೇಭ್ಯೋ
ಜಾತಾಃ ಪ್ರಜೀವತಿ ಪಿತರ್ಯುರುಧರ್ಮಸಾರಾಃ ।
ಶಕ್ಯಾಶ್ಚ ನೈವ ಭವತಾಂ ಕ್ವಚಿದಗ್ರಹಾಯ
ನಾರಾಯಣೇನ ಸತತಂ ಪರಿರಕ್ಷಿತಾ ಯತ್ ॥ ೫೮ ॥

ಅ॥ ಸರ್ವೋತ್ಕೃಷ್ಟನಾದ ಶ್ರೀಪರಮಾತ್ಮನಿಗೆ ಪ್ರೀತಿಕರವಾದ ಧರ್ಮವುಳ್ಳ, ಶ್ರೇಷ್ಠರಾದ ಈ ಪಾಂಡವರು ತಂದೆಯು ಚೆನ್ನಾಗಿ ಜೀವಿಸಿಕೊಂಡೇ ಇರುತ್ತಿರಲು ಧರ್ಮ, ವಾಯು, ಇಂದ್ರ, ಅಶ್ವಿನೀದೇವತೆಗಳು ಇವರಿಂದ ಹುಟ್ಟಿದವರು. ಭಾರತಾದಿಗಳಲ್ಲಿ ಪ್ರಸಿದ್ಧವು; ಯಾವಕಾರಣದಿಂದ ನಿಮಗೂ ಪಿತಾಮಹನಾದ ಶ್ರೀನಾರಾಯಣನಿಂದ ನಿರಂತರದಲ್ಲಿಯೂ ರಕ್ಷಿಸಿಕೊಳ್ಳಲ್ಪಟ್ಟಿದ್ದಾರೋ ಆದಕಾರಣ ಎಲ್ಲಿಯೂ ನಿಮಗೆ ಬಿಡಲಿಕ್ಕೆ ಶಕ್ಯರೇ ಆಗುವುದಿಲ್ಲ. ॥ ೫೮ ॥

ಮೂ ॥ ವಾಯೋರದೃಶ್ಯವಚನಂ ಪರಿಶಂಕಮಾನೇ-
ಷ್ವಾವಿರ್ಬಭೂವ ಭಗವಾನ್ ಸ್ವಯಮಬ್ಜನಾಭಃ ।

ವ್ಯಾಸಸ್ವರೂಪ ಉರುಸರ್ವಗುಣೈಕದೇಹ
ಆದಾಯ ತಾನಗವುದಾಶು ಚ ಪಾಂಡುಗೇಹಂ ॥ ೫೯ ॥

ಅ ॥ ವಾಯುದೇವರ ಅದೃಶ್ಯವಚನವನ್ನು ಶಂಕಿಸಿಕೊಂಡು ಇರಲು ಪೂಜ್ಯನಾದ, ಕವಂಲವು ನಾಭಿಯಲ್ಲುಂಳ್ಳ ಸಾಕ್ಷಾತ್ ವ್ಯಾಸಸ್ವರೂಪಿಯಾದ ಶ್ರೀಹರಿಯು ಆವಿರ್ಭಸಿದನು. ಪೂರ್ಣವಾದ ಕೇವಲ ಸರ್ವಗುಣಾತ್ಮಕವಾದ ಶರೀರವುಳ್ಳ ಶ್ರೀಹರಿಯು ಪಾಂಡವರನ್ನು ಕರಕೊಂಡು ಶೀಘ್ರದಲ್ಲಿ ಪಾಂಡುರಾಜನ ಮಂದಿರಕ್ಕೆ ಹೋದನು. ॥ ೫೯ ॥

ಮೂ ॥ ತತಿಸ್ವೀಕೃತೇಷು ಸಕಲಾ ಅಪಿ ಭೀಷ್ಮಮುಖ್ಯಾ
ವೈಚಿತ್ರವೀರ್ಯಸಹಿತಾಃ ಪರಿಪೂಜ್ಯ ಸರ್ವಾನ್ ।
ಕುಂತ್ಯಾ ಸಹೈವ ಜಗೃಹುಃ ಸುಭೃಶಂ ತದಾರ್ತಾ
ವೈಚಿತ್ರವೀರ್ಯತನಯಾಃ ಸಹ ಸೌಬಲೇನ ॥ ೬೦ ॥

ಅ ॥ ಆ ಪಾಂಡವರು ವೇದವ್ಯಾಸರಿಂದ ಸ್ವೀಕರಿಸಿಕೊಳ್ಳಲ್ಪಡುತ್ತಿರಲು ಭೀಷ್ಮಾಚಾರ್ಯರೇ ಮೊದಲಾಗಿ ಉಳ್ಳ ಧೃತರಾಷ್ಟ್ರನಿಂದ ಸಹಿತರಾದ ಎಲ್ಲರೂ ಕೂಡ ಕುಂತೀ ಸಹಿತರಾದ ಪಂಚ ಪಾಂಡವರನ್ನು ಪೂಜಿಸಿ ಯಾವಾಗ ಸ್ವೀಕರಿಸಿದರೋ, ಆಗ ಧೃತರಾಷ್ಟ್ರನ ಮಂಕ್ಕಳು ಶಕುನಿಯಿಂದ ಕೂಡಿಕೊಂಡು ಅತ್ಯಂತವಾಗಿ ದುಃಖಿತರಾದರು, ॥ ೬೦ ॥

ಮೂ ॥ ವೈಚಿತ್ರವೀರ್ಯತನಯಾಃ ಕೃಪತೋ ಮಹಾಸ್ತ್ರ-
ಣ್ಯಾಪುಶ್ಚ ಪಾಂಡುತನಯೈಃ ಸಹ ಸರ್ವರಾಜ್ಞಾಂ ।
ಪುತ್ರಾಶ್ಚ ತತ್ರ ವಿವಿಧಾ ಅಪಿ ಬಾಲಚೇಷ್ಟಾಃ
ಕುರ್ವತ್ಸು ವಾಯುತನಯೇನ ಜಿತಾಃ ಸಮಸ್ತಾಃ ॥ ೬೧ ॥

ಅ ॥ ಧೃತರಾಷ್ಟ್ರರಾಜನ ಮಂಕ್ಕಳೂ ಎಲ್ಲಾ ರಾಜರ ಮಂಕ್ಕಳೂ ಕೂಡ ಪಾಂಡವರಿಂದ ಕೂಡಿಕೊಂಡು ಕೃಪಾಚಾರ್ಯರದೆಸೆಯಿಂದ ಮಂಹಾಸ್ತ್ರಗಳನ್ನೂ ಹೊಂದಿದರು. ಆ ಮಂಕ್ಕಳು ಬಹುಂಪ್ರಕಾರಗಳಾದ ಬಾಲಚೇಷ್ಟೆಗಳನ್ನು ಮಾಡುತ್ತಿರಲು ಭೀಮಂಸೇನನಿಂದ ಎಲ್ಲರೂ ಪರಾಜಿತರಾದರು, ॥ ೬೧ ॥

ಮೂ ॥ ಪಕ್ವೋರುಭೋಜ್ಯಫಲಸನ್ನಯನಾಯ ವೃಕ್ಷೇ-
ಷ್ವಾರೂಢರಾಜತನಯಾನಭಿವೀಕ್ಷ್ಯ ಭೀಮಃ ।
ಪಾದಪ್ರಹಾರಮುರುವೃಕ್ಷತಲೇ ಪ್ರದಾಯ
ಸಾಕಂ ಫಲೈರ್ವಿನಿಪತತ್ಸು ಫಲಾನ್ಯಭುಂಕ್ತ ॥ ೬೨ ॥

ಅ ॥ ಪಕ್ವಗಳಾದ ಶ್ರೇಷ್ಠಗಳಾದ ಭಕ್ಷ್ಯಗಳಾದ ಫಲಗಳನ್ನ ತಿನ್ನುವುದಕ್ಕಾಗಿ ಮಂರಗಳಲ್ಲಿ ಏರಿದ ರಾಜಪುತ್ರರನ್ನು ಭೀಮಂನು ನೋಡಿ ಮಂರದ ಅಧೋಭಾಗದಲ್ಲಿ ಚೆನ್ನಾಗಿ (ಹೊಡೆದು) ಪಾದಪ್ರಹಾರವನ್ನು ಮಾಡಿ ಫಲಗಳಿಂದ ಕೂಡಿಕೊಂಡೇ ಆ ರಾಜಕುಮಾರರು ಬೀಳುತ್ತಿರಲು ಫಲಗಳನ್ನು (ತಾನೇವೇ) ತಿನ್ನುತ್ತಿದ್ದನು. ॥ ೬೨ ॥

ಮೂ ॥ ಯುದ್ಧೇ ನಿಯುದ್ಧ ಉತ ಧಾವನ ಉತ್ಪ್ಲವೇ ಚ
ವಾರಿಪ್ಲವೇ ಚ ನಿಖಿಲಾನ್ ಸಹಿತಾನ್ ಕುಮಾರಾನ್ ।
ಏಕೋ ಜಿಗಾಯ ತರಸಾ ಪರಮಾರ್ಯಕರ್ಮಾ
ವಿಷ್ಣೋಃ ಸುಪೂರ್ಣಸದನುಗ್ರಹತಃ ಸುನಿತ್ಯಾತ್ ॥ ೬೩ ॥

ಅ॥ ಯುದ್ಧ (ಎರಡು ಗುಂಪಾಗಿ ಮಾಡತಕ್ಕ ಕಲಹ) ದಲ್ಲಿ, ನಿಯುದ್ಧ (ದ್ವಂದ್ವ ಯುದ್ಧದಲ್ಲಿ) ಓಡುವುದರಲ್ಲಿಯೂ ಹಾರುವುದರಲ್ಲಿಯೂ ಜಲದಲ್ಲಿ ಹಾರುವುದರಲ್ಲಿಯೂ ಒಂದೇ ಕಡೆ ಏಲಿತರಾದ ಎಲ್ಲಾ ಕುಮಾರರನ್ನೂ, ಅತ್ಯಂತ ನಿತ್ಯವಾದ ಶ್ರೀಹರಿಯ ಪರಿಪೂರ್ಣವಾದ ನಿರ್ದೋಷವಾದ ಅನುಗ್ರಹದ್ದೆಸೆಯಿಂದ ಉತ್ಕೃಷ್ಟವಾದ ಪೂಜ್ಯ ಕರ್ಮವುಳ್ಳ ಭೀಮನೊಬ್ಬನೇ ವೇಗದಿಂದ ಗೆದ್ದನು. ॥ ೬೩ ॥

ಮೂ ॥ ಸರ್ವಾನ್ ಪ್ರಗೃಹ್ಯ ವಿನಿಮಜ್ಜತಿ ವಾರಿಮಧ್ಯೇ
ಶ್ರಾಂತಾನ್ ವಿಸೃಜ್ಯ ಹಸತಿ ಸ್ಮ ಸ ವಿಷ್ಣುಪದ್ಯಾಂ ।
ಸರ್ವಾನುದೂಹ್ಯ ಚ ಕದಾಚಿದುರುಪ್ರವಾಹಾಂ
ಗಂಗಾಂ ಸ ತಾರಯತಿ ಸಾರಸುಪೂರ್ಣಪೌಂಸ್ಯಃ ॥ ೬೪ ॥

ಅ॥ ಭೀಮನು ಸರ್ವರನ್ನೂ ಹಿಡಿದುಕೊಂಡು ನೀರಿನ ಮಧ್ಯದಲ್ಲಿ ಮುಳುಗುತ್ತಾನೆ, ಬಳಲಿದವರನ್ನು ಬಿಟ್ಟು ನೆಗಾಡುತ್ತಾನೆ, ಶ್ರೇಷ್ಠವಾದ ಅತಿಪೂರ್ಣವಾದ ಪೌರುಷವುಳ್ಳ ಆ ಭೀಮನು ಭಾಗೀರಥಿಯಲ್ಲಿ ಎಲ್ಲರನ್ನು ಹೊತ್ತುಕೊಂಡು ಕೆಲವು ವೇಳೆ ಅತಿಶ್ರೇಷ್ಠ ಪ್ರವಾಹವುಳ್ಳ ಭಾಗೀರಥಿಯನ್ನು ದಾಟುತ್ತಾನೆ. ॥ ೬೪ ॥

ಹಾಗಾದರೆ ಭೀಮಸೇನನು ಇದನ್ನೆಲ್ಲಾ ಏತಕ್ಕೆ ಮಾಡಿದನೆಂದರೆ—

ಮೂ ॥ ದ್ವೇಷಂ ಹ್ಯೃತೇ ನ ಹಿ ಹರೌ ತಮಸಿ ಪ್ರವೇಶಃ
ಪ್ರಾಣೇ ಚ ತೇನ ಜಗತೀಮನು ತೌ ಪ್ರಪನ್ನೌ ।
ತತ್ಕಾರಣಾನ್ಯಕುರುತಾಂ ಪರಮೌ ಕರಾಂಸಿ
ದೇವದ್ವಿಷಾಂ ಸತತವಿಸ್ತೃತಸಾಧುಪೌಂಸ್ಯೌ ॥ ೬೫ ॥

ಅ॥ ಅಸುರರಿಗೆ ಶ್ರೀಹರಿಯಲ್ಲಿಯೂ ಮುಖ್ಯಪ್ರಾಣನಲ್ಲಿಯೂ ದ್ವೇಷವನ್ನು ಹೊರತು ತಮಸ್ಸಿನಲ್ಲಿ ಪ್ರವೇಶವು ಯಾವಕಾರಣದಿಂದ ಆಗಲಾರದೋ, ಆ ಕಾರಣದಿಂದ ಆ ಹರಿವಾಯುಗಳು ಪೃಥಿವಿಯನ್ನು ಅನುಸರಿಸಿ ಒಟ್ಟಿಗೆ ಬಂದಿರುವರು. ನಿರಂತರದಲ್ಲಿಯೂ ವಿಸ್ತೃತವಾದ ಪೂರ್ಣವಾದ ನಿರ್ದೋಷವಾದ (ಅಂದರೆ ವರ ಮಂತ್ರಸಾಮರ್ಥ್ಯೋಪಾಧಿ ರಹಿತವಾದ) ಸ್ವಾಭಾವಿಕವಾದ ಬಲವುಳ್ಳ ಶ್ರೇಷ್ಠರಾದ ಕೃಷ್ಣಭೀಮರು ದ್ವೇಷಕ್ಕೆ ಕಾರಣಗಳಾದ ಕರ್ಮಗಳನ್ನು ಮಾಡಿದರು. ॥ ೬೫ ॥

ಮೂ ॥ ದೃಷ್ಟ್ವೈವಿತಾನ್ಯಥ ಕರಾಂಸಿ ಮರುತ್ಸುತೇನ
ನಿತ್ಯಂ ಕೃತಾನಿ ತನಯಾ ನಿಖಿಲಾಶ್ಚ ರಾಜ್ಞಾಂ ।
ತಸ್ಯಾವಿತಂ ಬಲಮುದೀಕ್ಷ್ಯ ಸದೋರುವೃದ್ಧಾ-
ದ್ವೇಷಾ ಬಭೂವುರಥ ಮುಂತ್ರಮುಮುಂತ್ರಯುಂಶ್ಚ ॥ ೬೬ ॥

ಅ ॥ ಆವೇಲೆ ರಾಜರ ಎಲ್ಲಾ ಮಂಕ್ಕಳೂ ಭೀಮಸೇನನಿಂದ ನಿರಂತರದಲ್ಲಿಯೂ ಮಾಡ ಲ್ಪಟ್ಟ ಅಪರಿಮಿತಗಳಾದ ಕರ್ಮಗಳನ್ನು ನೋಡಿ ಆ ಭೀಮನ ಅಪರಿಮಿತವಾದ ಸಾಮರ್ಥ್ಯ ವನ್ನೂ ನೋಡಿ ಯಾವಾಗಲೂ ಬಹಳವಾದ ಅಭಿವೃದ್ಧವಾದ ದ್ವೇಷವುಳ್ಳವರಾದರು. ಆವೇಲೆ ವಿಚಾರವನ್ನು ಮಾಡಿದರು. ॥ ೬೬ ॥

ಮೂ ॥ ಯೇ ಯೇ ಹಿ ತತ್ರ ನರದೇವಸುತಾಃ ಸುರಾಂಶಾಃ
ಪ್ರೀತಿಂ ಪರಾಂ ಪವನಜೇ ನಿಖಿಲಾ ಅಕುರ್ವನ್ ।
ತಾಂಸ್ತಾನ್ ವಿಹಾಯ ದಿತಿಜಾ ನರದೇವವಂಶ–
ಜಾತಾ ವಿಚಾರ್ಯ ವಧನಿಶ್ಚಯಮಸ್ಯ ಚಕ್ರುಃ ॥ ೬೭ ॥

ಅ ॥ ಅವರ ಮಧ್ಯದಲ್ಲಿ ಯಾರು ಯಾರು ರಾಜರ ಪುತ್ರರು ದೇವಾವತಾರರೋ ಆವ ರೆಲ್ಲರೂ ಭೀಮನಲ್ಲಿ ಉತ್ಕೃಷ್ಟವಾದ ಪ್ರೀತಿಯನ್ನು ಮಾಡಿದರು, ರಾಜರ ಕಾಲದಲ್ಲಿ ಹುಟ್ಟಿದ ದೈತ್ಯರು ಅವರವರನ್ನು ಬಿಟ್ಟು ವಿಚಾರ ಮಾಡಿ ಈ ಭೀಮನ ವಧ ನಿಶ್ಚಯವನ್ನು ಮಾಡಿದರು. ॥ ೬೭ ॥

ಮೂ ॥ ಅಸ್ಮಿನ್ ಹತೇ ವಿನಿಹತಾ ಅಖಿಲಾಶ್ಚ ಪಾರ್ಥಾಃ
ಪಕ್ಷ್ಯೇ ಬಲಾಚ್ಚ ನ ನಿಹಂತುಮಯಂ ಬಲಾಢ್ಯಃ ।
ಛದ್ಮ ಪ್ರಯೋಗತ ಇಮಂ ವಿನಿಹತ್ಯ ವೀರ್ಯಾತ್
ಪಾರ್ಥಂ ನಿಹತ್ಯ ನಿಗಡೇ ಚ ವಿದದ್ಮಹೇsನ್ಯಾನ್ ॥ ೬೮ ॥

ಅ ॥ ಈ ಭೀಮಸೇನನು ಸಂಹರಿಸಿಕೊಳ್ಳಲ್ಪಡುತ್ತಿರಲು ಎಲ್ಲಾ ಪಾಂಡವರೂ ಸಂಹರಿಸಿ ಕೊಳ್ಳಲ್ಪಟ್ಟರು. ಈ ಭೀಮಸೇನನು ಅತಿ ಬಲಿಷ್ಠನು, ಶಾರೀರ ಬಲದಿಂದ ಸಂಹರಿಸಲಿಕ್ಕೆ ಶಕ್ಯ ನಲ್ಲ. ಮಂತ್ರೌಷಧಾದಿ ಛದ್ಮ ಪ್ರಯೋಗದ್ವೆಸೆಯಿಂದ ಈ ಭೀಮಸೇನನನ್ನು ಸಂಹರಿಸಿ ಅರ್ಜುನ ನನ್ನು ಪರಾಕ್ರಮದಿಂದ ಸಂಹರಿಸಿ ಇತರರಾದ ಯುಧಿಷ್ಠಿರಾದಿಗಳನ್ನು ಶೃಂಖಲೆಯಲ್ಲಿ ಮಾಡುತ್ತೇವೆ. ॥ ೬೮ ॥

ಮೂ ॥ ಏವಂ ಕೃತೇ ನಿಹತಕಂಟಕಮಸ್ಯ ರಾಜ್ಯಂ
ದುರ್ಯೋಧನಸ್ಯ ತು ಭವೇನ್ನ ತತೋsನ್ಯಥಾ ಸ್ಯಾತ್ ।
ಅಸ್ಮಿನ್ ಹತೇ ನಿಪತಿತೇ ಚ ಸುರೇಂದ್ರಸೂನೌ
ಶೇಷಾ ಭವೇಯುರಥ ಸೌಬಲಿಪುತ್ರದಾಸಾಃ ॥ ೬೯ ॥

ಅ ॥ ಈ ಪ್ರಕಾರ ಮಾಡಿದರೆ ಈ ದುರ್ಯೋಧನನಿಗೆ ನಿಷ್ಕಂಟಕವಾದ ರಾಜ್ಯವು ಆಗುವುದು. ವಿಚಾರಿತವಾದುದಕ್ಕೆ ಬೇರೆ ಪ್ರಕಾರ ಮಾಡೋಣದರಿಂದ ಆ ದುರ್ಯೋಧನನಿಗೆ ನಿಷ್ಕಂಟಕವಾದ ರಾಜ್ಯವು ಆಗಲಾರದು. ಈ ಭೀಮನು ಸಂಹೃತನಾಗುತ್ತಿರಲು ಅರ್ಜುನನೂ ಸಂಹೃತನಾಗುತ್ತಿರಲು ಉಳಿದ ಯುಧಿಷ್ಠಿರ ಮೊದಲಾದ ಮೂವರು ಆ ಮೇಲೆ ಗಾಂಧಾರಿ ಪುತ್ರರಾದ ದುರ್ಯೋಧನಾದಿಗಳ ದಾಸರಾಗುವರು. ॥ ೬೯ ॥

ಮೂ ॥ ಏವಂ ವಿಚಾರ್ಯ ವಿಷಮುಲ್ಬಣಮುಂತಕಾಭಂ
ಕ್ಷೀರೋದಧೇರ್ಮಥನಜಂ ತಪಸಾ ಗಿರೀಶಾತ್ ।

ಶುಕ್ರೇಣ ಲಬ್ಧಮಮುತಃ ಸಬಲಾತ್ಮಜೇನ
ಪ್ರಾಪ್ತಂ ಪ್ರತೋಷ್ಯ ಮರುತಸ್ತನಯಾಯ ಚಾದುಃ ॥ ೭೦ ॥

ಅ॥ ಈ ಪ್ರಕಾರ ವಿಚಾರವಾಡಿ ಕ್ರೂರವಾದ ಮೃತ್ಯು ಸದೃಶವಾದ ಕ್ಷೀರ ಸಮುದ್ರದ ಮಂಥನದಿಂದ ಹುಟ್ಟಿರುವ ರುದ್ರದೇವರದೆಸೆಯಿಂದ ಶುಕ್ರಾಚಾರ್ಯರಿಂದ ತಪಸ್ಸಿನಿಂದ ಹೊಂದಲ್ಪಟ್ಟ ಈ ಶುಕ್ರಾಚಾರ್ಯರದೆಸೆಯಿಂದ ಸಂತೋಷಪಡಿಸಿ ಶಕುನಿಯಿಂದ ಹೊಂದಲ್ಪಟ್ಟ ವಿಷವನ್ನು ಭೀಮಸೇನನಿಗೋಸ್ಕರ ಕೊಟ್ಟರು. ॥ ೭೦ ॥

ಮೂ ॥ ಸಮ್ಮಂತ್ರ್ಯ ರಾಜತನಯೈರ್ಧೃತರಾಷ್ಟ್ರಜೈಸ್ತು
ದತ್ತಂ ಸ ಸೂದವಮುಖತೋಽಖಿಲಭಕ್ಷ್ಯಭೋಜ್ಯೇ ।
ಜ್ಞಾತ್ವಾ ಯುಯುತ್ಸುಗದಿತಂ ಬಲವಾನ್ ಸ ಭೀಮೋ
ವಿಷ್ಣೋರನುಗ್ರಹಬಲಾಜ್ಜರಯಾಂಚಕಾರ ॥ ೭೧ ॥

ಆ ॥ ಬಲಿಷ್ಠನಾದ ಆ ಭೀಮಸೇನನು, ರಾಜಕುಮಾರರಿಂದ ಆಲೋಚಿಸಿ ಕೌರವರಿಂದಾದರೂ ತನ್ನ ಪಾಚಕನ ಮುಖದಿಂದ ನಿಖಿಲವಾದ ಭಕ್ಷ್ಯಭೋಜ್ಯದಲ್ಲಿ (ಕೂಡಿಸಿ) ಕೊಡಲ್ಪಟ್ಟ ವಿಷವನ್ನು ಯುಯುತ್ಸು ಎನ್ನುವ ಧೃತರಾಷ್ಟ್ರ ಪುತ್ರನಿಂದ ಹೇಳಲ್ಪಟ್ಟದ್ದನ್ನು ತಿಳಿದರೂ (ಚೆನ್ನಾಗಿ ಭಕ್ಷಿಸಿ)ಶ್ರೀಹರಿಯ ಅನುಗ್ರಹ ಬಲದಿಂದ ಜೀರ್ಣೀಕರಿಸಿಕೊಂಡನು. ॥ ೭೧ ॥

ಮೂ ॥ ಜೀರ್ಣೇ ವಿಷೇ ಕುಮತಯಃ ಪರಮಾಭಿತಪ್ತಾಃ
ಪ್ರಾಸಾದಮಾಶು ವಿದಧುರ್ಹರಿಪಾದತೋಯೇ ।
ಜ್ಞಾತ್ವಾ ಯುಯುತ್ಸುಮುಖತಃ ಸ್ವಯಮತ್ರ ಚಾಂತೇ
ಸುಷ್ವಾಪ ಮಾರುತಿರಮಾ ಧೃತರಾಷ್ಟ್ರಪುತ್ರೈಃ ॥ ೭೨ ॥

ಅ ॥ ಕುತ್ಸಿತವಾದ ಬುದ್ಧಿಯುಳ್ಳ ದುರ್ಯೋಧನಾದಿಗಳು ವಿಷವು ಜೀರ್ಣವಾಗುತ್ತಿರಲು ಅತ್ಯಂತವಾಗಿ ಸಂತಪ್ತರಾದವರಾಗಿ ಶ್ರೀಕೃಷ್ಣನ ಪಾದದಿಂದ ಹುಟ್ಟಿದ ಭಾಗೀರಥೀ ಜಲದಲ್ಲಿ ಗೃಹ ವಿಶೇಷವನ್ನು ಶೀಘ್ರದಲ್ಲಿ ಮಾಡಿದರು. ಭೀಮಸೇನನು ಯುಯುತ್ಸುವೆನ್ನುವ ಧೃತರಾಷ್ಟ್ರ ಪುತ್ರನ ಮುಖದಿಂದ ತಾನು ತಿಳಿದರೂ ಧೃತರಾಷ್ಟ್ರ ಪುತ್ರರಿಂದ ಕೂಡಿಕೊಂಡೇ ಈ ಪ್ರಾಸಾದದಲ್ಲಿ ತಾನೇ ಸಮೀಪದಲ್ಲಿ ಮಲಗಿಕೊಂಡನು. ॥ ೭೨ ॥

ಮೂ ॥ ದೋಷಾನ್ ಪ್ರಕಾಶಯಿತುಮೇವ ವಿಚಿತ್ರವೀರ್ಯ-
ಪುತ್ರಾತ್ಮ ಜೇಷು ನೃವರಂ ಪ್ರತಿಸುಪ್ತಮೀಕ್ಷ್ಯ ।
ಬದ್ಧ್ವಾಭಿಮಂತ್ರಣದೃಢೈರಯಸಾ ಕೃತೈಸ್ತಂ
ಪಾಶೈರ್ವಿಚಿಕ್ಷಿಪುರುದೇ ಹರಿಪಾದಜಾಯಾಃ ॥ ೭೩ ॥

ಅ ॥ ವಿಚಿತ್ರವೀರ್ಯರಾಜನ ಪುತ್ರನಾದ ಧೃತರಾಷ್ಟ್ರನ ಪುತ್ರನಾದ ದುರ್ಯೋಧನಾದಿಗಳಲ್ಲಿ ದೋಷಗಳನ್ನು ಪ್ರಕಾಶಪಡಿಸುವುದಕ್ಕಾಗಿಯೇ ಮನುಷ್ಯಶ್ರೇಷ್ಠನಾದ ಸುಪ್ತನಾದ ಭೀಮನನ್ನು ನೋಡಿ ದುರ್ಮಂತ್ರಗಳಿಂದ ಅಭಿಮಂತ್ರಿಸಿ ದೃಢಗಳಾದ ಲೋಹ ವಿಶೇಷದಿಂದ ನಿರ್ಮಿತಗಳಾದ ಹಗ್ಗಗಳಿಂದ ಆ ಭೀಮಸೇನನನ್ನು ಕಟ್ಟಿ ಭಾಗೀರಥೀ ಜಲದಲ್ಲಿ ಬಿಸಾಡಿದರು. ॥ ೭೩ ॥

ಮೂ ॥ ತತ್ಕೋಟಿಯೋಜನಗಭೀರಮುದಂ ವಿಗಾಹ್ಯ
ಭೀಮೋ ವಿಜೃಂಭಣತ ಏವ ವಿವೃಶ್ಚ್ಯ ಪಾಶಾನ್ ।
ಉತ್ತೀರ್ಯ ಸಜ್ಜನಗಣಸ್ಯ ವಿಧಾಯ ಹರ್ಷಂ
ತಸ್ಥಾವನಂತಗುಣವಿಷ್ಣುಸದಾತಿಹಾರ್ದಃ ॥ ೭೪ ॥

ಅ ॥ ಅನಂತಗುಣಗಳಂಳ್ಳ ಶ್ರೀಹರಿಯಂಲ್ಲಿ ಯಶಾವಾಗಲೂ ಅತಿಶಯಂವಾದ ಭಕ್ತಿಯಂಂಳ್ಳ ಭೀಮಂನು ಕೋಟಿ ಸಂಖ್ಯೆಯಂಂಳ್ಳ ಯೋಜನಗಳಿಂದ ಗಹ್ವರವಾದ ನೀರನ್ನು ಕದಡಿಸಿ ವಿಜೃಂಭಣ ಮಾತ್ರ (ಆವಳಿಕೆ) ದಿಂದಲೇ ಹಗ್ಗಗಳನ್ನು ಛೇದಿಸಿ ಜಲವನ್ನು ದಾಟಿ (ಅಂದರೆ ಕೂಲವನ್ನು ಹೊಂದಿ) ಸಜ್ಜನರ ಸಮಂದಾಯಂಕ್ಕೆ ಸಂತೋಷವನ್ನು ಮಾಡಿ ನಿಂತನು.

ವಿಶೇಷಾಂಶ— (1)ಗಂಗೆಯಂ ಕೆಲವು ಕೆಲವು ಕಡೆ ಹ್ರದದಲ್ಲಿ ಭೂಮಿಯಂನ್ನು ಶೀಳಿಸಿ ತನ್ನ ವೇಗದ ಬಲದಿಂದ ಘನೋದಕವನ್ನು ಪ್ರವೇಶಮಾಡಿ ಕೂರ್ಮಪೃಷ್ಠಪರ್ಯಂತವಾಗಿ ಪ್ರವಹಿಸುತ್ತದೆ. ಆದಕಾರಣ ಕೋಟಿಯೋಜನ ಗಂಭೀರತ್ವವೂ ಕೂಡ ದುರ್ಯೋಧನನಿಂದ ಮಾಡಲ್ಪಟ್ಟ ಪ್ರಸಾದದ ಸಮೀಪದಲ್ಲಿರತಕ್ಕ ಹ್ರದದಲ್ಲಿಯೂ ಇದೆ. ಆಕಾರಣದಿಂದ ಲಕ್ಷ ಯೋಜನ ಪ್ರಮಾಣ ಗಂಭೀರವಾದ ಭೂಮಿಯಂಲ್ಲಿ ಹೇಗೆ ಕೋಟಿ ಯೋಜನ ಪ್ರಮಾಣ ಗಂಭೀರತ್ವವು ಎನ್ನುವ ಶಂಕೆಗೆ ಅವಕಾಶವಿಲ್ಲ. ॥ ೭೪ ॥

ಮೂ ॥ ತಂ ವೀಕ್ಷ್ಯ ದುಷ್ಟಮನಸೋಽತಿವಿಷಣ್ಣಚಿತ್ತಾಃ
ಸಮ್ಮಂತ್ರ್ಯ ಭೂಯ ಉರುನಾಗಗಣಾನಥಾಷ್ಟೌ ।
ಶುಕ್ರೋಕ್ತಮಂತ್ರಬಲತಃ ಪುರ ಆಹ್ವಯಿತ್ವಾ
ಪಶ್ಚಾತ್ ಸುಪಂಜರಗತಾನ್ ಪ್ರದದುಃ ಸ್ವಸೂತೇ ॥ ೭೫ ॥

~~ಅ॥ ದುಷ್ಟವಾದ ಮನಸ್ಸುಳ್ಳ ದುರ್ಯೋಧನಾದಿಗಳಂ ಆ ಭೀಮಂನನ್ನು ನೋಡಿ ಅತ್ಯಂತ~~
ದುಃಖಿತವಾದ ಮನಸ್ಸುಳ್ಳವರಾಗಿ ಮಂತ್ರಾ ವಿಚಾರಮಾಡಿ ಆಮೇಲೆ ಶುಕ್ರಾಚಾರ್ಯರಿಂದುಪ ದಿಷ್ಟವಾದ ಮಂತ್ರದ ಸಾಮರ್ಥ್ಯದ್ದೆಸೆಯಿಂದ ಎಂಟುಂ(ಅಂದರೆ ಅನಂತ, ವಾಸುಕಿ, ಪದ್ಮ,ಮಹಾ ಪದ್ಮ, ತಕ್ಷಕ, ಕರ್ಕೋಟಕ, ಶಂಖಪಾಲ, ಮಹಾಶಂಖ ಎನ್ನುವ ಎಂಟುಂ ಸಂಖ್ಯಾಕಗಳಾದ) ಶ್ರೇಷ್ಠಗಳಾದ ಸರ್ಪಗಳ ಸಮೂಹಗಳನ್ನು ನಾಗಪುರದ ಸಮೀಪಕ್ಕೆ ಕರೆಸಿ ಆಮೇಲೆ ಒಳ್ಳೇ ಪಂಜರದಲ್ಲಿರತಕ್ಕವುಗಳನ್ನಾಗಿ ಮಾಡಿ ತನ್ನ ಸಾರಥಿಯಂ ವಶದಲ್ಲಿ ಕೊಟ್ಟರುಂ. ॥ ೭೫ ॥

ಮೂ ॥ ದುರ್ಯೋಧನೇನ ಪೃಥುಮಂತ್ರಬಲೋಪಹೂತಾನ್
ತತ್ಸಾರಥಿಃ ಫಣಿಗಣಾನ್ ಪವನಾತ್ಮಜಸ್ಯ ।
ಸುಪ್ತಸ್ಯ ವಿಸ್ತೃತ ಉರಸ್ಯಮುಚದ್ವಿಶೀರ್ಣ-
ದಂತಾ ಬಭೂವುರಮುಮಾಶು ವಿದಶ್ಯ ನಾಗಾಃ ॥ ೭೬ ॥

ಅ॥ ಆ ದುರ್ಯೋಧನನ ಸಾರಥಿಯಂ ದುರ್ಯೋಧನನಿಂದ ವೀರ್ಯವತ್ತಾದ ಮಂತ್ರದ ಸಾಮರ್ಥ್ಯದಿಂದ ತರಲ್ಪಟ್ಟ ಸರ್ಪಗಳ ಸಮೂಹಗಳನ್ನು (ನಗರದಿಂದ ಹೊರಗೆ ತನ್ನ ಕ್ರೀಡಾ ಸ್ಥಾನದಲ್ಲಿ ಶ್ರಾಂತನಾಗಿ) ಮಲಗಿದ ವಾಯಂಪುತ್ರನಾದ ಭೀಮನ ವಿಸ್ತೃತವಾದ ವಕ್ಷಃಸ್ಥಳದಲ್ಲಿ ಬಿಟ್ಟನು. ಸರ್ಪಗಳಂ ಈ ಭೀಮಂನನ್ನು ಶೀಘ್ರದಲ್ಲಿ ಕಚ್ಚಿ ಪುಡಿಪುಡಿಯಾದ ಹಲ್ಲುಂಗಳಂಳ್ಳವುಗಳಾಗಿ ಆದವು. ॥ ೭೬ ॥

ಮೂ ॥ ಕ್ಷಿಪ್ತ್ವಾ ಸುದೂರ ಉರುನಾಗಗಣಾನಥಾಷ್ಟೌ
ತದ್ವಂಶಜಾನ್ ಸ ವಿನಿಹತ್ಯ ಪಿಪೀಲಿಕಾವತ್ ।
ಜಘ್ನೇ ಚ ಸೂತಮುಪಹಸ್ತ ಏವ ಭೀಮಃ
ಸುಷ್ವಾಪ ಪೂರ್ವವದನುತ್ಥಿತ ಏವ ತಲ್ಪಾತ್ ॥ ೭೭ ॥

ಅ॥ ಆಮೇಲೆ ಭೀಮನು ಎಂಟು ಸಂಖ್ಯಾಕಗಳಾದ ಶ್ರೇಷ್ಠಗಳಾದ ಸರ್ಪಗಳ ಸಮೂಹಗಳನ್ನು ಅತಿ ದೂರದಲ್ಲಿ ಬಿಸಾಡಿ ಅವುಗಳ ವಂಶದಲ್ಲಿ ಹುಟ್ಟಿದವುಗಳನ್ನು ಇರುವೆಯಂತೆ ಸಂಹರಿಸಿ ಕೈಯ ಪೃಷ್ಠ ಭಾಗದಿಂದಲೇ ಸಂಹರಿಸಿದನು. ಭೀಮನು ಹಾಸಿಗೆಯಿಂದ ಏಳದೆ ಇದ್ದವನಾಗಿಯೇ ಮೊದಲಿನಂತೆಯೇ ಮಲಗಿಕೊಂಡನು. ॥ ೭೭ ॥

ಮೂ ॥ ತತ್ತಸ್ಯ ನೈಜಬಲಮಪ್ರತಿಮಂ ನಿರೀಕ್ಷ್ಯ
ಸರ್ವೇ ಕ್ಷಿತೀಶತನಯಾ ಅಧಿಕಂ ವಿಷೇದುಃ ।
ನಿಃಶ್ವಾಸತೋ ದರ್ಶನಾದಪಿ ಭಸ್ಮ ಯೇಷಾಂ
ಭೂಯಾಸುರೇವ ಭುವನಾನಿ ಚ ತೇ ವೃಷಾಸನ್ ॥ ೭೮ ॥

ಅ॥ ರಾಜಪುತ್ರರೆಲ್ಲರೂ ಆ ಭೀಮಸೇನನ ಸ್ವಾಭಾವಿಕವಾದ ಅಸದೃಶವಾದ ಬಲವನ್ನು ನೋಡಿ ಅತ್ಯಂತವಾಗಿ ದುಃಖಿಪಟ್ಟರು. ಯಾವ ನಾಗಗಳ ಶ್ವಾಸಮಾತ್ರದಿಂದಲೂ ದರ್ಶನದಿಂದಲೂ ಲೋಕಗಳು ಭಸ್ಮವಾಗಿ ಆಗುತ್ತವೋ, ಆ ನಾಗಗಳು ವ್ಯರ್ಥವಾದ ಉದ್ಯೋಗವುಳ್ಳವುಗಳು ಆದವು. ॥ ೭೮ ॥

ಮೂ ॥ ದದ್ಭಿರ್ವಿದಶ್ಯ ನ ವಿಕಾರಮಮುಷ್ಯ ಕರ್ತುಂ
ಶೇಕುರ್ಭುಜಂಗಮವರಾ ಅಪಿ ಸುಪ್ರಯತ್ನಾಃ ।
ಕಸ್ಯಾಪಿ ನೇದೃಶಬಲಂ ಶ್ರುತಪೂರ್ವಮಾಸೀತ್
ದೃಷ್ಟಂ ಕಿಮು ಸ್ಮ ತನಯೇಽಪಿ ಹಿರಣ್ಯಕಸ್ಯ ॥ ೭೯ ॥

ಅ॥ ಸರ್ಪಶ್ರೇಷ್ಠಗಳು ಅತ್ಯಂತ ಪ್ರಯತ್ನವುಳ್ಳವುಗಳಾದಾಗ್ಯೂ ಹಲ್ಲುಗಳಿಂದ ಕಚ್ಚಿ ಈ ಭೀಮನಿಗೆ ವಿಕಾರವನ್ನು ಮಾಡಲಿಕ್ಕೆ ಸಮರ್ಥಗಳಾಗಲಿಲ್ಲ, ಯಾರಿಗೂ ಇಂತಹ ಬಲವು ಮೊದಲು ಶ್ರುತವಾಗಲಿಲ್ಲ. ನೋಡಲ್ಪಡಲಿಲ್ಲವೆಂದು ಏನು ಹೇಳತಕ್ಕದ್ದಾ. ಹಿರಣ್ಯಕಶಿಪುವಿನ ಪುತ್ರನಾದ ಪ್ರಹ್ಲಾದನಲ್ಲಿಯೂ ಇಂತಹ ಬಲವು ಮೊದಲು ಶ್ರುತವಾಗಲಿಲ್ಲ. ॥ ೭೯ ॥

ಹಾಗಾದರೆ ಪ್ರಹ್ಲಾದನಲ್ಲಿ ಎಂತಹ ಬಲವು, ಭೀಮನಲ್ಲಿ ಎಂತಹುದು ಎಂದರೆ ಇದನ್ನು ಬಿಡಿಸಿ ತೋರಿಸುತ್ತಾರೆ—

ಮೂ ॥ ಸ್ವಾತ್ಮಾವನಾರ್ಥಮುಧಿಕಾಂ ಸ್ತುತಿಮೇವ ಕೃತ್ವಾ
ವಿಷ್ಣೋಃ ಸ ದೈತ್ಯತನಯೋ ಹರಿಣಾವಿತೋಽಭೂತ್ ।
ನ ತ್ವೌರಸಂ ಬಲಮಮುಷ್ಯ ಸ ಕೃಷ್ಯತೇ ಹಿ
ಭೃತ್ಯೈರ್ಬಲಾತ್ ಸ್ವಪಿತುರೌರಸಮಸ್ಯ ವೀರ್ಯಂ ॥ ೮೦ ॥

ಅ ॥ ದೈತ್ಯನಾದ ಹಿರಣ್ಯಕಶಿಪುವಿನ ಪುತ್ರನಾದ ಆ ಪ್ರಹ್ಲಾದನಂ ತನ್ನನ್ನು ರಕ್ಷಿಸಿಕೊಳ್ಳು ವುದಕ್ಕಾಗಿ ಶ್ರೀವಿಷ್ಣುನಿನ ಅಧಿಕವಾದ ಸ್ತೋತ್ರವನ್ನು ಮಾಡಿಯೇ ಶ್ರೀಹರಿಯಿಂದ ರಕ್ಷಿಸಿಕೊಳ್ಳು ಲ್ಪಟ್ಟವನಂ ಆದನಂ, ಯಾವಕಾರಣದಿಂದ ತನ್ನ ತಂದೆಯಂ ಭೃತ್ಯರಿಂದ ಬಲಾತ್ಕಾರದಿಂದ ಶೆಳೆ ಯಂಲ್ಪಡುತ್ತಾನೋ, ಆದಕಾರಣ ಈ ಪ್ರಹ್ಲಾದನ ಬಲವು ಔರಸವಾದದ್ದು. (ಅಂದರೆ ತನ್ನ ವಕ್ಷಃ ಸ್ಥಳದ ಸಾಮರ್ಥ್ಯದಿಂದ ಹುಟ್ಟಿದ್ದು.) ಸ್ವಾಭಾವಿಕವಾದುದಂ ಅಲ್ಲ, ಈ ಭೀಮನ ಸಾಮರ್ಥ್ಯವು ಸ್ವಾಭಾವಿಕವು. ॥ ೮೦ ॥

ಮೂ ॥ ನೈಸರ್ಗಿಕಂ ಪ್ರಿಯಮಿಮಂ ಪ್ರವದಂತಿ ವಿಪ್ರಾ
ವಿಷ್ಣೋರ್ನಿತಾಂತಮಪಿ ಸತ್ಯಮಿದಂ ಧ್ರುವಂ ಹಿ ।
ನೈವಾನ್ಯಥೌರಸಬಲಂ ಭವತೀದೃಶಂ ತ-
ದುತ್ಪಾದ್ಯ ಏಷ ಹರಿಣೈವ ಸಹೈಷ ನೋಽರ್ಥಃ ॥ ೮೧ ॥

ಅ॥ ಬ್ರಾಹ್ಮಣರಂ ಈ ಭೀಮನನ್ನು ಶ್ರೀವಿಷ್ಣುವಿಗೆ ಅತ್ಯಂತವಾಗಿ ನಿರುಪಾಧಿಕಪ್ರಿಯಂ ನನ್ನಾಗಿ ಹೇಳುತ್ತಾರೆ. ಈ ಬ್ರಾಹ್ಮಣರ ವಾಕ್ಯವು ನಿಶ್ಚಯಂವಾಗಿಯಂ ಸತ್ಯವೇ. ಪ್ರಸಿದ್ಧವು; ಇಲ್ಲವಾದರೆ (ಭೀಮಂನಿಗೆ) ಇಂತಹ ಸ್ವಾಭಾವಿಕ ಬಲವು ಇರುವುದೇ ಇಲ್ಲ ಆದಕಾರಣ ಶ್ರೀ ಹರಿಯಿಂದ ಕೂಡಿಕೊಂಡುಂ ಈ ಭೀಮಂಸೇನನಂ ಸಂಹರಿಸಿಕೊಳ್ಳಲ್ಪಡಲಿಕ್ಕೆಅರ್ಹನೇ ಆಗಿರುತ್ತಾನೆ; ಆ ಹರಿವಾಯಂಗಳ ವಿನಾಶವೇ ನಮಂಗೆ ಪ್ರಯೋಜನವು. ॥ ೮೧ ॥

ಹಾಗಾದರೆ ಲೋಕಾಂತರದಲ್ಲಿರತಕ್ಕ ಶ್ರೀಹರಿಯಂನ್ನು ಸಂಹರಿಸುವುದಂ ಹೇಗೆಂದರೆ—

ಮೂ ॥ ಕೃಷ್ಣಃ ಕಿಲೈಷ ಚ ಹರಿರ್ಯದುಷು ಪ್ರಜಾತಃ
ಸೋಽಸ್ಯಾಶ್ರಯುಃ ಕುರುತ ತಸ್ಯ ಬಹುಪ್ರತೀಪಂ ।
ಸಮ್ಮಂತ್ರ್ಯ ಚೈವಮತಿಪಾಪತಮಾ ನರೇಂದ್ರ-
ಪುತ್ರಾ ಹರೇಶ್ಚ ಬಹು ಚಕ್ರುರಥ ಪ್ರತೀಪಂ ॥ ೮೨ ॥

ಅ॥ ಯಾದವರಲ್ಲಿ ಹುಟ್ಟಿರತಕ್ಕ ಈ ಶ್ರೀಕೃಷ್ಣನಂ ಹರಿಯೇ ಆಗಿರುತ್ತಾನಷ್ಟೆ. ಆ ಕೃಷ್ಣನು ಈ ಭೀಮನಿಗೆ ಆಶ್ರಯನು ಆ ಕೃಷ್ಣನಿಗೆ ಬಹಳವಾಗಿ ವೈರವನ್ನು ಮಾಡಿರಿ. ಈ ಪ್ರಕಾರ ಅತ್ಯಂತ ಪಾಪಿಷ್ಠರಾದ ರಾಜಪುತ್ರರು ಆಲೋಚಿಸಿ ಆಮೇಲೆ ಶ್ರೀಹರಿಗೆ ಬಹಳವಾಗಿ ವಿರೋಧವನ್ನು ಮಾಡಿದರಂ, ॥ ೮೨ ॥

ಮೂ ॥ ತೈಃ ಪ್ರೇರಿತಾ ನೃಪತಯಃ ಪಿತರಶ್ಚ ತೇಷಾಂ
ಸಾಕಂ ಬೃಹದ್ರಥಸುತೇನ ಹರೇಃ ಸಕಾಶಂ ।
ಯುದ್ಧಾಯ ಜಗ್ಮುರಮುನಾಷ್ಟದಶೇಷು ಯುದ್ಧೇ-
ಷ್ವತ್ಯಂತಭಗ್ನಬಲದರ್ಪಮದಾ ನಿವೃತ್ತಾಃ ॥ ೮೩ ॥

ಅ॥ ಅಸುರಾಂಶರಾದ ರಾಜಕುಮಾರರಿಂದ ಪ್ರೇರಿಸಿಕೊಳ್ಳಲ್ಪಟ್ಟ ರಾಜರೂ ಆ ಕುಮಾರರ ತಂದೆಯಂವರೂ ಕೂಡ ಬೃಹದ್ರಥನ ಪುಂಗನಾದ ಜರಾಸಂಧನಿಂದ ಕೂಡಿಕೊಂಡುಂ ಶ್ರೀಹರಿಯಂ ಸವಿೂಪವನ್ನು ಕುರಿತು ಯುಂದ್ಧಕ್ಕಾಗಿ ಹೋದರು. ಈ ಕೃಷ್ಣನಿಂದ ಹದಿನೆಂಟು (೧೮) ಸಂಖ್ಯಾ

ಕಗಳಾದ ಯಂದ್ಧಗಳಲ್ಲಿ ಅತ್ಯಂತವಾಗಿ ನಷ್ಟವಾದ ಸಾಮರ್ಥ್ಯವೂ ಅಹಂಕಾರವೂ ವಂದವೂ ಉಳ್ಳವರಾಗಿ ಹಿಂದೆ ತಿರುಗಿ ಹೊರಟು ಹೋದರು. ॥ ೮೩ ॥

ಮೂ ॥ ತೇನಾಗೃಹೀತರಥವಾಜಿಗಜಾ ನಿತಾಂತಂ
ಶಸ್ತ್ರೈಃ ಪರಿಕ್ಷತತನೂಭಿರಲಂ ವಮಂತಃ ।
ರಕ್ತಂ ವಿಶಸ್ತ್ರಕವಚಧ್ವಜವಾಜಿಸೂತಾಃ
ಸ್ರಸ್ತಾಂಬರಾಃ ಶ್ಲಥಿತಮೂರ್ಧಜಿನೋ ನಿವೃತ್ತಾಃ ॥ ೮೪ ॥

ಅ॥ ಆ ಶ್ರೀಕೃಷ್ಣನಿಂದ ಅಪಹರಿಸಿಕೊಳ್ಳಲ್ಪಟ್ಟ ರಥಗಳೂ ಕುದುರೆಗಳೂ ಆನೆಗಳೂ ಇವುಗಳುಳ್ಳ ರಾಜಕುಮಾರರು ಅತ್ಯಂತವಾಗಿ ಶಸ್ತ್ರಗಳಿಂದ ಶೀಳಲ್ಪಟ್ಟ ಅವಯವಗಳಿಂದ ಅತ್ಯಂತವಾಗಿ ರಕ್ತವನ್ನು ಕಾರುವವರಾಗಿ ಮುರಿದು ಹೋಗಲ್ಪಟ್ಟ ಶಸ್ತ್ರಗಳೂ ಕವಚಗಳೂ ಧ್ವಜಗಳೂ ಕುದುರೆಗಳೂ ಸೂತರೂ ಇವುಗಳುಳ್ಳವರಾಗಿ ಬಿಚ್ಚಿ ಹೋಗಲ್ಪಟ್ಟ ವಸ್ತ್ರಗಳುಳ್ಳವರಾಗಿ ಬಿಚ್ಚಿ ಹೋದ ಕೂದಲುಗಳುಳ್ಳವರಾಗಿ ಹಿಂತೆರಳಿದರು. ॥ ೮೪ ॥

ಮೂ ॥ ಏವಂ ಬೃಹದ್ರಥಸುತೋಽಪಿ ಸುಶೋಚ್ಯರೂಪ
ಆರ್ತೋ ಯಯೌ ಬಹುಶ ಏವ ಪುರಂ ಸ್ವಕೀಯಂ ।
ಕೃಷ್ಣೇನ ಪೂರ್ಣಬಲವೀರ್ಯಗುಣೇನ ಮುಕ್ತೋ
ಜೀವೇತ್ಯತೀವ ವಿಜಿತಃ ಶ್ವಸಿತಾವಶೇಷಃ ॥ ೮೫ ॥

ಅ॥ ಈ ಪ್ರಕಾರವಾಗಿ ಅತ್ಯಂತ ದುಃಖಿಯುಂಕ್ತವಾದ ಸ್ವರೂಪವುಳ್ಳ ಪೀಡಿತನಾಥ ಬೃಹದ್ರಥನ ಪುತ್ರನಾದ ಜರಾಸಂಧನೂ ಕೂಡಾ ಪೂರ್ಣಗಳಾದ ಸಾಮರ್ಥ್ಯವೀರ್ಯಗಳೆಂಬ ಗುಣಗಳುಳ್ಳ ಆ ಕೃಷ್ಣನಿಂದ ಬದುಕಿಕೊಂಡಿರು ಎಂದು ಬಿಡಲ್ಪಟ್ಟವನಾಗಿ ಅತ್ಯಂತವಾಗಿ ಅನೇಕಾವರ್ತಿ ಪರಾಜಿತನಾಗಿ ಶ್ವಾಸ ಮಾತ್ರ ಅವಶೇಷವುಳ್ಳವನಾಗಿ ತನ್ನ ಪಟ್ಟಣವನ್ನು ಕುರಿತು ಹೋದನು. ॥ ೮೫ ॥

ಮೂ ॥ ಏವಂ ಗತೇಷು ಬಹುಶೋ ನತಕಂದರೇಷು
ರಾಜಸ್ವಜೋಽಪಿ ಮಧುರಾಂ ಸ್ವಪುರೀಂ ಪ್ರವಿಶ್ಯ ।
ರಾಮೇಣ ಸಾರ್ಧಮಖಿಲೈರ್ಯದುಭಿಃ ಸಮೇತೋ
ರೇಮೇ ರಮಾಪತಿರಚಿಂತ್ಯಬಲೋ ಜಯಶ್ರೀಃ ॥ ೮೬ ॥

ಅ॥ ಈ ಪ್ರಕಾರವಾಗಿ ಅನೇಕಾವೃತ್ತಿ ಕೆಳವುಂಖಿವಾಗಿ ಮಾಡಲ್ಪಟ್ಟ ಕುತ್ತಿಗೆವುಳ್ಳ ರಾಜರು ಹೋಗುತ್ತಿರಲು ಇನ್ನೊಬ್ಬರಿಂದ ಆಲೋಚಿಸಲಿಕ್ಕೂ ಅಶಕ್ಯವಾದ ಬಲವುಳ್ಳ ಜಯಸಂಪತ್ತೇ ಉಳ್ಳ ಉತ್ಪತ್ತಿರಹಿತನಾದ ಲಕ್ಷ್ಮೀಪತಿಯಾದ ಶ್ರೀಕೃಷ್ಣನು ಮಧುರಾ ಎನ್ನುವ ತನ್ನ ಪಟ್ಟಣವನ್ನು ಬಲರಾಮನಿಂದ ಕೂಡಿಕೊಂಡು ಪ್ರವೇಶ ಮಾಡಿ ಎಲ್ಲಾ ಯಾದವರಿಂದಲೂ ಕೂಡಿದವನಾಗಿ ಕ್ರೀಡಿಸಿಕೊಂಡಿದ್ದನು. ॥ ೮೬ ॥

ಮೂ ॥ ವ್ಯರ್ಥೋದ್ಯಮಾಃ ಪುನರಪಿ ಸ್ಮ ಸಧಾರ್ಯರಾಷ್ಟ್ರಾ
ಭೀಮಂ ನಿಹಂತುಮುರುಯತ್ನಮಕುರ್ವತಾಜ್ಞಾಃ ।

ರಾಜ್ಞಾಂ ಸುತಾಸ್ತಮಖಿಲಂ ಸ ಮೃಷ್ಯೈವ ಕೃತ್ವಾ
ಚಕ್ರೇ ಜಯಾಯ ಚ ದಿಶಾಂ ಬಲವಾನ್ ಪ್ರಯತ್ನಂ ॥ ೮೭ ॥

ಅ ॥ ದುರ್ಯೋಧನಾದಿಗಳಿಂದ ಕೂಡಿಕೊಂಡಿರತಕ್ಕ ವಿವೇಕಶೂನ್ಯರಾದ ರಾಜರ ಪುತ್ರರು ನಷ್ಟವಾದ ಪ್ರಯತ್ನವುಳ್ಳವರಾದಾಗ್ಯೂ ಮತ್ತೂ ಮತ್ತೂ ಭೀಮಸೇನನನ್ನು ಕೊಲ್ಲಲಿಕ್ಕೆ ಬಹು ಪ್ರಯತ್ನವನ್ನು ಮಾಡಿದರು. ಅತಿ ಬಲಿಷ್ಠನಾದ ಆ ಭೀಮಸೇನನು ಎಲ್ಲಾ ಆ ಉದ್ಯೋಗವನ್ನು ವ್ಯರ್ಥವನ್ನಾಗಿಯೇ ಮಾಡಿ ದಿಗ್ವಿಜಯವಮಾಡುವುದಕ್ಕೋಸ್ಕರ ಪ್ರಯತ್ನವನ್ನು ಮಾಡಿದನು. ॥ ೮೭ ॥

ಮೂ ॥ ಪ್ರಾಚೀಂ ದಿಶಂ ಪ್ರಥಮಮೇವ ಜಿಗಾಯ ಪಶ್ಚಾತ್
ಯಾಮ್ಯಾಂ ಜಲೇಶಪರಿಪಾಲಿತಯಾ ಸಹಾನ್ಯಾಂ ।
ಯೌ ತೌ ಪುರಾತನದಶಾನನಕುಂಭಕರ್ಣೌ
ಮಾತೃಷ್ವಸಾತನಯುತಾಂ ಚ ಗತೌ ಜಿಗಾಯ ॥ ೮೮ ॥

ಅ ॥ ಆ ಭೀಮಸೇನನು ಆದಿಯಲ್ಲಿ ಪೂರ್ವದಿಕ್ಕನ್ನೂ ಆಮೇಲೆ ದಕ್ಷಿಣ ದಿಕ್ಕನ್ನೂ ಆಮೇಲೆ ವರುಣನಿಂದ ರಕ್ಷಿಸಿಕೊಳ್ಳಲ್ಪಟ್ಟ ಪಶ್ಚಿಮ ದಿಕ್ಕಿನಿಂದ ಕೂಡಿದ ಉತ್ತರ ದಿಕ್ಕನ್ನೂ ಗೆದ್ದನು. ಯಾರು ಮೊದಲು ರಾವಣ ಕುಂಭಕರ್ಣರೋ ಅವರು ಚಿಕ್ಕತಾಯಿಯು ಪುತ್ರತ್ವವನ್ನು ಹೊಂದಿರುವರು. (ಅಂದರೆ ಕುಂತಿಯು ತಂಗಿಯು ಮಕ್ಕಳಾಗಿ ಹುಟ್ಟಿರುವರು.) ಅವರನ್ನು ಗೆದ್ದನು. ॥ ೮೮ ॥

ಮೂ ॥ ಪೂರ್ವಸ್ಯಯೋರ್ಹಿ ದನುಘೋಷಸುತಃ ಪ್ರಜಾತಃ
ಪ್ರಾಹುಶ್ಚ ಯಂ ನೃಪತಯಃ ಶಿಶುಪಾಲನಾಮ್ನಾ ।
ಅನ್ಯಂ ವದಂತಿ ಚ ಕರೂಶನೃಪಂ ತಥಾನ್ಯಂ
ಮಾತೃಷ್ವಸಾತನಯಮೇವ ಚ ದಂತವಕ್ರಂ ॥ ೮೯ ॥

ಅ ॥ ಆ ರಾವಣಕುಂಭಕರ್ಣರ ಮಧ್ಯದಲ್ಲಿ ಜ್ಯೇಷ್ಠನಾದ ರಾವಣನು ದನುಘೋಷ ರಾಜನಿಗೆ ಮಗನಾಗಿ ಹುಟ್ಟಿದನು. ರಾಜರು ಯಾವ ದನುಘೋಷ ಪುತ್ರನನ್ನು ಶಿಶುಪಾಲನೆನ್ನುವ ನಾಮದಿಂದ ಕರೆಯುತ್ತಾರೆ. ಹಾಗೆಯೇ ಶಿಶುಪಾಲನಿಂದ ಇತರನಾದ ಕರೂಶ ದೇಶಕ್ಕೆ ರಾಜನಾದವನನ್ನು (ಹಾಗೆ) ಶಿಶುಪಾಲನ ತಾಯಿಯಿಂದ ಇತರಳಾದ ಕುಂತೀ ತಂಗಿಯು ಮಗನಾದ ದಂತವಕ್ರನೆಂದು ಕರೆಯುತ್ತಾರೆ. (ತಥಾ ಚ ಶಿಶುಪಾಲ ದಂತವಕ್ರರ ತಾಯಿಂದಿರು ಭೀಮಸೇನನ ಚಿಕ್ಕತಾಯಿಂದಿರು.) ॥ ೮೯ ॥

ಮೂ ॥ ಜಿತ್ವೈವ ತಾವಪಿ ಜಿಗಾಯ ಚ ಪೌಂಡ್ರಕಾಖ್ಯಂ
ಶೌರೇಃ ಸುತಂ ಸುತಮಜೈದಥ ಭೀಷ್ಮಕಸ್ಯ ।
ಯಃ ಪೂರ್ವಮಾಸ ದಿತಿಜೋ ನರಹೇಲ್ವಲಾಖ್ಯೋ
ರುಕ್ಮೀತಿ ನಾಮ ಚ ಬಭೂವ ಸ ಕುಂಡಿನೇಶಃ ॥ ೯೦ ॥

ಅ॥ ಆ ಭೀಮಸೇನನು ಆ ಶಿಶುಪಾಲ ದಂತವಕ್ರರನ್ನು ಗೆದ್ದು ವಸುದೇವನ ಪುತ್ರನಾದ ಪೌಂಡ್ರಿಕ ಎಂಬವನನ್ನು ಗೆದ್ದನು. ಆಮೇಲೆ ಭೀಷ್ಮಕರಾಜನ ಮಗನಾದ ರುಗ್ಮಿಯನ್ನು ಗೆದ್ದನು. ಮನುಷ್ಯರನ್ನು ಸಂಹರಿಸತಕ್ಕ ಇಲ್ವಲನೆಂದು ಹೆಸರುಳ್ಳ ಯಾವ ದೈತ್ಯನು ಮೊದಲು ಇರುತ್ತಿದ್ದನೋ ಆತನೇ ರುಗ್ಮಿಯೆಂದು ಪ್ರಸಿದ್ಧನಾದವನಾಗಿ ಕುಂಡಿನಪುರಕ್ಕೆ ಅಧಿಪತಿಯಾದನು.

ವಿಶೇಷಾಂಶ—ಇಲ್ವಲ ಎನ್ನುವ ದೈತ್ಯನು ತನ್ನ ತಮ್ಮನಾದ ಸಾತಾಪಿಯನ್ನು ಶಾಕವನ್ನಾಗಿ ಮಾಡಿ ಮನುಷ್ಯರನ್ನು ಭೋಜನಮಾಡಿಸಿ ಪುನಃ ತಮ್ಮನನ್ನು ಕರೆದ ಕೂಡಲೆ ಮನುಷ್ಯರ ಹೊಟ್ಟೆಯನ್ನು ಶೀಳಿಕೊಂಡು ತಮ್ಮನು ಹೊರಗೆ ಬರುತ್ತಿದ್ದನು. ಆಗ ಆ ಮನುಷ್ಯರು ಮೃತರಾಗುವರು. ಎಂಬುವ ಕಥೆಯನ್ನು ಸೂಚಿಸುವುದಕ್ಕಾಗಿ ನರಹಾ ಎಂದು ಹೇಳಿರುವರು. ॥ ೯೦ ॥

ಮೂ ॥ ಭಾಗೇತ ಏವ ತನಯಸ್ಯ ಸ ಏವ ವಹ್ನೇ-
ರ್ನಾಮ್ನಾ ಶುಚೇಃ ಸ ತು ಪಿತಾಸ್ಯ ಹಿ ಮಿತ್ರಭಾಗಃ ।
ರಾಹ್ವಂಶಯುಕ್ತದನುಜೌ ಕೃಥಕೌಶಿಕಾಖ್ಯೌ
ಭಾಗೌ ತಥಾಗ್ನಿಸುತಯೋಃ ಪವಮಾನಶುಂಧ್ಯೋಃ ॥ ೯೧ ॥

ಅ॥ ಆ ರುಗ್ಮಿಯೇ ಪ್ರಧಾನಾಗ್ನಿಯ ಪುತ್ರನಾದ ನಾಮದಿಂದ ಶುಚಿ ಎನ್ನುವ ಅಗ್ನಿಯ ಅಂಶದಿಂದ ಕೂಡಿದವನೇ! ಈ ರುಗ್ಮಿಯು ತಂದೆಯಾದ ಆ ಭೀಷ್ಮಕ ರಾಜನಾದರೂ ಮಿತ್ರಾಖ್ಯ ಸೂರ್ಯನ ಅಂಶನು, ರಾಹುವಿನ ಅಂಶದಿಂದ ಕೂಡಿದವನು. ಹಾಗೆಯೇ ಆ ಭೀಷ್ಮಕ ರಾಜನ ತಮ್ಮಂದಿರಾದ ಕೃಥ ಕೌಶಿಕ ಎನ್ನುವವರು ಅಗ್ನಿ ಪುತ್ರರಾದ ಪವಮಾನ ಶುಂಧಿ ಇವರ ಅಂಶ ಭೂತರು. ॥ ೯೧ ॥

ಮೂ ॥ ಬಂಧೋರ್ನಿಜಸ್ಯ ತು ಬಲಂ ಸುಪರೀಕ್ಷ್ಯಮಾಣಃ
ಶಲ್ಯೋಽಪಿ ತೇನ ಯುಯುಧೇ ವಿಜಿತಸ್ತಥೈವ ।
ಭೀಮೋ ಜಿಗಾಯ ಯುಧಿ ವೀರಮುಖ್ಯೈಕಲವ್ಯಂ
ಸರ್ವೇ ನೃಪಾಶ್ಚ ವಿಜಿತಾ ಅಮುನೈವಮೇವ ॥ ೯೨ ॥

ಅ॥ ತನ್ನ ಬಂಧುವಾದ ಭೀಮಸೇನನ ಸಾಮರ್ಥ್ಯವನ್ನು ಚೆನ್ನಾಗಿ ಪರೀಕ್ಷಿಸತಕ್ಕ ಶಲ್ಯನಾದರೂ ಆ ಭೀಮಸೇನನಿಂದ ಯುದ್ಧಮಾಡಿದನು. ಶಿಶುಪಾಲಾದಿಗಳಂತೆ ಪರಾಜಿತನೂ ಆದನು. ಆಮೇಲೆ ವೀರನಾದ ಏಕಲವ್ಯನನ್ನು ಯುದ್ಧದಲ್ಲಿ ಗೆದ್ದನು. ಈ ಪ್ರಕಾರವಾಗಿಯೇ ಎಲ್ಲಾ ರಾಜರು ಭೀಮಸೇನನಿಂದ ಪರಾಜಿತರಾದರು. ॥ ೯೨ ॥

ಮೂ ॥ ತದ್ಬಾಹುವೀರ್ಯಪರಿಪಾಲಿತ ಇಂದ್ರಸೂನುಃ
ಶೇಷಾನ್ನೃಪಾಂಶ್ಚ ಸಮಜೈದ್ಬಲವಾನಯತ್ನಾತ್ ।
ಸಾಲ್ವಂ ಚ ಹಂಸಡಿಭಕೌ ಚ ವಿಜಿತ್ಯ ಭೀಮೋ
ನಾಗಾಹ್ವಯಂ ಪುರಮಗಾತ್ ಸಹಿತೋಽರ್ಜುನೇನ ॥ ೯೩ ॥

ಅ ॥ ಆ ಭೀಮಸೇನನ ಭುಜಗಳ ವೀರ್ಯದಿಂದ ರಕ್ಷಿಸಿಕೊಳ್ಳಲ್ಪಟ್ಟ ದೇವೇಂದ್ರನ ಪುತ್ರನಾದ ಅರ್ಜುನನು (ಭೀಮನಿಂದ ಯಾರು ಪರಾಜಿತರಾಗಿರುತ್ತಾರೋ ಅವರಿಂದ)ಅವಶಿಷ್ಟರಾದ ರಾಜರನ್ನೂ ಪ್ರಯತ್ನವಿಲ್ಲದೇನೇ ಗೆದ್ದನು. ಭೀಮನು ಸಾಲ್ವರಾಜನನ್ನೂ ಹಂಸಡಿಭಕರನ್ನೂ ಗೆದ್ದು ಅರ್ಜುನನಿಂದ ಕೂಡಿದವನಾಗಿ ಹಸ್ತಿನಾವತಿಯೆಂದು ಹೆಸರುಳ್ಳ ಪಟ್ಟಣವನ್ನು ಕುರಿತು ಹೋದನು. ॥ ೯೩ ॥

ಮೂ ॥ ತದ್ಭಾಹುವೀರ್ಯಮಥ ವೀಕ್ಷ್ಯ ಮುವೋದ ಧರ್ಮ-
ಸೂನುಃ ಸಮಾತೃಯಮಜೋ ವಿದುರಃ ಸಭೀಷ್ಮಃ ।
ಅನ್ಯೇ ಚ ಸಜ್ಜನಗಣಾಃ ಸಹಪೌರರಾಷ್ಟ್ರಾಃ
ಶ್ರುತ್ವೈವ ಸರ್ವಯದವೋ ಜಹೃಷುರ್ನಿತಾಂತಂ ॥ ೯೪ ॥

ಅ ॥ ಆಮೇಲೆ ತಾಯಿಯಾದ ಕುಂತೀದೇವಿಯು ಯಮಳರಾದ ನಕುಲ ಸಹದೇವರೂ ಇವರಿಂದ ಕೂಡಿದ ಧರ್ಮರಾಜನು ಆ ಭೀಮನ ಭುಜಪರಾಕ್ರಮವನ್ನು ನೋಡಿ ಸಂತೋಷಪಟ್ಟನು. ಭೀಷ್ಮಾಚಾರ್ಯರಿಂದ ಕೂಡಿದ ವಿದುರನೂ ಪಟ್ಟಣದಲ್ಲಿದ್ದವರೂ ದೇಶದಲ್ಲಿದ್ದವರೂ ಇವರಿಂದ ಕೂಡಿದ ಇತರರಾದ ಸಜ್ಜನರ ಸಮೂಹಗಳೂ ಕೂಡ ಎಲ್ಲಾ ಯಾದವರೂ (ಭೀಮ ಕೃತ ದಿಗ್ವಿಜಯವನ್ನು) ಕೇಳಿದೊಡನೆಯೇ ಅತ್ಯಂತವಾಗಿ ಸಂತೋಷಪಟ್ಟರು. ॥ ೯೪ ॥

ಮೂ ॥ ಕೃಷ್ಣಃ ಸುಯೋಧನಮುಖ್ಯಮುಮಾಂಬಿಕೇಯಂ
ಜಾನನ್ ಸ್ವಪುತ್ರವಶವರ್ತಿನಮೇವ ಗತ್ವಾ ।
ಶ್ವಾಫಲ್ಕಿನೋ ಗೃಹಮುಮುಂ ಧೃತರಾಷ್ಟ್ರಶಾಂತ್ಯೈ
ಗಂತುಂ ದಿದೇಶ ಗಜನಾಮಪುರಂ ಪರೇಶಃ ॥ ೯೫ ॥

ಅ ॥ ಸರ್ವೋತ್ತಮನಾದ ಶ್ರೀಕೃಷ್ಣನು ದುರ್ಯೋಧನನೇ ಮೊದಲಾಗಿ ಉಳ್ಳ ದುಷ್ಟಪುತ್ರರಿಂದ ಮನಸ್ಸೇ ಮೊದಲಾದ ಎಲ್ಲಾ ಇಂದ್ರಿಯಂಗಳ ಆಕ್ರಮಣವುಳ್ಳ ಅಂಬಿಕಾಪುತ್ರನಾದ ಧೃತರಾಷ್ಟ್ರನನ್ನು ತನ್ನ ಮಂಕ್ಕಳ ಅಧೀನದಲ್ಲಿಯೇ ಇರುವವನನ್ನಾಗಿಯೇ ತಿಳಿದವನಾಗಿ ಅಕ್ರೂರನ ಮನೆಯನ್ನು ಕುರಿತು ಹೋಗಿ ಈ ಅಕ್ರೂರನನ್ನು ಧೃತರಾಷ್ಟ್ರನ ಶಾಂತಿಗಾಗಿ (ಅಂದರೆ ವಿಪರೀತ ಪ್ರವೃತ್ತಿ ನಿವೃತ್ತಿಗಾಗಿ)ಹಸ್ತಿನಾವತೀ ಪಟ್ಟಣವನ್ನು ಕುರಿತು ಹೋಗಲಿಕ್ಕೆ ಅಪ್ಪಣೆ ಕೊಟ್ಟನು. ॥ ೯೫ ॥

ಮೂ ॥ ಸೋsಯಾದ್ಗಜಾಹ್ವಯಮುಮುತ್ರ ವಿಚಿತ್ರವೀರ್ಯ-
ಪುತ್ರೇಣ ಭೀಷ್ಮಸಹಿತೈಃ ಕುರುಭಿಃ ಸಮುಸ್ತೈಃ ।
ಸಂಪೂಜಿತಃ ಕತಿಪಯಾನವಸಚ್ಚ ಮಾಸಾನ್
ಜ್ಞಾತುಂ ಹಿ ಪಾಂಡುಷು ಮನಃಪ್ರಸೃತಿಂ ಕುರೂಣಾಂ ॥ ೯೬ ॥

ಅ ॥ ಅಕ್ರೂರನು ಹಸ್ತಿನಾವತೀ ಪಟ್ಟಣವನ್ನು ಕುರಿತು ಹೋದನು. ಹಸ್ತಿನಾವತೀ ಪಟ್ಟಣದಲ್ಲಿ ವಿಚಿತ್ರವೀರ್ಯನ ಮಗನಾದ ಧೃತರಾಷ್ಟ್ರನಿಂದಲೂ ಭೀಷ್ಮಾಚಾರ್ಯರಿಂದ ಕೂಡಿ

ರವ ಎಲ್ಲಾ ಕೌರವರಿಂದಲೂ ಪೂಜಿಸಿಕೊಳ್ಳಲ್ಪಟ್ಟವನಾಗಿ ಪಾಂಡವರಲ್ಲಿ ಕೌರವರ ಮನಃ ಪ್ರಸಾದ ಕಾರಣವನ್ನು ತಿಳಿಯಲುವುದಕ್ಕಾಗಿ ಕೆಲವು ಮಾಸಗಳಲ್ಲಿ ಅವಾಸವಮಾಡಿಕೊಂಡಿದ್ದನು. ಪ್ರಸಿದ್ಧವು. ॥ ೯೬ ॥

ಮೂ ॥ ಜ್ಞಾತ್ವಾ ಸ ಕುಂತಿವಿದುರೋಕ್ತಿತ ಆತ್ಮನಾ ಚ
ವಿತ್ರಾರಿಮಧ್ಯಮಜನಾಂಸ್ತನಯೇಷು ಪಾಂಡೋಃ ।
ವಿಜ್ಞಾಯ ಪುತ್ರವಶಗಂ ಧೃತರಾಷ್ಟ್ರಮಂಜಃ
ಸಾಮ್ನೈವ ಭೇದಸಹಿತೇನ ಜಗಾದ ವಿದ್ವಾನ್ ॥ ೯೭ ॥

ಅ ॥ ಜ್ಞಾನಿಯಾದ ಆ ಅಕ್ರೂರನು ಕುಂತಿಯೂ ವಿದುರನೂ ಇವರ ವಚನದ್ವೆಸೆಯಿಂದ ತನ್ನಿಂದಲೇ ಪಾಂಡುರಾಜನ ಪುತ್ರರಾದ ಪಾಂಡವರಲ್ಲಿ ಮಿತ್ರರೂ, ಶತ್ರುಗಳೂ, ಉದಾಸೀನರೂ ಆದ ಜನರನ್ನು ತಿಳಿದುಕೊಂಡು ಧೃತರಾಷ್ಟ್ರನನ್ನು ಮಕ್ಕಳ ಆಧೀನದಲ್ಲಿರತಕ್ಕವನನ್ನಾಗಿ ತಿಳಿದು ಭೇದೋಪಾಯದಿಂದ ಕೂಡಿದ ಸಾಮೋಪಾಯದಿಂದಲೇ ಚೆನ್ನಾಗಿ ಹೇಳಿದನು. ॥ ೯೭ ॥

ಮೂ ॥ ಪುತ್ರೇಷು ಪಾಂಡುತನಯೇಷು ಚ ಸಾಮ್ಯವೃತ್ತಿಃ
ಕೀರ್ತಿಂ ಚ ಧರ್ಮಮುರುಮೇಷಿ ತಥಾರ್ಥಕಾಮೌ ।
ಪ್ರೀತಿಂ ಪರಾಂ ತ್ವಯಿ ಕರಿಷ್ಯತಿ ವಾಸುದೇವಃ
ಸಾಕಂ ಸಮಸ್ತಯದುಭಿಃ ಸಹಿತಃ ಸುರಾದ್ಯೈಃ ॥ ೯೮ ॥

ಅ ॥ ಮಕ್ಕಳಲ್ಲಿಯೂ ಪಾಂಡವರಲ್ಲಿಯೂ ಆಯಾಯ ಯೋಗ್ಯತಾನುಸಾರವಾದ ವರ್ತನೆ ವುಳ್ಳ ನೀನು ಕೀರ್ತಿಯನ್ನೂ ಉತ್ತಮವಾದ ಧರ್ಮವನ್ನೂ ಹಾಗೆಯೇ ಅರ್ಥಕಾಮಗಳನ್ನೂ ಹೊಂದುತ್ತಿ. ಶ್ರೀಕೃಷ್ಣನು ಎಲ್ಲಾ ಯಾದವರಿಂದ ಕೂಡಿಕೊಂಡು, ದೇವಾದಿಗಳಿಂದ ಕೂಡಿದವನಾಗಿ ನಿನ್ನಲ್ಲಿ ಉತ್ಕೃಷ್ಟವಾದ ಪ್ರೀತಿಯನ್ನು ಮಾಡುವನು. ॥ ೯೮ ॥

ಮೂ ॥ ಧರ್ಮಾರ್ಥಕಾಮಸಹಿತಾಂ ಚ ವಿಮುಕ್ತಿಮೇಷಿ
ತತ್ಪ್ರೀತಿತಃ ಸುನಿಯತಂ ವಿಪರೀತವೃತ್ತಿಃ ।
ಯಾಸ್ಯೇವ ರಾಜವರ ತತ್ಫಲವೈಪರೀತ್ಯ-
ಮಿತ್ಥಂ ವಚೋ ನಿಗದಿತಂ ತವ ಕಾರ್ಷ್ಣವುದ್ಯ ॥ ೯೯ ॥

ಅ ॥ ಏಲೋ ರಾಜಶ್ರೇಷ್ಠನೇ (ನೀನು) ಶ್ರೀಕೃಷ್ಣನ ಪ್ರೀತಿಯಿಂದ ಧರ್ಮ, ಅರ್ಥ, ಕಾಮಗಳಿಂದ ಕೂಡಿದ ವಿಮುಕ್ತಿಯನ್ನು ಹೊಂದುತ್ತಿ. ನಿನ್ನ ಮಕ್ಕಳಲ್ಲಿಯೂ ಪಾಂಡವರಲ್ಲಿಯೂ ಮಿಮವಲ್ಲದ ಪ್ರವೃತ್ತಿಯುಳ್ಳ ನೀನು ಅತಿ ನಿಯತ ಹೇಗೆ ಆದೀತೋ ಹಾಗೆ ಶ್ರೀಕೃಷ್ಣನ ಪ್ರೀತಿಯಿಂದ ಉಂಟಾದ ಫಲ ವೈಪರೀತ್ಯವನ್ನು (ಅಂದರೆ ನರಕಾದ್ಯನರ್ಥ ಪ್ರಾಪ್ತಿರೂಪವಾದ ಫಲವನ್ನು) ನಿಶ್ಚಯವಾಗಿಯೂ ಹೊಂದುವಿ. ನಾನು ಹೇಳಿದ ಪ್ರಕಾರ ಕೃಷ್ಣಸಂಬಂಧಿಯಾದ ವಚನವು ಈಗ ನಿನಗೆ ಹೇಳಲ್ಪಟ್ಟಿತು. (ಅಂದರೆ ನಾನು ಹೇಳಿದ ಪ್ರಕಾರ ಶ್ರೀಕೃಷ್ಣನೂ ತಿಳಿದಿರುವನು. ಅದನ್ನೇ ನಾನು ನಿನಗೆ ಹೇಳಿದೆನು, ಎಂದೂ ಹೇಳಿದನು.) ॥ ೯೯ ॥

ಮೂ ॥ ಇತ್ಥಂ ಸಮಸ್ತಕುರುಮುಧ್ಯ ಉಪಾತ್ತವಾಕ್ಯೋ
ರಾಜಾಪಿ ಪುತ್ರವಶಗೋ ವಚನಂ ಜಗಾದ ।
ಸರ್ವಂ ವಶೇ ಭಗವತೋ ನ ವಯಂ ಸ್ವತಂತ್ರಾ
ಭೂಭಾರಸಂಹೃತಿಕೃತೇ ಸ ಇಹಾವತೀರ್ಣಃ ॥ ೧೦೦ ॥

ಅ ॥ ಹಿಂದೆ ಹೇಳಿದ ಪ್ರಕಾರ ಎಲ್ಲಾ ಕೌರವರ ಮಂಧ್ಯದಲ್ಲಿ ಕೇಳಲ್ಪಟ್ಟ ವಾಕ್ಯವುಳ್ಳ, ಧೃತರಾಷ್ಟ್ರರಾಜನಾದರೂ ಮಂಕ್ಕಳ ಅಧೀನದಲ್ಲಿದ್ದವನಾಗಿ, ಎಲ್ಲವೂ ಭಗವಂತನ ಅಧೀನದಲ್ಲಿರ ತಕ್ಕುದಂ, ನಾವು ಸ್ವತಂತ್ರರಲ್ಲ, ಭೂವಿಂಗೆ ಭಾರಭೂತರಾದ ದೈತ್ಯರ ಸಮೂಹಗಳನ್ನು ಸಂಹಾರ ಮಾಡುವುದಕ್ಕಾಗಿ ಶ್ರೀಹರಿಯಂ ಇಲ್ಲಿ ಅವತಾರಮಾಡಿರುವನು, ಈ ಪ್ರಕಾರ ಮಾತನ್ನು ಹೇಳಿದನು. ॥ ೧೦೦ ॥

ಮೂ ॥ ಏವಂ ನಿಶಮ್ಯ ವಚನಂ ಸ ತು ಯಾದವೋಽಸ್ಯ
ಜ್ಞಾತ್ವಾ ಮನೋಽಸ್ಯ ಕಲುಷಂ ತವ ನೈವ ಪುತ್ರಾಃ ।
ಇತ್ಯೂಚಿವಾನ್ ಸಹ ಮರುತ್ತನಯಾರ್ಜುನಾಭ್ಯಾಂ
ಪ್ರಾಯಾತ್ ಪುರೀಂ ಚ ಸಹದೇವಯುತಃ ಸ್ವಕೀಯಾಂ ॥ ೧೦೧ ॥

ಅ ॥ ಯದುಂಕುಲೋತ್ಪನ್ನನಾದ ಆ ಅಕ್ರೂರನಾದರೂ ಈ ರಾಜನ ಕಪಟರೂಪವಾದ ವಾಕ್ಯವನ್ನು ಹಿಂದೆ ಹೇಳಿದ ಪ್ರಕಾರ ಕೇಳಿ ಈ ರಾಜನ ಕುಟಿಲವಾದ ಮನಸ್ಸನ್ನೂ ತಿಳಿದು ಕೊಂಡು ನಿನಗೆ ಮಂಕ್ಕಳು ಇಲ್ಲವೇ ಇಲ್ಲ. (ಅಂದರೆ ಮಂಕ್ಕಳು ಇಲ್ಲವೆಂದಾಗುವುದು.) ಈ ಪ್ರಕಾರ ಹೇಳಿದವನಾಗಿ ಭೀಮ ಅರ್ಜುನರಿಂದ ಕೂಡಿಕೊಂಡು ಸಹದೇವನಿಂದ ಕೂಡಿದವನಾಗಿ ಸ್ವಕೀಯವಾದ ಮಂಧುರಾಪಟ್ಟಣವನ್ನು ಕುರಿತು ಹೋದನು. ॥ ೧೦೧ ॥

ಮೂ ॥ ಜ್ಞಾನಂ ತು ಭಾಗವತಮುತ್ತಮಮಾತ್ಮಯೋಗ್ಯಂ
ಭೀಮಾರ್ಜುನೌ ಭಗವತಃ ಸಮವಾಪ್ಯ ಕೃಷ್ಣಾತ್ ।
ತತ್ರೋಷತುರ್ಭಗವತಾ ಸಹ ಯುಕ್ತಚೇಷ್ಟೌ
ಸಂಪೂಜಿತೌ ಯದುಭಿರುತ್ತಮಕರ್ಮಸಾರೌ ॥ ೧೦೨ ॥

ಅ ॥ ಭೀಮಾರ್ಜುನರು ಉತ್ತಮವಾದ ತಮಗೆ ಯೋಗ್ಯವಾದ ಭಗವತ್ಸಂಬಂಧಿಯಾದ ಜ್ಞಾನವನ್ನಾದರೂ ಪೂಜ್ಯನಾದ ಶ್ರೀಕೃಷ್ಣನದೆಸೆಯಿಂದ ಹೊಂದಿ ಶ್ರೀಕೃಷ್ಣನಿಂದ ಕೂಡಿಕೊಂಡು ಸ್ವಯೋಗ್ಯವಾದ ವ್ಯಾಪಾರವುಳ್ಳವರಾಗಿ ಯಾದವರಿಂದ ಪೂಜಿಸಿಕೊಳ್ಳಲ್ಪಟ್ಟವರಾಗಿ ಉತ್ಕೃಷ್ಟವಾದ ಕರ್ಮದಿಂದ ಶ್ರೇಷ್ಠರಾಗಿ ಆ ಮಂಧುರಾಪಟ್ಟಣದಲ್ಲಿ ಆವಾಸವಮಾಡಿಕೊಂಡಿದ್ದರು. ॥೧೦೨॥

ಮೂ ॥ ಪ್ರತ್ಯುದ್ಯಯೌ ಭಗವತಾಪಿ ಭವೇದ್ಗದಾಯಾಃ
ಶಿಕ್ಷಾ ಯದಂ ಭಗವತಾ ಕ್ರಿಯತೇ ನ ಚೇಮಂ ।
ಕುರ್ಯಾಮಿತಿ ಸ್ಮ ಭಗವತ್ಸಮನುಜ್ಞಯೈವ
ರಾವಾದಶಿಕ್ಷದುರುಗಾಯಪುರಃ ಸ ಭೀಮಃ ॥ ೧೦೩ ॥

ಅ ॥ ಶ್ರೀಕೃಷ್ಣನ ಸಕಾಶದ್ದೆಸೆಯಿಂದ ಯಾವಾಗ ಗದೆಯ ಶಿಕ್ಷೆಯು ಮಾಡಲ್ಪಡುತ್ತದೋ ಆಗ ಪ್ರತ್ಯುದ್ಯಮವೂ ಕೂಡ ಆಗುವುದು. (ಅಂದರೆ ಶ್ರೀಕೃಷ್ಣನನ್ನು ಕುರಿತು ನಾನೂ ಕೂಡ ಗದೆಯ ಪ್ರಹಾರದ ಉದ್ಯೋಗವನ್ನು ಮಾಡಬೇಕಾಗುವುದು, ಅಭ್ಯಾಸವು ತಾಡನ ಪ್ರತಿ ತಾಡನ ರೂಪವಾಗಿದೆ.) (ಆದಕಾರಣ) ಶ್ರೀಕೃಷ್ಣನಿಂದ ಕೂಡಿಕೊಂಡು ಈ ಪ್ರತ್ಯುದ್ಯಮವನ್ನು ಮಾಡಲಾರೆನು, ಈ ಪ್ರಕಾರವಾಗಿ (ಬುದ್ಧಿಯಿಂದ) ಆ ಭೀಮನು ಉತ್ತಮ ಯಶಸ್ಸುಳ್ಳ ಶ್ರೀ ಕೃಷ್ಣನ ಮುಂಭಾಗದಲ್ಲಿ ಬಲರಾಮನದೆಸೆಯಿಂದ (ಗದಾಶಿಕ್ಷೆಯನ್ನು) ಅಭ್ಯಾಸ ಮಾಡಿ ಕೊಂಡನು, ॥ ೧೦೩ ॥

ಮೂ ॥ ರಾಮೋಽಪಿ ಶಿಕ್ಷಿತಮುರೀಂದ್ರಧರಾತ್ ಪುರೋಽಸ್ಯ
ಭೀಮೇ ದದಾವಥ ಪರಾಣಿ ಹರೇರವಾಪ ।
ಅಸ್ತ್ರಾಣಿ ಶಕ್ರತನಯಃ ಸಹದೇವ ಆರ್ಯ
ನೀತಿಂ ತಥೋದ್ಧವಮುಖಾತ್ ಸಕಲಾಮುದಾರಾಂ ॥ ೧೦೪ ॥

ಅ ॥ ಬಲರಾಮನಾದರೂ (ಸಾಂದೀಪನ ಮುಂಭಾಗದಲ್ಲಿ ಕ್ರೀಡೆಯಿಂದ ಪರಸ್ಪರವಾಗಿ ಗದಾಭ್ಯಾಸವನ್ನು ಮಾಡುವ ಕಾಲದಲ್ಲಿ) ಶ್ರೀ ಸುದರ್ಶನವನ್ನು ಧರಿಸತಕ್ಕ ಶ್ರೀಕೃಷ್ಣನಿಂದ ನೂತನವಾಗಿ ಶಿಕ್ಷಿಸಲ್ಪಟ್ಟ ಅಭ್ಯಾಸವನ್ನು ಕೃಷ್ಣನ ಮುಂಭಾಗದಲ್ಲಿ ಭೀಮಸೇನನಿಗೋಸ್ಕರ ಕೊಟ್ಟನು. ಆಮೇಲೆ ಅರ್ಜುನನು ಶ್ರೀಕೃಷ್ಣನದೆಸೆಯಿಂದ ಉತ್ತಮಗಳಾದ ಅಸ್ತ್ರಗಳನ್ನು ಹೊಂದಿದನು. ಹಾಗೆಯೇ ಸಹದೇವನು ಉದ್ಧವನ ಮುಖದಿಂದ ಉತ್ಕೃಷ್ಟವಾದ ಎಲ್ಲಾ ನೀತಿ ಯನ್ನು ಹೊಂದಿದನು. ॥ ೧೦೪ ॥

ಮೂ ॥ ಕೃಷ್ಣೋಽಥ ಚೌಪಗವಿಮುತ್ತಮನೀತಿಯುಕ್ತಂ
ಸಂಪ್ರೇಷಯನ್ನಿದಮುವಾಚ ಹ ಗೋಕುಲಾಯ ।
ದುಃಖಂ ವಿನಾಶಯ ವಚೋಭಿರರೇ ಮದೀಯೈ-
ರ್ನಂದಾದಿನಾಂ ವಿರಹಜಂ ಮಮ ಜಾಶು ಯಾಹಿ ॥ ೧೦೫ ॥

ಅ ॥ ಆಮೇಲೆ ಶ್ರೀಕೃಷ್ಣನು ಉತ್ಕೃಷ್ಟ ನೀತಿಯಿಂದ ಕೂಡಿದ ಉಪಗವಾಖ್ಯ ಯಾದವನ ಪುತ್ರನಾದ ಉದ್ಧವನನ್ನು ನಂದಗೋಕುಲಕ್ಕೋಸ್ಕರ ಕಳುಹಿಸಿಕೊಡುವವನಾಗಿ ಎಲೋ ಉದ್ಧ ವನೇ ನನ್ನ ವಚನಗಳಿಂದ ನನ್ನ ವಿಯೋಗದಿಂದುಂಟಾದ ನಂದಗೋಪನೇ ಮೊದಲಾದವರ ದುಃಖವನ್ನು ನಾಶಪಡಿಸು. ಶೀಘ್ರದಲ್ಲಿ ಹೋಗು. ಈ ಪ್ರಕಾರವಾದ ವೃತಾಂತನ್ನು ಹೇಳಿದನು.

ವಿಶೇಷಾಂಶ—(1) ನಂದಃ ಆದಿಃ ಯೇಷಾಂ ವರ್ತತೆ ಇತಿ ನಂದಾದಿನಃ । ಅಥವಾ ನಂದಃ ಆದಿಃ ಯೇಷಾಂ ತಾನಿ= ಯಾವ ಗೋಪ ಸ್ತ್ರೀಯರ ಸಮೂಹಗಳಿಗೆ ನಂದನು ಆದಿಯೋ, ಅಥವಾ ನಂದಃ ಆ ಸಮಂತಾತ್ ದಾತಾ ಅನ್ನಾದಿ ದಾತಾ ಏಷಾಂ ವರ್ತತೇ ಇತಿ ನಂದಾದಿನಃ ಎಂದು ವ್ಯುತ್ಪತ್ತಿಯು. ॥ ೧೦೫ ॥

ಮೂ ॥ ಮತ್ತೋ ವಿಯೋಗ ಇಹ ಕಸ್ಯಚಿದಸ್ತಿ ನೈವ
ಯುಷ್ಮಾದಹಂ ತನುಭೃತಾಂ ನಿಹಿತೋಽಂತರೇವ ।

ನಾಹಂ ಮನುಷ್ಯ ಇತಿ ಕುತ್ರ ಚ ವೋಽಸ್ತು ಬುದ್ಧಿ-
ರ್ಬ್ರಹ್ಮೈವ ನಿರ್ಮಲತಮಂ ಪ್ರವದಂತಿ ಮಾಂ ಹಿ ॥ ೧೦೬ ॥

ಅ ॥ ಯಾವ ಕಾರಣದಿಂದ ನಾನು ಶರೀರಧಾರಿಗಳ ಹೃತ್ಕಮಲದಲ್ಲಿಯೇ ಸ್ಥಿತನಾಗಿರುವೆನೋ, ಆ ಕಾರಣ ಈ ಜಗತ್ತಿನಲ್ಲಿ ಯಾರೊಬ್ಬನಿಗೂ ನನ್ನದೆಸೆಯಿಂದ ವಿಯೋಗವು ಇಲ್ಲವೇ ಇಲ್ಲ. ನಾನು ಮನುಷ್ಯನೆಂದು ನಿಮಗೆ ಬುದ್ಧಿಯಿರಿ ಎಲ್ಲಿಯೂ ಯಾವಾಗಲೂ ಇರಬಾರದು; ಏಕೆಂದರೆ ಅತಿಶುದ್ಧನಾದ ಬ್ರಹ್ಮನನ್ನೇ ನನ್ನನ್ನು (ವೇದಜ್ಞಾನಿಗಳು) ಹೇಳುತ್ತಾರೆ. ॥ ೧೦೬ ॥

ಮೂ ॥ ಪೂರ್ವಂ ಯದಾ ಹ್ಯಜಗರೋ ನಿಜಗಾರ ನಂದಂ
ಸರ್ವೇ ನ ಶೇಕುರಥ ತತ್ಪ್ರತಿವೋಢುಕಾಮಾಯ ॥
ಮತ್ಪಾದಸಂಸ್ಪರ್ಶತಃ ಸ ತದಾತಿದಿವ್ಯೋ
ವಿದ್ಯಾಧರಸ್ತದುದಿತಂ ನಿಖಿಲಂ ಸ್ಮರಂತು ॥ ೧೦೭ ॥

ಅ ॥ ಮೊದಲು ಯಾವಾಗ ಹೆಬ್ಬಾವು ನಂದಗೋಪನನ್ನು ಹಿಡಿಯಿತೋ, ಆಗ ನಂದಗೋಪನನ್ನು ಬಿಡಿಸಲಿಕ್ಕೆ ಎಲ್ಲಾ ಗೋಪರೂ ಸಮರ್ಥರಾಗಲಿಲ್ಲ. ಆಗ ನನ್ನ ಪಾದದ ಸ್ಪರ್ಶದಿಂದ ಆ ಹೆಬ್ಬಾವು ಅತ್ಯುತ್ತಮನಾದ ವಿದ್ಯಾಧರನು ಆದನು. ಆ ಗಂಧರ್ವನಿಂದ ಹೇಳಲ್ಪಟ್ಟದ್ದೆಲ್ಲವನ್ನೂ ಸ್ಮರಿಸಿರಿ. ॥ ೧೦೭ ॥

ಆ ವಿದ್ಯಾಧರನಿಗೆ ಅಜಗರತ್ವ ಪ್ರಾಪ್ತಿಗೆ ಕಾರಣವೇನೆಂದರೆ—

ಮೂ ॥ ಪೂರ್ವಂ ಸ ರೂಪಮುದತಃ ಪ್ರಜಹಾಸ ವಿಪ್ರಾನ್
ನಿತ್ಯಂ ತಪಃಕೃಶತರಾಂಗಿರಸೋ ವಿರೂಪಾನ್ ।
ತೈಃ ಪ್ರಾಪಿತಃ ಸಪದಿ ಸೋಽಜಗರತ್ವಮೇವ
ಮತ್ಪ್ರೀ ನಿಜಾಂ ತನುಮವಾಪ್ಯ ಜಗಾದ ನಂದಂ ॥ ೧೦೮ ॥

ಅ ॥ ಮೊದಲು ಆ ವಿದ್ಯಾಧರನು ಸೌಂದರ್ಯದ ಮದದ್ದೆಸೆಯಿಂದ ನಿತ್ಯದಲ್ಲಿಯೂ ತಪಸ್ಸನ್ನು ಮಾಡುವುದರಿಂದ ಅತ್ಯಂತ ಕೃಶರಾದ ಅಂಗಿರಸ ಋಷಿಯ ಮಕ್ಕಳಾದ ವಿಕಾರವಾದ ಸ್ವರೂಪವುಳ್ಳ ಬ್ರಾಹ್ಮಣರನ್ನು ಅಪಹಾಸ ಮಾಡಿದನು. ಆ ಬ್ರಾಹ್ಮಣರಿಂದ ಶೀಘ್ರದಲ್ಲಿ ಸರ್ಪ ಸ್ವರೂಪವನ್ನು ಹೊಂದಿಸಿಕೊಳ್ಳಲ್ಪಟ್ಟ ವಿದ್ಯಾಧರನು ನನ್ನಿಂದಲೇ ಸ್ವಸ್ವರೂಪವಾದ ವಿದ್ಯಾಧರ ಸ್ವರೂಪವನ್ನು ಹೊಂದಿ ನಂದಗೋಪನನ್ನು ಕುರಿತು ಹೇಳಿದನು. (ಅದನ್ನು ಸ್ಮರಣ ಮಾಡಿರಿ.) ॥ ೧೦೮ ॥

ಏನು ಹೇಳಿದನೆಂದರೆ—

ಮೂ ॥ ನಾಯಂ ನರೋ ಹರಿರಯಂ ಪರಮಃ ಪರೇಭ್ಯೋ
ವಿಶ್ವೇಶ್ವರಃ ಸಕಲಕಾರಣ ಆತ್ಮತಂತ್ರಃ ।
ವಿಜ್ಞಾಯ ಚೈನಮುರುಸಂಸೃತಿತೋ ವಿಮುಕ್ತಾ
ಯಾಂತ್ಯಸ್ಯ ಪಾದಯುಗಲಂ ಮುನಯೋ ವಿರಾಗಾಃ ॥ ೧೦೯ ॥

ಅ ॥ ಈ ಕೃಷ್ಣನು ಮನುಷ್ಯನಲ್ಲ; ಇವನು ಸಾಕ್ಷಾತ್ ನಾರಾಯಣನು; ಉತ್ತಮರಾದ ಬ್ರಹ್ಮಾದಿಗಳಿಂದಲೂ ಉತ್ತಮನು; ಸಮಸ್ತ ಜಗತ್ತಿಗೂ ನಿಯಾಮಕನು; ಎಲ್ಲಾ ಸೃಷ್ಟ್ಯಾದಿಗಳಿಗೆ ಕಾರಣಭೂತನು; ಸರ್ವಸ್ವತಂತ್ರನು; ಈ ಪ್ರಕಾರವಾಗಿ ವಿರಕ್ತರಾದ ಮುನಿಗಳು ಶ್ರೀಕೃಷ್ಣನನ್ನು ಉತ್ಕೃಷ್ಟ ಹೇಗೆ ಆದೀತೋ ಹಾಗೆ ತಿಳಿದುಕೊಂಡು ಸಂಸಾರದ್ವೆಷದಿಂದ ಬಿಡಲ್ಪಟ್ಟವರಾಗಿ ಶ್ರೀಕೃಷ್ಣನ ಚರಣದ್ವಂದ್ವವನ್ನು ಹೊಂದುತ್ತಾರೆ. ॥ ೧೦೯ ॥

ಮೂ ॥ ನಂದಂ ಯದಾ ಚ ಜಗೃಹೇ ವರುಣಸ್ಯ ದೂತ
ಸ್ತತ್ರಾಪಿ ಮಾಂ ಜಲಪತೇರ್ಗೃಹಮಾಶು ಯಾಂತಂ ।
ಸಂಪೂಜ್ಯ ವಾರಿಪತಿರಾಹ ವಿಮುಚ್ಯ ನಂದಂ
ನಾಯಂ ಸುತಸ್ತವ ಪುರಾನ್ ಪರಮಃ ಸ ಏಷಃ ॥ ೧೧೦ ॥

ಅ ॥ ವರುಣನ ಭೃತ್ಯನಾದ ಅಸುರನು (ಸ್ನಾನಕಾಲದಲ್ಲಿ) ನಂದಗೋಪನನ್ನು ಯಾವಾಗ್ಗೆ ಹಿಡಿದನೋ ಆವಾಗಲೇ ವರುಣನ ಮನೆಯನ್ನು ಕುರಿತು ಬಂದ ನನ್ನನ್ನು ಜಲಕ್ಕೆ ಅಧಿಪತಿಯಾದ ವರುಣನು ನನ್ನನ್ನು ಪೂಜಿಸಿ ನಂದಗೋಪನನ್ನು ಬಿಡಿಸಿ (ಎಲೋ ನಂದಗೋಪನೇ) ಈ ಕೃಷ್ಣನು ನಿನ್ನ ಮಗನು ಅಲ್ಲ. ಆ ಈ ಕೃಷ್ಣನು ಪುರುಷಶಬ್ದವಾಚ್ಯನು, ಸರ್ವೋತ್ತಮನು. (ಹೀಗೆ ವರುಣನು ಹೇಳಿದ್ದನ್ನು ಸ್ಮರಿಸಿರಿ.) ॥ ೧೧೦ ॥

ಮೂ ॥ ಸಂದರ್ಶಿತೋ ನನು ಮಯೈವ ವಿಕುಂಠಲೋಕೋ
ಗೋಜೀವಿನಾಂ ಸ್ಥಿತಿರಪಿ ಪ್ರವರಾ ಮದೀಯಾ ।
ಮಾನುಷ್ಯಬುದ್ಧಿಮುಪನೇತುಮಜೇ ಮಯಿ ಸ್ಮ
ತಸ್ಮಾನ್ಮಯಿ ಸ್ಥಿತಿಮವಾಪ್ಯ ಶಮಂ ಪ್ರಯಾಂತು ॥ ೧೧೧ ॥

ಅ ॥ (ವೈಕುಂಠಲೋಕವನ್ನು ತೋರಿಸು, ಎಂದು ಪ್ರಾರ್ಥಿಸಿಕೊಳ್ಳಲ್ಪಟ್ಟ) ನನ್ನಿಂದಲೇ ಗೊಲ್ಲರಿಗೆ ವೈಕುಂಠ ಲೋಕವು ತೋರಿಸಲ್ಪಟ್ಟಿತಷ್ಟೆ, ಉತ್ಪತ್ತಿ ರಹಿತನಾದ ನನ್ನಲ್ಲಿ ಮನುಷ್ಯ ಎನ್ನುವ ಬುದ್ಧಿಯನ್ನು ತೆಗೆಯುವುದಕ್ಕಾಗಿ ಅತಿ ಶ್ರೇಷ್ಠವಾದ ನನ್ನ ಸ್ಥಿತಿಯು ಕೂಡ ಯಾವ ಯಾವ ಕಾರಣದಿಂದ ತೋರಿಸಲ್ಪಟ್ಟಿತೋ, ಆದಕಾರಣ ನನ್ನಲ್ಲಿ ಮನಃಸ್ಥೈರ್ಯವನ್ನು ಹೊಂದಿ ದುಃಖಶಾಂತಿಯನ್ನು ಹೊಂದಲಿ. ॥ ೧೧೧ ॥

ಮೂ ॥ ಶ್ರುತ್ವೋದ್ಧವೋ ನಿಗದಿತಂ ಪರಮಸ್ಯ ಪುಂಸೋ
ವೃಂದಾವನಂ ಪ್ರತಿ ಯಯೌ ವಚನೈಶ್ಚ ತಸ್ಯ ।
ದುಃಖಂ ವ್ಯಪೋಹ್ಯ ನಿಖಿಲಂ ಪಶುಜೀವನಾನಾ–
ಮಾಯಾತ್ ಪುನಶ್ಚರಣಸನ್ನಿಧಿಮೇವ ವಿಷ್ಣೋಃ ॥ ೧೧೨ ॥

ಅ ॥ ಉದ್ಧವನು ಶ್ರೀಕೃಷ್ಣನಿಂದ ಹೇಳಲ್ಪಟ್ಟ ಮಾತನ್ನು ಕೇಳಿ ವೃಂದಾವನಕ್ಕೆ ಹೋದನು. ಸರ್ವೋತ್ತಮನಾದ ಶ್ರೀಕೃಷ್ಣನ ವಚನಗಳಿಂದ ನಂದಗೋಪನೇ ಮೊದಲಾದ ಗೊಲ್ಲರ ಎಲ್ಲಾ ದುಃಖವನ್ನು ಪರಿಹರಿಸಿ (ಪುನಃ ಹಿಂತಿರುಗಿ) ಶ್ರೀಕೃಷ್ಣನ ಪಾದಾರವಿಂದಗಳ ಸಮೀಪವನ್ನೇ ಹೊಂದಿದನು. ॥ ೧೧೨ ॥

ಮೂ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯ್ಯನಿರ್ಣಯೇ
ಚತುರ್ದಶೋಽಧ್ಯಾಯಃ ॥ ೧೪ ॥

ಅ ॥ ಶ್ರೀಮದಾಚಾರ್ಯ್ಯರಿಂದ ನಿರ್ಮಿಸಲ್ಪಟ್ಟ ಶ್ರೀಮನ್ಮಹಾಭಾರತತಾತ್ಪರ್ಯ್ಯನಿರ್ಣಯದಲ್ಲಿ ಹದಿನಾಲ್ಕನೇ ಅಧ್ಯಾಯವು ಮುಗಿಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಹದಿನೈದನೇ ಅಧ್ಯಾಯವು

ಮೂ ॥ ಓಂ ॥ ಏವಂ ಪ್ರಶಾಸತಿ ಜಗತ್ ಪುರುಷೋತ್ತಮೇಽಸ್ಮಿನ್
ಭೀಮಾರ್ಜುನೌ ತು ಸಹದೇವಯುತಾವನುಜ್ಞಾಂ ।
ಕೃಷ್ಣಾದವಾಪ್ಯ ವರ್ಷತ್ರಿತಯಾತ್ ಪುರಂ ಸ್ವ-
ಮಾಜಗ್ಮ ತುರ್ಹರಿಸುತೇನ ವಿಶೋಕನಾವ್ನಾ ॥ ೧ ॥

ಅ ॥ ಈ ಪ್ರಕಾರವಾಗಿ ತನ್ನ ಭಕ್ತರ ದುಃಖ ಪರಿಹಾರಾದಿಗಳನ್ನು ಮಾಡುತ್ತಾ, ಪುರು ಷೋತ್ತಮನಾದ ಶ್ರೀಕೃಷ್ಣನು ಯೋಗ್ಯರೀತಿಯಿಂದ ಆಳುತ್ತಿರಲು ಸಹದೇವನಿಂದ ಕೂಡಿದ ಭೀಮಾರ್ಜುನರಾದರೂ ಮೂರು ವರ್ಷಗಳು ಕಳೆದ ನಂತರ ಶ್ರೀಕೃಷ್ಣನಿಂದ ಅಪ್ಪಣೆಯನ್ನು ತೆಗೆದುಕೊಂಡು ಶ್ರೀಕೃಷ್ಣನ ಮಂಗನಾದ ವಿಶೋಕನೆಂದು ಹೆಸರು ಉಳ್ಳವನಿಂದ ಕೂಡಿಕೊಂಡು ತಮ್ಮ ಹಸ್ತಿನಾವತೀ ಪಟ್ಟಣವನ್ನು ಕುರಿತು ಬಂದರು. ॥ ೧ ॥

ವಿಶೋಕನು ಯಾರಲ್ಲಿ ಹುಟ್ಟಿದ್ದು ಎಂದರೆ—

ಮೂ ॥ ಸೈರಂಧ್ರಿಕೋದರಭವಃ ಸ ತು ನಾರದಸ್ಯ
ಶಿಷ್ಯೋ ವೃಕೋದರರಥಸ್ಯ ಬಭೂವ ಯಂತಾ ।
ಯಾ ಪಿಂಗಲಾನ್ಯಭವ ಆತ್ಮನಿ ಸಂಸ್ಥಿತಂ ತಂ
ಸಂಸ್ಮೃತ್ಯ ಕಾಂತಮುರುಗಾಯಮಭೂತ್ರಿವಕ್ರಾ ॥ ೨ ॥

ಅ ॥ ಆ ವಿಶೋಕನು ಸೈರಂಧ್ರಿಕೆಯ (ತ್ರಿವಕ್ರೆಯ) ಗರ್ಭದ್ದಸೆಯಿಂದ ಹುಟ್ಟಿದವನು, ನಾರದರ ಶಿಷ್ಯನು, ಭೀಮಸೇನನ ರಥಕ್ಕೆ ಸಾರಥಿಯೂ ಆಗಿದ್ದನು. (ಸೈರಂಧ್ರಿಕೆಯ ಮೊದ ಲಿನ ಸ್ವರೂಪವನ್ನು ಹೇಳುತ್ತಾರೆ.) ಯಾವ ಪಿಂಗಲಾ ನಾಮಕಳಾದ ವೇಶ್ಯಾಸ್ತ್ರೀಯು ಪೂರ್ವ ಜನ್ಮನಲ್ಲಿ ತನ್ನ ಹೃತ್ಕಮಲದಲ್ಲಿ ಇರತಕ್ಕ ಉತ್ತಮ ಯಶಸ್ಸುಳ್ಳ ಶ್ರೀಹರಿಯನ್ನೇ ಗಂಡನನ್ನಾಗಿ ಸ್ಮರಿಸಿ (ವೇಶ್ಯಾಸ್ತ್ರೀಯ ಶರೀರವನ್ನು ಬಿಟ್ಟು) ತ್ರಿವಕ್ರೆಯು ಆದಳೋ, (ಆದಕಾರಣ ಆ ತ್ರಿವ ಕ್ರೆಗೆ ಶ್ರೀಕೃಷ್ಣನ ಸಂಗವಾಯ್ತು.) ॥ ೨ ॥

ಮೂ ॥ ತಂ ಪಂಚರಾತ್ರವಿದಮಾಪ್ಯ ಸುಸಾರಥಿಂ ಸ
ಭೀಮೋ ಮುಮೋದ ಪುನರಾಪ ಪರಾತ್ಮ ವಿದ್ಯಾಂ ।
ವ್ಯಾಸಾತ್ ಪರಾತ್ಮತ ಉವಾಚ ಚ ಫಲ್ಗುನಾದಿ-
ದೈವೇಷು ಸರ್ವವಿಜಯಿನಾ ಪರವಿದ್ಯಯೈಷಃ ॥ ೩ ॥

ಅ ॥ ಆ ಭೀಮಸೇನನು ಪಂಚರಾತ್ರಾಗಮವನ್ನು ತಿಳಿದಿರತಕ್ಕ ಆ ವಿಶೋಕನನ್ನು ಯೋಗ್ಯ ಸಾರಥಿಯನ್ನಾಗಿ ಹೊಂದಿ ಸಂತೋಷ ಪಟ್ಟನು, ಮತ್ತು ಶ್ರೀಹರಿಯ ಉತ್ತಮ ಸ್ವರೂಪರಾದ ವೇದವ್ಯಾಸ ದೇವರದೆಸೆಯಿಂದ ಶ್ರೀಕೃಷ್ಣನಿಂದ ಹೊಂದಿದ ತತ್ವವಿದ್ಯೆಗಿಂತ ಪುನಃ ಪರತತ್ವ

ವಿದ್ಯೆಯಂನ್ನು ಹೊಂದಿದನಂ. ಪರವಿದ್ಯೆಯಿಂದ ಎಲ್ಲರನ್ನೂ ಗೆಲ್ಲತಕ್ಕ ಈ ಭೀಮಂಸೇನನಂ ಅರ್ಜುನ ಮೊದಲಾದ ದೇವಾವತಾರಗಳಲ್ಲಿ ಉಪದೇಶಕೊಟ್ಟನಂ. ॥ ೩ ॥

ಮೂ ॥ ಸರ್ವಾನಭಾಗವತಶಾಸ್ತ್ರಪಥಾನ್ ವಿಧೂಯ
ಮಾರ್ಗಂ ಚಕಾರ ಸ ತು ವೈಷ್ಣವಮೇವ ಶುಭ್ರಂ ।
ಕ್ರೀಡಾರ್ಥಮೇವ ವಿಜಿಗಾಯ ತಥೋಭಯಾತ್ಮ-
ಯುದ್ಧೇ ಬಲಂ ಚ ಕರವಾಕ್ಪ್ರಭವೇಽನಿತಾತ್ಮಾ ॥ ೪ ॥

ಅ ॥ ಆ ಭೀಮಂಸೇನನಂ ಎಲ್ಲಾ ಶ್ರೀಹರಿಗೆ ಉತ್ಕೃಷ್ಟತ್ವವನ್ನು ಪ್ರತಿಪಾದಿಸದೆ ಇರುವ ಶಾಸ್ತ್ರಗಳ ಮಾರ್ಗಗಳನ್ನು ನಿರಾಕರಿಸಿ ದೋಷಲೇಶವಿಲ್ಲದೆ ಇರುವುದರಿಂದ ಅತ್ಯುತ್ತಮವಾದ ವಿಷ್ಣುವಿಗೆ ಉತ್ತಮತ್ವವನ್ನು ಪ್ರತಿಪಾದಿಸತಕ್ಕ ಮಾರ್ಗವನ್ನೇ ಮಾಡಿದನಂ. ಹಾಗೆಯೇ ಜ್ಞಾನ ಬಲಾದಿಗಳಿಂದ ಅಪರಿಮಿತವಾದ ಸ್ವರೂಪವುಳ್ಳ ಭೀಮಂಸೇನನಂ ಕೈಯಿಂದಲೂ ವಚನದಿಂದಲೂ ಉಂಟಾಗತಕ್ಕ ಎರಡಂ ವಿಧವಾದ ಯುದ್ಧದಲ್ಲಿಯೂ (ಅಂದರೆ ವಾಗ್ಯುದ್ಧದಲ್ಲಿಯೂ ಬಾಹು ಯುದ್ಧದಲ್ಲಿಯೂ) ಕ್ರೀಡೆಗೋಸ್ಕರವೇ ಬಲವುಳ್ಳ ಬಲರಾಮನನ್ನು ಗೆದ್ದನಂ. ॥ ೪ ॥

ಮೂ ॥ ನಿತ್ಯಪ್ರಭೂತಸುಶುಭೋ (ಭ) ಪ್ರತಿಭೋಽಪಿ ವಿಷ್ಣೋಃ
ಶ್ರುತ್ವಾ ಪರಾಂ ಪುನರಪಿ ಪ್ರತಿಭಾಮವಾಪ ।
ಕೋ ನಾಮ ವಿಷ್ಣವನುಪಜೀವಕ ಆಸ ಯಸ್ಯ
ನಿತ್ಯಾಶ್ರಯಾದಭಿಹಿತಾಪಿ ರಮಾ ಸದಾ ಶ್ರೀಃ ॥ ೫ ॥

ಅ॥ ಯಾವಾಗಲೂ ಉಂಟಾಗತಕ್ಕ ಅತ್ಯುತ್ತಮವಾದ ಸಾವರ್ಥ್ಯವುಳ್ಳವನಾದಾಗ್ಯೂ ~~ಭೀಮಸೇನನು ಶ್ರೀಕೃಷ್ಣ ವೇದವ್ಯಾಸರೂಪಿಯಾದ ಶ್ರೀಹರಿಯಿಂದ ಪರವಿದ್ಯೆಯನ್ನು ಕೇಳಿ~~ ಮತ್ತೂ ಜ್ಞಾನವಿಶೇಷವನ್ನು ಹೊಂದಿದನು. (ಪರವಿದ್ಯೆಯಂನ್ನು ಕೇಳಿ ಜ್ಞಾನವಿಶೇಷವನ್ನು ಹೊಂದಿದನಂ ಎನ್ನುವುದರಿಂದ ಪ್ರಾಪ್ತವಾದ ಪರೋಪಜೀವನ ಶಂಕೆಯಂನ್ನು ಪರಿಹರಿಸುತ್ತಾರೆ,) ವಿಷ್ಣುವಿನಿಂದ ಉಪಜೀವಿಸಿಕೊಂಡಂ ಇಲ್ಲದಿರುವವನು ಯಾವನು ಇರುತ್ತಾನೆ?(ಯಾರೊಬ್ಬನೂ ಇರಲಾರನು.) ಲಕ್ಷ್ಮೀದೇವಿಯೂ ಕೂಡ ಯಾವ ಶ್ರೀನಾರಾಯಣನ ಉರಃಸ್ಥಳದಲ್ಲಿ ನಿತ್ಯದಲ್ಲಿಯೂ ಆಶ್ರಯಿಸಿಕೊಂಡಂ ಇದ್ದ ಪ್ರಯುಕ್ತ ಯಾವಾಗಲೂ ಶ್ರೀಃ ಎಂದು ಹೇಳಿಸಿಕೊಳ್ಳಲ್ಪಡುತ್ತಾಳೋ, (ಅಂತಹ ಶ್ರೀಹರಿಯಿಂದ ಪುನಃ ಜ್ಞಾನವಿಶೇಷವನ್ನು ಹೊಂದಿದನು, ॥ ೫ ॥

ಮೂ ॥ ವ್ಯಾಸಾದವಾಪ ಪತವಾತ್ಮ ಸು (ಸ) ತತ್ತ್ವವಿದ್ಯಾಂ
ಧರ್ಮಾತ್ಮಜೋಽಪಿ ಸತತಂ ಭಗವತ್ಪಪನ್ನಾಃ ।
ತೇ ಪಂಚ ಪಾಂಡುತನಯಾ ಮುಮುಮುರ್ನಿತಾಂತಂ
ಸದ್ಧರ್ಮಚಾರಿಣ ಉರುಕ್ರಮಶಿಕ್ಷಿತಾರ್ಥಾಃ ॥ ೬ ॥

ಅ ॥ ಯಾವಾಗಲೂ ಶ್ರೀಹರಿಯಂನ್ನು ಶರಣಾಗತನನ್ನಾಗಿ ಹೊಂದಿದ ಧರ್ಮರಾಜನೂ ಕೂಡ ವೇದವ್ಯಾಸದೇವರದೆಸೆಯಿಂದ ಶ್ರೀಪರವಾತ್ಮನ ಪರತತ್ತ್ವವಿದ್ಯೆಯಂನ್ನು ಹೊಂದಿದನಂ ಉತ್ಕೃಷ್ಟವಾದ ಕ್ರಮಂಗಳಂಳ್ಳ ವ್ಯಾಸಕೃಷ್ಣರಿಂದ ಶಿಕ್ಷಿತಗಳಾದ ಧರ್ಮಾದಿ ಪುರಂಷಾರ್ಥಗಳಂಳ್ಳ

ಭಗವದ್ಧರ್ಮವನ್ನೇ ಆಚರಿಸುವ ಸ್ವಭಾವವುಳ್ಳ ಶ್ರೀಹರಿಯನ್ನು ಶರಣಾಗತನನ್ನಾಗಿ ಹೊಂದಿರುವ ಆ ಐವರು ಪಾಂಡವರೂ ಕೂಡ ಅತ್ಯಂತವಾಗಿ ಸಂತೋಷಪಟ್ಟರು. ॥ ೬ ॥

ಮೂ ॥ ಯದಾ ಭರದ್ವಾಜಸುತಸ್ತ್ವಸಂಚಯಾ
ಪ್ರತಿಗ್ರಹೋಜ್ಝೋ ನಿಜಧರ್ಮವರ್ತೀ ।
ದ್ರೌಣಿಸ್ತದಾ ಧಾರ್ತರಾಷ್ಟ್ರೈಃ ಸಮೇತ್ಯ
ಕ್ರೀಡನ್ ಪಯಃ ಪಾತುಮುಪೈತಿ ಸದ್ಮ ॥ ೭ ॥

ಅ॥ ಯಾವಾಗ ಭರದ್ವಾಜಋಷಿಯ ಮಗನಾದ ದ್ರೋಣಾಚಾರ್ಯರು ತನ್ನ ಆಶ್ರಮಕ್ಕೆ ಯೋಗ್ಯವಾದ ಧರ್ಮದಲ್ಲಿಯೇ ಇರತಕ್ಕವರಾಗಿ ಪ್ರತಿಗ್ರಹವನ್ನು ಬಿಟ್ಟವರಾಗಿ ಪಶು ದ್ರವ್ಯಾದಿಗಳನ್ನು ಸಂಗ್ರಹಿಸದೆ ಇರುವವರಾಗಿ ಇರುತ್ತಿದ್ದರೋ ಆಗ ದ್ರೋಣಾಚಾರ್ಯರ ಪುತ್ರರಾದ ಅಶ್ವತ್ಥಾಮಾಚಾರ್ಯರು ಕೌರವರಿಂದ ಕೂಡಿಕೊಂಡು ಆಡುತ್ತಾ ಹಾಲನ್ನು ಕುಡಿಯುವದಕ್ಕಾಗಿ ತನ್ನ ಮನೆಯನ್ನು ಕುರಿತು ಹೋಗುತ್ತಾರೆ. ॥ ೭ ॥

ಮೂ ॥ ತಸ್ಮೈ ಮಾತಾ ಪಿಷ್ಟಮಾಲೋಡ್ಯ ಪಾತುಂ
ದದಾತಿ ಪೀತ್ವೈತಿ ತದೈ (ದೇ) ಷ ನಿತ್ಯಂ ।
ಪೀತಕ್ಷೀರಾನ್ ಧಾರ್ತರಾಷ್ಟ್ರಾನ್ ಸಮೇ (ಚೈ) ತ್ಯ
ಮಯಾ ಪೀತಂ ಕ್ಷೀರಮಿತ್ಯಾಹ ನಿತ್ಯಂ ॥ ೮ ॥

ಅ॥ ತಾಯಿಯಾದ ಕೃಪಿಯು ಆ ಅಶ್ವತ್ಥಾಮನಿಗೋಸ್ಕರ ಹಿಟ್ಟನ್ನು (ಜಲದಿಂದ) ಕಲಡಿಸಿ ಕುಡಿಯುವದಕ್ಕಾಗಿ ಕೊಡುತ್ತಾಳೆ. ಈ ಅಶ್ವತ್ಥಾಮನು ಆ ಪಿಷ್ಟಜಲವನ್ನು ನಿತ್ಯದಲ್ಲಿಯೂ ಕುಡಿದು (ಕ್ರೀಡಾಸ್ಥಾನವನ್ನು ಕುರಿತು) ಬರುತ್ತಾನೆ. ಆ ಅಶ್ವತ್ಥಾಮನು ಕುಡಿಯುವ ಪಿಷ್ಟಜಲಕ್ಕೆ ದುರ್ಯೋಧನಾದಿಗಳನ್ನು ಹೊಂದಿ ನನ್ನಿಂದ ಹಾಲು ಕುಡಿಯಲ್ಪಟ್ಟಿತು, ಹೀಗೆ ನಿತ್ಯದಲ್ಲಿಯೂ ಹೇಳುತ್ತಾನೆ. ॥ ೮ ॥

ಮೂ ॥ ನೃತ್ಯಂತಮೇನಂ ಪಾಯಯಾಮಾಸುರೇತೇ
ಪಯಃ ಕದಾಚಿದ್ರಸಮಸ್ಯ ಸೋಽನ್ಯೈ (ನ್ಯೇ) ತ್ ।
ಪುನಃ ಕದಾಚಿತ್ ಸ ತು ಮಾತೃದತ್ತೇ
ಪಿಷ್ಟೇ ನೇದಂ ಕ್ಷೀರಮಿತ್ಯಾರುರಾವ ॥ ೯ ॥

ಅ॥ ಈ ಕೌರವರು ನರ್ತನ ಮಾಡುತ್ತಿರುವ ಈ ಅಶ್ವತ್ಥಾಮನನ್ನು ಒಂದಾನೊಂದು ದಿವಸ ಹಾಲನ್ನು ಕುಡಿಸಿದರು. ಆ ಅಶ್ವತ್ಥಾಮನು ಕ್ಷೀರದ ಈ ವಿಶದವೆನ್ನುವ ಮಾಧುರ್ಯರಸವನ್ನು ತಿಳಿದನು. ಆವೇಳೆ ಒಂದಾನೊಂದು ದಿನದಲ್ಲಿ ಹಿಟ್ಟಿನ ನೀರು ತಾಯಿಯಿಂದ ಕೊಡಲ್ಪಡುತ್ತಿರಲು ಆ ಅಶ್ವತ್ಥಾಮನು (ಎಲೋ ತಾಯಿಯೇ) ನೀನು ಕೊಟ್ಟದ್ದು ಹಾಲಲ್ಲ, ಎಂದು ಕೂಗಿದನು. ॥ ೯ ॥

ಮೂ ॥ ದೃಷ್ಟ್ವಾ ರುವಂತಂ ಸುತಮಾತ್ಮಜಸ್ಯ
ಸ್ನೇಹಾನ್ನಿಯತ್ಯೈವ ಜನಾರ್ದನಸ್ಯ ।

ಸಂಪ್ರೇರಿತಃ ಕೃಪಯಾ ಚಾರ್ತರೂಪೋ
ದ್ರೋಣೋ ಯಯಾವಾರ್ಜಯಿತುಂ ತದಾ ಗಾಂ ॥ ೧೦ ॥

ಅ॥ ಅಳಂತಿರುವ ತನ್ನ ಮಗನನ್ನು ನೋಡಿ ಶ್ರೀಕೃಷ್ಣನ ಪ್ರೇರಣೆಯಿಂದಲೇ ಉಂಟಾದ ಪುತ್ರಸ್ನೇಹದಿಂದಲೂ ಶ್ರೀಕೃಷ್ಣನ ಪ್ರೇರಣೆಯಿಂದಂಟಾದ ಕೃಪೆಯಿಂದಲೂ ಪ್ರೇರಿಸಿಕೊಳ್ಳಲ್ಪಟ್ಟ ದ್ರೋಣಾಚಾರ್ಯರು (ಮಗನು ಅತ್ತದ್ದರಿಂದ) ದುಃಖಿತವಾದ ಮನಸ್ಸುಳ್ಳವರಾಗಿ ಅಥವಾ ಪ್ರಾಪ್ತವಾದ ಪ್ರತಿಗ್ರಹದಿಂದ ದುಃಖಿತ ಸ್ವರೂಪವುಳ್ಳವರಾಗಿ ಆಗ ಗೋವನ್ನು ಸಂಪಾದಿಸುವ ದಕ್ಕಾಗಿ ಹೊರಟುಹೋದರು. ॥ ೧೦ ॥

ಮೂ ॥ ಪ್ರತಿಗ್ರಹಾತ್ ಸನ್ನಿವೃತ್ತಃ ಸ ರಾಮಂ
ಯಯೌ ನ ವಿಷ್ಣೋರ್ಹಿ ಭವೇತ್ ಪ್ರತಿಗ್ರಹಃ ।
ದೋಷಾಯ ಯಸ್ಮಾತ್ ಸ ಪಿತಾಖಿಲಸ್ಯ
ಸ್ವಾವಿಶಾ ಗುರುಃ ಪರಮಂ ದೈವತಂ ಚ ॥ ೧೧ ॥

ಅ ॥ ಪ್ರತಿಗ್ರಹದಿಂದ ಚೆನ್ನಾಗಿ ಹೊರಟುಹೋದ ಆ ದ್ರೋಣಾಚಾರ್ಯರು ಪರಶು ರಾಮದೇವರನ್ನು ಕುರಿತು (ದನವನ್ನು ಬೇಡುವುದಕ್ಕಾಗಿ) ಹೊರಟುಹೋದರು, ಏಕೆಂದರೆ ಶ್ರೇಷ್ಠರಾತ್ಮನದೆಸೆಯಿಂದ ಪ್ರತಿಗ್ರಹವು ದೋಷಕ್ಕಾಗಿ ಆಗುವುದಿಲ್ಲವಷ್ಟೆ, ಯಾವ ಕಾರಣ ದಿಂದ ಆ ವಿಷ್ಣುವು ಎಲ್ಲಾ ಜಗತ್ತಿಗೂ ತಂದೆಯು, ಸರ್ವಸ್ವಾಮಿಯು, ಸರ್ವರಿಗೂ ಜ್ಞಾನೋ ಪದೇಶಕನು, ಉತ್ಕೃಷ್ಟ ದೇವತೆಯು. ॥ ೧೧ ॥

ಮೂ ॥ ದೃಷ್ಟ್ವಾ ಚೈ (ಷ್ಟ್ವಾ ಚೈ)ನಂ ಜಾಮದಗ್ನ್ಯೋಽಪ್ಯಚಿಂತಯತ್
ದ್ರೋಣಂ ಕರ್ತುಂ ಕ್ಷಿತಿಭಾರಾಪನೋದೇ ।
ಹೇತುಂ ಸುರಾಣಾಂ ನರಯೋನಿಜಾನಾಂ
ಹಂತಾ ಚಾಯಂ ಸ್ಯಾತ್ ಸಹ ಪುತ್ರೇಣ ಚೇತಿ ॥ ೧೨ ॥

ಅ॥ ಈ ಪರಶುರಾಮನೂ ಕೂಡ ಈ ದ್ರೋಣಾಚಾರ್ಯರನ್ನು ನೋಡಿ ಭೂಮಿಗೆ ಭಾರ ಭೂತರಾದ ದೈತ್ಯಾದಿಗಳ ಸಂಹಾರ ವಿಷಯದಲ್ಲಿ ನಿಮಿತ್ತ ಕಾರಣನನ್ನಾಗಿಯೇ (ಸಂಹಾರಕರ್ಮ ದಲ್ಲಿ ಮುಖ್ಯಕರ್ತನು ತಾನೇ) ಮಾಡುವದಕ್ಕಾಗಿ ಆಲೋಚಿಸಿದನು, ಮನುಷ್ಯರಲ್ಲಿ ಅವತಾರ ಮಾಡಿದ ದೇವತೆಗಳಿಗೆ ಈ ದ್ರೋಣಾಚಾರ್ಯರು ಮಗನಾದ ಅಶ್ವತ್ಥಾಮಾಚಾರ್ಯರಿಂದ ಕೂಡಿಕೊಂಡು ಸಂಹಾರಕನು ಆಗಲಿ. ॥ ೧೨ ॥

ಹಾಗಾದರೆ ದೇವತೆಗಳನ್ನು ರಕ್ಷಿಸುವುದಕ್ಕಾಗಿ ಅವತಾರ ಮಾಡಿದ ಪರಶುರಾಮದೇವರು ದೇವತೆಗಳ ಸಂಹಾರವನ್ನು ಏಕೆ ಆಲೋಚಿಸಿದರು ಎಂದರೆ—

ಮೂ ॥ ತೇಷಾಂ ವೃದ್ಧಿಃ ಸ್ಯಾತ್ ಪಾಂಡವಾರ್ಥೇ ಹತಾನಾಂ
ಮೋಕ್ಷೋಽಪಿ ಸೌಖ್ಯಸ್ಯ ನ ಸಂತತಿಶ್ಚ ।
ಯೋಗ್ಯಾ ಸುರಾಣಾಂ ಕಲಿಜಾ ಸುಪಾಪಾಃ
ಪ್ರಾಯೋ ಯಸ್ಮಾತ್ ಕಲಿಜಾಃ ಸಂಭವಂತಿ ॥ ೧೩ ॥

ಅ ॥ ಪಾಂಡವರಿಗೋಸ್ಕರ ಸಂಹರಿಸಿಕೊಳ್ಳಲ್ಪಟ್ಟ ದೇವತೆಗಳ ಅವತಾರಭೂತರಾದವರಿಗೆ (ಪಾಂಡವರಿಗೆ ಸಹಾಯವನ್ನು ಮಾಡದೇನೇ ಇರುವ) ಸ್ವಸಮಾನರಾದ ದೇವತೆಗಳದೆಸೆಯಿಂದ ಸಂಸಾರಾವಸ್ಥೆಯಲ್ಲಿ ಸಂಖ್ಯಾತಿಶಯವಾಗುವದು. ಮುಂಕ್ತಿಯಲ್ಲಿಯೂ ಕೂಡ ಸೌಖ್ಯಕ್ಕೆ ಅತಿಶಯವಾಗುವದು, ದೇವತೆಗಳಿಗೆ ಕಲಿಯಿಂದ ಹುಟ್ಟಿದ ಸಂತತಿಯು ಯೋಗ್ಯವಾಗುವದಿಲ್ಲ. ಪ್ರಾಯಶಃ ಕಲಿಯುಗದಲ್ಲಿ ಹುಟ್ಟಿದ ಜೀವರು ಅತ್ಯಂತ ಪಾಪಿಷ್ಠರಾಗಿಯೇ ಹುಟ್ಟುತ್ತಾರೋ, (ಆದಕಾರಣ ಯೋಗ್ಯವಲ್ಲ.) ॥ ೧೩ ॥

ಕಲಿಯುಗದಲ್ಲಿ ಹುಟ್ಟಿದ ದೇವತೆಗಳ ಸಂತಾನದಲ್ಲಿ ಹುಟ್ಟಿದವರು ಅತ್ಯಂತ ಪಾಪಿಷ್ಠರಾಗಲೀ ಅದರಿಂದ ಪ್ರಕೃತಕ್ಕೆ ಏನಾಯ್ತು—

ಮೂ ॥ ನ ದೇವಾನಾಮಾಶತಂ ಪೂರುಷಾ ಹಿ
ಸಂತಾನಜಾಃ ಪ್ರಾಯಶಃ ಪಾಪಯೋಗ್ಯಾಃ ।
ನಾಕಾರಣಾತ್ ಸಂತತೇರಪ್ಯಭಾವೋ
ಯೋಗ್ಯಃ ಸುರಾಣಾಂ ಸದವೋಘರೇತಸಾಂ ॥ ೧೪ ॥

ಅ॥ ದೇವತೆಗಳ ವಂಶದಲ್ಲಿ ಹುಟ್ಟಿದ ಪುರುಷರು ನೂರು ಸಂತಾನ ಪರ್ಯಂತರವಾಗಿ ಪ್ರಾಯಃಶಃ ಪಾಪ ಯೋಗ್ಯರಾಗುವುದಿಲ್ಲ. (ಕಾರಣವಿಲ್ಲದೆ ತನ್ನಷ್ಟಕ್ಕೇನೇ ಸಂತಾನವು ನಷ್ಟವಾಗಬೇಕಾಗುವದು ಎಂದರೆ) ನಿರ್ದುಷ್ಟವಾದ ವ್ಯರ್ಥವಾಗದೇನೇ ಇರುವ ರೇತಸ್ಸುಸ್ಸ ದೇವತೆಗಳ ಸಂತಾನದ ಅಭಾವವೂ ಕೂಡ ಶಾಪರೂಪವಾದ ಅಕಾರಣವಿಲ್ಲದೆ ಯೋಗ್ಯವಾಗಲಾರದು. ॥ ೧೪ ॥

ಹಾಗೆಯೇ ಆಗಲಿ ಎಂದರೆ, ಬಾಧಕವನ್ನು ಹೇಳುತ್ತಾ ಉಪಸಂಹಾರ ಮಾಡುತ್ತಾರೆ—

ಮೂ ॥ ಅವ್ಯುಚ್ಛಿನ್ನೇ ಸಕಲಾನಾಂ ಸುರಾಣಾಂ
ತಂತೌ ಕಲಿನೋರ್ವೀ ಭವಿತಾ ಕಥಂಚಿತ್ ।
ತಸ್ಮಾ ದುತ್ಪಾದ್ಯಾಃ ಸರ್ವ ಏತೇ ಸುರಾಂಶಾ
ಏತೇನ ಸಾಕಂ ತನಯೇನ ವೀರಾಃ ॥ ೧೫ ॥

ಅ ॥ ಎಲ್ಲಾ ದೇವತೆಗಳ ವಂಶವು ನಾಶವಾಗದೆ ಇರುತ್ತಿರಲು ಯಾವ ರೀತಿಯಿಂದಲೂ ಕಲಿಕಾಲ ವ್ಯಾಪಾರವು ಆಗಲಾರದು. (ಹಂತಾಚಾಯಂ ಸ್ಯಾತ್, ಎಂದು ಹೇಳಿದ ಅರ್ಥವನ್ನು ಉಪಸಂಹಾರ ಮಾಡುತ್ತಾರೆ.) ಆದಕಾರಣ, ಮಗನಾದ ಅಶ್ವತ್ಥಾಮನಿಂದ ಕೂಡಿಕೊಂಡು ಈ ದ್ರೋಣಾಚಾರ್ಯರಿಂದ ಭೂಮಿಯಲ್ಲಿ ಅವತಾರ ಮಾಡಿದ ಪರಾಕ್ರಮಶಾಲಿಗಳಾದವರೆಲ್ಲರೂ ನಾಶಪಡಿಸಲಿಕ್ಕೆ ಅರ್ಹರೇ ಆಗಿರುತ್ತಾರೆ. ॥ ೧೫ ॥

ಮೂ ॥ ಏವಂ ವಿಚಿಂತ್ಯಾಪ್ರತಿಮಃ ಸ ಭಾರ್ಗವೋ
ಬಭಾಷ ಈಷತ್ಸ್ಮಿತಶೋಚಿಷಾ ಗಿರಾ ।
ಅನಂತಶಕ್ತಿಃ ಸಕಲೇಶ್ವರೋಽಪಿ
ತ್ಯಕ್ತಂ ಸರ್ವಂ ನಾದ್ಯ ವಿತ್ತಂ ಮಮಾಸ್ತಿ ॥ ೧೬ ॥

ಅ॥ ಸಂಪೂರ್ಣವಾಗಿ ತಿಳಿಯಲಿಕ್ಕೆ ಅಶಕ್ಯರಾದ ಆ ಪರಶುರಾಮದೇವರು ಹಿಂದೆ ಹೇಳಿದ ಪ್ರಕಾರ ಆಲೋಚಿಸಿ ಮಂದಹಾಸದಿಂದಲಂಟಾದ ಕಾಂತಿಯುಳ್ಳ ಮಾತಿನಿಂದ ಹೇಳಿದರೂ, ಆ ಪರಶುರಾಮದೇವರು ಅಪರಿಮಿತ ಶಕ್ತಿವುಳ್ಳವರಾದಾಗ್ಯೂ ಸರ್ವರಿಗೂ ಸ್ವಾಮಿಯಾದಾಗ್ಯೂ (ನನ್ನಿಂದ) ಎಲ್ಲವೂ ಬಿಡಲ್ಪಟ್ಟಿದೆ, ಈಗ ನನಗೆ ಸಾಧ್ಯವಿಲ್ಲ, (ಎಂದು ಹೇಳಿದರು.) ॥ ೧೬ ॥

ಹಾಗಾದರೆ ಯಾವುದು ಇದೆ ಎಂದರೆ—

ಮೂ ॥ ಆತ್ಮಾವಿದ್ಯಾ ಶಸ್ತ್ರಮೇತಾವದಸ್ತಿ
ತೇಷಾಂ ಮಧ್ಯೇ ರುಚಿತಂ ತ್ವಂ ಗೃಹಾಣ ।
ಉಕ್ತಃ ಸ ಇತ್ಥಂ ಪ್ರವಿಚಿಂತ್ಯ ವಿಪ್ರೋ
ಜಗಾದ ಕಸ್ತ್ವದ್‌ಗ್ರಹಣೇ ಸಮರ್ಥಃ ॥ ೧೭ ॥

ಅ॥ ತಾನು, ತತ್ವ ವಿದ್ಯೆಯು, ಪರಶು ಶಾರ್ಂಗ ಮೊದಲಾದ ಆಯುಂಧವು ಇಷ್ಟವಾತ್ರ ವಿದೆ. ಆ ಮೂರು ವಸ್ತುಗಳ ಮಧ್ಯದಲ್ಲಿ ನೀನು ಇಷ್ಟವಾದುದನ್ನು ತೆಗೆದುಕೋ, ಈ ಪ್ರಕಾರವಾಗಿ (ಪರಶುರಾಮ ದೇವರಿಂದ) ಹೇಳಿಸಿಕೊಳ್ಳಲ್ಪಟ್ಟ ಆ ದ್ರೋಣಾಚಾರ್ಯರು ಚೆನ್ನಾಗಿ ವಿಚಾರವಾಡಿ (ಎಲೋ ಶ್ರೀಹರಿಯೇ) ನಿನ್ನನ್ನು ಭೃತ್ಯನನ್ನಾಗಿ ಸ್ವೀಕರಿಸುವ ವಿಷಯದಲ್ಲಿ ಯಾರು ಸಮರ್ಥನು? (ಯಾರೂ ಸಮರ್ಥರಾಗಲಾರರು) ಈ ಪ್ರಕಾರ ಹೇಳಿದರು. ॥ ೧೭ ॥

ನಿನ್ನನ್ನು ಸ್ವೀಕರಿಸುವ ವಿಷಯದಲ್ಲಿ ಯಾರು ಸಮರ್ಥನು ಎಂದು ಹೇಳಲಿಕ್ಕೆ ಕಾರಣವೇನೆಂದರೆ ನಿನ್ನಿಂದ ಉತ್ತಮನು ಯಾರಾದರೂ ಇರುತ್ತಿದ್ದರೆ ಅದು ಕೂಡುತ್ತಿತ್ತು. ಉತ್ತಮನೇ ಇಲ್ಲ ಎಂದು ಹೇಳುತ್ತಾರೆ—

ಮೂ ॥ ಸರ್ವೇಶಿತಾ ಸರ್ವಪರಃ ಸ್ವತಂತ್ರ-
ಸ್ತ್ವಮೇಪ ಕೋಽನ್ಯಃ ಸದೃಕಸ್ತವೇಶ ।
ಸಾ (ಸ್ವಾ) ವ್ಯಂ ತವೇಚ್ಛಾನ್ ಪ್ರತಿಯಾತ್ಯಧೋ ಹಿ
ಯಸ್ಮಾನ್ನ ಚೋತ್ಥಾಶುಮಲಂ ಕದಾಚಿತ್ ॥ ೧೮ ॥

ಅ॥ ಹೇ ಈಶನೇ ನೀನು ಎಲ್ಲರಿಗೂ ಸ್ವಾಮಿಯು, ಸರ್ವರಿಂದಲೂ ಉತ್ಕೃಷ್ಟನು, ನೀನೇ ಸರ್ವಸ್ವತಂತ್ರನು. ನಿನಗೆ ಸದೃಶನು ಮತ್ತೊಬ್ಬ ಪುರುಷನು ಯಾರು ಇದ್ದಾನೆ, (ಯಾರೂ ಇಲ್ಲ) ನಿನ್ನ ಸಾಮ್ಯವನ್ನು ಅಥವಾ ನಿನಗೆ ಸ್ವಾಮಿತ್ವವನ್ನು ಇಚ್ಛಿಸತಕ್ಕವನು ಅಂಧಂತಮಸ್ಸನ್ನು ಯಾವ ಕಾರಣದಿಂದ ಹೊಂದುತ್ತಾನೋ ಮತ್ತು (ಅಧೋಲೋಕದಲ್ಲಿ ಇರತಕ್ಕವರಿಂದ) ಏಳಲಿಕ್ಕೆ ಯಾವಾಗಲೂ ಸಮರ್ಥರಾಗುವುದಿಲ್ಲವೋ (ಆದಕಾರಣ ಅಂಧಂತಮಸ್ಸಿಗೆ ಹೋದವರಿಗೆ ಪುನರಾವೃತ್ತಿಯು ಇಲ್ಲವೇ ಇಲ್ಲ.) ॥ ೧೮ ॥

ಮೂ ॥ ಸರ್ವೋತ್ತಮಸ್ಯೇಶ ತವೋಚ್ಚಶಸ್ತ್ರೈಃ
ಕಾರ್ಯಂ ಕಿಮುಸ್ಮಾತ್ಕಮನುದ್ಭಲಾನಾಂ ।
ವಿದ್ಯೈವ ದೇಯಾ ಭವತಾ ತತೋಽಜ
ಸರ್ವಪ್ರಕಾಶಿನ್ಯಮು(ಚ)ಲಾ ಸುಸೂಕ್ಷ್ಮಾ ॥ ೧೯ ॥

ಅ॥ ಸರ್ವಸ್ವತಂತ್ರನೇ ಸಾಮರ್ಥ್ಯವಿಲ್ಲದೇನೇ ಇರಂವ ನವಂಗೆ ಸರ್ವೋತ್ತಮನಾದ ನಿನ್ನ ಉತ್ಕೃಷ್ಟಗಳಾದ ಶಸ್ತ್ರಗಳಿಂದ ಏನು ಪ್ರಯೋಜನವು. ಆ ಕಾರಣ, ಎಲೋ ಉತ್ಪತ್ತಿರಹಿತನೇ ತವಿಂದ ಅತೀಂದ್ರಿಯಾದಿ ಪದಾರ್ಥಗಳನ್ನು ವಿಷಯಿಕರಿಸತಕ್ಕ ದೋಷಲೇಶರಹಿತವಾದ ಅತಿ ಸೂಕ್ಷ್ಮಾರ್ಥ ಪರಬ್ರಹ್ಮನನ್ನು ಪ್ರತಿಪಾದಿಸತಕ್ಕ ತತ್ವವಿದ್ಯೆಯೇ ಕೊಡಲಹರ್ವು. ॥ ೧೯ ॥

ಮೂ ॥ ಇತೀರಿತಸ್ತತ್ತ್ವವಿದ್ಯಾದಿಕಾಃ ಸ
ವಿದ್ಯಾಃ ಸರ್ವಾಃ ಪ್ರದದೌ ಶಾಸ್ತ್ರಶಸ್ತ್ರಾಃ।
ಅಬ್ದದ್ವಿಷಟ್ಕೇನ ಸವಾಪ್ಯ ತಾಃ ಸ
ಯಯೌ ಸಖಾಯಂ ದ್ರುಪದಂ ಮಹಾತ್ಮಾ ॥ ೨೦ ॥

ಅ॥ ಈ ಪ್ರಕಾರವಾಗಿ (ದ್ರೋಣಾಚಾರ್ಯರಿಂದ) ಹೇಳಿಸಿಕೊಳ್ಳಲ್ಪಟ್ಟ ಆ ಪರಶುರಾವಂ ದೇವರ ಅಸ್ತ್ರವಿದ್ಯೆಯುಂ ಶಸ್ತ್ರವಿದ್ಯೆಯುಂ ಇವುಗಳಿಂದ ಕೂಡಿದ ಪರತತ್ವವಿದ್ಯೆಯೇ ಮೊದಲಾಗಿ ಉಳ್ಳ ಎಲ್ಲಾ ವಿದ್ಯೆಗಳನ್ನು (ಅಂದರೆ ನೀತಿ ಸ್ತಂಭೋಚ್ಚಾಟನಾದಿ ವಿದ್ಯೆಗಳನ್ನು) ಉಪದೇಶ ಕೊಟ್ಟರುಂ. ಮಹಾನುಭಾವರಾದ ಆ ದ್ರೋಣಾಚಾರ್ಯರುಂ ಹನ್ನೆರಡುಂ ವರ್ಷಗಳಿಂದ ಆ ವಿದ್ಯೆಗಳನ್ನು ಸವಾಪಿಸಿ ಸಖಿಯಾದ ದ್ರುಪದರಾಜನನ್ನು ಕುರಿತು ಹೋದರುಂ. ॥ ೨೦ ॥

ಮೂ ॥ ದಾನೇಽರ್ಧರಾಜ್ಯಸ್ಯ ಹಿ ತತ್ಪ್ರತಿಜ್ಞಾಂ
ಸಂಸ್ಮೃತ್ಯ ಪೂರ್ವಮುಪಯಾತಂ ಸಖಾಯಂ।
ಸಖಾ ತವಾಸ್ಮೀತಿ ತದೋದಿತೋಽಪಿ
ಜಗಾದ ವಾಕ್ಯಂ ದ್ರುಪದೋಽತಿದರ್ಪಾತ್ ॥ ೨೧ ॥

ಅ॥ ಅರ್ಧ ರಾಜ್ಯವನ್ನ ಕೊಡುವ ವಿಷಯದಲ್ಲಿ (ನಮ್ಮಿಬ್ಬರಿಗೆ ಒಟ್ಟಿಗೆ ರಾಜ್ಯವಿರಲಿ, ಎಂದುಂ ತನಗೋಸ್ಕರ) ಪೂರ್ವದಲ್ಲಿ ಮಾಡಲ್ಪಟ್ಟ ದ್ರುಪದರಾಜನ ಪ್ರತಿಜ್ಞೆಯನ್ನು ಚೆನ್ನಾಗಿ ಸ್ಮರಿಸಿಕೊಂಡುಂ ಬಂದಿರತಕ್ಕ ಮಿತ್ರರಾದ ದ್ರೋಣಾಚಾರ್ಯರನ್ನು ಕುರಿತುಂ (ಎಲೋ ದ್ರುಪದ ರಾಜನೇ) ನಾನುಂ ನಿನಗೆ ಸಖಿಯಾಗಿರುತ್ತೇನೆ. ಈ ಪ್ರಕಾರವಾಗಿ ದ್ರುಪದರಾಜನುಂ ಆಗ ದ್ರೋಣಾಚಾರ್ಯರಿಂದ ಹೇಳಿಸಿಕೊಳ್ಳಲ್ಪಟ್ಟನುಂ. ಅತಿ ಗರ್ವದಿಂದ ಮಾತನ್ನು ಹೇಳಿದನುಂ. ॥ ೨೧ ॥

ಏನುಂ ಹೇಳಿದನುಂ ಎಂದರೆ—

ಮೂ ॥ ನ ನಿರ್ಧನೋ ರಾಜಸಖೋ ಭವೇತ
ಯುಧೇಷ್ಟತೋ ವಿಪ್ರ ಗಚ್ಛೇ(ಗಚ್ಛ ವಿಪ್ರೇ)ತಿ ದೈನಾತ್।
ಇತೀರಿತೇಽ(ತ)ಸ್ಯಾಶು ಬಭೂವ ಕೋಪೋ
ಜಿತೇಂದ್ರಿಯಸ್ಯಾಪಿ ಮುನೇರ್ಹರೀಚ್ಛಯಾ ॥ ೨೨ ॥

ಅ॥ ಎಲೋ ಬ್ರಾಹ್ಮಣನೇ ದರಿದ್ರನುಂ ರಾಜನಿಗೆ ಮಿತ್ರನುಂ ಆಗಲಾರನುಂ; ತನ್ನ ಇಚ್ಛೆಯಿಂದಲೇ ಹೋಗುಂ ಈ ಪ್ರಕಾರವಾಗಿ (ದ್ರುಪದರಾಜನಿಂದ) ಹೇಳಿಸಿಕೊಳ್ಳಲ್ಪಡುತ್ತಿರಲುಂ

ಜಿತೇಂದ್ರಿಯನಾದಾಗ್ಯೂ ಈ ದ್ರೋಣಾಚಾರ್ಯರಿಗೆ ದೈವೇಚ್ಛೆಯಿಂದ ತತ್‌ಕ್ಷಣದಲ್ಲಿ ಕೋಪವು ಹುಟ್ಟಿತು. ॥ ೨೨ ॥

ಕೋಪ ಪ್ರಕಾರವನ್ನು ತೋರಿಸುತ್ತಾರೆ—

ಮೂ ॥ ಪ್ರತಿಗ್ರಹಾತ್ ಸನ್ನಿವೃತ್ತೇನ ಸೋಽಯಂ
ಮಯಾ ಪ್ರಾಪ್ತೋ ಮತ್ಪಿತುಃ ಶಿಷ್ಯಕತ್ವಾತ್ ।
ಪಿತುಃ ಶಿಷ್ಯೋ ಹ್ಯಾತ್ಮ ಶಿಷ್ಯೋ ಭವೇತ
ಶಿಷ್ಯಸ್ಯಾರ್ಥಃ ಸ್ವೀಯ ಏವೇತಿ ಮತ್ವಾ ॥ ೨೩ ॥

ಅ॥ ತಂದೆಯಂ ಶಿಷ್ಯನು ತನಗೂ ಶಿಷ್ಯನಾಗುವನು; ಶಿಷ್ಯನ ದ್ರವ್ಯವು ತನ್ನದ್ದೇ; (ಶಿಷ್ಯನ ಹತ್ತಿರ ತೆಗೆದುಕೊಳ್ಳುವದು ದೋಷಾಧಾಯಕವಾಗುವದಿಲ್ಲ.) ಹೀಗೆ ತಿಳಿದುಕೊಂಡು ನನ್ನ ತಂದೆಯಾದ ಭರದ್ವಾಜನ ಶಿಷ್ಯನಾದ ಪ್ರಯುಕ್ತ ಪ್ರತಿಗ್ರಹದಿಂದ ಚೆನ್ನಾಗಿ ಬಿಡಲ್ಪಟ್ಟ ನನ್ನಿಂದ ಆ ಈದಾವ ಶಿಷ್ಯಭೂತನಾದ ದ್ರುಪದರಾಜನು ಹೊಂದಲ್ಪಟ್ಟನು. ॥ ೨೩ ॥

ಮೂ ॥ ಸೋಽಯಂ ಪಾಪೋ ಮಾಮವಜ್ಞಾಯ ಮೂಢೋ
ದುಷ್ಟಂ ವಚೋಽಶ್ರಾವಯದಸ್ಯ ದರ್ಪಂ ।
ಹನಿಷ್ಯ ಇತ್ಯೇವ ಮತಿಂ ವಿ (ನಿ) ಧಾಯ
ಯಯೌ ಕುರೂನ್ ಶಿಷ್ಯತಾಂ ನೇತುಮೇತಾನ್ ॥ ೨೪ ॥

ಅ ॥ ಪಾಪಿಷ್ಠನಾದ ಮೂಢನಾದ ಆ ಈ ದ್ರುಪದರಾಜನು ನನ್ನನ್ನು ತಿರಸ್ಕರಿಸಿ ದುಷ್ಟವಾದ ಮಾತನ್ನು ಕೇಳಿಸಿದನು. ಈ ದ್ರುಪದರಾಜನ ದುರಹಂಕಾರವನ್ನು ನಾಶಮಾಡುವೆನು. ಈ ಪ್ರಕಾರವಾಗಿಯೇ ಬುದ್ಧಿಯನ್ನು ಮಾಡಿ ಈ ಕೌರವರನ್ನು ಶಿಷ್ಯತ್ವವನ್ನು ಹೊಂದಿಸುವುದಕ್ಕಾಗಿಯೇ ಕುರುದೇಶವನ್ನು ಕುರಿತು (ದ್ರೋಣಾಚಾರ್ಯರು) ಹೋದರು. ॥ ೨೪ ॥

ಮೂ ॥ ಪ್ರತಿಗ್ರಹಾದ್ವಿನಿವೃತ್ತಸ್ಯ ಚಾರ್ಥಃ
ಸ್ಯಾಚ್ಛಿಷ್ಯೇಭ್ಯಃ ಕೌರವೇಭ್ಯೋ ಮಮೇತ್ರ ।
ಏವಂ ಮನ್ವಾನಃ ಕ್ರೀಡತಃ ಪಾಂಡವೇಯಾನ್
ಸಧಾರ್ತರಾಷ್ಟ್ರಾನ್ ಪುರಬಾಹ್ಯತೋಽಖ್ಯ (ಸ್ಯ)ತ್ ॥ ೨೫ ॥

ಅ॥ ಪ್ರತಿಗ್ರಹದಿಂದ ಹೊರಟುಹೋದ ನನಗೆ ದ್ರುಪದನಿಗ್ರಹರೂಪವಾದ ಪ್ರಯೋಜನವು ದ್ರವ್ಯಾರ್ಥವೂ ಕೂಡ ಶಿಷ್ಯರಾದ ಕೌರವರಿಂದ ಆಗುವದು. ಈ ಪ್ರಕಾರವಾಗಿ ಮನಸ್ಸಿನಲ್ಲಿ ಆಲೋಚನೆ ಮಾಡುತ್ತಾ ದ್ರೋಣಾಚಾರ್ಯರು ಕುರುವಿಷಯವಾದ ಹಸ್ತಿನಾವತಿ ಪಟ್ಟಣದ ಬಾಹ್ಯಪ್ರದೇಶದಲ್ಲಿ ಆಡುತ್ತಿರುವ ಕೌರವರಿಂದ ಕೂಡಿದ ಪಾಂಡವರನ್ನು ನೋಡಿದರು. ॥ ೨೫ ॥

ಮೂ ॥ ವಿಕ್ರೀಡತೋ ಧರ್ಮಸೂನೋಸ್ತ ದೈವ
ಸಹಾಂಗುಲೀಯೇನ ಚ ಕಂದುಕೋಽಪತತ್ ।
ಕೂಪೇ ನ ಶೇಕುಃ ಸಹಿತಾಃ ಕುಮಾರಾ
ಉದ್ಧರ್ತುಮೇನ (ತ)ಂ ಪವನಾತ್ಮ ಜೋಽವದತ್ ॥ ೨೬ ॥

ಅ॥ ಆಡುತ್ತಿರುವ ಧರ್ಮರಾಜನ ಪ್ರಧಾನ ಮುದ್ರಾರೂಪವಾದ ಅಂಗುಲೀಯ ಭೂಷಣದಿಂದ ಕೂಡಿಕೊಂಡು ಚೆಂಡು ಆಡುವಾಗಲೆ ಬಾವಿಯಲ್ಲಿ ಬಿದ್ದಿತು. ಮಿಲಿತರಾದ ಎಲ್ಲಾ ಕುಮಾರರು ಈ ಕಂದುಕವನ್ನು ಎತ್ತಲಿಕ್ಕೆ ಯಾವಾಗ್ಗೆ ಸಮರ್ಥರಾಗಲಿಲ್ಲವೋ ಆವಾಗಲೇ ಭೀಮಸೇನನು ಹೇಳಿದನು. ॥ ೨೬ ॥

ಮೂ ॥ ನಿಷ್ಪತ್ಯ ಚೋದ್ಧೃತ್ಯ ಸಮುತ್ಪತಿಷ್ಯೇ
ಕೂಪಾದಮುಷ್ಮಾದ್ಭೃಶನೀಚಾದಪಿ ಸ್ಮ ।
ಸಕಂದುಕಾಂ ಮುದ್ರಿಕಾಂ ಪಶ್ಯತಾದ್ಯ
ಸರ್ವೇ ಕುಮಾರಾ ಇತಿ ವೀರ್ಯಸಂಶ್ರಯಾತ್ ॥ ೨೭ ॥

ಅ॥ ಎಲೋ ಕುಮಾರರೇ ನಾನು ತನ್ನ ವೀರ್ಯವನ್ನು ಆಶ್ರಯಿಸಿಕೊಂಡೇ ಬಾವಿಯಲ್ಲಿ ಮುಂಳುಗಿ ಚೆಂಡಿನಿಂದ ಸಹಿತವಾದ ಮುದ್ರಾಂಗುರವನ್ನು ಎತ್ತಿಕೊಂಡು ಅತ್ಯಂತವಾಗಿ ಆಳವಾದಾಗ್ಯೂ ಈ ಕೂಪದ್ದೆಸೆಯಿಂದ ಮೇಲಕ್ಕೆ ಬರುವೆನು. ನೀವೆಲ್ಲರೂ ಈಗ ನೋಡಿರಿ ಹೀಗೆ (ಭೀಮಸೇನನು) ಹೇಳಿದನು. ॥ ೨೭ ॥

ಮೂ ॥ ತದಾ ಕುಮಾರಾನವದತ್ಸ ವಿಪ್ರೋ
ಧಿಗಸ್ತ್ರಬಾಹ್ಯಾಂ ಭವತಾಂ ಪ್ರವೃತ್ತಿಂ ।
ಜಾತಾಃ ಕುಲೇ ಭಾ(ಭ)ರತಾನಾಂ ನ ವಿತ್ಥ
ದಿವ್ಯಾನಿ ಚಾಸ್ತ್ರಾಣಿ ಸುರಾರ್ಚಿತಾನಿ ॥ ೨೮ ॥

ಅ॥ ಆಗ ಆ ದ್ರೋಣಾಚಾರ್ಯರು ಮುಂತ್ರವಿಲ್ಲದೆ ಇರುವ ನಿಮ್ಮ ಪ್ರವೃತ್ತಿಯನ್ನು ನಿಂದಿಸಿದ್ದರು. ಭರತರಾಜರ ಕುಲದಲ್ಲಿ ಹುಟ್ಟಿದವರ ಕುಲದಲ್ಲಿ ಹುಟ್ಟಿರುವ ನೀವು ದಿವ್ಯಗಳಾದ ದೇವತೆಗಳಿಂದ ಪೂಜಿಸಿಕೊಳ್ಳಲ್ಪಡತಕ್ಕ ಅಸ್ತ್ರವಿದ್ಯೆಗಳನ್ನು ತಿಳಿಯಲಿಲ್ಲ. ಹೀಗೆ ಮುಕ್ಕಳನ್ನು ಕುರಿತು ಹೇಳಿದರು. ॥ ೨೮ ॥

ಮೂ ॥ ಇತೀರಿತಾ ಅಸ್ತ್ರವಿದಂ ಕುಮಾರಾ
ವಿಜ್ಞಾಯ ವಿಪ್ರಂ ಸುರಪೂಜ್ಯಪೌತ್ರಂ ।
ಸಂಪ್ರಾರ್ಥಯಾಮಾಸುರಥೋದ್ಧೃತಿಂ ಪ್ರತಿ
ಪ್ರಧಾನಮುದ್ರಾಯುತಕಂದುಕಸ್ಯ ॥ ೨೯ ॥

ಅ॥ ಈ ಪ್ರಕಾರವಾಗಿ (ದ್ರೋಣಾಚಾರ್ಯರಿಂದ) ಹೇಳಿಸಿಕೊಳ್ಳಲ್ಪಟ್ಟ ಕುಮಾರರು ದೇವತೆಗಳಿಂದ ಪೂಜ್ಯರಾದ ಬೃಹಸ್ಪತ್ಯಾಚಾರ್ಯರ ಮೊಮ್ಮಗನಾದ ದ್ರೋಣಾಚಾರ್ಯರನ್ನು ಅಸ್ತ್ರಜ್ಞರನ್ನಾಗಿ ತಿಳಿದು ಆಮೇಲೆ ಪ್ರಧಾನಮುದ್ರೆಯಿಂದ ಕೂಡಿದ ಚೆಂಡಿನ ಉದ್ಧರವನ್ನು ಕುರಿತು (ಅಂದರೆ ಎತ್ತಿ ನಮಗೆ ಕೊಡು) ಎಂದು ಚೆನ್ನಾಗಿ ಪ್ರಾರ್ಥಿಸಿದರು. ॥ ೨೯ ॥

ಮೂ ॥ ಸ ಚಾಶ್ವಿಷೀಕಾಭಿರಥೋತ್ತರೋತ್ತರಂ
ಸಂಪ್ರಾಸ್ಯ ದಿವ್ಯಾಸ್ತ್ರಬಲೇನ ಕಂದುಕಂ ।

ಉದ್ಧೃತ್ಯ ಮುದ್ರೋದ್ಧರಣಾರ್ಥಿನಃ ಪುನಃ
ಜಗಾದ ಭುಕ್ತಿರ್ಮಮ ಕಲ್ಪ್ಯತಾಮಿತಿ ॥ ೩೦ ॥

ಅ॥ ಆ ದ್ರೋಣಾಚಾರ್ಯರಂ ಮೇಲೆ ಮೇಲೆ ತೃಣವಿಶೇಷಗಳನ್ನು ಕೂಡಿಸಿ ದಿವ್ಯವಾದ ಅಸ್ತ್ರಬಲದಿಂದ ತೃಣವಿಶೇಷಗಳಿಂದ ಶೀಘ್ರದಲ್ಲಿ ಚಿಂಡನ್ನು ಎತ್ತಿ ಪ್ರಧಾನ ಮಂದ್ರಿಕೆಯನ್ನು ಎತ್ತುವದಕ್ಕಾಗಿ ಪ್ರಾರ್ಥಿಸಿದ ಕುಮಾರರನ್ನು ಕುರಿತು ನನಗೆ ಭೋಜನವೆನ್ನುವ ಜೀವನೋಪಾಯವು ಮಾಡಲ್ಪಡಲಿ ಎಂದು ಹೇಳಿದರು. ॥ ೩೦ ॥

ಮೂ ॥ ಯಥೇಷ್ಟವಿತ್ತಾಶನಪಾನಮಸ್ಯ
ಧರ್ಮಾತ್ಮಜಃ ಪ್ರತಿಜಜ್ಞೇ ಸುಶೀಘ್ರಂ ।
ತಥೈವ ತೇನೋದ್ಧೃತಮಂಗುಲೀಯಂ
ತ್ರಿವರ್ಗಮುಖ್ಯಾತ್ಮಜವಾಕ್ಯತೋಽನು ॥ ೩೧ ॥

ಅ॥ ಧರ್ಮರಾಜನು ಈ ದ್ರೋಣಾಚಾರ್ಯರಿಗೆ ಯಥೇಷ್ಟವಾಗಿ ದ್ರವ್ಯವೂ ಭೋಜನವು ಪಾನವೂ ಇವುಗಳನ್ನು ಅತಿಶೀಘ್ರದಲ್ಲಿ ಪ್ರತಿಜ್ಞೆ ಮಾಡಿದನು. ಅದೇ ರೀತಿಯಲಾಗಿ ಧರ್ಮಾರ್ಥ ಕಾಮಗಳೆನ್ನುವ ತ್ರಿವರ್ಗಗಳಲ್ಲಿ ಮುಂಖ್ಯವಾದ ಧರ್ಮನ ಮಗನಾದ ಯುಂದಿಷ್ಠರನ ವಾಕ್ಯವನ್ನು ಅನುಸರಿಸಿ ಆ ದ್ರೋಣಾಚಾರ್ಯರಿಂದ ಚಿಂಡಿನಂತೆಯೇ ಮುಂದ್ರಾಂಗುರವೂ ಎತ್ತಲ್ಪಟ್ಟಿತು. ॥ ೩೧ ॥

ಮೂ ॥ ಪಪ್ರಚ್ಛುರೇನಂ ಸಹಿತಾಃ ಕುಮಾರಾಃ
ಕೋಽಸೀತಿ ಸೋಽಪ್ಯಾಹ ಪಿತಾಮಹೋ ವಃ ।
ವಕ್ತೀತಿ ತೇ ದುದ್ರುವುರಾಶು ಭೀಷ್ಮಂ
ದ್ರೋಣೋಽಯಮೀತ್ಯೇವ ಸ ತಾಂಸ್ತದೋಚೇ ॥ ೩೨ ॥

ಅ॥ ವಿಲಿತರಾದ ಕುಮಾರರು ನೀನು ಯಾರು ಎಂದು ದ್ರೋಣಾಚಾರ್ಯರನ್ನು ಕುರಿತು ಕೇಳಿದರು. ಅವರಾದರೂ ನಿಮಗೆ ಅಜ್ಜನಾದ ಭೀಷ್ಮಾಚಾರ್ಯರು ನನ್ನನ್ನು ಹೇಳುವರು, ಎಂದು ಹೇಳಿದರು. ಆ ಕುಮಾರರು ಶೀಘ್ರದಲ್ಲಿ ಭೀಷ್ಮಾಚಾರ್ಯರ ಸವಿುಾಪಕ್ಕೆ ಓಡಿ ಹೋದರು. ಆ ಭೀಷ್ಮಾಚಾರ್ಯರು ಆಗ ಅವರನ್ನು ಈ ಬ್ರಾಹ್ಮಣರು ದ್ರೋಣಾಚಾರ್ಯರು ಎಂದು ಹೇಳಿದರು

ವಿಶೇಷಾಂಶ—ಗೋವನ್ನು ಬೇಡುವುದಕ್ಕಾಗಿ ದ್ರೋಣಾಚಾರ್ಯರು ಹೋಗುತ್ತಿರಲು ಪರಶುರಾಮದೇವರ ದೆಸೆಯಿಂದ ಹನ್ನೆರಡು ವರ್ಷ ಪರ್ಯಂತವಾಗಿ ವಿದ್ಯಾಭ್ಯಾಸವನ್ನು ಮಾಡುತ್ತಿರಲು ಶಿಲೋಂಛವೃತ್ತಿಯಿಂದ ಮಾತೃಪೋಷಣವನ್ನು ಮಾಡತಕ್ಕ ಅಶ್ವತ್ಥಾಮನು ಕುಮಾರರಿಂದ ಕೂಡಿಗೊಂಡು ಬರುತ್ತಿರಲಿಲ್ಲ. ಅಶ್ವತ್ಥಾಮನಿಗೆ ತನ್ನ ತಂದೆಯು ಜ್ಞಾನವು ಕೂಡುವುದರಿಂದ ಪ್ರಶ್ನೆಯೇ ಕೂಡುವುದಿಲ್ಲ. ॥ ೩೨ ॥

ಹಾಗಾದರೆ ಕುಮಾರರು ತಮ್ಮ ಪಟ್ಟಣದಲ್ಲಿ ನಿವಾಸವಾಡುತ್ತಿದ್ದ ದ್ರೋಣನನ್ನು ಏಕೆ ತಿಳಿಯಲಿಲ್ಲ, ಎಂದರೆ—

ಮೂ ॥ ನ ರಾಜಗೇಹಂ ಸ ಕದಾಚಿದೇತಿ
ತೇನಾದೃಷ್ಟಃ ಸ ಕುಮಾರ್ಯೈಃ ಪುರಾತಃ ।
ಭೀಷ್ಮೋ ವಿದ್ಯಾಸ್ತೇನ ಸಹೈವ ಚಿಂತಯ-
ನ್ನಸ್ತ್ರಪ್ರಾಪ್ತಿಂ ತಸ್ಯ ಶುಶ್ರಾವ ರಾಮಾತ್ ॥ ೫೫ ॥

ಅ॥ ಆ ದ್ರೋಣಾಚಾರ್ಯರು ಯಾವಾಗಲೂ ರಾಜನ ಮನೆಯನ್ನು ಕುರಿತು ಹೋಗಲಿಲ್ಲ; ಆ ಕಾರಣದಿಂದ ಈ ದರ್ಶನಕಾಲಕ್ಕಿಂತ ಮೊದಲು ಕುಮಾರರಿಂದ ಕಾಣಲ್ಪಡಲಿಲ್ಲ. ಭೀಷ್ಮಾಚಾರ್ಯರು ದ್ರೋಣಾಚಾರ್ಯರಿಂದ ಕೂಡಿಕೊಂಡೇ ವಿದ್ಯೆಗಳನ್ನು ವಿಚಾರವಾಡುತ್ತಾ ಆ ದ್ರೋಣಾಚಾರ್ಯರಿಗೆ ಪರಶುರಾಮನದೆಸೆಯಿಂದ ಅಸ್ತ್ರಪ್ರಾಪ್ತಿಯನ್ನು ಕೇಳಿದರು.

ವಿಶೇಷಾಂಶ—ದ್ರೋಣಾಚಾರ್ಯರ ಮನೆಗೆ ಹೋಗಿ ವಿದ್ಯಾಚಿಂತನೆಗಳನ್ನು ಮಾಡುವ ಭೀಷ್ಮಾಚಾರ್ಯರು (೧೨) ಹನ್ನೆರಡು ವರ್ಷ ಪರ್ಯಂತವಾಗಿ ಅವರನ್ನು ಕಾಣದೆ ಇರುತ್ತಿರಲು ಚಾರಕಮುಖಾಂತರ ಪರಶುರಾಮಂದೇವರದೆಸೆಯಿಂದ ಅವರು ಅಸ್ತ್ರವಿದ್ಯೆಗಳನ್ನು ಅಭ್ಯಾಸ ಮಾಡುತ್ತಾರೆಂದು ಕೇಳಿರುವರು. ॥ ೫೩ ॥

ಆದಾಗ್ಯೂ ಆ ದ್ರೋಣಾಚಾರ್ಯರನ್ನು ನೋಡದೆ ಭೀಷ್ಮಾಚಾರ್ಯರು ಹೇಗೆ ತಿಳಿದು ಕೊಂಡರು, ಎಂದರೆ—

ಮೂ ॥ ಶ್ರುತ್ವಾ ವೃದ್ಧಂ ಕೃಷ್ಣವರ್ಣಂ ದ್ವಿಜಂ ತಂ
ಮಹಾಸ್ತ್ರವಿದ್ಯಾಮಪಿ ತಾಂ ಮಹಾಮತಿಃ ।
ದ್ರೋಣಂ ಜ್ಞಾತ್ವಾ ತಸ್ಯ ಶಿಷ್ಯತ್ವ ಏತಾನ್
ದದೌ ಕುಮಾರಾಂಸ್ತತ್ರ ಗತ್ವಾ ಸ್ವಯಂ ಚ ॥ ೫೪ ॥

ಅ॥ ಭೀಷ್ಮಾಚಾರ್ಯರು ಆ ಬ್ರಾಹ್ಮಣನನ್ನು ಮಂದಾಂಕನನ್ನಾಗಿಯೂ ಕಪ್ಪು ಬಣ್ಣವುಳ್ಳವನನ್ನಾಗಿಯೂ ಆ ಮಂತ್ರಿತವಾದ ಇಷೀಕ ಪರಂಪರೆಯಿಂದ ಬಾವಿಯೊಳಗೆ ಇರತಕ್ಕ ಕಂದು ಕೋದ್ದರಣಾದಿ ರೂಪವಾದ ಮಹಾಸ್ತ್ರವಿದ್ಯೆಯನ್ನೂ ಕೇಳಿ ದ್ರೋಣಾಚಾರ್ಯರನ್ನಾಗಿ ತಿಳಿದು ಆ ದ್ರೋಣಾಚಾರ್ಯರ ಸಮೀಪಕ್ಕೆ ತಾನೇವೇ ಹೋಗಿ ಅವರ ಶಿಷ್ಯತ್ವದಲ್ಲಿ ಈ ಕುಮಾರರನ್ನು ಕೊಟ್ಟನು. ॥ ೫೪ ॥

ಮೂ ॥ ದ್ರೋಣೋऽಥ ತಾನವದದ್ಯೋ ಮದಿಷ್ಟಂ
ಕರ್ತುಂ ಪ್ರತಿಜ್ಞಾಂ ಪೃಥಮಂ ಕರೋತಿ ।
ತಂ ಧನ್ವಿನಾಂ ಪ್ರವರಂ ಸಾಧಯಿಷ್ಯ
ಇತ್ಯರ್ಜುನಸ್ತ್ವಮಕರೋತ್ ಪ್ರತಿಜ್ಞಾಂ ॥ ೫೫ ॥

ಅ॥ ಆಮೇಲೆ ದ್ರೋಣಾಚಾರ್ಯರು ಆ ಕುಮಾರರನ್ನು ಕುರಿತು ಹೇಳಿದರು: ಯಾವನು ನನಗೆ ಇಷ್ಟವನ್ನು ಮಾಡಲಿಕ್ಕೆ ಪ್ರಥಮದಲ್ಲಿ ಪ್ರತಿಜ್ಞೆಯನ್ನು ಮಾಡುತ್ತಾನೋ, ಆತನನ್ನು ಧನುರ್ಧಾರಿಗಳಲ್ಲಿ ಶ್ರೇಷ್ಠನನ್ನಾಗಿ ಸಾಧಿಸುವೆನು. ಎಂದ ಮೇಲೆ ಅರ್ಜುನನು ಆ ಪ್ರತಿಜ್ಞೆಯನ್ನು ಮಾಡಿದನು. ॥ ೫೫ ॥

ಮೂ ॥ ಉನ್ಮಾದನಾದೀನಿ ಸ ವೇದ ಕೃಷ್ಣಾ–
ದಸ್ತ್ರಾಣ್ಯನಾಪತ್ಸು ನ ತಾನಿ ಮುಂಚೇತ್ ।
ಇತ್ಯಾಜ್ಞಯಾ ಕೇಶವಸ್ಯಾಪರಾಣಿ
ಪ್ರಯೋಗಯೋಗ್ಯಾನಿ ಸದೇಚ್ಛತಿ ಸ್ಮ ॥ ೩೬ ॥

ಅ॥ ಆ ಅರ್ಜುನನು ಉನ್ಮಾದನವೇ ಮೊದಲಾಗಿ ಉಳ್ಳ ಅಸ್ತ್ರಗಳನ್ನು ಶ್ರೀಕೃಷ್ಣನಿಂದ ತಿಳಿದಿರುವನು. ಆಪದ್ರಹಿತ ಕಾಲಗಳಲ್ಲಿ ಅವುಗಳನ್ನು ಬಿಡಬಾರದು. ಈ ಪ್ರಕಾರವಾಗಿ ಶ್ರೀ ಕೃಷ್ಣನ ಆಜ್ಞೆಯಿಂದ ಸರ್ವದಾ ಪ್ರಯೋಗಯೋಗ್ಯಗಳಾದ ಬೇರೆ ಅಸ್ತ್ರಗಳನ್ನು ಇಚ್ಛಿಸುತ್ತಿದ್ದನು. ॥ ೩೬ ॥

ಅರ್ಜುನನಿಗಿಂತಲೂ ಸಮರ್ಥನಾದ ಭೀಮನು ಪ್ರತಿಜ್ಞೆಯನ್ನು ಏತಕ್ಕೆ ಮಾಡಲಿಲ್ಲ ವೆಂದರೆ—

ಮೂ ॥ ಭೀಷ್ಮಾದಿಭಿರ್ಭವಿತಾ ಸಂಗರೋ ನ–
ಸ್ತದಾ ನಾಹಂ ಗುರುಭಿರ್ನಿತ್ಯಯೋದ್ಧಾ ।
ಭವೇಯಮೇಕಃ ಫಲ್ಗುನೋಽಸ್ತ್ರಜ್ಞ ಏಷಾಂ
ನಿವಾರಕಶ್ಚೇನ್ಮಮ ಧರ್ಮಲಾಭಃ ॥ ೩೭ ॥

ಅ॥ (ಯಾವಾಗ) ಭೀಷ್ಮಾಚಾರ್ಯರೇ ಮೊದಲಾದವರಿಂದ ನಮಗೆ ಸಂಗ್ರಾಮವು ಆಗುವುದೋ ಆಗ ನಾನು ಗುರುಗಳಾದ ಭೀಷ್ಮಾದಿಗಳಿಂದ ನಿತ್ಯದಲ್ಲಿಯೂ ಯುದ್ಧವಾಡತಕ್ಕವನು ಆಗಲಾರೆನು. (ಆದಕಾರಣ) ಅಸ್ತ್ರಗಳನ್ನು ತಿಳಿದಿರುವ ಅರ್ಜುನನೊಬ್ಬನು ಈ ಭೀಷ್ಮಾದಿಗಳನ್ನು ನಿವಾರಣವಾಡತಕ್ಕವನಾದರೆ ನನಗೆ ಧರ್ಮಲಾಭವಾಗುವುದು. ॥ ೩೭ ॥

ಕಾರಣಾಂತರವನ್ನು ಹೇಳುತ್ತಾರೆ—

ಮೂ ॥ ನ ಬುದ್ಧಿಪೂರ್ವಂ ವರ ಇಂದಿರಾಪತೇ-
ರನ್ಯತ್ರ ಮೇ ಗ್ರಾಹ್ಯ ಇತಶ್ಚ ಜಿಷ್ಣುಃ ।
ಕರೋತು ಗುರ್ವರ್ಥಮಿತಿ ಸ್ಮ ಚಿಂತಯನ್
ಭೀಮಃ ಪ್ರತಿಜ್ಞಾಂ ನ ಚಕಾರ ತತ್ರ ॥ ೩೮ ॥

ಅ॥ ಲಕ್ಷ್ಮೀಪತಿಯಾದ ಶ್ರೀಹರಿಯಂದೆಸೆಯಿಂದ ಇತರರಾದವರದೆಸೆಯಿಂದ ಬುದ್ಧಿ ಪೂರ್ವಕವಾಗಿ ನನ್ನಿಂದ ವರವು ಸ್ವೀಕರಿಸಲ್ಪಡಬಾರದು, ಈ ಕಾರಣದಿಂದ ಅರ್ಜುನನು ಗುರುಗಳಿಗೋಸ್ಕರ ಪ್ರತಿಜ್ಞೆಯನ್ನು ಮಾಡಲಿ, ಈ ಎರಡು ಕಾರಣಗಳನ್ನೂ ವಿಚಾರವಾಡುತ್ತಾ, ಭೀಮಸೇನನು ಆ ಗುರುಗಳ ವಿಷಯದಲ್ಲಿ ಅಥವಾ ಅಸ್ತ್ರಪ್ರಾಪ್ತಿ ಸಮಯದಲ್ಲಿ ತಾನು ಪ್ರತಿಜ್ಞೆಯನ್ನು ಮಾಡಲಿಲ್ಲ, ॥ ೩೮ ॥

ಮೂ ॥ ತತ್ಪ್ರೇರಿತೇನಾರ್ಜುನೇನ ಪ್ರತಿಜ್ಞಾ
ಕೃತಾ ಯದಾ ವಿಪ್ರವರಸ್ತತಃ ಪರಂ ।

ಸ್ನೇಹಂ ನಿತಾಂತಂ ಸುರರಾಜಸೂನೌ
ಕೃತ್ವಾ ಮಹಾಸ್ತ್ರಾಣಿ ದದೌ ಸ ತಸ್ಮೈ ॥ ೫೯ ॥

ಅ॥ ಭೀಮಸೇನನಿಂದ ಪ್ರೇರಿಸಿಕೊಳ್ಳಲ್ಪಟ್ಟ ಅರ್ಜುನನಿಂದ ಯಾವಾಗ ಪ್ರತಿಜ್ಞೆಯು ಮಾಡಲ್ಪಟ್ಟಿತೋ ಆಮೇಲೆ ಆ ಬ್ರಾಹ್ಮಣಶ್ರೇಷ್ಠರಾದ ದ್ರೋಣಾಚಾರ್ಯರು ದೇವೇಂದ್ರನ ಪುತ್ರನಾದ ಅರ್ಜುನನಲ್ಲಿ ಅತ್ಯಂತವಾಗಿ ಸ್ನೇಹವನ್ನು ಮಾಡಿ ಆ ಅರ್ಜುನನಿಗೆ ಮಂಹಾಸ್ತ್ರಗಳನ್ನು ಉಪದೇಶಕೊಟ್ಟರು. ॥ ೫೯ ॥

ಮೂ ॥ ಸ ಪಕ್ಷಪಾತಂ ಚ ಚಕಾರ ತಸ್ಮಿನ್
ಕರೋತಿ ಚಾಸ್ಯೋರುತರಾಂ ಪ್ರಶಂಸಾಂ ।
ರಹಸ್ಯವಿದ್ಯಾಶ್ಚ ದದಾತಿ ತಸ್ಯ
ನಾನ್ಯಸ್ಯ ಕಸ್ಯಾಪಿ ತಥಾ ಕಥಂಚಿತ್ ॥ ೬೦ ॥

ಅ॥ ಆ ದ್ರೋಣಾಚಾರ್ಯರು ಅರ್ಜುನನಲ್ಲಿ ಪಕ್ಷಪಾತವನ್ನು ಮಾಡಿಕೊಂಡು ಇದ್ದರು. ಈ ಅರ್ಜುನನ ಅತ್ಯುತ್ಕೃಷ್ಟವಾದ ಪ್ರಶಂಸೆಯನ್ನು (ಜನರ ಮಧ್ಯದಲ್ಲಿ) ಮಾಡುತ್ತಾರೆ. ಅರ್ಜುನನಿಗೆ ರಹಸ್ಯ ವಿದ್ಯೆಗಳನ್ನು ಉಪದೇಶಕೊಡುತ್ತಾರೆ, ಅರ್ಜುನನಂತೆ ಬೇರೆ ಯಾವ ಶಿಷ್ಯರಿಗೂ ಯಾವ ಪ್ರಕಾರದಿಂದಲೂ ಉಪದೇಶಕೊಡುವುದಿಲ್ಲ. ॥ ೬೦ ॥

ಹೀಗಾದರೆ ಭೀಮನಿಗೆ ಸರ್ವಜ್ಞತ್ವವು ಬಾರದೆ ಹೋಗಬೇಕಾಗುವುದು ಎಂದರೆ—

ಮೂ ॥ ಭೀಮಃ ಸಮಸ್ತಂ ಪ್ರತಿಭಾಬಲೇನ
ಜಾನನ್ ಸ್ನೇಹಂ ತ್ವದ್ವಿತೀಯಂ ಕನಿಷ್ಠೇ ।
ದ್ರೋಣಸ್ಯ ಕೃತ್ಸ್ನ ಸಕಲಾಸ್ತ್ರವೇದಿನಂ
ಕರ್ತುಂ ಪಾರ್ಥಂ ನಾರ್ಜುನವಚ್ಚಕಾರ ॥ ೬೧ ॥

ಅ॥ ಪ್ರಜ್ಞಾತಿಶಯದ ಬಲದಿಂದ ಎಲ್ಲಾ ಅಸ್ತ್ರಾದಿಗಳನ್ನೂ ತಿಳಿದಿರುವ ಭೀಮಸೇನನು, ಸಕಲಾಸ್ತ್ರಗಳನ್ನೂ ತಿಳಿದಿರುವವನನ್ನಾಗಿ ಅರ್ಜುನನ್ನು ಮಾಡುವುದಕ್ಕಾಗಿ ಕನಿಷ್ಠನಾದ ಅರ್ಜುನನಲ್ಲಿ ದ್ರೋಣಾಚಾರ್ಯರಿಗೆ ಅಸದೃಶವಾದ ಸ್ನೇಹವನ್ನೂ ಮಾಡಿಸಿ ಅರ್ಜುನನಂತೆ (ಪ್ರತಿಜ್ಞಾಪೂರ್ವಕವಾದ ಅಸ್ತ್ರಪ್ರೇಷ್ಯಾದಿಗಳನ್ನು ಅಥವಾ ಸೇವೆಯನ್ನು) ಮಾಡಲಿಲ್ಲ. ॥ ೬೧ ॥

ಮೂ ॥ ನೈವಾತಿಯತ್ನೇನ ದದರ್ಶ ಲಕ್ಷ್ಯಂ
ಕುಶ್ರೂಷಾಯಾಂ ಪಾರ್ಥಮಗ್ರೇ ಕರೋತಿ ।
ಸ್ವಬಾಹುವೀರ್ಯಾದ್ಭಗವತ್ಪ್ರಸಾದಾ-
ನ್ನಿಹನ್ಮಿ ಶತ್ರೂನ್ ಕಿಮುನೇನ ಚೇತಿ ॥ ೬೨ ॥

ಅ॥ ಅತಿಪ್ರಯಾಸದಿಂದ ಲಕ್ಷ್ಯವನ್ನು ಕಾಣುವುದೇ ಇಲ್ಲ. (ಅಂದರೆ ಭೀಮಸೇನನು ಲಕ್ಷ್ಯವೇಧದಲ್ಲಿ ಅತಿಪ್ರಯತ್ನವನ್ನು ಮಾಡಲಿಲ್ಲ.) ದ್ರೋಣಾಚಾರ್ಯರ ಸೇವಾವಿಷಯದಲ್ಲಿ ಅರ್ಜುನನನ್ನು ಮುಂಭಾಗದಲ್ಲಿ ಮಾಡುತ್ತಾರೆ ನಾನು ತನ್ನ ಭುಜಪರಾಕ್ರಮದಿಂದಲೂ ಶ್ರೀ

ಹರಿಯಂ ಅನಂಗ್ರಹದಿಂದಲೂ ಶತ್ರುಗಳನ್ನು ಸಂಹರಿಸುತ್ತೇನೆ; ಪ್ರತಿಜ್ಞಾಪೂರ್ವಕವಾಗಿ ಅಸ್ತ್ರ ಗ್ರಹಣದಿಂದ ಏನು ಪ್ರಯೋಜನವು? ॥ ೪೨ ॥

ಮೂ ॥ ತದಾ ಸವಿತಾಯುಃ ಸಕಲಾಃ ಕ್ಷಿತೀಶ–
ಪುತ್ರಾ ದ್ರೋಣಾತ್ ಸಕಲಾಸ್ತ್ರಾಣ್ಯವಾಪ್ತುಂ ।
ದದೌ ಸ ತೇಷಾಂ ಪರವೀರಾಸ್ತ್ರಾಣಿ ವಿಪ್ರೋ
ರಾಮಾದವಾಪ್ತಾನ್ಯಗತಾನಿ ಚಾನ್ಯೈಃ ॥ ೪೩ ॥

ಅ॥ ಆಗ ಎಲ್ಲಾ ರಾಜರ ಪುತ್ರರೂ ದ್ರೋಣಾಚಾರ್ಯರದೆಸೆಯಿಂದ ಎಲ್ಲಾ ಅಸ್ತ್ರಗಳನ್ನೂ ಹೊಂದುವುದಕ್ಕಾಗಿ ಬಂದರು. ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಕಾಲದಲ್ಲಿ ಪರಶುರಾಮದೇವರ ದೆಸೆಯಿಂದ (ತನ್ನಿಂದ) ಹೊಂದಲ್ಪಟ್ಟ ಬೇರೆಯವರಿಂದ ತಿಳಿಯಲ್ಪಡದಿರುವ ಅಸ್ತ್ರಗಳನ್ನೂ ಆ ದ್ರೋಣಾಚಾರ್ಯರು ಉಪದೇಶಕೊಟ್ಟರು. ॥ ೪೩ ॥

ಮೂ ॥ ಅಸ್ತ್ರಾಣಿ ಚಿತ್ರಾಣಿ ಮಹಾಂತಿ ದಿವ್ಯಾ–
ನ್ಯನ್ಯೈರ್ನರೈರ್ಯಾನಿ ಸಾಪ್ಯಸ್ಮೃತಾನಿ ।
ಅವಾಪ್ಯ ಸರ್ವೇ ತನಯಾ ನೃಪಾಣಾಂ
ಶಕ್ತಾ ಬಭೂವುರ್ನ ಯಥೈವ ಪೂರ್ವೇ ॥೪೪ ॥

ಅ॥ ಬೇರೆ ರಾಜರಿಂದ ಮನಸ್ಸಿನಿಂದಲೂ ಸ್ಮರಿಸಲ್ಪಡದಿರುವ ಮಹತ್ತಾದ ದಿವ್ಯಗಳಾದ ಅತ್ಯಾಶ್ಚರ್ಯಕರಗಳಾದ ಅಸ್ತ್ರಗಳನ್ನು ಹೊಂದಿ ಎಲ್ಲಾ ರಾಜರ ಮಕ್ಕಳೂ ಮುಂಚಿನ ರಾಜರಂತೆ ಹೇಗೆ ಶಕ್ತರಾಗಲಿಲ್ಲವೋ ಹಾಗೆ ಸಮರ್ಥರಾದರು. (ಮುಂಚಿನವರದೆಸೆಯಿಂದ ಅಧಿಕರಾದರು) ॥ ೪೪ ॥

ಮೂ ॥ ನೈತಾದೃಶಾಃ ಪೂರ್ವಮಾಸನ್ನರೇಂದ್ರಾ
ಅಸ್ತ್ರೇ ಬಲೇ ಸರ್ವವಿದ್ಯಾಸು ಚೈವ ।
ದೌಷ್ಮಂತಿಮಾಂಧಾತೃಮುರುತ್ತಪೂರ್ವಾ–
ಶ್ಚತಸ್ರಮಾ ನಾಸು(ನಾಃ ಸ್ಯು)ರುದಾರವೀರ್ಯಾಃ ॥ ೪೫ ॥

ಅ॥ ಅಸ್ತ್ರವಿದ್ಯೆಯಲ್ಲಿಯೂ ಬಲದಲ್ಲಿಯೂ ಸಮಸ್ತ ವಿದ್ಯೆಗಳಲ್ಲಿಯೂ ದ್ರೋಣಶಿಷ್ಯರಿಗೆ ಸದೃಶರಾದ ರಾಜರು ಮೊದಲು ಇರಲಿಲ್ಲ. ದುಷ್ಮಂತಪುತ್ರನಾದ ಭರತನು ಮಾಂಧಾತೃರಾಜನು ಮುರುತ್ತರಾಜನೂ ಇವರೇ ಮೊದಲಾದ ರಾಜರು ಉತ್ಕೃಷ್ಟವಾದ ಪರಾಕ್ರಮವುಳ್ಳವರಾದರೂ ದ್ರೋಣಶಿಷ್ಯರಿಂದ ಸಮಾನಿಕರು ಆಗಲಿಲ್ಲ. (ಸಮಾನಾಃ ಸ್ಯುಃ ಎನ್ನುವ ಪಾಠದಲ್ಲಿ ಭರತ ಮೊದಲಾದವರು ದ್ರೋಣಶಿಷ್ಯರಿಗೆ ಸಮಾನಿಕರಾಗಿ ಇರುತ್ತಿದ್ದರು ಎಂದರ್ಥವು.) ॥ ೪೫ ॥

ಮೂ ॥ ತದಾ ಕರ್ಣೋಽಥೈಕಲವ್ಯಶ್ಚ ದಿವ್ಯಾ–
ನ್ಯಸ್ತ್ರಾಣ್ಯಾಪ್ತುಂ ದ್ರೋಣಸವಿತಾಪವಿತಾಯತುಃ ।
ಸೂತೋ ನಿಷಾದ ಇತಿ ನೈತಯೋರದಾ–
ದಸ್ತ್ರಾಣಿ ವಿಪ್ರಃ ಸ ತು ರಾಮಶಿಷ್ಯಃ ॥ ೪೬॥

ಅ॥ ಆಗ ಕರ್ಣನೂ ಹಾಗೆ ಏಕಲವ್ಯನೂ ಕೂಡ ದಿವ್ಯಗಳಾದ ಅಸ್ತ್ರಗಳನ್ನು ಹೊಂದುವ್ಯದಕ್ಕಾಗಿ ದ್ರೋಣಾಚಾರ್ಯರ ಸವಿೂಪಕ್ಕೆ ಹೋದರು. ಆ ದ್ರೋಣಾಚಾರ್ಯರು ಯಾವ ಕಾರಣದಿಂದ ವಿಶೇಷವಾಗಿ ಪರಶುರಾವಂನ ಶಿಷ್ಯರೇ ಆಗಿರುತ್ತಾರೋ ಆದಕಾರಣ ಈ ಕರ್ಣ ಏಕಲವ್ಯರಿಗೆ ಸೂತನು ನಿಷಾದನು ಎನ್ನುವ ಭಾವದಿಂದ ಅಸ್ತ್ರಗಳನ್ನುಪದೇಶಕೊಡಲಿಲ್ಲ. ॥ ೪೬ ॥

ಮೂ ॥ ಕರ್ಣೋsನವಾಪ್ಯ ನಿಜವಿೂಪ್ಸಿತಮುಚ್ಚವಾನೋ
ಯಸ್ಮಾದವಾಪ ಪುರುಷೋತ್ಕ್ರಮತೋsಸ್ತ್ರಬೃಂದಂ ।
ವಿಪ್ರೋsಪ್ಯಯಂ ತವುಜವೋನಿ ಭೃಗೋಃ ಕುಲೋತ್ಥ–
ವಿತ್ಥಂ ವಿಚಿಂತ್ಯ ಸ ಯಯೌ ಭೃಗುಪಾಶ್ರವಾಯ ॥ ೪೭ ॥

ಅ॥ ಉತ್ಕೃಷ್ಟವಾದ ಗರ್ವವುಳ್ಳ ಕರ್ಣನಂ ತನ್ನ ಇಷ್ಟವನ್ನು ಹೊಂದದೆ ಈ ದ್ರೋಣಾಚಾರ್ಯರಂ ಯಾವ ಪುರುಷೋತ್ಕ್ರವಂನದೆಸೆಯಿಂದ ಅಸ್ತ್ರಗಳ ಸವೂಹವನ್ನು ಹೊಂದಿರುವರೋ ಅಂತಹ ಉತ್ಪತ್ತಿರಹಿತನಾದ ಭೃಗುವಂಶಿಯಂ ವಂಶದಲ್ಲಿ ಅವತಾರವಾಡಿದ ಆ ಪರಶುರಾವಂನನ್ನು ಹೊಂದುತ್ತೇನೆ, ಎಂದಾಲೋಚಿಸಿ ಪರಶುರಾವಂನ ಆಶ್ರವಂಕ್ಕೋಸ್ಕರ ಹೋದನು. ॥೪೭॥

ಮೂ ॥ ಸ ಸರ್ವವೇತ್ತುಶ್ಚ ವಿಭೋರ್ಭಯೇನ
ವಿಪ್ರೋsಹವಿತ್ಯವದದಸ್ತ್ರವರಾತಿಲೋಭಾತ್ ।
ಜಾನನ್ನಪಿ ಪ್ರದದಾವಸ್ಯ ರಾವೋ
ದಿವ್ಯಾನ್ಯಸ್ತ್ರಾಣ್ಯಖಿಲಾನ್ಯವ್ಯಯಾತ್ಮಾ ॥ ೪೮ ॥

ಅ॥ ಆ ಕರ್ಣನಂ ಸರ್ವಜ್ಞನಾದ ಪರಶುರಾವಂನ ಭೀತಿಯಿಂದ ಅಸ್ತ್ರಶ್ರೇಷ್ಠಗಳ ಅತಿ ಲೋಭದಿಂದ ನಾನು ಬ್ರಾಹ್ಮಣನು ಎಂದು ಹೇಳಿದನು. ಅವನಾಶಿ ಸ್ವಭಾವವುಳ್ಳ ಪರಶುರಾವಂನಂ (ಇವನಂ ಸೂತನೆಂದಂ) ತಿಳಿದಾಗ್ಯೂ ದಿವ್ಯಗಳಾದ ಎಲ್ಲಾ ಅಸ್ತ್ರವಿದ್ಯೆಗಳನ್ನು ಕರ್ಣನಿಗೆ ಉಪದೇಶಕೊಟ್ಟನಂ. ॥ ೪೮ ॥

ಮೂ ॥ ಅಸ್ತ್ರಜ್ಞಚೂಡಾವಣಿವಿಂದ್ರಸೂನುಂ
ವಿಶ್ವಸ್ಯ ಹಂತುಂ ಧೃತರಾಷ್ಟ್ರಪುತ್ರಃ ।
ಏನಂ ಸವಾಶ್ರಿತ್ಯ ದೃಢೋ ಭವೇತೇ-
ತ್ಯದಾಜ್ಞಾಜ್ಞತೈವಾಸ್ತ್ರವಸ್ಮೈ ರವೋಶಃ ॥ ೪೯ ॥

ಅ॥ ಪರಶುರಾವಂನಂ ಈ ಕರ್ಣನನ್ನು ಸೂತನನ್ನಾಗಿ ತಿಳಿದರೂ ಧೃತರಾಷ್ಟ್ರಪುತ್ರನು ಈ ಕರ್ಣನನ್ನು ಆಶ್ರಯಿಂಸಿ ಅಸ್ತ್ರಜ್ಞರಲ್ಲಿ ಶ್ರೇಷ್ಠನಾದ ಅರ್ಜುನನ್ನು ಕೊಲ್ಲುವುದಕ್ಕಾಗಿ ವಿಶ್ವಾಸವಾಡಿಕೊಂಡಂ ದೃಢನಂ ಆಗಬೇಕೆಂದಂ ಈ ಕರ್ಣನಿಗೆ ಅಸ್ತ್ರವನ್ನು ಕೊಟ್ಟನಂ. ॥ ೪೯ ॥

ಮೂ ॥ ಜ್ಞಾನಂ ಚ ಭಾಗವತವಾಪ್ಯ (ವುಪ್ಯ) ಪರಾಶ್ಚ ವಿದ್ಯಾ
ರಾವಾದವಾಪ್ಯ ವಿಜಯಂ ಧನುರಗ್ರ್ಯಯಾನಂ ।
ಅಬ್ದೈಶ್ಚತುರ್ಭಿರಥ ಚ ಸ್ಯವಸತ್ತದಂತೇ
ಹಾತುಂ ನ ಶಕ್ತ ಉರುಗಾಯವಿವುಂ ಸ ಕರ್ಣಃ ॥ ೫೦ ॥

ಅ॥ ಆ ಕರ್ಣನು ನಾಲ್ಕು ಸಂವತ್ಸರಗಳಿಂದ ಪರಶುರಾಮದೇವರದೆಸೆಯಿಂದ ಭಗವ ತ್ಸಂಬಂಧಿಯಾದ ಜ್ಞಾನವನ್ನೂ ಉತ್ತಮಗಳಾದ ಅಸ್ತ್ರವಿದ್ಯೆ ಶಸ್ತ್ರವಿದ್ಯೆ ಮೊದಲಾದ ನಾನಾ ವಿದ್ಯೆ ಗಳನ್ನೂ ಹೊಂದಿ ಜಯಪ್ರದವಾದ ಧನುಸ್ಸನ್ನೂ ಶ್ರೇಷ್ಠವಾದ ರಥವನ್ನೂ ಹೊಂದಿ ವಿದ್ಯೆಯನ್ನೂ ಹೊಂದಿದ ಮೇಲೆಯೂ ಉತ್ತಮವಾದ ಯಶಸ್ಸುಳ್ಳ ಈ ರಾಮನನ್ನು ಬಿಡಲಿಕ್ಕೆ ಅಸಮರ್ಥನಾಗಿ ಶ್ರೀಪರಶುರಾಮನ ಸವಿಾಪದಲ್ಲಿಯೇ ಆವಾಸವಾಡಿದನು; ॥ ೫೦ ॥

ಮೂ ॥ ಅಂಕೇ ನಿಧಾಯ ಸ ಕದಾಚಿದಮುಷ್ಯ ರಾಮಃ
ಶಿಶ್ಯೇ ಶಿರೋ ವಿಗತನಿದ್ರ ಉದಾರಬೋಧಃ ।
ಸಂಸುಪ್ತವತ್ಸರವರಃ ಸುರಕಾರ್ಯಹೇತೋ-
ರ್ದಾತುಂ ಚ ವಾಲಿನಿಧನಸ್ಯ ಫಲಂ ತದಸ್ಯ ॥ ೫೧ ॥

ಅ॥ ಉತ್ಕೃಷ್ಟವಾದ ಜ್ಞಾನವುಳ್ಳ ನಿದ್ರಾರಹಿತನಾದ ದೇವಶ್ರೇಷ್ಠನಾದ ಆ ಪರಶುರಾಮನು ದೇವತೆಗಳ ಕರ್ಣಪರಾಜಯರೂಪವಾದ ಕಾರ್ಯನಿಮಿತ್ತವಾಗಿ ಈ ಕರ್ಣನಿಗೆ ಆ ಪ್ರಸಿದ್ಧವಾದ ವಾಲಿಯು ಸಂಸಾರಕ್ಕೆ ಫಲವನ್ನು ಕೊಡುವುದಕ್ಕಾಗಿ ಒಂದಾನೊಂದು ದಿನದಲ್ಲಿ ಕರ್ಣನ ತೊಡೆಯಲ್ಲಿ ತಲೆಯನ್ನು ಇಟ್ಟುಕೊಂಡು ಚೆನ್ನಾಗಿ ಮಲಗಿದವನಂತೆ ಮಲಕೊಂಡನು, ॥ ೫೧ ॥

ಮೂ ॥ ತತ್ರಾಸ ರಾಕ್ಷಸವರಃ ಸ ತು ಹೇತಿನಾಮಾ
ಕಾಲೇ ಮಹೇಂದ್ರಮುನಪಾಸ್ಯ ಹಿ ಶಾಪತೋಽಸ್ಯ ।
ಕೀಟಸ್ತಮಿಂದ್ರ ಉತ ತತ್ರ ಸಮಾವಿವೇಶ
ಕರ್ಣಸ್ಯ ಷಾಪಮುಪಪಾದಯಿತುಂ ಸುತಾರ್ಥೇ ॥ ೫೨ ॥

ಅ॥ ಹೇತಿಯೆಂದು ಹೆಸರುಳ್ಳ ವೈಷ್ಣವನೆಂದು ಪ್ರಸಿದ್ಧನಾದ ಆ ರಾಕ್ಷಸಶ್ರೇಷ್ಠನು(ಅಂದರೆ ಪ್ರಹ್ಲಾದಾದಿಗಳಂತೆ ಸಜ್ಜೀವನು) ಸ್ವವಿಹಿತಕಾಲದಲ್ಲಿ ದೇವೇಂದ್ರನನ್ನು ಉಪಾಸನಾವಾಡದೆ (ಅಂದರೆ ಸೇವಾಕಾಲದಲ್ಲಿ ಸೇವೆಯನ್ನು ಮಾಡದಿರುವುದರಿಂದ) ಇಂದ್ರನ ಶಾಪದ್ವೆಸೆಯಿಂದ ಕೀಟನಾಗಿ ರಾವಣಾಶ್ರಮದಲ್ಲಿ ಆವಾಸವಾಡಿದನು. ಕೀಟತನುವನ್ನು ಹೊಂದಿದ ಮೇಲೆ ಮಂಗ ನಿಗೋಸ್ಕರ (ಅಂದರೆ ಅರ್ಜುನನಿಗೆ ಕರ್ಣನ ವಧದಲ್ಲಿಯೂ ಜಯದಲ್ಲಿಯೂ ಸಾಮರ್ಥ್ಯ ಬರುವುದಕ್ಕಾಗಿ) ಕರ್ಣನಿಗೆ ಶಾಪವನ್ನು ಸಂಪಾದಿಸಿಕೊಡುವುದಕ್ಕಾಗಿ ಆಗ ಕರ್ಣಾಂಕದಲ್ಲಿ ರಾವಣನಿಗೆ ಸ್ವಾಪಕಾಲದಲ್ಲಿ ಆ ಕೀಟವನ್ನು ಪ್ರವೇಶವಾಡಿದನು. ॥ ೫೨ ॥

ಮೂ ॥ ಕರ್ಣಃ ಸ ಕೀಟತನುಗೇನ ಕಿರೀಟಿನೈವ
ಹ್ಯೂರೋರಧಸ್ತಲತ ಔಪರಿಗಾತ್ತ್ವಚಶ್ಚ ।
ವಿದ್ಧಃ ಶರೇಣ ಸ ಯಥಾ ರುಧಿರಸ್ಯ ಧಾರಾಂ
ಸುಸ್ರಾವ ತಂ ವಿಗತನಿದ್ರ ಇವಾಹ ರಾಮಃ ॥ ೫೩ ॥

ಅ॥ ಕೀಟದ ಶರೀರದಲ್ಲಿರತಕ್ಕ ಹೇತಿನಾಮಕ ಅಸುರನಿಂದ ಕೂಡಿದ ಇಂದ್ರನಿಂದಲೇ ಅಧೋಭಾಗದಲ್ಲಿರತಕ್ಕ ಚರ್ಮವನ್ನು ಆರಂಭಿಸಿಯೇ ತೊಡೆಯ ಮೇಲೆ ಹೋಗಿ ಸವಿಾಪದಲ್ಲಿರುವಾದ (ತ್ವಕ್) ಚರ್ಮವು, ಅದನ್ನು ಮರ್ಯಾದೀಕರಿಸಿ,(ಅಂದರೆ ಅಧೋಭಾಗವನ್ನು ಆರಂಭಿಸಿ

ಮೇಲಿನ ಚರ್ಮಪರ್ಯಂತವಾಗಿ) ಬಾಣದಿಂದ ಹೇಗೋ ಹಾಗೆಯೇ ಹೊಡೆಯಲ್ಪಟ್ಟ ಕರ್ಣನು ರಕ್ತದ ಧಾರೆಗಳನ್ನು ಸುರಿಸಿದನು. ಆ ಪರಶುರಾಮನು ಹೋಗಲ್ಪಟ್ಟ ನಿದ್ರೆಯುಳ್ಳವನಂತೆ ಕರ್ಣನನ್ನು ಕುರಿತು ಹೇಳಿದನು. ॥ ೫೩ ॥

ಮೂ ॥ ಕಿಂ ತ್ವಂ ನ ಚಾಲಯಸಿ ಮಾಂ ರುಧಿರಪ್ರಸೇಕೇ
ಪ್ರಾಪ್ತೇಽಪಿ ಪಾವನವಿರೋಧಿನಿ ಕೋಽಸಿ ಚೇತಿ ।
ತಂ ಪ್ರಾಹ ಕರ್ಣ ಇಹ ನೈವ ಮಯಾ ವಿಧೇಯೋ
ನಿದ್ರಾವಿರೋಧ ಇತಿ ಕೀಟ ಉಪೇಕ್ಷಿತೋ ಮೇ ॥ ೫೪ ॥

ಆ॥ ಪಾವಿತ್ರ್ಯಕ್ಕೆ ಪ್ರತಿಕೂಲವಾದ (ಅಂದರೆ ಅಪವಿತ್ರವಾದ)ರಕ್ತದ ಸಂಸ್ಪರ್ಶವು ಪ್ರಾಪ್ತವಾದಾಗ್ಯೂ ನೀನು ನನ್ನನ್ನು ಏತಕ್ಕೆ ಅಲುಗಾಡಿಸಲಿಲ್ಲ, ನೀನು ಯಾರು ಆಗುತ್ತಿ, ಎಂದು ಕರ್ಣನನ್ನು ಕುರಿತು ಹೇಳಿದನು. ಕರ್ಣನು ನನ್ನಿಂದ ನಿದ್ರೆಗೆ ಭಂಗವು ಮಾಡಬಾರದು, ಎನ್ನುವ ಬುದ್ಧಿಯಿಂದ ವಿದ್ಯಾಸಮುಯದಲ್ಲಿ ನನ್ನಿಂದ ಕೀಟವು ಉಪೇಕ್ಷಿತವಾಗಿದೆ ಎಂದು ಪರಶು ರಾಮನನ್ನು ಕುರಿತು ಹೇಳಿದನು. ॥ ೫೪ ॥

ಮೂ ॥ ಜಾತ್ಯೌತ್ಯಾಸ್ಮಿ ಸೂತ ಉತ ತೇ ತನಯೋಽಸ್ಮಿ ಸತ್ಯಂ
ತೇನಾಸ್ಮಿ ವಿಪ್ರ ಇತಿ ಭಾರ್ಗವವಂಶಜೋಽಹಂ ।
ಅಗ್ರೇಽಬ್ರುವಂ ಭವತ ಈಶ ನ ಹಿ ತ್ವದನ್ಯೋ
ಮಾತಾ ಪಿತಾ ಗುರುತರೋ ಜಗತೋಽಪಿ ಮುಖ್ಯಃ ॥ ೫೫ ॥

ಅ॥ ಜಾತಿಯಿಂದ ಸೂತನು ಆಗಿರುತ್ತೇನೆ, ಎಲೋ ಪರಶುರಾಮನೇ ಯಾವ ಕಾರಣದ್ವೇಷದಿಂದ ನಿನ್ನ ಮಗನು ಆಗಿರುತ್ತೇನೋ, ಆ ಕಾರಣದಿಂದ ನಿಮ್ಮ ವಂಶದಲ್ಲಿ ಹುಟ್ಟಿದ ಬ್ರಾಹ್ಮಣನು ನಾನು ಆಗಿರುತ್ತೇನೆ, ಎಂದು ತಮ್ಮ ಎದುರಿನಲ್ಲಿಯೇ ಹೇಳಿರುವೆನು. ಅದೂ ಸತ್ಯವೇ, ಎಲೋ ಸರ್ವೇಶನೇ ಜಗತ್ತಿಗೆ ನಿನ್ನಿಂದ ವ್ಯತಿರಿಕ್ತವಾದ ಮುಖ್ಯನಾದವನು ತಾಯಿಯಾಗಲೀ ತಂದೆಯಾಗಲೀ ಮುಂಖ್ಯ ಗುರುವಾಗಲೀ ಇಲ್ಲವೇ ಇಲ್ಲ. ॥ ೫೫ ॥

ಮೂ ॥ ಇತ್ಯುಕ್ತ ಮಾತ್ರವಚನೇ ಸ ತು ಕೀಟಕೋಽಸ್ಯ
ರಾಮಸ್ಯ ದೃಷ್ಟಿವಿಷಯತ್ವತ ಏವ ರೂಪಂ ।
ಸಂಪ್ರಾಪ್ಯ ನೈಜಮತಿಪೂರ್ಣಗುಣಸ್ಯ ತಸ್ಯ
ವಿಷ್ಣೋರನುಗ್ರಹತ ಆಪ ವಿಮಾನಗಃ ಸ್ವಃ ॥ ೫೬ ॥

ಅ॥ ಪರಶುರಾಮದೇವರು ಹಿಂದೆ ಹೇಳಿದ ಪ್ರಕಾರ ವಚನವನ್ನು ಮಾತ್ರ ಹೇಳುತ್ತಿರಲು ಆ ಕೀಟವು ಆ ಪರಶುರಾಮನ ದೃಷ್ಟಿಗೋಚರತ್ವದಿಂದಲೇ ತನ್ನ ಮೂಲರೂಪವನ್ನು ಹೊಂದಿ ಅತಿಪೂರ್ಣ ಗುಣಗಳುಳ್ಳ ಆ ವಿಷ್ಣುವಿನ ಅನುಗ್ರಹದಿಂದ ವಿಮಾನದಲ್ಲಿ ಕುಳಿತವನಾಗಿ ಸ್ವರ್ಗವನ್ನು ಹೊಂದಿತು. ॥ ೫೬ ॥

ಮೂ ॥ ಅಥಾಹ ರಾಮಸ್ತಮಸತ್ಯವಾಚಂ (ಚೋ)
ನ ತೇ ಸಕಾಶೇ ಮಮ ವಾಸಯೋಗ್ಯತಾ ।

ತಥಾಪಿ ತೇ ನೈವ ವೃಥಾ ಮದೀಯಾ
ಭಕ್ತಿರ್ಭವೇಜ್ಜೇಷ್ಯಸಿ ಸರ್ವಶತ್ರೂನ್ ॥ ೫೭ ॥

ಅ॥ ಆಮೇಲೆ ಪರಶುರಾಮನು ಅಸತ್ಯವಾದ ಮಾತುಳ್ಳ ಕರ್ಣನನ್ನು ಕುರಿತು ನನ್ನ ಸಕಾಶದಲ್ಲಿ ನಿನಗೆ ಆವಾಸಯೋಗ್ಯತ್ವವು ಇಲ್ಲ. ಆದಾಗ್ಯೂ ನಿನಗೆ ನನ್ನ ಸಂಬಂಧಿಯಾದ ಭಕ್ತಿಯು ವ್ಯರ್ಥವು ಆಗಲಾರದು. ಎಲ್ಲಾ ಶತ್ರುಗಳನ್ನು ಗೆಲ್ಲುವಿ. ॥ ೫೭ ॥

ಮು ॥ ಅಸ್ಪರ್ಧಮಾನಂ ನ ಕಥಂಚನ ತ್ವಾಂ
ಜೇತಾ ಕಶ್ಚಿತ್ ಸ್ಪರ್ಧಮಾನಸ್ತು ಯಾಸಿ ।
ಪರಾಭೂತಿಂ ನಾತ್ರ ವಿಚಾರ್ಯಮುಸ್ತಿ
ಪ್ರಮಾದೀ ತ್ವಂ ಭವಿತಾ ಚಾಸ್ತ್ರಸಂಘೇ ॥ ೫೮ ॥

ಅ॥ ಸ್ಪರ್ಧೆಯನ್ನು ಮಾಡದಿರುವ ನಿನ್ನನ್ನು ಯಾವನೊಬ್ಬ ಪುರುಷನು ಯಾವ ಪ್ರಕಾರದಿಂದಲೂ ಗೆಲ್ಲತಕ್ಕವನು ಆಗಲಾರನು. ಹೊಟ್ಟೆಗಿಚ್ಚನ್ನು ಮಾಡತಕ್ಕ ನೀನು ಪರಾಜಯವನ್ನು ಹೊಂದುತ್ತಿ. ಸ್ಪರ್ಧೆಯನ್ನು ಮಾಡತಕ್ಕ ನೀನು ಅಸ್ತ್ರ ಯುದ್ಧದಲ್ಲಿ ವಿಸ್ಮರಣ ಶೀಲನೂ ಆಗತಕ್ಕವನು ಆಗುತ್ತಿ, ಈ ಹೇಳಿದ ಅರ್ಥದಲ್ಲಿ ವಿಚಾರಮಾಡತಕ್ಕ ಅಂಶವಿಲ್ಲ. ॥ ೫೮ ॥

ಮೂ ॥ ಯಾಹೀತಿ ತೇನೋಕ್ತ ಉದಾರಕರ್ಮಣಾ
ಕರ್ಣೋ ಯಯೌ ತಂ ಪ್ರಣಮ್ಯೇಶಿತಾರಂ ।
ತಥೈಕಲವ್ಯೋಽಪಿ ನಿರಾಕೃತೋಽಮುನಾ
ದ್ರೋಣೇನ ತಸ್ಯ ಪ್ರತಿಮಾಂ ವನೇಽರ್ಚಯನ್ ॥ ೫೯ ॥

ಅ॥ ಉತ್ಕೃಷ್ಟವಾದ ಕರ್ಮವುಳ್ಳ ಆ ಪರಶುರಾಮನಿಂದ ಹೋಗು ಎಂದು ಹೇಳಿಸಿಕೊಳ್ಳಲ್ಪಟ್ಟ ಕರ್ಣನು ಸರ್ವೇಶನಾದ ಪರಶುರಾಮನನ್ನು ನಮಸ್ಕರಿಸಿ ಹೋದನು, ಹಾಗೆಯೇ ಏಕಲವ್ಯನಾದರೂ ಈ ದ್ರೋಣಾಚಾರ್ಯರಿಂದ ನಿರಾಕರಿಸಿಕೊಳ್ಳಲ್ಪಟ್ಟವನಾಗಿ ದ್ರೋಣಾಚಾರ್ಯರ ಮೃತ್ತಿಕೆಯಂಯನ್ನು ಕಾಡಿನಲ್ಲಿ ಪೂಜಿಸುತ್ತಿದ್ದನು. ॥ ೫೯ ॥

ಮೂ ॥ ತತಃ ಕದಾಚಿದ್ಧೃತರಾಷ್ಟ್ರಪುತ್ರೈಃ
ಪಾಂಡೋಃ ಸುತಾ ಮೃಗಯಾಂ ಸಂಪ್ರಯಾತಾಃ ।
ಅಗ್ರೇ ಗಚ್ಛನ್ ಸಾರಮೇಯೋ ರುರಾವ
ಧರ್ಮಾತ್ಮಜಸ್ಯಾತ್ರ ವನೇ ಮೃಗಾರ್ಥೀ ॥ ೬೦ ॥

ಅ॥ ಆಮೇಲೆ ಒಂದಾನೊಂದು ದಿನ ಕೌರವರಿಂದ ಕೂಡಿಕೊಂಡು ಪಾಂಡವರು ಬೇಟಿಯನ್ನು ಕುರಿತು ಹೋದರು, ಆಮೇಲೆ ಈ ಕಾಡಿನಲ್ಲಿ ಮೃಗಗಳನ್ನು ಇಟ್ಟಿಸುವ ಧರ್ಮರಾಜನ ಸಾರಮೇಯವು ಮುಂದಕ್ಕೆ ಓಡುತ್ತಾ ಶಬ್ದ ಮಾಡಿತು. ॥ ೬೦ ॥

ಮೂ ॥ ಶ್ರುತ್ವಾ ರಾವಂ ಸಾರಮೇಯಸ್ಯ ದೂರಾ-
ಚ್ಛರೈರ್ಮುಖಂ ಶಬ್ದವೇಧೀ ಪುಪೂರೇ ।

ಸ ಏಕಲವ್ಯೋ ವ್ರಣಮುಸ್ಯ ನಾಕರೋತ್
ಶ್ವಾ ಪೂರಿತಾಸ್ಯಃ ಪಾಂಡವಾನಭ್ಯಯಾತ್ಸಃ ॥ ೬೧ ॥

ಅ॥ ಶಬ್ದವೇಧನ ಸ್ವಭಾವವುಳ್ಳ ಆ ಏಕಲವ್ಯನು ದೂರದಿಂದಲೇ ಸಾರಮೇಯದ ಶಬ್ದವನ್ನು ಕೇಳಿ ದೂರದಿಂದಲೇ ಸಾರಮೇಯದ ವಂಖಿವನ್ನು ಬಾಣಗಳಿಂದ ಪೂರ್ಣೀಕರಿಸಿದನು; ಏಕಲವ್ಯನಂ ವಂಖಿಕ್ಕೆ ಗಾಯಂವನ್ನು ವಮಾಡಲಿಲ್ಲ. ಬಾಣಗಳಿಂದ ತುಂಬಿದ ವಂಖಿವುಳ್ಳ ನಾಯಿಯಂ ಪಾಂಡವರ ಸವಿೂಪಕ್ಕೆ ಓಡಿಬಂದಿತು. ॥ ೬೧ ॥

ಮೂ ॥ ದೃಷ್ಟ್ವಾ ಚಿತ್ರಂ ಕುರವಃ ಪಾಂಡವಾಶ್ಚ
ದ್ರಷ್ಟುಂ ಕರ್ತಾರಂ ಮಾರ್ಗಯಾವಮಾಸುರತ್ರ ।
ದ್ರೋಣಾಕೃತಿಂ ಮೃತ್ತಿಕೀಂ ಪೂಜಯಂತಂ
ದದೃಶುಶ್ಚೈನಂ ಧನುರೇವಾಭ್ಯಸಂತಂ ॥ ೬೨ ॥

ಅ॥ ಕೌರವರೂ ಪಾಂಡವರೂ ಕೂಡ ಚಿತ್ರಕರ್ಮವನ್ನು ನೋಡಿ ವಿಚಿತ್ರ ಕರ್ಮವನ್ನು ವಮಾಡಿದವನನ್ನು ನೋಡಂವುದಕ್ಕಾಗಿ ಇಲ್ಲಿ ಹುಡುಕಿದರು. ವೃತ್ತಿಕಾಸಂಬಂಧಿಯಾದ ದ್ರೋಣಾಚಾರ್ಯರ ಪ್ರತಿವಂಯನ್ನು ಪೂಜಿಸತಕ್ಕ ಧನುರ್ವಿದ್ಯಾಭ್ಯಾಸವನ್ನೇ ವಮಾಡತಕ್ಕ ಈ ಏಕಲವ್ಯನನ್ನು ನೋಡಿದರು. ॥ ೬೨ ॥

ಮೂ ॥ ಪೈಶಾಚಮೇವೈಷ ಪಿಶಾಚಕೇಭ್ಯಃ
ಪೂರ್ವಂ ವಿವೇದಾಸ್ತ್ರಬೃಂದಂ ನಿಷಾದಃ ।
ದಿವ್ಯಾನ್ಯಸ್ತ್ರಾಣ್ಯಪ್ತುಮೇತಾಂ ಚ ಶಿಕ್ಷಾಂ
ದ್ರೋಣಂ ಸದಾ ಪೂಜಯತಿ ಸ್ಮ ಭಕ್ತ್ಯಾ ॥ ೬೩ ॥

ಅ॥ ನಿಷಾದನಾದ ಈ ಏಕಲವ್ಯನು ಪಿಶಾಚಿಗಳದೆಸೆಯಿಂದ ಪಿಶಾಚಿ ಸಂಬಂಧಿಯೇ ಆದ ಅಸ್ತ್ರಗಳ ಸವಿೂಹವನ್ನು ವಿಶೇಷವಾಗಿ ತಿಳಿದಿರುವನು. (ದ್ರೋಣ ಪ್ರತಿವಂಯನ್ನು ಏಕೆ ಪೂಜಿಸುತ್ತಿದ್ದನು ಎಂದರೆ)–ದಿವ್ಯಗಳಾದ ಅಸ್ತ್ರಗಳನ್ನು ಹೊಂದುವುಗಕ್ಕಾಗಿಯೂ ಈ ಧನುರ್ವಿದ್ಯಾ ಶಿಕ್ಷೆಯನ್ನು ಹೊಂದುವುದಕ್ಕಾಗಿ ದ್ರೋಣಾಚಾರ್ಯರನ್ನು ಭಕ್ತಿಯಿಂದ ಯಾವಾಗಲೂ ಪೂಜಿಸುತ್ತಿದ್ದನು. ॥ ೬೩ ॥

ಮೂ ॥ ದೃಷ್ಟ್ವಾ ವಿಶೇಷಂ ತಮುಮುಷ್ಯ ಪಾರ್ಥೋ
ದ್ರೋಣಾಯೋಚೇ ತ್ವದ್ವಚೋ (ರೋ) ಮೇ ಮೃಷಾಸೀತ್ ।
ಇತ್ಯುಕ್ತ ಏನಂ ತ್ವಭಿಗಮ್ಯ ದಕ್ಷಿಣಾಂ
ವಿಪ್ರೋ ಯಯಾಚೇ ದಕ್ಷಿಣಾಂಗುಷ್ಠಮೇವ ॥ ೬೪ ॥

ಅ॥ ಅರ್ಜುನನು ಏಕಲವ್ಯನ ಆ ವಿಶೇಷವನ್ನು (ಅಂದರೆ ಶಬ್ದವೇಧಾತ್ಮಕ ಶಿಕ್ಷಾ ವಿಶೇಷವನ್ನು) ನೋಡಿ ದ್ರೋಣನನ್ನು ಕುರಿತು ಹೇಳಿದನು. ನಿವ್ಮ ವಾತು (ಅಂದರೆ ಧನುರ್ಧಾರಿಗಳಲ್ಲಿ ಶ್ರೇಷ್ಠನನ್ನಾಗಿ ಸಾಧಿಸುವೆನು ಎಂದು ಹೇಳಿದ ವಾತು) ನನಗೆ ವ್ಯರ್ಥವಾಯಿತು, ಈ

ಪ್ರಕಾರ ಹೇಳಿಸಿಕೊಳ್ಳಲ್ಪಟ್ಟ ಬ್ರಾಹ್ಮಣನು ಏಕಲವ್ಯನನ್ನು ಹೊಂದಿ ದಕ್ಷಿಣವಾದ ಹಸ್ತಾಂಗುಷ್ಠವನ್ನೇ ಗುರುದಕ್ಷಿಣೆಯಾಗಿ ಬೇಡಿದನು. ॥ ೬೪ ॥

ಮೂ ॥ ತಸ್ಯ ಪ್ರಸಾದೋಪಚಿತೋರುಶಿಕ್ಷೋ
ನಿಷಾದೋಽದಾದ್ದಕ್ಷಿಣಾಂಗುಷ್ಠಮುಷ್ಟಿಃ ।
ತತಃ ಪರಂ ನಾಸ್ಯ ಬಭೂವ ಶಿಕ್ಷಾ
ಸನ್ಮುಷ್ಟಿಹೀನಸ್ಯ ಸವಾಜರ್ಜುನೇನ ॥ ೬೫ ॥

ಅ॥ ಆ ದ್ರೋಣಾಚಾರ್ಯರ ಪ್ರಸಾದದಿಂದ ಸಮೃದ್ಧವಾದ ಉತ್ಕೃಷ್ಟವಾದ ಶಿಕ್ಷೆಯುಳ್ಳ ಏಕಲವ್ಯನು ದ್ರೋಣನಿಗೋಸ್ಕರ ದಕ್ಷಿಣಾಂಗುಷ್ಠವನ್ನು (ತುಂಡುಮಾಡಿ) ಕೊಟ್ಟನು. ಅಂಗುಷ್ಠವನ್ನು ಕೊಟ್ಟ ಮೇಲೆ ಸವ್ಯಾಚೀನವಾದ ಮುಷ್ಟಿಯಿಂದ ವಿರಹಿತನಾದ ಏಕಲವ್ಯನಿಗೆ ಪೂರ್ವ ಸದೃಶವಾದ ಶಿಕ್ಷೆಯು ಆಗಲಿಲ್ಲ. (ಮತ್ತೆ) ಅರ್ಜುನನಿಂದ ಸದೃಶವಾದ ಶಿಕ್ಷೆಯು ಆಯಿತು; ॥ ೬೫ ॥

ಮೂ ॥ ಪುನಃ ಕೃಪಾಲುಂ ರೈವತಪರ್ವತೇ ತಂ
ದ್ರೋಣಃ ಪ್ರಾ (ಣೋಽಪ್ಯಾ) ದಾದಸ್ತ್ರವರಾಣಿ ತಸ್ಮೈ ।
ಏಕಾಂತ ಏವಾಸ್ಯ ಭಕ್ತ್ಯಾ ಸುತುಷ್ಟೋ
ಧನ್ವಿಶ್ರೇಷ್ಠಂ ಕೃತವಾನರ್ಜುನಂ ಚ ॥ ೬೬ ॥

ಅ॥ ದಯಾಳುವಾದ ದ್ರೋಣಾಚಾರ್ಯರೇ ಈ ಏಕಲವ್ಯನಿಗೆ ಪ್ರತಿಮಾಪೂಜಾ ಅಂಗುಷ್ಠದಾನ ಮೊದಲಾದ ಭಕ್ತಿಯಿಂದ ಅತ್ಯಂತ ಸಂತುಷ್ಟನಾಗಿ ಅಂಗುಷ್ಠವನ್ನು ಕೊಟ್ಟ ಮೇಲೆ ರೈವತ ಪರ್ವತದಲ್ಲಿ ಆ ಏಕಲವ್ಯನನ್ನು ಹೊಂದಿ ಏಕಲವ್ಯನಿಗೋಸ್ಕರ ಅಸ್ತ್ರಶ್ರೇಷ್ಠಗಳನ್ನು ಕೊಟ್ಟನು. ಪುನಃ ಅರ್ಜುನನನ್ನು ಏಕಲವ್ಯ ಮೊದಲಾದ ಧನುರ್ಧಾರಿಗಳದೆಸೆಯಿಂದ ಶ್ರೇಷ್ಠನನ್ನಾಗಿ ಮಾಡಿದನು. ॥ ೬೬ ॥

ಮೂ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಪಂಚದಶೋಽಧ್ಯಾಯಃ ॥ ೧೫ ॥

ಅ॥ ಹೀಗೆ ಶ್ರೀಮದಾನಂದಾತೀರ್ಥಭಗವತ್ಪಾದಾಚಾರ್ಯರಿಂದ ನಿರ್ಮಿಸಲ್ಪಟ್ಟ ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಹದಿನೈದನೇ ಅಧ್ಯಾಯವು ಸಮಾಪ್ತವಾಯಿತು. ॥ ೧೫ ॥

॥ ಶ್ರೀಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಹದಿನಾರನೇ ಅಧ್ಯಾಯವು

ಮೂ ॥ ಓಂ ॥ ಕಾಲೇ ತ್ವೇತಸ್ಮಿನ್ ಭೂಯ ಏವಾಖಿಲೈಶ್ಚ
ಭೃಶೈರ್ಯುಕ್ತೋ ಮಾಗಧೋ ಯೋದ್ಧುಕಾಮಃ ।
ಪ್ರಾಯಾದ್ಯದೂಂಸ್ತತ್ರ ನಿತ್ಯಾವ್ಯಯಾತಿ-
ಬಲೈಶ್ವರ್ಯೋಽಪೀಚ್ಛಯಾಗಾತ್ಸ ಕೃಷ್ಣಃ ॥ ೧ ॥

ಅ॥ ಕುಮಾರರು ಅಸ್ತ್ರವನ್ನು ಹೊಂದುವ ಕಾಲದಲ್ಲಿ ಜರಾಸಂಧನು ಯುದ್ಧಮಾಡಲಿಕ್ಕೆ ಇಚ್ಛಿಸಿದವನಾಗಿ ಎಲ್ಲಾ ರಾಜರಿಂದಲೂ ಯುಕ್ತನಾಗಿಯೇ ಯಾದವರನ್ನು ಕುರಿತು ಹೋದನು. ಮತ್ತು ಆ ಯುದ್ಧದಲ್ಲಿ ನಾಶರಹಿತನಾದ ಹ್ರಾಸವಿಲ್ಲದಿರುವ ಅತ್ಯಂತ ಬಲಾತ್ಮಕವಾದ ಐಶ್ವರ್ಯವುಳ್ಳವನಾದಾಗ್ಯೂ ಆ ಶ್ರೀಕೃಷ್ಣನು ಇಚ್ಛೆಯಿಂದಲೇ (ಯಾದವರನ್ನೂ ಪಟ್ಟಣವನ್ನೂ ಕೂಡ ಬಿಟ್ಟು) ಹೋದನು.

ವಿಶೇಷಾಂಶ—ಶ್ರೀಮದಾಚಾರ್ಯರು ಕುಮಾರರಿಗೆ ಅಸ್ತ್ರಪ್ರಾಪ್ತಿಕಾಲದಲ್ಲಿ ಉಂಟಾದ ಶ್ರೀಕೃಷ್ಣನ ಕಥೆಯನ್ನು ಎರಡು ಅಧ್ಯಾಯಗಳಿಂದ ನಿರೂಪಿಸುವರು. ॥ ೧ ॥

ಹಾಗಾದರೆ ನಿತ್ಯಾವ್ಯಯಾತಿಬಲೈಶ್ವರ್ಯವುಳ್ಳವನಾದಾಗ್ಯೂ ಶ್ರೀಕೃಷ್ಣನು ಏತಕ್ಕೆ ಹೋದನು ಎಂದರೆ—

ಮೂ ॥ ಸಂದರ್ಶಯನ್ ಬಲಿನಾಮಲ್ಪಸೇನಾ-
ದ್ಯುಪಸ್ಕರಾಣಾಂ ಬಹುಲೋ (ಹಳೋ) ಪಸ್ಕರೈಶ್ಚ ।
ಪ್ರಾಪ್ತೇ ವಿರೋಧೇ ಬಲಿಭಿರ್ನೀತಿಮಗ್ರ್ಯಾಂ
ಯಯೌ ಸರಾಮೋ ದಕ್ಷಿಣಾಶಾಂ ರಮೇಶಃ ॥ ೨ ॥

ಅ॥ ಅಲ್ಪಗಳಾದ ಸೇನೆಯೇ ಮೊದಲಾಗಿ ಉಳ್ಳ ಯುದ್ಧ ಸಾಧನಗಳುಳ್ಳ, ಅಂತಹ ಬಲಿಷ್ಠರಿಗೆ ಬಹಳಗಳಾದ ಸೇನಾ ಯುದ್ಧ ಸಾಧನಗಳುಳ್ಳ ಬಲಿಷ್ಠರಿಂದ ವಿರೋಧವು ಪ್ರಾಪ್ತವಾಗುವಾಗ ಶ್ರೇಷ್ಠವಾದ ನೀತಿಯನ್ನು ತೋರಿಸುತ್ತಾ ಬಲರಾಮನಿಂದ ಕೂಡಿದ ಶ್ರೀಕೃಷ್ಣನು ದಕ್ಷಿಣ ದಿಕ್ಕನ್ನು ಕುರಿತು ಹೋದನು. ॥ ೨ ॥

ಶಕ್ತಿಯಿಲ್ಲದಿರುವುದರಿಂದ ಭೀತಿಯಿಂದ ಹೋದನು ಎನ್ನುವ ಗ್ರಂಥಾಂತರ ವಿರೋಧವನ್ನು ಪರಿಹರಿಸುತ್ತಾ ಹಿಂದೆ ಹೇಳಿದ ಅರ್ಥವನ್ನೇ ವಿಶದೀಕರಿಸುತ್ತಾರೆ—

ಮೂ ॥ ಸೋಽನಂತವೀರ್ಯಃ ಪರಮೋಽಭಯೋಽಪಿ
ನೀತ್ಯೈವ ಗಚ್ಛನ್ ಜಾಮದಗ್ನ್ಯಂ ದದರ್ಶ ।
ಕ್ರೀಡಾರ್ಥಮೇಕೋಽಪಿ ತತೋಽತಿದುರ್ಗಂ
ಕೃತ್ವಾ ಗೋಮಂತಂ ತತ್ರ ಯಯೌ ಸಹಾಗ್ರಜಃ ॥ ೩ ॥

ಅ॥ ಅಪರಿಮಿತ ಪರಾಕ್ರಮವುಳ್ಳ ಸರ್ವೋತ್ತಮನಾದ ಶ್ರೀಕೃಷ್ಣನು ಭಯಂಕರಹಿಂಸನಾದಾಗ್ಯೂ (ಲೋಕಕ್ಕೆ ನೀತಿಯನ್ನು ತೋರಿಸುವುದಕ್ಕಾಗಿ ಪರಶುರಾಮನನ್ನು ಕಂಡನು; ಒಬ್ಬನೇ ಆದಾಗ್ಯೂ ಲೋಕಾನುಕರಣಕ್ಕಾಗಿಯೇ ಪರಶುರಾಮನದೆಸೆಯಿಂದ ಅತಿಶಯವಾಗಿ ಹೋಗಲಶಕ್ಯವಾದ ಗೋವುಂತಾಖ್ಯ ಪರ್ವತವನ್ನು ಕೇಳಿ ಆ ಗೋವುಂತ ಪರ್ವತಕ್ಕೆ ಅಣ್ಣನಿಂದ ಕೂಡಿದವನಾಗಿ ಹೋದನು. ॥ ೩ ॥

ಮೂ ॥ ತದಾ ದುಗ್ಧಾಜ್ಞೌ ಸಂಸೃತಿಸ್ಥೈಃ ಸುರಾದ್ಯೈಃ
ಪೂಜಾಂ ಪ್ರಾಪ್ತುಂ ಸ್ಥಾನಮೇಷಾಂ ಚ ಯೋಗ್ಯಂ ।
ಮುಕ್ತಸ್ಥಾನಾದಾಪ ನಾರಾಯಣೋಽಜೋ
ಬಲಿಶ್ಚಾಗಾತ್ತತ್ರ ಸಂದ್ರಷ್ಟುವಿಶಂ ॥ ೪ ॥

ಅ॥ ಗೋಮುಂತ ಪರ್ವತಕ್ಕೆಹೋಗುವ ಕಾಲದಲ್ಲಿ ಉತ್ಪತ್ತಿರಹಿತನಾದ ಶ್ರೀನಾರಾಯಣನು ಸಂಸಾರದಲ್ಲಿರತಕ್ಕ ದೇವಾದಿಗಳಿಂದಲೂ ಋಷಿಗಳಿಂದಲೂ ಬಲ್ಯಾದಿಗಳಿಂದಲೂ ಪೂಜೆಯನ್ನು ಹೊಂದುವುದಕ್ಕಾಗಿ ಕ್ಷೀರ ಸಮುದ್ರದಲ್ಲಿ ಇರತಕ್ಕವರನ್ನುವುಂಕ್ತಸ್ಥಾನದ್ವೆಸೆಯಿಂದ ಸಂಸಾರದಲ್ಲಿ ರತಕ್ಕವರಿಗೆ ಯೋಗ್ಯವಾದ ಅಮುಂಕ್ತಸ್ಥಾನವನ್ನು ಹೊಂದಿಸಿದನು. ಅಲ್ಲಿಗೆ ಸರ್ವೇಶನಾದ ಶ್ರೀ ನಾರಾಯಣನನ್ನು ನೋಡಲಿಕ್ಕೆ ಬಲಿಚಕ್ರವರ್ತಿಯೂ ಬಂದನು. ॥ ೪ ॥

ಮೂ ॥ ತತ್ರಾಸುರಾವೇಶವಮುಷ್ಯ ವಿಷ್ಣುಃ
ಸಂದರ್ಶಯನ್ ಸುಪ್ತಿಹೀನೋಽಪಿ ನಿತ್ಯಂ ।
ಸಂಸುಪ್ತವಚ್ಛಿಶ್ಯ ಉದಾರಕರ್ಮಾ
ಸಂಜ್ಞಾಯೈ ದೇವಾನಾಂ ಮುಖವೀಕ್ಷ್ಯಾಸ್ಪ್ರಮೇಯಃ ॥ ೫ ॥

ಅ॥ ಆಗ ಉತ್ಕೃಷ್ಟವಾದ ಕರ್ಮವುಳ್ಳ ಸರ್ವಥಾ ಸಂಪೂರ್ಣವಾಗಿ ತಿಳಿಯಲಶಕ್ಯನಾದ ಶ್ರೀಹರಿಯು ಈ ಬಲಿಚಕ್ರವರ್ತಿಗೆ ಅಸುರಾವೇಶವನ್ನು ತೋರಿಸುತ್ತಾ ನಿತ್ಯದಲ್ಲಿಯೂ ಸುಪ್ತಿಯಿಲ್ಲದವನಾದಾಗ್ಯೂ ನೀವು ಕೂಡ ನಿದ್ರೆಯನ್ನು ಮಾಡಿರಿ ಎನ್ನುವ ಸಂಜ್ಞೆಗೋಸ್ಕರ ದೇವತೆಗಳ ಮುಖವನ್ನು ನೋಡಿ ಚೆನ್ನಾಗಿ ಸುಪ್ತನಾದ ಪುರುಷನಂತೆ ಮಲಗಿಕೊಂಡನು; ॥ ೫ ॥

ಮೂ ॥ ದೇವಾಶ್ಚ ತದ್ಭಾವವಿದೋಽಖಿಲಾಶ್ಚ
ನಿಮೀಲಿತಾಕ್ಷಾಃ ಶಯನೇಷು ಶಿಶ್ಯಿರೇ ।
ತದಾ ಬಲಿಸ್ತಸ್ಯ ವಿಷ್ಣೋಃ ಕಿರೀಟ-
ಮಾದಾಯಾಗಾಜ್ಜಹಸುಃ ಸರ್ವದೇವಾಃ ॥ ೬ ॥

ಅ॥ ಶ್ರೀಹರಿಯ ಅಭಿಪ್ರಾಯವನ್ನು ತಿಳಿದ ಎಲ್ಲಾ ದೇವತೆಗಳೂ ಕಣ್ಣುಗಳನ್ನು ಮುಚ್ಚಿಕೊಂಡವರಾಗಿ ಹಾಸಿಗೆಗಳಲ್ಲಿ ಮಲಗಿಕೊಂಡರು. ಆಗ ಬಲಿಚಕ್ರವರ್ತಿಯು ಆ ಶ್ರೀಹರಿಯ ಕಿರೀಟವನ್ನು ಹಿಡಿದುಕೊಂಡು(ಪಾತಾಲಕ್ಕೆ)ಓಡಿಹೋದನು. ಎಲ್ಲಾ ದೇವತೆಗಳೂ ನೆಗಾಡಿದರು. ॥ ೬ ॥

ಮೂ ॥ ನಾರಾಯಣೇ ಸರ್ವದೇವೈಃ ಸಮೇತೇ
ಬ್ರಹ್ಮಾದಿಭಿರ್ಹಾಸಮಾನೇ ಸುಪರ್ಣಃ ।
ಗತ್ವಾ ಪಾತಾಲಂ ಯುಧಿ ಜಿತ್ವಾ ಬಲಿಂ ಚ
ಕಿರೀಟಮಾದಾಯಾಭ್ಯಯಾದ್ಯತ್ರ ಕೃಷ್ಣಃ ॥ ೭ ॥

ಅ॥ ಬ್ರಹ್ಮನೇ ಮೊದಲಾದ ಎಲ್ಲಾ ದೇವತೆಗಳಿಂದ ಕೂಡಿದ ಶ್ರೀನಾರಾಯಣನು ನೆಗಾಡುತ್ತಿರಲು ಗರುಡನು ಪಾತಾಲ ಲೋಕಕ್ಕೆ ಹೋಗಿ ಯುದ್ಧದಲ್ಲಿ ಬಲಿಯನ್ನು ಗೆದ್ದು ಕಿರೀಟವನ್ನು ಹಿಡಿದುಕೊಂಡು ಶ್ರೀಕೃಷ್ಣನು ಎಲ್ಲಿ ಇದ್ದನೋ ಅಲ್ಲಿಗೆ ಬಂದನು. ॥ ೭ ॥

ಮೂ ॥ ತತ್ತಸ್ಯ ಶೀರ್ಷ್ಣಿ ಪ್ರತಿಮುಚ್ಯ ನತ್ವಾ
ಖಗಃ ಸ್ತುತ್ವಾ ದೇವದೇವಂ ರಮೇಶಂ ।
ಸ್ಮೃತ ಆಗಚ್ಛೇತ್ಯೇವ ವಿಸರ್ಜಿತೋಽಮುನಾ
ಯಯೌ ದುಧ್ವಾಬ್ಧಿಂ ಯತ್ರ ನಾರಾಯಣೋಽಸೌ ॥ ೮ ॥

ಅ॥ ಗರುಡನು ಆ ಕಿರೀಟವನ್ನು ಶ್ರೀಕೃಷ್ಣನ ತಲೆಯಲ್ಲಿ ಇಟ್ಟು ದೇವತೆಗಳಿಗೂ ಅಧಿಪತಿಯಾದ ಶ್ರೀಕೃಷ್ಣನನ್ನು ನಮಸ್ಕರಿಸಿ ಸ್ತೋತ್ರಮಾಡಿ ಈ ಕೃಷ್ಣನಿಂದ ಸ್ಮರಿಸಿದೊಡನೆ ಬಾ ಎಂದು ಬಿಡಲ್ಪಟ್ಟವನಾಗಿ ಯಾವ ಕ್ಷೀರ ಸಮುದ್ರದಲ್ಲಿ ಶ್ರೀಕೃಷ್ಣ ರೂಪಿಯಾದ ನಾರಾಯಣನು ಇದ್ದನೋ ಆ ಕ್ಷೀರ ಸಮುದ್ರಕ್ಕೆ ಹೋದನು. ॥ ೮ ॥

ಮೂ ॥ ಕಿರೀಟಂ ತತ್ಕೃಷ್ಣಮೂರ್ಧ್ನಿ ಪ್ರವಿಷ್ಟಂ
ತತ್ತುಲ್ಯಮಾಸೀತ್ತಸ್ಯ ರೂಪೇಷ್ವಭೇದಾತ್ ।
ತದಿಚ್ಛಯಾ ಚೈವ ನಾರಾಯಣಸ್ಯ
ಶೀರ್ಷ್ಣ್ಯಪ್ಯಾಸೀದ್ಯುಗಪದ್ದ್ವಾವಧೌ ॥ ೯ ॥

ಅ॥ ಶ್ರೀಕೃಷ್ಣನ ಶಿರಸ್ಸಿನಲ್ಲಿ ಸ್ಥಾಪಿತವಾದ ಕಿರೀಟವೂ ಆ ನಾರಾಯಣನ ಶಿರಸ್ಸಿನಲ್ಲಿರತಕ್ಕ ಕೃಷ್ಣನ ಶಿರಸ್ಸಿಗೆ ಸಮಾನವಾಯಿತು, ಶ್ರೀಹರಿಯು ಮತ್ಸ್ಯಾದ್ಯವತಾರಗಳಲ್ಲಿ ಅಭೇದವಿದ್ದಪ್ರಯುಕ್ತ ನಾರಾಯಣನ ಇಚ್ಛೆಯಿಂದಲೇ ಗೋವಂತ ಪರ್ವತದಲ್ಲಿರತಕ್ಕ ಶ್ರೀಕೃಷ್ಣನ ಮತ್ತು ಕ್ಷೀರ ಸಮುದ್ರದಲ್ಲಿರತಕ್ಕ ಶ್ರೀನಾರಾಯಣನ ತಲೆಯಲ್ಲಿಯೇ ಏಕಕಾಲದಲ್ಲಿಯೇ ಆಯಿತು. ॥ ೯ ॥

ಮೂ ॥ ಪೂರ್ವಂ ಪ್ರಾಪ್ತಾನ್ಯೇವ ದಿವ್ಯಾಯುಧಾನಿ
ಪುನರ್ವೈಕುಂಠಂ ಲೋಕಮಿತಾನಿ ಭೂಯಃ ।
ತದಾವತೇರೂ ರೌಹಿಣೇಯಸ್ಯ ಚೈವಂ
ಭಾರ್ಯಾಪ್ಯಾಗಾದ್ವಾರುಣೀ ನಾಮ ಪೂರ್ವಾ ॥ ೧೦ ॥

ಅ॥ ಜರಾಸಂಧನಿಂದ ಪ್ರಾಪ್ತವಾದ ಪೃಥಮ ಯುದ್ಧದಲ್ಲಿ ಬಂದಿರತಕ್ಕ ದಿವ್ಯಾಯುಧಗಳು ಯುದ್ಧ ಮುಗಿದ ಮೇಲೆ ವೈಕುಂಠ ಲೋಕವನ್ನು ಕುರಿತು ಹೋದ ಆಯುಧಗಳೂ ಗೋವಂತ ಪರ್ವತದಲ್ಲಿರತಕ್ಕ ಕಾಲದಲ್ಲಿ ಕೃಷ್ಣನ ಸಮೀಪಕ್ಕೆ ಬಂದವು. ಅದೇ ಕಾಲದಲ್ಲಿ ಬಲರಾಮನ

ಆಯಂಧಗಳೂ ಬಂದವು. ಹಿಂದಿನ ಹೆಂಡತಿಯಾದ ವಾರುಣಿಯಿಂದಂ ಯಾರಂ ಪ್ರಸಿದ್ಧಳೋ ಆ ವಾರುಣಿಯಂಽ ಬಂದಳಂ. ॥ ೧೦ ॥

ಮೂ ॥ ಸೈವಾಪರಂ ರೂಪವಪಾಸ್ಥಾಯ ಚಾಗಾತ್
ಶ್ರೀರಿತ್ಯಾಖ್ಯಂ ಸೇಂದಿರಾವೇಶಮಗ್ರ್ಯಂ ।
ಕಾಂತಿಶ್ಚಾಗಾತ್ತಸ್ಯ ಸೋಮಸ್ಯ ಚಾನ್ಯಾ
ಭಾರ್ಯಾದ್ವಯೋಃ ಪೂರ್ವತನಾ ಸುರೂಪಾ ॥ ೧೧ ॥

ಆ॥ ಆ ವಾರುಣಿಯೇ ಶ್ರೀಃ ಎಂದಂ ಹೆಸರಂಳ್ಳ, ಲಕ್ಷ್ಮಿಯಂ ಆವೇಶದಿಂದ ಕೂಡಿರುವ ಶ್ರೇಷ್ಠವಾದ ವಂತೊಂದಂ ರೂಪವನ್ನು ಹೊಂದಿ ಬಂದಳಂ, ಬಲರಾಮನಿಗೆ ಕಾಂತಿಸಂಜ್ಞಕಳಾದ ಹೆಂಡತಿಯಂಽ ಕೂಡ (ನಾಗಲೋಕದಿಂದ) ಬಂದಳಂ. ಸೋಮನ ಹೆಂಡತಿಯಾದ ಕಾಂತಿಯಂಽ ವಂತೊಬ್ಬಳಂ. ಇಬ್ಬರಂ ಕಾಂತಿಯಂರ ವಂಧ್ಯದಲ್ಲಿ ಮೊದಲಿನವಳಂ ಜ್ಯೇಷ್ಠಳಂ, ಪ್ರಶಸ್ತ ರೂಪವುಳ್ಳವಳಂ. ॥ ೧೧ ॥

ಮೂ ॥ ತಾಭೀ ರಾಮೋ ಮುಮುದೇ ತತ್ರ ತಿಷ್ಠನ್
ಶಶಾಂಕಪೂರ್ಣೋದ್ರಿಕ್ತಕಾಂತಿಃ ಸುಧಾವಾ ।
ತಸ್ಯಾ ವಾರುಣ್ಯಾಃ ಪ್ರತಿವಾ ಪೇಯರೂಪಾ
ಕಾದಂಬರೀಂ(ರೀ) ವಾರುಣೇಂ(ಣೇ) ತಾಂ ಪಪೌ ಸಃ ॥ ೧೨ ॥

ಆ॥ ಚಂದ್ರರ ಸಮೂಹದ್ದೆಸೆಯಿಂದ ಉತ್ಕೃಷ್ಟವಾದ ಕಾಂತಿಯಂಽಳ್ಳ ಶೋಭನ ಪ್ರಕಾಶಳ್ಳ ಬಲರಾಮನು ಆ ಗೋವಂತ ಪರ್ವತದಲ್ಲಿ ಆವಾಸವಂಽಡುವವರಾಗಿ ವಾರುಣೇ ಶ್ರೀಕಾಂತೀ ಈ ಮೂರು ಸ್ತ್ರೀಯಂರಿಂದ ಸಂತೋಷಪಟ್ಟನು. ಆ ವಾರುಣಿಯಂ ಅಭಿಮನ್ಯವಾನವಾಗಿ ದೇಹಕ್ಕೆ ಸಮಂವಾದ ಕದಂಬ ಕುಸುಮದಿಂದ ಹುಟ್ಟಿರುವುದರಿಂದ ಕಾದಂಬರಿಯಂ ಪೇಯಂವಾದ ಸ್ವರೂಪವುಳ್ಳದ್ದು. (ವಾರುಣಿಯಂ ಗೋವಂತ ಶಿಖರದಲ್ಲಿರತಕ್ಕ ಕದಂಬ ವೃಕ್ಷದ ಕೋಟರದೆಸೆಯಿಂದ ಸುರಿಯಿತು.) ಬಲರಾಮನಂ ಆ ವಾರುಣಿಯಂನ್ನು ಪಾನಮಾಡಿದನು. ॥ ೧೨ ॥

ಮೂ ॥ ಏವಂ ತಯೋಃ ಕ್ರೀಡತೋಃ ಸ್ವೈರಮತ್ರ
ರಾಜನ್ಯವೃಂದಾನುಗತೋ ಜರಾಸುತಃ ।
ಗಿರಿಂ ಗೋವಂತಂ ಪರಿವಾರ್ಯಾದಹತ್ತಂ
ದೃಷ್ಟ್ವಾಪ ದೇವೌ ಪುಪ್ಲುವತುರ್ಬಲಾಢ್ಯೌ ॥ ೧೩ ॥

ಆ॥ ಹಿಂದೆ ಹೇಳಿದ ಪ್ರಕಾರ ಈ ಪರ್ವತದಲ್ಲಿ ಕೃಷ್ಣರಾವಂರಂ ಸ್ವೇಚ್ಛಾನುಸಾರವಾಗಿ ಕ್ರೀಡಿಸುತ್ತಿರಲಂ ರಾಜರ ಸಮೂಹದಿಂದ ಕೂಡಿರುವ ಜರಾಸಂಧನಂ ಗೋವಂತಪರ್ವತವನ್ನು ಆವರಿಸಿ ಸುಟ್ಟನು. ಅದನ್ನು ಆಥವಾ ಸುಡತಕ್ಕ ಜರಾಸಂಧನನ್ನು ನೋಡಿ ಬಲಾಢ್ಯರಾದ ಕೃಷ್ಣರಾವಂರಂ ಓಡಿಹೋದರಂ. ॥ ೧೩ ॥

ಮೂ ॥ ಗಿರಿಸ್ತಾಭ್ಯಾಂ ಪೀಡಿತಃ ಸನ್ನಿಮಗ್ನೋ
ಭೂಮೌ ಪದ್ಭ್ಯಾಂ ಯೋಜನೈಕಾದಶಂ ಸಃ ।
ನಿಷ್ಪೀಡಿತಾಜ್ಜಲಧಾರೋದ್ಗತಾಸ್ಮಾ-
ದ್ವಹ್ನಿಂ ವ್ಯಾಪ್ತಂ ಶಮಯಾಮಾಸ ಸರ್ವಂ ॥ ೧೪ ॥

ಅ॥ ಕೃಷ್ಣರಾಮರಿಂದ ಪಾದಗಳದೆಸೆಯಿಂದ ಪೀಡಿಸಿಕೊಳ್ಳಲ್ಪಟ್ಟ ಪರ್ವತವು (೧೧) ಹನ್ನೊಂದು ಯೋಜನ ಪರ್ಯಂತವಾಗಿ ಭೂಮಿಯಲ್ಲಿ ಮುಳುಗಿ ಹೋಯಿತು. ಚೆನ್ನಾಗಿ ಪೀಡಿಸಿಕೊಳ್ಳಲ್ಪಟ್ಟ ಪರ್ವತದೆಸೆಯಿಂದ ಊರ್ಧ್ವ ಪ್ರದೇಶಕ್ಕೆ ಹೊರಟ ಜಲಧಾರೆಯು ವ್ಯಾಪ್ತವಾದ ಎಲ್ಲಾ ಬೆಂಕಿಯನ್ನು ಆರಿಸಿತು.

ಮೂ ॥ ಸೇನಾಂ ಪ್ರವಿಷ್ಟೌ ಸರ್ವರಾಜನ್ಯಬೃಂದಂ
ವ್ಯಮುಥ್ನ(ಥ್ನಾ)ತಾಂ ದೇವವರೌ ಸ್ವಶಸ್ತ್ರೈಃ ।
ತತ್ರೈವ ಹಂಸೋ ಡಿಭಿ(ಭ)ಕಶ್ಚೈಕಲವ್ಯಃ
ಸಕೀಚಕಸ್ತೌ ಶಿಶುಪಾಲಸೌಂಡ್ರಕೌ ॥ ೧೫ ॥
ಭೌಮಾತ್ಮಜೋ ದಂತವಕ್ರಶ್ಚ ರುಕ್ಮೀ
ಸೌಭಾಧಿಪೋ ಮೈಂದವೈಂದಾನುಜೌ ಚ ।
ಅನ್ಯೇ ಚ ಯೇ ಪಾರ್ಥಿವಾಃ ಸರ್ವ ಏವ
ಕ್ರೋಧಾತ್ಕೃಷ್ಣಂ ಪರಿವಾರ್ಯಾಭ್ಯವರ್ಷನ್ ॥ ೧೬ ॥

ಆ॥ ಜರಾಸಂಧನ ಸೈನ್ಯವನ್ನು ಪ್ರವೇಶಮಾಡಿದ ದೇವಶ್ರೇಷ್ಠರಾದ ಕೃಷ್ಣರಾಮರು ತಮ್ಮ ಅಸ್ತ್ರಗಳಿಂದ ಎಲ್ಲಾ ರಾಜರ ಸಮೂಹವನ್ನು ಮಂಥನ ಮಾಡಿದರು ಆಗಾಗಲೇ ಹಂಸನು ಡಿಭಿಕನು ಕೀಚಕನಿಂದ ಕೂಡಿದ ಏಕಲವ್ಯನೂ ಆ ಶಿಶುಪಾಲ ಪೌಂಡ್ರಕರು. ಭೌಮನ ಮಗನಾದ ಭಗದತ್ತನೂ, ದಂತವಕ್ರನೂ ರುಕ್ಮಿಯೂ ಸೌಭದೇಶಕ್ಕೆ ಅಧಿಪತಿಯಾದ ಸಾಲ್ವನೂ ಮೈಂದನೂ ಮೈಂದನ ತಮ್ಮನಾದ ವಿವಿದನೂ ಇತರ ಯಾವ ರಾಜರೋ ಅವರೆಲ್ಲರೂ ಸಿಟ್ಟಿನಿಂದ ಶ್ರೀಕೃಷ್ಣನನ್ನು ಸುತ್ತಮುತ್ತಲೂ ಆವರಿಸಿ ಸುರಿಸಿದರು ॥ ೧೫ ॥ ೧೬ ॥

ಭಗದತ್ತ ಮೈಂದ ವಿವಿದಾದಿಗಳು ಯದ್ಯಪಿ ಭಕ್ತರು, ಆದಾಗ್ಯೂ ಅವರಲ್ಲಿ ಅಸುರಾವೇಶವಿದ್ದ ಪ್ರಯುಕ್ತ ಅಸುರರಲ್ಲಿಯೇ ಪರಿಗಣಿತರಾಗಿರುತ್ತಾರೆ. ಭಕ್ತರಲ್ಲಿ ವಿಶೇಷವನ್ನು ಹೇಳುತ್ತಾರೆ—

ಮೂ ॥ ಶಸ್ತ್ರೈರಸ್ತ್ರೈರ್ದ್ರುಮಪೂರ್ಗೈಃ ಶಿಲಾಭಿ-
ರ್ಭಕ್ತಾಶ್ಚ ಯೇ ಶಲ್ಯಬಾಹ್ಲೀಕಮುಖ್ಯಾಃ ।
ಸಸೋಮದತ್ತಾಃ ಸೌಮದತ್ತಿರ್ವಿರಾಟಃ
ಪಾಂಚಾಲರಾಜಶ್ಚ ಜರಾಸುತಸ್ಯ ।
ಭಯಾತ್ಕೃಷ್ಣಂ ಶರ(ಸ್ತ್ರ)ವರ್ಷೈರವರ್ಷನ್-
ಕಾರಾಗೃಹೇ ವಾಸಿತಾ ಮಾಗಧೇನ ॥ ೧೭ ॥

ಅ॥ ಸೋಮದತ್ತನಾದ ತಂದೆಯಿಂದ ಕೂಡಿದ, ಸೋಮದತ್ತನ ಮಗನಾದ ಭೂರಿಶ್ರವನೂ ವಿರಾಟರಾಜನೂ ಪಾಂಚಾಲದೇಶಾಧಿಪತಿಯಾದ ದ್ರುಪದನೂ ಕಾರಾಗೃಹದಲ್ಲಿ ಜರಾಸಂಧನಿಂದ (ಮೊದಲು) ಆವಾಸ ಮಾಡಿಸಿಕೊಳ್ಳಲ್ಪಟ್ಟ ಯಾವ ಶಲ್ಯ ಬಾಹ್ಲೀಕ ಮೊದಲಾದ ರಾಜರೋ ಅವರೆಲ್ಲರೂ ಭಕ್ತರಾದಾಗ್ಯೂ ಜರಾಸಂಧನ ಭಯದಿಂದ ಶಸ್ತ್ರಗಳಿಂದಲೂ ಅಸ್ತ್ರಗಳಿಂದಲೂ ವೃಷ್ಟಿಸಮೂಹಗಳಿಂದಲೂ ಕಲ್ಲುಗಳಿಂದಲೂ ಶ್ರೀಕೃಷ್ಣನನ್ನು ಬಾಣಗಳ ವೃಷ್ಟಿಗಳಿಂದ ಸುರಿಸಿದರು. ॥ ೧೭ ॥

ಮೂ ॥ ಸರ್ವಾನೇತಾನ್ ಶರವರ್ಷೇಣ ಕೃಷ್ಣೋ
ವಿಸೂತವಾಜಿಧ್ವಜಶಸ್ತ್ರವರ್ಮಣಃ ।
ಕೃತ್ವಾ ವಮನ್ ಶೋಣಿತಾನಾರ್ತರೂಪಾನ್
ವಿದ್ರಾವಯಾಮಾಸ ಹರಿರ್ಯಥಾ ಮೃಗಾನ್ ॥ ೧೮ ॥

ಅ॥ ಶ್ರೀಕೃಷ್ಣನು ಇವರೆಲ್ಲರನ್ನೂ ಬಾಣಗಳ ವೃಷ್ಟಿಯಿಂದ ಹೊಡೆಯಲ್ಪಟ್ಟ ಸೂತರೂ ಕುದುರೆಗಳೂ ಧ್ವಜಗಳೂ ಶಸ್ತ್ರಗಳೂ ಕವಚಗಳೂ ಇವುಗಳುಳ್ಳವರನ್ನಾಗಿಯೂ ಕಾರತಕ್ಕ ರಕ್ತವುಳ್ಳವರನ್ನಾಗಿಯೂ ದುಃಖಸ್ವರೂಪವುಳ್ಳವರನ್ನಾಗಿಯೂ ಮಾಡಿ ಸಿಂಹವು ಮೃಗಗಳನ್ನೆಂಬಂತೆ ಓಡಿಸಿದನು. ॥ ೧೮ ॥

ಮೂ ॥ ಹತ್ವಾ ಸೇನಾಂ ವಿಂಶದಕ್ಷೌಹಿಣೀಂ ತಾಂ
ಶ್ರಿಭಿರ್ಯುಕ್ತಾಂ ರುಕ್ಮಿಣಂ ನೈವ ಕೃಷ್ಣಃ ।
ರುಕ್ಮಿಣ್ಯರ್ಥೇ ಪೀಡಯಾಮಾಸ ಶಸ್ತ್ರಾ-
ಣ್ಯಕ್ಷಂ ಚ್ಛಿತ್ವಾ ವಿರಥಂ ದ್ರಾವಯಾನಃ ॥ ೧೯ ॥

ಅ॥ ಶ್ರೀಕೃಷ್ಣನು ಮೂರು ಅಕ್ಷೌಹಿಣಿಗಳಿಂದ ಯುಕ್ತವಾದ ಇಪ್ಪತ್ತು ಅಕ್ಷೌಹಿಣೀ ಸೈನ್ಯವನ್ನು ಸಂಹರಿಸಿ ಈ ರುಕ್ಮಿಯು ಶಸ್ತ್ರಗಳನ್ನು ಛೇದಿಸಿ ರಥರಹಿತನನ್ನಾಗಿ ಓಡಿಸುವವನಾಗಿ ರುಕ್ಮಿಣೀ ದೇವಿಗೋಸ್ಕರ ರುಕ್ಮಿಣಿಯ ಅಣ್ಣನಾದ ರುಕ್ಮನನ್ನು ಪೀಡಿಸಲೇ ಇಲ್ಲ. ॥ ೧೯ ॥

ಮೂ ॥ ಜರಾಸುತೋ ರೌಹಿಣೇಯೇನ ಯುದ್ಧಂ
ಚಿರಂ ಕೃತ್ವಾ ತನ್ಮೌಸಲೇನ ಪೋಥಿತಃ ।
ವಿಮೋಹಿತಃ ಪ್ರಾಪ್ತಸಂಜ್ಞಶ್ಚಿರೇಣ
ಕ್ರುದ್ಧೋ ಗದಾಂ ತದುರಸ್ಯಭ್ಯಪಾತಯತ್ ॥ ೨೦ ॥

ಅ॥ ಬಲರಾಮನಿಂದ ಬಹುಕಾಲದಲ್ಲಿ ಯುದ್ಧವನ್ನುಮಾಡಿ ಬಲರಾಮನ ಮುಂಸಲಾಯುಧದಿಂದ ಚೂರ್ಣೀಕೃತನಾದ ಮೂರ್ಛಿತನಾದ ಜರಾಸಂಧನು ಸಾವಕಾಶವಾಗಿ ಸಂಜ್ಞೆಯನ್ನು ಹೊಂದಿದವನಾಗಿ ಕ್ರುದ್ಧನಾಗಿ ಬಲರಾಮನ ವಕ್ಷಃಸ್ಥಳದಲ್ಲಿ ಗದೆಯನ್ನು ಬೀಳಿಸಿದನು. ॥ ೨೦ ॥

ಮೂ ॥ ತೇನಾಹತಃ ಸುಭೃಶಂ ರೌಹಿಣೇಯಃ
ಪಪಾತ ಮೂರ್ಛಾಭಿಗತಃ ಕ್ಷಣೇನ ।

ಅಜೇಯತ್ವಂ ತಸ್ಯ ದತ್ತಂ ಹಿ ಧಾತ್ರಾ
ಪೂರ್ವಂ ಗೃಹೀತೋ ವಿಷ್ಣುನಾ ರಾಮಗೇನ ॥ ೨೧ ॥

ಅ॥ ಆ ಜರಾಸಂಧನಿಂದ ಅತ್ಯಂತವಾಗಿ ಹೊಡೆಯಲ್ಪಟ್ಟ ಬಲರಾಮನು ಕ್ಷಣದಿಂದ ಮೂರ್ಛೆಯನ್ನು ಹೊಂದಿದವನಾಗಿ ಬಿದ್ದನು. (ಬಲರಾಮನು ಬೀಳಲಿಕ್ಕೆ ಕಾರಣವೇನೆಂದರೆ) ಆ ಜರಾಸಂಧನಿಗೆ ಬ್ರಹ್ಮನಿಂದ ಯಾರಿಂದಲೂ ಗೆಲ್ಲಲ್ಪಡದಿರುವಿಕೆಯು ಕೊಡಲ್ಪಟ್ಟದಷ್ಟೆ. (ಹಾಗಾದರೆ ಮಥುರಾಪಟ್ಟಣದಲ್ಲಿ ಯುದ್ಧದಲ್ಲಿ ಬಲರಾಮನು ಹೇಗೆ ಹಿಡಿದಿರುವನು ಎಂದರೆ)— ಪೃಥಮಯುದ್ಧದಲ್ಲಿ ಬಲರಾಮನಲ್ಲಿರತಕ್ಕ ಶಂಕ್ಲಕೇಶ ಸ್ವರೂಪಿಯಾದ ಶ್ರೀವಿಷ್ಣುವಿನಿಂದಲೇ ಸ್ವೀಕರಿಸಲ್ಪಟ್ಟಿರುವನು. ॥ ೨೧ ॥

ಮೂ ॥ ತಥಾಕೃತೇ ಬಲಭದ್ರೇ ತು ಕೃಷ್ಣೋ
ಗದಾಮಾದಾಯ ಸ್ವಾಮಗಾನ್ಮಾಗಧೇಶಂ ।
ತತಾಡ ಜತ್ರೌ ಸ ತಯಾಭಿತಾಡಿತೋ
ಜಗಾಮ ಗಾಂ ಮೂರ್ಛಯಾಭಿಪ್ಲುತಾಂಗಃ ॥ ೨೨ ॥

ಅ॥ ಬಲರಾಮನು ಹಾಗೆ ಮೂರ್ಛಿತನಾಗಿ ಮಾಡಲ್ಪಡುತ್ತಿರಲು ಶ್ರೀಕೃಷ್ಣನು ತನ್ನ ಗದೆಯನ್ನು ಹಿಡಿದುಕೊಂಡು ಜರಾಸಂಧನನ್ನು ಹೊಂದಿದನು. ಮತ್ತು ವೃಷ್ಣಿಸ್ಥಳ ಕಂಠಪ್ರದೇಶ ಇವುಗಳ ಮಧ್ಯದಲ್ಲಿರತಕ್ಕ ಎಲುಬಿನಲ್ಲಿ ಹೊಡೆದನು. ಆ ಗದೆಯಿಂದ ಚೆನ್ನಾಗಿ ಹೊಡೆಯಲ್ಪಟ್ಟ ಆ ಜರಾಸಂಧನು ರಕ್ತಸಂಯುಕ್ತವಾದ ಶರೀರವುಳ್ಳವನಾಗಿ ಮೂರ್ಛೆಯಿಂದ ಭೂಮಿಯನ್ನು ಹೊಂದಿದನು. (ಅಂದರೆ ಭೂಮಿಯಲ್ಲಿ ಬಿದ್ದನು.) ॥ ೨೨ ॥

ಮೂ ॥ ಅಥೋತ್ಥಸೌ ರೌಹಿಣೇಯಃ ಸಹೈವ
ಸಮುತ್ಥಸೌ ಮಾಗಧೋಽಪ್ಯಗ್ರ್ಯವೀರ್ಯಃ ।
ಕ್ರುದ್ಧೋ ಗೃಹೀತ್ವಾ ಮೌಲಿಮುಚ್ಚೈಃ ರಾಮೋ
ವಧಾಯೋದ್ಯಚ್ಛನ್ಮುಸಲಂ ಬಾಹುಶಾಲೀ ॥ ೨೩ ॥

ಅ॥ ಆಮೇಲೆ ಬಲರಾಮನು ಎದ್ದನು. ಶ್ರೇಷ್ಠವಾದ ಪರಾಕ್ರಮವುಳ್ಳ ಜರಾಸಂಧನೂ ಕೂಡ ಬಲರಾಮನಿಂದ ಕೂಡಿಕೊಂಡೇ ಎದ್ದನು. ಭುಜಗಳಿಂದ ಶೋಭಿಸಿಕೊಂಡು ಇರುವ ಬಲರಾಮನು ಜರಾಸಂಧನ ಕೇಶಗ್ರಂಥಿಯನ್ನು ಹಿಡಿದುಕೊಂಡು ಕೊಲ್ಲುವುದಕ್ಕಾಗಿ ಶೀಘ್ರದಲ್ಲಿ ಮುಸಲಾಯುಧವನ್ನು ಉದ್ಯುಕ್ತವನ್ನಾಗಿ ಮಾಡಿದನು. ॥ ೨೩ ॥

ಮೂ ॥ ಅಥಾಬ್ರವೀದ್ವಾಯುರೇನಂ ನ ರಾಮ
ತ್ವಯಾ ಹಂತುಂ ಶಕ್ಯತೇ ಮಾಗಧೋಽಯಂ ।
ವೃಥಾ ನ ತೇ ಬಾಹುಬಲಂ ಪ್ರಯೋಜ್ಯ-
ಮೇನೋಽಯಂ ತೇ ಯುದ್ಬಲಂ ತದ್ವದಸ್ತಂ ॥ ೨೪ ॥

ಅ॥ ಆಮೇಲೆ ವಾಯುದೇವರು ಈ ಬಲರಾಮನನ್ನು ಕುರಿತು ಹೇಳಿದರು. ಎಲೋ ಬಲರಾಮನೇ ಈ ಜರಾಸಂಧನು, ನಿನ್ನಿಂದ ಸಂಹರಿಸಲಿಕ್ಕೆ ಶಕ್ಯನಲ್ಲ. ವ್ಯರ್ಥವಾಗಿ ನಿನ್ನ

ಬಾಹುಬಲವು ಪ್ರಯೋಗಿಸಲ್ಪಡಬಾರದು. ನಿನಗೆ ಯಾವುದು ಅಮೋಘವಾದ ಬಲವೋ; ಹಾಗೆಯೇ ಶತ್ರು ಸಂಹಾರಕವಾದ ಮಂಸಲಾಯುಧವೂ ಅಮೋಘವು (ಆದಕಾರಣ ವ್ಯರ್ಥವನ್ನಾಗಿ ಮಾಡಬೇಡ.) ॥ ೨೪ ॥

ಮೂ ॥ ಅನ್ಯೋ ಹಂತಾ ಬಲವಾನಸ್ಯ ಚೇತಿ
ಶ್ರುತ್ವಾ ಯಯೌ ಬಲಭದ್ರೋ ವಿಮೋಕ್ಷ್ಯ ।
ಜರಾಸುತಂ ಪುನರುದ್ಯಚ್ಛಮಾನಂ
ಜಘಾನ ಕೃಷ್ಣೋ ಗದಯಾ ಸ್ವಯೈವ ॥ ೨೫ ॥

ಅ॥ ಈ ಜರಾಸಂಧನ ಸಂಹಾರಕನು ನಿನ್ನಿಂದ ಮತ್ತೊಬ್ಬನು ನಿನಗಿಂತಲೂ ಬಲಿಷ್ಠನು ಇದ್ದಾನೆ, ಹೀಗೆ ಬಲರಾಮನು ಕೇಳಿ ಜರಾಸಂಧನನ್ನು ಬಿಟ್ಟು ಹೋದನು; ಮತ್ತು ಅತಿ ಪ್ರಯತ್ನ ಮಾಡತಕ್ಕ ಜರಾಸಂಧನನ್ನು ಶ್ರೀಕೃಷ್ಣನು ತನ್ನ ಗದೆಯಿಂದ ಸಂಹರಿಸಿದನು. (ಅಂದರೆ ಚೆನ್ನಾಗಿ ಹೊಡೆದನು. ಹೇಗೆ ಸಾಯುಲಾರನೋ ಹಾಗೆಯೇ ಲಘುಭಾವದಿಂದ ತಾಡನವನ್ನೇ ಮಾಡಿದನು.) ॥ ೨೫ ॥

ಮೂ ॥ ತೇನಾಹತಃ ಸ್ರಸ್ತಸಮಸ್ತಗಾತ್ರಃ
ಪಪಾತ ಮೂರ್ಛಾಭಿಗತಃ ಸ ರಾಜಾ ।
ಚಿರಾತ್ಸಂಜ್ಞಾಂ ಪ್ರಾಪ್ಯ ಚಾಂತರ್ಹಿತೋಽಸೌ
ಸಂಪ್ರಾದ್ರವದ್ಭೀತಭೀತಃ ಸಲಜ್ಜಃ ॥ ೨೬ ॥

ಅ॥ ಆ ಶ್ರೀಕೃಷ್ಣನಿಂದ ತಾಡಿತನಾದ, ಜಾರಿದ ಸಮಸ್ತ ಶರೀರಗಳುಳ್ಳ ಆ ಜರಾಸಂಧನು ಮೂರ್ಛೆಯನ್ನು ಹೊಂದಿದವನಾಗಿ ಬಿದ್ದನು. ಈ ಜರಾಸಂಧನು ಬಹುಕಾಲದ ಮೇಲೆ ಸಂಜ್ಞೆಯನ್ನು ಹೊಂದಿ ಅತ್ಯಂತವಾಗಿ ಭೀತನಾಗಿ ನಾಚಿಕೆಯಿಂದ ಕೂಡಿದವನಾದಿ ಅಡಗಿದವನಾದಿ ಓಡಿಹೋದನು. ॥ ೨೬ ॥

ಮೂ ॥ ಯಯೌ ತಿಷ್ಠೈ ರಾಜಭಿಃ ಸಂಯುತಶ
ಪುರಂ ಜೀವೇತ್ಯೇವ ಕೃಷ್ಣೇನ ಮುಕ್ತಃ ।
ಪುನರ್ಯುದ್ಧಂ ಬಹುಶಃ ಕೇಶವೇನ
ಕೃತ್ವಾ ಜಿತೋ ರಾಜಗಣೈಃ ಸಮೇತಃ ।
ಕೃಷ್ಣೋ ಜಿತ್ವಾ ಮಾಗಧಂ ರೌಹಿಣೇಯ-
ಯುಕ್ತೋ ಯಯೌ ದಮಘೋಷೇಣ ಸಾರ್ಧಂ ॥ ೨೭ ॥

ಅ॥ ಶ್ರೀಕೃಷ್ಣನಿಂದ ಬದುಕಿಕೊಂಡು ಇರು ಎಂದೇ ಬಿಡಲ್ಪಟ್ಟ ಜರಾಸಂಧನು ಉಳಿದ ರಾಜರಿಂದ ಕೂಡಿದವನಾಗಿ ಪಟ್ಟಣಕ್ಕೆ ಹೋದನು. ಪುನಃ ರಾಜರ ಸಮೂಹಗಳಿಂದ ಕೂಡಿದವನಾಗಿ ಶ್ರೀಕೃಷ್ಣನಿಂದ ಅನೇಕಾವರ್ತಿ ಯುದ್ಧವಾಡಿ ಪರಾಜಿತನಾದನು, ಶ್ರೀಕೃಷ್ಣನು ಜರಾಸಂಧನನ್ನು ಗೆದ್ದು ಬಲರಾಮನಿಂದ ಕೂಡಿದವನಾಗಿ ದಮಘೋಷನಿಂದ ಕೂಡಿಕೊಂಡು ಹೋದನು. ॥ ೨೭ ॥

ಹಾಗಾದರೆ ದವಂಘೋಷನಂ ಯಾರು, ಆವನಿಂದ ಕೂಡಿಕೊಂಡು ಎಲ್ಲಿಗೆ ಹೋದನು ಎಂದರೆ—

ಮೂ ॥ ಪಿತೃಷ್ವಸಾ ಯಾಃ ಪತಿನಾ ತೇನ ಚೋಕ್ತಃ
ಪೂರ್ವಂ ಜಿತೇನಾಪಿ ಯುಧಿ ಸ್ಮ ಜಾಂಧವಾತ್ ।
ಯಾಮಃ ಪುರಂ ಕರವೀರಾಖ್ಯಮೇವ
ಮಹಾಲಕಾ್ಷ್ಮ್ಯಾಃ ಕ್ಷೇತ್ರಸಂದರ್ಶನಾಯ ॥ ೨೪ ॥

ಅ॥ ಯಾರು ಯಾರು (ಸೋದರ ಅತ್ತೆಯಂರು ಇರುತ್ತಾರೋ ಅವರ ವಂಧ್ಯದಲ್ಲಿ ಒಬ್ಬಳು ಯಾರು ಶಿಶುಪಾಲನ ತಾಯಿಯಾದ) ಪಿತೃಷ್ವಸೆಯೋ (ಅವಳ) ಗಂಡನಾದ, ವಂತ್ಸ ಮೊದಲ್ಗ ಯಂದ್ಧದಲ್ಲಿ(ಜರಾಸಂಧನಿಂದ ಕೂಡಿಕೊಂಡು ಶ್ರೀಕೃಷ್ಣನಿಂದ) ಪರಾಜಿತನಾದಾಗ್ಯೂ ಆ ದವಂಘೋಷನಿಂದ ವಂಹಾಲಕ್ಷ್ಮಿಯ ಕ್ಷೇತ್ರವನ್ನು ನೋಡುವುದಕ್ಕಾಗಿ (ಅಂದರೆ ವಂಹಾಲಕ್ಷ್ಮಿಯಿಂದ ಅಧಿಷ್ಠಿತವಾದ ಸ್ಥಾನವಾದ ಕೋಲ್ಹಾಪುರವನ್ನು) ನೋಡುವುದಕ್ಕಾಗಿ ಕರವೀರಾಖ್ಯ ಪಟ್ಟಣವನ್ನು ಕುರಿತು ಹೋಗುವ ಎಂದು ಬಂಧು ಸ್ನೇಹದಿಂದ ಹೀಗೆ ಹೇಳಿಸಿಕೊಳ್ಳಲ್ಪಟ್ಟ ಶ್ರೀಕೃಷ್ಣನು (ಹೋದನು.) ॥ ೨೪ ॥

ಹಾಗಾದರೆ ವೈರಿಪಕ್ಷದಲ್ಲಿರತಕ್ಕ ದವಂಘೋಷನಿಂದ ಕೂಡಿಕೊಂಡು ಹೇಗೆ ಹೋದನು ಎಂದರೆ—

ಮೂ ॥ ಶ್ರುತ್ವಾ ವಾಕ್ಯಂ ತಸ್ಯ ಯುದ್ಧೇ ಜಿತಸ್ಯ
ಪ್ರೀ(ಭೀ)ತ್ಯಾ ಯುಕ್ತಸ್ಯಾತ್ಮನಾ ತದ್ಯುತೋಽಗಾತ್ ॥ ೨೯ ॥

ಅ॥ ಸ್ವಭಾವದಿಂದ ಪ್ರೀತಿಯಿಂದಲ್ಲೇ (ಕಪಟದಿಂದ ಅಲ್ಲ.) ಯುಕ್ತನಾದ ಅಥವಾ ಭಯದಿಂದ ಕೂಡಿದ ಯುದ್ಧದಲ್ಲಿ ಪರಾಜಿತನಾದ ದವಂಘೋಷನ ವಾಕ್ಯವನ್ನು ಕೇಳಿ ದವಂಘೋಷನಿಂದ ಕೂಡಿದವನಾಗಿ (ಕರವೀರ ಪಟ್ಟಣಕ್ಕೆ) ಹೋದನು, ॥ ೨೯ ॥

ದವಂಘೋಷನು ಮೊದಲು ಯಾರೆಂದರೆ—

ಮೂ ॥ ಗಂಧರ್ವೋಽಸೌ ದನುನಾಮಾ ನರೋಽಭೂತ್
ತಸ್ಮಾತ್ ಕೃಷ್ಣೇ ಭಕ್ತಿಮಾಂಶ್ಚಾಸ ರಾಜಾ ।
ಪುರಂ (ರ) ಪ್ರಾಪ್ತಾಂಸ್ತಾನ್ ಸ ವಿಜ್ಞಾಯ ಪಾಪಃ
ಸೃಗಾಲಾಖ್ಯೋ ವಾಸುದೇವಃ ಕ್ರುಧಾಗಾತ್ ॥ ೩೦ ॥

ಅ॥ (ಯಾವ ಕಾರಣದಿಂದ) ಈ ದವಂಘೋಷನು ಮೊದಲು ದನು ಎಂದು ಹೆಸರುಳ್ಳ ಗಂಧರ್ವನೋ ಆದಕಾರಣ ಆ ದವಂಘೋಷರಾಜನು ಶ್ರೀಕೃಷ್ಣನಲ್ಲಿ ಭಕ್ತಿಯುಳ್ಳವನಾದನು, ಪಾಪಿಷ್ಠನಾದ ಪ್ರಸಿದ್ಧನಾದ ಸೃಗಾಲನೆಂದು ಹೆಸರುಳ್ಳ ವಸುದೇವಪುತ್ರನು ಪಟ್ಟಣವನ್ನು ಕುರಿತು ಬಂದ ಆ ಕೃಷ್ಣಾದಿಗಳನ್ನು ತಿಳಿದು ಸಿಟ್ಟಿನಿಂದ ಬಂದನು, ॥ ೩೦ ॥

ಮೂ ॥ ಸೂರ್ಯಪ್ರದತ್ತಂ ರಥಮಾರುಹ್ಯ ದಿವ್ಯಂ
ವರಾದವಧ್ಯಸ್ತಿಗ್ಮ ರುಚೇಃ ಸ ಕೃಷ್ಣಂ ।

ಯೋದ್ಧುಂ ಯಯಾವವಮುಚಚ್ಛಾಸ್ತ್ರಸಂಘಾನ್
ಶಿರಸ್ತಸ್ಯಾಥಾಶು ಜಹಾರ ಕೃಷ್ಣಃ ॥ ೩೧ ॥

ಅ॥ ತೀಕ್ಷ್ಣವಾದ ಕಿರಣಗಳಿಂಳ್ಳ ಸೂರ್ಯನ ವರದ್ದೆಸೆಯಿಂದ ಸಂಹರಿಸಿಕೊಳ್ಳಲ್ಪಡದೆ ಇರುವ ಆ ಸೃಗಾಲ ವಾಸುದೇವನು ಸೂರ್ಯನಿಂದ ಕೊಡಲ್ಪಟ್ಟ ದಿವ್ಯವಾದ ರಥವನ್ನು ಏರಿ ಕೊಂಡು ಕೃಷ್ಣನ ಸವಿೂಪಕ್ಕೆ ಯಿಂದ್ಧಕ್ಕೋಸ್ಕರ ಹೋದನು. ಅಸ್ತ್ರಗಳ ಸವಿಾಪದಾಯಗಳನ್ನು ಬಿಟ್ಟನು. ಆಮೇಲೆ ಶ್ರೀಕೃಷ್ಣನು ಆ ಸೃಗಾಲ ವಾಸುದೇವನ ಶಿರಸ್ಸನ್ನು ಶೀಘ್ರದಲ್ಲಿ ಕತ್ತರಿಸಿದನು, ॥ ೩೧ ॥

ಮೂ ॥ ದ್ವಿಧಾ ಕೃತ್ವಾ ದೇಹಮುಸ್ಯಾರಿಣಾ ಚ
ಪುತ್ರಂ ಭಕ್ತಂ ತಸ್ಯ ರಾಜ್ಯೇಽಭಿಷಿಚ್ಯ ।
ಸ ಶಕ್ರದೇವಂ ಮಣಿಭದ್ರಃ ಪುರಾ ಯೋ
ಯಯೌ ಪುರೀಂ ಸ್ವಾಂ ಸಹಿತೋಽಗ್ರಜೇನ ॥ ೩೨ ॥

ಅ॥ ಶ್ರೀಕೃಷ್ಣನು ಸೃಗಾಲ ವಾಸುದೇವನ ಶರೀರವನ್ನು ಸುದರ್ಶನಾಯುಂಧದಿಂದ ಎರಡು ಶೀಳನ್ನಾಗಿ ವಾಡಿ ವೆುಂಲರೂಪದಲ್ಲಿ ಯಾರು ವಣಿಭದ್ರಾಖ್ಯ ದೇವತೆಯು ಇರುತ್ತಿದ್ದನೋ ಅಂತಹ, ಸೃಗಾಲ ವಾಸುದೇವನ ಪುತ್ರನಾದ, ತನ್ನ ಭಕ್ತನಾದ ಶಕ್ರದೇವನಾವುಂಕನನ್ನು ರಾಜ್ಯದಲ್ಲಿ ಪಟ್ಟಾಭಿಷೇಕ ವಾಡಿ ಅಣ್ಣನಿಂದ ಕೂಡಿಕೊಂಡು ತನ್ನದಾದ ವುಧುರಾಪಟ್ಟಣವನ್ನು ಕುರಿತು ಹೋದನು. (ವಣಿಭದ್ರನು ಸೃಗಾಲ ವಾಸುದೇವನ ವುಗನು ಶಕ್ರದೇವ ನಾವುಂಕನು,) ॥ ೩೨ ॥

'ಸಂದರ್ಶಯನ್ ಬಲಿನಾಂ' ಇತ್ಯಾದಿಗಳಿಂದ ಉಪಕ್ರಾಂತವಾದ ಅರ್ಥವನ್ನು ಉಪಸಂಹಾರವಾಡುತ್ತಾರೆ—

ಮೂ ॥ ನೀತಿಂ ಬಲಿಷ್ಠಸ್ಯ ವಿಹಾಯ ಸೇನಾಂ
ದೂರಾದ್ಯುದ್ಧಂ ದರ್ಶಯಿತ್ವೈವ ಗುಪ್ತೈಃ ।
ಸ್ವಸೇನಾಯಾಃ ಸರ್ವಪೂರ್ಣಾತ್ಮಶಕ್ತಿಃ
ಪುನಃ ಪುರೀಂ ಪ್ರಾಪ್ಯ ಸಂ(ಸ)ಪೂಜಿತೋಽವಸತ್ ॥ ೩೩ ॥

ಅ॥ ಸರ್ವ ವಿಷಯದಲ್ಲಿಯೂ ಪೂರ್ಣವಾದ ಸ್ವರೂಪಶಕ್ತಿಯುಂಳ್ಳ ಶ್ರೀಕೃಷ್ಣನು ತವ್ಮ ಸೇನೆಯುನ್ನು ರಕ್ಷಿಸುವುದಕ್ಕಾಗಿ ಬಲಿಷ್ಠನಿಗೆ ಸೇನೆಯುನ್ನು ಬಿಟ್ಟು ದೂರ ಪ್ರದೇಶವನ್ನು ಹೊಂದಿಯುಂದ್ಧವನ್ನು ವಾಡತಕ್ಕದು ಎನ್ನುವ ನೀತಿಯುನ್ನು ತೋರಿಸಿಯೇ ಪುನಃ ಪಟ್ಟಣವನ್ನು ಹೊಂದಿ ಸರ್ವರಿಂದಲೂ ಚೆನ್ನಾಗಿ ಪೂಜಿಸಿಕೊಳ್ಳಲ್ಪಟ್ಟವನಾಗಿ ಆವಾಸವಾಡಿದನು,

ವಿಶೇಷಾಂಶ—ಬಲಿಷ್ಠನಾದವನು ಯುಂದ್ಧಕ್ಕೆ ಶತ್ರುವು ಬರುವಾಗ ತನ್ನ ಸೈನ್ಯವನ್ನು ಬಿಟ್ಟು ತಾನು ದೂರಕ್ಕೆ ಹೋದರೆ ಶತ್ರುವೂ ಕೂಡ ಸೇನೆಯಿಂದ ಕೂಡಿಕೊಂಡು ತನ್ನನ್ನು ಅನುಸರಿಸುತ್ತಾನೆ. ಆಗ ತನ್ನ ಸೈನ್ಯಕ್ಕೆ ರಕ್ಷಣೆಯಾಗುವುದು, ॥ ೩೩ ॥

ಮೂ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ್ಯ(ದ)ವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಸೃಗಾಲವಧೋ
ನಾಮ ಷೋಡಶೋಽಧ್ಯಾಯಃ ॥ ೧೬ ॥

ಅ॥ ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ್ಯರಿಂದ ನಿರ್ಮಿಸಿಕೊಳ್ಳಲ್ಪಟ್ಟ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಸೃಗಾಲ ವಾಸುದೇವನ ಸಂಹಾರವೆನ್ನುವ ಹದಿನಾರನೇ ಅಧ್ಯಾಯವು ಸವಶಾಪ್ತವಾಯಿತು. ॥ ೧೬ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಹದಿನೇಳನೇ ಅಧ್ಯಾಯವು

ಮೂ ॥ ಗತೇಽಥ ಚೇದಿಪೇ ಸ್ವಕಂ ಪುರಂ ಜನಾರ್ದನೋಽಶೃಣೋತ್ ।
ರಮ್ಯೈವ ರುಕ್ಮಿಣೀತಿ ಯೋದ್ಯತಾಂ ಸ್ವಯಂವರಾಯ ತಾಂ ॥ ೧ ॥

ಅ॥ ಚೇದಿದೇಶಕ್ಕೆ ಅಧಿಪತಿಯಾದ ದಮಂಘೋಷನು ತನ್ನ ಪಟ್ಟಣಕ್ಕೆ ಹೋಗುತ್ತಿರಲು ಶ್ರೀಕೃಷ್ಣನು ರುಗ್ಮಿಣೀ ನಾಮಕಳಾಗಿ ಯಾರು ರಮಾದೇವಿಯೋ ಸ್ವಯಂವರಕ್ಕೋಸ್ಕರ ಉದ್ಯುಕ್ತಳಾದ ಅಂತಹ ರುಗ್ಮಿಣಿಯನ್ನು ಕೇಳಿದನು,

ವಿಶೇಷಾಂಶ—ವಿದರ್ಭರಾಪಟ್ಟಣಕ್ಕೆ ಹೋಗುವ ಕಾಲದಲ್ಲಿ ಉಂಟಾದ ಕಥೆಯನ್ನು ಹೇಳುತ್ತಾರೆ, ॥ ೧ ॥

ಮೂ ॥ ಸ ರುಕ್ಮಿನಾಮುಕೋಽಗ್ರಜಃ ಶ್ರಿಯೋ ದ್ವಿಷನ್ರಮಾಪತಿಂ ।
ಹರೇಃ ಪ್ರದಾತುಮುದ್ಯತಾಂ ನ್ಯವಾರಯದ್ಧರಿಪ್ರಿಯಾಂ ॥ ೨ ॥

ಅ॥ ಶ್ರೀರೂಪಳಾದ ರುಗ್ಮಿಣೀ ದೇವಿಯಂ ಅಣ್ಣನಾದ ರುಗ್ಮಿಯೆಂಬಂ ಹೆಸರುಳ್ಳ ದೈತ್ಯನು ಲಕ್ಷ್ಮೀಪತಿಯಾದ ಶ್ರೀಕೃಷ್ಣನನ್ನು ದ್ವೇಷಿಸುತ್ತಾ, ಶ್ರೀಕೃಷ್ಣನಿಗೆ ಪ್ರಿಯಳಾದ ರುಗ್ಮಿಣಿಯನ್ನು ಶ್ರೀಕೃಷ್ಣನಿಗೆ ಕೊಡಲಿಕ್ಕೆ ಸನ್ನದ್ಧರಾದ ಭೀಷ್ಮಕಾದಿ ಸದ್ಬಂಧುಗಳನ್ನು ತಡೆದನು; (ಎನ್ನುವ ವೃತ್ತಾಂತವನ್ನು ಕೇಳಿದನು.) ॥ ೨ ॥

ಮೂ ॥ ಪ್ರಘೋಷಿತೇ ಸ್ವಯಂವರೇಽಥ ತೇನ ಮಾಗಧಾದಯಃ ।
ಸವಿತಾಯುರುಗ್ರಹೌರುಷಾಃ ಸಸಾಲ್ವಪೌಂಡ್ರಚೇದಿಪಾಃ ॥ ೩ ॥

ಅ॥ ನಿವಾರಣಾನಂತರದಲ್ಲಿ ರುಗ್ಮಿಣಿಯಿಂದ ಸ್ವಯಂವರವು (ಭೇರೀತಾಡನಾದಿಗಳಿಂದ) ಧ್ವನಿಗೈಯಲ್ಪಡುತ್ತಿರಲು ಕ್ರೂರವಾದ ಪರಾಕ್ರಮವುಳ್ಳ ಸಾಲ್ವ ಪೌಂಡ್ರ ಚೈದ್ಯ ಇವರಿಂದ ಕೂಡಿದ ಜರಾಸಂಧ ಮೊದಲಾದವರು ಬಂದರು. ॥ ೩ ॥

ಮೂ ॥ ತದಾ ಜಗಾಮ ಕೇಶವೋ ಜವೇನ ಕುಂಡಿನಂ ಪುರಂ ।
ಸ್ಮೃತೋಽಥ ತೇನ ಪಕ್ಷಿರಾಟ್ ಸಮಾಜಗಾಮ ಕೇಶವಂ ॥ ೪ ॥

ಅ॥ ರಾಜರು ಬರುವ ಕಾಲದಲ್ಲಿ ಆ ಶ್ರೀಕೃಷ್ಣನಿಂದ ಸ್ಮರಿಸಿಕೊಳ್ಳಲ್ಪಟ್ಟ ಗರುಡನು ಶ್ರೀಕೃಷ್ಣನ ಸವಿಾಪಕ್ಕೆ ಬಂದನು. ಗರುಡನು ಬಂದ ಮೇಲೆ ಶ್ರೀಕೃಷ್ಣನು (ಗರುಡನನ್ನು ಏರಿ ಕೊಂಡು) ವೇಗದಿಂದ ಕುಂಡಿನಪುರಕ್ಕೆ ಹೋದನು; ॥ ೪ ॥

ಮೂ ॥ ಪತತ್ರಿವಾಯುನಾಸ್ಯ ತೇ ನರೇಶ್ವರಾಃ ಪ್ರಸಾಽತಿತಾಃ ।
ಯದೇದೃಶಂ ಪತತ್ರಿಣೋ ಬಲಂ ಹರೇಃ ಕಿಮುಚ್ಯತೇ ॥ ೫ ॥

ಅ॥ ಈ ಗರುಡನ ರೆಕ್ಕೆಗಳ ಗಾಳಿಯಿಂದ ಆ ಜರಾಸಂಧನೇ ಮೊದಲಾದ ರಾಜಶ್ರೇಷ್ಠರು ಬಿದ್ದಿರುವರು. ಯಾವ ಕಾರಣದಿಂದ ಗರುಡನಿಗೆ ಇಂತಹ ಬಲವಿದೆಯೋ (ಆ ಕಾರಣದಿಂದ) ಶ್ರೀಹರಿಯ ಬಲವು (ಅತ್ಯುತ್ತಮವೆಂದು) ಏನು ಹೇಳಲ್ಪಡುತ್ತದೆ, ॥ ೫ ॥

ಮೂ ॥ ಕಿಮತ್ರ ನಃ ಕೃತಂ ಭವೇತ್ ಸುಖಾಯ ಹೀತಿ ತೇಽಬ್ರುವನ್ ।
ಅಥಾಬ್ರವೀಜ್ಜರಾಸುತೋ ಜಯಾ ಪಯೋಬ್ಧಿ ಮಂದಿರಃ ॥ ೬ ॥
ಕಿಲೈಷ ಪಕ್ಷಿವಾಹನೋ ಯತಶ್ಚ ನಾನ್ಯಥಾ ಭವೇತ್ ।
ಜಿತಾ ವಯಂ ಚ ಸರ್ವಶೋಽಮುನೈಕಲೇನ ಸಂಯುಗೇ ॥ ೭ ॥

ಅ॥ ಸ್ವಯಂವರದಲ್ಲಿ ನಮಗೆ ಯಾವ ಕರ್ಮವು ಸುಖಕ್ಕೋಸ್ಕರ ಆಗುವುದು, ಎಂದು ಆ ರಾಜರು ಹೇಳಿದರು. ಆಮೇಲೆ ಜರಾಸಂಧನು ಹೇಳಿದನು. ಯಾವ ಕಾರಣದಿಂದ ಈ ಕೃಷ್ಣನು ಜಯವುಳ್ಳವನೇ ಗರುಡನೇ ವಾಹನನಾಗಿ ಉಳ್ಳವನು, ಕ್ಷೀರಸಮುದ್ರವು ಮಂದಿರವಾಗಿ ಉಳ್ಳವನಷ್ಟೆ. ಕ್ಷೀರಸಮುದ್ರವು ಮಂದಿರವಾಗಿ ಇಲ್ಲದಿದ್ದರೆ ಗರುಡನು ವಾಹನನಾಗಿ ಉಳ್ಳವನು ಆಗದೆ ಹೋಗಬೇಕಾಗುವುದು. ಒಬ್ಬ ಈ ಕೃಷ್ಣನಿಂದಲೇ ಯುದ್ಧದಲ್ಲಿ ನಾವೆಲ್ಲರೂ ಪರಾಜಿತರಾಗಿರುವೆವು. ॥ ೬ ॥ ೭ ॥

ಮೂ ॥ ಅನೇಕಶೋ ನ ಸಂಗತ್ಯೈರ್ಜಿತಃ ಕದಾಚಿದೇಷ ಹಿ ।
ಅಮುಷ್ಯ ಚಾಗ್ರಜಃ ಪುರಾ ನಿಹಂತುಮುದ್ಯತೋ ಹಿ ಮಾಂ ॥ ೮ ॥

ಅ॥ ಅನೇಕಾವರ್ತಿ ಚೆನ್ನಾಗಿ ಎಂಳೆತರಾದ ನಮ್ಮಿಂದ ಈ ಕೃಷ್ಣನು ಯಾವಾಗಲೂ ಪರಾಜಿತನು ಆಗಲಿಲ್ಲ. ಪೃಥುವು ಯುದ್ಧದಲ್ಲಿ ಕೃಷ್ಣನ ಅಣ್ಣನಾದ ಬಲರಾಮನು ನನ್ನನ್ನು ಕೊಲ್ಲಲಿಕ್ಕೆ ಸನ್ನದ್ಧನಾಗಿರುತ್ತಾನೆ. ॥ ೮ ॥

ಮೂ ॥ ಅದೃಶ್ಯ ವಾಕ್ಯತೋಽತ್ಯಜತ್ಪ್ರತಾಡನಾತ್ಸುಪೀಡಿತಂ ।
ಕಿಮುಸ್ತ ತೂಚ್ಯತೇ ಬಲಂ ವಯಂ ತೃಣೋಪಮಾಃ ಕೃತಾಃ ।
ಸಮುಸ್ತಶೋ ಮೃಧೇ ಮೃಧೇ ಹಿ ಯೇನ ಚಾಕ್ಷತೇನ ಹಿ(ಹಾ) ೯

ಅ॥ ಅದೃಶ್ಯರಾದ ವಾಯುದೇವರ ವಾಕ್ಯದ್ದೆಸೆಯಿಂದ (ಅಂದರೆ ಅಶರೀರವಾಣಿಯಿಂದ) ಚೆನ್ನಾಗಿ ಹೊಡೆಯೋಣದರಿಂದ ಚೆನ್ನಾಗಿ ಪೀಡಿತನಾದ (ನನ್ನನ್ನು ಬಲರಾಮನು) ಬಿಟ್ಟರುವನು. ಯಾವ ಕಾರಣದಿಂದ ಕ್ಷತರಹಿತನಾದ ಯಾವ ಶ್ರೀಕೃಷ್ಣನಿಂದ ಪ್ರತಿಯುದ್ಧದಲ್ಲಿಯೂ ನಾವೆಲ್ಲರೂ ತೃಣಕ್ಕೆ ಸದೃಶರಾಗಿ ಮಾಡಲ್ಪಟ್ಟಿರುವೆವೋ, ಆದಕಾರಣ ಶ್ರೀಕೃಷ್ಣನ ಬಲವು ಏನು ಹೇಳಲ್ಪಡುತ್ತದೆ. (ಅಂದರೆ ಕೃಷ್ಣನ ಬಲವು ಉತ್ತಮವೆಂದು ಏನು ಹೇಳತಕ್ಕದು.) ॥ ೯ ॥

ಮೂ ॥ ಕಿಮತ್ರ ಕುರ್ಮತಾಂ ಸುಖಂ ಭವೇದುದೀರ್ಣಸಂಕಟೇ ।
ಇತಿ ಬ್ರುವನ್ನವಾಙ್ಮುಖಂ ನೃಪಶ್ಚಕಾರ ವಿಚ್ಛವಿಃ (ವಿ) ॥ ೧೦ ॥

ಅ॥ ಸ್ವಯಂವರದಲ್ಲಿ ಉತ್ಕೃಷ್ಟವಾದ ಆಪತ್ತು ಪ್ರಾಪ್ತವಾಗುತ್ತಿರಲು ಯಾವ ಕರ್ಮವನ್ನು ಮಾಡತಕ್ಕ ನಮಗೆ ಸುಖವು ಆಗುವುದು, ಎಂದು ಹೇಳುವ ಜರಾಸಂಧನು ಹೋಗಲ್ಪಟ್ಟ ಕಾಂತಿಯುಳ್ಳವನಾಗಿ ಅಧೋ ಮುಖವನ್ನು ಮಾಡಿದನು. ॥ ೧೦ ॥

ಮೂ ॥ ಅಥಾಹ ಚೇದಿಭೂಪತಿಃ ಸದಂತವಕ್ತ್ರಕೋ ವಚಃ ।
ಪುರಾ ಹರೇರ್ಹಿ ಪಾರ್ಷದಃ ಪ್ರಸನ್ನಬುದ್ಧಿರೇಕದಾ ॥ ೧೧ ॥

ಅ॥ ಆವಮೇಲೆ ದಂತವಕ್ತ್ರನಿಂದ ಕೂಡಿದ ಶಿಶುಪಾಲನು ಯಾವ ಕಾರಣದಿಂದ ಮೊದಲು ಶ್ರೀಹರಿಯ ಪಾರ್ಷದನೋ ಆದಕಾರಣ ಕೆಲವು ಕಾಲದಲ್ಲಿ (ಶ್ರೀಹರಿಯಲ್ಲಿ) ಸಂತುಷ್ಟವಾದ ಬುದ್ಧಿಯುಳ್ಳವನು. (ಆದುದರಿಂದಲೇ ಅಂತಹ) ವಾತನನ್ನು ಹೇಳಿದನು. ॥ ೧೧ ॥

ಮೂ ॥ ಶೃಣುಷ್ವ ರಾಜಸತ್ತಮ ಪ್ರಭುಂ ಶಿವಸ್ವಯಂಭುವೋಃ ।
ಹರಿಂ ವದಂತಿ ಕೇಚಿದಪ್ಯದೋ ಭವೇನ್ನ ವೈ ಮೃಷಾ ॥ ೧೨ ॥

ಅ॥ ರಾಜಶ್ರೇಷ್ಠನಾದ ಜರಾಸಂಧನೇ ಕೇಳು. ಕೆಲವು ಸಜ್ಜನರು ಶ್ರೀಕೃಷ್ಣನನ್ನು ರುದ್ರ ಬ್ರಹ್ಮರಿಗೂ ಸ್ವಾಮಿಯೆಂದನ್ನಾಗಿ ಹೇಳುತ್ತಾರೆ. ಈ ವಾತು ಮಿಥ್ಯಾಭೂತವಲ್ಲ. (ಸತ್ಯವೇ) ॥ ೧೨ ॥

ಮೂ ॥ ತಥಾವಯೋಶ್ಚ ದರ್ಶನೇ ಭವೇತ್ಕದಾಚಿದೂರ್ಜಿತಾ ।
ಅಮುಷ್ಯ ಭಕ್ತಿರನ್ಯಥಾ ಪುನಶ್ಚ ಜಾಯತೇ ಕ್ರುಧಾ ॥ ೧೩ ॥

ಅ॥ ಹಾಗೆಯೇ ದಂತವಕ್ತ್ರನಿಗೂ ನನಗೂ ಶ್ರೀಕೃಷ್ಣನ ದರ್ಶನವು ಉಂಟಾಗುವಾಗ ಕೆಲವು ವೇಳೆ ಉತ್ಕೃಷ್ಟವಾದ ಭಕ್ತಿಯಂತೆ ಹುಟ್ಟುವುದು. ಆಮೇಲೆ ಕೋಪವು ಹುಟ್ಟುವುದು. ಭಕ್ತಿ, ಭಾವವು (ದ್ವೇಷವೂ) ಹುಟ್ಟುವುದು. ॥ ೧೩ ॥

ಮೂ ॥ ನ ಕಾರಣಂ ಚ ವಿದ್ಮ ಹೇ ನ ಸಂಶಯಃ ಪರೋ ಹರಿಃ ।
ವ್ರಜಾಮ ತಂ ಸುಖಾರ್ಥಿನೋ ವಯಂ ವಿಹಾಯ ಶತ್ರುತಾಂ ॥ ೧೪ ॥

ಅ॥ ಶ್ರೀಕೃಷ್ಣನಲ್ಲಿ ಭಕ್ತಿದ್ವೇಷಗಳು ಹುಟ್ಟುವ ವಿಷಯದಲ್ಲಿ ಕಾರಣವನ್ನೂ ತಿಳಿಯುವುದಿಲ್ಲ. ಶ್ರೀಕೃಷ್ಣನು ಸರ್ವೋತ್ತಮನು, ಸಂಶಯವಿಲ್ಲ. ನಾವು ಸುಖವನ್ನು ಇಚ್ಛಿಸುವವರಾಗಿ ಶತ್ರುಭಾವವನ್ನು ಬಿಟ್ಟು ಶ್ರೀಕೃಷ್ಣನನ್ನೇ ಹೊಂದುವ. ॥ ೧೪ ॥

ಮೂ ॥ ಇದಂ ಹಿ ನಃ ಶುಭಪ್ರದಂ ನ ಚೇನ್ಮೃಧಾ ಶುಭಂ ಕ್ವಚಿತ್ ।
ಇತೀರಿತೋ ಜರಾಸುತೋ ದದರ್ಶ ತೌ ದಹನ್ನಿವ ॥ ೧೫ ॥

ಅ॥ ರಕ್ಷಕನನ್ನಾಗಿ ಹೊಂದಬೇಕೆಂದು ನಾನು ಹೇಳಿದ್ದೇ ನವುಗೆ ಸುಖವನ್ನು ಕೊಡತಕ್ಕದ್ದು, ನಾನು ಹೇಳಿದ್ದನ್ನು ಮಾಡದೆ ಇದ್ದರೆ ಎಲ್ಲಿಯೂ ಶುಭವಾಗಲಾರದು, ಹೀಗೆ ಹೇಳಿಕೊಳ್ಳಲ್ಪಟ್ಟ ಜರಾಸಂಧನು ಶಿಶುಪಾಲ ದಂತವಕ್ರರನ್ನು ಸುಡತಕ್ಕವನಂತೆ ಕಂಡನು. ॥ ೧೫ ॥

ಮೂ ॥ ಅಥ ಪ್ರಹಸ್ಯ ಸೌಭಪಾಡ್ವಚೋ ಜಗಾದ ಮಾಗಧಂ ।
ವಿನಿಂದ್ಯ ತೌ ಕ್ರುಧಾ ಸ್ಫುರನ್ ಕ್ರುಧಾ ಸ್ಫುರಂತಮಾಕ್ಷ್ಯ ಚ ॥ ೧೬ ॥

ಅ॥ ಆವಮೇಲೆ ಸಾಲ್ವನು ತಾನು ಶಿಟ್ಟಿನಿಂದ ಪ್ರಕಾಶಿಸುವವನಾಗಿ ಶಿಟ್ಟಿನಿಂದ ಪ್ರಕಾಶಿಸಿಕೊಂಡಿರತಕ್ಕ ಜರಾಸಂಧನನ್ನು ನೋಡಿ ಶಿಶುಪಾಲ ದಂತವಕ್ರರನ್ನು ಚೆನ್ನಾಗಿ ನಿಂದಿಸಿ ನೆಗ್ಗಾಡಿಕೊಂಡು ಜರಾಸಂಧನನ್ನು ಕುರಿತು ವಾತನ್ನು ಹೇಳಿದನು. ॥ ೧೬ ॥

ಮೂ ॥ ನ ತನ್ಮೃಷಾ ಹರಿಃ ಸ್ವಯಂ ಜನಾರ್ದನೋ ವಧಾಯ ನಃ ।
ಪ್ರಜಾತ ಏಷ ಯಾದವೋ ವಯಂ ಚ ದಾನಮೋಶ್ವರಾಃ ॥ ೧೭ ॥

ಅ॥ ಶ್ರೀಕೃಷ್ಣನು ಶ್ರೀಹರಿಯು ಎಂದು ನೀನು ಹೇಳಿದ ವಾಕ್ಯವು ಮಿಥ್ಯೆಯಲ್ಲ (ಹಾಗಾದರೆ ಶ್ರೀಕೃಷ್ಣನಾಗಿ ಏಕೆ ಹುಟ್ಟಿರುತ್ತಾನೆ ಎಂದರೆ—) ಈ ಹರಿಯು (ಯಾವ ಕಾರಣದಿಂದ) ಜನಾರ್ದನನೋ (ಅಂದರೆ ದುಷ್ಟಜನರನ್ನು ಸಂಹರಿಸತಕ್ಕವನೋ) (ಆದಕಾರಣ) ನಮ್ಮನ್ನು ಸಂಹರಿಸುವುದಕ್ಕಾಗಿ ಯಾದವನಾಗಿ ಹುಟ್ಟಿರುತ್ತಾನೆ; (ನಮ್ಮನ್ನು ಏತಕ್ಕೆ ಸಂಹರಿಸುತ್ತಾನೆಂದರೆ)— ನಾವಾದರೂ ದಾನವರಿಗೆ ಐಶ್ವರ್ಯವುಳ್ಳವರು. ॥ ೧೭ ॥

ಹಾಗಾದರೆ ದ್ವೇಷನಿವೃತ್ತಿಗಾಗಿ ಸಂಧಾನವನ್ನು ಏತಕ್ಕೆ ಮಾಡುವುದಿಲ್ಲವೆಂದರೆ—

ಮೂ ॥ ಸ್ವಧರ್ಮ ಏಷ ನಃ ಸದಾ ದೃಢಪ್ರತೀಪತಾ ಹರೌ ।
ಸ್ವಧರ್ಮಿಣೋ ಹತಾ ಅಪಿ ಪ್ರಯಾಮ ಸದ್ಗತಿಂ ಧ್ರುವಂ ॥ ೧೮ ॥

ಅ॥ ಶ್ರೀಹರಿಯಲ್ಲಿ ಸಾರ್ವಕಾಲಿಕವಾದ ದೃಢವಾದ ವಿರೋಧವು ಇದು ನಮಗೆ ಸ್ವಧರ್ಮವು. ತಮ್ಮ ಧರ್ಮವುಳ್ಳವರಾಗಿ ಸಂಹೃತರಾದಾಗ್ಯೂ ನಾವು ನಿಶ್ಚಯವಾಗಿಯೂ ಸದ್ಗತಿಯನ್ನು ಹೊಂದುತ್ತೇವೆ. ॥ ೧೮ ॥

ಮೂ ॥ ಶಿವಶ್ಚ ನಃ ಪರಾ ಗತಿರ್ಗುರುರ್ಭವಾನರಿರ್ಹರಿಃ (ರೇಃ) ।
ಇತೀರಿತಃ ಸ ಮಾಗಧೋ ಜಗಾದ ಸಾಧುಸಾಧ್ವಿತಿ ॥ ೧೯ ॥

ಅ॥ ರುದ್ರನೇ ನಮಗೆ ಪರದೇವತೆಯು, ನೀನೇ ಗುರುವು, ಶ್ರೀಹರಿಗೆ ಶತ್ರುಭೂತನು,

---

ಅಥವಾ ಶ್ರೀಹರಿಯು ಶತ್ರುಭೂತನು, ಈ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟ ಆ ಜರಾಸಂಧನು ಅತಿಪ್ರಶಸ್ತವಾದ ವಚನವು ಹೇಳಲ್ಪಟ್ಟಿತು, ಎಂದು ಹೇಳಿದನು. ॥ ೧೯ ॥

ಮೂ ॥ ತಥೈವ ರುಕ್ಮಿಪೂರ್ವಕಾಃ ಕರೂಶಚೇದಿಪೌ ಚ ತೌ ।
ವಿನಿಶ್ಚಯಂ ಕೃಬುದ್ಧಯೋ ಯುಧೇ ಚ ಚಕ್ರುರೂರ್ಜಿತಂ ॥ ೨೦ ॥

ಅ॥ ಸಾಲ್ವನಂತೆ ರುಗ್ಮಿಯೇ ಮೊದಲಾದವರು, ಆ ಕರೂಶದೇಶಗಳಿಗೂ ಚೇದಿದೇಶಗಳಿಗೂ ರಕ್ಷಕರಾದ ದಂತವಕ್ರ ಶಿಶುಪಾಲರು ಕೂಡ ಹಾಗೆಯೇ (ಹೇಳಿದರು) ದುರ್ಬುದ್ಧಿಯುಳ್ಳ ಸ್ಯಾಲ್ವಾದಿಗಳು (ಕೃಷ್ಣನಿಂದ ಕೂಡಿಕೊಂಡು)ಯುದ್ಧದಲ್ಲಿ ಉತ್ಕೃಷ್ಟವಾದ ನಿಶ್ಚಯವನ್ನು ಮಾಡಿದರು. ॥ ೨೦ ॥

ಮೂ ॥ ಸದಾ ಪ್ರತೀಪಕಾರಿಣೌ ಭವಾವ ಕೃಷ್ಣ ಇತ್ಯಪಿ ।
ಗುರೋಃ ಪ್ರಸಾದಮಾಪ್ನುತಾಂ ಕರೂಶಚೇತಿಭೂಭೃತೌ ॥೨೧ ॥

ಅ॥ ಯಾವಾಗ ಶಿಶುಪಾಲ ದಂತವಕ್ರರೂ ಕೂಡ ಶ್ರೀಕೃಷ್ಣನಲ್ಲಿ ಯಾವಾಗಲೂ ವಿರೋಧಕಾರಿಗಳು ಆಗುವ ಎಂದು ನಿಶ್ಚಯವನ್ನು ಮಾಡಿದರೋ ಆಗ ಗುರುವಾದ ಜರಾಸಂಧನ ಪ್ರಸಾದವನ್ನೂ ಹೊಂದಿದರು ॥ ೨೧ ॥

ಮೂ ॥ ಪುನಶ್ಚ ತೇ ಶ್ವಮುಂತ್ರಯನ್ ಸಹೈವ ಪಾಪಬುದ್ಧಯಃ ।
ಧ್ರುವಂ ಸಮಾಗತೋ ಹರಿರ್ಲಭೇತ ರುಕ್ಮಿಣೀಮಿಮಾಂ ॥ ೨೨ ॥

ಅ॥ ಮತ್ತು ಪಾಪಿಷ್ಠವಾದ ಬುದ್ಧಿಯುಳ್ಳ ಆ ಜರಾಸಂಧಾದಿಗಳು ಒಟ್ಟು ಕೂಡಿಯೇ ವಿಚಾರಮಾಡಿದರು, ನಿಶ್ಚಯವಾಗಿಯೂ ಶ್ರೀಹರಿಯು ಬಂದವನಾದರೆ ಈ ರುಗ್ಮಿಣಿಯನ್ನು ಹೊಂದುವನು. ॥ ೨೨ ॥

ಮೂ ॥ ಅಯಂ ತ್ರಿಲೋಕಸುಂದರಸ್ಸು(ರೋಽನು)ರೂಪಿಣೀ ಚ ರುಕ್ಮಿಣೀ
ಮುಖೇನ ಬಾಹುನಾಪ್ಯಯಂ ಸಮುಸ್ತಲೋಕಜಿದ್ವಶೀ ॥ ೨೩ ॥

ಅ॥ ಶ್ರೀಕೃಷ್ಣನು ಮೂರು ಲೋಕಗಳಲ್ಲಿಯೂ ಪರಮ ಸುಂದರನು. ರುಗ್ಮಿಣಿಯು ಶ್ರೀಕೃಷ್ಣನ ರೂಪಕ್ಕೆ ಸದೃಶವಾದ ರೂಪವುಳ್ಳವಳು. ಶ್ರೀಕೃಷ್ಣನು ಮುಖ ತೇಜಸ್ಸಿನಿಂದ ಸರ್ವ ಲೋಕದ ಮುಖ ಕಾಂತಿಯನ್ನೂ ಗೆದ್ದವನು. ವಶೀಕರಿಸಿದವನು, (ಅಂದರೆ ಶ್ರೀಕೃಷ್ಣನ ಮುಖವನ್ನು ನೋಡೋಣದರಿಂದ ಎಲ್ಲರೂ ಶ್ರೀಕೃಷ್ಣನ ಅಧೀನರಾಗುತ್ತಾರೆ.) ಭುಜಬಲದಿಂದಲೂ ಸಮಸ್ತ ಲೋಕವನ್ನು ಗೆದ್ದವನು. ಸರ್ವ ಲೋಕವನ್ನು ವಶೀಕರಿಸಿದವನು. ॥ ೨೩ ॥

ಮೂ ॥ ಸಮುಸ್ತವೇದಿನಾಂ ವರಂ ಜಿತಾರಿಮುಗ್ರ್ಯರೂಪಿಣಂ ।
ಸಮುಸ್ತಯೋಷಿತಾಂ ವರಾ ವ್ರಜೇತ ರುಕ್ಮಿಣೀ ಧ್ರುವಂ ॥ ೨೪ ॥

ಅ॥ ಎಲ್ಲಾ ಸ್ತ್ರೀಯರಲ್ಲಿಯೂ ಶ್ರೇಷ್ಠಳಾದ ರುಗ್ಮಿಣಿಯು ನಿಶ್ಚಯವಾಗಿಯೂ ಸರ್ವಜ್ಞರಲ್ಲಿ ಶ್ರೇಷ್ಠನಾದ, ಗೆಲ್ಲಲ್ಪಟ್ಟವನ್ಮಥನುಳ್ಳ, ಶ್ರೇಷ್ಠರೂಪವುಳ್ಳ ಶ್ರೀಕೃಷ್ಣನನ್ನು ಹೊಂದುವಳು. ॥ ೨೪ ॥

ಮೂ ॥ ವಯಂ ಚ ಮಾನಸಂಕ್ಷಯಂ ನಿತಾಂತಮಾಪ್ನುಮಸ್ತದಾ ।
ನ ಶಕ್ನುಮೋ ನಿವಾರಿತುಂ ಶರೈರಮುಂ ಕಥಂಚನ ॥ ೨೫ ॥

ಅ॥ ಆಗ ನಾವು ಅತ್ಯಂತವಾಗಿ ಮಾನಭಂಗವನ್ನು ಹೊಂದುತ್ತೇವೆ. ಈ ಕೃಷ್ಣನನ್ನು ಬಾಣಗಳಿಂದ ತಡೆಯಲಿಕ್ಕೆ ಯಾವ ಪ್ರಕಾರದಿಂದಲೂ ಸಮರ್ಥರಾಗಲಾರೆವು. ॥ ೨೫ ॥

ಮೂ ॥ ಅತಃ ಸ್ವಯಂವರೇ ಯಥಾ ನ ಸಂಗಮೋ ಹರೇರ್ಭವೇತ್ ।
ತಥಾ ವಿಧಾನಮೇವ ನಃ ಸುನೀತಿರೂರ್ಜಿತಾ ಧ್ರುವಂ ॥ ೨೬ ॥

ಅ॥ ಆದಕಾರಣ ಸ್ವಯಂವರದಲ್ಲಿ ಹೇಗೆ ಶ್ರೀಕೃಷ್ಣನ ಮೇಲನವು ಆಗಲಾರದೋ ಹಾಗೆ ಮಾಡತಕ್ಕುದೇ ನಮಗೆ ನಿಶ್ಚಯವಾಗಿಯೂ ಮಹತ್ತಾದ ಉತ್ತಮ ನೀತಿಯು. ॥ ೨೬ ॥

ಮೂ ॥ ಅತೋ ನ ದೇಯಮಸ್ಯ ನಃ ಸುಭೂಭುಜಾಂ ಸಮಾಗಮೇ ।
ಕ್ವಚಿತ್ ಕದಾಚಿದಾಸನಂ ನ ಚಾರ್ಘ್ಯಪೂರ್ವಕೋ ವಿಧಿಃ ॥ ೨೭ ॥

ಅ॥ ಕೃಷ್ಣನ ಸಂಗಮವು ನಮಗೆ ಆಗಬಾರದಿರುವುದಕ್ಕಾಗಿ ಈ ಕೃಷ್ಣನಿಗೆ ರಾಜಾಧಿರಾಜರಾದ ನಮ್ಮ ಸಮ್ಮೇಳನದಲ್ಲಿ ಇಲ್ಲಿಯಾಗಲೀ ಬೇರೆಕಡೆಯಾಗಲೀ ಯಾವ ಸಮಯದಲ್ಲಿಯೂ ಆಸನವನ್ನು ಕೊಡಬಾರದು, ಅರ್ಘ್ಯಪೂರ್ವಕವಾವ ಪೂಜೆಯನ್ನು ಮಾಡಬಾರದು. ॥೨೭॥

ಮೂ ॥ ನ ಚಾಸ್ಯತಿ ಕ್ಷಿತೌ ಕ್ವಚಿತ್ ನಿಮೂನಿತಃ ಪುರೋ ಹಿ ನಃ ।
ವರಾಸನಸ್ಥಭೂಭುಜಾಂ ಸ ಮೂನಿತೋ ಹಿ ದೈವತೈಃ ॥ ೨೮ ॥

ಅ॥ ಉತ್ತಮಾಸನದಲ್ಲಿ ಕುಳಿತಿರತಕ್ಕ ರಾಜರಾದ ನಮ್ಮ ಮುಂಭಾಗದಲ್ಲಿ ಅವಮಾನವನ್ನು ಹೊಂದಿದವನಾಗಿ ಭೂಮಿಯಲ್ಲಿ ಕೆಳಗೆ ಎಲ್ಲಿಯೂ ಕೂತುಕೊಳ್ಳುವದಿಲ್ಲ. ಏಕೆಂದರೆ ಆ ಶ್ರೀಕೃಷ್ಣನು ದೇವತೆಗಳಿಂದಲೂ ಪೂಜಿಸಿಕೊಳ್ಳಲ್ಪಟ್ಟವನೇ. ॥ ೨೮ ॥

ಮೂ ॥ ಸ ದರ್ಪಮಾನಸಂಯುತಃ ಕ್ರುಧಾ ಪ್ರಯಾಸ್ಯತಿ ಧ್ರುವಂ ।
ಪುರೀಂ ಸ್ವಕಾಂ ತತೋ ವಯಂ ವಿಧೇಮ ಚ ಸ್ವಯಂವರಂ ॥ ೨೯ ॥

ಅ॥ ಗರ್ವವೂ ಅಭಿಮಾನವೂ ಇವುಗಳಿಂದ ಕೂಡಿದ ಶ್ರೀಕೃಷ್ಣನು ಶಿಟ್ಟಿನಿಂದ ತನ್ನ [ಪಟ್ಟಣಕ್ಕೆ ಹೋಗುವನು. ಆಮೇಲೆ ನಾವು ಸ್ವಯಂವರವನ್ನು ಮಾಡುವೆವು. ॥ ೨೯ ॥

ಮೂ ॥ ಇತಿ ಸ್ಮ ಸರ್ವಭೂಭುಜಾಂ (ಭೃತಾಂ) ವಿನಿಶ್ಚಯಂ ಸ ಕೈಶಿಕಃ ।
ಕ್ರಥೋಽವಗಮ್ಯ ಭೀಷ್ಮಕಾನುಜೋಽಭ್ಯಯಾದ್ಧರಿಂ ದ್ರುತಂ ॥
॥ ೩೦ ॥

ಅ॥ ಈ ಪ್ರಕಾರವಾದ ಸರ್ವರಾಜರ ನಿಶ್ಚಯವನ್ನು ಭೀಷ್ಮಕ ರಾಜನ ತಮ್ಮನಾದ ಕೈಶಿಕನಿಂದ ಕೂಡಿದ ಕ್ರಥ ರಾಜನು ತಿಳಿದು ಶೀಘ್ರವಾಗಿ ಶ್ರೀಕೃಷ್ಣನ ಸವಿಾಪಕ್ಕೆ ಓಡಿಹೋದನು.
॥ ೩೦ ॥

ಮೂ ॥ ಪ್ರಣಮ್ಯ ಪಾದಪದ್ಮಯೋರ್ನಿಜಂ ಗೃಹಂ ಪ್ರವೇಶ್ಯ ಚ ।
ಮಹಾಸನಂ ಪ್ರದಾಯ ತೌ ಪ್ರಚಕ್ರತುರ್ವರಾರ್ಚನಂ ॥ ೩೧ ॥

ಅ॥ ಆ ಕ್ರಥ ಕೌಶಿಕರು ಪಾದಾರವಿಂದಗಳಲ್ಲಿ ನಮಸ್ಕರಿಸಿ ತಮ್ಮ ಮನೆಯನ್ನು ಪ್ರವೇಶ ಮಾಡಿಸಿ ಶ್ರೇಷ್ಠವಾದ ಆಸನವನ್ನು ಕೊಟ್ಟು ಉತ್ತಮವಾದ ಪೂಜೆಯನ್ನು ಮಾಡಿದರು. ॥೩೧॥

ಮೂ ॥ ಅಥಾಗಮಚ್ಛತಕ್ರತೋರ್ವಚಃ ಪ್ರಗೃಹ್ಯ ಭೂಭುಜಃ ।
ಜರಾಸುತಾದಿಕಾನ್ ಪುಮಾನುವಾಚ ಚಾರ್ಥವದ್ವಚಃ ॥ ೩೨ ॥

ಅ॥ ಆಮೇಲೆ ದೇವೇಂದ್ರನ ದೂತನು ದೇವೇಂದ್ರನ ಮಾತನ್ನು ಸ್ವೀಕರಿಸಿಕೊಂಡು ರಾಜರ ಸವಿೂಪಕ್ಕೆ ಬಂದನು. ಜರಾಸಂಧನೇ ಮೊದಲಾದವರನ್ನು ಕುರಿತು ಅರ್ಥೋಪೇತವಾದ ಮಾತನ್ನು ಹೇಳಿದನು. ॥ ೩೨ ॥

ಮೂ ॥ ಅಹಂ ಪ್ರಿಯಃ ಶಚೀಪತೇಃ ಸದಾಸ್ಯ ಚಾಕ್ಷ್ಣಿಗೋಚರಃ ।
ಸುರೇಂದ್ರ ಆಜ್ಞಯಾವದನ್ನಪಾನ್ವ ಈಶ್ವರೋ ಹಿ ಸಃ ॥ ೩೩ ॥

ಅ॥ ನಾನು ಯಾವಾಗಲೂ ದೇವೇಂದ್ರನಿಗೆ ಪ್ರೀತಿವಿಷಯನಾದವನು, ಯಾವಾಗಲೂ ದೇವೇಂದ್ರನ ಕಣ್ಣುಗಳಿಗೆ ವಿಷಯನು, ದೇವೇಂದ್ರನು ರಾಜರಾದ ನಿಮ್ಮನ್ನು ಅಪ್ಪಣೆಯಿಂದ

ಹೇಳಿರುವರು. ಆ ದೇವೇಂದ್ರನು ನಿಮಗೆ ಸ್ವಾಮಿಯಲ್ಲ, (ಆದುದರಿಂದಲೇ ಆಜ್ಞಾಪಿಸಿರುವನೇ ಪ್ರಾರ್ಥಿಸಿದ್ದಲ್ಲ.) ॥ ೫೩ ॥

ಮೂ ॥ ಸಮಸ್ತ ರಾಜಸಶ್ಪತಿರ್ಹರಿರ್ನ ಚಾನ್ಯ ಇತ್ಯಪಿ ।
ವರಾಭಿಷೇಕವಿಶಾತಿತುಃ ಕುರುಧ್ವಮಾಶ್ಚ ಸಂಶಯಂ ॥ ೫೪ ॥

ಅ॥ ಎಲ್ಲಾ ಜರಾಸಂಧಾದಿರಾಜರಿಗೆ ಮಂಖ್ಯ ಸ್ವಾಮಿಯಲ್ಲ ಶ್ರೀಕೃಷ್ಣನೇ; ಮತ್ತೊಬ್ಬನು ಇಲ್ಲವೇ ಇಲ್ಲ, ಎನ್ನುವ ಬುದ್ಧಿಯಿಂದ ನಿಸ್ಸಂಶಯವಾಗಿ ಸರ್ವೇಶ್ವರನಾದ ಶ್ರೀಕೃಷ್ಣನಿಗೆ ಸಾವಭ್ರಾಜ್ಯಾಭಿಷೇಕವನ್ನು ಶೀಘ್ರದಲ್ಲಿ ಮಾಡಿರಿ. ॥ ೫೪ ॥

ಮೂ ॥ ಅತೋಽನ್ಯಥಾ ಶಿರಸ್ಯಹಂ ನಿಪಾತಯಾಮಿ ವೋಽಶನಿಂ ।
ಇತೀದಮಿಂದ್ರಶಾಸನಂ ಕುರುಧ್ವಮಿತ್ಯಸೌ ಯಯೌ ॥ ೫೫ ॥

ಅ॥ ನನ್ನ ಅಪ್ಪಣೆಗೆ ವಿಪರೀತವಾಗಿ ಮಾಡಿದ್ದರಿಂದ (ಅಂದರೆ ಕೃಷ್ಣನಿಗೆ ಅಭಿಷೇಕವನ್ನು ಮಾಡದೆ ಇರುವುದರಿಂದ) ನಾನು ನಿಮ್ಮ ಶಿರಸ್ಸಿನಲ್ಲಿ ವಜ್ರಾಯುಧವನ್ನು ಹಾಕುವೆನು. ನಾನು ಹೇಳಿದ ಪ್ರಕಾರ ಅಭಿಷೇಕಕರಣರೂಪವಾದ ಇಂದ್ರನ ಅಪ್ಪಣೆಯನ್ನು ಮಾಡಿರಿ. ಎಂದು ಹೇಳಿ ಇಂದ್ರನ ದೂತನು ಹೋದನು. ॥ ೫೫ ॥

ಮೂ ॥ ತದೀರಿತಂ ನಿಶಮ್ಯ ತೇ ಪುನಃ ಸುತಪ್ತ ಚೇತಸಃ ।
ಬಭೂವುರೂಚಿರೇ ವಚಃ ಸುಗರ್ವಿತೋ ಹಿ ವಾಸವಃ ॥ ೫೬ ॥

ಅ॥ ಆ ಜರಾಸಂಧಾದಿಗಳು ದೂತನಿಂದ ಹೇಳಲ್ಪಟ್ಟ ಮಾತನ್ನು ಕೇಳಿ ಪುನಃ ಅತ್ಯಂತ ಸಂತಪ್ತವಾದ ಮನಸ್ಸುಳ್ಳವರು ಆದರು. ಮಾತನ್ನು ಹೇಳಿದರು. ದೇವೇಂದ್ರನು (ಈಗ) ಅತಿ ಗರ್ವಯುಕ್ತನಾಗಿರುತ್ತಾನಷ್ಟೆ. ॥ ೫೬ ॥

ಮೂ ॥ ಪುರಾ ಬಿಭೇತಿ ನಃ ಸದಾ ಪ್ರತಿಪ್ರತಿ ಸ್ಮ ವಾಸವಃ ।
ಉತಾದ್ಯ ಕೃಷ್ಣಸಂಶ್ರಯಾದ್ದೃಢಂ ವಿಭೀಷಯಸ್ಯ(ತ್ಯ)ಸೌ ॥ ೫೭ ॥

ಅ॥ ದೇವೇಂದ್ರನು ಶ್ರೀಕೃಷ್ಣನು ಹುಟ್ಟುವುದಕ್ಕಿಂತ ಮೊದಲು ಯಾವಾಗಲೂ ನಮ್ಮ ಸಕಾಶದಿಂದ ಒಬ್ಬೊಬ್ಬರಿಂದಲೂ ಹೆದರುತ್ತಾನೆ, ಮತ್ತು ಈಗ ದೇವೇಂದ್ರನು ಶ್ರೀಕೃಷ್ಣನ ಆಶ್ರಯದಿಂದ ನಿಶ್ಚಯವಾಗಿಯೂ ಹೆದರಿಸುತ್ತಾನೆ. ॥ ೫೭ ॥

ಮೂ ॥ ಅದೃಶ್ಯ ಏವ ದೇವರಾಡ್ಯದಿ ಸ್ಮ ವಜ್ರಮುತ್ಸೃಜೇತ್ ।
ಭವೇಮ ಪೀಡಿತಾ ವಯಂ ವರಾದವೃತ್ಯವೋಽಪಿ ಹಿ ॥ ೫೮ ॥

ಅ॥ ದೇವೇಂದ್ರನು ಅದೃಶ್ಯನಾಗಿಯೇ ವಜ್ರವನ್ನು ಬಿಸಾಡಿಯಾನು. ವರದ್ವೇಷದಿಂದ ಮರಣರಹಿತರಾದಾಗ್ಯೂ ನಾವು ಪೀಡಿಸಿಕೊಳ್ಳಲ್ಪಟ್ಟವರು ಆಗುವೆವು. ॥ ೫೮ ॥

ಮೂ ॥ ಪುರಾ ದಿವಿ ಸ್ಥಿತಸ್ಯ ಚ ಪ್ರಮರ್ದನೇ ವಯಂ ಕ್ಷಮಾಃ ।
ಉತಾದ್ಯ ಯದ್ಯಮುಂ ವಯಂ ವ್ರಜೇಮ ಕೃಷ್ಣ ಏಷ್ಯತಿ ॥ ೫೯ ॥

ಅ॥ ಮೊದಲು ಸ್ವರ್ಗಲೋಕದಲ್ಲಿರತಕ್ಕ ದೇವೇಂದ್ರನನ್ನೂ ಕೂಡಿ ವರ್ಣಿಸುವ ವಿಷಯದಲ್ಲಿ ನಾವು ಸಮರ್ಥರಾಗಿದ್ದೆವು. ಮತ್ತು ಈಗ ಇಂದ್ರನನ್ನು ನಾವು ಹೋದರೆ ಶ್ರೀಕೃಷ್ಣನು ಯಂದ್ದಕ್ಕಾಗಿ ಬರುವನು. ॥ ೩೯ ॥

ಮೂ ॥ ಅತೋಽಭಿಷೇಚನಾದ್ಯುದೀಹ ಶಾರ್ಂಗಿಣಃ ಶಚೀಪತಿಃ ।
ನ ವಜ್ರಮುತ್ಸೃಜೇತ್ತದಾಭಿಷೇಚಯಾಮು ತಂ ವಯಂ ॥ ೪೦ ॥

ಅ॥ ಆದಕಾರಣ ದೇವೇಂದ್ರನು ಯಾವ ಪಕ್ಷದಲ್ಲಿ ಶಾರ್ಂಗಧಾರಿಯಾದ ಶ್ರೀಕೃಷ್ಣನಿಗೆ ಅಭಿಷೇಕ ಮಾಡಿದ್ದರಿಂದ ನಮ್ಮಲ್ಲಿ ವಜ್ರಾಯುಧವನ್ನು ಬಿಡಲಾರನೋ, ಆ ಪಕ್ಷದಲ್ಲಿ ನಾವು ಕೃಷ್ಣನನ್ನು ಅಭಿಷೇಕ ಮಾಡುವೆವು. ॥ ೪೦ ॥

ಮೂ ॥ ಅತೋಽನ್ಯಥಾ ದನುರ್ಯಥಾ ವರಾದವ್ಯತ್ಯಕೋಽಪಿ ಸನ್ ।
ಸುರೇಂದ್ರವಜ್ರತಾಡಿತೋ ಬಭೂವ ಕುಕ್ಷಿಗಾಸ್ಯಯುಕ್ ॥ ೪೧ ॥

ಆ ॥ ಶ್ರೀಕೃಷ್ಣನಿಗೆ ಅಭಿಷೇಕ ಮಾಡದೆ ಇದ್ದರೆ ದನುವಾವಂಕ ರಾಕ್ಷಸನು ವರದೆಸೆಯಿಂದ ಮರಣರಹಿತನಾದಾಗ್ಯೂ ಹೇಗೆ ದೇವೇಂದ್ರನ ವಜ್ರದ ತಾಡನೆಯಿಂದ ಉದರದಲ್ಲಿರತಕ್ಕ ಅಸ್ಯದಿಂದ ಕೂಡಿದವನಾಗಿ ಆದನು. ॥ ೪೧ ॥

ಮೂ ॥ ತಥೈವ ಕೃಷ್ಣಸಂಶ್ರಯಾತ್ಸ ನಃ ಶಚೀಪತಿರ್ನಯೇತ್ ।
ಇತಿ ಸ್ಮ ನಿಶ್ಚಿತಾ ನೃಪಾನಯಾತಯಂತ ಶೌರಯೇ ॥ ೪೨ ॥

ಅ॥ ದನುವಿನೆಂಬಂತೆಯೇ ಆ ದೇವೇಂದ್ರನು ಶ್ರೀಕೃಷ್ಣನ ಆಶ್ರಯದ್ದೆಸೆಯಿಂದ ನಮ್ಮನ್ನು ~~ಹೊಂದಿಸಿಯಾನು. ಹೀಗೆ ನಿಶ್ಚಿತರಾದ ಜರಾಸಂಧಾದಿಗಳು (ಕೆಲವು) ರಾಜರನ್ನು ಶ್ರೀಕೃಷ್ಣನ~~ ಅಭಿಷೇಕಕ್ಕಾಗಿ ಕಳುಹಿಸಿಕೊಟ್ಟರು. (ಅಹಂಕಾರ ವಶದಿಂದ ತಾವು ಹೋಗಲಿಲ್ಲ.) ॥ ೪೨ ॥

ಇತರರಿಂದ ಅಭಿಷೇಕವನ್ನು ಮಾಡಿಸಿದರೆ, ಸರ್ವರೂ ಹೋಗಲಿಲ್ಲ ಎಂದು, ಇಂದ್ರನು ವಿಕೃತಿ ಕೋಪಿಸಲಿಲ್ಲ ಎಂದರೆ ತಾತ್ಪರ್ಯವನ್ನು ಹೇಳುತ್ತಾರೆ—

ಮೂ ॥ ಸಮುಸ್ತತೋ ಜರಾಸುತಾದಿಭಿಃ ಕೃತೇಽಭಿಷೇಚನೇ ।
ಅತೀವ ಭಗ್ನಮಾನಕಾನ್ನ ಚಾನುಯಾತಿ ಕಶ್ಚನ ॥ ೪೩ ॥

ಅ॥ ಎಲ್ಲಾ ಜರಾಸಂಧಾದಿಗಳಿಂದ ಅಭಿಷೇಕವು ಮಾಡಲ್ಪಡುತ್ತಿರಲು ಅತ್ಯಂತವಾಗಿ ನಷ್ಟವಾದ ಮಾನವುಳ್ಳ ಜರಾಸಂಧಾದಿಗಳನ್ನು ಯಾರೊಬ್ಬನೂ ಅನುಸರಿಸುವುದಿಲ್ಲ; ॥ ೪೩ ॥

ಮೂ ॥ ಸಮಾಶ್ರಯಂ ಚ ಕೇಶವಂ ತದೈವ ಜೀವನಾರ್ಥಿನಃ ।
ಪ್ರಕುರ್ಯುರಾಸುರಾ ಅಪೀತಿ ದೇವಕಾರ್ಯಸಂಕ್ಷಯಃ ॥ ೪೪ ॥
ಇತೀಕ್ಷ್ಯ ಪಾಕಶಾಸನೋಽವದಜ್ಜರಾಸುತಾದಿಕಾನ್ ।
ಸರುಕ್ಮಿಸಾಲ್ವಚೇದಿ(ಚೇದಿಸಾಲ್ವ)ಪೋ ನ ಯಾತು ಮಾಗಧೋ
ಹರಿಂ ॥ ೪೫ ॥

ಅ॥ ವಜ್ರಾನಭಂಗ ಕಾಲದಲ್ಲಿ ಅಸುರರೂ ಕೂಡ ಜೀವನವನ್ನು ಇಚ್ಛಿಸುವವರಾಗಿ ಶ್ರೀಕೃಷ್ಣ ಸನ್ನೇ ಟಿನ್ನಾಗಿ ಸವಾಶ್ರಯವನ್ನು ವಹಿಸುವರು. ಈ ಕಾರಣದಿಂದ (ಅಂದರೆ ಎಲ್ಲಾ ಅಸುರರಿಗೂ ಶ್ರೀಕೃಷ್ಣನೇ ರಕ್ಷಕನು ಎಂದು ಪ್ರಾಪ್ತವಾಗುವಾಗ ಶರಣಾಗತರಾದವರನ್ನು ಸಂಹರಿಸುವುದು ಅಯೋಗ್ಯವಾಗಿರುವ ಪ್ರಯುಕ್ತ) (ಭೂಭಾರಭೂತರಾದ ದೈತ್ಯರ ಹನನಾಖ್ಯವಾದ) ದೇವಕಾರ್ಯದ ನಾಶವು ಆಗಬೇಕಾಗುವುದು. ಹೀಗೆ ವಿಚಾರವಹಿಸಿ ದೇವೇಂದ್ರನು ರುಗ್ಮಿ, ಸಾಲ್ವ, ಶಿಶುಪಾಲ ಇವರಿಂದ ಕೂಡಿದ ಜರಾಸಂಧನು ಶ್ರೀಹರಿಯನ್ನು (ಅಭಿಷೇಕಕ್ಕಾಗಿ) ಹೋಗಬಾರದು. ಹೀಗೆ ಜರಾಸಂಧಾದಿಗಳನ್ನು ಕುರಿತು ದೂತ ಮುಖದಿಂದ ಹೇಳಿಸಿದನು. ॥ ೪೪॥೪೫ ॥

ಮೂ ॥ ತತಸ್ತು ತಾನ್ವಿನಾಪರೇಽಧಿರಾಜರಾಜ ಇತ್ಯಮುಂ ।
ತದಾಭಿಷೇಕ್ತು ಮುದ್ಯತಾ ನೃಪಾಃ ಸುರೇಶಶಾಸನಾತ್ ॥ ೪೬ ॥

ಅ॥ ಆ ಕಾರಣದಿಂದ ಇತರ ರಾಜರು ದೇವೇಂದ್ರನ ಶಾಸನದ್ವೆಸೆಯಿಂದ ವಹಾಗಧ ಮೊದಲಾದ ನಾಲ್ವರನ್ನೂ ಬಿಟ್ಟು ಚಕ್ರವರ್ತಿಗಳಿಗೂ ರಾಜನೆಂತೆಂದು ಈ ಕೃಷ್ಣನನ್ನು ಪಟ್ಟಾಭಿಷೇಕ ವಹಿಸುವುದಕ್ಕಾಗಿ ಉದ್ಯೋಗವುಳ್ಳವರಾದರು. ॥ ೪೬ ॥

ಮೂ ॥ ತತಃ ಶಚೀಪತಿರ್ನಿಜಂ ವರಾಸನಂ ಹರೇರದಾತ್ ।
ವಿವೇಶ ತತ್ರ ಕೇಶವೋ ನಭಸ್ಥಲಾವತಾರಿತೇ ॥ ೪೭ ॥

ಅ॥ ಆಮೇಲೆ ದೇವೇಂದ್ರನು ಶ್ರೀಕೃಷ್ಣನಿಗೆ ತನ್ನ ಶ್ರೇಷ್ಠ ಆಸನವನ್ನು ಕಳುಹಿಸಿಕೊಟ್ಟನು; ಆಕಾಶ ಪ್ರದೇಶದಿಂದ ಬಂದಿರುವಕ್ಕ ಆ ಉತ್ಕೃಷ್ಟಾಸನದಲ್ಲಿ ಕೇಶವನು ಕುಳಿತುಕೊಂಡನು; ॥೪೭॥

ಮೂ ॥ ಕರೇ ಪ್ರಗೃಹ್ಯ ಕೇಶವೋ ನ್ಯವೇಶಯತ್ಸಹಾಸನೇ ।
ಪತಶ್ರಿಪುಂಗವಂ ಚ ತೌ ಸಭೀಷ್ಮ ಕಾನುಜೌ ಪ್ರಭುಃ ॥ ೪೮ ॥

ಅ॥ ಸರ್ವಸಮರ್ಥನಾದ ಶ್ರೀಕೃಷ್ಣನು ಗರುಡನನ್ನೂ ಭೀಷ್ಮಕನ ತಮ್ಮಂದಿರಾದ ಕ್ರಥಕೌಶಿಕರನ್ನೂ ಕೈಯಲ್ಲಿ ಹಿಡಿದುಕೊಂಡು ಇಂದ್ರನಿಂದ ಕಳುಹಿಸಿಕೊಳ್ಳಲ್ಪಟ್ಟ ಆಸನದಲ್ಲಿ ಕುಳ್ಳಿರಿಸಿದನು. ॥ ೪೮ ॥

ಮೂ ॥ ಅಥಾಖಿಲಾ ನರೇಶ್ವರಾ ಮುನೀಂದ್ರಸಂಯುತಾ ಹರಿಂ ।
ಸುಶಾತಕೌಂಭಕುಂಭಕೈಃ ಪ್ರಚಕ್ರುರಾಭಿಷೇಕಿಣಂ ॥ ೪೯ ॥

ಅ॥ ಆಮೇಲೆ ಎಲ್ಲಾ ರಾಜರೂ ಋಷಿಶ್ರೇಷ್ಠರಿಂದ ಕೂಡಿದವರಾಗಿ ಶೋಭನಗಳಾದ ಸುವರ್ಣನಿರ್ಮಿತಗಳಾದ ಕುಂಭಗಳಲ್ಲಿರತಕ್ಕ ಜಲಗಳಿಂದ ಶ್ರೀಕೃಷ್ಣನನ್ನು ಅಭಿಷೇಕವುಳ್ಳವನನ್ನಾಗಿ ವಹಿಸಿದರು. ॥ ೪೯

ಮೂ ॥ ವಿರಿಂಚಶರ್ವಪೂರ್ವಕೈರಭಿಷ್ಟುತಃ ಸುರಾದಿಭಿಃ ।
ಸಮುಸ್ತದೇವಗಾಯಕೈಃ ಪ್ರಗೀತ ಆಸ ಕೇಶವಃ ॥ ೫೦ ॥

ಅ॥ ಶ್ರೀಕೃಷ್ಣನು ಬ್ರಹ್ಮ ರುದ್ರ ಮೊದಲಾದ ದೇವತೆಗಳೇ ಮೊದಲಾಗಿ ಉಳ್ಳವರಿಂದ ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟವನಾಗಿ ಎಲ್ಲಾ ದೇವ ಗಂಧರ್ವರಿಂದ ಗಾನ ಮಾಡಿಸಿಕೊಳ್ಳಲ್ಪಟ್ಟವನು. ಆದನು. ॥ ೫೦ ॥

ಮೂ ॥ ಅಥಾಹ ಭೀಷ್ಮ ಕಂ ಪ್ರಭುಃ ಸ್ವಯಂವರಃ ಕಿಲ ತ್ವಯಾ ।
ಅಭೀಪ್ಸಿತಃ ಸುತಾಕೃತೇ ಶುಭಾಯ ತೇ ಭವೇನ್ನ ಸಃ ॥ ೫೧ ॥

ಅ॥ ಆಮೇಲೆ ಸರ್ವಸಮರ್ಥನಾದ ಶ್ರೀಕೃಷ್ಣನು ಭೀಷ್ಮಕರಾಜನನ್ನು ಕುರಿತು ನಿನ್ನಿಂದ ಮಂಗಳಾದ ರುಗ್ಮಿಣೀಗೋಸ್ಕರ (ಚೈದ್ಯನನ್ನು ಕುರಿತು) ಸ್ವಯಂವರವು ವಾಂಛಿತವಾಗಿದೆಯಷ್ಟೆ, ಆ ಸ್ವಯಂವರವು ನಿನಗೆ ಪುಣ್ಯಕ್ಕೋಸ್ಕರ ಆಗಲಾರದು, ಎಂದು ಹೇಳಿದನು. ॥ ೫೧ ॥

ಮೂ ॥ ಇಯಂ ರವಾ ತವಾತ್ಮಜಾ ಬಭೂವ ತಾಂ ಹರೇರ್ನ ಚೇತ್ (ಚ) ।
ದದಾತಿ ಚೇತ್ತದಾ ಪಿತಾ ನಿರಿಂದಿರೋ ವ್ರಜೇದಧಃ ॥ ೫೨ ॥

ಅ॥ ಸಾಕ್ಷಾತ್ ಲಕ್ಷ್ಮೀದೇವಿಯೇ ಈ ರುಗ್ಮಿಣೀ ನಾಮಕಳಾಗಿ ನಿನ್ನ ಮಂಗಳಾಗಿ ಹುಟ್ಟಿರುವಳು. ರುಗ್ಮಿಣಿಯ ತಂದೆಯು ನೀನು ಆ ರುಗ್ಮಿಣೀದೇವಿಯನ್ನು ಶ್ರೀಕೃಷ್ಣನಿಗೆ ಕೊಡಲಿಕ್ಕೆ ಇಚ್ಛಿಸದೆ ಇದ್ದರೆ ಆಗ ಶ್ರೀರಹಿತನಾಗಿ ಸಂಪದ್ರಹಿತನಾಗಿ ತಮಸ್ಸನ್ನು ಹೊಂದುವನು. ॥ ೫೨ ॥

ಮೂ ॥ ಹಿತಾಯ ಚೈತದೀರಿತಂ ತವಾನ್ಯಥಾ ನ ಚಿಂತಯ ।
ನ ಯೋಷಿದಿಚ್ಛಯಾ ತ್ವಹಂ ಬ್ರವೀಮಿ ಪಶ್ಯ ಯಾದೃಶಃ ॥ ೫೩ ॥

ಅ॥ (ಎಲೋ ಭೀಷ್ಮಕರಾಜನೇ) ಈ ವಾಕ್ಯವು ನಿನ್ನ ಹಿತಕ್ಕೋಸ್ಕರವೇ ಹೇಳಲ್ಪಟ್ಟಿತು; ನನ್ನ ಪ್ರಯೋಜನಕ್ಕಾಗಿ ಹೇಳಲ್ಪಟ್ಟಿತು ಎಂದು ಆಲೋಚಿಸಬೇಡ. ನಾನು ಹೆಂಡತಿಯ ಇಚ್ಛೆಯಿಂದ ಹೇಳುವುದಲ್ಲ. ನಾನು ಎಂತಹ ಸಂಪತ್ತಿನಿಂದ ಯುಕ್ತನಾಗಿದ್ದೇನೋ (ಅಂತಹ ನನ್ನನ್ನು) ನೋಡು. ॥ ೫೩ ॥

ಮೂ ॥ ಉದೀರ್ಯ ಚೈವಮಾಶ್ವರಶ್ಮಕಾರ ಹಾವಿರಾತ್ಮನಃ ।
ಸ ವಿಶ್ವರೂಪವುತ್ತಮಂ ವಿಸಂಖ್ಯಶೀರ್ಷಬಾಹುಕಂ ॥ ೫೪ ॥
ಅನಂತತೇಜ ಆತತಂ ವಿಸಂಖ್ಯರೂಪಸಂಯುತಂ ।
ವಿಚಿತ್ರಮೌಲಿಕುಂಡಲಾಂಗದೋರುಹಾರನೂಪುರಂ ॥ ೫೫ ॥
ಜ್ವಲತ್ಸುಕೌಸ್ತುಭಪ್ರಭಾ (ಭಿ) ಪ್ರಭಾಸಕಂ ಶುಭಾಂಬರಂ ।
ಪ್ರಪಶ್ಯ ಯಾದೃಶಾಃ ಸ್ತ್ರಿಯೋ ಮಮೇತ್ಯದರ್ಶಯತ್ ಶ್ರಿಯಂ ॥ ೫೬ ॥
ಅನಂತರೂಪಿಣೀಂ ಪರಾಂ ಮನುಷ್ಯದೃಷ್ಟಿತೋಽಧಿಕಾಂ ।
ಸ ರುಕ್ಮಿಣೀತನೋರಪಿ ವ್ಯದರ್ಶಯಚ್ಚ ದೇವತಾಃ ॥ ೫೭ ॥

ಅ॥ ಆ ಶ್ರೀಕೃಷ್ಣನು ಹೀಗೆ ಹೇಳಿ ಉತ್ತಮವಾದ, ಸಂಖ್ಯಾರಹಿತಗಳಾದ ಶಿರಸ್ಸುಗಳೂ ಬಾಹುಗಳೂ ಇವುಗಳುಳ್ಳದ್ದು, ಬಹುಪ್ರಕಾರವಾದ ತೇಜಸ್ಸುಳ್ಳದ್ದು, ಬ್ರಹ್ಮಾಂಡದ ಒಳಗೂ ಹೊರಗೂ ವ್ಯಾಪ್ತವಾದುದು ಅನಂತ ರೂಪಗಳಿಂದ ಯುಕ್ತವಾದುದು, ವಿಚಿತ್ರಗಳಾದ ಶಿರಸ್ಸು

ಗಳೂ ಕಂಂಡಲಗಳೂ ಕೇಯೂರಗಳೂ ಉತ್ಕೃಷ್ಟಗಳಾದ ವಂಂಕ್ಕಾಹಾರಗಳೂ ಪಾದಭೂಷಣ ಗಳೂ ಇವುಗಳಂಳ್ಳದ್ದಂ, ಜ್ವಲಿಸತಕ್ಕ ಶೋಭನವಾದ ಕೌಸ್ತುಭವಂಣಿಯಂ ಪ್ರಭೆಗಳನ್ನು ಚೆನ್ನಾಗಿ ಪ್ರಕಾಶಪಡಿಸತಕ್ಕದ್ದಂ, ಶೋಭನವಾದ ಪೀತಾಂಬರವುಳ್ಳದ್ದಂ ಇಂತಹ ತನ್ನ ವಿಶ್ವರೂಪವನ್ನು ಪ್ರಕಟೀಕರಿಸಿದನಂ. ನನಗೆ ಎಂತಹ ಸ್ತ್ರೀಯಂರಂ ಇರಂಕ್ಕಾರೋ ಅಂತಹವರನ್ನೂ ನೋಡಂ ಎಂದಂ (ಹೇಳಿ) ವಂನುಷ್ಯರ ಜ್ಞಾನವನ್ನು ಅಪೇಕ್ಷಿಸಿ ರುಗ್ಮಿಣೀಸ್ವರೂಪಭೂತಳಾದ ಲಕ್ಷ್ಮೀ ದೇವಿಯಂಕ್ಕಿಂತಲೂ ರೂಪದಿಂದ ಅಧಿಕಳಾದ ಸರ್ವೋತ್ತವಂಳಾದ ಅನಂತಸೌಂದರ್ಯವುಳ್ಳ ಲಕ್ಷ್ಮೀದೇವಿಯಂನ್ನು ತೋರಿಸಿದನು ಸ್ವರೂಪಾಶ್ರಿತರಾದ ಬ್ರಹ್ಮಾದಿದೇವತೆಗಳನ್ನೂ ತೋರಿಸಿದನಂ.

ವಿಶೇಷಾಂಶ—(1) ವಂತ್ಸ್ಯಕೂವರ್ಧ್ಯನಂತರೂಪಗಳನ್ನೂ ತನ್ನ ವಿಶ್ವರೂಪದಲ್ಲಿ ತೋರಿಸಿದನಂ ಎನ್ನುವ ಅಭಿಪ್ರಾಯಂದಿಂದ 'ವಿಸಂಖ್ಯರೂಪಸಂಯುತಃ' ಎಂದಂ ಹೇಳಿರುವರು, (2) ವಂನುಷ್ಯದೃಷ್ಟಿಯಿಂದ ವಿಶಾತ್ರ ಅಧಿಕಳಂ. ಸ್ವಭಾವತಃ ರುಗ್ಮಿಣಿಯಿಂದ ಲಕ್ಷ್ಮಿಗೆ ಅಧಿಕ್ಯವಿಲ್ಲ. ಇಬ್ಬರಿಗೂ ಐಕ್ಯವಿದ್ದ ಪ್ರಯುಕ್ತ ನೀಚೋಚ್ಚಭಾವವೇ ಕೂಡಲಾರದಂ. (3) ತನ್ನ ವಿಶ್ವರೂಪದಂತೆ ಲಕ್ಷ್ಮೀದೇವಿದ್ದೂ ಕೂಡ ಅನಂತ ರೂಪಗಳನ್ನು ತೋರಿಸಿದರಂ. ॥೫೪॥೫೫॥ ॥ ೫೬ ॥ ೫೭ ॥

ಮೂ ॥ ತದದ್ಭುತಂ ಸವಿಸ್ಮಾಕ್ಷ್ಯ ತು ಪ್ರಭೀತ ಆಸ(ಶು) ಭೀಷ್ಮಕಃ ।
ಪಪಾತ ಪಾದಯೋರ್ವಿಭೋಃ ಕರೋಮಿ ತತ್ತಥೇತಿ ಚ ॥ ೫೮ ॥

ಅ॥ ಆಶ್ಚರ್ಯಕರವಾದ ಆ ವಿಶ್ವರೂಪವನ್ನು ಭೀಷ್ಮಕರಾಜನಂ ನೋಡಿ ಅತಿ ಭಯಂಪಟ್ಟವನು ಆದನಂ. ಅತಿ ಭಯಂಪಟ್ಟವನಾಗಿ ಶೀಘ್ರದಲ್ಲಿ ಹೇಗೆ ನೀನಂ ಹೇಳಂತ್ತಿಯೋ ಹಾಗೆ ನಿನ್ನ ವಾಕ್ಯವನ್ನು ಮಾಡುತ್ತೇನೆ ಎಂದಂ (ಹೇಳುತ್ತಾ) ಶ್ರೀಕೃಷ್ಣನ ಪಾದಗಳಲ್ಲಿ ಬಿದ್ದನಂ. ॥ ೫೮ ॥

ಮೂ ॥ ಪುನಶ್ಚ ವಿಶ್ವರೂಪತಾಂ ವಿಧಾಯ ಪದ್ಮ ಲೋಚನಃ ।
ಜಗಾಮ ಪಕ್ಷಿವಾಹನಃ ಪುರೀಂ ಸ್ವಬಾಹುಪಾಲಿತಾಂ ॥ ೫೯ ॥

ಅ॥ ಕವಂಲದಳದಂತೆ ನಯನಗಳುಳ್ಳ ಗರುಡನಂ ವಾಹನನಾಗಿ ಉಳ್ಳ ಶ್ರೀಕೃಷ್ಣನಂ ಪುನಃ ವಿಶ್ವರೂಪವುಳ್ಳತನವನ್ನು ಆಚ್ಛಾದಿಸಿಕೊಂಡು ತನ್ನ ಭುಜಗಳಿಂದ ರಕ್ಷಿಸಿಕೊಳ್ಳಲ್ಪಟ್ಟ ವಿದರ್ಭರಾಜಪಟ್ಟಣವನ್ನು ಕಂರಿತು ಹೋದನಂ. ॥ ೫೯ ॥

ಲಕ್ಷ್ಮೀದೇವಿಯಂ ಅನ್ಯರಿಗೆ ಯೋಗ್ಯಳಾಗದಿದ್ದರೆ ಜ್ಞಾನಿಯಾದ ವರುಣನೂ ಜನಕರಾಜನೂ, ದೇವತೆಗಳನ್ನೂ ರಾಜರನ್ನೂ ಒಟ್ಟುಗೂಡಿಸಿ ಲಕ್ಷ್ಮಿಗೂ ಸೀತಾದೇವಿಗೂ ಏಕೆ ಸ್ವಯಂವರವನ್ನು ಮಾಡಿದರಂ ಎಂದರೆ—

ದ್ಯೂ ॥ ಅಪಾಂ ಪತಿಶ್ಚ ವೈದೇಹಿಃ ಸ್ವಯಂವರಂ ಕೃತಾವಪಿ ।
ಹರಿಂ ವಿವಿಶ್ಯಯಾದಿಯಂ ವ್ರಜೇದಿತಿ ಸ್ಮ ಚಕ್ರತುಃ ॥ ೬೦ ॥

ಅ॥ ವರುಣನೂ ಜನಕರಾಜನೂ ಸ್ವಯಂವರವನ್ನುದ್ದೇಶಿಸಿ ಪ್ರಯತ್ನ ಮಾಡಿದರೂ ಅಥವಾ ಸ್ವಯಂವರವನ್ನು ಮಾಡುವವರಾದಾಗ್ಯೂ ಈ ಲಕ್ಷ್ಮೀದೇವಿಯಂ (ನನ್ನ ಮಂಗಳಂ ವರಂ

ಣನೂ) ಈ ಸೀತಾದೇವಿಯು (ಲಕ್ಷ್ಮಿಯು ಎಂದು ಜನಕನೂ) ಶ್ರೀಹರಿಯನ್ನು ಅಂದರೆ ಶ್ರೀ ನಾರಾಯಣನನ್ನು ಶ್ರೀರಾಮನನ್ನು ನಿಶ್ಚಯವಾಗಿಯೂ ಹೊಂದುವಳು; ಈ ಅಭಿಪ್ರಾಯದಿಂದ (ಸ್ವಯಂವರವನ್ನು) ಮಾಡಿದರು. ॥ ೬೦ ॥

ದೂ ॥ ಸ್ವಯಂವರಃ ಕ್ಷಿತೇರ್ಭುಜಾಂ ಸ್ವಧರ್ಮ ಇತ್ಯತೋ ದ್ವಯೋಃ ।
ನ ದೋಷ ಆಸ ಭೀಷ್ಮಕೋ ನ ಕೇಶವಾರ್ಥಮೈಚ್ಛತ ॥ ೬೧ ॥

ಆ ॥ ರಾಜರಿಗೆ ಸ್ವಯಂವರವು ಸ್ವಧರ್ಮವು; ಈ ಕಾರಣದಿಂದ ವರಣ ಜನಕರಿಗೆ ದೋಷವಿಲ್ಲ. ಭೀಷ್ಮಕನು ಕೇಶವನಿಗೋಸ್ಕರ ಇಚ್ಛಿಸಲಿಲ್ಲ;

ವಿಶೇಷಾಂಶ–ದೇವತೆಗಳಲ್ಲಿಯೂ ವಾಯು, ಸೋಮ, ಆದಿತ್ಯರು ಕ್ಷತ್ರಿಯರಾದುದರಿಂದ ಆದಿತ್ಯಗಣಗಳಲ್ಲಿರತಕ್ಕ ವರುಣನೂ ಕೂಡ ಕ್ಷತ್ರಿಯನು ಎನ್ನುವ ಭಾವದಿಂದ 'ಸ್ವಯಂವರಃ ಕ್ಷಿತೇರ್ಭುಜಾಂ' ಎಂದು ಹೇಳಿರುವರು. ॥ ೬೧ ॥

ಮೂ ॥ ಅತೋ ಹರೌ ಪ್ರಬೋಧ್ಯ ತಂ ಗತೇ ಕೃಪಾಲುಸಕ್ತಮೇ ।
ವಶೀಕೃತೇ ಚ ಭೀಷ್ಮಕೇ ನೃಪಾಸ್ತ್ವಮಂತ್ರಯನ್ಪುನಃ ॥ ೬೨ ॥

ಅ॥ ದೋಷವು ಬಂದೀತು ಎಂದು ದಯಾಲುಶ್ರೇಷ್ಠನಾದ ಶ್ರೀಹರಿಯು ಭೀಷ್ಮಕನನ್ನು ಚೆನ್ನಾಗಿ ಬೋಧಿಸಿ ಹೋಗುತ್ತಿರಲು ಭೀಷ್ಮಕನು ವಶೀಕೃತನಾಗುತ್ತಿರಲು ಪುನಃ ರಾಜರು ಆಲೋಚಿಸಿದರು. ॥ ೬೨ ॥

ಪುನಃಪುನಃ ಕೃಷ್ಣನಿಂದ ಪರಾಜಿತನಾದ ಜರಾಸಂಧನು ಏಕೆ ಯುದ್ಧಕ್ಕೋಸ್ಕರ ಪ್ರಯತ್ನ ಮಾಡುತ್ತಾನೆ ಎಂದರೆ—

ಮೂ ॥ ~~ಯಶಶ್ಚ ಧರ್ಮಮುತ್ತಮಂ ವಿಧಿತ್ಸತಾ ವೃಕೋದರೇ ।~~
ನ ಕೇಶವೇನ ಸೂದಿತೋ ಜರಾಸುತೋ ಹಿ ಮನ್ಯತೇ ॥ ೬೩ ॥

ಅ॥ ಭೀಮನಲ್ಲಿ ಯಶಸ್ಸನ್ನೂ ಉತ್ತಮವಾದ ಧರ್ಮವನ್ನೂ ಮಾಡಲಿಕ್ಕಿಚ್ಛಿಸಿದ ಶ್ರೀಕೃಷ್ಣನಿಂದ ಸಂಹೃತನಾಗದೆ ಇದ್ದ ಜರಾಸಂಧನು ಹೀಗೆ ತಿಳಿದುಕೊಳ್ಳುತ್ತಾನೆ. ॥ ೬೩ ॥

ಮೂ ॥ ವರಾಚ್ಛಿವಸ್ಯ ಮಾಮಯಂ ನ ಹಂತುಮಿಷ್ಟ ಉತ್ತಮಾತ್ ।
ಅತಃ ಶಿವಪ್ರಸಾದತೋ ಜಿತೋಽಪಿ ಜೇಷ್ಯ ಉತ್ತರಂ ॥ ೬೪ ॥

ಅ॥ ಈ ಶ್ರೀಕೃಷ್ಣನು ಉತ್ತಮವಾದ ರುದ್ರನ ವರದ್ದೆಸೆಯಿಂದ ನನ್ನನ್ನು ಕೊಲ್ಲಲಿಕ್ಕೆ ಸಮರ್ಥನಲ್ಲ, ಆದಕಾರಣ ಮೊದಲು ಪರಾಜಿತನಾದಾಗ್ಯೂ ರುದ್ರನ ಪ್ರಸಾದದಿಂದ ಉತ್ತರತ್ರ ಗೆಲ್ಲುವೆನು ಎಂದು (ಜರಾಸಂಧನು) ತಿಳಿಯುತ್ತಾನೆ. ॥ ೬೪ ॥

ಜರಾಸಂಧನಿಗೆ ಶಿವನಲ್ಲಿ ಭಕ್ತಿದಾರ್ಢ್ಯವನ್ನು ತೋರಿಸುತ್ತಾರೆ—

ಮೂ ॥ ಮೃಧೇಮೃಧೇ ಜಿತೋಽಪಿ ಸನ್ ದೃಢಾಶಯಾ ಪುನಃಪುನಃ ।
ಸವಿಗ್ರಹತೇ ಯುಧೇ ಶಿವಂ ನ ಚಾವಮನ್ಯತೇ ಕ್ವಚಿತ್ ॥ ೬೫ ॥

ಅ॥ ಜರಾಸಂಧನು ಪ್ರತಿಯುದ್ಧದಲ್ಲಿಯೂ ಪರಾಜಿತನಾದಾಗ್ಯೂ (ಉತ್ತರೋತ್ತರದಲ್ಲಿ ಗೆಲ್ಲುವೆನು ಎನ್ನುವ) ನಿಶ್ಚಿತವಾದ ಇಚ್ಛೆಯಿಂದ ಮತ್ತೆ ಮತ್ತೆ ಯುದ್ಧಕ್ಕಾಗಿ ಪ್ರಯತ್ನಿಸುತ್ತಾನೆ ರುದ್ರನನ್ನು ಎಲ್ಲಿಯೂ ಅವಮಾನಿಸುವುದಿಲ್ಲ; ॥ ೬೫ ॥

ಮೂ ॥ ಅತಃ ಪುನಶ್ಚ ಭೂವಿಪಾನುವಾಚ ಬಾರುಹ(ರ್ಹ)ದ್ರಥಃ ।
ಧಿಗೇವ ಪೌರುಷಂ ಹಿ ನೋ ಯದೇಷ ನೋಽಜಯತ್ಸದಾ ॥ ೬೬ ॥

ಅ॥ ಆದಕಾರಣ ಮತ್ತೆ ಕೂಡ ಜರಾಸಂಧನು ರಾಜರನ್ನು ಕುರಿತು ಹೇಳಿದನು. ನಮ್ಮ ಪೌರುಷವು ನಿಂದ್ಯವೇ ಆಗಿದೆಯಷ್ಟೆ. ಏಕೆಂದರೆ ಈ ಕೃಷ್ಣನು ನಮ್ಮನ್ನು ಪ್ರತಿಯುದ್ಧದಲ್ಲಿಯೂ ಗೆಲ್ಲುತ್ತಾನಷ್ಟೆ. ॥ ೬೬ ॥

ಮೂ ॥ ಅಭೂಪತೇರ್ನ ಚಾಸನಂ ಪ್ರದೇಯಮಿತ್ಯುದಾಹೃತಂ ।
ಅಮುಷ್ಯ ನಸ್ತ ದನ್ಯಥಾ ಬಭೂವ ಚಿಂತಿತಂ ನೃಪಾಃ ॥ ೬೭ ॥

ಅ॥ ರಾಜನಾಗದೆ ಇದ್ದ ಈ ಕೃಷ್ಣನಿಗೆ ಆಸನವು ಕೊಡಲ್ಪಡಬಾರದು ಎಂದು ನಮ್ಮಿಂದ ಹೇಳಲ್ಪಟ್ಟಿದೆ. ಎಲೋ ರಾಜರೇ ಆಸನಾದಿಗಳನ್ನು ಕೊಡಬಾರದೆನ್ನುವ ನಮ್ಮ ಆಲೋಚನೆಯು ವಿಪರೀತವಾಯಿತು. ॥ ೬೭ ॥

ಅನ್ಯಥಾ ಆಯಿತು ಎಂದು ಹೇಳಿದ್ದನ್ನು ವಿವರಿಸುತ್ತಾರೆ—

ಮೂ ॥ ಅಯಂ ನೃಪೋತ್ತ ಮಾಂಗಣೇ ಮಹೇಂದ್ರಪೀಠಮಾರುಹತ್ ।
ನಮುಸ್ತರಾಜರಾಜತಾಮುವಾಪ ನೋಽಪ್ಯನಿಚ್ಛತಾಂ ॥ ೬೮ ॥

ಅ॥ ಈ ಕೃಷ್ಣನು ರಾಜಾಧಿರಾಜನಾದ ಭೀಷ್ಮಕರಾಜನ ಅಂಗಣದಲ್ಲಿ ಇಂದ್ರನ ಸಿಂಹಾಸನವನ್ನೇ ಏರಿದನು, ಸರ್ವಥಾ ಇಚ್ಛಿಸದೆ ಇದ್ದ ನಮ್ಮ ಸಕಾಶದೆಸೆಯಿಂದ ಎಲ್ಲಾ ರಾಜರಿಗೂ ಚಕ್ರವರ್ತಿತ್ವವನ್ನು ಹೊಂದಿದನು. ॥ ೬೮ ॥

ಮೂ ॥ ಅತಃ ಪುನಃ ಕಥಂ ಹರಿಂ ವಯಂ ಜಯೇಮ ಚಿಂತ್ಯತಾಂ ।
ಯಥಾ ಚ ಭೀಷ್ಮ ಕಾತ್ಮ ಜಾಮವಾಪ್ನುಯಾಚ್ಚ ಚೇದಿರಾಟ್ ॥ ೬೯ ॥

ಅ॥ ಆದಕಾರಣ ಮತ್ತು ಶ್ರೀಹರಿಯನ್ನು ನಾವು ಹೇಗೆ ಗೆಲ್ಲುವೆವು; ವಿಚಾರ ಮಾಡಲ್ಪಡಲಿ, ಶಿಶುಪಾಲನು ಭೀಷ್ಮಕರಾಜನ ಮಗಳಾದ ರುಗ್ಮಿಣಿಯನ್ನು ಹೇಗೆ ಹೊಂದಿಯಾನೋ ಅದೂ ವಿಚಾರ ಮಾಡಲ್ಪಡಲಿ. ॥ ೬೯ ॥

ಮೂ ॥ ಅಯಂ ಹಿ ದತ್ತಪುತ್ರಕೋ ಮಮೌ(ಔ)ರಸಾದ್ವಿಶಿಷ್ಯತೇ ।
ಅತೋ ನಿವೇಶ್ಯ ಏಷ ಮೇ ಸುರೂಪಿಣೇ ಚ ರುಕ್ಮಿಣೇ ॥ ೭೦ ॥

ಅ॥ ಈ ಶಿಶುಪಾಲನು (ತನ್ನ ತಂದೆಯಾದ ದಮಘೋಷನಿಂದ ಮಗನಂತೆ ಇವನನ್ನು ರಕ್ಷಿಸು, ವಿವಾಹವನ್ನೂ ಮಾಡಿಸು ಎಂದು ನನ್ನ ಕೈಯಲ್ಲಿ ಕೊಟ್ಟಿರುವ ಪ್ರಯುಕ್ತ) ದತ್ತಪುತ್ರನಾದ ಮಗನು. ನನ್ನ ಔರಸಪುತ್ರನಾದ ಸಹದೇವನದೆಸೆಯಿಂದಲೂ ವಿಶಿಷ್ಟನಾಗಿದ್ದಾನೆ. ಆದಕಾರಣ

ಈ ಶಿಶುಪಾಲನು ನನ್ನಿಂದ ವಿವಾಹವಮಾಡಿಸಿಕೊಳ್ಳಲಿಕ್ಕೆ ಅರ್ಹನೇ ಆಗಿರುತ್ತಾನೆ, ರುಗ್ಮಿಣಿಯೂ ಪ್ರಶಸ್ತರೂಪವುಳ್ಳವನು. (ಪರವು ಯೋಗ್ಯಳು.) ॥ ೭೦ ॥

ಮೂ ॥ ಶಿವಾಗಮೇಷು ಶಿಷ್ಯಕಾಃ ಸರುಕ್ಮಿ ಸಾಲ್ವಪೌಂಡ್ರಕಾಃ ।
ಮಮಾಖಿಲಾ ನೃಪಾಸ್ತತಃ ಕುರುಧ್ವಮೇತದೇವ ವೋ ॥ ೭೧ ॥

ಅ ॥ ರುಗ್ಮಿ, ಸಾಲ್ವ, ಪೌಂಡ್ರಕ ಇವರಿಂದ ಕೂಡಿದ ಎಲ್ಲಾ ರಾಜರೂ ಶೈವಾಗಮಗಳಲ್ಲಿ ತನ್ನ ಶಿಷ್ಯರು. ಆದಕಾರಣ ಎಲೋ ರಾಜರೇ ನನಗೆ ಈ ಅಭೀಷ್ಟವನ್ನೇ ಮಾಡಿರಿ; (ಎಂದು ಜರಾಸಂಧನು ಹೇಳಿದನು.) ॥ ೭೧ ॥

ಮೂ ॥ ಇತೀರಿತೇ ತು ಸೌಭರಾಟ್ ಜಗಾದ ರುಕ್ಮಿಸಂವಿದಾ ।
ಸ್ವಯಂವರೋ ನಿವರ್ತಿತಃ ಸ್ವಸಾರಮೇಷ ದಾಸ್ಯತಿ ॥ ೭೨ ॥

ಅ॥ ಈ ಪ್ರಕಾರ ಹೇಳುತ್ತಿರಲು ಸಾಲ್ವನು ರುಗ್ಮಿಯು ಅನುಮತಿಯಿಂದಲೇ ಸ್ವಯಂವರವು (ಈ ವರನು ಉತ್ತಮನು ಆಗಿದ್ದಾನೆಂದು ತಿಳಿದುಕೊಂಡು ಕನ್ನಿಕೆಯು ಎಲ್ಲಿ ತಾನೇ ವರನನ್ನು ಅಂಗೀಕರಿಸಿಕೊಳ್ಳುತ್ತಾಳೋ ಅದು ಸ್ವಯಂವರವು) ಬಿಡಲ್ಪಟ್ಟಿದೆ. ಈ ರುಗ್ಮಿಯು ತಂಗಿಯನ್ನು (ಶಿಶುಪಾಲನಿಗೇನೇ) ಕೊಡುವನು. ॥ ೭೨ ॥

ಮೂ ॥ ನ ಚಾತಿವರ್ತಿತುಂ ಕ್ಷಮಃ ಪಿತಾಸ್ಯ ಚೇದಿಪಾಯ ತಾಂ ।
ಪ್ರದಾತುಕಾಮಮಾತ್ಮಜಂ ವಯೋಗತಸ್ತಥಾಬಲಃ ॥ ೭೩ ॥

ಅ॥ ಈ ರುಗ್ಮಿಯು ತಂದೆಯಾದ ಭೀಷ್ಮಕರಾಜನು ಶಿಶುಪಾಲನಿಗೋಸ್ಕರ ರುಗ್ಮಿಣಿಯನ್ನು ಕೊಡಲಿಕ್ಕೆ ಇಚ್ಛೆಯುಳ್ಳ ಮಗನಾದ ರುಗ್ಮಿಯನ್ನು ಅತಿಕ್ರಮಣ ಮಾಡಲಿಕ್ಕೆ ಸಮರ್ಥನಲ್ಲ, ಏಕೆಂದರೆ ಭೀಷ್ಮಕರಾಜನು ವೃದ್ಧನು, ಹಾಗೆಯೇ ಬಲವಿಲ್ಲದವನು. ॥ ೭೩ ॥

ಶ್ರೀಕೃಷ್ಣನು ಕನ್ನಿಕೆಯನ್ನು ಅಪಹರಿಸಿಬಿಟ್ಟರೆ ಏನು ಮಾಡಬೇಕೆಂದರೆ ಆ ವಿಷಯದಲ್ಲಿ ಉಪಾಯವನ್ನು ಹೇಳುತ್ತಾರೆ—

ಮೂ ॥ ಸ್ವಯಂ ತು ಕೃಷ್ಣ ಏತ್ಯ ನೋ ವಿಜಿತ್ಯ ಕನ್ಯಕಾಂ ಹರೇತ್ ॥
ತತೋಽಸ್ಯ ಪೂರ್ವಮೇವ ನೋ ಹ್ಯಭಾವತಾ ಕೃತಾ ಶುಭಾ ॥ ೭೪ ॥
ಉಪಾಯ ಏಷ ಚಿಂತಿತೋ ಮಯಾತ್ರ ಮಾಗಧೇಶ್ವರ ।
ಮುನಿಂ ಹಿ ಗರ್ಗನಾಮಕಂ ಹ್ಯಮುಷ್ಯ ಶಾ(ಸಾ)ಲ ಅಕ್ಷಿಪತ್ ॥ ೭೫ ॥

ಅ ॥ ಶ್ರೀಕೃಷ್ಣನು ತಾನೇವೇ ಬಂದು ನಮ್ಮನ್ನು ಗೆದ್ದು ಕನ್ನಿಕೆಯನ್ನು ಅಪಹರಿಸುವುದಾದರೆ ಆ ಕಾರಣದಿಸೆಯಿಂದ ಈ ಕೃಷ್ಣನಿಗೆ ಮೊದಲೇ ಯಾವುದು ಗರ್ಗಾಚಾರ್ಯರಿಂದಲೇ ಅಭಾವತ್ವವು ಮಾಡಲ್ಪಟ್ಟಿದೋ ಅದು ನಮಗೆ ಮಂಗಲವಷ್ಟೆ. ಎಲೋ ಜರಾಸಂಧನೇ ಶ್ರೀಕೃಷ್ಣಾಭಾವ ವಿಷಯದಲ್ಲಿ ಈ ಉಪಾಯವು ನನ್ನಿಂದ ಆಲೋಚಿಸಲ್ಪಟ್ಟಿದೆ. (ಅದೇ ಕಥೆಯನ್ನು ಸಾಲ್ವನು ಬಿಡಿಸಿ ಹೇಳುತ್ತಾನೆ.) ಗರ್ಗನೆಂದು ಹೆಸರುಳ್ಳ ಋಷಿಯನ್ನು ಈ ಗರ್ಗಾಚಾರ್ಯರ ಹೆಂಡತಿಯ ಕನಿಷ್ಠ ಭ್ರಾತನಾದ ಒಬ್ಬ ಯಾದವನು ನಿಂದಿಸಿರುವನು, ॥ ೭೪ ॥ ೭೫ ॥

ಆಕ್ಷೇಪವನ್ನು ಸ್ಪಷ್ಟೀಕರಿಸುತ್ತಾರೆ—

ಮೂ ॥ ಯದಾಸ್ಯ ಷಂಢತೋದಿತಾ ಮುನೇಃ ಪುರೋಹಿತಸ್ಯ ಚ ।
ಪರೇಣ ವೃಷ್ಣಯೋಽಹಸಂಶ್ಚಕೋಪ ಗರ್ಗ ಏಷು ಹಿ (ಹ) ೭೬

ಅ ॥ ಆ ಶ್ರೀಕೃಷ್ಣನ ಮುಂಭಾಗದಲ್ಲಿ ಈ ಗರ್ಗಾಚಾರ್ಯರಿಗೆ ನಪುಂಸಕತ್ವವು ಯಾವಾಗ ಹೇಳಲ್ಪಟ್ಟಿತೋ, ಆಗ ಶ್ರೀಕೃಷ್ಣನಿಂದ ಪ್ರೇರಿಸಿಕೊಳ್ಳಲ್ಪಟ್ಟ ಅಥವಾ ಶ್ರೀಕೃಷ್ಣನಿಂದ ಕೂಡಿ ಕೊಂಡು ಯಾದವರು ನೆಗಾಡಿದರು. ಗರ್ಗಾಚಾರ್ಯರು ಈ ಯಾದವರಲ್ಲಿ ಕೋಪಿಸಿರುವರು. ॥ ೭೬ ॥

ಮೂ ॥ ಚಕಾರ ಚ ಪ್ರತಿಶ್ರವಂ ಸವಾರ್ಜಯೇ ಸುತಂ ದ್ರುತಂ ।
ಅಕೃಷ್ಣತಾಂ ಯ ಆನಯೇದ್ಭುವೋಽಪಿ ವೃಷ್ಣಿನಾಶಕಃ ॥ ೭೭ ॥

ಅ ॥ ಯಾವನು ಯಾದವರಿಗೆ ನಾಶಕನಾಗಿ ಭೂಮಿಯ ಭಾಗವನ್ನು ಕೃಷ್ಣರಾಹಿತ್ಯವನ್ನು ಹೊಂದಿಸಿಕೊಡುವನೋ ಅಂತಹ ಮಂಗನನ್ನು ಶೀಘ್ರದಲ್ಲಿ ಹೊಂದುವೆನು. ಹೀಗೆ ಪ್ರತಿಜ್ಞೆಯನ್ನು ಮಾಡಿರುವನು. ॥ ೭೭ ॥

ಮೂ ॥ ಯತೋ ಹಿ ಕೃಷ್ಣಸಂಶ್ರಯಾದ್ಬತಾಪಹಾಸಿತಾ ವಯಂ ।
ಇತಿ ಬ್ರುವನ್ವನಂ ಯಯೌ ತಪಶ್ಚ ಶೈವಮಾಚರತ್ ॥ ೭೮ ॥
ಸ ಚೂರ್ಣಮಾಯಸಂ ತ್ವದನ್ ದದರ್ಶ ಚಾಬ್ದತಃ ಶಿವಂ ।
ವರಂ ತತೋಽಭಿಪೇದಿವಾನ್ ಸುತಂ ಹರೇರಭಾವದಂ ॥ ೭೯ ॥

ಅ ॥ ಯಾವ ಕಾರಣದಿಂದ ಶ್ರೀಕೃಷ್ಣನ ಆಶ್ರಯದಿಂದ ನಾವು ಅಪಹಾಸವನ್ನು ಹೊಂದಿರುವೆವು. ಕಷ್ಟ! ಈ ಪ್ರಕಾರ ಹೇಳುತ್ತಾ ಕಾಡಿಗೆ ಹೋದನು. ಆ ಗರ್ಗಾಚಾರ್ಯರು ರುದ್ರಸಂಬಂಧಿಯಾದ ತಪಸ್ಸನ್ನು ಮಾಡುತ್ತಾ ಲೋಹಸಂಬಂಧಿಯಾದ ಚೂರ್ಣವನ್ನು ತಿನ್ನುತ್ತಾ ಒಂದು ವತ್ಸರ ಮಾತ್ರದಿಂದ ರುದ್ರನನ್ನು ಕಂಡನು. ಆ ರುದ್ರನದೆಸೆಯಿಂದ ಶ್ರೀಹರಿಯ ಅಭಾವವನ್ನು ಕೊಡತಕ್ಕ ಪುತ್ರರೂಪವಾದ ವರವನ್ನು ಹೊಂದಿದನು. ॥ ೭೮ ॥ ॥ ೭೯ ॥

ವಿಷ್ಣುಭಕ್ತರಾದ ಗರ್ಗಾಚಾರ್ಯರು ಶ್ರೀಕೃಷ್ಣನಿಗೆ ವಿರೋಧವನ್ನು ಹೇಗೆ ಮಾಡಿದರು ಎಂದರೆ—

ಮೂ ॥ ಸ ವಿಷ್ಣುದೈವತೋಽಪಿ ಸನ್ ಪ್ರವಿಷ್ಟ ಉಲ್ಬಣಾಸುರೈಃ ।
ವ್ಯಧಾದ್ಧರೇಃ ಪ್ರತೀಪಕಂ ವ ತಂ ತು (ಚ) ನೈಷ್ಠಿಕಂ ಜಹೌ ॥ ೮೦ ॥

ಅ ॥ ಆ ಗರ್ಗಾಚಾರ್ಯರು ವಿಷ್ಣುವೇ ದೇವತೆಯಾಗಿ ಉಳ್ಳವರಾದಾಗ್ಯೂ ಕ್ರೂರರಾದ ದೈತ್ಯರಿಂದ ಪ್ರವಿಷ್ಟರಾದವರಾಗಿ ಶ್ರೀಹರಿಗೆ ವಿರೋಧವನ್ನು ಮಾಡಿದರು. ನೈಷ್ಠಿಕ ಬ್ರಹ್ಮಚರ್ಯ ವ್ರತವನ್ನು ಬಿಟ್ಟರು. ॥ ೮೦ ॥

ಮೂ ॥ ತಮೂರ ಚಾಸುರಾಪ್ಸರಾ ಬಲಿಷ್ಠಪುತ್ರಕಾಮ್ಯಯಾ ।
ಪ್ರನಿತ್ಯ ಗೋಪಿಕಾಂಗನಾಸಮೂಹಮಧ್ಯಮುಲ್ಬಣಾ ॥ ೮೧ ॥

ಅ ॥ ಅಸುರ ಸಂಬಂಧಿಯಾದ ಕ್ರೂರಳಾದ ವೇಶ್ಯಾಂಗನೆಯು ಬಲಿಷ್ಠನಾದ ಪುತ್ರನು ಹುಟ್ಟಬೇಕೆನ್ನುವ ಇಚ್ಛೆಯಿಂದ ಗೋಪಿಕಾಸ್ತ್ರೀಯರ ಸಮೂಹದ ಮಂಧ್ಯಪ್ರದೇಶವನ್ನು ಪ್ರವೇಶ ಮಾಡಿ ಆ ಗರ್ಗಾಚಾರ್ಯರನ್ನು ಹೊಂದಿದಳು. ॥ ೮೧ ॥

ಆ ವೇಶ್ಯಾಂಗನೆಯು ಗೋಪಿಕಾಸ್ತ್ರೀಯರ ಸಮೂಹದ ಮಂಧ್ಯವನ್ನು ಪ್ರವೇಶಿಸಿ ಬರಲಿಕ್ಕೆ ಕಾರಣವನ್ನು ಹೇಳುತ್ತಾರೆ—

ಮೂ ॥ ಸ ಯಾವನೇನ ಭೂಭೃತಾ ಹಿ ಗೋಪಿಕಾಭಿರರ್ಚಿತಃ ।
ಅಪುತ್ರಕೇಣ ಜಾನತಾ ಮುನೇರ್ಮನೋಽನುಚಿಂತಿತಂ ॥ ೮೨ ॥

ಅ॥ ಗರ್ಗಾಚಾರ್ಯರ ಮನಸ್ಸಿನಿಂದ ವಿಚಾರಿಸಿಕೊಳ್ಳಲ್ಪಟ್ಟದ್ದನ್ನು ತಿಳಿಯುತಕ್ಕ, ಮಕ್ಕಳು ಇಲ್ಲದಿರುವ ಮ್ಲೇಂಛಸಂಬಂಧಿಯಾದ ರಾಜನಿಂದ ಗೋಪಿಕಾಸ್ತ್ರೀಯರಿಂದ ಆ ಗರ್ಗಾಚಾರ್ಯರು ಪೂಜಿಸಿಕೊಳ್ಳಲ್ಪಟ್ಟರು. (ಅಂದರೆ ಮುನಿಯ ಚಿತ್ತವನ್ನು ವಶೀಕರಿಸುವುದಕ್ಕಾಗಿ ನೀವು ಬರಬೇಕೆಂದು ಗೋಪಿಕಾಸ್ತ್ರೀಯರನ್ನು ಪ್ರಾರ್ಥಿಸಿ ಅವರಿಂದ ಕೂಡಿಕೊಂಡು ಪೂಜಿಸಿಕೊಳ್ಳಲ್ಪಟ್ಟರು;)

ವಿಶೇಷಾಂಶ—(1) ಗೋಪಿಕಾಸ್ತ್ರೀಯರಲ್ಲಿ ಮಕ್ಕಳನ್ನು ಹುಟ್ಟಿಸಿ ನನಗೆ ಕೊಡು ಎಂದು ಯುವನನು ಪ್ರಾರ್ಥಿಸಿರುವನು ಎನ್ನುವ ಕಥೆಯನ್ನು ಇಟ್ಟುಕೊಳ್ಳಬೇಕು; (2) ಅಪ್ಸರಸ್ತ್ರೀಯೂ ಕೂಡ ಗರ್ಗಾಚಾರ್ಯರನ್ನು ಪೂಜಿಸಲಿಕ್ಕೆ ಗೋಪಿಕಾಸ್ತ್ರೀಯರ ಮಂಧ್ಯದಲ್ಲಿ ಪ್ರವಿಷ್ಟಳಾದಳು. ॥ ೮೩ ॥

ಮೂ ॥ ಸ ಚಾಪ್ಸರಸ್ತನೌ ಸುತಂ ನಿಷಿಚ್ಯ ಯಾವನಾಯ ಚ ।
ದದೌ ವಿಮೋಹಿತಃ ಕ್ರುಧಾ ಕಿಮೇತದೀಶವೈರಿಣಃ ॥ ೮೪ ॥

ಅ॥ ಕ್ರೋಧಾಭಿಮನ್ಯಮಾನನಾದ ಆಸುರನಿಂದ ಮೋಹವನ್ನು ಹೊಂದಿದ ಆ ಗರ್ಗಾಚಾರ್ಯರು ಅಪ್ಸರಃಸ್ತ್ರೀಯ ಶರೀರದಲ್ಲಿ ಮಗನನ್ನು ಹುಟ್ಟಿಸಿ ಮ್ಲೇಂಛ ರಾಜನಿಗೋಸ್ಕರ ಕೊಟ್ಟನು. ಮಹಾದೇವನಲ್ಲಿ ವೈರಿಯಾದ ಶ್ರೀಕೃಷ್ಣನಿಗೆ ತನ್ನ ಪುರೋಹಿತನಿಂದಲೇ ತನಗೆ ಮೃತ್ಯುಸಂಪಾದನಾದಿ ವ್ಯಸನವು ಏನು ಆಶ್ಚರ್ಯವು. (ಎಂದು ಸಾಲ್ವ ವಚನವು.) ॥ ೮೫ ॥

ಮೂ ॥ ಸ ಆಶ್ರಮಾಚ್ಚ ನೈಷ್ಠಿಕಾದ್ವಿದೂಷಿತಃ ಪ್ರತೀಪಕೃತ್ ।
ಹರೇಶ್ಚ ತಾಪಮೇಯಿವಾನ್ ಜಗರ್ಹ ಚಾತ್ಮಶೇಮುಷೀಂ ॥ ೮೬ ॥

ಅ॥ ನೈಷ್ಠಿಕ ಬ್ರಹ್ಮಚರ್ಯಾಶ್ರಮದ್ದೆಸೆಯಿಂದ ಭ್ರಷ್ಟನಾದ ಶ್ರೀಕೃಷ್ಣನಿಗೆ ವಿರೋಧವನ್ನು ಮಾಡತಕ್ಕ ಆ ಗರ್ಗಾಚಾರ್ಯರು ಪಶ್ಚಾತ್ತಾಪವನ್ನು ಹೊಂದುವವರಾಗಿ ತನ್ನ ಬುದ್ಧಿಯನ್ನು ನಿಂದಿಸಿಕೊಂಡರು. ॥ ೮೬ ॥

ಮೂ ॥ ಜಗಾಮ ಚಾರಣಂ ಹರಿಂ ಪ್ರಪಾಹಿ ಮಾಂ ಸುಪಾಪಿನಂ ।
ಇತಿ ಸ್ಮ ವಿಷ್ಣ್ವನುಜ್ಞಯಾ ಚಕಾರ ವೈಷ್ಣವಂ ತಪಃ ॥ ೮೭ ॥

ಅ ॥ ಅತಿಪಾಪಿಷ್ಠನಾದ ನನ್ನನ್ನು ಚೆನ್ನಾಗಿ ರಕ್ಷಿಸು ಹೀಗೆ (ಹೇಳುತ್ತಾ) ಶ್ರೀಕೃಷ್ಣನನ್ನು ರಕ್ಷಕನನ್ನಾಗಿ ಹೊಂದಿದನು. ಹೀಗೆ ವಿಷ್ಣುವಿನ ಆಜ್ಞೆಯಿಂದ ವಿಷ್ಣುಸಂಬಂಧಿಯಾದ ತಪಸ್ಸನ್ನು ಮಾಡಿದನು. ॥ ೮೭ ॥

ಮುಂದ್ದದಲ್ಲಿ ಶಿವಾರ್ಚನೆಯಂನ್ನು ಬಿಟ್ಟಿರುವುದರಿಂದ ಸಾಲ್ವನು ಗರ್ಗಾಚಾರ್ಯರನ್ನು ನಿಂದಿಸುತ್ತಾ, ದಾನವರನ್ನು ಸ್ತುತಿಸುತ್ತಾ, ಪುನಃ ಹೇಳುತ್ತಾನೆ—

ಮೂ ॥ ಕುತೋ ಹಿ ಭಾಗ್ಯವಾಪತೇನ್ಮುನೇಃ ಶಿವಾರ್ಚನೇ ಸದಾ ।
ಭವಾದೃಶಾ ಹಿ ದಾನವಾಃ ಸ್ಥಿರಾಃ ಶಿವಾರ್ಚನೇ ಸದಾ ॥ ೮೬ ॥

ಅ॥ (ಗರ್ಗಾಚಾರ್ಯರಂ) ಶಿವಾರ್ಚನೆಯಂ ಮಾಡಿದಾಗ್ಯೂ ಅವರಿಗೆ ಯಾವಾಗಲೂ ಭಾಗ್ಯವು ಯಾವುದರಿಂದ ಬಂದೀತಂ. (ಅಂದರೆ ಗರ್ಗಾಚಾರ್ಯರಿಗೆ ಶಿವಾರ್ಚನದಲ್ಲಿ ಸ್ಥೈರ್ಯ ಎಲ್ಲದಿರುವುದರಿಂದ ಸರ್ವಥಾ ಬರಲಾರದಂ.) ನಿನ್ನಂತಹ ದಾನವರಂ ಯಾವಾಗಲೂ ರುದ್ರನನ್ನು ಪೂಜಿಸುವುದರಲ್ಲಿ ನಿಷ್ಠಾವುಳ್ಳವರಂ. ॥೮೬॥

ಮೂ ॥ ಸುತೋಽಸ್ಯ ಕಾಲನಾಮಕೋ ಬಭೂವ ಕೃಷ್ಣಮರ್ದಿತುಂ ।
ಸದೈವ ಕಾಲಕಾಂಕ್ಷಣಾತ್ ಸ ಯಾವನಾಭಿಷೇಚಿತಃ ॥ ೮೭ ॥

ಅ॥ ಈ ಗರ್ಗಾಚಾರ್ಯರ ವಂಗನಂ ಶ್ರೀಕೃಷ್ಣನನ್ನು ಸಂಹರಿಸಲಿಕ್ಕೆ ಯಾವಾಗಲೂ ಕಾಲವನ್ನು ನಿರೀಕ್ಷಿಸುತ್ತಾ ಇದ್ದ ಪ್ರಯುಂಕ್ತ ಕಾಲನೆಂದಂ ಹೆಸರುಳ್ಳವನಂ ಆದನಂ; ಆ ಕಾಲನಂ ತುರಂಪ್ಕರಾಜನಿಂದ ಪಟ್ಟಾಭಿಷಿಕ್ತನಾದನಂ. ॥೮೭॥

ಮೂ ॥ ತವೈವ ಶಿಷ್ಯ ಏಷ ಚಾತಿಭಕ್ತಿವಾನ್ ಹಿ ಶಂಕರೇ ।
ಪ್ರಭೂತಸೇನಯಾ ಯುತೋ ಬಲೋದ್ಧತಶ್ಚ ಸರ್ವದಾ ॥ ೮೮ ॥

ಅ॥ (ಎಲೋ ಜರಾಸಂಧನೇ) ಈ ಕಾಲಯಾವನನಂ ನಿನ್ನ ಶಿಷ್ಯನೇ, ರುದ್ರನಲ್ಲಿ ಅತ್ಯಂತ ಭಕ್ತಿಯುಳ್ಳವನಂ, ಪ್ರಸಿದ್ಧವು, ಉತ್ಕೃಷ್ಟವಾದ ಸೇನೆಯಿಂದ ಕೂಡಿದವನಂ, ಯಾವಾಗಲೂ ಬಲದಿಂದ ದೃಪ್ತನಂ. ॥೮೮॥

ಮೂ ॥ ತವೈವ(ಷ) ಯಾವಿ ಶಾಸನಾತ್ತವೋಪನೀಯ ಸತ್ವರಂ ।
ವಿಕೃಷ್ಣಕಂ ವಿಧಾಯ ಚ ಕ್ಷಿತೇಸ್ತಲಂ ರವಾಮಹೇ ॥
(ವಿಕೃಷ್ಣಕಂ ಕ್ಷಿತೇಸ್ತಲಂ ವಿಧಾಯ ಸಂ ರವಾಮಹೇ) ॥ ೮೯ ॥

ಅ॥ ಆ ಈ ನಾನಂ ನಿನ್ನ ಆಜ್ಞೆಯಿಂದ ಕಾಲಯಾವನನ ಸವಿಾಪಕ್ಕೆ ಹೋಗುತ್ತೇನೆ; ಆ ಕಾಲಯಾವನನನ್ನು ಬೇಗನೇ ನಿನ್ನ ಸವಿಾಪಕ್ಕೆ ತಂದಂ ಭೂಪ್ರದೇಶವನ್ನು ಶ್ರೀಕೃಷ್ಣನಂ ಇಲ್ಲದೆ ಇದ್ದಿದನ್ನಾಗಿ ಮಾಡಿ ಕ್ರೀಡಿಸುವೆವು. ॥೮೯॥

ಮೂ ॥ ತತಶ್ಚ ರುಕ್ಮಿಣೀಂ ವಯಂ ಪ್ರದಾಪಯಾಮು ಚೇದಿಪೇ ।
ವಿನಾಶ್ಯ ದೇವಪಕ್ಷಿಣೋ ಯಥೇಷ್ಟಮಾಸ್ಮ ಸರ್ವದಾ ॥ ೯೦ ॥

ಅ॥ ಆವೋಲಿ ರುಂಗ್ಮಿಣಿಯಂನ್ನು ನಾವು ಶಿಶುಂಪಾಲನಿಗೋಸ್ಕರ ಕೊಡಿಸುವ. ದೇವತೆಗಳ ಸಹಾಯಂಭೂತರಾದವರನ್ನು ವಿನಾಶಪಡಿಸಿ ಸರ್ವದಾ ಇಚ್ಛಾನುಸಾರವಾಗಿ ಇರುತ್ತೇವೆ ॥ ೯೦ ॥

ಮೂ ॥ ಇತೀರಿತೋ ಜರಾಸುತೋ ಬಭೂವ ದುರ್ಮನಾ ಭೃಶಂ।
ಕಿರೀಟಮುಂಡಿತಂ ಶಿರಶ್ಚಕಾಶ ಚಾಶ್ವವಾಗ್ಭೃಶಂ ॥ ೯೧ ॥

ಅ॥ ಈ ಪ್ರಕಾರ ಹೇಳಿಸಿಕೊಳ್ಳಲ್ಪಟ್ಟ ಜರಾಸಂಧನು ಅತ್ಯಂತವಾಗಿ ದುಃಖಿಯಾಗಿಹ್ನವಾದ ಮನಸ್ಸುಳ್ಳವನಾದನು; ಮುಂಕಾಟದಿಂದ ಅಲಂಕೃತವಾದ ಶಿರಸ್ಸನ್ನು ಬೆನ್ನಾಗಿ ಪ್ರಾಪಿಸಲಿಕ್ಕೆ ಅಶಕ್ಯವಾದ ಕಾರ್ಯ ಸಮೂಹವನ್ನು ಹೊಂದಿರುವರಪ್ಪೇ, ಅತನೇ ಈ ನಾನು ಜರಾಸಂಧನಪ್ಪೆ. ॥ ೯೧ ॥

ಮೂ ॥ ಕರಂ ಕರೇಣ ಪೀಡಯನ್ನಿಶಾಮ್ಯ ಚಾತ್ಮನೋ ಭುಜೌ ।
ಜಗಾದ ಕಾರ್ಯಸಿದ್ಧಯೇ ಕಥಂ ಪ್ರಯಾಚಯೇ ಪರಂ ॥ ೯೨ ॥

ಅ॥ (ಜರಾಸಂಧನು) ಹಸ್ತವನ್ನು ಹಸ್ತದಿಂದಲೇ ಪೀಡಿಸುತ್ತಾ, ತನ್ನ ಬಾಹುಗಳನ್ನು ನೋಡಿಕೊಂಡು ತನ್ನ ಕಾರ್ಯಸಿದ್ಧಿಗಾಗಿ ಮತ್ತೊಬ್ಬನನ್ನು ಹೇಗೆ ಪ್ರಾರ್ಥಿಸಿಯೇನು, ಎಂದು ಹೇಳಿದನು. ॥ ೯೨ ॥

ಮೂ ॥ ಸುದುರ್ಗಕಾರ್ಯಸಂತತಿಂ ಹ್ಯಗುಃ ಸ್ಮ ಮದ್ಭುಜಾಶ್ರಯಾಃ ।
ಸಮಸ್ತಭೂತಲೇ ನೃಪಾಃ ಸ ಚಾಹಮೇಷ ಮಾಗಧಃ ॥ ೯೩ ॥

ಅ॥ ಸರ್ವ ರಾಷ್ಟ್ರಗಳಲ್ಲಿಯೂ ನನ್ನ ಭುಜವನ್ನು ಆಶ್ರಯಿಸಿಕೊಂಡಿರುವ ರಾಜರು ಬೆನ್ನಾಗಿ ಪ್ರಾಪಿಸಲಿಕ್ಕೆ ಅಶಕ್ಯವಾದ ಕಾರ್ಯ ಸಮೂಹವನ್ನು ಹೊಂದಿರುವರಪ್ಪೇ, ಅತನೇ ಈ ನಾನು ಜರಾಸಂಧನಪ್ಪೆ. ॥ ೯೩ ॥

ಮೂ ॥ ಕದಾಪ್ಯಚೀರ್ಣಮದ್ಯ ತತ್ಕಥಂ ಕರೋಮಿ ಕೇವಲಂ ।
ಗಿರೀಶಪಾದಸಂಶ್ರಯಃ ಪ್ರಭುಃ ಸಮಸ್ತಭೂಭೃತಾಂ ॥ ೯೪ ॥

ಅ॥ ಕೇವಲ ರುದ್ರನ ಪಾದವನ್ನು ಆಶ್ರಯಿಸಿಕೊಂಡಿರುವ ಎಲ್ಲಾ ರಾಜರಿಗೂ ಪ್ರಭುವಾದ ನಾನು ಯಾವಾಗಲೂ ಮಾಡದಿರುವ ಆ ಪ್ರಾರ್ಥನೆಯನ್ನು ಈಗ ಹೇಗೆ ಮಾಡುತ್ತೇನೆ, ॥೯೪॥

ಮೂ ॥ ಇತೀರಿತಃ ಸ ಸೌಭರಾಟ್ ಜಗಾದ ವಾಕ್ಯಮುತ್ತರಂ ।
ಭವಾನಪಿ ಸ್ಮ ಮುಹ್ಯತೇ ಕಿಮುಸ್ಮದಾದಯಃ ಪ್ರಭೋ ॥ ೯೫ ॥

ಅ॥ ಈ ಪ್ರಕಾರ ಜರಾಸಂಧನಿಂದ ಹೇಳಿಸಿಕೊಳ್ಳಲ್ಪಟ್ಟ ಸಾಲ್ವನು ಪರಿಹಾರರೂಪವಾದ ವಾಕ್ಯವನ್ನು ಹೇಳಿದನು. ಪ್ರಭುವಾದ ಜರಾಸಂಧನೇ, ತಾವೂ ಕೂಡ ಮೋಹವನ್ನು ಹೊಂದುವಿರಿ. ನಾವೇ ಮೊದಲಾದವರು (ಮೋಹವನ್ನು ಹೊಂದುವುದು ಏನು ಆಶ್ಚರ್ಯವು.) ॥ ೯೫ ॥

ಮೂ ॥ ಸ್ವಶಿಷ್ಯಕೈಃ ಕೃತಂ ತು ಯತ್ ಕಿಮನ್ಯಸಾಧಿತಂ ಭವೇತ್ ।
ಸ್ವಶಿಷ್ಯದಾಸವರ್ಗಕೈಃ ಸಮರ್ಥಯಂತಿ ಭೂಭುಜಃ ॥ ೯೬ ॥

ಅ॥ ತನ್ನ ಶಿಷ್ಯರಿಂದ ಯಾವುದು ಮಾಡಲ್ಪಡುತ್ತದೋ, ಅದು ಇತರರಿಂದ ಸಂಪಾದಿಸಿಕೊಳ್ಳಲ್ಪಟ್ಟದ್ದು ಆಗುವುದೋ ಏನು? (ಸರ್ವಥಾ ಆಗಲಾರದು.) ರಾಜರು ತನ್ನ ಶಿಷ್ಯರ್ಯ ದಾಸರೂ ಇವರ ಸಮೂಹಗಳಿಂದ ಕಾರ್ಯವನ್ನು ಸಂಪಾದಿಸುತ್ತಾರೆ, ॥ ೯೬ ॥

ಮೂ ॥ ಅಪಿ ಸ್ಮ ತೇ ಬಲಾಶ್ರಯಪ್ರವೃತ್ತ ಯೋಽಸ್ಮದಾದಯಃ ।
ಪುಮಾನ್ ಕುಠಾರಸಂಗ್ರಹಾದಶಕ್ತ ಈರ್ಯತೇ ನು (ಹಿ) ಕಂ॥ ೯೭ ॥

ಅ ॥ ನಾನೇ ಮೊದಲಾದವರೂ ಕೂಡ ನಿನ್ನ ಬಲದ ಆಶ್ರಯದಿಂದಲೇ ಪ್ರವೃತ್ತಿಯುಳ್ಳವರು, (ದೃಷ್ಟಾಂತಪೂರ್ವಕವಾಗಿ ಹಿಂದೆ ಹೇಳಿದ ಅರ್ಥವನ್ನು ಹೇಳುತ್ತಾರೆ.) ಪರಶುವನ್ನು ಕುಠಾರವನ್ನು ಸಂಗ್ರಹಿಸಿದ್ದರಿಂದ ಅಶಕ್ತನೆಂದು ಹೇಳಿಸಿಕೊಳ್ಳಲ್ಪಡುತ್ತಾನೋ ಏನು? ॥ ೯೭ ॥

ಮೂ ॥ ಕುಠಾರಸಮ್ಮಿತೋ ಹ್ಯಸೌ ತವೈವ ಯಾವನೇಶ್ವರಃ ।
ವಿನಾ ಭವದ್ಬಲಂ ಕ್ವಚಿತ್ ಪ್ರವರ್ತಿತುಂ ನ ಹಿ ಕ್ಷಮಃ ॥ ೯೮ ॥

ಅ॥ ಮ್ಲೇಂಛರಿಗೆ ಅಧಿಪತಿಯಾದ ಈ ಕಾಲಯವನನು ಪರಶು (ಕೊಡಲಿ) ವಿನಿಂದ ಸವಾನಿಕನು. ನಿನ್ನ ಬಲವನ್ನು ಹೊರತು ಎಲ್ಲಿಯೂ ಪ್ರವರ್ತಿಸಲಿಕ್ಕೆ ಶಕ್ತನಲ್ಲ. ॥ ೯೮ ॥

ಮೂ ॥ ವರೋ ಹಿ ಕೃಷ್ಣಮರ್ದನೇ ವೃತೋಽಸ್ಯ ಕೇವಲಂ(ಲಃ)ಶಿವಾತ್ ।
ತದನ್ಯಶತ್ರುಪೀಡನಾತ್ತ್ರಮೇವ ಚಾ(ತ)ಸ್ಯ ರಕ್ಷಕಃ ॥ ೯೯ ॥

ಅ॥ ಯಾವ ಕಾರಣದಿಂದ ಈ ಕಾಲಯವನನಿಂದ ಕೇವಲವಾಗಿ ಶ್ರೀಕೃಷ್ಣನನ್ನು ಮರ್ದಿಸುವ ವಿಷಯದಲ್ಲಿ ರುದ್ರನದೆಸೆಯಿಂದ ವರವು ಅಂಗೀಕೃತವಾಗಿದೆಯೋ, ಆದಕಾರಣ(ಶಕ್ತನಲ್ಲ.) ಕಾಲಯವನನಿಗೆ ಶ್ರೀಕೃಷ್ಣನಿಂದ ಇತರರಾದ ಶತ್ರುಗಳಿಂದುಂಟಾಗತಕ್ಕದ್ದಾಯಾವುದು ಭಯವೋ ಅದರಿಂದ ನೀನೇ ರಕ್ಷಕನಾಗಬೇಕು. ॥ ೯೯ ॥

ಮೂ ॥ ತವಾಖಿಲೈರಜೀಯತಾ ಶಿವಪ್ರಸಾದತೋಽಸ್ತಿ ಹಿ ।
ವಿಶೇಷತೋ ಹರೇರ್ಜಯೇ ವರಾದಯಂ ವಿಮೃಗ್ಯ(ವಾರ್ಯ)ತೇ ॥೧೦೦॥

ಅ॥ ನಿನಗೆ ರುದ್ರದೇವರ ಪ್ರಸಾದದಿಂದಲೇ ಎಲ್ಲರಿಂದಲೂ ಗೆಲ್ಲಲ್ಪಡದಿರುವಿಕೆಯು ಇದೆಯಷ್ಟೆ, ಶ್ರೀಕೃಷ್ಣನನ್ನ ಜಯಿಸುವ ವಿಷಯದಲ್ಲಿ ಈ ಕಾಲಯವನನು (ಶ್ರೀಕೃಷ್ಣನನ್ನೇ ಸಂಹರಿಸುವನು ಎನ್ನುವ) ವಿಶೇಷ ವರದ್ದೆಸೆಯಿಂದ ಅನ್ವೇಷಣ ಮಾಡಲ್ಪಡುತ್ತಾನೆ. ॥ ೧೦೦ ॥

ಮೂ ॥ ಇತೀರಿತೇಽಪ್ಯತೃಪ್ತವತ್ ಸ್ಥಿತೇ ತು ಬಾರುಹ(ರ್ಹ) ದ್ರಥೇ ।
ಜಗಾಮ ಸೌಭಮಾಸ್ಥಿತಃ ಸ ಸೌಭರಾಟ್ ಚ ಯಾವನಂ ॥ ೧೦೧ ॥

ಅ॥ ಹೀಗೆ ಹೇಳಿದರೂ ಜರಾಸಂಧನು ಅತೃಪ್ತನಂತೆ ಇರುತ್ತಿರಲು ಆ ಸಾಲ್ವನು ಸೌಭವಿಮಾನವನ್ನು ಏರಿದವನಾಗಿ ಕಾಲಯವನನ ಸಮೀಪಕ್ಕೆ ಹೋದನು. ॥ ೧೦೧ ॥

ಮೂ ॥ ಸ ಕಾಲಯಾವನೋಽಥ ತಂ ಜರಾಸುತಾಂತಿಕಾಗತಂ ।
ನಿಶಮ್ಯ ಭಕ್ತಿಪೂರ್ವಕಂ ಪ್ರಣಮ್ಯ ಚಾರ್ಚಯುದ್ವ್ರತಂ ॥ ೧೦೨ ॥

ಅ॥ ಆಮೇಲೆ ಆ ಕಾಲನಾಮಕನಾದ ಯವನಪುತ್ರನಾದ ಕಾಲಯವನನು ಜರಾಸಂಧನ ಸಮೀಪದಿಂದ ಬಂದಿರುವ ಆ ಸಾಲ್ವನನ್ನು ನೋಡಿ ಭಕ್ತಿಪೂರ್ವಕವಾಗಿ ನಮಸ್ಕರಿಸಿ ಶೀಘ್ರದಲ್ಲಿ ಪೂಜಿಸಿದನು, ॥ ೧೦೨ ॥

ಮೂ ॥ ಜರಾಸುತೋ ಹಿ ದೈವತಂ ಸಮುಸ್ತಕೇತವದ್ವಿಷಾಂ ।
ಇತಿ ಪ್ರಣಮ್ಯ ತಾಂ ದಿಶಂ ತದೀಯಮಾಶ್ವಪೂಜಯತ್ ॥ ೧೦೩ ॥

ಅ॥ ಜರಾಸಂಧನು ಎಲ್ಲಾ ಭಗವದ್ವೇಷಿಗಳಿಗೆ ದೇವತೆಯು, ಹೀಗೆ ಆ ದಿಕ್ಕನ್ನೇ ನಮಸ್ಕರಿಸಿ ಆ ಜರಾಸಂಧನ ಭಕ್ತನಾದ ಸಾಲ್ವನನ್ನು ಶೀಘ್ರವಾಗಿ ಪೂಜಿಸಿದನು॥ ॥ ೧೦೩ ॥

ಮೂ ॥ ತದೀರಿತಂ ನಿಶಮ್ಯ ಚ ದ್ರುತಂ ತ್ರಿಕೋಟಿಸಂಖ್ಯಯಾ ।
ಅಕ್ಷೌಹಿಣೀಕಯಾ ಯುತಃ ಸ್ವಸೇನಯಾ ನಿರಾಕ್ರಮತ್ ॥ ೧೦೪ ॥

ಅ ॥ ಸಾಲ್ವನಿಂದ ಹೇಳಲ್ಪಟ್ಟ ವಿಷಯವನ್ನು (ಕಾಲಯವನನು) ಕೇಳಿ ಶೀಘ್ರವಾಗಿ ಮೂರು ಕೋಟಿ (೩೦೦೦೦೦೦) ಸಂಖ್ಯೆಯುಳ್ಳ ಅಕ್ಷೌಹಿಣೀ ನಾಮಕವಾದ ತನ್ನ ಸೇನೆಯಿಂದ ಕೂಡಿದವನಾಗಿ ಹೊರಟು ಹೋದನು. ॥ ೧೦೪ ॥

ಮೂ ॥ ತದಶ್ವಮೂತ್ರವಿಷ್ಮಯಾ ಬಭೂವ ನಾಮತಃ ಶಕೃತ್ ।
ನದೀ ಸುವೇಗಗಾಮಿನೀ ಕಲೌ ಚ ಯಾ ವಹೇದ್ದ್ರುತಂ ॥ ೧೦೫ ॥

ಅ॥ ಆ ಕಾಲಯವನನ ಕುದುರೆಗಳ ಮೂತ್ರವು ವಿಷ್ಮಾ (ಲದ್ದಿ) ಇವುಗಳಿಂದ ಅತಿವೇಗದಿಂದ ಹೋಗತಕ್ಕ ಶಕೃತ್ ಎಂತ ನಾಮದಿಂದ ಪ್ರಸಿದ್ಧವಾದ ನದಿಯು ಉಂಟಾಯಿತು. ಯಾವ ನದಿಯು ಕಲಿಯುಗದಲ್ಲಿ ವೇಗದಿಂದ ಪ್ರವಹಿಸುತ್ತದೆ, ಅಂತಹುದು. ॥ ೧೦೫ ॥

ಮೂ ॥ ಪುನಃಪುನರ್ನದೀಭವಂ ನಿಶಾಮ್ಯ ದೇಶಸಂಕ್ಷಯಂ ।
ತದನ್ಯದೇಶಮೂತ್ರಿತಂ ವ್ಯಶೋಷಯದ್ಧಿ ಮಾರುತಃ ॥ ೧೦೬ ॥

ಅ ॥ ವಾಯುದೇವರು ಮತ್ತು ಮತ್ತು ನದಿಗಳಿಂದುಂಟಾದ ದೇಶಗಳ ನಾಶವನ್ನು ನೋಡಿ ಶಕೃನ್ನದೀ ದೇಶದಿಂದ ಬೇರೆ ದೇಶದಲ್ಲಿ ಆದ ಮೂತ್ರವನ್ನು ಒಣಗಿಸಿಬಿಟ್ಟರು. ॥ ೧೦೬ ॥

ಮೂ ॥ ಹರಿಶ್ಚ ವೈನತೇಯಯುಗ್ವಿಚಾರ್ಯ ರಾಮಸಂಯುತಃ ।
ಸದಾತಿಪೂರ್ಣಸಂವಿದಪ್ಯಜೋಽಥ ಲೀಲಯಾಸ್ಮ ರತ್ ॥ ೧೦೭ ॥

ಅ॥ ಯಾವಾಗಲೂ ಅತ್ಯಂತ ಪೂರ್ಣವಾದ ಜ್ಞಾನವುಳ್ಳವರಾದಾಗ್ಯೂ ಉತ್ಪತ್ತಿವಿರಹಿತನಾದ ಬಲರಾಮನಿಂದ ಕೂಡಿದ ಶ್ರೀಹರಿಯು ಗರುಡನಿಂದ ಕೂಡಿದವನಾಗಿ ವಿಚಾರವಶಾಡಿ ಕ್ರೀಡೇಚ್ಛೆಯಿಂದ ಆಲೋಚಿಸಿದನು, ॥ ೧೦೭ ॥

ಮೂ ॥ ಯುಯುತ್ಸುರೇಷ ಯಾವನಃ ಸಮೀಪಮಾಗತೋಽದ್ಯ ನಃ ।
ಯುಯುಕ್ಷತಾಮನೇನ ನೋ ಜರಾಸುತೋಽಭಿಯಾಸ್ಯತಿ ॥ ೧೦೮ ॥

ಅ॥ ಈ ಕಾಲಯಂವನನಂ ಯಂದ್ದ ವಹಾಡಲಿಕ್ಕೆ ಇಚ್ಛಿಸಿದವನಾಗಿ ಈಗ ನಮ್ಮ ಸವಿಾಪಕ್ಕೆ ಬಂದಿರುತ್ತಾನೆ. ಈ ಕಾಲನಿಂದ ಯಂದ್ಧವಹಾಡಲಿಕ್ಕೆ ಇಚ್ಛಿಸುತ್ತಿರುವಾಗ ಜರಾಸಂಧನಂ ಬರೆಂವನಃ. ॥೧೦೪॥

ಮೂ ॥ ಸ ಯಾದವಾನ್ ಹನಿಷ್ಯತಿ ಪ್ರಭಂಗತಸ್ತು ಕೋಪ(ಪಿ)ತಃ ।
ಪುರಾ ಜಯಾಶಯಾ ಹಿ ನೌ ಯದೂನ್ನ ಜಘ್ನಿವಾನಸೌ ॥ ೧೦೧ ॥

ಅ॥ ಆ ಜರಾಸಂಧನಂ ತನ್ನಿಂದ ಹೊಂದಲ್ಪಟ್ಟ ಪರಾಜಯಂದ್ದೆಸೆಯಿಂದ ಯಾದವರನ್ನು ಸಿಟ್ಟಿನಿಂದ ಕೊಲ್ಲುಂವನಂ, (ಹಾಗಾದರೆ ಮೊದಲಂ ಪರಾಜಿತನಾದ ಜರಾಸಂಧನಂ ಏಕೆ ಸಂಹರಿಸಲಿಲ್ಲವೆಂದರೆ)ಈ ಜರಾಸಂಧನಂ ಪೂರ್ವಯಂದ್ದದಲ್ಲಿ ತನಗೆ ಮೇಲೆ ಜಯಂವು ಬಂದೀತಂ ಎನ್ನುವ ಆಶೆಯಿಂದ ನಮ್ಮ ಯಾದವರನ್ನು ಸಂಹರಿಸಲಿಲ್ಲ. ॥ ೧೦೯ ॥

ಮೂ ॥ ನಿರಾಶಕೋಽದ್ಯ ಯಾದವಾನಪಿ ಸ್ಮ ಪೀಡಯಿಷ್ಯತಿ ।
ಅತಃ ಸಮುದ್ರಮಧ್ಯಗಾ ಪುರೀ ವಿಧಾನಮದ್ಯ ಮೇ ॥ ೧೧೦ ॥

ಅ॥ ಈಗ ಜಯಾಶಾರಹಿತನಾಗಿ ಯಾದವರನ್ನೇ ಪೀಡಿಸುವನಂ. (ಅಂದರೆ ನಮ್ಮನ್ನು ಪೀಡಿಸಲಿಕ್ಕೆ ಸಮರ್ಥನಲ್ಲ.) ಆದಕಾರಣ ಸಮುದ್ರದ ಮಧ್ಯದಲ್ಲಿರತಕ್ಕ ಅತಿವಿಸ್ತೃತವಾದ ಯೋಗ್ಯವಾದ ಪಟ್ಟಣವನ್ನು ವಹಾಡುವುದೇ ಈಗ ಪ್ರಶಸ್ತವು. ॥ ೧೧೦ ॥

ಮೂ ॥ ಪ್ರರೋಚತೇ ನಿಧಾನಮುಪ್ಯಮುತ್ರ ಸರ್ವಸಾತ್ವತಾಂ ।
ಉದೀರ್ಯ ಚೈವವಿಶ್ವಕರ್ಮಕೋಽಸ್ಮ ರತ್ನುರೇಶವಾ(ವ)ರ್ಧಕಿಂ ॥ ೧೧೧ ॥

ಅ॥ ಈ ಪಟ್ಟಣದಲ್ಲಿ ಎಲ್ಲಾ ಯಾದವರನ್ನು ಸಂಸ್ಥಾಪಿಸುವುದೂ ಕೂಡ ಈಗ ನನಗೆ ರುಚಿಯಂಂಟಾಗುತ್ತದೆ. ಹೀಗೆ ಶ್ರೀಕೃಷ್ಣನಂ ಹೇಳಿ ದೇವತೆಗಳ ಶಿಲ್ಪಿಯಾದ ವಿಶ್ವಕರ್ಮನನ್ನು ಸ್ಮರಿಸಿದನಂ. ॥ ೧೧೧ ॥

ಮೂ ॥ ಸ ಭೌವನಃ ಸವಾಗತಃ ಕುಶಸ್ಥಲೀಂ ವಿನಿರ್ಮಮೇ ।
ನಿರಂಬುಕೇ ತು ಸಾಗರೇ ಜನಾರ್ದನಾಜ್ಞಯಾ ಕೃತೇ ॥ ೧೧೨ ॥

ಅ॥ ಭುವನಾಖ್ಯ ವರ್ಧಕಿಯಂ ವಂಗನಾದ ಆ ವಿಶ್ವಕರ್ಮನಂ ಬಂದವನಾಗಿ ಶ್ರೀಕೃಷ್ಣನ ಆಜ್ಞೆಯಿಂದ ಸಮುದ್ರವು ಹೋಗಲ್ಪಟ್ಟ ಜಲವುಳ್ಳದ್ದಾಗಿ ವಹಾಡಲ್ಪಡುತ್ತಿರಲಂ ದ್ವಾರಕಾಪಟ್ಟಣವನ್ನು ನಿರ್ಮಾಣಮಾಡಿದನಂ. ॥ ೧೧೨ ॥

ಮೂ ॥ ಮಹೋದಕಸ್ಯ ಮಧ್ಯತಶ್ಚಕಾರ ತಾಂ ಪುರೀಂ ಶುಭಾಂ ।
ದ್ವಿಷಟ್ಕಯೋಜನಾಯತಾಂ ಪಯೋಬ್ಧಿಮಧ್ಯಗೋಪಮಾಂ ॥ ೧೧೩ ॥

ಅ॥ ಜನಾರ್ದನನ ಆಜ್ಞೆಯಿಂದ ಪ್ರಕಾರರೂಪದಿಂದ ಇರತಕ್ಕ ಜಲಸಮೂಹದ ಮಧ್ಯ ಪ್ರದೇಶದಲ್ಲಿ ಹನ್ನೆರಡು ಯೋಜನಗಳಿಂದ ವಿಸ್ತೃತವಾದ ಕ್ಷೀರ ಸಮುದ್ರದ ಮಧ್ಯದಲ್ಲಿರತಕ್ಕಾದರಿಂದ ಸದೃಶವಾದ ಶ್ರೇಷ್ಠವಾದ ಪಟ್ಟಣವನ್ನು (ವಿಶ್ವಕರ್ಮನಿಂದ) ಮಾಡಿಸಿದರು. ॥ ೧೧೩ ॥

ಮೂ ॥ ಚಕಾರ ಲವಣೋದಕಂ ಜನಾರ್ದನೋಽಮೃತೋಪಮಂ ।
ಸಭಾಂ ಸುಧರ್ಮನಾಮ(ವಿ)ಕಾಂ ದದೌ ಸವಿಹಾರಕೋಽಸ್ಯ ಚ ॥ ೧೧೪ ॥

ಅ॥ ಶ್ರೀಕೃಷ್ಣನು ಲವಣಸಮುದ್ರಸಂಬಂಧಿಯಾದ ನೀರನ್ನು ಅಮೃತದಿಂದ ತುಲ್ಯವಾಗಿ ಮಾಡಿದನು. ವಾಯುದೇವರು ಸುಧರ್ಮಾ ಎಂದು ಹೆಸರುಳ್ಳ ಸಭೆಯನ್ನಾದರೂ ಶ್ರೀಕೃಷ್ಣನಿಗೊಸ್ಕರ ಕೊಟ್ಟರು. ॥೧೧೪॥

ಹಾಗಾದರೆ ಸುಧರ್ಮನಾಮಕ ಸಭೆಯು ಇಂದ್ರನದ್ದೆಂದು ಪ್ರಸಿದ್ಧಿಯಿದೆ. ಅದನ್ನು ವಾಯುದೇವರು ಹೇಗೆ ಕೊಟ್ಟರು ಎಂದರೆ–

ಮೂ ॥ ಶತಕ್ರತೋಃ ಸಭಾಂ ತು ತಾಂ ಪ್ರದಾಯ ಕೇಶವಾಯ ಸಃ ।
ನಿಧೀನ್ ಸಮುಸ್ಯ ಸರ್ವಶೋ ಯಯೌ ಪ್ರಣಮ್ಯ ತಂ ಪ್ರಭುಂ ॥ ೧೧೫ ॥

ಅ॥ ಆ ಸರ್ವೇಶರಾದ ವಾಯುದೇವರು ಆ ಸಭೆಯನ್ನು ದೇವೇಂದ್ರನಿಂದ ತಂದು ಶ್ರೀಕೃಷ್ಣನಿಗೋಸ್ಕರ ಕೊಟ್ಟು ಎಲ್ಲಾ ಒಂಭತ್ತು ನಿಧಿಗಳನ್ನೂ ಸಮರ್ಪಿಸಿ ಆ ಪ್ರಭುವಾದ ಶ್ರೀಕೃಷ್ಣನನ್ನು ನಮಸ್ಕರಿಸಿ ಹೋದರು. ॥ ೧೧೫ ॥

ಮೂ ॥ ಸಮುಸ್ತದೇವತಾಗಣಾಃ ಸ್ವಕೀಯಮುರ್ವಯನ್ ಹರೌ ।
ವಿಮುಚ್ಯ ಪಕ್ಷಿಪುಂಗವಂ ಸ ಯೋದ್ಧುಮೈಚ್ಛದಚ್ಯುತಃ ॥ ೧೧೬ ॥

ಅ॥ ಎಲ್ಲಾ ದೇವತೆಗಳ ಸಮೂಹಗಳೂ ತಮಗೆ ತಮಗೆ ಇರತಕ್ಕ ವಿಶೇಷ ವಸ್ತುವನ್ನು ಶ್ರೀಹರಿಯಲ್ಲಿ ಸಮರ್ಪಿಸಿದವು. ಆ ಶ್ರೀಹರಿಯು ಪಕ್ಷಿಶ್ರೇಷ್ಠನಾದ ಗರುಡನನ್ನು ಬಿಟ್ಟು ಯುದ್ಧ ಮಾಡಲಿಕ್ಕೆ ಇಚ್ಛಿಸಿದನು. ॥ ೧೧೬ ॥

ಮೂ ॥ ಸಮುಸ್ತಮಾಧುರಾನ್ ಪ್ರಭುಃ ಕುಶಸ್ಥಲೀಸ್ಥಿತಾನ್ ಕ್ಷಣಾತ್ ।
ವಿಹಾ(ಧಾ)ಯ ಬಾಹುಯೋಧಕಃ ಸ ಯಾವನಂ ಸಮುಭ್ಯಯಾತ್ ॥೧೧೭॥

ಅ॥ ಪ್ರಭುವಾದ ಶ್ರೀಕೃಷ್ಣನು ಎಲ್ಲಾ ಮಧುರಾ ಪಟ್ಟಣದಲ್ಲಿರತಕ್ಕವರನ್ನು ದ್ವಾರಕಾ ಪಟ್ಟಣದಲ್ಲಿರತಕ್ಕವರನ್ನಾಗಿ ಕ್ಷಣಮಾತ್ರದಿಂದ ಮಾಡಿ ಭುಜಗಳಿಂದಲೇ ಯುದ್ಧ ಮಾಡುವವನಾಗಿ ಕಾಲಯವನನನ್ನು ಹೊಂದಿದನು. ॥೧೧೭॥

ಮೂ ॥ ಅನಂತಶಕ್ತಿರಪ್ಯಜಃ ಸುನೀತಿದೃಷ್ಟಯೇ ನೃಣಾಂ ।
ವ್ಯವಾಸಯನ್ನಿಜಾನ್ ಜನಾನ್ ಸ ಲೀಲಯೈವ ಕೇವಲಂ ॥ ೧೧೮ ॥

ಅ॥ ಅಪರಿಮಿತವಾದ ಶಕ್ತಿಯುಳ್ಳವನಾದಾಗ್ಯೂ ಶ್ರೀಕೃಷ್ಣನು ಜನರಿಗೆ ಒಳ್ಳೇ ನೀತಿಯನ್ನು ತೋರಿಸುವುದಕ್ಕಾಗಿ ತನ್ನ ಜನರನ್ನು ಕೇವಲ ಕ್ರೀಡೆಯಿಂದಲೇ (ಭಯದಿಂದ ಅಲ್ಲ.) (ಸಮುದ್ರದ ಮಧ್ಯದಲ್ಲಿ) ವಾಸವಾಡಿಸಿದನು. ॥೧೧೮॥

ಹಾಗಾದರೆ ಅಶಕ್ತನಾದ ಪ್ರಯುಕ್ತವೇ ಬೇರೆ ಕಡೆ ವಾಸವಾಡಿಸಿದನು ಎಂದು ಏಕೆ ಆಗಲಾರದೆಂದರೆ—

ಮೂ ॥ ಅನಾದ್ಯನಂತಕಾಲಕಂ ಸಮಸ್ತ ಲೋಕಮಂಡಲಂ ।
ಯದೀಕ್ಷಯೈವ ರಕ್ಷ್ಯತೇ ಕಿಮಸ್ಯ ವೃಷ್ಣಿರಕ್ಷಣಂ ॥ ೧೧೯ ॥

ಅ॥ ಪ್ರಾಗಭಾವರಹಿತವೂ ಧ್ವಂಸರಹಿತವೂ ಆದ ಕಾಲಸಂಬಂಧವುಳ್ಳ, ಬಹುವಿಚಿತ್ರವಾದ ಎಲ್ಲಾ ಲೋಕಗಳ ಸಮೂಹವು ಯಾವ ಶ್ರೀಹರಿಯ ಇಚ್ಛೆಯಿಂದಲೇ ರಕ್ಷಿಸಿಕೊಳ್ಳಲ್ಪಡುತ್ತದೋ ಇಂತಹ ಶ್ರೀಕೃಷ್ಣನಿಗೆ ಯಾದವರ ರಕ್ಷಣವು ಏನು ಅಶಕ್ಯವೋ? (ಅಶಕ್ಯವಲ್ಲ.) ॥ ೧೧೯ ॥

ಹಾಗಾದರೆ ಶ್ರೀಕೃಷ್ಣನು ಬಾಹುಗಳಿಂದಲೇ ಯುದ್ಧವಾಡುತ್ತಾ ಯವನನ ಸಮೀಪಕ್ಕೆ ಏತಕ್ಕೆ ಹೋದನೆಂದರೆ—

ಮೂ ॥ ನಿರಾಯುಧಂ ಚ ಮಾಮಯಂ ವರಾಚ್ಛಿವಸ್ಯ ಸ ಕ್ಷ್ಣವುಃ ।
ಸಮಸ್ತಸೇನಯಾ ಯುತೋಽಪಿ ಯೋದ್ಧುಮಿತ್ಯದರ್ಶಯತ್ ॥೧೨೦ ॥

ಅ॥ ಈ ಕಾಲಯವನನು ಸರ್ವಸೈನ್ಯಗಳಿಂದ ಯುಕ್ತನಾದಾಗ್ಯೂ ರುದ್ರನ ವರದ್ದೆಸೆಯಿಂದಲೂ ಕೂಡಾ ನಿರಾಯುಧನಾದ ನನ್ನನ್ನು (ಯುದ್ಧವಾಡಲಿಕ್ಕೆ) ಸಮರ್ಥನಲ್ಲ, ಎಂದು ಭಾಷೆಯಿದ್ದುದಿಂದ ತೋರಿಸಿದನು. ॥೧೨೦॥

ಮೂ ॥ ಸ ಕೃಷ್ಣಪನ್ನಗಂ ಘಟೇ ನಿಧಾಯ ಕೇಶವೋಽರ್ಪಯತ್ ।
ನಿರಾಯುಧೋಽಪ್ಯಹಂ ಕ್ಷ್ಣವೋ ನಿಹಂತುಮಪ್ರಿಯಾನಿತಿ ॥ ೧೨೧ ॥

ಅ॥ ಕೇಶವನು ನಾನು ಆಯುಧರಹಿತನಾದಾಗ್ಯೂ ಶತ್ರುಗಳನ್ನು ಕೊಲ್ಲಲಿಕ್ಕೆ ಸಮರ್ಥನು ಎಂದು ದೃಷ್ಟಾಂತವನ್ನು ತೋರಿಸುವುದಕ್ಕಾಗಿ ಕೃಷ್ಣಸರ್ಪವನ್ನು ಘಟದಲ್ಲಿ ಇಟ್ಟು(ಕಾಲಯವನನಿಗೋಸ್ಕರ) ಕಳುಹಿಸಿಕೊಟ್ಟನು. ॥ ೧೨೧ ॥

ಮೂ ॥ ಘಟಂ ಪಿಪೀಲಿಕಾಗಣೈಃ ಪ್ರಪೂರ್ಯ ಯಾವನೋಽಸ್ಯ ಚ ।
ಬಹುತ್ವತೋ ವಿಜೇಷ್ಯ ಇತ್ಯಹಿಂ ಮೃತಂ ವ್ಯದರ್ಶಯತ್ ॥ ೧೨೨ ॥

ಅ॥ ಕಾಲಯವನನು ಘಟವನ್ನು ಇರುವೆಗಳ ಸಮೂಹಗಳಿಂದ ತುಂಬಿಸಿ ಬಾಹುಲ್ಯವಿದ್ದ ಪ್ರಯುಕ್ತ ಗೆಲ್ಲುವೆನು ಎನ್ನುವ ಅಭಿಪ್ರಾಯದಿಂದ ಮರಣಹೊಂದಿದ ಸರ್ಪನನ್ನು ಈ ಕೃಷ್ಣನಿಗೆ ತೋರಿಸಿದನು. ॥ ೧೨೨ ॥

ಮೂ ॥ ಕಿಮತ್ರ ಸತ್ಯಮಿತ್ಯಹಂ ಪ್ರದರ್ಶಯಿಷ್ಯ ಇತ್ಯಜಃ ।
ಉದೀರ್ಯ ದೂತಮುಚ್ಯಯಾತ್ಸ ಯಾವನಂ ಪ್ರಬಾಧಿತುಂ ॥ ೧೨೩ ॥

ಅ॥ ಈ ವಿಷಯದಲ್ಲಿ ಯಾವುದಂ ಸತ್ಯವು, (ಅಂದರೆ ಪ್ರಬಲನಾದಾಗ್ಯೂ ಒಬ್ಬನನ್ನು ಬಹಂ ಜನರಿಗೆ ಸಂಹರಿಸಲಿಕ್ಕೆ ಶಕ್ಯವಾಗುತ್ತದೆ ಎಂದಂ ನಿನ್ನ ಕಾಲಯವನನಂ ವಶಾಡಿದ ಬಿಟೀಲಿಕಾ ಪುರಣಾಖ್ಯ ಕರ್ಮದಿಂದ ತಿಳಿಯುತ್ತದೆ. ಬಲಿಷ್ಠನಾದವನೊಬ್ಬನೇ ಬಹಂ ಮಂದಿಯನ್ನು ಸಂಹರಿಸಲಿಕ್ಕೆ ಶಕ್ಯನಾಗುತ್ತಾನೆಂದಂ ನಾನಂ ಮಾಡಿದ ಕರ್ಮದಿಂದ ತಿಳಿಯುತ್ತದೆ, ಇವುಗಳಲ್ಲಿ ಯಾವುದಂ ಸತ್ಯವೆಂದರೆ ನಾನಂ ಕರ್ಮದಿಂದಲೇ ತೋರಿಸುತ್ತೇನೆಂದಂ) ಶ್ರೀಕೃಷ್ಣನಂ ದೂತನನ್ನು ಕುರಿತಂ ಹೇಳಿ ಕಾಲಯವನನನ್ನು ಸಂಹರಿಸಲಿಕ್ಕೆ ಹೊರಟುಹೋದನಂ.

ವಿಶೇಷಾಂಶ—ಬಲಿಷ್ಠನಾದ ನನ್ನೊಬ್ಬನಿಂದಲೇ ಕಾಲಯವನನೂ ಅವನ ಬಹುವಿಧವಾದ ಸೇನೆಯೂ ಸಂಹೃತವಾಗೋಣ ನಾನಂ ಮಾಡಿದ್ದೇ ಸತ್ಯವಾಗುವುದಂ; ಬಹಂ ಸೇನೆಯುಳ್ಳ ನಿನ್ನ ಕಾಲಯವನನಂ ನನಗೆ ಪರಾಜಯವನ್ನು ವಶಾಡಿದ್ದಾದರೆ ಅವನು ಮಾಡಿದ್ದು ಸತ್ಯವಾಗುತ್ತಿತ್ತು. ಅದಾದರೂ ಸರ್ವಥಾ ಆಗುವುದಿಲ್ಲ. ॥ ೧೨೩ ॥

ಮೂ ॥ ಸ ಬಾಹುನ್ಯೈವ ಕೇಶವೋ ವಿಜಿತ್ಯ ಯಾವನಂ ಪ್ರಭುಃ ।
ನಿಹತ್ಯ ಸರ್ವಸೈನಿಕಾನ್ ಸ್ವಮುಸ್ಯಯಾಪಯತ್ಪುರೀಂ ॥ ೧೨೪ ॥

ಅ॥ ಪ್ರಭುವಾದ ಆ ಕೇಶವನಂ ಭುಜದಿಂದಲೇ ಕಾಲಯವನನನ್ನು ಗೆದ್ದು ಸರ್ವಸೈನ್ಯಗಳನ್ನೂ ಸಂಹರಿಸಿ ಈ ಕಾಲಯವನನ ಗಜಾಶ್ವಾದಿ ದ್ರವ್ಯವನ್ನು (ತನ್ನ) ದ್ವಾರಕಾಪಟ್ಟಣವನ್ನು ಕುರಿತಂ ಕಳುಹಿಸಿಕೊಟ್ಟನಂ. ॥ ೧೨೪ ॥

ಮೂ ॥ ಮ(ಸ)ಹಾಸ್ತ್ರಶಸ್ತ್ರಸಂಚಯಾನ್ ಸೃಜಂತಮಾಶು ಯಾವನಂ ।
ನ್ಯಪಾತಯದ್ರಥೋತ್ತಮಾತ್ತಲೇನ ಕೇಶವೋಽರಿಹಾ ॥ ೧೨೫ ॥

ಅ॥ ಶತ್ರು ಸಂಹಾರಕನಾದ ಶ್ರೀಕೃಷ್ಣನಂ ಮಹತ್ತಾದ ಅಸ್ತ್ರಗಳೂ ಶಸ್ತ್ರಗಳೂ ಇವುಗಳ ಸಮೂಹಗಳನ್ನು ಸೃಷ್ಟಿಸತಕ್ಕ ಕಾಲಯವನನನ್ನು ಹಸ್ತತಲದಿಂದ ಶೀಘ್ರದಲ್ಲಿ ಉತ್ತಮ ರಥದ್ವೆಷಯಿಂದ ಕೆಡಹಾಕಿದನು. ॥ ೧೨೫ ॥

ಮೂ ॥ ವಿವಾಹನಂ ನಿರಾಯುಧಂ ವಿಧಾಯ ಬಾಹುನಾ ಕ್ಷಣಾತ್ ।
ವಿಮೂರ್ಛಿತಂ ಚಾಹನತ್ ಸುರಾರ್ಥಿತಂ ಸ್ಮ ರನ್ ಹರಿಃ ॥ ೧೨೬ ॥

ಅ॥ ದೇವತೆಗಳಿಂದ ಪ್ರಾರ್ಥಿಸಿಕೊಳ್ಳಲ್ಪಟ್ಟ ವರವನ್ನು ಸ್ಮರಿಸುತ್ತಾ, ಶ್ರೀಹರಿಯಂ ಭುಜದಿಂದ ಒಂದು ಕ್ಷಣದಿಂದ ಕಾಲಯವನನನ್ನು ವಾಹನರಹಿತನನ್ನಾಗಿಯೂ ಆಯುಧರಹಿತನನ್ನಾಗಿಯೂ ಮಾಡಿ ವಿಶೇಷವಾಗಿ ವಮೂರ್ಛಿತನಾದವನನ್ನು ಸಂಹರಿಸಲಿಲ್ಲ. ॥ ೧೨೬ ॥

ಏನಂ ಪ್ರಾರ್ಥಿಸಿರುವರು ಎಂದರೆ—

ಮೂ ॥ ಪುರಾ ಹಿ ಯೌವನಾಶ್ವಜೇ ವರಪ್ರದಾಃ ಸುರೇಶ್ವರಾಃ ।
ಯಯಾಚಿರೇ ಜನಾರ್ದನಂ ವರಂ ವರಪ್ರದೇಶ್ವರಂ ॥ ೧೨೭ ॥

ಅ॥ ದೇವಾಸುರಯುದ್ಧಸಮಾಪ್ತಿಯಾದಾಗ ದೇವಶ್ರೇಷ್ಠರು ಯುವನಾಶ್ವನ ವಂಗನಾದ ವಿಚಕ್ರುಂದನ ವಿಷಯದಲ್ಲಿ ವರವನ್ನು ಕೊಟ್ಟವರಾಗಿ ವರವನ್ನು ಕೊಡುವವರಿಗೆ ನಿಯಾಮಕನಾದ ಶ್ರೀಕೃಷ್ಣನನ್ನು ವರವನ್ನು ಬೇಡಿದರು, ॥ ೧೨೭ ॥

ಮೂ ॥ ಅನರ್ಥಕೋ ವರೋಽಮುನಾ ವೃತೋಽಪಿ ಸಾರ್ಥಕೋ ಭವೇತ್ ।
ಅರಿಂ ಭವಿಷ್ಯಯಾವನಂ ದಹತ್ವಯಂ ತವೇಶ್ವರ ॥ ೧೨೪ ॥

ಅ॥ ಈ ವಂಚುಕಂದನಿಂದ (ನಮ್ಮಿಂದ) ಪುರುಷಾರ್ಥ ರಹಿತವಾದ ವರವು ಅಂಗೀಕರಿಸಲ್ಪಟ್ಟರೂ ಧರ್ಮಾದಿ ಪುರುಷಾರ್ಥ ರಹಿತವಾದುದು ಆಗುವುದು. (ಸಾರ್ಥಕವು ಹೇಗೆ ಆಗುವುದೆಂದರೆ) ಎಲೋ ಶ್ರೀಹರಿಯೇ ಈ ವಂಚುಕಂದನು ನಿನಗೆ ಶತ್ರುವಾದ ವುಂದೆ ಹುಟ್ಟುವ ಕಾಲಯವನನನ್ನು ಸುಡಲಿ, ಎಂದು ವರವನ್ನು ಬೇಡಿದರು. ॥ ೧೨೪ ॥

ಮೂ ॥ ತಥಾಸ್ತ್ವಿತಿ ಪ್ರಭಾಷಿತಂ ಸ್ವವಾಕ್ಯಮೇವ ಕೇಶವಃ ।
ಋತಂ ವಿಧಾತುಮುಭ್ಯಯಾತ್ಸ ಯವನಾಶ್ವಜಾಂತಿಕಂ ॥ ೧೨೯ ॥

ಅ ॥ ಶ್ರೀಕೃಷ್ಣನು ಹಾಗೆಯೇ ಆಗಲಿ ಎಂದು ಹೇಳಲ್ಪಟ್ಟ ತನ್ನ ವರಾತನ್ನು ಸತ್ಯವನ್ನಾಗಿಯೇ ವಾಡಲುವುದಕ್ಕಾಗಿ ವಂಚುಕಂದನ ಸವಿಾಪವನ್ನು ಕುರಿತು ಹೋದನು. ॥ ೧೨೯ ॥

ಮೂ ॥ ಸಸಂಜ್ಞಕೋಽಥ ಯಾವನೋ ಧರಾತಲಾತ್ ಸಮುತ್ಥಿತಃ ।
ನಿಪಾತ್ಯ ಯಾಂತವಿೂಶ್ವರಂ ಸ ಪೃಷ್ಠತೋಽನ್ವಯಾತ್ ಕ್ರುಧಾ ॥ ೧೩೦ ॥

ಅ॥ ಯುದ್ಧಪ್ರವೇಶದಿಂದ ಹೋದವುೀಲೆ ಸಂಜ್ಞೆಯನ್ನು ಹೊಂದಿದ ಕಾಲಯವನನು ಭೂಪ್ರದೇಶದಿಂದ ಎದ್ದವನಾಗಿ (ತನ್ನನ್ನೇ) ಕಿಡಹಾಕಿ ಹೋದ ಈಶ್ವರನನ್ನು ಅನುಸರಿಸಿ ಹಿಂದಿನ ಕಡೆಯಿಂದ ಹೋದನು. ॥ ೧೩೦ ॥

ಮೂ ॥ ಹರಿರ್ಗುಹಾಂ ನೃಪಸ್ಯ ತು ಪ್ರವಿಶ್ಯ ಸಂವ್ಯವಸ್ಥಿತಃ ।
~~ಸ ಯಾವನಃ ಪದಾಹನನ್ನೃಪಂ ಸ ತಂ ದದರ್ಶ ಹ ॥ ೧೩೧ ॥~~

ಅ॥ ಶ್ರೀಕೃಷ್ಣನು ವಂಚುಕಂದನ ಗುಹೆಯನ್ನು ಪ್ರವೇಶವಾಡಿ ಲೀನನಾಗಿ ಇರುತ್ತಿದ್ದನು. ಆ ಕಾಲಯವನನು ವಂಚುಕಂದನನ್ನು ಕಾಲಿನಿಂದ ವುಟ್ಟಿದನು. ಆ ವಂಚುಕಂದನು ಆ ಕಾಲಯವನನ್ನು ಕಂಡನು. ॥ ೧೩೧ ॥

ಮೂ ॥ ಸ ತಸ್ಯ ದೃಷ್ಟಿಮಾತ್ರತೋ ಬಭೂವ ಭಸ್ಮಸಾತ್ ಕ್ಷಣಾತ್ ।
ಸ ಏವ ವಿಷ್ಣುತವ್ಯಯೋ ದದಾಹ ತಂ ಹಿ ವಹ್ನಿವತ್ ॥ ೧೩೨ ॥

ಅ॥ ಆ ಕಾಲಯವನನು ವಂಚುಕಂದನ ದರ್ಶನವಾತ್ರದಿಂದಲೇ ಕ್ಷಣದಿಂದಲೇ ಭಸ್ಮವಾದನು, ಆ ದೇವತೆಗಳಿಗೆ ವರವನ್ನು ಕೊಟ್ಟರತಕ್ಕ ನಾಶರಹಿತನಾದ ವಿಷ್ಣುವು ಆ ಕಾಲಯವನನ್ನು ಬೆಂಕಿಯಂತೆ ಸುಟ್ಟನು. ॥ ೧೩೨ ॥

ದರ್ಶನ ವಾತ್ರದಿಂದ ಭಸ್ಮವಾದನು ಎನ್ನುವುದಕ್ಕೆ ಕಾರಣವನ್ನು ಹೇಳುತ್ತಾರೆ—

ಮೂ ॥ ವರಾಚ್ಛಿವಸ್ಯ ದೈವತೈರವಧ್ಯದಾನವಾನ್ ಪುರಾ ।
ಹರೇರ್ವರಾನ್ನಿಹತ್ಯ ಸ ಪ್ರಜೇದ ಆಶ್ವಿಮಂ ವರಂ ॥ ೧೩೩ ॥

ಅ॥ ಮೊದಲು ಆ ವಂಚಕನಂದನು ರುದ್ರನ ವರದಿಂದ ದೇವತೆಗಳಿಂದ ಸಂಹರಿಸಿಕೊಳ್ಳ ಲ್ಪಡಲಿಕ್ಕೆ ಅಶಕ್ಯರಾದ ದಾನವರನ್ನೂ ಶ್ರೀಹರಿಯುದೆಸೆಯಿಂದ ತಾನು ಹೊಂದಿದ ವರದ್ದೆಸೆಯಿಂದ ಶೀಘ್ರದಲ್ಲಿ ಸಂಹರಿಸಿ ಮೇಲೆ ಹೇಳಕಕ್ಕ ವರವನ್ನೂ ದೇವತೆಗಳಿಂದ ಹೊಂದಿದನು॥ ೧೩೩ ॥

ಮೂ ॥ ಸುದೀರ್ಘಸುಪ್ತಿಮಾತ್ಮನಃ ಪ್ರಸುಪ್ತಿಭಂಗಕೃತ್ಫಲಂ ।
ಸ್ವದೃಷ್ಟಿಮಾತ್ರತಸ್ತತೋ ಹತಃ ಸ ಯಾವನಸ್ತದಾ ॥ ೧೩೪ ॥

ಅ॥ ತನಗೆ ಅತಿಗಾಢವಾದ ಬಹುಕಾಲವ್ಯಾಪ್ತಿಯುಳ್ಳ ನಿದ್ರೆಯನ್ನೂ ಹಾಗೆಯೇ ತನ್ನ ದರ್ಶನ ಮಾತ್ರದಿಂದ ಗಾಢ ನಿದ್ರೆಗೆ ಭಂಗವನ್ನು ಮಾಡಿದವನ ನಾಶವನ್ನೂ ಇಂತಹ ಎರಡು ವರ ಗಳನ್ನು ಯಾವ ಕಾರಣದಿಂದ ಹೊಂದಿದನೋ ಆದಕಾರಣ ಆಗಲೇ ಆ ಕಾಲಯವನನು ಸಂಹೃ ತನಾದನು, ॥ ೧೩೪ ॥

ಮೂ ॥ ಅತಶ್ಚ ಪುಣ್ಯಮಾಪ್ತವಾನ್ ಸುರಪ್ರಸಾದತೋಽಕ್ಷಯಂ ।
ಸ ಯೌವನಾಶ್ವಜೋ ನೃಪೋ ನ ದೇವತೋಷಣಂ ವೃಥಾ ॥ ೧೩೫ ॥

ಅ॥ ಯುವನಾಶ್ವನ ಮಂಗನಾದ ಮಾಂಧಾತೃವಿನಿಂದ ಹುಟ್ಟಿದ ಆ ವಂಚಕನಂದರಾಜನು ಕಾಲಯವನನನ್ನು ಸಂಹರಿಸಿದುದರಿಂದಲೂ ದೇವತೆಗಳ ಪ್ರಸಾದದಿಂದಲೂ ಅವಿನಾಶಿ ಪುಣ್ಯ ದಿಂದುಂಟಾದ ಮುಂಕ್ತಿಯನ್ನು ಹೊಂದಿದನು. ದೇವತೆಗಳನ್ನೂ ತೃಪ್ತಿಪಡಿಸುವುದು ವ್ಯರ್ಥವಲ್ಲ,

ವಿಶೇಷಾಂಶ—ದೇವತೆಗಳಲ್ಲಿ ತಾರತಮ್ಯವನ್ನು ತಿಳಿದುಕೊಂಡು ಯಾವುದು ತೃಪ್ತಿಪಡಿಸು ವಿಕೆಯೋ, ಅದೇವೇ ದೇವತೋಷಣವು. ಏಕೆಂದರೆ ಹಿರಣ್ಯಕಶಿಪು ರಾವಣಾದಿಗಳು ಬ್ರಹ್ಮ ಶಿವಾದಿ ದೇವತೆಗಳನ್ನು ತೃಪ್ತಿಪಡಿಸಿದ್ದು ವ್ಯರ್ಥವಾಗಿದೆಯಂಪ್ಪೆ. ॥ ೧೩೫ ॥

ಮೂ ॥ ತತೋ ಹರಿಂ ನಿರೀಕ್ಷ್ಯಾಸೌ ಸ ಸ್ತುತಿಂ ವಿಧಾಯ ಚೋತ್ತಮಾಂ ।
ಹರೇರನುಜ್ಞಯಾ ತಪಶ್ಚಕಾರ ಮುಕ್ತಿಮಾಪ ಚ ॥ ೧೩೬ ॥

ಅ॥ ಆವೇಲೆ ಆ ವಂಚಕನಂದನು ಶ್ರೀಹರಿಯನ್ನು ನೋಡಿ ಉತ್ತಮವಾದ ಸ್ತೋತ್ರ ವನ್ನೂ ಮಾಡಿ ಶ್ರೀಹರಿಯ ಅಪ್ಪಣೆಯಿಂದ ತಪಸ್ಸನ್ನು ಮಾಡಿದನು. ಮುಂಕ್ತಿಯನ್ನೂ ಹೊಂದಿ ದನು. ॥ ೧೩೬ ॥

ಮೂ ॥ ತತೋ ಗುಹಾಮುಖಾದ್ಧರಿರ್ನಿಃಸೃತೋ ಜರಾಸುತಂ ।
ಸಮಸ್ತಭೂಪಸಂಯು(ವೃ)ತಂ ಜಿಗಾಯ ಬಾಹುನೇಶ್ವರಃ ॥ ೧೩೭ ॥

ಅ॥ ಆವೇಲೆ ಸರ್ವೇಶ್ವರನಾದ ಶ್ರೀಹರಿಯು ಗುಹಾಮುಖದಿಂದ ಹೊರಟವನಾಗಿ ಎಲ್ಲಾ ರಾಜರಿಂದ ಕೂಡಿದ ಜರಾಸಂಧನನ್ನು ಭುಜದಿಂದಲೇ ಗೆದ್ದನು. ॥ ೧೩೭ ॥

ಮೂ ॥ ತಲೇನ ಮುಷ್ಟಿಭಿಸ್ತಥಾ ಮಹೀರುಹೈಶ್ಚ ಚೂರ್ಣಿತಾಃ ।
ನಿಪೇತುರಸ್ಯ ಸೈನಿಕಾಃ ಸ್ವಯಂ ಚ ಮೂರ್ಛಿತೋಽಪತತ್ ॥ ೧೩೮ ॥

ಅ॥ ಶ್ರೀಕೃಷ್ಣನ ಹಸ್ತತಲದಿಂದಲೂ ಪಾದತಲದಿಂದಲೂ ಮುಷ್ಟಿಗಳಿಂದಲೂ ಹಾಗೆಯೇ (ಶ್ರೀಕೃಷ್ಣನ ಕರದಿಂದ ಪ್ರೇರಿತಗಳಾದ) ವೃಕ್ಷಗಳಿಂದಲೂ ಚೂರ್ಣೀಕೃತರಾದ ಜರಾಸಂಧನ ಸೈನಿಕರು ಬಿದ್ದರು. ಜರಾಸಂಧನೂ ಕೂಡ ಮೂರ್ಛಿತನಾಗಿ ಬಿದ್ದನು. ॥ ೧೩೮ ॥

ಮೂ ॥ ಸಸಾಲ್ವಪೌಂಡ್ರಚೇದಿಪಾನ್ನಿಪಾತ್ಯ ಸರ್ವಭೂಭುಜಃ ।
ಸ ಪುಪ್ಲುವೇ ಜನಾರ್ದನಃ ಕ್ಷಣೇನ ತಾಂ ಕುಶಸ್ಥಲೀಂ ॥ ೧೩೯ ॥

ಅ॥ ಆ ಶ್ರೀಕೃಷ್ಣನು ಸಾಲ್ವ ಪೌಂಡ್ರ ಚೈದ್ಯರಿಂದ ಕೂಡಿದ ಎಲ್ಲಾ ರಾಜರನ್ನೂ ಕೆಡಹಾಕಿ ಕ್ಷಣಮಾತ್ರದಿಂದ ತನ್ನಿಂದ ನಿರ್ಮಿಸಿಕೊಳ್ಳಲ್ಪಟ್ಟ ದ್ವಾರಕಾಪಟ್ಟಣವನ್ನು ಕುರಿತು ಹಾರಿದನು. ॥ ೧೩೯ ॥

ಮೂ ॥ ಸಸಂಜ್ಞಕಾಃ ಸಮುತ್ಥಿತಾಸ್ತತೋ ನೃಪಾಃ ಪುನರ್ಯಯುಃ ।
ಜಿಗೀಷವೋಽಥ ರುಕ್ಮಿಣೀಂ ವಿಧಾಯ ಚೇದಿಪೇ ಹರಿಂ ॥ ೧೪೦ ॥

ಅ॥ ಶ್ರೀಕೃಷ್ಣನು ಹೋದಮೇಲೆ ಸಂಜ್ಞೆಯಿಂದ ಕೂಡಿರತಕ್ಕ ಯಾವದ್ಧಸ್ಥಾನದಿಂದ ಹೊರಟ ಜರಾಸಂಧ ಮೊದಲಾದವರು ಶಿಶುಪಾಲನಿಗೋಸ್ಕರ ರುಗ್ಮಿಣಿಯನ್ನು ಮನಸ್ಸಿನಲ್ಲಿ ಮಾಡಿಕೊಂಡು ಆಮೇಲೆ ಶ್ರೀಕೃಷ್ಣನನ್ನು (ಅಂದರೆ ಶಿಶುಪಾಲನಿಗೋಸ್ಕರ ರುಗ್ಮಿಣಿಯನ್ನು ಕೊಡೋಣದರಿಂದುಂಟಾದ ಮಾನಭಂಗದಿಂದ) ಗೆಲ್ಲಲಿಚ್ಛಿಸಿದವರಾಗಿ ಪುನಃ (ಕುಂಡಿನಪುರಕ್ಕೆ) ಹೋದರು. ॥ ೧೪೦ ॥

ಮೂ ॥ ಸಮಸ್ತರಾಜಮಂಡಲೇ ವಿನಿಶ್ಚಯಾದುಪಾಗತೇ ।
ಸಭೀಷ್ಮಕೇ ಚ ರುಗ್ಮಿಣೀಂ ಪ್ರದಾತುಮುದ್ಯತೇ ಮುದಾ ॥ ೧೪೧ ॥
ಸಮಸ್ತಲೋಕಯೋಷಿತಾಂ ವರಾ ವಿದರ್ಭನಂದನಾ ।
ದ್ವಿಜೋತ್ತಮಂ ಹರೇಃ ಪದೋಃ ಸಕಾಶಮಾಶ್ವಯಾಪ(ತ)ಯತ್
॥ ೧೪೨ ॥

ಅ॥ ಎಲ್ಲಾ ರಾಜರ ಸಮೂಹವೂ (ಶಿಶುಪಾಲನಿಗೋಸ್ಕರ ರುಗ್ಮಿಣಿಯನ್ನು ಕೊಡಿಸುತ್ತೇವೆಂದು) ನಿಶ್ಚಯದಿಂದ ಬರುತ್ತಿರಲು ಭೀಷ್ಮಕರಾಜನಿಂದ ಸಹಿತರಾದ ರಾಜರ ಸಮೂಹವೂ ಸಂತೋಷದಿಂದ ರುಗ್ಮಿಣಿಯನ್ನು ಕೊಡಲಿಕ್ಕೆ ಸನ್ನದ್ಧವಾಗುತ್ತಿರಲು, ಹದಿನಾಲ್ಕು ಲೋಕಗಳಲ್ಲಿರತಕ್ಕ ಸ್ತ್ರೀಯರಲ್ಲಿ ಶ್ರೇಷ್ಠಳಾದ ವಿದರ್ಭರಾಜನ ಮಗಳಾದ ರುಗ್ಮಿಣಿಯು ನಿಶ್ಚಯಿಸುವ ಸಮಯದಲ್ಲಿ ಪುರೋಹಿತ ಪುತ್ರನಾದ ಬ್ರಾಹ್ಮಣನನ್ನು ಶ್ರೀಹರಿಯ ಚರಣಾರವಿಂದಗಳ ಸವಿಾಪಕ್ಕೆ ಶೀಘ್ರದಲ್ಲಿ ಕಳುಹಿಸಿಕೊಟ್ಟಳು. ॥ ೧೪೧ ॥ ೧೪೨ ॥

ಮೂ ॥ ನಿಶಮ್ಯ ತದ್ವಚೋ ಹರಿಃ ಕ್ಷಣಾನ್ವಿ(ದ್ವಿ)ದರ್ಭಕಾನಗಾತ್ ।
ತಮುನ್ನಯಾದ್ಧಲಾಯುಧಃ ಸಮುಸ್ತಯಾದವೈಃ ಸಹ ॥ ೧೪೩ ॥

ಅ॥ ಶ್ರೀಕೃಷ್ಣನು ಬ್ರಾಹ್ಮಣನ ವಚನವನ್ನು ಕೇಳಿ ಕ್ಷಣಮಾತ್ರದಿಂದ ವಿದರ್ಭದೇಶಗಳನ್ನು ಕುರಿತು ಹೋದನು. ಎಲ್ಲಾ ಯಾದವರಿಂದ ಕೂಡಿಕೊಂಡು ಬಲರಾಮನು ಶ್ರೀಕೃಷ್ಣನನ್ನು ಅನುಸರಿಸಿ ಹೋದನು. ॥ ೧೪೩ ॥

ಮೂ ॥ ಸಮಸ್ತರಾಜಮಂಡಲಂ ಪ್ರಯಾಂತಮೀಕ್ಷ್ಯ ಕೇಶವಂ ।
ಸುಯತ್ತಮಾತ್ತಕಾರ್ಮುಕಂ ಬಭೂವ ಕನ್ಯಕಾವನೇ ॥ ೧೪೪ ॥

ಅ॥ ಎಲ್ಲಾ ರಾಜರ ಸಮೂಹವೂ ಹೊರಟುಹೋಗಿ ಶ್ರೀಕೃಷ್ಣನನ್ನು ನೋಡಿ ಕನ್ನಿಕೆಯನ್ನು ರಕ್ಷಿಸುವ ವಿಷಯದಲ್ಲಿ ಸ್ವೀಕರಿಸಲ್ಪಟ್ಟ ಧನುಸ್ಸುಳ್ಳವನಾಗಿ ಅತ್ಯಂತ ಪ್ರಯತ್ನವುಳ್ಳವನಾಗಿ ಆಯಿತು. ॥ ೧೪೪ ॥

ಮೂ ॥ ಪುರಾ ಪ್ರದಾನತಃ ಸುರೇಕ್ಷಣಾ(ಣ)ಚ್ಛಲಾದ್ಬಹಿರ್ಗತಾಂ ।
ರಥೇ ನ್ಯವೇಶಯದ್ಧರಿಃ ಪ್ರಪಶ್ಯತಾಂ ಚ ಭೂಭೃತಾಂ ॥ ೧೪೫ ॥

ಅ॥ ಶ್ರೀಕೃಷ್ಣನು ಕನ್ಯಾಪ್ರದಾನದ್ವೇಷದಿಂದ ಮೊದಲೇ ಅಂಬಿಕೆಯನ್ನು ನೋಡೋಣದರ ವ್ಯಾಜದಿಂದ ದೇವಾಲಯಕ್ಕೆ ಹೋಗಲಿಕ್ಕೆ ಹೊರಗೆ ಬಂದಿರತಕ್ಕ ರುಗ್ಮಿಣಿಯನ್ನು ಎಲ್ಲಾ ರಾಜರೂ ನೋಡುತ್ತಿರುವಾಗಲೇ ತನ್ನ ರಥದಲ್ಲಿ ಕುಳ್ಳಿರಿಸಿಕೊಂಡನು. ॥ ೧೪೫ ॥

ಮೂ ॥ ಜರಾಸುತಾದಯೋ ರುಷಾ ತಮಭ್ಯಯುಃ ಶರೋತ್ತಮೈಃ ।
ವಿಧಾಯ ತಾನ್ನಿರಾಯುಧಾನ್ ಜಗಾಮ ಕೇಶವಃ ಶನೈಃ ॥ ೧೪೬ ॥

ಅ॥ ಜರಾಸಂಧನೇ ಮೊದಲಾದವರು ಕ್ರೋಧದಿಂದ ಬಾಣಶ್ರೇಷ್ಠಗಳಿಂದ ಶ್ರೀಕೃಷ್ಣನನ್ನು ಹೊಂದಿದರು. ಶ್ರೀಕೃಷ್ಣನು ಶೀಘ್ರದಲ್ಲಿ ಜರಾಸಂಧಾದಿಗಳನ್ನು ಆಯುಧ ರಹಿತರನ್ನಾಗಿ ಮಾಡಿ ಹೋದನು. ॥ ೧೪೬ ॥

ಮೂ ॥ ಪುನರ್ಗೃಹೀತಕಾರ್ಮುಕಾನ್ ಹರಿಂ ಪ್ರಯಾತುಮುದ್ಯತಾನ್ ।
ನ್ಯವಾರಯದ್ಬಲಾಯುಧೋ ಬಲಾದ್ಬಲೋರ್ಜಿತಾಗ್ರಣೀಃ ॥ ೧೪೭ ॥

ಅ॥ ಬಲದಿಂದ ಶ್ರೇಷ್ಠರಾದವರಿಗೆ ಶ್ರೇಷ್ಠನಾದ ಬಲರಾಮನು ಪುನಃ ಸ್ವೀಕರಿಸಲ್ಪಟ್ಟ ಧನುಸ್ಸುಳ್ಳ ಶ್ರೀಕೃಷ್ಣನನ್ನು ಹೊಂದಲಿಕ್ಕೆ ಸನ್ನದ್ಧರಾದವರನ್ನು ಬಲಾತ್ಕಾರದಿಂದ ತಡೆದನು. ॥ ೧೪೭ ॥

ಮೂ ॥ ತದಾ ಸಿತಃ ಶಿರೋರುಹೋ ಹರೇರ್ಹಲಾಯುಧೇ (ಧ)ಸ್ಥಿತಃ ।
ಪ್ರಕಾಶವಾದಿ(ವಿ)ಶದ್ಬಲಂ ವಿಜೇತುಮುತ್ರ ಮಾಗಧಂ ॥ ೧೪೮ ॥

ಅ॥ ಆಗ ಬಲರಾಮನಲ್ಲಿರತಕ್ಕ ಶ್ರೀಹರಿಯ ಶುಕ್ಲಕೇಶವು ಈ ಯುದ್ಧದಲ್ಲಿ ಜರಾಸಂಧನನ್ನು ಗೆಲ್ಲುವುದಕ್ಕಾಗಿ ಪ್ರಕಾಶವು ಹೇಗೆ ಆದೀತೋ ಹಾಗೆ ಬಲರಾಮನನ್ನು ವಿಶೇಷಾಕಾರವಾಗಿ ಸನ್ನಿಧಾನಯುಕ್ತನನ್ನಾಗಿ ಮಾಡಿತು. ॥ ೧೪೮ ॥

ಮೂ ॥ ಸ ತಸ್ಯ ಮಾಗಧೋ ರಣೇ ಗದಾಪ್ರಹಾರ(ನಿಪಾತ)ಚೂರ್ಣಿತಃ ।
ಪಪಾತ ಭೂತಲೇ ಬಲೋ ವಿಜಿತ್ಯ ತಂ ಯಯೌ ಪುರೀಂ ॥ ೧೪೯ ॥

ಅ॥ ಆ ಜರಾಸಂಧನು ಆ ಬಲರಾಮನ ಗದೆಯ ಪ್ರಹಾರದಿಂದ ಚೂರ್ಣೀಕೃತನಾಗಿ ಭೂತಲದಲ್ಲಿ ಬಿದ್ದನು. ಬಲರಾಮನು ಆ ಜರಾಸಂಧನನ್ನು ಗೆದ್ದು ತನ್ನ ಪಟ್ಟಣಕ್ಕೆ ಹೋದನು. ॥ ೧೪೯ ॥

ಮೂ ॥ ವರೋರುವೇಷಸಂಯು(ವ್ಯ)ತೋಽಥ ಚೇದಿರಾಟ್ಸಮಭ್ಯಯಾತ್
ತವಾಸಸಾದ(ರ) ಸಾತ್ಯಕಿರ್ನದನ್ ಮೃಗಾಧಿಪೋ ಯಥಾ ॥ ೧೫೦ ॥

ಅ॥ ಆಮೇಲೆ ವರನ ಉತ್ಕೃಷ್ಟವಾದ ವೇಷದಿಂದ ಕೂಡಿದ ಶಿಶುಪಾಲನು ಬಂದನು; ಸಾತ್ಯಕಿಯು ಮೃಗಗಳಿಗೆ ಅಧಿಪತಿಯಾದ ಸಿಂಹದಂತೆ ಧ್ವನಿಗೈಯುತ್ತಾ ಶಿಶುಪಾಲನನ್ನು ಹೊಂದಿದನು. ॥ ೧೫೦ ॥

ಮೂ ॥ ಚಿರಂ ಪ್ರಯುಧ್ಯ ತಾವುಭೌ ವಯಾಸ್ತ್ರವರ್ಷಿಣೌ ।
ಕ್ರುಧಾ ನಿರೀಕ್ಷ್ಯ ತಸ್ಥತುಃ ಪರಸ್ಪರಂ ಸ್ಫುರತ್ತನೂ ॥ ೧೫೧ ॥

ಅ॥ ಉತ್ಕೃಷ್ಟಗಳಾದ ಅಸ್ತ್ರಗಳನ್ನೂ ಶಸ್ತ್ರಗಳನ್ನೂ ಸುರಿಸುವ ಆ ಸಾತ್ಯಕಿ ಶಿಶುಪಾಲರಿಬ್ಬರೂ ಬಹುಕಾಲದಲ್ಲಿ ಯುದ್ಧವಮಾಡಿ ಕೋಪದಿಂದ ಚಂಚಲವಾದ ಶರೀರವುಳ್ಳವರಾಗಿ ಪರಸ್ಪರವಾಗಿ ನೋಡಿಕೊಂಡು ನಿಂತರು. ॥ ೧೫೧ ॥

ಮೂ ॥ ಸಮಾನಭಾವಮುಕ್ಷ್ಣಿಣಾ ಶಿನೇಃ ಸುತಾತ್ಮಜಃ ಶರಂ ।
ಅಥೋದ್ಬಬರ್ಹ ತಂ ಶರಂ ಬಲಾನ್ಮುಮೋಚ ವಕ್ಷಸಿ ॥ ೧೫೨ ॥

ಅ॥ ಇಬ್ಬರಿಗೂ ಸಮಂತ್ವವನ್ನು ಸಹಿಸದೆ ಇರುವ, ಶಿನಿಯು ಮಂಗನಾದ ಸತ್ಯಕನ ಮಂಗನಾದ ಸಾತ್ಯಕಿಯು ಬಾಣವನ್ನು ಬತ್ತಳಿಕೆಯಿಂದ ಹೊರಪಡಿಸಿದನು. ಆಮೇಲೆ ಆ ಬಾಣವನ್ನು ಬಲದಿಂದ ಶೆಳೆದು ಶಿಶುಪಾಲನ ವಕ್ಷಃಸ್ಥಳದಲ್ಲಿ ಬಿಟ್ಟನು. ॥ ೧೫೨ ॥

ಮೂ ॥ ಸ ತೇನ ತಾಡಿತೋಽಪತದ್ವಿಸಂಜ್ಞಕೋ ನೃಪಾತ್ಮಜಃ ।
ವಿಜಿತ್ಯ ತಂ ಸ ಸಾತ್ಯಕಿರ್ಯಯೌ ಪ್ರಹೃಷ್ಟಮಾನಸಃ ॥ ೧೫೩ ॥

ಅ॥ ದಮಂಘೋಷನ ಪುತ್ರನಾದ ಶಿಶುಪಾಲನು ಆ ಸಾತ್ಯಕಿಯಿಂದ ಬಾಣದಿಂದ ಹೊಡೆಯಲ್ಪಟ್ಟವನಾಗಿ ಸಂಜ್ಞಾರಹಿತನಾಗಿ ಬಿದ್ದನು. ಆ ಸಾತ್ಯಕಿಯು ಶಿಶುಪಾಲನನ್ನು ಗೆದ್ದು ಸಂತುಷ್ಟವಾದ ಮನಸ್ಸುಳ್ಳವನಾಗಿ ಹೋದನು. ॥ ೧೫೩ ॥

ಮೂ ॥ ಅಥಾಪರೇ ಚ ಯಾದವಾ ವಿಜಿತ್ಯ ತದ್ಬಲಂ ಯಯುಃ ।
ಪುರೈವ ರುಕ್ಮಿಪೂರ್ವಕಾಃ ಪ್ರಜಗ್ಮುರಚ್ಯುತಂ ಪ್ರತಿ ॥ ೧೫೪ ॥

ಅ॥ ಆಮೇಲೆ ಬೇರೆ ಯಾದವರೂ ಕೂಡ ಶಿಶುಪಾಲನ ಸೈನ್ಯವನ್ನು ಗೆದ್ದು ಹೋದರು. ರುಂಗ್ಮಿಯೇ ಮೊದಲಾದವರು ಮೊದಲೇ ಶ್ರೀಕೃಷ್ಣನನ್ನು ಕುರಿತು ಯುದ್ಧಕ್ಕಾಗಿ ಹೋದರು. ॥ ೧೫೪ ॥

ಮೂ ॥ ಸಹೈಕಲವ್ಯಪೂರ್ವಕೈಃ ಸಮೇತ್ಯ ಭೀಷ್ಮಕಾತ್ಮಜಃ ।
ಹರಿಂ ವವರ್ಷ ಸಾಯಕೈಃ ಸ ಸಿಂಹವನ್ನ್ಯವರ್ತತ ॥ ೧೫೫ ॥

ಅ॥ ಭಿಷ್ಮಕರಾಜನ ವಂಗನಾದ ರುಗ್ಮಿಯು ಏಕಲವ್ಯನೇ ಮೊದಲಾದ ಉಳ್ಳವರಿಂದ ಕೂಡಿಕೊಂಡು ಶ್ರೀಕೃಷ್ಣನನ್ನು ಹೊಂದಿ ಬಾಣಗಳಿಂದ ಸುರಿಸಿದನು; ಶ್ರೀಕೃಷ್ಣನು ಸಿಂಹದಂತೆ ಹಿಂತಿರುಗಿದನು. ॥ ೧೫೫ ॥

ಮೂ ॥ ಅಕ್ಷೌಹಿಣೀತ್ರಯಂ ಹರಿಸ್ತದಾ ನಿಹತ್ಯ ಸಾಯಕೈಃ ।
ಆವಾಹನಾಯುಧಂ ವ್ಯಧಾನ್ನಿಷಾದಪಂ ಶರೈಃ ಕ್ಷಣಾತ್ ॥ ೧೫೬ ॥

ಅ॥ ಶ್ರೀಕೃಷ್ಣನು ಆಗ ಮೂರು ಅಕ್ಷೌಹಿಣಿಯನ್ನು ಬಾಣಗಳಿಂದ ಸಂಹರಿಸಿ ಏಕಲವ್ಯನನ್ನು ಬಾಣಗಳಿಂದ ಕ್ಷಣದೊಳಗೆ ವಾಹನ ಆಯುಧಗಳಿಂದ ರಹಿತನನ್ನಾಗಿ ಮಾಡಿದನು. ॥೧೫೬॥

ಮೂ ॥ ಶರಂ ಶರೀರನಾಶಕಂ ಸಮಾದದಾನವಿಶ್ವರಂ ।
ಸ ಏಕಲವ್ಯ ಆಶು ತಂ ವಿಹಾಯ ದುದ್ರುವೇ ಭಯಾತ್ ॥ ೧೫೭ ॥

ಅ॥ ಆ ಏಕಲವ್ಯನು ಶರೀರವನ್ನು ನಾಶಮಾಡತಕ್ಕ ಬಾಣವನ್ನು ಸ್ವೀಕರಿಸತಕ್ಕ ಆ ಶ್ರೀಕೃಷ್ಣನನ್ನು ಬಿಟ್ಟು ಶೀಘ್ರದಲ್ಲಿ ಭಯದಿಂದ ಓಡಿಹೋದನು. ॥ ೧೫೭ ॥

ಮೂ ॥ ಧನುರ್ಭೃತಾಂ ವರೇ ಗತೇ ರಣಂ ವಿಹಾಯ ಭೂಭೃತಃ ।
ಕರೂಶರಾಜಪೂರ್ವಕಾಃ ಕ್ಷಣಾತ್ಪ್ರದುದ್ರುವುರ್ಭಯಾತ್ ॥ ೧೫೮ ॥

ಆ॥ ಧನುರ್ಧಾರಿಗಳ ವಂಶದಲ್ಲಿ ಶ್ರೇಷ್ಠನಾದ ಏಕಲವ್ಯನು ರಣವನ್ನು ಬಿಟ್ಟು ಹೋಗಲು ತ್ತರಲು ಕರೂಶ ದೇಶಕ್ಕೆ ಅಧಿಪತಿಯಾದ ದಂತವಕ್ರನೇ ಮೊದಲಾಗಿ ಉಳ್ಳ ರಾಜರು ಕ್ಷಣದಿಂದ ಭೀತಿಯಿಂದ ಹೊರಟುಹೋದರು. ॥ ೧೫೮ ॥

ಮೂ ॥ ಅಥಾಪಸಾದ ಕೇಶವಂ ರುಷಾ ಸ ಭೀಷ್ಮಕಾತ್ಮಜಃ ।
ಶರಾಂಬುಧಾರ ಆಶು ತಂ ವಿವಾಹನಂ ವ್ಯಧಾದ್ಧರಿಃ ॥ ೧೫೯ ॥

ಅ॥ ಆವೇಲೆ ಭೀಷ್ಮಕ ರಾಜನ ವಂಗನಾದ ರುಗ್ಮಿಯು ಶಿಟ್ಟಿನಿಂದ ಬಾಣಗಳೆಂಬ ಜಲಗಳನ್ನು ಧರಿಸಿದವನಾಗಿ ಶ್ರೀಕೃಷ್ಣನನ್ನು ಹೊಂದಿದನು, ಶ್ರೀಹರಿಯು ಆ ರುಗ್ಮಿಯನ್ನು ಶೀಘ್ರದಲ್ಲಿ ವಾಹನರಹಿತನನ್ನಾಗಿ ಮಾಡಿದನು. ॥ ೧೫೯ ॥

ಮೂ ॥ ಚಕರ್ತ ಕಾರ್ಮುಕಂ ಪುನಃ ಸ ಖಡ್ಗ ಜರ್ಮಭೃದ್ಧರೇಃ ।
ರಥಂ ಸಮಾರುಹಚ್ಛರೈಶ್ಚ ಕರ್ತ ಖಡ್ಗವಿಶ್ವರಃ ॥ ೧೬೦ ॥

ಅ॥ ಶ್ರೀಕೃಷ್ಣನು ರುಗ್ಮಿಯ ಧನುಸ್ಸನ್ನು ತುಂಡು ಮಾಡಿದನು, ಪುನಃ ಆ ರುಗ್ಮಿಯು ಖಡ್ಗ ಚರ್ಮಗಳನ್ನು ಧರಿಸಿದವನಾಗಿ ಶ್ರೀಹರಿಯ ರಥವನ್ನು ಏರಿದನು. ಶ್ರೀಕೃಷ್ಣನು ಬಾಣಗಳಿಂದ ಖಡ್ಗವನ್ನು ತುಂಡುಮಾಡಿದನು. ॥ ೧೬೦ ॥

ಮೂ ॥ ಶರೈರ್ವಿತಸ್ತ್ರಿಮಾತ್ರಕೈರ್ವಿಧಾಯ ತಂ ನಿರಾಯುಧಂ ।
ಪ್ರಿಯಾವಚಃ ಪ್ರಪಾಲಯನ್ ಜಘಾನನೈನವಿಶ್ವರಃ(ಮುಚ್ಯುತಃ) ॥೧೬೧॥

ಅ॥ ಶ್ರೀಕೃಷ್ಣನಂ ವಿತಸ್ತಿ ಪರಿಮಿತಗಳಾದ ಬಾಣಗಳಿಂದ ಆ ರಂಗ್ಮಿಯಂನ್ನು ಆಯಂಧ ರಹಿತನನ್ನಾಗಿ ಮಾಡಿ (ನನ್ನ ಅಣ್ಣನನ್ನು ಕೊಲ್ಲಬೇಡ ಎಂದಂ) ಪ್ರಿಯಂಳಾದ ರಂಗ್ಮಿಣಿಯಂ ಮಾತನ್ನು ಪಾಲಿಸುತ್ತಾ ಈ ರಂಗ್ಮಿಯಂನ್ನು ಕೊಲ್ಲಲಿಲ್ಲ. ॥ ೧೬೧ ॥

ಮೂ ॥ ನಿಬಧ್ಯ ಪಂಚಚೂಡಿನಂ ವಿಧಾಯ ತಂ ವ್ಯಸರ್ಜಯತ್ ।
ಜಗಜ್ಜನಿತ್ರ್ಯೋರಿದಂ ವಿಡಂಬನಂ ರಮೇಶಯೋಃ ॥ ೧೬೨ ॥

ಅ॥ ಶ್ರೀಕೃಷ್ಣನಂ ಆ ರಂಗ್ಮಿಯಂನ್ನು ಕಟ್ಟಿ ಪಂಚಶಿಖಿಯಂನ್ನಾಗಿ ಮಾಡಿ ಬಿಟ್ಟು ಬಿಟ್ಟನಂ. ಜಗತ್ತ್ರಿಗಳಿಗೆ ಉತ್ಪಾದಕರಾದ ರಂಗ್ಮಿಣೀಕೃಷ್ಣರಿಗೆ ಇದಂ (ಅಂದರೆ ಇವನನ್ನು ಕೊಲ್ಲುವೆನಂ, ಕೊಲ್ಲಬೇಡ ಎಂದಂ ವಿವಾದ ಮಾಡುವುದಂ) ಲೋಕಾನುಕರಣವು. ॥ ೧೬೨ ॥

ಮೂ ॥ ಸದೈಕನಾನಸಾವಪಿ ಸ್ವಧರ್ಮಶಾಸಕೌ ನೃಣಾಂ ।
ರಮಾ ಹರಿಶ್ಚ ತತ್ರ ತೌ ವಿಜಹ್ರತುಶ್ಚ ರುಕ್ಮಿಣಾ ॥ ೧೬೩ ॥

ಅ॥ ಯಾವಾಗಲೂ ಅವಿರುದ್ಧವಾದ ಇಚ್ಛೆಯುಳ್ಳವರಾದಾಗ್ಯೂ ಲಕ್ಷ್ಮೀದೇವಿಯಂಊ ಶ್ರೀಕೃಷ್ಣನೂ ಕೂಡಾ ಯಾವ ಕಾರಣದಿಂದ ಮನುಷ್ಯರಿಗೆ ಗೃಹಸ್ಥಾಶ್ರಮಿಗಳಿಗೆ ತಮ್ಮ ಧರ್ಮವನ್ನು ಶಿಕ್ಷಿಸತಕ್ಕವರೋ ಆದಕಾರಣ ಯುದ್ಧದಲ್ಲಿ ರಥದಲ್ಲಿ ಆಗಲೀ ರಂಗ್ಮಿಯಿಂದ ಕೂಡಿಕೊಂಡು ಕ್ರೀಡೆಯನ್ನು ಮಾಡಿದರಂ. ॥ ೧೬೩ ॥

ಮೂ ॥ ಅಥಾಸಸಾದ ಸೌಭರಾಟ್ ಹರಿಂ ಶರಾಂಬುವರ್ಷಣಃ ।
ಹರಿಃ ಶರಂ ಯಮೋಪಮಂ ಮುಮೋಚ ತಸ್ಯ ವಕ್ಷಸಿ ॥ ೧೬೪ ॥

ಅ॥ ಆಮೇಲೆ ಸಾಲ್ವನಂ ಬಾಣಗಳೆನ್ನುವ ಜಲಧಾರೆಗಳನ್ನು ಸುರಿಸುವವನಾಗಿ ಶ್ರೀಹರಿಯನ್ನು ಹೊಂದಿದನಂ. ಶ್ರೀಕೃಷ್ಣನಂ ಯಮನಿಗೆ ಸದೃಶವಾದ ಬಾಣವನ್ನು ಸಾಲ್ವನ ವಕ್ಷಃಸ್ಥಳದಲ್ಲಿ ಬಿಟ್ಟನಂ. ॥ ೧೬೪ ॥

ಮೂ ॥ ಶರೇಣ ತೇನ ಪೀಡಿತಃ ಪಪಾತ ಮುಂದಚೇಷ್ಟಿತಃ ।
ಚಿರಾತ್ಸಸಂಜ್ಞಕೋಽಗಮತ್ತ್ರಿನೇತ್ರತೋಷಣೇಚ್ಛಯಾ ॥ ೧೬೫ ॥

ಅ॥ ಸಾಲ್ವನಂ ಆ ಬಾಣದಿಂದ ಪೀಡಿಸಿಕೊಳ್ಳಲ್ಪಟ್ಟವನಾಗಿ ಅಲ್ಪವಾದ ಇಂದ್ರಿಯವ್ಯಾಪಾರವುಳ್ಳವನಾಗಿ ಬಿದ್ದನಂ. ಬಹುಕಾಲದಿಂದ ಸಂಜ್ಞೆಯಿಂದ ಕೂಡಿದವನಾಗಿ ರುದ್ರನನ್ನು ಸಂತೋಷಪಡಿಸಬೇಕೆನ್ನುವ ಇಚ್ಛೆಯಿಂದ ಅರಣ್ಯಕ್ಕೆ ಹೋದನಂ. ॥ ೧೬೫ ॥

ಮೂ ॥ ಸಮುಸ್ತ ರಾಜಸನ್ನಿಧಾವಯಾದವೀಂ ಮಹೀಮಿಮಾಂ ।
ಕರಿಷ್ಯ ಇತ್ಯುದೀರ್ಯ ಸೋ ವ್ಯಧಾತ್ತಪೋಽತಿದುಶ್ಚರಂ ॥ ೧೬೬ ॥

ಅ॥ ನಾನಂ ಈ ಭೂಮಿಯನ್ನು ಯಾದವರಹಿತವನ್ನಾಗಿ ಮಾಡುವೆನೆಂದಂ ಎಲ್ಲಾ ರಾಜರ ಸಮೀಪದಲ್ಲಿ ಹೇಳಿ ೪ ಸಾಲ್ವನಂ ಅತ್ಯಂತವಾಗಿ ಮಾಡಲಶಕ್ಯವಾದ ತಪಸ್ಸನ್ನು ಮಾಡಿದನಂ. ॥ ೧೬೬ ॥

ಮೂ ॥ ಅಥೋ ವಿವೇಶ ಕೇಶವಃ ಪುರೀಂ ಕುಶಸ್ಥಲೀಂ ಪ್ರಭುಃ ।
ಪ್ರಿಯಾಯುತೋಽಬ್ಜಜಾದಿಭಿಃ ಸವಿನಾಡಿತಃ ಸುರೇಶ್ವರೈಃ ॥ ೧೬೭ ॥

ಅ॥ ಆವಮೇಲೆ ಹೆಂಡತಿಯಿಂದ ಕೂಡಿದ ಪ್ರಭುವಾದ ಶ್ರೀಕೃಷ್ಣನು ಬ್ರಹ್ಮನೇ ಮೊದಲಾದ ದೇವಶ್ರೇಷ್ಠರಿಂದ ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟವನಾಗಿ ದ್ವಾರಕಾಪಟ್ಟಣವನ್ನು ಪ್ರವೇಶ ಮಾಡಿದನು. ॥ ೧೬೭ ॥

ಮೂ ॥ ಪುರಾ ತತೋ ಹಲಾಯುಧಃ ಪ್ರಿಯಾಂ ನಿಜಾಂ ಪುರಾಪಿ ಹಿ ।
ಸ ವಾರುಣೇಸವಾಹ್ವಯಾಮುವಾಪ ರೇವತೀಂ ಪ್ರಭುಃ ॥ ೧೬೮ ॥

ಅ॥ ರುಗ್ಮಿಣೀದೇವಿಯನ್ನು ತರುವುದಕ್ಕಿಂತ ಮೊದಲೇ ಪ್ರಭುವಾದ ಬಲರಾಮನು ಮೂಲರೂಪದಲ್ಲಿಯೂ ಕೂಡ ವಾರುಣೀ ಎಂದು ಹೆಸರುಳ್ಳ ತನ್ನ ಹೆಂಡತಿಯಾದ ಭೂವಿಯಲ್ಲಿ ರೇವತೀ ಎಂದು ಹೆಸರುಳ್ಳವಳನ್ನು ಹೊಂದಿದನು. ॥ ೧೬೮ ॥

ಮೂ ॥ ಪತಿಂ ಯಥಾನುರೂಪಿಣಂ ತದೀಯಮೇವ ಪೂರ್ವಕಂ ।
ಪಿತಾ ತದೀಯ ಐಚ್ಛತ ಪ್ರವೇತ್ತುಮುಬ್ಜಸಂಭವಾತ್ ॥ ೧೬೯ ॥

ಅ॥ ರೇವತೀ ಸಂಬಂಧಿಯಾದ ತಂದೆಯಾದ ಕಕುದ್ಮಿಯು ರೇವತೀರೂಪಕ್ಕೆ ಉಚಿತವಾದ ರೂಪವುಳ್ಳ, ಪೂರ್ವಜನ್ಮದಲ್ಲಿಯೇ ಇರತಕ್ಕ ರೇವತೀ ಸಂಬಂಧಿಯಾದ ಗಂಡನನ್ನು ಬ್ರಹ್ಮನಿಂದ ತಿಳಿಯಲಿಕ್ಕೆ ಇಚ್ಛಿಸಿದನು. ॥ ೧೬೯ ॥

ಮೂ ॥ ಸ ತತ್ಪದೋಗತೋ ವರಾತ್ತದೀಯತಃ ಪ್ರಗೀತಿಕಾಂ ।
ನಿಶಮ್ಯ ನಾವಿದದ್ಗತಂ ಯಾಗೋರುಕಾಲಪರ್ಯಯಂ ॥ ೧೭೦ ॥

ಅ॥ ಆ ರೇವತ ಪುತ್ರನಾದ ಕಕುದ್ಮಿಯು ಬ್ರಹ್ಮ ಸಂಬಂಧಿಯಾದ ವರದ್ದೆಸೆಯಿಂದ(ಅಂದರೆ ಬ್ರಹ್ಮನ ಲೋಕಕ್ಕೆ ಹೋಗುವ ವಿಷಯದಲ್ಲಿ ಬ್ರಹ್ಮನು ವರವನ್ನು ಕೊಟ್ಟಿರುವುದರಿಂದ)ಬ್ರಹ್ಮನ ಸಭೆಯನ್ನು ಹೊಂದಿದವನಾಗಿ ಗಾಯನ ವಿಶೇಷವನ್ನು ಕೇಳಿ ಯಾಗಗಳ ಬಹುಕಾಲದ ಪರ್ಯಂತ ಅತಿಕ್ರಮಣವನ್ನು ತಿಳಿಯಲಿಲ್ಲ. ॥ ೧೭೦ ॥

ಮೂ ॥ ನರಾನಯೋಗ್ಯಗೀತಿಕಾ ವಿಮೋಹಯೇತ್ತತೋ ನೃಪಃ ।
ಸ ಮೂಢಬುದ್ಧಿರಂತತೋಽಲ್ಪಕಾಲ ಇತ್ಯಮನ್ಯತ ॥ ೧೭೧ ॥

ಅ॥ ಮನುಷ್ಯರಿಗೆ ಕೇಳಲಿಕ್ಕೆ ಅಯೋಗ್ಯವಾದ ಗಾಯನವು ಮನುಷ್ಯರನ್ನು ಯಾವ ಕಾರಣದಿಂದ ಮೋಹಿಸುವುದೋ ಆ ಕಾರಣ ಆ ಕಕುದ್ಮಿಯು ಮೂರ್ಖಿತವಾದ ಮನಸ್ಸುಳ್ಳವನಾಗಿ ಉದ್ಬೋಧನಾನಂತರದಲ್ಲಿ ಅಲ್ಪ ಕಾಲವೇ ಹೋಯಿತು ಎಂದು ತಿಳಿದನು. ॥ ೧೭೧ ॥

ಮೂ ॥ ಸ ಮೂರ್ಖಿತಃ ಪ್ರಬೋಧಿತೋಽಬ್ಜಜೇನ ತಂ ತ್ವಪೃಚ್ಛತ ।
ಸುತಾಪತಿಂ ಬಲಂ ಚ ಸೋಽಬ್ರವೀದ್ಯಗಾತ್ಯಯೇ ಬಹೌ ॥ ೧೭೨ ॥

ಅ॥

ಅ॥ ಮೂರ್ಖಿತನಾದ ಕಕುದ್ಮಿಯು ಅನೇಕ ಯುಗಗಳು ದಾಟುತ್ತಿರಲು ಬ್ರಹ್ಮನಿಂದ ಪ್ರಬೋಧವನ್ನು ಹೊಂದಿದವನಾಗಿ ಆ ಬ್ರಹ್ಮನನ್ನು ಕುರಿತು ತನ್ನ ಮಂಗಳಿಗೆ ಗಂಡನನ್ನು ಕೇಳಿದನು. ಆ ಬ್ರಹ್ಮನು ಬಲರಾಮನನ್ನಾಗಿ ಹೇಳಿದನು. ॥ ೧೭೨ ॥

ಮೂ ॥ ಸ ರೈವತೋ ಬಲಾಯು ತಾಂ ಪ್ರದಾಯು ಗಂಧಮಾದನಂ ।
ಗತೋಽತ್ರ ಚೀರ್ಣಸತ್ತಪಾ ಅವಾಪ ಕೇಶವಾಂತಿಕಂ ॥ ೧೭೩ ॥

ಅ॥ ಆ ರೇವತೀ ಪುತ್ರನಾದ ಕಕುದ್ಮಿಯು ಆ ರೇವತಿಯನ್ನು ಬಲರಾಮನಿಗೋಸ್ಕರ ಕೊಟ್ಟು ಗಂಧಮಾದನ ಪರ್ವತಕ್ಕೆ ಹೋದವನಾಗಿ ಈ ಪರ್ವತದಲ್ಲಿ ಮಾಡಲ್ಪಟ್ಟ ನಿರ್ದುಷ್ಟವಾದ ತಪಸ್ಸುಳ್ಳವನಾಗಿ ಕೇಶವನ ಸಮೀಪವಾದ ವೈಕುಂಠವನ್ನು ಹೊಂದಿದನು. ॥ ೧೭೩ ॥

ಮೂ ॥ ಬಲೋಽಪಿ ತಾಂ ಪುರಾತನಪ್ರಮಾಣಸಮ್ಮಿತಾಂ ಪ್ರಭುಃ ।
ಹಲೇನ ಚಾತ್ಮನಾ ಸಮಾಂ ಚಕಾರ ಸತ್ಯವಾಂಛಿತಃ ॥ ೧೭೪ ॥

ಅ॥ ಪ್ರಭುವಾದ ಸತ್ಯಕಾಮನಾದ ಬಲರಾಮನಾದರೂ ಪೂರ್ವ ಯುಗದಲ್ಲಿರತಕ್ಕ ಮನುಷ್ಯರ ಪ್ರಯಾಣದಿಂದ ಸವಸ್ಥಾನಳಾದ ಆ ರೇವತಿಯನ್ನು ಲಾಂಗಲದಿಂದ ತನ್ನಿಂದ ಸಮಳನ್ನಾಗಿ ಮಾಡಿದನು. ॥ ೧೭೪ ॥

ಮೂ ॥ ತಯಾ ರತಸ್ತಾವುಭೌ ಶತೋಲ್ಮುಕಾಭಿಧಾನಧಾತ್ ।
ಪುರಾರ್ಯಮಾಂಶಕೌ ಸುರಾವುದಾರಚೇಷ್ಟಿತೋ ಬಲಃ ॥ ೧೭೫ ॥

ಅ॥ ಉತ್ಕೃಷ್ಟವಾದ ಕರ್ಮವುಳ್ಳ ಬಲರಾಮನು ಆ ರೇವತಿಯಿಂದ ಕ್ರೀಡಿಸುವವನಾಗಿ ಮೊದಲು ಅರ್ಯಮಾ ಅಂಶಕ ಎಂದು ಹೆಸರುಳ್ಳ ದೇವತೆಗಳಾದವರು, ಅಂತಹ ಶತ ಉಲ್ಮುಕ ಎಂದು ಹೆಸರುಳ್ಳ ಇಬ್ಬರು ಮಕ್ಕಳನ್ನು ಹುಟ್ಟಿಸಿದನು. ॥ ೧೭೫ ॥

ಮೂ ॥ ಜನಾರ್ದನಶ್ಚ ರುಕ್ಮಿಣೀಕರಂ ಶುಭೇ ದಿನೇಽಗ್ರಹೀತ್ ।
ಮಹೋತ್ಸವಸ್ತದಾಭವತ್ ಕುಶಸ್ಥಲೀನಿವಾಸಿನಾಂ ॥ ೧೭೬ ॥

ಅ॥ ಶ್ರೀಕೃಷ್ಣನು ಶೋಭನವಾದ ದಿನಗಳಲ್ಲಿ ರುಗ್ಮಿಣೀದೇವಿಯ ಕೈಯನ್ನು ಹಿಡಿದನು; ಆಗ ಪಾಣಿಗ್ರಹಣ ಕಾಲದಲ್ಲಿ ದ್ವಾರಕಾಪಟ್ಟಣದಲ್ಲಿ ಆವಾಸ ಮಾಡುವವರಿಗೆ ಮಹಾಸಂಭ್ರಮವು ಆಯಿತು. ॥ ೧೭೬ ॥

ಮೂ ॥ ಚತುರ್ಮುಖೇಶಪೂರ್ವಕಾಃ ಸುರಾ ವಿಯತ್ಯವಸ್ಥಿತಾಃ ।
ಪ್ರತುಷ್ಟುವುರ್ಜನಾರ್ದನಂ ರಮಾಪತೇಮತಮವ್ಯಯಂ ॥ ೧೭೭ ॥

ಅ॥ ಬ್ರಹ್ಮರುದ್ರ ಮೊದಲಾದ ದೇವತೆಗಳು ಆಕಾಶದಲ್ಲಿ ನಿಂತವರಾಗಿ ರುಗ್ಮಿಣೀ ಸಮೇತನಾದ ನಾಶರಹಿತನಾದ ಶ್ರೀಕೃಷ್ಣನನ್ನು ಸ್ತೋತ್ರ ಮಾಡಿದರು, ॥ ೧೭೭ ॥

ಮೂ ॥ ಮುನೀಂದ್ರದೇವಗಾಯಕಾದಯೋಽಪಿ ಯಾದವೈಃ ಸಹ ।
ವಿಚೇರುರುತ್ಸವೋತ್ಸವೇ ರಮಾರಮೇಶಯೋಗಿನಿ ॥ ೧೭೮ ॥

ಅ॥ ಮುನಿಶ್ರೇಷ್ಠರು ದೇವಗಾಯಕರು ಇವರೇ ಮೊದಲಾದವರೂ ಕೂಡ ಯಾದವರಿಂದ ಕೂಡಿಕೊಂಡು ಲಕ್ಷ್ಮೀನಾರಾಯಣರ ಯೋಗವುಳ್ಳ ಉತ್ಸವೋತ್ಸವದಲ್ಲಿ ಸಂಚರಿಸಿದರು.॥೧೭೮॥

ಮೂ ॥ ಸುರಾಂಶಕಾಶ್ಚ ಯೇ ನೃಪಾಃ ಸಮಾಹುತಾ ಮಹೋತ್ಸವೇ ।
ಸಪಾಂಡವಾಃ ಸಮಾಯಯುರ್ಹರಿಂ ರಮಾಸಮಾಯುತಂ ॥ ೧೭೯ ॥

ಅ॥ ದೇವತೆಗಳ ಅಂಶಭೂತರಾದ ಯಾವ ರಾಜರೋ ಅವರು ಮಹೋತ್ಸವದಲ್ಲಿ ಕರೆಸಲ್ಪಟ್ಟರು. ಪಾಂಡವರಿಂದ ಕೂಡಿದವರಾಗಿ ಲಕ್ಷ್ಮೀಸಮೇತನಾದ ಶ್ರೀಹರಿಯನ್ನು ಹೊಂದಿದರು, ॥ ೧೭೯ ॥

ಮೂ ॥ ಸಮಸ್ತಲೋಕಸುಂದರೌ ಯುತೌ ರಮಾರಮೇಶ್ವರೌ ।
ಸವಿಶಾಕ್ಷ್ಯ ಮೋದಮಾಯಯುಃ ಸಮಸ್ತಲೋಕಸಜ್ಜನಾಃ ॥ ೧೮೦ ॥

ಅ॥ ಎಲ್ಲಾ ಲೋಕಗಳಲ್ಲಿ ಸುಂದರರಾದ ಸರ್ವದಾ ಅವಿಯುಕ್ತರಾದ ಲಕ್ಷ್ಮೀನಾರಾಯಣರನ್ನು ನೋಡಿ ಎಲ್ಲಾ ಲೋಕಗಳಲ್ಲಿಯೂ ಇರತಕ್ಕ ಸಜ್ಜನರು ಸಂತೋಷವನ್ನು ಹೊಂದಿದರು. ॥ ೧೮೦ ॥

ಮೂ ॥ ತಯಾ ರಮನ್ ಜನಾರ್ದನೋ ವಿಯೋಗಶೂನ್ಯಯಾ ಸದಾ ।
ಅಧತ್ತ ಪುತ್ರಮುತ್ತಮಂ ಮನೋಭವಂ ಪುರಾತನಂ ॥ ೧೮೧ ॥

ಅ॥ ಸರ್ವದಾ ವಿಯೋಗಶೂನ್ಯಳಾದ ರುಗ್ಮಿಣಿಯಿಂದ ರಮಿಸಿಕೊಂಡು ಇರುವ ಜನಾರ್ದನನು ಪೂರ್ವದಲ್ಲಿಯೇ ಪುತ್ರನಾದ ಮನ್ಮಥನನ್ನು (ರುಗ್ಮಿಣೀದೇವಿಯಲ್ಲಿ) ಉತ್ತಮ ಪುತ್ರನನ್ನಾಗಿ ಹುಟ್ಟಿಸಿದನು. ॥ ೧೮೧ ॥

ಮೂ ॥ ಚತುಸ್ತನೋರ್ಹರೇಃ ಪ್ರಭೋಸ್ತೃತೀಯರೂಪಸಂಯುತಃ ।
ತತಸ್ತದಾಹ್ವಯೋಽಭವತ್ ಸ ರುಕ್ಮಿಣೀಸುತೋ ಬಲೀ ॥ ೧೮೨ ॥

ಅ॥ ಬಲಿಷ್ಠನಾದ ಆ ರುಗ್ಮಿಣೀ ಪುತ್ರನು ಯಾವ ಕಾರಣದಿಂದ ವಾಸುದೇವಾದಿ ನಾಲ್ಕು ಸ್ವರೂಪವುಳ್ಳ ಪ್ರಭುವಾದ ಶ್ರೀಹರಿಯು ಮೂರನೇ ರೂಪದಿಂದ ಪ್ರವಿಷ್ಟನಾದವನೋ ಆದ ಕಾರಣ ಪ್ರದ್ಯುಮ್ನನ ನಾಮಧೇಯವುಳ್ಳವನಾದನು, ॥ ೧೮೨ ॥

ಮೂ ॥ ಪುರೈವ ಮೃತ್ಯವೇಽವದತ್ತಮೇವ ಶಂಬರಸ್ಯ ಹ ।
ಪ್ರಜಾತಮಬ್ಜಜಾಂಕಜಸ್ತವಾಂತಕೋಽಯಮಿತ್ಯಪಿ ॥ ೧೮೩ ॥

ಅ॥ ಬ್ರಹ್ಮನ ತೊಡೆಯಿಂದ ಹುಟ್ಟಿದ ನಾರದನು ಪ್ರದ್ಯುಮ್ನನು ಹುಟ್ಟುವುದಕ್ಕಿಂತ ಮೊದಲೇ (ಯಾವ ಪ್ರದ್ಯುಮ್ನನನ್ನು) ಶಂಬರಾಸುರನ ಮರಣಕ್ಕೋಸ್ಕರ ಹೇಳಿರುವನೋ (ಅಂದರೆ ಶ್ರೀಕೃಷ್ಣನಿಂದ ರುಗ್ಮಿಣಿಯಲ್ಲಿ ಪ್ರದ್ಯುಮ್ನನಾಮಕನಾದ ಯಾವ ಪುತ್ರನು ಆಗುವನೋ ಅವನು ನಿನಗೆ ಮಾರಕನು ಎಂದು ಶಂಬರಾಸುರನನ್ನು ಕುರಿತು ಹೇಳಿರುವನು.) ಹುಟ್ಟಿದ ಮೇಲೆಯೂ ಹುಟ್ಟಿದ ಆ ಪ್ರದ್ಯುಮ್ನನನ್ನೇ ರುಗ್ಮಿಣಿಯಲ್ಲಿ ಹುಟ್ಟಿರತಕ್ಕ ಈ ಪ್ರದ್ಯುಮ್ನನು ನಿನಗೆ ಮಾರಕನು ಎಂದು ಹೇಳಿರುವನು. ॥ ೧೮೩ ॥

ಮೂ ॥ ಸ ಮಾಯಯಾ ಹರೇಃ ಸುತಂ ಪ್ರಗೃಹ್ಯ ಸೂತಿಕಾಗೃಹಾತ್ ।
ಅವಾಕ್ಷಿಪನ್ಮಹೋದಧಾವುಪೇಕ್ಷಿತೋಽರಿಪಾಣಿನಾ ॥ ೧೪೪ ॥

ಅ॥ ಆ ಶಂಬರಾಸುರನು ಹೆತ್ತ ಮನೆಯಿಂದ ಮಾಯೆಯಿಂದ ಶ್ರೀಕೃಷ್ಣನ ಪುತ್ರನಾದ ಪ್ರದ್ಯುಮ್ನನನ್ನು ಹಿಡಿದುಕೊಂಡು ಸಮುದ್ರದಲ್ಲಿ ಬಿಸಾಡಿದನು. ಚಕ್ರಪಾಣಿಯಾದ ಶ್ರೀಕೃಷ್ಣನಿಂದ ಶಂಬರಾಸುರನು ಉಪೇಕ್ಷಿತನಾದನು. ॥ ೧೪೪ ॥

ಮೂ ॥ ತಮುಗ್ರಪಜ್ಜಲೇಚರಃ ಸ ದಾಶಹಸ್ತಮಾಗತಃ ।
ಕುಮಾರಮಸ್ಯ ತೂದರೇ ನಿರೀಕ್ಷ್ಯ ಶಂಬರೇ ದದುಃ ॥ ೧೪೫ ॥

ಅ॥ ಜಲಚರಪಾಣಿಯು ಆ ಪ್ರದ್ಯುಮ್ನನನ್ನು ನುಂಗಿಬಿಟ್ಟಿತು. ಆ ಮತ್ಸ್ಯವು ಮತ್ಸ್ಯ ಘಾತಿಗಳ ಕೈಗಂನ್ನು ಸೇರಿತು. ಈ ಮತ್ಸ್ಯದ ಹೊಟ್ಟೆಯಲ್ಲಿ ಹುಡುಗನನ್ನು (ಮತ್ಸ್ಯವು ಸಾಯಂಕಾಲದಲ್ಲಿ ವದನವನ್ನು ಬಿಡಿಸಿದಾಗ) ನೋಡಿ ಶಂಬರಾಸುರನ ಅಧೀನದಲ್ಲಿ ಕೊಟ್ಟರು. ॥ ೧೪೫ ॥

ಮೂ ॥ ವಿಪಾಟ್ಯ ಮತ್ಸ್ಯಕೋದರಂ ಸ ಶಂಬರಃ ಕುಮಾರಕಂ ।
ನ್ಯವೇದಯನ್ಮಹೋಭವಪ್ರಿಯಾಕರೇ ಸುರೂಪಿಣಂ ॥ ೧೪೬ ॥

ಅ॥ ಆ ಶಂಬರಾಸುರನು ಮತ್ಸ್ಯದ ಹೊಟ್ಟೆಯನ್ನು ಸೀಳಿ ಮನ್ಮಥನ ಪ್ರಿಯಂಳಾದ ರತಿಯ ಕೈಯಲ್ಲಿ ಅತ್ಯಂತ ರೂಪವುಳ್ಳ ಹುಡುಗನನ್ನು ಕೊಟ್ಟನು. ॥ ೧೪೬ ॥

ಹಾಗಾದರೆ ಕಾಮನ ಹೆಂಡತಿಯು ಶಂಬರಾಸುರನ ಮನೆಯಲ್ಲಿ ಏಕೆ ಆವಾಸವನ್ನು ಮಾಡಿ ಕೊಂಡು ಇದ್ದಳು ಎಂದರೆ–

ಮೂ ॥ ಅನಂಗತಾಮುಪಾಗತೇ ಪುರಾ ಹರೇಣ ಸಾಂಗಜೇ ।
ವಶಂ ವಿರಿಂಚಶಾಪತೋ ಜಗಾಮ ಶಂಬರಸ್ಯ ಹಿ ॥ ೧೪೭ ॥

ಅ॥ ಮೊದಲು ರುದ್ರನಿಂದ ಮನ್ಮಥನು ದೇಹಾಭಾವತನವನ್ನು ಹೊಂದುತ್ತಿರಲು ಅವನ ಹೆಂಡತಿಯಾದ ರತಿಯು ಬ್ರಹ್ಮನ ಶಾಪದಿಂದ ಶಂಬರಾಸುರನ ಅಧೀನತ್ವವನ್ನು ಹೊಂದಿರುವಳು. ॥ ೧೪೭ ॥

ಬ್ರಹ್ಮನು ಏಕೆ ಶಾಪಕೊಟ್ಟನು ಎಂದರೆ—

ಮೂ ॥ ಪುರಾ ಹಿ ಪಂಚಭರ್ತೃಕಾಂ ನಿಶಮ್ಯ ಕಂಜಜೋದಿತಾಂ ।
ಜಹಾಸ ಪಾರ್ಷತಾತ್ಮಜಾಂ ಶಶಾಪ ತಾಂ ತತಸ್ತ್ವಜಃ ॥ ೧೪೮ ॥

ಅ॥ ಮೊದಲು ಬ್ರಹ್ಮನಿಂದ ಹೇಳಲ್ಪಟ್ಟ ಐದು ಜನ ಗಂಡಂದಿರುಳ್ಳ ದ್ರುಪದರಾಜನ ಮಂಗಳಾದ ದ್ರೌಪದಿಯನ್ನು ಕೇಳಿ ರತಿಯು ನೆಗಾಡಿದಳು. ಆದಕಾರಣ ಬ್ರಹ್ಮನು ಆ ರತಿಯನ್ನು (ಅಸುರನಿಂದ ದೂಷಿತಳಾಗು ಎಂದು) ಶಪಿಸಿದನು. ॥ ೧೪೮ ॥

ಮೂ ॥ ಭವಾಸುರೇಣ ದೂಷಿತೇತಿ ಸಾ ತತೋ ಹಿ ಮಾಯಯಾ ।
ವಿಧಾಯ ತಾಂ ನಿಜಾಂ ತನುಂ ಜಗಾಮ ಚಾನ್ಯಯಾಸುರಂ ॥ ೧೪೯ ॥

ಅ ॥ ಅಸುರನಿಂದ ದೂಷಿಸಿಕೊಳ್ಳಲ್ಪಟ್ಟವಳಾಗಿ ಎಂದು (ಶಪ್ತಳಾದ) ಆ ರತಿಯು ಶಾಪ ಪ್ರಾಪ್ತ್ಯನಂತರದಲ್ಲಿ ಮಾಯೆಯಿಂದ ತನ್ನ ಸಂಬಂಧಿಯಾದ ದೇವತಾದೇಹವನ್ನು ಆಚ್ಛಾದನೆ ಮಾಡಿಕೊಂಡು ಇಚ್ಛಾಕಲ್ಪಿತವಾದ ಶರೀರದಿಂದ ಅಸುರನನ್ನು ಹೊಂದಿದಳು. ॥ ೧೪೮ ॥

ಮೂ ॥ ಗೃಹೇಽಪಿ ಸಾಸುರೇ ಸ್ಥಿತಾ ನಿಜಸ್ವರೂಪತೋಽಸುರಂ ।
ನ ಗಚ್ಛತಿ ಸ್ಮ ಸಾ ಪತಿಂ ನಿಜಂ ಸವಿಲಕ್ಷ್ಯ ಹರ್ಷಿತಾ ॥ ೧೪೦ ॥

ಅ ॥ ಆ ರತಿಯು ಅಸುರಸಂಬಂಧಿಯಾದ ಮನೆಯಲ್ಲಿದ್ದಾಗ್ಯೂ ದೇವತಾಸ್ವರೂಪದಿಂದ ಅಸುರನನ್ನು ಹೊಂದುವುದಿಲ್ಲ. ಆ ರತಿಯು ತನ್ನ ಪತಿಯಾದ ಪ್ರದ್ಯುಮ್ನನನ್ನು ನೋಡಿ ಸಂತೋಷಯುಕ್ತಳಾದಳು. ॥ ೧೪೦ ॥

ಮೂ ॥ ರಸಾಯನೈಃ ಕುಮಾರಕಂ ವ್ಯವರ್ಧಯದ್ರತಿಃ ಪತಿಂ ।
ಸುಪೂರ್ಣಯೌವನೋಽಭವಚ್ಚತುರ್ಭಿರೇವ ವತ್ಸರೈಃ ॥ ೧೪೧ ॥

ಅ ॥ ರತಿದೇವಿಯು ಕ್ಷೀರ ಘೃತ ಮೊದಲಾದ ರಸಾಯನಗಳಿಂದ ಕುಮಾರಸ್ವರೂಪನಾದ ಅಥವಾ ಸ್ಕಂದಸ್ವರೂಪನಾದ ಪತಿಯನ್ನು ಅಭಿವೃದ್ಧೀಕರಿಸಿದಳು. ನಾಲ್ಕೇ ವತ್ಸರಗಳಿಂದ ಅತ್ಯಂತ ಪೂರ್ಣವಾದ ತಾರುಣ್ಯವುಳ್ಳವನಾದನು. ॥ ೧೪೧ ॥

ಮೂ ॥ ಪತಿಂ ಸುಪೂರ್ಣಯೌವನಂ ನಿರೀಕ್ಷ್ಯ ತಾಂ ವಿಲಜ್ಜತೀಂ ।
ಉವಾಚ ಕಾಷ್ಣಿರಂಬ ತೇ ಕುಚೇಷ್ಟಿತಂ ಕಥಂ ತ್ವಿತಿ ॥ ೧೪೨ ॥

ಅ ॥ ಕೃಷ್ಣಪುತ್ರನಾದ ಪ್ರದ್ಯುಮ್ನನು ಅತ್ಯಂತ ಪೂರ್ಣವಾದ ತಾರುಣ್ಯವುಳ್ಳ ಗಂಡನನ್ನು ನೋಡಿ ಹೆಂಡತಿಯಂತೆ ವಿಕಾರವುಳ್ಳ ನಾಚಿಗೆ ಪಡತಕ್ಕ ಆ ರತಿಯನ್ನು ಕುರಿತು ಎಲೋ ತಾಯಿಯೇ ನಿನ್ನ ನಾಚಿಗೆ ಮೊದಲಾದ ಕುತ್ಸಿತಾಚರಣವು ಯಾವುದಕ್ಕಾಗಿ ಎಂದು ಹೇಳಿದನು. ॥ ೧೪೨ ॥

ಮೂ ॥ ಜಗಾದ ಸಾಖಿಲಂ ಪತೌ ತದಾಸ್ಯ ಜನ್ಮ ಚಾಗತಿಂ ।
ತತೋಽಗ್ರಹೀತ್ಸ ತಾಂ ಪ್ರಿಯಾಂ ರತಿಂ ರಮಾಪತೇಃ ಸುತಃ ॥ ೧೪೩ ॥

ಅ ॥ ಆಗ ಆ ರತಿಯು ಪ್ರಿಯನಾದ ಪ್ರದ್ಯುಮ್ನನಲ್ಲಿ ತನ್ನ ಆಗಮನ ಕಾರಣವನ್ನು ಪ್ರದ್ಯುಮ್ನನಿಗೆ ಶ್ರೀಕೃಷ್ಣನಿಂದ ಉತ್ಪತ್ತಿಯನ್ನೂ ಆಗಮನವನ್ನೂ ಎಲ್ಲವನ್ನೂ ಕೂಡ ಹೇಳಿದಳು, ಆ ಮೇಲೆ ಆ ಶ್ರೀಕೃಷ್ಣನ ಪುತ್ರನಾದ ಪ್ರದ್ಯುಮ್ನನು ಆ ರತಿಯನ್ನು ಹೆಂಡತಿಯನ್ನಾಗಿ ಸ್ವೀಕರಿಸಿದನು. (ಅಂದರೆ ಮಾತೃಬುದ್ಧಿಯನ್ನು ಬಿಟ್ಟು ಹೆಂಡತಿಯನ್ನಾಗಿ ಮಾಡಿಕೊಂಡನು. ॥ ೧೪೩ ॥

ಮೂ ॥ ದದೌ ಚ ಮಂತ್ರಮುತ್ತಮಂ ಸಮಸ್ತಮಾಯಿನಾಶಕಂ ।
ಭೃಗೂತ್ಥರಾವುದೈವತಂ ರತಿರ್ಹರೇಃ ಸುತಾಯ ಸಾ ॥ ೧೪೪ ॥

ಅ ॥ ಆ ರತಿದೇವಿಯಂ ಶ್ರೀಹರಿಯ ಮಗನಾದ ಪ್ರದ್ಯುಮ್ನನಿಗೋಸ್ಕರ ಭೃಗುಕಂಲದಲ್ಲಿ ಹುಟ್ಟಿದ ಪರಶುರಾಮನೇ ದೇವತೆಯಾಗಿ ಉಳ್ಳ ಎಲ್ಲಾ ಮಾಯೆಗಳನ್ನೂ ನಾಶಪಡಿಸತಕ್ಕ ಉತ್ತಮವಾದ ಮಂತ್ರವನ್ನು ಹೇಳಿದಳು. ॥ ೧೯೪ ॥

ಮೂ ॥ ತತಃ ಸ್ವದಾರಧರ್ಷಕಂ ಸಮಾಹ್ವಯದ್ಯುಧೇಽಂಗಜಃ ।
ಸ ಶಂಬರಂ ಸ ಚೈತ್ಯ ತಂ ಯುಯೋಧ ಶಕ್ತಿತೋ ಬಲೀ ॥ ೧೯೫ ॥

ಅ ॥ ಆ ಮೇಲೆ ಕಾಮನ ಅವತಾರಭೂತನಾದ ಆ ಪ್ರದ್ಯುಮ್ನನು ತನ್ನ ಹೆಂಡತಿಯನ್ನು ಕೆಳೆಯಂತಕ್ಕ ಶಂಬರನನ್ನು ಯುದ್ಧಕ್ಕಾಗಿ ಕರೆದನು. ಬಲಿಷ್ಠನಾದ ಆ ಶಂಬರಾಸುರನು ಆ ಪ್ರದ್ಯುಮ್ನನನ್ನು ಹೊಂದಿ ಶಕ್ತಿಯಿಂದ ಯುದ್ಧಮಾಡಿದನು. ॥ ೧೯೫ ॥

ಮೂ ॥ ಸ ಚರ್ಮ ಖಡ್ಗಧಾರಿಣಂ ವರಾಸ್ತ್ರಶಸ್ತ್ರಪಾದಪೈಃ ।
ಯದಾ ನ ಯೋದ್ಧುಮಾಶಕದ್ಧರೇಃ ಸುತಂ ನ ದೃಶ್ಯತೇ ॥ ೧೯೬ ॥

ಅ ॥ ಆ ಶಂಬರಾಸುರನು ಉತ್ಕೃಷ್ಟಗಳಾದ ಅಸ್ತ್ರಗಳೂ ಶಸ್ತ್ರಗಳೂ ವೃಕ್ಷಗಳೂ ಇವುಗಳಿಂದ ಚರ್ಮವನ್ನೂ ಖಡ್ಗವನ್ನೂ ಧರಿಸಿಕೊಂಡು ಇರುವ ಶ್ರೀಕೃಷ್ಣನ ಪುತ್ರನಾದ ಪ್ರದ್ಯುಮ್ನನನ್ನು ಕುರಿತು ಯುದ್ಧ ಮಾಡುವುದಕ್ಕಾಗಿ ಯಾವಾಗ ಸ್ವಲ್ಪವೂ ಸಮರ್ಥನಾಗಲಿಲ್ಲವೋ ಆಗ(ಮಾಯೆಯಿಂದ) ಶಂಬರಾಸುರನು (ಯಾರಿಂದಲೂ) ಕಾಣಲ್ಪಡುವುದಿಲ್ಲ. (ಅಂದರೆ ಅದೃಶ್ಯನಾದನು.) ॥ ೧೯೬ ॥

ಮೂ ॥ ಸಹಸ್ರಮಾಯಮುಲ್ಬಣಂ ತ್ವದೃಶ್ಯಮಂಬರಾದ್ಗಿರೀನ್ ।
ಸೃಜಂತಮೇತ್ಯ ವಿದ್ಯಯಾ ಜಘಾನ ಕೃಷ್ಣನಂದನಃ ॥ ೧೯೭ ॥

ಅ ॥ ಶ್ರೀಕೃಷ್ಣನ ಪುತ್ರನಾದ ಪ್ರದ್ಯುಮ್ನನು ಸಹಸ್ರಸಂಖ್ಯಾಕಗಳಾದ ಐಂದ್ರಜಾಲಿಕ ವಿದ್ಯೆಗಳುಳ್ಳ, ಕ್ರೂರನಾದ ಯಾರಿಗೂ ಕಾಣಲ್ಪಡದೇನೇ ಇರುವ ಆಕಾಶದಿಂದ ಪರ್ವತಗಳನ್ನು ವರ್ಷಿಸತಕ್ಕ ಶಂಬರಾಸುರನನ್ನು ರತಿಯಿಂದ ಕೊಡಲ್ಪಟ್ಟ ವಿದ್ಯೆಯಿಂದ ಸಂಹರಿಸಿದನು. ॥೧೯೭॥

ಮೂ ॥ ಸ ವಿದ್ಯಯಾ ವಿನಾಶಿತೋರುಮಾಯ ಆಶು ಶಂಬರಃ ।
ನಿಕೃತ್ತಕಂಧರೋಽಪತದ್ವರಾಸಿನಾಮುನಾ ಕ್ಷಣಾತ್ ॥ ೧೯೮ ॥

ಅ ॥ ಈ ಪ್ರದ್ಯುಮ್ನನಿಂದ ಪರಶುರಾಮನೇ ದೇವತೆಯಾಗಿ ಉಳ್ಳವಿದ್ಯೆಯಿಂದ ಶೀಘ್ರದಲ್ಲಿ ನಾಶಮಾಡಲ್ಪಟ್ಟ ಉತ್ಕೃಷ್ಟಗಳಾದ ಮಾಯೆಗಳುಳ್ಳ ಆ ಶಂಬರಾಸುರನು ಉತ್ತಮವಾದ ಖಡ್ಗದಿಂದ ಛಿನ್ನವಾದ ಕಂತ್ರಿಗೆಯುಳ್ಳವನಾಗಿ ತತ್ಕ್ಷಣದಲ್ಲಿಯೇ ಬಿದ್ದನು. ॥ ೧೯೮ ॥

ಮೂ ॥ ನಿಹತ್ಯ ತಂ ಹರೇಃ ಸುತಸ್ತಯೈವ ವಿದ್ಯಯಾಂಬರಂ ।
ಸಮಾಸ್ಥಿತಃ ಸ ಭಾರ್ಯಯಾ ಸಮುಂ ಕುಶಸ್ಥಲೀಂ ಯಯೌ ॥ ೧೯೯ ॥

ಅ॥ ಶ್ರೀಕೃಷ್ಣನ ಪುತ್ರನಾದ ಪ್ರದ್ಯುಮ್ನನು ಆ ಶಂಬರಾಸುರನನ್ನು ಸಂಹರಿಸಿ ರತಿದತ್ತವಾದ ವಿದ್ಯೆಯಿಂದಲೇ ಆಕಾಶವನ್ನು ಹೊಂದಿದವನಾಗಿ ಹೆಂಡತಿಯಿಂದ ಕೂಡಿಕೊಂಡು ದ್ವಾರಕಾಪಟ್ಟಣವನ್ನು ಕುರಿತು ಹೊದನು. ॥ ೧೯೯ ॥

ಮೂ ॥ ಸಮುಸ್ತವೇದಿನೋವ್ರುನಿರ್ನರಾನ್ ವಿಡಂಬವಾನಯೋಕಿ ।
ರಮಾರಮೇಶಯೋಕಿ ಸುತಂ ಜಗಾದ ತಂ ಸ್ಮ ನಾರದಃ ॥ ೨೦೦ ॥

ಅ॥ ನಾರದಋಷಿಯು ಸರ್ವಜ್ಞರಾದ ಮನುಷ್ಯರನ್ನು ಅನುಕರಿಸತಕ್ಕ ರುಗ್ಮಿಣೀಕೃಷ್ಣರಿಗೆ ಆ ಪ್ರದ್ಯುಮ್ನನನ್ನು ಮಗನನ್ನಾಗಿ ಹೇಳಿದನು. (ಅಂದರೆ ಸೂತಿಕಾಗೃಹದಿಂದ ನಿಮ್ಮಿಬ್ಬರ ಯಾವ ಮಗನು ಅಪಹೃತನಾಗಿರುವನೋ ಅತನೇ ಇವನೆಂದು ಹೇಳಿದನು.) ॥ ೨೦೦ ॥

ಮೂ ॥ ಸ ರುಕ್ಮಿಣೀಜನಾರ್ದನಾದಿಭಿಃ ಸರಾಮಯಾದವೈಃ ।
ಪಿತಾಮಹೇನ ಚಾದರಾತ್ಸುಲಾಲಿತೋಽವಸತ್ಸುಖಂ ॥ ೨೦೧ ॥

ಅ॥ ಆ ಪ್ರದ್ಯುಮ್ನನು ರುಗ್ಮಿಣೀ ಶ್ರೀಕೃಷ್ಣ ಇವರೇ ಮೊದಲಾಗಿಯುಳ್ಳ ಬಲರಾಮನಿಂದ ಕೂಡಿದ ಎಲ್ಲಾ ಯಾದವರಿಂದಲೂ ಪಿತಾಮಹನಾದ ವಸುದೇವನಿಂದಲೂ ಸ್ನೇಹದಿಂದ ಚೆನ್ನಾಗಿ ಕೊಂಡಾಡಲ್ಪಟ್ಟವನಾಗಿ ಸುಖವಾಗಿ ಆವಾಸವಮಾಡಿದನು. ॥ ೨೦೧ ॥

ಸತ್ಯಭಾಮೆಯು ವಿವಾಹಪ್ರಕಾರವನ್ನು ಹೇಳುತ್ತಾ ಆಚಾರ್ಯರು ಅದರ ಉಪೋದ್ಘಾತವನ್ನು ಹೇಳುತ್ತಾರೆ.

ಮೂ ॥ ತತಃ ಪುರಾ ಸ್ಯಮಂತಕಂ ಹ್ಯವಾಪ ಸೂರ್ಯಮಂಡಲೇ ।
ಸ್ಥಿತಾದ್ದರೇಃ ಸ ಸತ್ರಜಿತ್ ಸದಾತ್ರ ಕೇಶವಾರ್ಚಕಃ ॥ ೨೦೨ ॥

ಅ॥ ಪ್ರದ್ಯುಮ್ನನು ಬರುವುದಕ್ಕಿಂತ ಮೊದಲು ಸೂರ್ಯನಲ್ಲಿ ಶ್ರೀನಾರಾಯಣನನ್ನು ಪೂಜಿಸತಕ್ಕ ಪ್ರಸಿದ್ಧನಾದ ಸತ್ರಾಜಿದ್ರಾಜನು ಸೂರ್ಯಮಂಡಲದಲ್ಲಿರತಕ್ಕ ಶ್ರೀಹರಿಯುದೆಸೆಯಿಂದ ಸ್ಯಮಂತಕಮಣಿಯನ್ನು ಹೊಂದಿರುವನು. ॥ ೨೦೨ ॥

ಮೂ ॥ ಸದಾಸ್ಯ ವಿಷ್ಣುಭಾವಿನೋಽಪ್ಯತೀವ ಲೋಭವಾಂತರಂ ।
ಪ್ರಕಾಶಯನ್ರಮಾಪತಿರ್ಯಯಾಚ ಈಶ್ವರೋ ಮಣಿಂ ॥ ೨೦೩ ॥

ಅ॥ ಸರ್ವಸಮರ್ಥನಾದ ಲಕ್ಷ್ಮೀಪತಿಯಾದ ಶ್ರೀಕೃಷ್ಣನು ಯಾವಾಗಲೂ ವಿಷ್ಣುಭಕ್ತನಾದಾಗ್ಯೂ ಈ ಸತ್ರಾಜಿದ್ರಾಜನ ಹೃತ್ಸಂಬಂಧಿಯಾದ ಅತ್ಯಂತವಾಗಿ ಮಣಿಯಲ್ಲಿರತಕ್ಕ ಲೋಭವನ್ನು ಪ್ರಕಟೀಕರಿಸುವವನಾಗಿ ಮಣಿಯನ್ನು ಬೇಡಿದನು. ॥ ೨೦೩ ॥

ಮೂ ॥ ಸ ತಂ ನ ದತ್ತವಾಂಸ್ತತೋಽನುಚೋ ನಿಬಧ್ಯ ತಂ ಮಣಿಂ ।
ವನಂ ಗತಃ ಪ್ರಸೇನಕೋ ಮೃಗಾಧಿಪೇನ ಪಾತಿತಃ ॥ ೨೦೪ ॥

ಅ॥ ಆ ಸತ್ರಾಜಿದ್ರಾಜನು ಆ ಸ್ಯಮಂತಕಮಣಿಯನ್ನು (ಶ್ರೀಕೃಷ್ಣನಿಗೆ) ಕೊಡಲಿಲ್ಲ. ಅನಂತರದಲ್ಲಿ ತಮ್ಮನಾದ ಪ್ರಸೇನಕನು ಆ ಮಣಿಯನ್ನು (ಕುತ್ತಿಗೆಯಲ್ಲಿ) ಕಟ್ಟಿಕೊಂಡು ಅರಣ್ಯವನ್ನು ಕುರಿತು ಹೋದವನಾಗಿ ಸಿಂಹದಿಂದ ಸಂಹೃತನಾದನು. ॥ ೨೦೪ ॥

ಮೂ ॥ ತದಾ ಸ ಸತ್ರಜಿದ್ಭರಿಂ ಶಶಂಸ ಸೋದರಾಂತಕಂ ।
ಉಪಾಂಶು ವರ್ತ್ಮನಾ ತತೋ ಹರಿಃಸ ಯಾದವೋ ಯಯೌ ॥ ೨೦೫ ॥

ಅ ॥ ಆ ಕಾಲದಲ್ಲಿ ಆ ಸತ್ರಾಜಿದ್ರಾಜನು ಅನುಜನಾದ ಪ್ರಸೇನನ ವಧಾರಕನನ್ನು ಶ್ರೀಕೃಷ್ಣನನ್ನಾಗಿ ಏಕಾಂತಸ್ಥಳದಲ್ಲಿ ಅಥವಾ ಮೆಲ್ಲಗೆ ಹೇಳಿದನು. (ಅಂದರೆ ನನ್ನ ತಮ್ಮನು ಶ್ರೀಕೃಷ್ಣನಿಂದ ಸಂಹೃತನಾದನು ಎಂದು ಹೇಳಿದನು.) ಯದುಕುಲೋತ್ಪನ್ನನಾದ ಆ ಶ್ರೀಕೃಷ್ಣನು ಆ ಮೇಲೆ ಪ್ರಸೇನನು ಹೋದ ಮಾರ್ಗದಿಂದ ಹೋದನು. ॥ ೨೦೫ ॥

ಮೂ ॥ ವನೇ ಸ ಸಿಂಹಸೂದಿತಂ ಪದೈಃ ಪ್ರದರ್ಶ್ಯ ವೃಷ್ಣಿನಾಂ ।
ಪ್ರಸೇನಮೃಕ್ಷಪಾತಿತಂ ಸ ಸಿಂಹಮಪ್ಯದರ್ಶಯತ್ ॥ ೨೦೬ ॥

ಅ ॥ ಆ ಶ್ರೀಕೃಷ್ಣನು ಕಾಡಿನಲ್ಲಿ ಸಿಂಹ ಪ್ರಸೇನ ಪದಗಳಿಂದ(ಮರ್ದಿತವಾದ ಭೂಮಿಯನ್ನು ನೋಡಿ) ಸಿಂಹದಿಂದ ಸಂಹೃತನನ್ನಾಗಿ ಪ್ರಸೇನನನ್ನು (ನಿಶ್ಚಯಿಸಿ) ಸಿಂಹದಿಂದ ಸಂಹೃತನಾದ ಪ್ರಸೇನನನ್ನು ಯಾದವರಿಗೆ ತೋರಿಸಿ ಆ ಶ್ರೀಕೃಷ್ಣನೇ ಕರಡಿಯಿಂದ ಸಂಹೃತವಾದ ಸಿಂಹವನ್ನೂ ತೋರಿಸಿದನು. ॥ ೨೦೬ ॥

ಮೂ ॥ ತತೋ ನಿಧಾಯ ತಾನ್ ಬಿಲಂ ಸ ಜಾಂಬವತ್ಪರಿಗ್ರಹಂ ।
ವಿವೇಶ ತತ್ರ ಸಂಯುಗಂ ಬಭೂವ ತೇನ ಚೇಶಿತುಃ ॥ ೨೦೭ ॥

ಅ ॥ ಆಮೇಲೆ ಶ್ರೀಕೃಷ್ಣನು ಯಾದವರನ್ನು ಕಾಳ್ಗರಿಸಿ (ಬಿಲದಿಂದ ಹೊರಗೆ ಬಂದು) ಜಾಂಬವಂತನಿಗೆ ವಾಸಕ್ಕಾಗಿ ಸ್ವೀಕಾರವುಳ್ಳ ಅಥವಾ ಜಾಂಬವಂತನಿಗೆ ಆಶ್ರಯಂಭೂತವಾದ ಗುಹೆಯನ್ನು ಪ್ರವೇಶಮಾಡಿದನು. ಆ ಬಿಲದಲ್ಲಿ ಜಾಂಬವಂತನಿಂದ ಕೂಡಿಕೊಂಡು ಸರ್ವೇಶ್ವರನಾದ ಶ್ರೀಕೃಷ್ಣನಿಗೆ ಯುದ್ಧವು ಉಂಟಾಯಿತು. ॥ ೨೦೭ ॥

ಮೂ ॥ ಯುಯೋಧ ಮಂದಮೇವ ಸ ಪ್ರಭುಃ ಸ್ವಭಕ್ತ ಇತ್ಯಜಃ ।
ಚಕಾರ ಚೋಗ್ರಮಂತತಃ ಪ್ರಕಾಶಯನ್ ಸ್ವಮಸ್ಯ ಹಿ ॥ ೨೦೮ ॥

ಅ॥ ಉತ್ಪತ್ತಿರಹಿತನಾದ ಸರ್ವಸಮರ್ಥನಾದ ಶ್ರೀಕೃಷ್ಣನು (ಜಾಂಬವಂತನು) ತನ್ನ ಭಕ್ತನು ಈ ಅಭಿಪ್ರಾಯದಿಂದ ವ್ಯಥೆಯನು ಹೇಗೆ ಆಗುವುದಿಲ್ಲವೋ ಹಾಗೆ ಮೊದಲು ಯುದ್ಧ ಮಾಡಿದನು. ಯುದ್ಧ ಸಮಾಪ್ತಿ ಸಮಯದಲ್ಲಿ ಈ ಜಾಂಬವಂತನಿಗೆ ತನ್ನ ಸ್ವರೂಪವನ್ನು ಪ್ರಕಟೀಕರಿಸುವವನಾಗಿ ಕ್ರೂರವಾದ ಯುದ್ಧವನ್ನು ಮಾಡಿದನು. ॥ ೨೦೮ ॥

ಮೂ ॥ ಸ ಮುಷ್ಟಿಪಿಷ್ಟವಿಗ್ರಹೋ ನಿತಾಂತಮಾಪದಂ ಗತಃ ।
ಜಗಾಮ ಚೇತಸಾರಣಂ ರಘೂತ್ತಮಂ ನಿಜಂ ಪತಿಂ ॥ ೨೦೯ ॥

ಅ॥ ಮುಷ್ಟಿಗಳಿಂದ ಚೂರ್ಣೀಕೃತವಾದ ಶರೀರವುಳ್ಳ ಆ ಜಾಂಬವಂತನು ಅತ್ಯಂತವಾಗಿ ಪ್ರಾಣಸಂಶಯವನ್ನು ಹೊಂದಿದವನಾಗಿ ಮನಸ್ಸಿನಿಂದ ತನಗೆ ಸ್ವಾಮಿಯಾದ ರಾಮನನ್ನು ರಕ್ಷಕನನ್ನಾಗಿ ಹೊಂದಿದನು. ॥ ೨೦೯ ॥

ಮೂ ॥ ಸ್ಮೃತಿಂ ಗತೇ ತು ರಾಘವೇ ತದಾಕೃತಿಂ ಯದೂತ್ತಮೋ ।
ಸಮಸ್ತಭೇದವರ್ಜಿತಾಂ ಸವಿಸ್ಮಾಕ್ಷ್ಯ ಸೋಽಯಮಿತ್ಯವೈತ್ ॥ ೨೧೦ ॥

ಅ॥ (ಜಾಂಬವಂತನಿಂದ) ಶ್ರೀರಾಮನು ಸ್ಮೃಯನ್ನು ಹೊಂದುತ್ತಿರಲು (ಅಂದರೆ ಸ್ಮರಿಸ ಲ್ಪಡುತ್ತಿರಲು) ಗುಣ, ಕರ್ಮ, ಆಕೃತಿ ಮೊದಲಾದ ಸರ್ವ ಭೇದಗಳಿಂದ ವಿರಹಿತವಾದ ಶ್ರೀ ರಾಮನ ಸ್ವರೂಪವನ್ನು ಯದುಶ್ರೇಷ್ಠನಾದ ಶ್ರೀಕೃಷ್ಣನಲ್ಲಿ ನೋಡಿ ನನಗೆ ಮುಂಖ್ಯಾಧಿಪತಿಯಾದ ಶ್ರೀರಾಮನೇ ಈ ಕೃಷ್ಣನು ಹೀಗೆ ತಿಳಿದನು. ॥ ೨೧೦ ॥

ಮೂ ॥ ತತಃ ಕ್ಷ್ವಮಾಪಯನ್ ಸುತಾಂ ಪ್ರದಾಯ ರೋಹಿಣೀಂ ಶುಭಾಂ ।
ಮಣಿಂ ಚ ತಂ ನುನಾವ ಸ ಪ್ರಪನ್ನ ಆಶು ಪಾದಯೋಃ ॥ ೨೧೧ ॥

ಅ॥ ಶ್ರೀರಾಮನು ಕೃಷ್ಣನೇ ಎಂದು ಜ್ಞಾನವು ಬಂದ ಮೇಲೆ ಕ್ಷಮೆಯನ್ನು ಮಾಡಿಸಿದ (ಅಂದರೆ ತಾನು ಮಾಡಿದ ಅಪರಾಧವನ್ನು ಕ್ಷಮಿಸಬೇಕೆಂದು ಪ್ರಾರ್ಥಿಸಿಕೊಂಡ) ಶೀಘ್ರದಲ್ಲಿ ಪಾದಗಳಲ್ಲಿ ಬಿದ್ದ ಆ ಜಾಂಬವಂತನು ಹರಿಭಕ್ತ್ಯಾದಿ ಗುಣಗಳಿಂದ ಮಂಗಲಕರಳಾದ ರೋಹಿಣೀ ನಾಮಕಳಾದ ಮಂಗಳನ್ನು ಕೊಟ್ಟು ಆ ಸ್ಯಮಂತಕಾಖ್ಯ ಮಣಿಯನ್ನು ಕೊಟ್ಟು ಸ್ತೋತ್ರ ಮಾಡಿದನು. ॥ ೨೧೧ ॥

ಮೂ ॥ ವಿಧಾಯ ಚಕ್ರದಾರಿತಂ ಸುಜೀರ್ಣದೇಹಮಸ್ಯ ಸಃ ।
ಯುವಾನಮಾಶು ಕೇಶವಶ್ಚಕಾರ ವೇದನಾಂ ವಿನಾ ॥೨೧೨ ॥

ಅ॥ ಆ ಶ್ರೀಕೃಷ್ಣನು ಈ ಜಾಂಬವಂತನ ಅತಿಶಿಥಿಲವಾದ ಶರೀರವನ್ನು ವ್ಯಥೆಯನು ಹೊರತು ಚಕ್ರದಿಂದ ಶೀಳಲ್ಪಟ್ಟದ್ದನ್ನಾಗಿ ಮಾಡಿ ಶೀಘ್ರದಲ್ಲಿ ತರುಣನನ್ನಾಗಿ ಮಾಡಿದನು. ॥ ೨೧೨ ॥

ಮೂ ॥ ವಿಧಾಯ ಭಕ್ತವಾಂಛಿತಂ ಪ್ರಿಯಾಸಹಾಯ ಈಶ್ವರಃ ।
ಪ್ರಗೃಹ್ಯ ತಂ ಮಹಾಮಣಿಂ ವಿನಿರ್ಯಯೌ ಗುಹಾಮುಖಾತ್ ॥ ೨೧೩ ॥

ಅ॥ ಶ್ರೀಕೃಷ್ಣನು (ಮಂಗಳನ್ನು ಶ್ರೀಕೃಷ್ಣನಿಗೋಸ್ಕರ ಕೊಡುವೆನೆನ್ನುವ) ಜಾಂಬವಂತನ ಇಷ್ಟವನ್ನು ಮಾಡಿ ಜಾಂಬವತಿಯೇ ಸಹಾಯಕಳಾಗಿ ಉಳ್ಳವನಾಗಿ ಸ್ಯಮಂತಕವೆನ್ನುವ ಮಹಾ ಮಣಿಯನ್ನು ಹಿಡಿದುಕೊಂಡು ಗುಹಾಮುಖದ್ವಿಸೆಯಿಂದ ಹೊರಟನು. ॥ ೨೧೩ ॥

ಮೂ ॥ ಗುಹಾಂ ಪ್ರವಿಷ್ಟನಿಶ್ವರಂ ಬಹೂನ್ಯಹಾನ್ಯನಿರ್ಗತಂ ।
ಪ್ರತೀಕ್ಷ್ಯ ಯಾದವಾಸ್ತು ಯೇ ಗತಾ ಗೃಹಂ ತು ಜಹೃಷುಃ
(*ತದಾ ಹೃಷುಃ) ॥ ೨೧೪ ॥

ಅ॥ ಗುಹೆಯನ್ನು ಪ್ರವೇಶ ಮಾಡಿದ, ಹೊರಟು ಬಾರದೆ ಇರುವ ಶ್ರೀಕೃಷ್ಣನನ್ನು ಬಹು ದಿನಗಳಲ್ಲಿ (ಬರುವನೆಂದು) ನಿರೀಕ್ಷೆ ಮಾಡಿ ಮನೆಯನ್ನು ಕುರಿತು ಹೋದವರು ಯಾವ ಯಾದವರೋ (ಅವರಾದರೂ) ಶ್ರೀಕೃಷ್ಣನು ಬರುತ್ತಿರಲು ಸಂತೋಷವನ್ನು ಹೊಂದಿದರು. ॥ ೨೧೪ ॥

* ತದಾ ಹೃಷುಃ = ಎಂದು ವಾದಿರಾಜೀಯ ಪಾಠವು. ಹೃಷಿ ಹರ್ಷಣೆ ಎಂದು ಧಾತುವು

ಮೂ ॥ ಸಮಸ್ತವೃಷ್ಣಿಸನ್ನಿಧೌ ಯದೂತ್ತಮಃ ಸ್ಯಮಂತಕಂ ।
ದದೌ ಚ ಸತ್ರಜಿತ್ಕರೇ ಸ ವಿಚ್ಛನಿರ್ಬಭೂವ ಹ ॥ ೨೧೫ ॥

ಅ॥ ಶ್ರೀಕೃಷ್ಣನು ಎಲ್ಲಾ ಯಾದವರ ಸನ್ನಿಧಾನದಲ್ಲಿ ಸತ್ರಾಜಿದ್ರಾಜನ ಕೈಯಲ್ಲಿ ಸ್ಯಮಂತಕಮಣಿಯನ್ನು ಕೊಟ್ಟನು; ಆ ಸತ್ರಾಜಿದ್ರಾಜನು ಹೋಗಲ್ಪಟ್ಟ ಕಾಂತಿಯಂಳ್ಳವನಾದನು. ॥ ೨೧೫ ॥

ಮೂ ॥ ಸ ದುರ್ಯಶೋ ರಮಾಪತಾವನೂಚ್ಯ ವಿಥ್ಯಯಾ ತಪನ್ ।
ಸ್ವಪಾಪಹಾನಿಕಾಂಕ್ಷಯಾ ದದೌ ಸುತಾಂ ಜನಾರ್ದನೇ ॥ ೨೧೬ ॥

ಅ॥ ಆ ಸತ್ರಾಜಿದ್ರಾಜನು ಚೌರ್ಯರೂಪವಾದ ದುಷ್ಕೀರ್ತಿಯನ್ನು ಶ್ರೀಕೃಷ್ಣನಲ್ಲಿ ವಿಂಥ್ಯಾತ್ವವಚನದಿಂದ ಹೇಳಿ ಪಶ್ಚಾತ್ತಾಪ ಪಡುತ್ತಾ, ತನ್ನ ದೋಷದ ಪರಿಹಾರೇಚ್ಛೆಯಿಂದ ಶ್ರೀಕೃಷ್ಣನಿಗೋಸ್ಕರ ಮಂಗಳನ್ನು ಕೊಟ್ಟನು; ॥ ೨೧೬ ॥

ಮೂ ॥ ಮಣಿಂ ಚ ತಂ ಪ್ರದಾಯ ತಂ ನನಾಮ ಚ ಕ್ಷಮಾಪಯನ್ ।
ಮಣಿಂ ಪುನರ್ದದೌ ಹರಿರ್ಮುದೋದ ಸತ್ಯಭಾಮಯಾ ॥ ೨೧೭ ॥

ಅ॥ ಸತ್ರಾಜಿದ್ರಾಜನು ಆ ಸ್ಯಮಂತಕಮಣಿಯನ್ನು ಕೊಟ್ಟು ಆ ಕೃಷ್ಣನನ್ನು ಕ್ಷಮೆ ಹೊಂದಿಸಿಕೊಡುವವನಾಗಿ ನಮಸ್ಕರಿಸಿದನು. ಶ್ರೀಕೃಷ್ಣನು ಪುನಃ ಮಣಿಯನ್ನು ಕೊಟ್ಟನು; ಸತ್ಯಭಾಮೆಯಿಂದ ಸಂತೋಷವನ್ನು ಹೊಂದಿಕೊಂಡಿದ್ದನು. ॥ ೨೧೭ ॥

ಸತ್ಯಭಾಮೆಯು ಮೊದಲು ಯಾರೆಂದರೆ—

ಮೂ ॥ ರಮೈವ ಸಾ ಹಿ ಭೂರಿತಿ ದ್ವಿತೀಯಮೂರ್ತಿರುತ್ತಮಾ ।
ಬಭೂವ ಸತ್ರಜಿತ್ಸುತಾ ಸಮಸ್ತಲೋಕಸುಂದರೀ ॥ ೨೧೮ ॥

ಅ॥ ಆ ಸತ್ಯಭಾಮೆಯೂ ಕೂಡ ಲಕ್ಷ್ಮೀದೇವಿಯೇ. (ಶ್ರೀ, ಭೂ, ದುರ್ಗಾ ಎಂದು ಮೂರು ರೂಪಗಳುಳ್ಳ ಲಕ್ಷ್ಮೀದೇವಿಯು) ಎರಡನೇ ಮೂರ್ತಿಯು. ಭೂಃ ಎಂದು ಹೆಸರುಳ್ಳ ಯಾವ ರಮಾದೇವಿಯೋ ಅವಳೇ ಸತ್ರಾಜಿದ್ರಾಜನಿಗೆ ಮಗಳು ಆದಳು, ಅವಳು ಎಲ್ಲಾ ಲೋಕಗಳಲ್ಲಿಯೂ ಸುಂದರ ರೂಪವುಳ್ಳವಳು, ಉತ್ತಮಳು; ॥ ೨೧೮ ॥

ಮೂ ॥ ತತೋ ಹಿ ಸಾ ಚ ರುಕ್ಮಿಣೇ ಪ್ರಿಯೇ ಪ್ರಿಯಾಸು ತೇಽಧಿಕಂ ।
ಜನಾರ್ದನಸ್ಯ ತೇ ಹರೇಃ ಸದಾವಿಯೋಗಿನೀ ಯತಃ ॥ ೨೧೯ ॥

ಅ॥ ಯಾವ ಕಾರಣದಿಂದ ಸತ್ಯಭಾಮೆಯೂ ರುಗ್ಮಿಣಿಯೂ ಇಬ್ಬರೂ ಹೆಂಡಂದಿರು ಯಾವಾಗಲೂ ವಿಯೋಗವಿಲ್ಲದಿರುವ ಸಾಕ್ಷಾತ್ ಲಕ್ಷ್ಮಿಯೇ ಆಗಿರುತ್ತಾಳೋ, ಆದಕಾರಣ ಸತ್ಯಭಾಮಾ ರುಗ್ಮಿಣೀ ಇಬ್ಬರೂ ರಮಾಸ್ವರೂಪರಾದುದರಿಂದ ಸತ್ಯಭಾಮಾದೇವಿಯೂ ರುಗ್ಮಿಣಿಯೂ ಇವರಿಬ್ಬರೂ ದುಷ್ಟಸಂಹಾರಕನಾದ ಶ್ರೀಕೃಷ್ಣನ ಹೆಂಡಂದಿರ ಮಧ್ಯದಲ್ಲಿ ಅತ್ಯಧಿಕವಾಗಿ ಅನುಗ್ರಹ ಪಾತ್ರಭೂತರು. ॥ ೨೧೯ ॥

ಮೂ ॥ ಅವಾಪ ಸಾಂಬನಾಮಕಂ ಸುತಂ ಚ ರೋಹಿಣೀ ಹರೇಃ ।
ಚತುರ್ಮುಖಾಂಶಸಂಯುತಂ ಕುಮಾರವೇವ ಷಣ್ಮುಖಂ ॥ ೨೨೦ ॥

ಆ ॥ ಜಾಂಬವತಿಯಂ ಶ್ರೀಹರಿಯಂದ್ದೆಸೆಯಿಂದ (ಮೊದಲು) ಷಣ್ಮುಖನಾದ ಸ್ಕಂದನೇ ಆದ (ಈಗ) ಸಾಂಬನಾವಂಕನಾದ ಬ್ರಹ್ಮನ ಆವೇಶದಿಂದ ಕೂಡಿದ ವುಗನನ್ನು ಹೊಂದಿದಳು. ॥ ೨೨೦ ॥

ಮೂ ॥ ಇತಿ ಪ್ರಶಾಸತಿ ಪ್ರಭೌ ಜಗಜ್ಜನಾರ್ದನೇಽಖಿಲಂ ।
ಅಗಣ್ಯಸದ್ಗುಣಾರ್ಣವೇ ಕದಾಚಿದಾಯಯೌ ದ್ವಿಜಃ ॥ ೨೨೧ ॥

ಅ॥ ಪೂರ್ವೋಕ್ತ ಪ್ರಕಾರ ಅಪರಿಮಿತಗಳಾದ ನಿರ್ದುಷ್ಟಗಳಾದ ಗುಣಗಳಿಂದ ಸವುಂದ್ರ ದಂತಿರುವ ಸರ್ವಸಮರ್ಥನಾದ ಶ್ರೀಕೃಷ್ಣನು ಎಲ್ಲಾ ಜಗತ್ತನ್ನು ರಕ್ಷಿಸುತ್ತಿರಲು ಒಂದಾನೊಂದು ದಿನ ಒಬ್ಬ ಬ್ರಾಹ್ಮಣನು ಬಂದನು. ॥ ೨೨೧ ॥

ಮೂ ॥ ಜನಾರ್ದನಃ ಸ ನಾಮತೋ ರವೇಶಪಾದಸಂಶ್ರಯಃ ।
ಸ ಮಾನಿತಶ್ಚ ವಿಷ್ಣುನಾ ಪ್ರಣಮ್ಯ ವಾಕ್ಯಮಬ್ರವೀತ್ ॥ ೨೨೨ ॥

ಅ ॥ ಆ ಬ್ರಾಹ್ಮಣನು ನಾಮದಿಂದ ಜನಾರ್ದನನು. ಶ್ರೀಕೃಷ್ಣನ ಪಾದವೇ ವುಂಖ್ಯಾಶ್ರಯವಾಗಿ ಉಳ್ಳವನು. (ಅಂದರೆ ಸಾಕ್ಷಾತ್ ಹರಿಭಕ್ತನು, ಔಪಚಾರದಿಂದ ದೈತ್ಯಭಕ್ತನು.) ಶ್ರೀಕೃಷ್ಣನಿಂದ ಬಹುವಾನಿಸಿಕೊಳ್ಳಲ್ಪಟ್ಟ ಆ ಬ್ರಾಹ್ಮಣನು, ನವುಸ್ಕರಿಸಿ ವಾಕ್ಯವನ್ನು ಹೇಳಿದನು. ॥ ೨೨೨ ॥

ಮೂ ॥ ಕ್ವಮುಷ್ಯ ಮೋ ವಚಃ ಪ್ರಭೋ ಬ್ರವೀಮ್ಯತೀವ ಪಾತಕಂ ।
ಯತಃ ಸುಪಾಪದೂತಕಸ್ತತೋ ಹಿ ತಾದೃಶಂ ವಚಃ ॥ ೨೨೩ ॥

ಅ॥ ಎಲೋ ಪ್ರಭುವೇ ಅತ್ಯಂತವಾಗಿ ಪಾಪರೂಪವಾದ ಮಾತನ್ನು ಹೇಳುತ್ತೇನೆ ಕ್ಷವಿಸು ಎಂದು ಹೇಳಿದನು. ಯಾವ ಕಾರಣದಿಂದ ನಾನು ಅತ್ಯಂತ ಪಾಪಿಷ್ಠರಾದವರ ದೂತನೋ ಆದ ಕಾರಣ ವಚನವೂ ಕೂಡ ಪಾಪರೂಪವೇ. ॥ ೨೨೩ ॥

ಮೂ ॥ ನ ತೇಽಸ್ತ್ಯಗೋಚರಂ ಕ್ವಚಿತ್ತಥಾಪಿ ಚಾಜ್ಞಯಾ ವದೇ ।
ವದೇತಿ ಚೋದಿತೋಽಮುನಾ ದ್ವಿಜೋ ಜಗಾದ ಮಾಧವಂ ॥ ೨೨೪ ॥

ಅ॥ ನಿನಗೆ ಇಂದ್ರಿಯಂಗಳಿಗೆ ವಿಷಯವಾಗದಿರುವುದು ಎಲ್ಲಿಯೂ ಇಲ್ಲ. ಆದಾಗ್ಯೂ ಆ ನಿನ್ನ ಆಜ್ಞೆಯಿಂದ ಹೇಳುತ್ತೇನೆ ಕೃಷ್ಣನಿಂದ ಹೇಳು ಎಂದು ಪ್ರೇರಿತನಾದ ಬ್ರಾಹ್ಮಣನು ಶ್ರೀಕೃಷ್ಣನನ್ನು ಕುರಿತು ಹೇಳಿದನು. ॥ ೨೨೪ ॥

ಮೂ ॥ ಸುತೌ ಹಿ ಸಾಲ್ವಭೂಪತೇರ್ಬಭೂವತುಃ ಶಿವಾಶ್ರಯೌ ।
ಶಿವಪ್ರಸಾದಸಂಭವೌ ಪಿಶುನ್ಪಪೋಬಲೇನ ತೌ ॥ ೨೨೫ ॥

ಅ॥ ಸಾಲ್ವದೇಶಕ್ಕೆ ಅಧಿಪತಿಯಾದ ಬೃಹ್ಮದತ್ತನಿಗೆ ರುದ್ರನೇ ಆಶ್ರಯವಾಗಿ ಉಳ್ಳ ಇಬ್ಬರು ಮಕ್ಕಳು ಹುಟ್ಟಿದರು. ಆ ಹಂಸ ಡಿಭಿಕರು ತಂದೆಯ ತಪಸ್ಸಿನ ಬಲದಿಂದ ರುದ್ರನ ಪ್ರಸಾದದಿಂದ ಉತ್ಪತ್ತಿಯುಳ್ಳವರು. (ಅಂದರೆ ನಿನಗೆ ಬಲಿಷ್ಠರಾದ ಮಕ್ಕಳು ಆಗುವರು ಎನ್ನುವ ಅನುಗ್ರಹದಿಂದ ಹುಟ್ಟಿದವರು) ॥ ೨೨೫ ॥

ಮೂ ॥ ಅಜೇಯುತಾವುವಧ್ಯತಾಂ ಶಿವಾದ್ವರಂ ಸಮೂಪತುಃ ।
ಜರಾಸುತಸ್ಯ ಶಿಷ್ಯಕೌ ತಪೋಬಲೇನ ಕೇವಲಂ ॥ ೨೨೬ ॥
ಮಹೋದರಂ ಚ ಕುಂಡಧಾರಿಣಂ ಚ ಭೂತಕಾವುಭೌ ।
ತಥಾಜಿತಾವವಧ್ಯಕೌ ದಿದೇಶ ಶಂಕರಸ್ತಯೋಃ ॥ ೨೨೭ ॥

ಅ॥ ಕೇವಲವಾಗಿ ಜರಾಸಂಧನ ಶಿಷ್ಯರಾದ ಹಂಸ ಡಿಭಿಕರು ರುದ್ರನದೆಸೆಯಿಂದ ಇತರರಿಂದ ಗೆಲ್ಲಲ್ಪಡದಿರುವಿಕೆ, ಇತರರಿಂದ ಸಂಹರಿಸಿಕೊಳ್ಳಲ್ಪಡದಿರುವಿಕೆ ಎನ್ನುವ ವರವನ್ನೂ ಕೂಡ ಹೊಂದಿದರು. ಆ ಹಂಸ ಡಿಭಿಕರ ತಪಸ್ಸಿನ ಸಾಮರ್ಥ್ಯದಿಂದ (ಸಂತೋಷೀಕರಿಸಿಕೊಳ್ಳಲ್ಪಟ್ಟ) ರುದ್ರನು ಹಂಸ ಡಿಭಿಕರಂತೆ ಯಾರಿಂದಲೂ ಗೆಲ್ಲಲ್ಪಡದಿರುವ ಮಂತ್ರ ಸಂಹರಿಸಿಕೊಳ್ಳಲ್ಪಡದಿರುವ ಮಹೋದರನಾಮಕವಾದ ಮಂತ್ರ ಕುಂಡಧಾರಿನಾಮಕವಾದ ಎರಡು ಭೂತಗಳನ್ನು (ಹಂಸಡಿಬಿಕರ ಸಾಹಾಯ್ಯಕ್ಕಾಗಿ) ಅಪ್ಪಣೆಕೊಟ್ಟನು. ॥ ೨೨೬ ॥ ೨೨೭ ॥

ಮೂ ॥ ತಯೋಃ ಸಹಾಯ ಏವ ತೌ ವರಾಚ್ಛಿವಸ್ಯ ಭೂತಕೌ ।
ಅಜೇಯುತಾವುವಾಪತುರ್ನ ಚಾನ್ಯಥಾವುರಾವಪಿ ॥ ೨೨೮ ॥

ಅ॥ (ಅವಧ್ಯತ್ವರೂಪವಾದ ವರವಿಲ್ಲದೇನೇ ದೇವಯೋನಿಯಾದುದರಿಂದಲೇ ಸ್ವಾಭಾವಿಕವಾಗಿ) ಮರಣರಹಿತಗಳಾದಾಗ್ಯೂ ಆ ಭೂತಗಳು ಆ ಹಂಸ ಡಿಭಿಕರ ಸಹಾಯಕ್ಕಾಗಿಯೇ ರುದ್ರನ ವರದ್ದೆಸೆಯಿಂದ ಅಜೇಯತ್ವರೂಪವಾದ ವರವನ್ನು ಹೊಂದಿದರು ಶಿವನ ವರವಿಲ್ಲವಾದರೆ (ಸರ್ವಥಾ ಅಜೇಯರು) ಅಲ್ಲ. ॥ ೨೨೮ ॥

ಮೂ ॥ ಅಜೇಯುತಾವುವಧ್ಯತಾಮುವಾಪ್ಯ ತಾವುಭೌ ಶಿವಾತ್ ।
ಪಿತುಶ್ಚ ರಾಜಸೂಯುತಾಂ ಸವಿಚ್ಛತೌ ಮುದೋದ್ಧತೌ ॥ ೨೨೯ ॥

ಅ॥ ಆ ಹಂಸ ಡಿಭಿಕರು ಇಬ್ಬರೂ ರುದ್ರನದೆಸೆಯಿಂದ ಗೆಲ್ಲಲ್ಪಡದಿರುವಿಕೆಯನ್ನೂ ಸಂಹರಿಸಿಕೊಳ್ಳಲ್ಪಡದಿರುವಿಕೆಯನ್ನೂ ಹೊಂದಿ ತಂದೆಯಾದ ಬೃಹ್ಮದತ್ತನಿಗೆ ರಾಜಸೂಯಕರ್ತೃತ್ವವನ್ನು ಮುದದಿಂದ ದೃಪ್ತರಾಗಿ ಇಚ್ಛಿಸುತ್ತಾರೆ. ॥ ೨೨೯ ॥

ಹಾಗಾದರೆ ಜರಾಸಂಧನ ಜಯವು ಆಗದೆ ಹೋಗಬೇಕಾಗುವುದು ಎಂದರೆ—

ಮೂ ॥ ಜರಾಸುತೋ ಗುರುತ್ವತೋ ವಿರೋಧಮುತ್ರ ನೇಚ್ಛತಿ ।
ನೃಪಾಂಸ್ತು ದೇವಪಕ್ಷಣೋ ವಿಜತ್ಯ ಕರ್ತುಮಿಚ್ಛತಃ ॥ ೨೩೦ ॥

ಅ॥ ಜರಾಸಂಧನು (ಹಂಸಡಿಭಿಕರಿಗೆ) ಗುರುವಾದ ಪ್ರಯುಕ್ತ ಈ ರಾಜಸೂಯ ವಿಷಯದಲ್ಲಿ ವಿರೋಧ ಮಾಡಲಿಕ್ಕೆ ಇಚ್ಛಿಸುವುದಿಲ್ಲ. ದೇವತೆಗಳ ಪಕ್ಷದಲ್ಲಿರತಕ್ಕ ರಾಜರನ್ನೂ ದೇವತೆ

ಗಳ ಅವತಾರಭೂತರಾದವರನ್ನೂ ವಿಶೇಷವಾಗಿ ಗೆದ್ದು (ಅಸುರರನ್ನೂ ದೇವತೆಗಳನ್ನೂ ಸಾವಶಾನ್ಯವಾಗಿ ಗೆದ್ದು, ರಾಜಸೂಯಯಾಗವನ್ನು) ಮಾಡಲಿಕ್ಕೆ ಇಚ್ಛಿಸುತ್ತಾರೆ. ॥ ೨೩೦ ॥

ಮೂ ॥ ಸ್ವಯಂ ಹಿ ರಾಜಸೂಯತ್ರಾಂ ಜರಾಸುತೋ ನ ಮನ್ಯತೇ ।
ಯತೋ ಹಿ ವೈಷ್ಣವಂ ಕ್ರತುಂ ಕವಯೋಹುರೀಶ ವೈದಿಕಾಃ ॥ ೨೩೧ ॥

ಅ॥ ಜರಾಸಂಧನಂ ತಾನಂ ರಾಜಸೂಯಂಕರ್ತೃತ್ವವನ್ನು ಇಚ್ಛಿಸುವುದಿಲ್ಲ. ಎಲೋ ನಿಯಾಮಂಕನೇ ವೇದಜ್ಞರಂ ಆ ರಾಜಸೂಯಂಯಾಗವನ್ನು ಯಾವ ಕಾರಣದಿಂದ ವಿಷ್ಣುವೇ ದೇವತೆಯಾಗಿ ಉಳ್ಳದ್ದನ್ನಾಗಿ ಹೇಳುತ್ತಾರೋ. ॥ ೨೩೧ ॥

ಅವೈಷ್ಣವರಾದ ಹಂಸ ಡಿಭಕರಂ ಏಕೆ ವೈಷ್ಣವಯಾಗವನ್ನು ಇಚ್ಛಿಸುತ್ತಾರೆ ಎಂದರೆ—

ಮೂ ॥ ಇಮೌ ಪಿತುರ್ಯಶೋರ್ಥಿನೌ ಪರಾಭವಾಯ ತೇ ತಥಾ ।
ಸಮಿಚ್ಛತೋಽಚ್ಯುತ ಕ್ರತುಂ ಭವಂತಮೂಚತುಶ್ಚ ತೌ ॥ ೨೩೨ ॥

ಅ॥ ಈ ಹಂಸ ಡಿಭಕರಂ ತಂದೆಗೆ ಕೀರ್ತಿಯನ್ನು ಇಚ್ಛಿಸುವವರಾಗಿ ನಿನ್ನನ್ನ ತಿರಸ್ಕರಿಸುವುದಕ್ಕಾಗಿ ಶ್ರೀಕೃಷ್ಣನೇ ದೇವತೆಯಾಗಿ ಉಳ್ಳ ಯಾಗವನ್ನು ಇಚ್ಛಿಸುತ್ತಾರೆ. ಎಲೋ ಅಚ್ಯುತನೇ ಆ ಹಂಸ ಡಿಭಕರಂ ನಿಮ್ಮನ್ನು ಕುರಿತು ಹೇಳಿರುವರು. ॥ ೨೩೨ ॥

ಮೂ ॥ ಸಮುದ್ರಸಂಶ್ರಯೋ ಭವಾನ್ ಬಹೂನ್ ಪ್ರಗೃಹ್ಯ ರಾವಣಾನ್ ।
ಸುಭಾರಕಾನುಪೈಹಿ ನಾವಿತಿ ಕ್ಷ್ವಮಸ್ವ ಮೋ ವಚಃ ॥ ೨೩೩ ॥

ಅ॥ (ಯಾವ ಕಾರಣದಿಂದ) ನೀವು ಸಮುದ್ರವೇ ಆಶ್ರಯವಾಗಿ ಉಳ್ಳವರೋ, ಆದ ಕಾರಣ ಲವಣಸಮುದ್ರಸಂಬಂಧಿಗಳಾದ (ರತ್ನಾದಿಗಳ) ಬಹಳ ಭಾರ (೨೦ ತೊಲೆ) ಗಳನ್ನು ಹಿಡಿದುಕೊಂಡು ನಮ್ಮನ್ನು ಹೊಂದಿ, (ಎಂದು ಹೇಳಿರುವರು) ಎನ್ನುವ ನನ್ನ ಮಾತನ್ನು ಕ್ಷಮಿಸಿಕೋ. ॥ ೨೩೩ ॥

ಮೂ ॥ ಉದೀರ್ಯ ತಂ ನನಾಮ ಸಃ ಪ್ರಚಾಹಸನ್ ಸ್ಮ ಯಾದವಾಃ ।
ಹರಿಸ್ತು ಸಾತ್ಯಕಿಂ ವಚೋ ಜಗಾದ ಮೇಘನಿಃಸ್ವನಃ ॥ ೨೩೪ ॥

ಅ॥ ಆ ಬ್ರಾಹ್ಮಣನು ಹೀಗೆ ಹೇಳಿ ಆ ಕೃಷ್ಣನನ್ನು ನಮಸ್ಕರಿಸಿದನು. ಯಾದವರಾದರೂ ನಿಗಾಡಿದರು, ಮೇಘದ ಧ್ವನಿಯಂತೆ ಧ್ವನಿಯುಳ್ಳ ಶ್ರೀಕೃಷ್ಣನಾದರೂ ಸಾತ್ಯಕಿಯನ್ನು ಕುರಿತು ಮಾತನ್ನು ಹೇಳಿದನು. ॥ ೨೩೪ ॥

ಮೂ ॥ ಪ್ರಯಾಹಿ ಸಾತ್ಯಕೇ ವಚೋ ಬ್ರವೀಹಿ ಮೇ ನೃಪಾಧವೌ ।
ಸಮೇತ್ಯ ವಾಂ ವರಾಯುಧೈಃ ಕರಂ ದದಾಮ್ಯಸಂಶಯಂ ॥ ೨೩೫ ॥

ಅ॥ ಎಲೋ ಸಾತ್ಯಕಿಯೇ ಹೋಗು. ರಾಜರಲ್ಲಿ ಅತಿಕುತ್ಸಿತರಾದ ಹಂಸ ಡಿಭಕರನ್ನು ಕುರಿತು ನನ್ನ ಮಾತನ್ನು ಹೇಳು. ನಿಮ್ಮಿಬ್ಬರನ್ನು ಹೊಂದಿ ಉತ್ಕೃಷ್ಟ ಆಯುಧಗಳಿಂದ ವಿಸ್ಸಂಶಯವಾಗಿ ಕಪ್ಪವನ್ನು ಕೊಡುತ್ತೇನೆ. ॥ ೨೩೫ ॥

ಮೂ ॥ ಉಪೈತವೂಶು ಸಂಯುಗಾರ್ಥಿನೌ ಚ ಪುಷ್ಕರಂ ಪ್ರತಿ ।
ಇತೀರಿತಃ ಶಿನೇಃ ಸುತೋ ಜಗಾಮ ವಿಪ್ರಸಂಯುತಃ ॥ ೨೩೬ ॥

ಅ॥ ಯುದ್ಧಾರ್ಥಿಗಳಾದ ನೀವಿಬ್ಬರೂ ಪುಷ್ಕರಾಖ್ಯ ತೀರ್ಥವನ್ನು ಕುರಿತು ಶೀಘ್ರದಲ್ಲಿ ಬನ್ನಿರಿ. (ಹೀಗೆ ಹೇಳಿದನು.) ಹೀಗೆ ಹೇಳಿಸಿಕೊಳ್ಳಲ್ಪಟ್ಟ ಶಿನಿಯ ವಂಗನಾದ ಸಾತ್ಯಕಿಯು ಬ್ರಾಹ್ಮಣನಿಂದ ಕೂಡಿದವನಾಗಿ ಹೋದನು. ॥ ೨೩೬ ॥

ಮೂ ॥ ಉಪೇತ್ಯ ತೌ ಹರೇರ್ವಚೋ ಜಗಾದ ಸಾತ್ಯಕಿರ್ಬಲೀ ।
ವಿಧಾಯ ತೌ ತೃಣೋಪಮೌ ಗಿರಾ ಜಗಾಮ ಕೇಶವಂ ॥ ೨೩೭ ॥

ಅ॥ ಬಲಿಷ್ಠನಾದ ಸಾತ್ಯಕಿಯು ಹಂಸ ಡಿಭಿಕರನ್ನು ಹೊಂದಿ ಶ್ರೀಕೃಷ್ಣನ ವಶಾತನ್ನು ಹೇಳಿದನು. ಸಾತ್ಯಕಿಯು ಹಂಸ ಡಿಭಿಕರನ್ನು ವಶಾತಿನಿಂದ ತೃಣದಿಂದ ಸದೃಶರನ್ನಾಗಿ ವಶಾಡಿ ಶ್ರೀಕೃಷ್ಣನನ್ನು ಹೊಂದಿದನು. ॥ ೨೩೭ ॥

ಮೂ ॥ ತತಃ ಪುರೈವ ತಾವುಭೌ ದ್ವಿಜಂ ಹರಸ್ವರೂಪಿಣಂ ।
ಸದುಃಖವಾಸನಾಮಕಂ ಪ್ರಚಕ್ರತುಸ್ತೃಣೋಪಮಂ ॥ ೨೩೮ ॥

ಅ॥ ಶ್ರೀಕೃಷ್ಣನ ಸವಿೂಪಕ್ಕೆ ದೂತನನ್ನು ಕಳುಹಿಸುವುದಕ್ಕಿಂತ ಮೊದಲು ಆ ಹಂಸ ಡಿಭಿಕರೇ ರುದ್ರಾವತಾರನಾದ (ದುರಶೋಭನದುಃಖಿಯೇಃ ಎನ್ನುವ ವಚನದ್ದೆಸೆಯಿಂದ,) ಸು=ಶೋಭನವಾದ, ದುಃಖಿವಾಚಕವಾದ ದುರ್ ಶಬ್ದವೇ ಉಪಪದವಾಗಿ ಉಳ್ಳ ವಾಸ ಎಂದು ಹೆಸರುಳ್ಳವನು (ಅಂದರೆ ದುರ್ವಾಸಾ ಎಂದು ಹೆಸರುಳ್ಳ,) ಬ್ರಾಹ್ಮಣನನ್ನು ತೃಣದಿಂದ ಸದೃಶನನ್ನಾಗಿ ಮಾಡಿದರು. ॥ ೨೩೮ ॥

ತೃಣೋಪಮಂ ಎಂದು ಹೇಳಿದ್ದನ್ನು ವಿಶದೀಕರಿಸುತ್ತಾರೆ—

ಮೂ ॥ ದಶತ್ರಿಕೈಃ ಶತೈರ್ವೃತೋ ಯತೀಶ್ವರೈಃ ಸ ಸರ್ವವಿತ್ ।
ವಿಪಾಟಿತಾತ್ಮಕೌಪಿನಾದಿಸರ್ವಮಾತ್ರಕೋಽಭವತ್ ॥ ೨೩೯ ॥

ಅ॥ (ಹತ್ರಿವೂರ್ಲಿ ವೂವತ್ರಿ) ವೂವತ್ರಿ ನೂರು. (ಅಂದರೆ ಮೂರು ಸಹಸ್ರ (೩೦೦೦) ಸಂಖ್ಯಾಕರಾದ ಯತಿಶ್ರೇಷ್ಠರಾದ ಪರಮಹಂಸರಿಂದ ಯುಕ್ತನಾದ ಸರ್ವಜ್ಞನಾದ ಆ ದುರ್ವಾಸ ಋಷಿಯು ತೀಳಲ್ಪಟ್ಟ ತನ್ನ ಕೌಪೀನವೇ ಮೊದಲಾದ ದಂಡ ಕಮಂಡಲ್ವಾದಿ ರೂಪವಾದ ಸನ್ನಾಹಗಳುಳ್ಳವನಾದನು.

ವಿಶೇಷಾಂಶ—ಗುಹ್ಯೇಂದ್ರಿಯ ವಿಷಯದಲ್ಲಿ ಆಚ್ಛಾದನವನ್ನು ಹೊಂದಿಸಿಕೊಡತಕ್ಕದು ಕುಪಿನವು. ಕುಪಿನದ ಸಂಬಂಧಿಯಾದುದು ಕೌಪೀನವು. ॥ ೨೩೯ ॥

ದುರ್ವಾಸಋಷಿಯು ಅವರಿಗೆ ಏಕೆ ಶಾಪ ಕೊಡಲಿಲ್ಲವೆಂದರೆ—

ಮೂ ॥ ವರಾತ್ ಸ್ವಸಂಭವಾದಸೌ ನ ಶಾಪಶಕ್ತಿಮಾನಭೂತ್ ।
ತತಃ ಸಮುಸ್ತಭಂಜನೋರುಶಕ್ತಿಮಾಪ ಕೇಶವಂ ॥ ೨೪೦ ॥

ಅ॥ ಈ ದುರ್ವಾಸಋಷಿಯು ರುದ್ರಸ್ವರೂಪಿಯಾದ ತನ್ನಿಂದ ಹುಟ್ಟಿದ ಅವಧ್ಯತ್ವ ರೂಪವಾದ ವರದಾನ ನಿಮಿತ್ತದಿಂದ ಶಾಪವನ್ನು ಕೊಡುವ ವಿಷಯದಲ್ಲಿ ಸಾಮರ್ಥ್ಯವುಳ್ಳವನು ಆಗಲಿಲ್ಲ. ಆ ಕಾರಣದಿಂದ ಎಲ್ಲರನ್ನು ನಾಶಪಡಿಸುವ ವಿಷಯದಲ್ಲಿ ಉತ್ಕೃಷ್ಟವಾದ ಸಾಮರ್ಥ್ಯವುಳ್ಳ ಕೇಶವನನ್ನು ಹೊಂದಿದನು. ॥ ೨೪೦ ॥

ಮೂ ॥ ಸ ತಾನ್ ಸಮುಚ್ಯ ಮಾಧವಃ ಪ್ರದಾಯ ಚೋರುಮಾತ್ರಕಾಃ ।
ಯಯೌ ಚ ತೈಃ ಸಮನ್ವಿತೋ ವಧಾಯ ಸಾಲ್ವಪುತ್ರಯೋಃ ॥ ೨೪೧ ॥

ಅ॥ ಆ ಶ್ರೀಕೃಷ್ಣನು ಆ ಯತೀಶ್ವರರನ್ನು ಚೆನ್ನಾಗಿ ಪೂಜಿಸಿ ಉತ್ತಮಾಂಗಳಾದ ದಂಡ ಕಮಂಡಲು ಮೊದಲಾದ ಸನ್ನಾಹಗಳನ್ನು ಕೊಟ್ಟು ಸಾಲ್ವರಾಜನ ಮಕ್ಕಳಾದ ಹಂಸ ಡಿಭಿಕರ ಸಂಹಾರಕ್ಕಾಗಿ ಆ ಯತಿಶ್ರೇಷ್ಠರಿಂದ ಕೂಡಿದವನಾಗಿಯೇ ಹೋದನು. ॥ ೨೪೧ ॥

ಮೂ ॥ ತಮುತ್ರಿಜಂ ಹರಾತ್ಮಕಂ ಯತೋ ಹಿ ವೇದ ಮಾಗಧಃ ।
ತತೋಽತ್ಯಜತ್ ಸ್ವಶಿಷ್ಯಕೌ ನಿಶಮ್ಯ ತತ್ಪ್ರತೀಪಕೌ ॥ ೨೪೨ ॥

ಅ॥ ಜರಾಸಂಧನು ರುದ್ರಾವತಾರನಾದ ಅತ್ರಿಋಷಿಯ ಮಗನಾದ ಆ ದುರ್ವಾಸ ಋಷಿಯನ್ನು ಯಾವ ಕಾರಣದಿಂದ ನಿಶ್ಚಯವಾಗಿಯೂ ತಿಳಿದಿರುತ್ತಾನೋ, ಆದಕಾರಣ ತನ್ನ ಶಿಷ್ಯರಾದ ಹಂಸ ಡಿಭಿಕರನ್ನು ಆ ದುರ್ವಾಸ ಋಷಿಗೆ ದ್ವೇಷಿಗಳನ್ನಾಗಿ ಕೇಳಿ ಬಿಟ್ಟಿದ್ದನು ॥ ೨೪೨ ॥

ಮೂ ॥ ಹರೌ ತು ಪುಷ್ಕರಂ ಗತೇ ಮುನೀಶ್ವರೈಃ ಸಮನ್ವಿತೇ ।
ಸಮಾಯತುಶ್ಚ ತಾವುಭಾವಥಾತ್ರ ಹಂಸಡೀಭಿಕೌ ॥ ೨೪೩ ॥

ಅ॥ ಯತಿಶ್ರೇಷ್ಠರಿಂದ ಕೂಡಿದ ಶ್ರೀಕೃಷ್ಣನಾದರೂ ಪುಷ್ಕರತೀರ್ಥಕ್ಕೆ ಹೋಗುತ್ತಿರಲು, ಆವಾಗಲೆ ಈ ಪುಷ್ಕರತೀರ್ಥದಲ್ಲಿ ಆ ಹಂಸ ಡಿಭಿಕರು ಇಬ್ಬರೂ ಬಂದರು.

ವಿಶೇಷಾಂಶ—ಅಪಿ ಮಾಷಂ ಮುಷಂ ಕುರ್ಯಾಚ್ಛಂದೋಭಂಗಂ ನ ಕಾರಯೇತ್ ಎನ್ನುವ ವಚನದ್ದೆಸೆಯಿಂದ ಡಿಭಿಕನೇ ದೀಭಿಕನು. ಇನ್ನು ಮುಂದೆ ಅವನ ನಾಮಧೇಯಕ್ಕೂ ತಾತವ್ಯ ಬರುವುದು ಎಂದು ಸೂಚಿಸುವುದಕ್ಕಾಗಿ ಡಿಭಿಕ ಎನ್ನುವ ನಾಮಧೇಯಕ್ಕೇನೇ ವಿಕಾರವನ್ನು ಮಾಡಿರುವರು. ॥ ೨೪೩ ॥

ಮೂ ॥ ಸ ಬ್ರಹ್ಮದತ್ತನಾಮಕೋಽತ್ರ ತತ್ಪಿತಾಪ್ಯುಪಾಯಯೌ ।
ಸಮಾಗತೌ ಚ ಭೂತಕೌ ಶಿವಸ್ಯ ಯೌ ಪುರಸ್ಸರೌ ॥ ೨೪೪ ॥

ಅ॥ ಈ ಪುಷ್ಕರತೀರ್ಥದಲ್ಲಿ ಹಂಸ ಡಿಭಿಕರ ತಂದೆಯಾದ ಪ್ರಸಿದ್ಧನಾದ ಬ್ರಹ್ಮದತ್ತನೆಂದು ಹೆಸರುಳ್ಳವನೂ ಕೂಡ ಬಂದನು, ಶ್ರೀಮಹಾದೇವನ ಮುಂದೆ ಹೋಗತಕ್ಕವುಗಳು ಯಾವ ಭೂತಗಳೋ ಅವುಗಳೂ ಕೂಡ ಬಂದವು,

ವಿಶೇಷಾಂಶ—ಬ್ರಹ್ಮದತ್ತನಿಗೆ ಸಾಲ್ವನು ಜ್ಯೇಷ್ಠ ಹೆಂಡತಿಯ ಮಗನು. ಹಂಸ ಡಿಭಿಕರಾದರೂ ಚಿಕ್ಕ ಹೆಂಡತಿಯ ಮಕ್ಕಳು, ಜ್ಯೇಷ್ಠನಾದ ಸಾಲ್ವನಿಂದ ರಾಜ್ಯವನ್ನು ವಿಭಾಗಮಾಡಿ ಕೊಂಡಿರುವರು. ಜ್ಯೇಷ್ಠನಾದ ಸೌಭಾಧಿಪತಿಗೆ ಸಾಲ್ವ ದೇಶಾಧಿಪತ್ಯವೇ ನ್ಯಾಯಪ್ರಾಪ್ತವಾಗಿ

ಬಂದಿದೆ. ಆದಕಾರಣ ಅವನಿಗೆ ಸಾಲ್ವದೇಶಾಧಿಪತ್ಯವಿಲ್ಲದಿರುವುದರಿಂದ ಸಾಲ್ವರಾಜನೆಂದೂ ಹೆಸರೂ, ಹಂಸ ಡಿಭಿಕರಿಗಾದರೂ ಸಾಲ್ವದೇಶದ ಆಧಿಪತ್ಯವಿಲ್ಲದಿರುವುದರಿಂದ ಸಾಲ್ವರಾಜರೆಂದೂ ಹೆಸರೂ ಇಲ್ಲ. ॥ ೨೪೪ ॥

ಮೂ ॥ ವಿಚಕ್ರನಾಮಕೋಽಸುರಃ ಪುರಾ ವಿರಿಂಚತೋ ವರಂ ।
ಅವಧ್ಯತಾಮಜೇಯತಾಮವಾಪ್ಯ ಬಾಧತೇ ಸುರಾನ್ ॥ ೨೪೫ ॥

ಅ॥ ವಿಚಕ್ರನೆಂದೂ ಹೆಸರುಳ್ಳ ಅಸುರನೂ ಮೊದಲು ಬ್ರಹ್ಮನದೆಸೆಯಿಂದ ವಧ್ಯತ್ವಾಭಾವ ರೂಪವಾದ ಮತ್ತು ಜೇಯತ್ವಾಭಾವರೂಪವಾದ ವರವನ್ನು ಹೊಂದಿ ದೇವತೆಗಳನ್ನು ಬಾಧಿಸುತ್ತಾನೆ. ॥ ೨೪೫ ॥

ಮೂ ॥ ಸ ಚಾಭವತ್ಸಖೇತಿ ಸಖಾ ಸಹಾಯಕಾವ್ಯಯಾಗಮತ್ ।
ಹಿಡಿಂಬರಾಕ್ಷಸೋಽಪಿ ಯಃ ಪುರಾಪ ಶಂಕರಾದ್ವರಂ ॥ ೨೪೬ ॥
ನ ಜೇಯಸೇ ನ ವಧ್ಯಸೇ ಕುತಶ್ಚನೇತಿ ತೋಷಿತಾತ್ ।
ಸ ಚೈತಯೋಃ ಸಖಾಭವತ್ ಸಮಾಜಗಾಮ ತತ್ರ ಚ ॥ ೨೪೭ ॥

ಅ॥ ಆ ವಿಚಕ್ರನಾಮಕ ರಾಕ್ಷಸನಾದವನೂ ಕೂಡ ಹಂಸ ಡಿಭಿಕರಿಗೆ ಮಿತ್ರನಾಗಿ ಅವರಿಗೆ ಸಹಾಯವನ್ನು ಮಾಡಬೇಕೆನ್ನುವ ಇಚ್ಛೆಯಿಂದ ಬಂದನು. ಯಾವ ಹಿಡಿಂಬನಾಮಕ ರಾಕ್ಷಸನಾದರೂ ಮೊದಲು ರುದ್ರನಿಂದ ವರವನ್ನು ಹೊಂದಿರುವನೋ, ಅವನು ತಪಸ್ಸಿನಿಂದ ಸಂತೋಷಪಡಿಸಿದ್ದರಿಂದ ಯಾರಿಗೂ ಜೇಯನು ಆಗುವುದಿಲ್ಲ. ವಧ್ಯನೂ ಆಗುವುದಿಲ್ಲ. (ಅಂದರೆ ಯಾರೊಬ್ಬನೂ ನಿನ್ನನ್ನು ಗೆಲ್ಲುವವರೂ ಇಲ್ಲ, ಸಂಹರಿಸುವವರೂ ಇಲ್ಲ, ಎಂದು ರುದ್ರನದೆಸೆಯಿಂದ ವರವನ್ನು ಹೊಂದಿದನು.) ಆ ರಾಕ್ಷಸನಾದರೂ ಹಂಸ ಡಿಭಿಕರಿಗೆ ಸಖಿಯಾಗಿ ಇದ್ದನು. ಆ ಹಿಡಿಂಬರಾಕ್ಷಸನೂ ಕೂಡ ಅಲ್ಲಿಗೆ ಬಂದನು. ॥ ೨೪೬ ॥ ೨೪೭ ॥

ಮೂ ॥ ಅಕ್ಷೌಹಿಣೀಡಶಾತ್ಮಕಂ ಬಲಂ ತಯೋರ್ಬಭೂವ ಹ ।
ವಿಚಕ್ರಗಂ ಷಡಾತ್ಮಕಂ ತಥೈಕವೇವ ರಾಕ್ಷಸಂ ॥ ೨೪೮ ॥

ಅ॥ ಹಂಸ ಡಿಭಿಕರಿಗೆ ಹತ್ತು (೧೦) ಅಕ್ಷೌಹಿಣೀ ಸಂಖ್ಯಾರೂಪವಾದ ಸೈನ್ಯವು ಇರುತ್ತಿತ್ತು. ವಿಚಕ್ರನಿಗೆ ಇರತಕ್ಕ ಸೈನ್ಯವು ಆರು ಅಕ್ಷೌಹಿಣ್ಯಾತ್ಮಕವಾದುದು. ಹಾಗೆಯೇ ಹಿಡಿಂಬಾಖ್ಯ ರಾಕ್ಷಸ ಸಂಬಂಧಿಯಾದುದು ಒಂದು ಅಕ್ಷೌಹಿಣೀ ಸೈನ್ಯ ರೂಪವಾದುದು. ॥ ೨೪೮ ॥

ಮೂ ॥ ದ್ವಿರಷ್ಟಸೇನಯಾ ಯುತೌ ಸಹೈಕಯೈವ ತೌ ನೃಪೌ ।
ಸವಿಷಾಯತುರ್ಯುಧೇ ಹರಿಂ ಹರಿಶ್ಚ ತೌ ಸಸಾರ ಹ ॥ ೨೪೯ ॥

ಅ॥ ಒಂದು ಅಕ್ಷೌಹಿಣಿಯಿಂದ ಕೂಡಿದ (ಎರಡೆಂಟ್ಲ ಹದಿನಾರು) ಹದಿನಾರು ಅಕ್ಷೌಹಿಣೀ ಸೈನ್ಯದಿಂದ ಕೂಡಿರುವ (ಅಂದರೆ ೧೭ ಅಕ್ಷೌಹಿಣಿಯಿಂದ ಕೂಡಿರುವ) ಆ ಹಂಸ ಡಿಭಿಕರಲ್ಲಿ ಯಂದ್ಧಕ್ಕಾಗಿ ಶ್ರೀಕೃಷ್ಣನನ್ನು ಹೊರಟುಹೋದರು. ಶ್ರೀಕೃಷ್ಣನಾದರೂ ಆ ಹಂಸ ಡಿಭಿಕರನ್ನು ಹೊಂದಿದನು. ॥ ೨೪೯ ॥

ಮೂ ॥ ಅಥ ದ್ವಯೋರ್ದ್ವಯೋರಭೂದ್ರಣೋ ಭಯಾನಕೋ ಮಹಾನ್
ಹರಿರ್ವಿಚಕ್ರಮೇಯಿವಾತ್ ಬಲಶ್ಚ ಹಂಸಮುದ್ಧತಂ ॥ ೨೫೦ ॥

ಅ॥ ಆಮೇಲೆ ಭಯಾನಕವಾದ ಹಂಟ್ಟಿಸತಕ್ಕ ಮಹತ್ತಾದ ಯುದ್ಧವು ಇಬ್ಬರು ಇಬ್ಬರಿಗೆ ಆಯಿತು. (ಅಂದರೆ ದ್ವಂದ್ವಯುದ್ಧವಾಯಿತು) ಶ್ರೀಕೃಷ್ಣನು ವಿಚಕ್ರನನ್ನು ಹೊಂದಿದನು, ಬಲರಾಮನು ದೃಪ್ತನಾದ ಹಂಸಾಸುರನನ್ನು ಹೊಂದಿದನು. ॥ ೨೫೦ ॥

ಮೂ ॥ ತದಾಸ್ಯ ಚಾನುಜಂ ಯುಯುಧೌ ಶಿನಿಪ್ರವೀರ ಆಯುಧೀ ।
ಗದಶ್ಚ ನಾಮತೋಽನುಜೋ ಹರೇಃ ಸ ರೋಹಿಣೀಸುತಃ ॥ ೨೫೧ ॥

ಅ॥ ಸಾತ್ಯಕಿಯು ಆಯುಧವುಳ್ಳವನಾಗಿ ಆಗ ಹಂಸಾಸುರನ ತಮ್ಮನಾದ ಡಿಭಿಕನನ್ನು ಹೊಂದಿದನು. ನಾಮದಿಂದ ಗದನೆನ್ನುವವನು, ಯಾವನು ಶ್ರೀಕೃಷ್ಣನ ತಮ್ಮನೋ ಅವನು ವಸುದೇವನ ಹೆಂಡತಿಯಾದ ರೋಹಿಣಿಯ ಮಗನು. ॥ ೨೫೧ ॥

ಮೂ ॥ ಪುರಾ ಸ ಚಂಡಕೋ ಗಣೋ ಹರೇರ್ನಿವೇದಿತಾಶನಃ ।
ಸಮಾಹ್ವಯದ್ರಣಾಯ ವೈ ತಯೋಃ ಸ ತಾತವೋವ ಹಿ ॥ ೨೫೨ ॥

ಅ॥ ಮೊದಲು ಆ ಗದನು (ಸಂಘಾತೇ ಪ್ರಥಮೋ ಗಣಃ ಎನ್ನುವ ವಚನದ್ವೆಸೆಯಿಂದ ಚಂಡ ಪ್ರಚಂಡ ಜಯ ವಿಜಯ ಮೊದಲಾದ ದ್ವಾರಪಾಲಕರಲ್ಲಿ ಪ್ರಥಮದಲ್ಲಿ) ಎಣಿಕೆಮಾಡಲ್ಪಡತಕ್ಕವನು. ಚಂಡನಾಮಕನು, ಶ್ರೀಹರಿಯ (ಪಾರ್ಷದನು) (ಕೆಲವು ವೇಳೆ ವೈಕುಂಠ ನಗರದ್ದೆಸೆಯಿಂದ ಹೊರಗೆ ಹೋದಾಗ ಕ್ರೀಡೆಯಿಂದ ಭೋಜನವನ್ನು ಇಟ್ಟಿಪತಕ್ಕ) ಶ್ರೀಹರಿಗೆ ಸಮರ್ಪಿತವಾದ ತನ್ನಿಂದ ಸಂಗೃಹೀತವಾದ ದಧ್ಯೋದನವುಳ್ಳವನು, ಆ ಗದನು ಹಂಸ ಡಿಭಿಕರಿಗೆ ತಂದೆಯಾದ ಬ್ರಹ್ಮದತ್ತನನ್ನು ಯುದ್ಧಕ್ಕೋಸ್ಕರವೇ ಕರೆದನು. ॥ ೨೫೨ ॥

ಮೂ ॥ ಅಕ್ಷೌಹಿಣೀತ್ರಯಾನ್ವಿತಾಃ ಸಮಸ್ತಯಾದವಾಸ್ತದಾ ।
ತ್ರಿಲೋಚನಾನುಗೌ ಚ ತೌ ನ್ಯವಾರಯನ್ ಸ ರಾಕ್ಷಸೌ ॥ ೨೫೩ ॥

ಅ॥ ಮೂರು ಅಕ್ಷೌಹಿಣೀ ಸಂಖ್ಯೆಯುಳ್ಳ ತನ್ನ ಬಲದಿಂದ ಕೂಡಿರುವ ಎಲ್ಲಾ ಯಾದವರೂ ದ್ವಂದ್ವಯುದ್ಧದ ಸಮಯದಲ್ಲಿ, ಹಿಡಿಂಬಾಸುರನಿಂದ ಕೂಡಿರುವ ರುದ್ರನ ಭೃತ್ಯರಾದ ಆ ಭೂತಗಳನ್ನು ತಡೆದರು. ॥ ೨೫೩ ॥

ಮೂ ॥ ಹರಿರ್ವಿಚಕ್ರಮೋಜಸಾ ಮಹಾಸ್ತ್ರಶಸ್ತ್ರವರ್ಷಿಣಂ ।
ವಿವಾಹನಂ ನಿರಾಯುಧಂ ಕ್ಷಣಾಚ್ಚಕಾರ ಸಾಯಕೈಃ ॥ ೨೫೪ ॥

ಅ॥ ಶ್ರೀಕೃಷ್ಣನು ಬಲದಿಂದ ಮಹತ್ತಾದ ಅಸ್ತ್ರಗಳನ್ನೂ ಶಸ್ತ್ರಗಳನ್ನೂ ಸುರಿಸುವ ವಿಚಕ್ರನನ್ನು ಕ್ಷಣಮಾತ್ರದಿಂದ ವಾಹನರಹಿತನನ್ನಾಗಿಯೂ ಆಯುಧರಹಿತನನ್ನಾಗಿಯೂ ಬಾಣಗಳಿಂದ ಮಾಡಿದನು. ॥ ೨೫೪ ॥

ಮೂ ॥ ಪುನಶ್ಚ ಪಾದಪಾನ್ ಗಿರೀನ್ ಪ್ರಮುಂಚತೋಽರಿಣಾರಿಹಾ ।
ಶಿರೋ ಜಹಾರ ದೇವತಾ ವಿನೇದುರತ್ರ ಹರ್ಷಿತಾಃ ॥ ೨೫೫ ॥

ಅ॥ ಶತ್ರುಸಂಹಾರಕನಾದ ಶ್ರೀಕೃಷ್ಣನು ಮತ್ತು ಕೂಡ ವೃಕ್ಷಗಳನ್ನೂ ಪರ್ವತಗಳನ್ನೂ ವರ್ಷಿಸತಕ್ಕ ವಿಚಕ್ರನ ಶಿರಸ್ಸನ್ನು ಸುದರ್ಶನದಿಂದ ಛೇದಿಸಿದನು. ಈ ಸಮಯದಲ್ಲಿ ಸಂತೋಷಯುಕ್ತರಾದ ದೇವತೆಗಳು ಜಯಶಬ್ದವನ್ನು ಮಾಡಿದರು. ॥ ೨೫೫ ॥

ಮೂ ॥ ಪ್ರಸೂನವರ್ಷಿಭಿಃ ಸ್ತುತಶ್ಚತುರ್ಮುಖಾದಿಭಿಃ ಪ್ರಭುಃ ।
ಸಸಾರ ತೌ ಹರಾನುಗೌ ಪ್ರಭಕ್ಷ್ಯಕೌ ಸ ಸಾತ್ವತಾಂ ॥ ೨೫೬ ॥

ಅ॥ ಪುಷ್ಪವನ್ನು ವರ್ಷಿಸುವ ಸ್ವಭಾವವುಳ್ಳ ಬ್ರಹ್ಮಾದಿ ದೇವತೆಗಳಿಂದ ಸ್ತೋತ್ರವಾಡಿಸಿಕೊಳ್ಳಲ್ಪಟ್ಟ ಸರ್ವಸಮರ್ಥನಾದ ಶ್ರೀಕೃಷ್ಣನು ಯಾದವರ (ಸಮೂಹವನ್ನು) ಭಕ್ಷಣೆಮಾಡುವ ರುದ್ರನ ಭೃತ್ಯರಾದ ಆ ಭೂತಗಳನ್ನು ಹೊಂದಿದನು. ॥ ೨೫೬ ॥

ಮೂ ॥ ಸಮುಸ್ತ ಯಾದವಾನ್ರಣೇ ವಿಧೂಯ ತೌ ಜನಾರ್ದನಂ ।
ಉಪೇತ್ಯ ಚಾಂಸಗೌ ಹರೇರದಂಶತಾಂ ಸುಕರ್ಣಕೌ ॥ ೨೫೭ ॥

ಅ॥ ಆ ಭೂತಗಳು ಎಲ್ಲಾ ಯಾದವರನ್ನು ಯುದ್ಧದಲ್ಲಿ ಓಡಿಸಿ ಶ್ರೀಕೃಷ್ಣನನ್ನು ಹೊಂದಿ ಭುಜಶಿರಸ್ಸುಗಳಲ್ಲಿದ್ದವರಾಗಿ ಶ್ರೀಕೃಷ್ಣನ ಸವಿೂಚೀನಗಳಾದ ಕಿವಿಗಳನ್ನು ಕಚ್ಚಿದವು. ॥ ೨೫೭ ॥

ಮೂ ॥ ಸ ತೌ ಭುಜಪ್ರವೇಗತೋ ವಿಧೂಯ ಶಂಕರಾಲಯೇ ।
ನ್ಯಪಾತಯದ್ಬಲಾರ್ಣವೋಽವಿತಸ್ಯ ಕಿಂ ತದುಚ್ಯತೇ ॥ ೨೫೮ ॥

ಅ॥ ಬಲದಿಂದ ಸಮುದ್ರದಂತಿರುವ ಆ ಶ್ರೀಕೃಷ್ಣನು ಭುಜಗಳ ಚಲನದ ವೇಗದ್ದೆಸೆಯಿಂದ ಆ ಭೂತಗಳನ್ನು ತಿರಸ್ಕರಿಸಿ ಕೈಲಾಸಪರ್ವತದಲ್ಲಿ ಬೀಳಿಸಿದನು. ಬಲಾದಿಗಳಿಂದ ಅಪರಿಮಿತನಾದ ಶ್ರೀಕೃಷ್ಣನಿಗೆ ಕೈಲಾಸಪರ್ವತದಲ್ಲಿ ಭೂತಗಳನ್ನು ಕಿಡಹಾಕಿದ್ದು (ಆಶ್ಚರ್ಯವೆಂದು) ಏನು ಹೇಳಲ್ಪಡುತ್ತದೆ, (ಆಶ್ಚರ್ಯವಲ್ಲ.) ॥ ೨೫೮ ॥

ಮೂ ॥ ಪ್ರಭಕ್ಷ್ಯಯಂತವೋಜಸಾ ಹಿಡಿಂಬಮುದ್ಧತಂ ಬಲಂ ।
ಸಹೋಗ್ರಸೇನಕೋ ಯಯೌ ಪಿತಾ ಹರೇಃ ಶರಾನ್ಕ್ಷಿಪನ್ ॥ ೨೫೯ ॥

ಅ॥ ಉಗ್ರಸೇನನಿಂದ ಕೂಡಿರುವ ಶ್ರೀಕೃಷ್ಣನ ತಂದೆಯಾದ ವಸುದೇವನು ಯಾದವರ ಸೈನ್ಯವನ್ನು ಬಲದಿಂದ ಭಕ್ಷಣೆ ಮಾಡುತ್ತಿರುವ ದೃಪ್ತನಾದ ಹಿಡಿಂಬಾಸುರನನ್ನು ಬಾಣಗಳನ್ನು ಸುರಿಸುತ್ತಾ ಹೋದನು. ॥ ೨೫೯ ॥

ಮೂ ॥ ತಯೋ ರಥೌ ಸಹಾಯುಧೌ ಪ್ರಭಕ್ಷ್ಯ ರಾಕ್ಷಸೋ ಬಲೀ ।
ಪ್ರಗೃಹ್ಯ ತಾವಭಾಷತ ಪ್ರಯಾತಮಾಶು ಮೇ ಮುಖಂ ॥ ೨೬೦ ॥

ಅ॥ ಬಲಿಷ್ಠನಾದ ಹಿಡಿಂಬನಾಮಕ ರಾಕ್ಷಸನು ಉಗ್ರಸೇನ ವಸುದೇವರ ಆಯುಧಗಳಿಂದ ಕೂಡಿರುವ ರಥಗಳನ್ನು ನುಂಗಿ (ಪುಡಿಮಾಡಿ) ಉಗ್ರಸೇನ ವಸುದೇವರನ್ನು (ಕೈಗಳಿಂದ) ಹಿಡಿದು ನನ್ನ ಮುಂಖಿವನ್ನು ಶೀಘ್ರದಲ್ಲಿ ಹೊಂದಿರಿ ಎಂದು ಹೇಳಿದನು. ॥ ೨೬೦ ॥

ಮೂ ॥ ತದಾ ಗದಾವರಾಯುಧಃ ಸಹೈವ ಹಂಸಭೂಭೃತಾ ।
ಪ್ರಯುಧ್ಯಮಾನ ಆಯಯೌ ವಿಹಾಯ ತಂ ಹಲಾಯುಧಃ ॥ ೨೬೧ ॥

ಅ॥ ಆಗ ಗದೆಯೇ ಉತ್ಕೃಷ್ಟ ಆಯುಧವುಳ್ಳ, (ಅಂದರೆ ಗದೆಯಿಂದ ಯುದ್ಧಮಾಡತಕ್ಕ) ಹಂಸರಾಜನಿಂದ ಕೂಡಿಕೊಂಡೇ ಚೆನ್ನಾಗಿ ಯುದ್ಧಮಾಡತಕ್ಕ ಬಲರಾಮನು ಆ ಹಂಸನನ್ನು ಬಿಟ್ಟು ಹಿಡಿಂಬನ ಸಮೀಪಕ್ಕೆ ಬಂದನು. ॥ ೨೬೧ ॥

ಮೂ ॥ ತಮಾಗತಂ ಸಮೀಕ್ಷ್ಯ ತೌ ವಿಹಾಯ ರಾಕ್ಷಸಾಧಿಪಃ ।
ಉಪೇತ್ಯ ಮುಷ್ಟಿನಾಹನದ್ಬಲಂ ಸ ವಕ್ಷಸಿ ಕ್ರುಧಾ ॥ ೨೬೨ ॥

ಅ॥ ರಾಕ್ಷಸರಿಗೆ ಅಧಿಪತಿಯಾದ ಹಿಡಿಂಬಾಸುರನು ಬಂದಿರತಕ್ಕ ಬಲರಾಮನನ್ನು ನೋಡಿ ಉಗ್ರಸೇನ ವಸುದೇವರನ್ನು ಬಿಟ್ಟು ಬಲರಾಮನನ್ನು ಹೊಂದಿ ಮುಷ್ಟಿಯಿಂದ ಬಲರಾಮನನ್ನು ಹೊಡೆದನು. ಆ ಬಲರಾಮನು ರಾಕ್ಷಸನನ್ನು ಪಕ್ಷಃಸ್ಥಳದಲ್ಲಿ ಕೋಪದಿಂದ ಹೊಡೆದನು. ಅಥವಾ ರಾಕ್ಷಸಾಧಿಪನು ಬಲರಾಮನನ್ನು ವಕ್ಷಃಸ್ಥಳದಲ್ಲಿ ಹೊಡೆದನು. ॥ ೨೬೨ ॥

ಮೂ ॥ ಉಭೌ ಹಿ ಬಾಹುಶಾಲಿನಾವಯುಧ್ಯತಾಂ ಚ ಮುಷ್ಟಿಭಿಃ ।
ಚಿರಂ ಪ್ರಯುಧ್ಯ ತಂ ಬಲೋಽಗ್ರಹೀತ್ಸ ಜಂಘಯೋರ್ವಿಭುಃ ॥ ೨೬೩ ॥

ಅ॥ ಭುಜಗಳಿಂದ ಶೋಭಿಸುತ್ತಿರುವ ರಾಮ ಹಿಡಿಂಬರು ಇಬ್ಬರು ಮುಷ್ಟಿಗಳಿಂದ ಯುದ್ಧ ಮಾಡಿದರು. ಸಮರ್ಥನಾದ ಆ ಬಲರಾಮನು ಬಹುಕಾಲ ಯುದ್ಧ ಮಾಡಿ ಆ ಹಿಡಿಂಬಾಸುರನನ್ನು ಮೊಳಕಾಲುಂಗಳಲ್ಲಿ ಹಿಡಿದನು. ॥ ೨೬೩ ॥

ಮೂ ॥ ಅಥೈನಮುದ್ಧತಂ ಬಲಾದ್ಬಲಃ ಸ ದೂರ ಆಕ್ಷಿಪತ್ ।
ಪಪಾತ ಪಾದಯೋಜನೇ ಸ ನಾಜಗಾಮ ತಂ ಪುನಃ ॥ ೨೬೪ ॥

ಅ॥ ಆಮೇಲೆ ಬಲರಾಮನು ದೃಪ್ತನಾದ ಹಿಡಿಂಬಾಸುರನನ್ನು ಸಾಮರ್ಥ್ಯದಿಂದ ಅತಿ ದೂರದಲ್ಲಿ ಬಿಸಾಡಿದನು. ಆ ಹಿಡಿಂಬಾಸುರನು ಪಾದದಿಂದ ಸಹಿತವಾದ ಯೋಜನದಲ್ಲಿ(ಅಂದರೆ ಪುಷ್ಕರ ಪ್ರದೇಶದಿಂದ ಐದು ಕ್ರೋಶ ಪರಮಿತವಾದ ದೇಶದಲ್ಲಿ)ಬಿದ್ದನು. ಆ ಹಿಡಿಂಬಾಸುರನು ಪುನಃ ಬಲರಾಮನನ್ನು ಕುರಿತು ಬರಲಿಲ್ಲ. ॥ ೨೬೪ ॥

ಮೂ ॥ ವಿಹಾಯ ಸೈನಿಕಾಂಶ್ಚ ತೌ ನೃಪೌ ಯಯೌ ವನಾಯ ಸಃ ।
ನಿಹತ್ಯ ತಸ್ಯ ರಾಕ್ಷಸಾನ್ ಹಲಾಯುಧೋ ನನಾದ ಹ ॥ ೨೬೫ ॥

ಅ॥ ಆ ಹಿಡಿಂಬಾಸುರನು ತನ್ನ ಸೈನ್ಯಸಮೂಹಗಳನ್ನೂ ಆ ಹಂಸ ಡಿಭಿಕರನ್ನೂ ಕೂಡ ಬಿಟ್ಟು ವನಕ್ಕೋಸ್ಕರ ಹೋದನು. ಬಲರಾಮನು ಆ ಹಿಡಿಂಬಾಸುರನ ರಾಕ್ಷಸರನ್ನು ಸಂಹರಿಸಿ ಧ್ವನಿಗೈದನು. ಪ್ರಸಿದ್ಧವು, ॥ ೨೬೫ ॥

ಮೂ ॥ ಗದಸ್ತು ಸಾಲ್ವಭೂಭೃತಾ ವಯೋಗತೇನ ಯೋಧಯನ್ ।
ವಿವಾಹನಂ ನಿರಾಯುಧಂ ಚಕಾರ ಸೋಽಪ್ಯಪಾದ್ರವತ್ ॥ ೨೬೬ ॥

ಅ॥ ಗದನಾದರೂ ವೃಂದಂಕನಾದ ಸಾಲ್ವದೇಶಕ್ಕೆ ಅಧಿಪತಿಯಾದ ಬ್ರಹ್ಮದತ್ತನಿಂದ ಯುದ್ಧವಾಡುತ್ತಾ (ಆ ಬ್ರಹದತ್ತನನ್ನು) ವಾಹನರಹಿತನನ್ನಾಗಿಯೂ ಆಯುಧರಹಿತನನ್ನಾಗಿಯೂ ಮಾಡಿದನು. ಬ್ರಹ್ಮದತ್ತನಾದರೂ ಓಡಿಹೋದನು. ॥ ೨೬೬ ॥

ಮೂ ॥ ಸುತೇನ ತಸ್ಯ ಕನ್ಯಸಾ ಯುಯೋಧ ಸಾತ್ಯಕೀ ರಥೀ ।
ವರಾಸ್ತ್ರಶಸ್ತ್ರಯೋಧಿನೌ ವಿಜಹ್ರತುಶ್ಚ ತಾವುಭೌ ॥ ೨೬೭ ॥

ಅ॥ ರಥಿಕನಾದ ಸಾತ್ಯಕಿಯು ಬ್ರಹ್ಮದತ್ತನ ಕನಿಷ್ಠನಾದ ಡಿಭಿಕನಿಂದ ಯುದ್ಧಮಾಡಿದನು, ಸಾತ್ಯಕಿ ಡಿಭಿಕರು ಇಬ್ಬರೂ ಉತ್ಕೃಷ್ಟಗಳಾದ ಅಸ್ತ್ರಶಸ್ತ್ರಗಳಿಂದ ಯುದ್ಧಮಾಡುವವರಾಗಿ ಆಡಿ ಕೊಂಡರು ॥ ೨೬೭ ॥

ಮೂ ॥ ಚಿರಂ ಪ್ರಯುಧ್ಯ ಸಾತ್ಯಕಿಃ ಸ ಹಂಸಕನ್ಯಸಾ ಬಲೀ ।
ಶತಂ ಸಪಂಚಕಂ ರಣೇ ಚಕರ್ತ ತಸ್ಯ ಧನ್ವಿನಾಂ ॥ ೨೬೮ ॥

ಅ॥ ಬಲಿಷ್ಠನಾದ ಆ ಸಾತ್ಯಕಿಯು ಹಂಸನ ತಮ್ಮನಾದ ಡಿಭಿಕನಿಂದ ಬಹುಕಾಲ ಯುದ್ಧ ಮಾಡಿ ಡಿಭಿಕನ ಧನುರ್ಧಾರಿಗಳ ಐದರಿಂದ ಸಹಿತವಾದ ನೂರನ್ನು (ಅಂದರೆ ೧೦೫ ಧನುರ್ಧಾರಿಗಳನ್ನು) ಯುದ್ಧದಲ್ಲಿ ನಾಶಪಡಿಸಿದನು. ॥ ೨೬೮ ॥

ಮೂ ॥ ಸ ಖಡ್ಗಚರ್ಮಭೃದ್ರಣೇಽಭ್ಯಯಾತ್ ಸುತಾತ್ಮಜಂ ಶಿನೇಃ ।
ಸ ಚೈನಮಭ್ಯಯಾತ್ತಥಾ ವರಾಸಿಚರ್ಮಭೃದ್ವಿಭೀಃ ॥ ೨೬೯ ॥

ಅ॥ ಆ ಡಿಭಿಕನು ಖಡ್ಗಚರ್ಮಗಳನ್ನು ಧರಿಸಿದವನಾಗಿ ಯುದ್ಧದಲ್ಲಿ ಶಿನಿಯ ಪೌತ್ರನಾದ ಸಾತ್ಯಕಿಯನ್ನು ಹೊಂದಿದನು. ಹಾಗೆಯೇ ಉತ್ಕೃಷ್ಟಗಳಾದ ಖಡ್ಗಚರ್ಮಗಳನ್ನು ಧರಿಸಿರತಕ್ಕ ಭಯರಹಿತನಾದ ಸಾತ್ಯಕಿಯು ಈ ಡಿಭಿಕರನ್ನು ಹೊಂದಿದನು. ॥ ೨೬೯ ॥

ಮೂ ॥ ದ್ವಿಷೋಡಶಪ್ರಭೇದಕಂ ವರಾಸಿಯುದ್ಧಮಶ್ರಮೌ ।
ಪ್ರದರ್ಶ್ಯ ನಿರ್ವಿಶೇಷಕಾವುಭೌ ದ್ಯವಸ್ಥಿತೌ ಚಿರಂ ॥ ೨೭೦ ॥

ಅ॥ ಶ್ರಮರಹಿತರಾದ ಡಿಭಿಕ ಸಾತ್ಯಕಿಯರು ಮೂವತ್ತು ಎರಡು ಭೇದವುಳ್ಳ ಉತ್ತಮವಾದ ಖಡ್ಗಯುದ್ಧವನ್ನು ತೋರಿಸಿ ವಿಶೇಷರಹಿತರಾದ ಅವರಿಬ್ಬರೂ ಬಹುಕಾಲದಲ್ಲಿ ನಿಂತರು. ॥೨೭೦॥

ಮೂ ॥ ಪರಸ್ಪರಾಂತರೇಷಿಣೌ ನ ಚಾಂತರಂ ವ್ಯಪಶ್ಯತಾಂ ।
ತತೋ ವಿಹಾಯ ಸುಂಗರಂ ಗತೌ ನಿರರ್ಥಕಂ ತ್ವಿತಿ ॥ ೨೭೧ ॥

ಅ॥ ಪರಸ್ಪರವಾಗಿ ಅವಕಾಶವನ್ನು ಇಚ್ಛಿಸತಕ್ಕ ಡಿಭಿಕ ಸಾತ್ಯಕಿಯಂರಿಬ್ಬರೂ ಅವಕಾಶವನ್ನು ನೋಡಲಿಲ್ಲ, ಆಮೇಲೆ ವ್ಯರ್ಥವೆಂದೂ (ವಿಚಾರವೂಡಿ) ಯಂದ್ದವನ್ನು ಬಿಟ್ಟು ಹೋದರಂ॥ ೨೭೧ ॥

ಮೂ ॥ ತತಃ ಸ ಹಂಸಸಂಯುತೋ ಜಗಾಮ ಯೋದ್ಧುಮಚ್ಯುತಂ ।
ಕ್ಷಣೇನ ತೌ ನಿರಾಯುಧೌ ಚಕಾರ ಕೇಶವಃ ಶರೈಃ ॥ ೨೭೨ ॥

ಅ॥ ಆಮೇಲೆ ಹಂಸನಿಂದ ಕೂಡಿದ ಆ ಡಿಭಿಕನಂ ಶ್ರೀಕೃಷ್ಣನನ್ನು ಯಂದ್ಧವೂಡುವುದಕ್ಕಾಗಿ ಹೋದನಂ. ಶ್ರೀಕೃಷ್ಣನಂ ಬಾಣಗಳಿಂದ ಕ್ಷಣದಿಂದ ಹಂಸ ಡಿಭಿಕರಿಬ್ಬರನ್ನೂ ಆಯಂಧರಹಿತರನ್ನಾಗಿ ವೂಡಿದನಂ. ॥ ೨೭೨॥

ಮೂ ॥ ಹತಂ ಚ ಸೈನ್ಯಮೇಕಯೋಶ್ಚತುರ್ಥಭಾಗಶೇಷಿತಂ ।
ಕ್ಷಣೇನ ಕೇಶವೇನ ತದ್ಭಯಾದಪೇಯತುಶ್ಚ ತೌ ॥ ೨೭೩ ॥

ಅ॥ ಚತುರ್ಥಾಂಶವು(ಪಾದವಮಾತ್ರವು) ಉಳಿದು ಹೇಗೆ ಆದೀತೋ ಹಾಗೆ ಹಂಸ ಡಿಭಿಕರ ಸೈನ್ಯವು ಶ್ರೀಕೃಷ್ಣನಿಂದ ಕ್ಷಣದಿಂದ ಸಂಹರಿಸಿಕೊಳ್ಳಲ್ಪಟ್ಟಿತಂ. ಆ ಹಂಸ ಡಿಭಿಕರಂ ಶ್ರೀಕೃಷ್ಣನ ಭೀತಿಯಿಂದ ಹೊರಟುಂಹೋದರಂ. ॥ ೨೭೩ ॥

ಮೂ ॥ ಸ ಪುಷ್ಕರೇಕ್ಷಣಸ್ತದಾ ಸುರೈರ್ನುತೋಽಥ ಪುಷ್ಕರೇ ।
ಉವಾಸ ತಾಂ ನಿಶಾಂ ಪ್ರಭುಃ ಸ ಯಾವವೋಽವಿತಪ್ರಭಃ ॥ ೨೭೪ ॥

ಅ॥ ಆಗ ಕವಂಲದಳದಂತೆ ಕಣ್ಣುಗಳುಂಳ್ಳ ಶ್ರೀಕೃಷ್ಣನಂ ದೇವತೆಗಳಿಂದ ಸ್ತೋತ್ರವೂಡಿಸಿಕೊಳ್ಳಲ್ಪಟ್ಟನಂ. ಆಪೋಲೆ ಅಪರಿಮಿತವಾದ ಕಾಂತಿಯುಂಳ್ಳ, ಯಾದುಕುಲೋತ್ಪನ್ನನಾದ ಸರ್ವಸಮರ್ಥನಾದ ಆ ಶ್ರೀ ಕೃಷ್ಣನಂ ಆ ರಾತ್ರಿಯಲ್ಲಿ ಆವಾಸಮೂಡಿದನಂ. ॥ ೨೭೪ ॥

ಮೂ ॥ ಪರೇ ದಿನೇ ಜನಾರ್ದನೋ ನೃಪಾತ್ಮಜೌ ಪ್ರವಿದ್ರುತೌ।
ಯಮುಸ್ವಸುಸ್ತಟೇ ಪ್ರಭುಃ ಸಮಾಸಸಾದ ಪೃಷ್ಠತಃ ॥ ೨೭೫ ॥

ಅ॥ ಸರ್ವಸಮರ್ಥನಾದ ಶ್ರೀಕೃಷ್ಣನಂ ಮರುದಿವಸ ಓಡಿಹೋದ ರಾಜಪುತ್ರರಾದ ಹಂಸ ಡಿಭಿಕರನ್ನು ಯಮುನಾನದಿಯ ತೀರದಲ್ಲಿ ಹಿಂದುಗಡೆಯಿಂದ ಹೊಂದಿದನಂ. ॥ ೨೭೫ ॥

ಮೂ ॥ ಸ ರೌಹಿಣೇಯಸಂಯುತಃ ಸಮನ್ವಿತಶ್ಚ ಸೇನಯಾ ।
ಸ್ವಶಿಷ್ಟಸೇನಯಾ ವೃತೌ ಪಲಾಯಿನಾವವಾರಯತ್ ॥ ೨೭೬ ॥

ಅ॥ ತಮ್ಮ ಸೇನೆಯಿಂದ ಕೂಡಿದ ಬಲರಾಮನಿಂದ ಕೂಡಿದ ಶ್ರೀಕೃಷ್ಣನಂ ತನ್ನ ದೆಸೆಯಿಂದ ಉಳಿದ ಸೇನೆಯಿಂದ ಪರಿವಾರಿತರಾದ ಓಡುವ ಸ್ವಭಾವವುಳ್ಳ ಹಂಸ ಡಿಭಿಕರನ್ನು ತಡೆದನಂ. ॥ ೨೭೬ ॥

ಮೂ ॥ ನಿವೃತ್ಯ ತೌ ಸ್ವಸೇನಯಾ ಶರೋತ್ತಮೈರ್ಮವರ್ಷತುಃ ।
ಸುಕೋಪಿತೌ ಸಮುಸ್ತಶೋ ಯದೂನವಾರ್ಯಪೌರುಷೌ ॥ ೨೭೭ ॥

ಅ॥ ತಡೆಯಂಲಿಕ್ಕೆ ಅಶಕ್ಯವಾದ ಪರಾಕ್ರಮಂವುಳ್ಳ, ಅತ್ಯಂತ ಕೋಪಯಂಕ್ತರಾದ ಆ ಹಂಸ ಡಿಭಿಕರಂ ತಮ್ಮ ಸೇನೆಯಿಂದ ಕೂಡಿ ಹಿಂದೆ ಹೊರಟುಂಹೋಗಿ ಎಲ್ಲಾ ಯಾದವರನ್ನೂ ಬಾಣ ಶ್ರೇಷ್ಠಗಳಿಂದ ಸುರಿಸಿದರಂ. ॥ ೨೭೭ ॥

ಮೂ ॥ ಅಥಾಸಸಾದ ಹಂಸಕೋ ಹಲಾಯುಧಂ ಮಹಾಧನುಃ ।
ಅನಂತರೋಽಸ್ಯ ಸಾತ್ಯಕಿಂ ಗದಂ ಚ ಸರ್ವಸೈನಿಕಾನ್ ॥ ೨೭೮ ॥

ಅ॥ ಆವುಂಲಿ ಹಂಸಾಸುರನಂ ಮಹತ್ತಾದ ಧನುಸ್ಸುಳ್ಳವನಾಗಿ ಬಲರಾಮನನ್ನೂ ಹೊಂದಿದನುಂ, ಈ ಹಂಸನ ತಮ್ಮನಾದ ಡಿಭಿಕನಂ ಸಾತ್ಯಕಿಯನ್ನೂ ಗದನನ್ನೂ ಎಲ್ಲಾ ಯಾದವರನ್ನೂ ಕೂಡ ಹೊಂದಿದನುಂ, ॥ ೨೭೮ ॥

ಮೂ ॥ ಸ ಸಾತ್ಯಕಿಂ ನಿರಾಯುಧಂ ವಿವಾಹನಂ ವಿವರ್ಮಕಂ ।
ವ್ಯಧಾದ್ಗದಂ ಚ ತೌ ರಣಂ ವಿಹಾಯ ಹಾಪಜಗ್ಮತುಃ ॥ ೨೭೯ ॥

ಅ॥ ಆ ಡಿಭಿಕನಂ ಸಾತ್ಯಕಿಯನ್ನೂ ಗದನನ್ನೂ ಕೂಡ ಆಯಂಧರಹಿತನನ್ನಾಗಿಯೂ ವಾಹನರಹಿತನನ್ನಾಗಿಯಂೂ ಕವಚರಹಿತನನ್ನಾಗಿಯಂೂ ಮಾಡಿದನುಂ. ಸಾತ್ಯಕಿ ಗದರಿಬ್ಬರೂ ಯಂದ್ಧವನ್ನು ಬಟ್ಟು ಹೊರಟುಂಹೋದರಂ. ॥ ೨೭೯ ॥

ಮೂ ॥ ವಿಧೂಯ ಸೈನಿಕಾಶ್ಚ ಸ ಪ್ರಗೃಹ್ಯ ಚಾಪಮಾತತಂ ।
ಹರಿಂ ಜಗಾಮ ಚೋನ್ನದನ್ ಮಹಾಸ್ತ್ರ ಶಸ್ತ್ರವರ್ಷಿಣಃ ॥ ೨೮೦ ॥

ಅ॥ ಆ ಡಿಭಿಕನಂ ಯಾದವರನ್ನು ಓಡಿಸಿ ಆರೋಪಿತವಾದ ಧನುಸ್ಸನ್ನು ಹಿಡಿದುಂಕೊಂಡುಂ ~~ಘಟ್ಟಯಾಗಿ ಶಬ್ದವನ್ನು ಮಾಡುತ್ತಾ ಮಹತ್ತಾದ ಅಸ್ತ್ರಗಳನ್ನೂ ಶಸ್ತ್ರಗಳನ್ನೂ ಸುರಿಸುವವನಾಗಿ~~ ಶ್ರೀಕೃಷ್ಣನನ್ನು ಹೊಂದಿದನುಂ. ॥ ೨೮೦ ॥

ಮೂ ॥ ತಮಾಶು ಕೇಶವೋಽರಿಹಾ ಸಮುಸ್ತ ಸಾಧನೋಜ್ಝಿತಂ ।
ಕ್ಷಣಾಚ್ಚಕಾರ ಸೋಽಪ್ಯಗಾದ್ವಿಸೃಜ್ಯ ತಂ ಹಲಾಯುಧಂ ॥ ೨೮೧ ॥

ಅ॥ ಶತ್ರುಸಂಹಾರಕನಾದ ಶ್ರೀಕೃಷ್ಣನುಂ ಆ ಡಿಭಿಕನನ್ನು ಶೀಘ್ರದಲ್ಲಿ ಎಲ್ಲಾ ಯುಂದ್ಧ ಸಾಧನಗಳಿಂದ ರಹಿತನನ್ನಾಗಿ ಕ್ಷಣದಿಂದ ಮಾಡಿದನುಂ. ಡಿ ಕನಾದರೂ ಶ್ರೀಕೃಷ್ಣನನ್ನು ಬಿಟ್ಟು ಬಲರಾಮನನ್ನು ಕುರಿತುಂ ಹೋದನುಂ. ॥ ೨೮೧ ॥

ಮೂ ॥ ಹಲಾಯುಧೋ ನಿರಾಯುಧಂ ವಿಧಾಯ ಹಂಸಮೋಜಸಾ ।
ವಿಕೃಷ್ಟಚಾಪಮಾಗತಂ ದದರ್ಶ ತಸ್ಯ ಚಾನುಜಂ ॥ ೨೮೨ ॥

ಅ॥ ಬಲರಾಮನುಂ ಬಲದಿಂದ ಹಂಸಾಸುರನನ್ನು ಆಯುಂಧರಹಿತನನ್ನಾಗಿ ಮಾಡಿ ಧನುಂಸ್ಸನ್ನು ಶೆಳೆದುಂಕೊಂಡುಂ ಬುಂದಿರತಕ್ಕ ಹಂಸಾಸುರನ ತಮ್ಮನಾದ ಡಿಭಿಕನನ್ನು ಕಂಡನುಂ, ॥೨೮೨॥

ಮೂ ॥ ಸ ಹಂಸ ಆಶು ಕಾರ್ಮುಕಂ ಪುನಃ ಪ್ರಗೃಹ್ಯ ತಂ ಬಲಂ ।
ಯದಾಸಸಾದ ಕೇಶವೋ ನ್ಯವಾರಯತ್ತಮೋಜಸಾ ॥ ೨೮೩ ॥

ಅ॥ (ಆದಿಯಲ್ಲಿ ಬಲರಾಮನಿಂದ ನಿರಾಯುಧನಾಗಿ ಮಾಡಲ್ಪಟ್ಟ) ಆ ಹಂಸಾಸುರನಾದರೂ ಧನುಸ್ಸನ್ನು ಹಿಡಿದುಕೊಂಡು ಆ ಬಲರಾಮನನ್ನು ಯಾವಾಗ ಹೊಂದಿರುವನೋ ಆಗ ಶ್ರೀಕೃಷ್ಣನು ಆ ಹಂಸಾಸುರನನ್ನು ಸಾಮರ್ಥ್ಯದಿಂದ ತಡೆದನು. ॥ ೨೮೩ ॥

ಮೂ ॥ ಶಿನೇಃ ಸುತಶ್ಚಕ್ರಜೋಽಪ್ಯಸೌ ವಿಹಾಯ ಹಂಸಕಾನುಜಂ ।
ರಥಾಂತರಂ ಸಮಾಸ್ಥಿತೋ ಜಗಾಮ ತಾತಮಸ್ಯ ಚ ॥ ೨೮೪ ॥

ಅ॥ ಈ ಶಿನಿಯ ಪೌತ್ರನಾದ ಸಾತ್ಯಕಿಯೂ ಕೂಡ (ಅಂದರೆ ಮೊದಲು ಡಿಭಿಕನಿಂದ ಸಾತ್ಯಕಿಯು ರಥರಹಿತನಾಗಿ ಮಾಡಲ್ಪಟ್ಟಾಗ್ಯೂ) ಹಂಸನ ತಮ್ಮನಾದ ಡಿಭಿಕನನ್ನು ಬಿಟ್ಟು ಮತ್ತೊಂದು ರಥವನ್ನು ಏರಿದವನಾಗಿ ಈ ಡಿಭಿಕನ ತಂದೆಯಾದ ಬ್ರಹ್ಮದತ್ತನನ್ನು ಹೊಂದಿದನು. ॥ ೨೮೪ ॥

ಮೂ ॥ ವಯೋಗತಃ ಪಿತಾ ತಯೋರ್ಯುಯೋಧ ತೇನ ವೃಷ್ಣಿನಾ ।
ಶರಂ ಚ ಕಂಠಕೂಬರೇ ವ್ಯಸರ್ಜಯತ್ಸ ಸಾತ್ಯಕೇಃ ॥ ೨೮೫ ॥

ಅ॥ ವೃದ್ಧನಾದ ಹಂಸ ಡಿಭಿಕರ ತಂದೆಯಾದ ಬ್ರಹ್ಮದತ್ತನು ಆ ಸಾತ್ಯಕಿಯಿಂದ ಕೂಡಿಕೊಂಡು ಯುದ್ಧಮಾಡಿದನು. ಆ ಬ್ರಹ್ಮದತ್ತನು ಸಾತ್ಯಕಿಯ ಕಂಠ ವಕ್ಷಃಸ್ಥಳ ಇವುಗಳ ಸಂಧಿಯಲ್ಲಿರತಕ್ಕ ತಗ್ಗಾದ ಪ್ರದೇಶದಲ್ಲಿ ಬಾಣವನ್ನು ಬಿಟ್ಟನು. ॥ ೨೮೫ ॥

ಮೂ ॥ ಸ ಸಾತ್ಯಕಿರ್ದೃಢಾಹತೋ ಜಗಾಮ ಮೋಹಮಾಶು ಚ ।
ಸುಲಬ್ಧಸಂಜ್ಞ ಉತ್ಥಿತಃ ಸಮಾದದೇಽರ್ಧಚಂದ್ರಕಂ ॥ ೨೮೬ ॥

ಅ॥ ಆ ಸಾತ್ಯಕಿಯು ದೃಢವಾಗಿ ಹೊಡೆಯಲ್ಪಟ್ಟವನಾಗಿ ಶೀಘ್ರದಲ್ಲಿ ಮೂರ್ಛೆಯನ್ನು ಹೊಂದಿದನು. ಚೆನ್ನಾಗಿ ಹೊಂದಲ್ಪಟ್ಟ ಸಂಜ್ಞೆಯುಳ್ಳ, ಎದ್ದಿರತಕ್ಕ ಸಾತ್ಯಕಿಯು ಅರ್ಧಚಂದ್ರಾಕಾರವಾದ ಬಾಣವಿಶೇಷವನ್ನು (ಬತ್ತಳಿಗೆಯಿಂದ) ತೆಗೆದನು. ॥ ೨೮೬ ॥

ಮೂ ॥ ಸ ತೇನ ತಚ್ಛಿರೋ ಬಲೀ ಚಕರ್ತ ಶುಕ್ಲಮೂರ್ಧಜಂ ।
ಯದಂಬಯಾಭಿಕಾವೃತಂ ಪುರಾ ಪಪಾತ ತತ್ ಕ್ಷಿತೌ ॥ ೨೮೭ ॥

ಅ॥ ಆ ಸಾತ್ಯಕಿಯು ಅರ್ಧಚಂದ್ರಾಕಾರವಾದ ಬಾಣವಿಶೇಷದಿಂದ ಶ್ವೇತವರ್ಣಗಳಾದ ಕೇಶಗಳುಳ್ಳ ಆ ಬ್ರಹ್ಮದತ್ತನ ಶಿರಸ್ಸನ್ನು ಛೇದಿಸಿದನು, ಮೊದಲು ಅಂಬಾದೇವಿಯಿಂದ ಯಾವುದು ಅಪೇಕ್ಷಿತವಾಗಿದೆಯೋ ಅಂತಹ ಶಿರಸ್ಸು ಭೂಮಿಯಲ್ಲಿ ಬಿದ್ದಿತು.

ವಿಶೇಷಾಂಶ—ಮೊದಲು ಬ್ರಹ್ಮದತ್ತನಿಗೆ ಪಾಣಿಗ್ರಹಣವಾಗುವ ಕಾಲದಲ್ಲಿ ಭೀಷ್ಮನಿಂದ ಅಪಹರಿಸಿಕೊಳ್ಳಲ್ಪಟ್ಟ ಕಾಶಿರಾಜನ ಮಗಳಾದ ಅಂಬಾದೇವಿಯಿಂದ 'ಸಾಲ್ವಕಾಮಾಹಂ' ಎಂಬಂತೆ ಪತಿಯೆಂದಾಗಿ ಅಪೇಕ್ಷಿತನಾದ ಸಾಲ್ವನು ಬಿದ್ದನು. ॥ ೨೮೭ ॥

ಮೂ ॥ ನದಂಶ್ಚ ಸಾತ್ಯಕಿರ್ಹರೇರ್ಜಗಾಮ ಪಾರ್ಶ್ವಮುದ್ಧತಃ ।
ಬಲೋಽಪಿ ಹಂಸಕಾನುಜಂ ಯುಯೋಧ ಸೇನಯಾ ಯುತಂ ॥ ೨೮೮ ॥

ಅ॥ ದೃಪ್ತನಾದ ಸಾತ್ಯಕಿಯು ಸಿಂಹನಾದವನ್ನಾಡುತ್ತಾ, ಶ್ರೀಕೃಷ್ಣನ ಸವಿಾಪವನ್ನು ಹೊಂದಿದನು. ಬಲರಾಮನೂ ಕೂಡ ಸೇನೆಯಿಂದ ಕೂಡಿದ ಹಂಸನ ತಮ್ಮನಾದ ಡಿಭಕನನ್ನು ಯುದ್ಧವನ್ನಾಡಿದನು. ॥ ೨೮೮ ॥

ಮೂ ॥ ಹರಿಸ್ತು ಹಂಸಮುಲ್ಬಣೈಃ ಶರೈಃ ಸಮುರ್ದಯನ್ ಬಲಂ ।
ಜಘಾನ ತಸ್ಯ ಸರ್ವಶೋ ನ ಕಶ್ಚಿದತ್ರ ರೇಷಿತಃ ॥ ೨೮೯ ॥

ಅ॥ ಶ್ರೀಕೃಷ್ಣನಾದರೂ ಕ್ರೂರಗಳಾದ ಬಾಣಗಳಿಂದ ಹಂಸಾಸುರನನ್ನು ಚೆನ್ನಾಗಿ ಪೀಡಿಸಿದನು. ಆ ಹಂಸಾಸುರನ ಎಲ್ಲಾ ಸೇನೆಯನ್ನು ಸಂಹರಿಸಿದನು. ಈ ಯುದ್ಧದಲ್ಲಿ ಯಶವ ತೊಬ್ಬ ಅರಸನೂ ಉಳಿಯಲಿಲ್ಲ. ॥ ೨೮೯ ॥

ಮೂ ॥ ಸ ಏಕ ಏವ ಕೇಶವಂ ಮಹಾಸ್ತ್ರಮುಕ್ ಸಸಾರ ಹ ।
ನಿವಾರ್ಯ ತಾಪಿ ಸರ್ವಶೋ ಹರಿರ್ಜಿತಾಸ್ತ್ರಮಾದದೇ ॥ ೨೯೦ ॥

ಅ॥ ಆ ಹಂಸನು ಒಬ್ಬನೇ ಮಹತ್ತಾದ ಅಸ್ತ್ರಗಳನ್ನು ಬಿಡುವವನಾಗಿ ಶ್ರೀಕೃಷ್ಣನನ್ನು ಹೊಂದಿದನು. ಶ್ರೀಕೃಷ್ಣನು ಎಲ್ಲಾ ಹಂಸನು ಬಿಟ್ಟ ಅಸ್ತ್ರಗಳನ್ನು ತಡೆದು ತನ್ನ ಅಸ್ತ್ರವನ್ನು ಸ್ವೀಕರಿಸಿದನು. ॥ ೨೯೦ ॥

ಮೂ ॥ ಸ ವೈಷ್ಣವಾಸ್ತ್ರಮುದ್ಯತಂ ನಿರೀಕ್ಷ್ಯ ಯಾನತೋ ಮಹೀಂ ।
ಗತಃ ಪರಾದ್ರವನ್ಭಯಾತ್ ಪಪಾತ ಯಾಮುನೋದಕೇ ॥ ೨೯೧ ॥

ಅ॥ ಆ ಹಂಸನು ಸನ್ನದ್ಧವಾದ ವೈಷ್ಣವಾಸ್ತ್ರವನ್ನು ನೋಡಿ ರಥದ್ವೇಷಿಯಿಂದ ಭೂಮಿಯನ್ನು ಹೊಂದಿದವನಾಗಿ ಭಯದಿಂದ ಓಡಿದನು. ಯಮುನಾನದಿಯ ಸಂಬಂಧಿಯಾದ ಜಲದಲ್ಲಿ ಬಿದ್ದನು. ॥ ೨೯೧ ॥

ಮೂ ॥ ವರಾಸ್ತ್ರಪಾಣೀರೀಶ್ವರಃ ಪದಾಹನಚ್ಛಿರಸ್ಯಮುಂ ।
ಸ ಮೂರ್ಛಿತೋ ಮುಮೋಚಪತನ್ಮಹಾಭುಜಂಗಮುಸ್ಯ ಹಿ ॥ ೨೯೨

ಅ॥ ಉತ್ಕೃಷ್ಟವಾದ ಅಸ್ತ್ರವು ಕೈಯಲ್ಲುಳ್ಳ ಶ್ರೀಕೃಷ್ಣನು ಹಂಸಾಸುರನನ್ನು ಶಿರಸ್ಸಿನಲ್ಲಿ ಪಾದದಿಂದ ಹೊಡೆದನು. (ಅಂದರೆ ಪಾದಪ್ರಹಾರವನ್ನು ಕೊಟ್ಟನು.) ಆ ಹಂಸನು ಮೂರ್ಛಿತನಾಗಿ (ಯಮುನಾನದಿಯಲ್ಲಿರತಕ್ಕ) ಮಹಾಸರ್ಪದ ಮುಖದಲ್ಲಿ ಬಿದ್ದನು. ॥ ೨೯೨ ॥

ಮೂ ॥ ಸ ಧಾರ್ತರಾಷ್ಟ್ರಕೋದರೇ ಯಥಾ ತಮೋಽಂಧಮೇಯಿವಾನ್ ।
ತಥಾ ಸುದುಃಖಸಂಯುತೋ ವಸನ್ನನೋಽಪರಂ ವ್ರಿಯೇತ್ ॥ ೨೯೩ ॥

ಅ॥ ಹೇಗೆ ಅಂಧಂತಮಸ್ಸನ್ನು ಹೊಂದುವನೋ, ಹಾಗೆಯೇ ಅತ್ಯಂತ ದುಃಖದಿಂದ ಕೂಡಿದ ಆ ಹಂಸಾಸುರನು ಧೃತರಾಷ್ಟ್ರನೆನ್ನುವ ಮಹಾನಾಗಸಂಬಂಧಿಯಾದ ಹೊಟ್ಟೆಯಲ್ಲಿ ಅವಾಸವಾಡಿದನು. ವೈವಸ್ವತಮನುವಿನ ಅನಂತರದಲ್ಲಿ ಮರಣವನ್ನು ಹೊಂದುವನು. ॥೨೯೩॥

ಮೂ ॥ ತತೋಽಂಧಮೇವ ತತ್ತಮೋ ಹರೇರ್ದ್ವಿಡೇತಿ ನಿಶ್ಚಯಾತ್ ।
ತದಾಸ್ಯ ಚಾನುಜೋಽಗ್ರಜಂ ವಿಮಾರ್ಗಯನ್ ಜಲೇಽಪತತ್ ॥ ೨೯೪ ॥

ವಿಹಾಯ ರೋಹಿಣೇಸುತಂ ಜಲೇ ನಿಮಜ್ಯ ಮಾರ್ಗಯನ್ ।
ಅಪಶ್ಯ್ಯಮಾನ ಆತ್ಮನೋ ವ್ಯಪಾಟಯಚ್ಚ ಕಾಕುದಂ ॥ ೨೯೫ ॥

ಅ॥ ಮರಣಾನಂತರದಲ್ಲಿ ಶ್ರೀಹರಿಗೆ ದ್ವೇಷಿಯಾದ ಹಂಸಾಸುರನು ನಿಶ್ಚಯವಾಗಿಯೂ ಆ ಪ್ರಸಿದ್ಧವಾದ ಅಂಧತಮಸ್ಸನ್ನೇ ಹೊಂದಿತ್ತಾನೆ, (ಯಾವಾಗ ಹಂಸಾಸುರನು ಓಡಿದನೋ) ಆಗ ಹಂಸಾಸುರನ ತಮ್ಮನಾದ ಡಿಭಿಕನು ರೋಹಿಣಿಯ ಪುತ್ರನಾದ ಬಲರಾಮನನ್ನು ಬಿಟ್ಟು ಅಣ್ಣನಾದ ಹಂಸಾಸುರನನ್ನು ಹುಡುಕುತ್ತಾ ನೀರಿನಲ್ಲಿ ಬಿದ್ದನು. ನೀರಿನಲ್ಲಿ ಮುಳುಗಿ ಹುಡುಕುವವನಾಗಿ (ಅಣ್ಣನನ್ನು) ನೋಡದಿರುವವನಾಗಿ ತನ್ನ ಜಿಹ್ವಾಮೂಲದಲ್ಲಿರತಕ್ಕ ಸೂಕ್ಷ್ಮವಾದ ನಾಲಿಗೆಯನ್ನು ಕೀಳಿಸಿಕೊಂಡನು. (ಕಿತ್ತನು.) ॥ ೨೯೪ ॥ ೨೯೫ ॥

ಮೂ ॥ ವಿಹಾಯ ದೇಹಮುಲ್ಬಣಂ ತಮೋಽತೀರ್ಯ ಚಾಗ್ರಜಂ ।
ಪ್ರತೀಕ್ಷ್ಯಮಾಣ ಉಲ್ಬಣಂ ಸಮುತ್ತಿ ತತ್ಸುಖೇತರಂ ॥ ೨೯೬ ॥

ಅ॥ (ಡಿಭಿಕನು) ಶರೀರವನ್ನು ಬಿಟ್ಟು ಕ್ರೂರವಾದ ತಮಸ್ಸನ್ನು ಇಳಿದು ಹಂಸಾಸುರನನ್ನು ನಿರೀಕ್ಷಿಸುವವನಾಗಿ ಅಸಹ್ಯವಾದ (ಅಪಸ ಸ್ವರೂಪಭೂತವಾದ) ಸುಖದಿಂದ ಇತರವಾದ ದುಃಖವನ್ನು ಅನುಭವಿಸುತ್ತಾನೆ. ॥ ೨೯೬ ॥

ಮೂ ॥ ತತೋ ಹರಿರ್ಬಲೈರ್ಯುತೋ ಬಲಾನ್ವಿತೋ ಮುನೀಶ್ವರೈಃ ।
ಸಮುಂ ಕುಶಸ್ಥಲೀಂ ಯಯೌ ಸ್ತುತಃ ಕಶಂಕರಾದಿಭಿಃ ॥ ೨೯೭ ॥

ಅ॥ ಆಮೇಲೆ ಯಾದವಸೈನ್ಯಗಳಿಂದ ಕೂಡಿದ ಬಲರಾಮನಿಂದಲೂ ಕೂಡಿದ ಬ್ರಹ್ಮ ರುದ್ರ ಮೊದಲಾದ ದೇವತೆಗಳಿಂದ ಸ್ತೋತ್ರಮಾಡಿಸಿಕೊಳ್ಳಲ್ಪಟ್ಟ ಶ್ರೀಕೃಷ್ಣನು ಯತಿಶ್ರೇಷ್ಠರಿಂದ ಕೂಡಿಕೊಂಡು ದ್ವಾರಾವತೀಪಟ್ಟಣವನ್ನು ಕುರಿತು ಹೋದನು. ॥ ೨೯೭ ॥

ಮೂ ॥ ಸ್ವಕೀಯಪಾದಪಲ್ಲವಾಶ್ರಯಂ ಜನಂ ಪ್ರಹರ್ಷಯನ್ ।
ಉವಾಸ ನಿತ್ಯಸುಖಾರ್ಣವೋ ರಮಾಪತಿರ್ಗೃಹೇ ॥ ೨೯೮ ॥

ಅ॥ ನಿತ್ಯವಾದ ನಿರ್ದೋಷವಾದ ಆನಂದದಿಂದ ಸಮುದ್ರದಂತಿರುವ ಲಕ್ಷ್ಮೀಪತಿಯಾದ ಶ್ರೀಕೃಷ್ಣನು ತನ್ನ ಸಂಬಂಧಿಯಾದ ಚಿಗುರು ಎಲೆಯಂತಿರುವ ಚರಣವೇ ಆಶ್ರಯವಾದಿ ಉಳ್ಳ ಭಕ್ತಜನರನ್ನು ಸಂತೋಷಪಡಿಸುತ್ತಾ ತನ್ನ ಮನೆಯಲ್ಲಿ ಆವಾಸವಾಡಿದನು. ॥ ೨೯೮ ॥

ಮೂ ॥ ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಹಂಸಡಿಭಿಕವಧೋ
ನಾಮ ಸಪ್ತದಶೋಽಧ್ಯಾಯಃ ॥ ೧೭ ॥

ಅ॥ ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ನಿರ್ಮಿಸಿಕೊಳ್ಳಲ್ಪಟ್ಟ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಹದಿನೇಳನೇ ಅಧ್ಯಾಯವು
ಸಮಾಪ್ತವಾಯಿತು; ॥ ೧೭ ॥

ಶ್ರೀಮದಾನಂದತೀರ್ಥಾರ್ಯಹೃದಯಾಮಲಮಂದಿರಂ ।
ಜಾನಕೀಜಾನಿಮಾನಂದಸಾಂದ್ರಂ ವಂದೇ ನಿರಂತರಂ ॥

ಯತ್ಪ್ರೇರಣಾದನುದಿನಂ ಸರ್ವಕರ್ಮಾಣಿ ಕುರ್ಮಹೇ ।
ದೇವೌ ಮಂಗಲದಾತಾರೌ ಕೃಷ್ಣಮಧ್ವೌ ಪುನರ್ನಮಃ ॥

ತಂತ್ರಿನಾರಾಯಣೇನಾಸ್ಯ ವ್ಯಾಖ್ಯಾ ಕರ್ನಾಟಕೀ ಕೃತಾ ।
ಭೂಯಾತ್ಕುಸುಮಮಾಲೇವ ಮುದೇ ಮಾಧವಮಧ್ವಯೋಃ ॥

॥ ಶ್ರೀಕೃಷ್ಣಾರ್ಪಣಮಸ್ತು ॥

T. VENKANNA
T.R. ACHAR
Advocates

॥ ಶ್ರೀ ಮಧ್ವನಾಥೋ ವಿಜಯತೇ ॥ 11/2193

ಶ್ರೀಮನ್ಮಧ್ವಾಚಾರ್ಯರ

ಮೂಲಗ್ರಂಥಗಳ ಮಾಲಿಕೆಯ ಚತುರ್ಥ ಗುಚ್ಛದಲ್ಲಿ
ಭಾರತ ಗೀತಾ ಪ್ರಸ್ಥಾನದಲ್ಲಿ ಮೂರನೆಯದಾದ

ಶ್ರೀ ಮನ್ಮಹಾಭಾರತ ತಾತ್ಪರ್ಯನಿರ್ಣಯವು

ಪೂರ್ವಾರ್ಧ ೧೧ರಿಂದ ೧೭ರ ವರೆಗಿನ ಅಧ್ಯಾಯಗಳು

ದ್ವೈತ ವೇದಾಂತ ವಿದ್ವಾನ್, ದ್ವೈತ ವೇದಾಂತ ಶಿರೋಮಣಿ, ವೇದಾಂತ ವಾಚಸ್ಪತಿ
ದಿ। ಅಗ್ರಹಾರ ನಾರಾಯಣ ತಂತ್ರಿಗಳಿಂದ ವಿರಚಿತವಾಗಿ

ಕನ್ನಡ ಟೀಕಾ ಭಾಷಾಂತರ ಸಹಿತ

ಫೋನ್ : 607590
ವೇದಾಂತ ಬುಕ್ ಹೌಸ್
ಉಮಾ ಟಾಕೀಸ್ ಬಳಿ, ಚಾಮರಾಜಪೇಟೆ
ಬೆಂಗಳೂರು-560 018.

ಅಗ್ರಹಾರ ಮುದ್ರಣಾಲಯ
ಕರ್ನಾಟಕ ಬ್ಯಾಂಕಿನ ಹಿಂಭಾಗ, ರಥಬೀದಿ, ಉಡುಪಿ
ಇವರಿಂದ ಪ್ರಕಾಶಿಸಲ್ಪಟ್ಟಿತು,

ಗ್ರಂಥದ ಹೆಸರು : ಶ್ರೀಮನ್ಮಹಾಭಾರತ ತಾತ್ಪರ್ಯ ನಿರ್ಣಯವು

ಭಾವಾನುವಾದ ವ್ಯಾಖ್ಯಾನ
ತಾತ್ಪರ್ಯ ಸಹಿತ } ವೇದಮೂರ್ತಿ ದಿ। ಅಗ್ರಹಾರ ನಾರಾಯಣ ತಂತ್ರಿಗಳು

ಪುಟಗಳು : ೨೯೫ ಮೂರನೇ ಭಾಗ

ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ ಇವರ ಕೃಪೆಯಿಂದ

ಪ್ರಕಾಶಕರು, ಮುದ್ರಕರು : ಅಗ್ರಹಾರ ಮುದ್ರಣಾಲಯ, ಕರ್ನಾಟಕ ಬ್ಯಾಂಕಿನ ಹಿಂಭಾಗ
ರಥಬೀದಿ, ಉಡುಪಿ – 576101

ಪ್ರಕಾಶಕರಿಂದ ಹಕ್ಕುಗಳು ಕಾದಿರಿಸಲ್ಪಟ್ಟಿವೆ

ಬೆಲೆ : ರೂ. ೪೦/–

ಪುಸ್ತಕದ ಪ್ರತಿಗಳು ದೊರೆಯುವ ಸ್ಥಳ :

ಎಲ್ಲಾ ಧಾರ್ಮಿಕ ಮತ್ತು ಅಧ್ಯಾತ್ಮಿಕ ಪುಸ್ತಕಗಳನ್ನು ಮಾರುವ ಅಂಗಡಿಗಳಲ್ಲಿ

(೨) ಶ್ರೀ ಕೆ. ಮಾಧವ ತಂತ್ರಿ
ಉಪ ಪ್ರಬಂಧಕ, ಸಿಂಡಿಕೇಟ್ ಬ್ಯಾಂಕ್, ಮಂಡ್ಯ

(೩) ಶ್ರೀ ಎ. ರಘುಪತಿ ತಂತ್ರಿ, ಬಿ.ಎ., ಬಿ.ಎಲ್.,
12, ನಾರಾಯಣ ಪ್ರಸಾದ್, ಕೆನರಾ ಬ್ಯಾಂಕ್ ಕೊಲನಿ
III ಬ್ಲಾಕ್ (ಈಸ್ಟ್), ಜಯನಗರ, ಬೆಂಗಳೂರು – 560011
ದೂರವಾಣಿ ನಂಬ್ರ 631119

Phone : 351514
T. Venkanna, B.A., B.L.,
(Tamaraparni Venkannacharya)
ADVOCATE,
981, 3rd Block, 57th Cross,
Rajajinagar, Bangalore-560 010

ನಮ್ಮ ಪೂಜ್ಯ ತೀರ್ಥರೂಪರಾದ ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳು ಹಾಗೂ
ಪೂಜ್ಯ ಮಾತೃಶ್ರೀ ಶ್ರೀಮತಿ ರಾಜಮ್ಮ ನಾರಾಯಣ ತಂತ್ರಿಗಳು.

ಪ್ರಕಾಶಕರ ಮಾತು

ರಾಮಾಯಣ ಮತ್ತು ಮಹಾಭಾರತ ಕಥೆಯ ವಿವರವಾದ ವಿವರಗಳನ್ನು ಒಳಗೊಂಡ ಭಾರತ ತಾತ್ಪರ್ಯ ನಿರ್ಣಯವೆಂದು ಕರೆಯಲ್ಪಡುವ ಈ ಗ್ರಂಥವನ್ನು ಶ್ರೀ ವೇದವ್ಯಾಸ ದೇವರ ಆಜ್ಞೆಗನುಸಾರವಾಗಿ ಜಗದ್ಗುರು ಆಚಾರ್ಯ ಶ್ರೀಮಧ್ವರು ಮೂಲ ಗ್ರಂಥದ ತತ್ತ್ವವನ್ನು ಅಸ್ತವ್ಯಸ್ತಗೊಳಿಸದೆ ರಚಿಸಿ, ಸಜ್ಜನರ ಉದ್ಧಾರಕ್ಕೆ ಕಾರಣರಾದರು. ಮೂರನೇ ಭಾಗದಲ್ಲಿ ಶ್ರೀ ಮಹಾಭಾರತದ ಕಥೆಯನ್ನು ವಿವರಿಸಿರುತ್ತಾರೆ.

ಈ ದಿವ್ಯ ಹೊತ್ತಗೆಯನ್ನು ಮೂರು ಭಾಗಗಳಲ್ಲಿ ಮುದ್ರಿಸಿ ಪ್ರಕಟಿಸಬೇಕೆಂದಿದ್ದರೂ, ಏರುತ್ತಿರುವ ಕಾಗದದ ಬೆಲೆ, ಕೆಲಸಗಾರರ - ಮುದ್ರಣ - ಇನ್ನಿತರ ವೆಚ್ಚಗಳಿಂದ ತಂಸು ಆರ್ಥಿಕ ಪರಿಸ್ಥಿತಿ ಬಿಗಡಾಯಿಸಿದುದರಿಂದ ಆಗಲಿಲ್ಲ, ನಾಲ್ಕನೇ ಭಾಗದಲ್ಲಿ 32 ಅಧ್ಯಾಯಗಳ ತನಕ ಮುದ್ರಿಸಿ, ಓದುಗರಿಗೆ ಒಪ್ಪಿಸುವೆನು.

ಈ ಭಾಗದಲ್ಲಿ ಅಧ್ಯಾಯ ೧೧—ಶ್ರೀ ಭಗವದವತಾರ ಪ್ರತಿಜ್ಞಾ ಪ್ರತಿಪಾದಕ
೧೨—ಪಾಂಡವೋತ್ಪತ್ತಿ ಪ್ರತಿಪಾದಕ
೧೩—ಕಂಸವಧ ಪ್ರತಿಪಾದಕ
೧೪—ದೈತ್ಯ ಸಂಹಾರರೂಪಿ ಶ್ರೀ ಕೃಷ್ಣ ಪ್ರತಿಪಾದಕ
೧೫—ಪಾಂಡವ ವಿದ್ಯಾಭ್ಯಾಸ ಪ್ರತಿಪಾದಕ
೧೬—ಸೃಗಾಲ ಪ್ರತಿಪಾದಕ
೧೭—

ಕಾಲ ಮಹಿಮೆಯಿಂದ ಅನೇಕರು ಅನೇಕ ರೀತಿಯಲ್ಲಿ ಸೇರಿಸಿ ಲೋಪಮಾಡಿ, ಮೂಲ ಗ್ರಂಥದ ತತ್ತ್ವಗಳನ್ನು ಅಡಿಮೇಲಾಗಿ, ಮಾಡಿದ ಸಂದರ್ಭದಲ್ಲಿ ಸಕಲ ಪುರಾಣ ಇತಿಹಾಸಾದಿ ಗ್ರಂಥಗಳ ಪರಸ್ಪರ ವಿರೋಧಾಭಾಸವನ್ನು ನೀಗಿಸಿ, ಅವುಗಳ ಯಥಾರ್ಥ ತಾತ್ಪರ್ಯವನ್ನು ಸ್ಪಷ್ಟಪಡಿಸುವ ಉದ್ದೇಶ್ಯದಿಂದ ಶ್ರೀ ಮಹಾಭಾರತ ತಾತ್ಪರ್ಯ ನಿರ್ಣಯದ ತಿರ್ಥವನ್ನು ಸಕಲರೂ ತಿಳಿದು ಪುಣ್ಯಭಾಗಿಗಳಾಗಬೇಕೆಂಬ ಉದ್ದೇಶ್ಯದಿಂದ ಸುಲಭ ಶೈಲಿಯಲ್ಲಿ ನಮ್ಮ ಪೂಜ್ಯ ತೀರ್ಥರೂಪರವರಾದ ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳ ಮೂಲಕ ಶ್ರೀ ಮಧ್ವಮುನಿ ಸೇವಾ ಸಂಘದವರು ಕನ್ನಡೀಕರಿಸಿ, ಮುದ್ರಿಸಿ ಚಿರಸ್ಮರಣೀಯರಾಗಿದ್ದಾರೆ.

ನಮ್ಮ ಪೂಜ್ಯ ತೀರ್ಥರೂಪರವರಿಂದ ಅನುವಾದಿಸಲ್ಪಟ್ಟ ಪುಸ್ತಕಗಳಿಗೆ ಎಲ್ಲೆಡೆಯಿಂದಲೂ ಬೇಡಿಕೆಗಳು ಬರುತ್ತಿರುವುದರಿಂದ ಶ್ರೀ ಭಗವದನುಗ್ರಹಕ್ಕೆ ಮತ್ತು ಪೂಜ್ಯ ಮಾತಾಪಿತ್ರೃಗಳ ಅನುಗ್ರಹಕ್ಕೆ ಪಾತ್ರರಾಗಬೇಕೆಂಬ ಉದ್ದೇಶ್ಯವನ್ನಿರಿಸಿಕೊಂಡು ನಿವೃತ್ತ ಅಧ್ಯಾಪಕನಾದ ನಾನು ಈ ಕಾರ್ಯ ಪೂರ್ತಿಗೊಳಿಸಲು ಉದ್ಯುಕ್ತನಾದೆನು. ಮುದ್ರಣ ವೆಚ್ಚ, ಕಾಗದಗಳ ವೆಚ್ಚ ಇತ್ಯಾದಿ ಗಳಿಂದಾಗಿ ಸಕಾಲದಲ್ಲಿ ಬಿಡುಗಡೆಗೊಳಿಸಲಾಗದಿದ್ದುದಕ್ಕಾಗಿ ವಿಷಾಧಿಸಿ. ಕ್ಷಮೆಯಾಚಿಸುವೆನು. ಮುಂದಣ ಪ್ರಕಟಣೆಗಳಿಗೆ ಉದಾರಿಗಳಿಂದ ಕೊಡುಗೆಗಳನ್ನು ಯಾಚಿಸುತ್ತೇನೆ.

ನಮ್ಮ ಹಿತೈಷಿಗಳೂ, ಕೊಡುಗೈದಾನಿಗಳೂ ಪರೋಪಕಾರವನ್ನೇ ಜೀವನದ ಮುಖ್ಯ ಗುರಿಯನ್ನಾಗಿರಿಸಿಕೊಂಡವರೂ ಶ್ರೀ ಮಧ್ವಮುನಿ ಸೇವಾ ಸಂಘದ ಮಾಜಿ ಅಧ್ಯಕ್ಷರೂ, ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ಅಧ್ಯಕ್ಷರೂ, ಆದ ಶ್ರೀ ಕೆ. ಕೆ. ಪೈ ಅವರು ಪುನರ್ಮುದ್ರಣಕ್ಕೆ ಅನುಮತಿಯನ್ನಿತ್ತು ಶ್ರೀ ಹರಿವಾಯುಗಳ ಅನುಗ್ರಹಕ್ಕೆ ಪಾತ್ರರಾಗಿರುವರು. ಈ ಮಹಾಗ್ರಂಥಕ್ಕೆ

ಅನುಗ್ರಹಪೂರ್ವಕ ಶುಭ ಸಂದೇಶಗಳನ್ನು ಅನುಗ್ರಹಿಸಿದ ಶ್ರೀ ಶ್ರೀ ಸತ್ಯ ಪ್ರಮೋದ ತೀರ್ಥ ಶ್ರೀಗಳವರಿಗೂ, ಬಡಜನತೆಯ ಬಂಧು ಶ್ರೀ ಕೆ. ಕೆ. ಪೈ ಅವರಿಗೂ ನನ್ನ ಸಾಷ್ಟಾಂಗ ನಮಸ್ಕಾರಗಳು. ತುಂಬು ಹೃದಯದ ಪ್ರೋತ್ಸಾಹವನ್ನಿತ್ತು ಸಹಕರಿಸಿದವರಿಗೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು. ಮುದ್ರಣ ಕಾರ್ಯಕ್ಕೆ ಅನುಕೂಲವಾಗುವಂತೆ ಹಳೆಯ ಪುಸ್ತಕಗಳನ್ನಿತ್ತು ಸಹಕರಿಸಿದ ಶ್ರೀ ಶ್ರೀ ವಿದ್ಯಾಸಾಗರ ತೀರ್ಥ ಶ್ರೀಗಳವರಿಗೂ, ಉಡುಪಿ ಸಂಸ್ಕೃತ ಮಹಾಪಾಠಶಾಲಾ ಪ್ರಾಚಾರ್ಯರೂ ಪ್ರಾಂಶುಪಾಲರೂ ಆದ ಶ್ರೀ ಪಿ. ಲಕ್ಷ್ಮೀನಾರಾಯಣ ಶರ್ಮ ಅವರಿಗೂ, ಅಲೆವೂರು ನೆಹರು ಪ್ರೌಢಶಾಲಾ ಮುಖ್ಯಗುರು ಶ್ರೀ ಎ. ವಾಮನ ಭಟ್ ಅವರಿಗೂ ಮಾರ್ಪಳ್ಳಿ ಶ್ರೀ ಮೋಹನ ಭಟ್ ಅವರಿಗೂ ನಮ್ಮ ಕೃತಜ್ಞತೆಗಳು. ಅಂದವಾಗಿ ಮುದ್ರಿಸಿ ಪ್ರಕಾಶನಕ್ಕೆ ನೆರವಾದ ಅಗ್ರಹಾರ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೆ ಹೃತ್ಪೂರ್ವಕ ಧನ್ಯವಾದಗಳು.

ತತ್ತ್ವ ಜಿಜ್ಞಾಸುಗಳಾದ ಸಜ್ಜನರು ಈ ಗ್ರಂಥದ ಸದುಪಯೋಗ ಪಡೆದು ತತ್ತ್ವಜ್ಞಾನ ಸಂಪನ್ನರಾಗಿ, ಉದ್ಧೃತರಾಗಲೆಂದು ಹಾರೈಸಿ, ಇನ್ನು ಮುಂದಿನ ಪ್ರಕಟಣೆಗಳಿಗೆ ಉದಾರಿ ಆಭಿಮಾನಿಗಳಿಂದ ಧನಸಹಾಯವನ್ನು ಯಾಚಿಸಿ, ಪ್ರಕಾಶನಗೈಯುವ ಶಕ್ತಿಯನ್ನು ನೀಡುವಂತೆ ಶ್ರೀ ಭಗವಂತನಲ್ಲಿ ಪ್ರಾರ್ಥಿಸುವೆನು.

ಇತಿ ಸಜ್ಜನ ವಿಧೇಯ

ಕೆ. ಕೆ. ತಂತ್ರಿ

(ನಿವೃತ್ತ ಅಧ್ಯಾಪಕ)

ವಿ। ಅಗ್ರಹಾರ ನಾರಾಯಣ ತಂತ್ರಿಗಳ ತೃತೀಯ ಪುತ್ರ

ಉತ್ತರಾದಿ ಮಠ

॥ ಶ್ರೀ ದಿಗ್ವಿಜಯರಾಮೋ ವಿಜಯತೆ ॥



ಬ್ರಹ್ಮ ಸೂತ್ರವು ನಿರ್ಣಾಯಕ ಗ್ರಂಥಗಳಲ್ಲಿ ಶ್ರೇಷ್ಠವಾಗಿರುವಂತೆ, ನೀರ್ಣಯ ಗ್ರಂಥಗಳಲ್ಲಿ ಮಹಾಭಾರತವೇ ಅತ್ಯುನ್ನತ. ಶ್ರೀ ಬಾದರಾಯಣರ ಪರಿಪೂರ್ಣ ಅನುಗ್ರಹಕ್ಕೆ ಪಾತ್ರರಾದ್ದರಿಂದ ಅವರ ಆಜ್ಞೆಯ ಮೇರೆಗೆ ಶ್ರೀ ಮಧ್ವಾಚಾರ್ಯರು ಮಹಾಭಾರತ ತಾತ್ಪರ್ಯ ನಿರ್ಣಯವನ್ನು ರಚಿಸಿ ಸಮಸ್ತ ಸಂದೇಹಗಳನ್ನು ಪರಿಹರಿಸಿರುವರು.

ಜಟಿಲವಾದ ಈ ಗ್ರಂಥದ ಭಾವವು ಪಾಮರರಿಗೂ ಬೋಧವಾಗುವಂತೆ ಶ್ರೀ ನಾರಾಯಣ ತಂತ್ರಿಗಳು ಸುಲಭ ಶೈಲಿಯಲ್ಲಿ ಅದರ ಕನ್ನಡ ಅನುವಾದವನ್ನು ಮಾಡಿರುವುದು ತುಂಬಾ ಅಭಿನಂದನೀಯ. ಅವರ ಸುಪುತ್ರರಾದ ಶ್ರೀ ಕೆ. ಕೆ. ತಂತ್ರಿಯವರು ಅದರ ಮೂರನೇ ಭಾಗವನ್ನು ಇದೀಗ ಪ್ರಕಾಶಿಸುತ್ತಿರುವುದು ನಮಗೆ ಸಂತೋಷಕರವಾಗಿದೆ.

ಸಜ್ಜನರು ಸಂಪ್ರದಾಯಜ್ಞರಾದ ಗುರುಗಳ ಮುಖದಿಂದ ಶ್ರೀ ಮಧ್ವಾಚಾರ್ಯರ ಗ್ರಂಥವನ್ನು ಆದರದಿಂದ ಅಭ್ಯಸಿಸಿ, ಕನ್ನಡಾನುವಾದದ ಸಹಾಯದಿಂದ ಮನನ ಮಾಡಿ ಶ್ರೇಯೋಭಾಗಿಗಳಾಗಲೆಂದು ಹಾರೈಸುತ್ತೇವೆ.

ಬೆಂಗಳೂರು :
18 — 5 — 1992

ಶ್ರೀ ಮದುತ್ತರಾದಿ ಮಠಾಧೀಶರಾದ
ಶ್ರೀ ಸತ್ಯಪ್ರಮೋದತೀರ್ಥ ಶ್ರೀಪಾದಂಗಳವರು

ಸಂಸ್ಕೃತವನ್ನೇ ಅರಿಯದ ಜಿಜ್ಞಾಸುಗಳು, ಮೂಲ ಗ್ರಂಥವಾದ ಶ್ರೀ ಮನ್ಮಹಾಭಾರತ ತಾತ್ಪರ್ಯ ನಿರ್ಣಯದ ಟೀಕಾ ಟಿಪ್ಪಣಿಗಳನ್ನು ತಿಳಿಯದೆ ಕಷ್ಟಪಡುತ್ತಿದ್ದಾಗ ಶ್ರೀ ಹರಿಗುರುಗಳ ಭಕ್ತರು, ವಿದ್ವನ್ಮಣಿಗಳೂ ಆದ ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳು ಶ್ರೀ ಮಧ್ವಮುನಿ ಸೇವಾ ಸಂಘದ ವತಿಯಿಂದ ಶ್ರೀ ಮಧ್ವಾಚಾರ್ಯರ ಅನೇಕ ಗ್ರಂಥಗಳನ್ನು ಕನ್ನಡೀಕರಿಸಿ ಪ್ರಕಟಿಸಿ ದ್ದಲ್ಲದೆ, ಶ್ರೀ ವಾದಿರಾಜೀಯ ಗ್ರಂಥ ಪ್ರಕಾಶನ ಸಮಿತಿಯ ಕಾರ್ಯಕರ್ತರಾಗಿ ಶ್ರೀ ವಾದಿರಾಜ ಗುರು ಸಾರ್ವಭೌಮರ ಅನೇಕ ಗ್ರಂಥಗಳನ್ನು ಪ್ರಕಟಿಸಿ, ಚಿರಸ್ಮರಣೀಯರಾಗಿದ್ದಾರೆ. ಆ ಗ್ರಂಥ ಗಳೆಲ್ಲವೂ ಈಗ ಉಪಲಬ್ಧಿಯಲ್ಲಿ ಇಲ್ಲದಿರುವುದರಿಂದ ಈ ಗ್ರಂಥವನ್ನು ಪುನರ್ಮುದ್ರಣಗೊಳಿಸಿ, ತೀರ್ಥರೂಪರ ಹಾಗೂ ಶ್ರೀ ಭಗವಂತನ ಪೂರ್ಣಾನುಗ್ರಹಕ್ಕೆ ಪಾತ್ರರಾಗುವ ಕೆಲಸವನ್ನು ಅವರ ಸುಪುತ್ರರಾದ ಶ್ರೀ ಕೆ. ಕೃಷ್ಣ ತಂತ್ರಿಗಳು ತಮ್ಮ ತೀರ್ಥರೂಪರವರ ಸವಿನೆನಪಿಗಾಗಿ ಒಂದು ಮುದ್ರಣಾಲಯವನ್ನೆ ಪ್ರಾರಂಭಿಸಿ. ಮಾಡುತ್ತಿರುವುದು ಅತ್ಯಂತ ಸಂತೋಷದ ವಿಷಯವಾಗಿದೆ.

ಇಂತಹ ಸ್ತುತ್ಯ ಕಾರ್ಯವನ್ನು ಮೊದಲು ಮಾಡಿದ್ದ ಶ್ರೀ ಮಧ್ವಮುನಿ ಸೇವಾ ಸಂಘದ ಗೌರವ ಅಧ್ಯಕ್ಷನಾಗುವ ಸುಯೋಗ ನನಗೆ ಒದಗಿತ್ತು. ತನ್ಮೂಲಕ ಶ್ರೀ ಮಧ್ವಾಚಾರ್ಯರ ಅನೇಕ ಗ್ರಂಥಗಳನ್ನು ವೇದಮೂರ್ತಿ ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳವರ ಮೂಲಕ ನಾವು ಮಾಡಿಸಿದ್ದೆವು ಆವರೆ ಈಗ ಸಂಘದಲ್ಲಿ ಸಕ್ರಿಯ ಕಾರ್ಯಕರ್ತನಾಗಿ ನಾನೋರ್ವನೇ ಉಳಿದಿರುವುದರಿಂದ ಪುನರ್ಮುದ್ರಣದ ಕಾರ್ಯವನ್ನು ಹಮ್ಮಿಕೊಳ್ಳಲಾಗಲಿಲ್ಲ.

ವೇದಮೂರ್ತಿ ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳ ಸುಪುತ್ರರಾದ ಶ್ರೀ ಕೆ. ಕೆ. ತಂತ್ರಿ ಗಳು ತಮ್ಮ ತೀರ್ಥರೂಪರವರ ಆಶೀರ್ವಾದ ಮತ್ತು ಶ್ರೀ ಭಗವಂತನ ಪರಮಾನುಗ್ರಹಕ್ಕೆ ಪಾತ್ರರಾಗಬೇಕೆಂಬ ಉದ್ದೇಶ್ಯದಿಂದ, ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳವರಿಂದ ಟೀಕೆ ಟಿಪ್ಪಣಿ ವ್ಯಾಖ್ಯಾನ ಸಮೇತ ಕನ್ನಡೀಕರಿಸಲ್ಪಟ್ಟ ಶ್ರೀ ಮಧ್ವಮುನಿ ಸೇವಾ ಸಂಘದಿಂದ ಪ್ರಕಟಿತ ವಾದ ದಿವ್ಯ ಹೊತ್ತಗೆಗಳನ್ನು ತಾನು ಪುನರ್ಮುದ್ರಣಗೊಳಿಸುವೆನು ಅದಕ್ಕೆ ಅನುಮತಿಯನ್ನು ಈಯಬೇಕೆಂದು ಕೇಳಿಕೊಂಡಾಗ ಸಂತೋಷದಿಂವ ನಮ್ಮ ಒಪ್ಪಿಗೆಯನ್ನು ಕೊಟ್ಟು, ಅವರು ಮಾಡಲೆಳಸಿದ ಕಾರ್ಯದಲ್ಲಿ ಸಂಪೂರ್ಣ ಸಹಕಾರ-ಸಲಹೆ-ಸೂಚನೆಗಳನ್ನಿತ್ತು ಸಂಪೂರ್ಣ ಯಶ ಸ್ಸನ್ನು ಕೋರಿ ಆಶೀರ್ವದಿಸಿದೆವು. ಶ್ರೀ ಮಧ್ವಮುನಿ ಸೇವಾ ಸಂಘದಿಂದ ಪ್ರಕಟಿತವಾದ

ಪುಸ್ತಕಗಳಿಲ್ಲವನ್ನೂ ಪ್ರಕಟಿಸಲು ಸಂತೋಷದಿಂದ ನಮ್ಮ ಒಪ್ಪಿಗೆಯನ್ನು ನೀಡಿರುವೆವು. ಶ್ರೀ ಕೆ. ಕೃಷ್ಣ ತಂತ್ರಿಗಳಿಂದ ಆ ಕಾರ್ಯವನ್ನು ಮಾಡಿಸಲು ಅದಕ್ಕೆ ಬೇಕಾದ ಶಕ್ತಿಯನ್ನು ಶ್ರೀ ಮಹಿಷ ಮರ್ದಿನಿ ಶ್ರೀ ಹರಿವಾಯುಗಳು ನೀಡುವಂತೆ ಬೇಡುವೆನು.

ಇಂತಹ ಮಹತ್ಕಾರ್ಯಕ್ಕೆ ಶ್ರೀ ಭಗವದ್ಭಕ್ತರು ಧನ ಸಹಾಯ ಮಾಡಿ, ತಮ್ಮ ಜೀವನವನ್ನು ಸಾರ್ಥಕಗೊಳಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಂಡು, ಸಜ್ಜನ ಸಮಾಜವು ಇದರ ಲಾಭವನ್ನು ಪಡೆಯಲೆಂದು ಆಶಿಸುವೆವು.

ಕ. ಕೃ. ಶೆ